ವಿ.ಆರ್. ಹನುಮಂತಯ್ಯ ಅವರ ಸಮಗ್ರ ಸಾಹಿತ್ಯ

(ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಹನುಮಂತಮ್ಮ .ಎಂ

ಮಾರ್ಗದರ್ಶಕರು
ಡಾ. ಎಫ್.ಟಿ. ಹಳ್ಳಿಕೇರಿ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಭಾಷಾ ನಿಕಾಯ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬
೨೦೧೩

ವಿ.ಆರ್. ಹನುಮಂತಯ್ಯ ಅವರ ಸಮಗ್ರ ಸಾಹಿತ್ಯ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಹನುಮಂತಮ್ಮ ಎಂ.

ಮಾರ್ಗದರ್ಶಕರು
ಡಾ. ಎಫ್.ಟಿ. ಹಳ್ಳಿಕೇರಿ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಭಾಷಾ ನಿಕಾಯ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೨೦೧೩

ದೃಢೀಕರಣ ಪತ್ರ

ಶ್ರೀಮತಿ ಹನುಮಂತಮ್ಮ ಎಂ. ಇವರು **ವಿ.ಆರ್. ಹನುಮಂತಯ್ಯ ಅವರ ಸಮಗ್ರ ಸಾಹಿತ್ಯ** ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೨೬.೧೦.೨೦೧೩

ಡಾ. ಎಫ್.ಟಿ.ಹಳ್ಳಿಕೇರಿ

ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ,

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

ಪ್ರಮಾಣ ಪತ್ರ

ವಿ.ಆರ್. ಹನುಮಂತಯ್ಯ ಅವರ ಸಮಗ್ರ ಸಾಹಿತ್ಯ ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಡಾ. ಎಫ್.ಟಿ.ಹಳ್ಳಿಕೇರಿಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಹನುಮಂತಮ್ಮ ಎಂ.

ಸ್ಥಳ : ವಿದ್ಯಾರಣ್ಯ

ದನಾಂಕ : ೨೬.೧೦.೨೦೧೩

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪೀಠಿಕೆ

ಸಾಹಿತ್ಯ ವ್ಯಕ್ತಿಯ ಸೃಷ್ಟಿಯಾದರೂ ಸಮಾಜದ ಆಸ್ತಿ, ಅದರ ಹುಟ್ಟಿನ ಉದ್ದೇಶವಾದರೂ ಅದೇ ಸಮೂಹದಿಂದ ಸ್ವೀಕರಿಸಲ್ಪಟ್ಟು ಅಲ್ಲಿಯೇ ಬದುಕುತ್ತಾ ಹೋಗುವುದು. ಮಕ್ಕಳು ತಂದೆಯ ಹೆಸರು ಹೇಳುವಂತೆ ಈ ಕೃತಿಗಳು ತಮ್ಮ ತಂದೆಯಾದ ಲೇಖಕರನ್ನು ಜನರಿಗೆ ನೆನಪಿಸುತ್ತಾ ಹೋಗುತ್ತವೆ. ವ್ಯಕ್ತಿ ಮರೆಯಾಗುತ್ತಾನೆ. ಆದರೆ ಕೃತಿಗಳು ಶರೀರಿಯಾಗಿ ಉಳಿದುಕೊಳ್ಳುತ್ತವೆ. ಆ ಕೃತಿಗಳ ಮೂಲಕ ಆ ಕೃತಿಕಾರನ ಮೌಲ್ಯಮಾಪನ ಪ್ರತಿ ಪೀಳಿಗೆಯಲ್ಲೂ ಹಲವು ಬಾರಿ ನಡೆಯುತ್ತಾ ಹೋಗುತ್ತವೆ. ಅಂತಹ ಸಾಮರ್ಥ್ಯವಿದ್ದಷ್ಟು ಕಾಲ ಈ ಕೃತಿಕಾರ ಹೀಗೆ ಬದುಕಿರುತ್ತಾನೆ.

ಸಮಾಜದಲ್ಲಿ ಮಾನವ ಒಬ್ಬ ಜೀವಿಯಾಗಿ ಪರಂಪರಾಗತವಾಗಿ ರೂಢಿಸಿಕೊಂಡು ಬಂದಿರುವ, ವರ್ಗಾಯಿಸುವ, ಹಂಚಿಕೊಳ್ಳುವ ಮತ್ತು ಗೌರವಿಸುವ ಕ್ರಿಯೆಗಳ, ಆಲೋಚನೆಗಳ, ಮೌಲ್ಯಗಳ ಮತ್ತು ನಿರ್ಮಾಣ ಮಾಡುವ ವಸ್ತುಗಳ ಮೊತ್ತವನ್ನು ಸಂಸ್ಕೃತಿ ಎಂದು ಕರೆಯುತ್ತೇವೆ. ಸಂಸ್ಕೃತಿ ಮಾನವನಿಗೆ ವಿಶಿಷ್ಟವಾದದ್ದು. ಪ್ರಾಣಿಗಳಿಗಿಂತ ಭಿನ್ನವಾದ ರೀತಿಯಲ್ಲಿ ಮಾನವ ತನ್ನ ಅಗತ್ಯಗಳನ್ನು ಈಡೇರಿಸಿಕೊಳ್ಳುವಾಗ ಸ್ವಾರ್ಥ ಮತ್ತು ಸಮಾಜದ ಹಿತರಕ್ಷಣೆ ಇವೆರಡರ ನಡುವಣ ಸಂಘರ್ಷಕ್ಕೆ ಒಳಗಾಗುತ್ತಾನೆ. ಸಂಸ್ಕೃತಿಯ ಪ್ರಭಾವದಿಂದ ಸಮಾಜದ ಹಿತಕ್ಕಾಗಿ ಸ್ವಾರ್ಥವನ್ನು ಕಡಿಮೆ ಮಾಡಿಕೊಳ್ಳುವುದರಿಂದ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಭದ್ರತೆ, ರಕ್ಷಣೆ, ಸುಖ, ಸಂತೋಷಗಳು ಲಭ್ಯವಾಗುತ್ತವೆ. ಮಾನವ ಪ್ರಯತ್ನಪೂರ್ವಕವಾಗಿ ರೂಢಿಸಿಕೊಳ್ಳುವ ಸಂಸ್ಕೃತಿ ಅವನ ದೇಹಕ್ಕೆ ಮತ್ತು ಆತ್ಮಕ್ಕೆ ಬೇಕಾಗುವ ಅಗತ್ಯಗಳನ್ನು ಪೂರೈಸುತ್ತವೆ. ಸಂಸ್ಕೃತಿಯ

ಸಹಾಯದಿಂದ ಮಾನವನು ಪ್ರಕೃತಿಯ ಸಂಪನ್ಮೂಲಗಳನ್ನು ಮಾತ್ರವಲ್ಲದೆ ತನ್ನಲ್ಲಿಯೇ ಇರುವ ಪ್ರಚ್ಛನ್ನ ಶಕ್ತಿಗಳನ್ನು ಬಳಸಿಕೊಂಡು ಮುಂದುವರೆಯಲು ಸಾಧ್ಯವಾಗುತ್ತವೆ. ಹನುಮಂತಯ್ಯನವರು ಓದಿದ್ದು ತುಂಬಾ ಕಡಿಮೆ. ಆದರೆ ಸ್ವಪ್ರಯತ್ನದಿಂದ ಓದಿಕೊಂಡಿದ್ದು ಅಪಾರ. ತನ್ನ ಬುದ್ಧಿಶಕ್ತಿಯನ್ನು ಬಳಸಿಕೊಂಡು ಕನ್ನಡ ಸಾಹಿತ್ಯ, ಸಂಸ್ಕೃತಿ, ಚರಿತ್ರೆ ಸಮುದಾಯಕ್ಕೆ ಸಂಬಂಧಿಸಿದ ಅನೇಕ ಕೃತಿಗಳನ್ನು ರಚಿಸಿ ಕಾಣಿಕೆಯಾಗಿ ನೀಡಿದ್ದಾರೆ.

ಸಮುದಾಯವೆಂದರೆ ಸಂಸ್ಕೃತಿಯ ಜೀವಂತಿಕೆಯು ಅದರ ಚಲನಶೀಲತೆಯಲ್ಲಿ ಅಭಿವ್ಯಕ್ತವಾಗುತ್ತವೆ. ಅಂದರೆ ಕುರುಬ ಸಮುದಾಯವು ರೂಢಿಸಿಕೊಂಡ ಸಂಸ್ಕೃತಿಯ ಫಲವಾಗಿ ಮೌಲ್ಯಗಳನ್ನು ತನ್ನ ಸುತ್ತಲ ಜಗತ್ತಿಗೆ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಪರಿಚಯಿಸುತ್ತ ವರ್ಗಾಯಿಸುತ್ತದೆ. ಪ್ರಾದೇಶಿಕ ವೈಶಿಷ್ಟ್ಯಗಳಿಂದ ಮಹತ್ವ ಪಡೆದ ಪರಿವರ್ತನಾಶೀಲ ಮಾನವ ಬದುಕಿನ ಆಲೋಚನೆಗಳಿಂದ ಸಮುದಾಯದ ಬದುಕು ಕಳೆಗಟ್ಟುತ್ತದೆ. ಇಂತಹ ಸಾಂಸ್ಕೃತಿಕ ಮೌಲ್ಯಗಳ ಅನಾವರಣವು ಸಮುದಾಯದ ಅಧ್ಯಯನದಿಂದ ಸಾಧ್ಯವಾಗುತ್ತದೆ. ಕಾಲ ಕಾಲದ ಸಮಸ್ಯೆ, ಸವಾಲು, ಹೊಂದಾಣಿಕೆಗಳು ಅವನ ಕ್ರಿಯಾತ್ಮಕ ಬದುಕಿನ ಕುರುಹುಗಳಾಗಿರುವುದಿಲ್ಲ. ಸಾಂಪ್ರದಾಯಿಕತೆಗಳ ಉಳಿವು ಮತ್ತು ಮುಂದುವರಿಕೆಗಳ ಅಧ್ಯಯನವು ಆಯಾ ಸಮುದಾಯದ ಜೀವಂತಿಕೆಯ ಸಂಕೇತವಾಗಿರುತ್ತವೆ.

ಇತಿಹಾಸದಿಂದ ವಂಚಿತವಾಗಿದ್ದ ಸಮುದಾಯಗಳ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸ ಇಂದು ನಡೆಯುತ್ತಿದೆ. ಅಂತಹ ಸಮುದಾಯಗಳಲ್ಲಿ ಕುರುಬ ಸಮುದಾಯವು ಒಂದು. ಇವರಿಗೆ ಭಾರತೀಯ ಚರಿತ್ರೆಯಲ್ಲಿ ಸಾವಿರಾರು ವರ್ಷಗಳ ಇತಿಹಾಸವಿದೆ. ಇವರಲ್ಲಿ ಅನೇಕ ಕುಲ ಜಾತಿಗಳಿರುವಂತೆ ಉಪಪಂಗಡಗಳೂ ಇವೆ. ಮತ್ತು ಅವರದೇ ಆದ ಸಂಸ್ಕೃತಿ ಇದೆ. ಆದರೆ ಈ ದೀರ್ಘ ಪರಂಪರೆಯಲ್ಲಿ ಬ್ರಿಟಿಷರ ಆಡಳಿತದವರೆಗೂ ಕುರುಬ ಸಮುದಾಯವನ್ನು ಕುರಿತ ಪ್ರಸ್ತಾಪಗಳು ಅವರ ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಸಂಸ್ಕೃತಿ ವಿವರಗಳು ಸಿಗುವುದಿಲ್ಲ. ಅಂದರೆ ಭಾರತೀಯ ಇತಿಹಾಸವೆನ್ನುವುದು ಏಕಮುಖತೆಯಾದ ದೃಷ್ಟಿಕೋನದ ಕಡೆಗೆ ವಿವರಿಸಿದ್ದಾಗಿದೆ.

ಪ್ರಾಚೀನ ಕಾಲದಿಂದಲೂ ಪಶುಪಾಲನೆ, ಕುರಿಸಾಕಾಣಿಕೆ, ಕಂಬಳಿ ತಯಾರಿಕೆ ಹಾಗೂ ಕೃಷಿಯನ್ನು ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡು ಬಂದ ಈ ಕುರುಬ ಸಮುದಾಯದವರು ತಮ್ಮ ಸಂಸ್ಕೃತಿಯ ಮೂಲ ಸೊಗಡನ್ನು ಪರಂಪರಾಗತ ಜೀವನ ಪದ್ಧತಿಯನ್ನು ಯಥಾವತ್ತಾಗಿ ಉಳಿಸಿಕೊಂಡು ಬಂದ ಜನ ಸಮುದಾಯಗಳಲ್ಲಿ ಪ್ರಮುಖರೆನಿಸುತ್ತಾರೆ. ಭಾರತದಾದ್ಯಂತ ಹರಡಿರುವ ಈ ಸಮುದಾಯ ದೇಶದ ಚರಿತ್ರೆಯನ್ನು ಕಟ್ಟುವಲ್ಲಿ ಪ್ರಮುಖ

ಪಾತ್ರ ವಹಿಸಿದೆ. ಇಂಥ ಸಮುದಾಯದ ಚರಿತ್ರೆಯನ್ನು ಹನುಮಂತಯ್ಯನವರ ಕೃತಿಗಳ ಮೂಲಕ ನೋಡಬಹುದಾಗಿದೆ.

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಕುರುಬ ಸಮುದಾಯವನ್ನು ಕುರಿತು ಅಧ್ಯಯನಗಳು ಇಲ್ಲಿಯವರೆಗೂ ನಡೆದಿರಲಿಲ್ಲ. ಆದರೂ ಬುಡಕಟ್ಟುಗಳ ಅಧ್ಯಯನಗಳಲ್ಲಿ ಒಂದು ಭಾಗವಾಗಿ ತೆಗೆದುಕೊಂಡು ಅಧ್ಯಯನ ನಡೆಸಿದ್ದರು. ಎಂಭತ್ತರ ದಶಕದಲ್ಲಿ ಡಾ. ಶ್ಯಾಂಸಿಂಗ್ ಶಶಿಯವರು ಬರೆದ 'ದಿ ಶೆಫರ್ಡ್ಸ್ ಆಫ್ ಇಂಡಿಯಾ' ಕೃತಿಯನ್ನು ಹೊರತುಪಡಿಸಿದರೆ, ಈ ಸಮುದಾಯದ ಸಮಗ್ರ ಅಧ್ಯಯನದ ಪ್ರತ್ಯೇಕ ಕೃತಿಗಳ ಕೊರತೆ ಎದ್ದು ಕಾಣುತ್ತದೆ. ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಈ ಸಮುದಾಯದ ಸಾಂಸ್ಕೃತಿಕ ಮೌಲ್ಯಗಳನ್ನು ಗುರಿಯಾಗಿಟ್ಟುಕೊಂಡಿರುವ ಅಧ್ಯಯನಗಳು ಕಡಿಮೆಯೆಂದೇ ಹೇಳಬೇಕು. ಆದರೂ ೧೮೬೮ರಲ್ಲಿ ರೆವರೆಂಟ್ ಡಬ್ಲ್ಯೂಟೇಲರ್ ರಚಿಸಿದ 'ಹಿಂದೂ ಮೈಥಾಲಜಿ ಅಂಡ್ ಫಿಲಾಸಫಿ'ಯಲ್ಲಿ ಕುರುಬರ ಮೂಲವನ್ನು ವಿವೇಚಿಸಿದ್ದಾರೆ. ೧೮೮೪ರಲ್ಲಿ ಪ್ರಕಟವಾದ 'ಆರ್ಕಿಯಾಲಾಜಿಕಲ್ ಸರ್ವೇ ಆಫ್ ಸೌಥ್ ಇಂಡಿಯಾ' ಕೃತಿಯಲ್ಲಿ ಕುರುಬರ ಚಾರಿತ್ರಿಕ ಸಂಘರ್ಷಗಳನ್ನು ಅನಾವರಣಗೊಳಿಸಲಾಗಿದೆ. ೧೮೯೩ರಲ್ಲಿ ಮುದ್ರಣಗೊಂಡ 'ದಿ ಒರಿಜಿನಲ್ ಇನ್ ಹ್ಯಾಬಿಟೆಂಟ್ಸ್ ಆಫ್ ಇಂಡಿಯಾ' ಕೃತಿಯಲ್ಲಿ ಗಸ್ವಾವ್ ಓಪರ್ಟ್ ಕುರುಬರ ನಾಡಿನ ಬಗ್ಗೆ ಪ್ರಸ್ತಾಪಿಸಿದ್ದಾರೆ. ೧೯೨೨ರಲ್ಲಿ ಆರ್.ಇ. ಎಂಥೋಮನ್‌ರವರು 'ಟ್ರೈಬ್ಸ್ ಅಂಡ್ ಕ್ಯಾಸ್ಟ್ ಆಫ್ ಬಾಂಬೆ' ಕೃತಿಯಲ್ಲಿ ಕುರುಬರ ಪ್ರಾಬಲ್ಯವನ್ನು ವಿವರಿಸಿದ್ದಾರೆ. ಹೀಗೆ ಕುರುಬ ಸಮುದಾಯದ ಅಧ್ಯಯನಗಳು ಬಹುತೇಕ ಆಂಗ್ಲಭಾಷೆ, ಹೊರನಾಡಿನ ವಿದ್ವಾಂಸರಿಂದ ನಡೆದಿರುವುದು ಗಮನಾರ್ಹ ಸಂಗತಿ. ಇಂಥ ವೇಳೆಯಲ್ಲಿ ೧೯೨೬ರಲ್ಲಿ ವಿ. ಆರ್. ಹನುಮಂತಯ್ಯನವರು ರಚಿಸಿದ 'ಕುರುಬರ ಚರಿತ್ರೆ' ಕನ್ನಡದಲ್ಲಿ ಮೊದಲಿಗೆ ಕುರುಬ ಸಮುದಾಯವನ್ನು ಕುರಿತು ಪ್ರಕಟವಾಗಿರುವ ಕೃತಿ. ಹನುಮಂತಯ್ಯನವರು ಈ ಸಮುದಾಯವನ್ನು ಕುರಿತು ಆಳವಾದ ಅಧ್ಯಯನ ನಡೆಸಿ, ಕನ್ನಡ ಸಾಹಿತ್ಯ ಸಂಸ್ಕೃತಿ, ಸಂಶೋಧನ ಕ್ಷೇತ್ರದಲ್ಲಿ ಸಂಘ–ಸಂಸ್ಥೆಗಳು ಮಾಡಬಹುದಾದಷ್ಟು ಕೆಲಸವನ್ನು ಒಬ್ಬರೇ ಮಾಡಿದ್ದಾರೆ. ವಿದ್ಯಾರ್ಥಿಗಳ ನೆಚ್ಚಿನ ಗುರುಗಳಾಗಿ, ಓಣಿಯ ಜನಗಳಿಗೆ ವರದಾನವಾಗಿ, ಸಮಾಜ ಸೇವಕರಾಗಿ, ಭಾರತ ಪುತ್ರ ಪತ್ರಿಕೆಯ ಸಂಪಾದಕರಾಗಿ, ಸಂಶೋಧಕರಾಗಿ ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿ ಕೊಂಡಿದ್ದಾರೆ. ಅವರ ಸೇವೆ ಇಂದಿನ ಸಂಶೋಧಕರಿಗೆ ಮಾರ್ಗದರ್ಶನವಾಗಿದೆ.

ಇಂಥ ಕನ್ನಡಾಭಿಮಾನಿ, ಸಮಾಜೋದ್ಧಾರಕ ವಿ.ಎರ್. ಹನುಮಂತಯ್ಯ ಒಬ್ಬ ಅಪೂರ್ವ ವ್ಯಕ್ತಿ. ಅವರದೊಂದು ಅಪರೂಪದ ವ್ಯಕ್ತಿತ್ವ 'ಎಲೆಯ ಮರೆಯ ಹೂವಿನಂತೆ, ನೆಲದ ಮರೆಯ

ನಿಧಾನವಂತೆ’ ಉಳಿದುಕೊಂಡವರು. ಇವರು ಎಂದೂ ಏನನ್ನು ಬಾಯಿಬಿಚ್ಚಿ ಹೇಳತಕ್ಕವರಲ್ಲ. ಆದರೆ ತನ್ನನ್ನು ಕೆಣಕಿದವರನ್ನು ಬಿಡುವವರಲ್ಲ. ಸುಖ–ದುಃಖ, ಶೀತ–ಉಷ್ಣ ಎಲ್ಲವನ್ನು ನುಂಗಿ ಸದಾ ಮುಗುಳ್ನಗೆಯನ್ನು ಬೀರುತ್ತಲೇ ಇರತಕ್ಕವರು. ಆದುದರಿಂದ ಅನೇಕರಿಗೆ ಅವರ ಜೀವನದ ದಾರುಣವಾದ ಚಿತ್ರ ತಿಳಿದಿಲ್ಲವೆಂದೇ ಹೇಳಬೇಕಾಗುತ್ತದೆ. ೯೪ ವರ್ಷ ತುಂಬು ಜೀವನ ಸಾಗಿಸಿದ್ದ ಶ್ರೀಯುತರು ಓದುವ ಹವ್ಯಾಸದಲ್ಲಿ ತೊಡಗಿಸಿಕೊಂಡವರಾಗಿದ್ದರು. ಹಣ, ಕೀರ್ತಿ, ಸಂಪತ್ತು, ಪ್ರಚಾರ ಪ್ರಿಯತೆ ಇವುಗಳಿಂದ ದೂರ ಉಳಿದವರಾಗಿದ್ದರು. ವಿದ್ಯೆಯ ಆಗರ, ಆಡಂಬರ ಪ್ರಿಯವಾಗಿರಲಿಲ್ಲ. ಆಡಂಬರ ಇವರ ಜೀವನದ ಹೊರ ಮೈಯನ್ನು ಸೋಂಕಿರಲಿಲ್ಲ. ಶಿಸ್ತು, ಸಂಘಟನೆ, ಕರ್ತವ್ಯ ಬುದ್ಧಿ, ಸರ್ವ ಸಮೃದ್ಧಿಗಳ ಸಾಕಾರರೂಪ ವಿನಯ ಸಂಪನ್ನರಾಗಿದ್ದವರು.

ಇಂಥ ಆದರ್ಶ ವ್ಯಕ್ತಿ ವಿ.ಆರ್. ಹನುಮಂತಯ್ಯ ಅವರನ್ನು ಕುರಿತು ಈವರೆಗೆ ಬೆರಳೆಣಿಕೆಯಷ್ಟು ಲೇಖನಗಳು ಹಾಗೂ ಒಂದು ಕೃತಿ ಕುರುಬರ ಚರಿತ್ರೆ ೧೯೯೭ರಲ್ಲಿ ಸುಧಾಕರ ಅವರು ಸಂಪಾದನೆ ಮಾಡಿ ಪ್ರಕಟಿಸಿದ್ದಾರೆ. ಕೃತಿಯುದ್ದಕ್ಕೂ ಹನುಮಂತಯ್ಯನವರ ಅಭಿಪ್ರಾಯಗಳಿಗೆ ಇವರು ಟಿಪ್ಪಣಿಗಳ ರೂಪದಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಹೀಗಾಗಿ ಸುಧಾಕರ ಅವರ ಸಂಪಾದಿತ ಹನುಮಂತಯ್ಯನವರ "ಕುರುಬರ ಚರಿತ್ರೆ" ಕೃತಿಯನ್ನು ಓದುವಾಗ ಒಂದು ರೀತಿಯ ಗೊಂದಲ ಉಂಟಾಗುತ್ತದೆ. ಆದ್ದರಿಂದ ಹನುಮಂತಯ್ಯನವರ ಕೃತಿಯ ಮೂಲ ಸ್ವರೂಪವನ್ನು ಯಥಾವತ್ತಾಗಿ ಪ್ರಕಟಿಸಿದ್ದರೆ ಓದುಗರಿಗೆ ಅನುಕೂಲವಾಗುತ್ತಿತ್ತು. ಈ ಉದ್ದೇಶದಿಂದ ಪ್ರಸ್ತುತ ಅಧ್ಯಯನವನ್ನು ಕೈಕೊಳ್ಳಲಾಗಿದೆ.

ಸ್ವರೂಪ

ಈ ಮಹಾಪ್ರಬಂಧದಲ್ಲಿ ವಿ.ಆರ್. ಹನುಮಂತಯ್ಯ ಅವರ ಸಮಗ್ರ ಸಾಹಿತ್ಯ ಕುರಿತು ಎಂಟು ಅಧ್ಯಾಯಗಳ ಮೂಲಕ ಚರ್ಚಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ವಿ.ಆರ್. ಹನುಮಂತಯ್ಯ ಅವರ ಜೀವನ ಮತ್ತು ಸಮಗ್ರ ಸಾಹಿತ್ಯವನ್ನು ವಸ್ತುವಾಗಿಸಿಕೊಂಡುದರ ಉದ್ದೇಶ, ಮಹಾಪ್ರಬಂಧದ ಸ್ವರೂಪ ಮತ್ತು ಅದರ ವ್ಯಾಪ್ತಿಯನ್ನು ಹೇಳಲಾಗಿದೆ. ಹನುಮಂತಯ್ಯನವರ ಕೃತಿಗಳ ಅಧ್ಯಯನದ ಕೊರತೆಯನ್ನು ನೀಗಿಸುವ ಸಲುವಾಗಿ ಪ್ರಸ್ತುತ ವಿಷಯವನ್ನು ಆಯ್ದುಕೊಳ್ಳಲಾಗಿದೆಯೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ವಿ.ಆರ್. ಹನುಮಂತಯ್ಯನವರ: ಜೀವನ ಚರಿತ್ರೆ ಇದರಲ್ಲಿ ಇವರ ಮನೆತನದ ಹಿನ್ನೆಲೆ, ತಂದೆ, ತಾಯಿ, ಹುಟ್ಟಿ ಬೆಳೆದ ಊರು, ಕೌಟುಂಬಿಕ ಪರಿಸರ, ಶಿಕ್ಷಣ, ವೃತ್ತಿ, ಜೀವನ, ಸಾಮಾಜಿದ ಸೇವೆ ಇತ್ಯಾದಿ ವಿಷಯಗಳನ್ನು ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಿದ ಮಾಹಿತಿಗಳ ಹಿನ್ನೆಲೆಯಲ್ಲಿ ಅವರ ಜೀವನದ ಪರಿಚಯವನ್ನು ಮಾಡಿಕೊಡಲಾಗಿದೆ. ಮತ್ತು ಇವರ ವ್ಯಕ್ತಿತ್ವ ಕುರಿತು ವಿದ್ವಾಂಸರ ಅಭಿಪ್ರಾಯವನ್ನು ಕಟ್ಟಿಕೊಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ 'ಹಾಲುಮತ ಸಾಹಿತ್ಯ' ಇದರಲ್ಲಿ ಕುರುಬರ ಚರಿತ್ರೆ(೧೯೨೬) ಮತ್ತು ಭಾರತ ದೇಶದ ಕುರುಬರ ಚರಿತ್ರೆ(೧೯೫೮) ಈ ಕೃತಿಗಳಲ್ಲಿ ಕಂಡುಬಂದಿರುವ ಕುರುಬ ಸಮಾಜದ ಪ್ರಾಚೀನತೆ, ಕುರುಬರ ಪಂಗಡ ಮತ್ತು ಉಪಪಂಗಡಗಳು, ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ಕುರುಬರ ಪರಿಚಯ, ಕುರುಬರ ಅರಸು ಮನೆತನಗಳು ಮತ್ತು ಕುರುಬರ ಪ್ರಮುಖ ಮಹನೀಯರ ಜೀವನ ಚರಿತ್ರೆಯನ್ನು ಮತ್ತು 'ಅಂದಿನ ಆರ್ಯರೇ ಇಂದಿನ ಕುರುಬರು' ಎನ್ನುವುದಕ್ಕೆ ಅನೇಕ ವೇದಗಳ ಮುಖಾಂತರ ಪರಿಚಯಿಸಲಾಗಿದೆ. ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಕುರುಬರ ರಾಜರ ಚರಿತ್ರೆ ಕುರಿತು ಪರಿಚಯ ಮಾಡಿಕೊಡಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ "ವಿಜಯನಗರ ಸಾಮ್ರಾಜ್ಯ ಸಾಹಿತ್ಯ" ಇದರಲ್ಲಿ ಕೃತಿಯ ಸ್ವರೂಪ, ಮೂಲದ ವಿಶ್ಲೇಷಣೆ, ವಿದ್ವಾಂಸರ ಅಭಿಪ್ರಾಯ, ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಅಷ್ಟದಿಗ್ಗಜ ಕವಿಗಳು ಮತ್ತು ಅವರ ಗ್ರಂಥಗಳ ಪರಿಚಯ, ವಿಜಯನಗರದ ದಸರಾ ಮಹೋತ್ಸವದ ವರ್ಣನೆ, ಅಮಾತ್ಯ ಅಪ್ಪಾಜಿಯ ಪರಿಚಯ, ರಾಮರಾಯನ ಬಖೈರ್ ಎಂಬ ವಿಷಯಗಳನ್ನು ಅಧ್ಯಯನದ ಮೂಲಕ ಕಟ್ಟಿಕೊಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಹನುಮಂತಯ್ಯನವರ ಇತರೆ ಕೃತಿ ಮತ್ತು ಲೇಖನಗಳನ್ನು ಕುರಿತು ವಿಶ್ಲೇಷಿಸಲಾಗುವುದು ಇದರಲ್ಲಿ ಭೋಜರಾಜ, ಕಾಳಿದಾಸ ಮತ್ತು ಭಾರವಿ ಕವಿಗಳ ಜೀವನ ಚರಿತ್ರೆ ಹಾಗೂ ಉಣ್ಣೆವಸ್ತ್ರ ನೇಯ್ಗೆ ಕಲೆಯ ಪ್ರಾಚೀನತೆ ಮತ್ತು ಒಬ್ಬ ಕುರುಬ(ಗೊಲ್ಲರ) ಗುರುವಿನ ಮಹತ್ವ ಸನ್ನದು ಎಂಬ ಲೇಖನವನ್ನು ಅವಲೋಕಿಸಲಾಗಿದೆ.

ಆರನೆಯ ಅಧ್ಯಾಯ ಹನುಮಂತಯ್ಯನವರ ಸಂಶೋಧನೆಯ ವೈಧಾನಿಕತೆ ಕುರಿತದ್ದಾಗಿದೆ. ಇವರ ವೈಧಾನಿಕತೆಯ ವಿಧಾನವನ್ನು ಎರಡು ರೀತಿಯ ಆಕರಗಳ ಬಳಕೆಯಲ್ಲಿ ಗುರುತಿಸ ಬಹುದಾಗಿದೆ. ಅವುಗಳನ್ನು ಅಧ್ಯಯನದ ಮೂಲಕ ಕಟ್ಟಿಕೊಡಲಾಗಿದೆ.

ಏಳನೆಯ ಅಧ್ಯಾಯ 'ಸಮಾರೋಪ' ಭಾಗದಲ್ಲಿ ಮೇಲಿನ ಆರು ಅಧ್ಯಾಯಗಳಲ್ಲಿ ಚರ್ಚಿಸಲ್ಪಟ್ಟ ಸಂಗತಿಗಳ ಮೇಲಿಂದ ವಿ.ಆರ್. ಹನುಮಂತಯ್ಯ ಅವರ ಸಮಗ್ರ ಸಾಹಿತ್ಯ ಮತ್ತು ಅವರ ಸಂಶೋಧನೆಯ ವೈಶಿಷ್ಟ್ಯ ಇತ್ಯಾದಿ ವಿಷಯಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಲಾಗಿದೆ.

ಅನುಬಂಧದಲ್ಲಿ ವಿ.ಆರ್. ಹನುಮಂತಯ್ಯನವರ ಹಸ್ತಾಕ್ಷರದ ಮಾದರಿ, ಅವರ ಕೃತಿಗಳು, ಅವರನ್ನು ಕುರಿತ ಸಾಹಿತ್ಯ, ಛಾಯಾಚಿತ್ರಗಳು ಮತ್ತು ಸಹಾಯಕ ಗ್ರಂಥಗಳನ್ನು ನೀಡಲಾಗಿದೆ.

ಹೀಗೆ ಎಂಟು ಅಧ್ಯಾಯಗಳಲ್ಲಿ ಈ ಮಹಾಪ್ರಬಂಧ ವಿಸ್ತೃತಗೊಂಡಿದ್ದು ಆ ಮೂಲಕ ವಿ.ಆರ್. ಹನುಮಂತಯ್ಯ ಅವರ ಸಮಗ್ರ ಸಾಹಿತ್ಯ ಕುರಿತು ಸಮಗ್ರವಾಗಿ ಅಧ್ಯಯನವನ್ನು ಈ ಮಹಾಪ್ರಬಂಧದಲ್ಲಿ ಕೈಗೊಳ್ಳಲಾಗಿದೆ.

ಅಧ್ಯಾಯ ಎರಡು

ವಿ.ಆರ್. ಹನುಮಂತಯ್ಯ: ಜೀವನ ಚರಿತ್ರೆ

೧. ಪರಿಸರ
೨. ಮನೆತನದ ಹಿನ್ನೆಲೆ
೩. ಜೀವನ
೪. ಶಿಕ್ಷಣ ಮತ್ತು ವೃತ್ತಿ
೫. ಕೌಟುಂಬಿಕ ಜೀವನ
೬. ಸಾಹಿತ್ಯಕ ಸಾಧನೆ
೭. ಸಾಮಾಜಿಕ ಸೇವೆ
೮. ಬಹುಭಾಷಾ ವಿಧ
೯. ವ್ಯಕ್ತಿತ್ವ

ಅಧ್ಯಾಯ ಎರಡು

ವಿ.ಆರ್. ಹನುಮಂತಯ್ಯ: ಜೀವನ ಚರಿತ್ರೆ

ಕನ್ನಡ ನಾಡಿನ ಇತಿಹಾಸದಲ್ಲಿ ಬೆಂಗಳೂರು ಜಿಲ್ಲೆಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ದಕ್ಷಿಣೋತ್ತರವಾಗಿ ಕರ್ನಾಟಕವನ್ನು ಗಮನಿಸಿದರೆ ಬೆಂಗಳೂರು ಸಾಹಿತ್ಯ, ಸಂಸ್ಕೃತಿ, ಸಂಗೀತ ಕಲೆ, ವಾಣಿಜ್ಯ ವ್ಯಾಪಾರ ಕ್ಷೇತ್ರದಲ್ಲಿ ಐತಿಹಾಸಿಕವಾಗಿಯೂ, ಸಾಂಸ್ಕೃತಿಕವಾಗಿಯೂ, ಭೌಗೋಳಿಕವಾಗಿಯೂ ಸಂಪದ್ಭರಿತವಾದ ಜಿಲ್ಲೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಇಡೀ ಕರ್ನಾಟಕದ ಗಮನ ಸೆಳೆದಿರುವ ಬೆಂಗಳೂರು ಆಂಧ್ರ ಮತ್ತು ತಮಿಳುನಾಡು ಗಡಿಯ ಕೇಂದ್ರಬಿಂದುವಾಗಿದೆ. ಅಷ್ಟೇ ಅಲ್ಲದೇ ಹಲವಾರು ರಾಷ್ಟ್ರಗಳಿಗೆ ಮತ್ತು ವಿದೇಶಿಗರಿಗೆ ಕೇಂದ್ರ ಬಿಂದುವಾಗಿಯೂ ಹೆಸರು ಮಾಡಿದೆ.

ಇಂಥ ನಾಡಿನಲ್ಲಿ ಅನೇಕ ಹಿರಿಯ ಸಾಹಿತ್ಯ ದಿಗ್ಗಜರೂ, ಕಲಾವಿದರೂ ಈ ಮಣ್ಣಿನಲ್ಲಿ ಜನಿಸಿದುದು ಮತ್ತೊಂದು ವಿಶೇಷ. ಅದರಲ್ಲೂ ಬೆಂಗಳೂರು ಜಿಲ್ಲೆಯಲ್ಲಿ ಸ್ತ್ರೀ ಪುರುಷರೆನ್ನದೆ ಅಸಂಖ್ಯಾತ ಸಾಹಿತಿಗಳು ಕಂಡುಬರುತ್ತಾರೆ. ಸಣ್ಣ ಕಥೆಗಳ ಜನಕ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಿ.ವಿ.ಜಿ., ಜಿ.ಪಿ. ರಾಜರತ್ನಂ, ಶ್ರೀರಂಗ, ಪು.ತಿ.ನ., ಶ್ರೀಮತಿ ಎಂ.ಕೆ. ಇಂದಿರಾ, ಅನುಪಮ ನಿರಂಜನ್, ಅನಕೃ, ಡಾ. ಕೆ.ಎಸ್. ನರಸಿಂಹಸ್ವಾಮಿ, ಪ್ರೊ. ನಿಸಾರ್ ಅಹಮ್ಮದ್ ಹೀಗೆ ನೂರಾರು ಮಂದಿ ಸಾಹಿತಿಗಳ ತವರೂರಲ್ಲಿ ವಿ.ಆರ್. ಹನುಮಂತಯ್ಯನವರು ಜನಿಸಿ ಸಾಹಿತ್ಯ, ಸಂಸ್ಕೃತಿ, ಚರಿತ್ರೆ, ಸಂಶೋಧನೆ ಕಾರ್ಯದಲ್ಲಿ ತೊಡಗಿ ಅನೇಕ ಕೃತಿಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

೧. ಪರಿಸರ

೨. ಮನೆತನದ ಹಿನ್ನೆಲೆ

೩. ಜೀವನ

೪. ಶಿಕ್ಷಣ ಮತ್ತು ವೃತ್ತಿ

೫. ಕೌಟುಂಬಿಕ ಜೀವನ

೬. ಸಾಹಿತ್ಯಕ ಸಾಧನೆ

೭. ಸಾಮಾಜಿಕ ಸೇವೆ

೮. ಬಹುಭಾಷಾ ವಿಧ

೯. ವ್ಯಕ್ತಿತ್ವ

೧. ಪರಿಸರ

ಬದುಕು ಕ್ರಿಯಾಶೀಲವಾದಾಗಲೇ ಅದಕ್ಕೊಂದು ಅರ್ಥ. ಹೀಗೆ ಅರ್ಥಪೂರ್ಣವಾಗಿ ಬದುಕಿದ ಮನುಷ್ಯ ಅಳಿದರೂ ಆತ ಜೀವಂತ. ಜೀವನದುದ್ದಕ್ಕೂ ಜೀವ ತುಂಬುವ ಕೆಲಸ ಮಾಡಿ ಮರೆಯಾದರೂ ಅವನ ಕಾರ್ಯಗಳು ಮುಂದಿನ ಪೀಳಿಗೆಗೆ ಜೀವಂತವಾಗಿರುತ್ತವೆ. ಯಾವ ಸಂಸ್ಥೆ ಮಾಡಲು ಸಾಧ್ಯವಾಗದ ಕೆಲಸಗಳನ್ನು ವ್ಯಕ್ತಿಯೊಬ್ಬ ಮಾಡಿದನೆಂದರೆ ಆತ ಸಂಸ್ಥೆಯ ಸಂಕೇತವಾಗುತ್ತಾನೆ. ಇಂತಹ ವ್ಯಕ್ತಿಗಳು ಮೌಲ್ಯವಾಗಿ ನಿಂತು ಮುಂದಿನ ತಲೆಮಾರಿನವರಿಗೆ ಮಾದರಿಯಾಗುತ್ತಾರೆ. ಹೀಗೆ ವಿಶಿಷ್ಟ ಮಾದರಿಯ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡ ವ್ಯಕ್ತಿ ವಿ.ಆರ್. ಹನುಮಂತಯ್ಯನವರು.

೧೯ನೆಯ ಶತಮಾನದ ಕೊನೆಯ ದಶಕಗಳು ಮತ್ತು ೨೦ನೆಯ ಶತಮಾನದ ಮೊದಲ ಎರಡು ದಶಕಗಳು ಭಾರತದಲ್ಲಿ ಮಹತ್ವದ ಬದಲಾವಣೆಗಳು ನಡೆದ ಕಾಲ, ಪಾಶ್ಚಾತ್ಯ ಸಂಸ್ಕೃತಿ, ರೀತಿ ನೀತಿಗಳು, ವಿಚಾರಲಹರಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ವ್ಯಕ್ತಿಯ ಮಹತ್ವವನ್ನು ಕುರಿತ ಕಲ್ಪನೆಗಳು ಇವುಗಳ ಪ್ರಭಾವ ಭಾರತೀಯರ ಮೇಲೆ, ಸಹಜವಾಗಿ ಕನ್ನಡಿಗರ ಮೇಲೆ ಬೀರಿತು. ಪಾಶ್ಚಾತ್ಯ ಸಂಸ್ಕೃತಿಗೆ ಒಮ್ಮೆ ಮನಸೋತು, ಅದಕ್ಕೆ ಬೆನ್ನು ತಿರುಗಿಸಿ ಭಾರತೀಯ ಸಂಸ್ಕೃತಿಗೆ ಆತುಕೊಂಡು, ಭಾರತೀಯ ಮನಸ್ಸು ಹೊಸ ಒಲವು ನಿಲುವುಗಳನ್ನು ಸ್ವೀಕರಿಸುತ್ತಿದ್ದ ಕಾಲ.[೧] ಅಂದಿನ ಪರಿಸ್ಥಿತಿ ಸಾಮಾಜಿಕ, ರಾಜಕೀಯ, ಧಾರ್ಮಿಕ ಬದಲಾವಣೆಗಳ ಕಾಲಘಟ್ಟವಾಗಿತ್ತು.

ಆ ವೇಳೆಯಲ್ಲಿ ವಿ.ಆರ್. ಹನುಮಂತಯ್ಯನವರು ಸಾಹಿತ್ಯ, ಸಂಸ್ಕೃತಿ, ಸಂಶೋಧನೆ ಕಾರ್ಯದಲ್ಲಿ ತೊಡಗಿದರು. ತಮ್ಮ ಸತತ ಪ್ರಯತ್ನದಿಂದ ಕನ್ನಡ ಸಾರಸ್ವತಲೋಕಕ್ಕೆ ಮಹತ್ವಪೂರ್ಣ ಸೇವೆ ಸಲ್ಲಿಸಿದರು. ಇವರು ಒಂದು ಚಿಕ್ಕ ಹಳ್ಳಿಯಲ್ಲಿ ಹುಟ್ಟಿ, ಶಿಕ್ಷಣ ಕಲಿಯಲು ಪಟ್ಟಣಕ್ಕೆ ಬಂದು ಉದಾತ್ತ ಆದರ್ಶಗಳನ್ನು ಇಟ್ಟುಕೊಂಡು ವಿಚಾರ ಪ್ರಪಂಚದಲ್ಲಿ ಹಾಗೂ ಸಾಹಿತ್ಯ ಸಾಧನೆಗಳ ಮೂಲಕ ಇಷ್ಟು ಎತ್ತರಕ್ಕೆ ಬೆಳೆಯಲು ಹನುಮಂತಯ್ಯವರು ಕಾರಣರಾಗಿದ್ದಾರೆ.

ಕುರುಬ ಸಮುದಾಯದ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡುವವರಿಗೆ ವಿ.ಆರ್. ಹನುಮಂತಯ್ಯನವರು ಪರಿಚಿತವಾದ ಹೆಸರು. ಇವರು ಕುರುಬ ಸಮಾಜವನ್ನು, ಜನರ ಪ್ರೀತಿಯನ್ನು

ಗಳಿಸಿಕೊಂಡ ಸಾಹಿತಿಗಳಾಗಿದ್ದರು. ಬದುಕಿನ ಆರಂಭದಲ್ಲಿ ಶಾಲಾ ಶಿಕ್ಷಕರಾಗಿ ಜೀವನ ಆರಂಭಿಸಿದ ನಂತರ ಸಾಹಿತ್ಯ ರಂಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಇಂತಹ ಸಾಧನ ಜೀವಿಯು ತಮ್ಮ ಬಾಳಿನುದ್ದಕ್ಕೂ ಸತತ ಪ್ರಯತ್ನದಿಂದ ಬದುಕಿದವರು. ಬರಹದಂತೆ ಅವರ ಬದುಕಿದೆ. ಬದುಕಿನಂತೆ ಅವರ ಬರಹವಿದೆ. ಅವರ ಬದುಕು ಮತ್ತು ಬರಹ ಒಂದೇ ಆಗಿದ್ದಿತು. ಅನೇಕ ವಿದ್ವಾಂಸರ ಸಂಪರ್ಕದಿಂದಾಗಿ ತಮ್ಮ ಪರಿಶುದ್ಧ ಬರವಣಿಗೆಯನ್ನು ರೂಪಿಸಿಕೊಂಡರು. ಅಪಾರ ಪರಿಶ್ರಮ, ಅದಮ್ಯ ಛಲ, ಸತ್ಯಾನ್ವೇಷಣೆ, ತೀವ್ರ ಕುತೂಹಲ ಅವರಲ್ಲಿದ್ದವು. ಅಂತೆಯೇ ಕನ್ನಡ, ಇಂಗ್ಲಿಷ್, ಸಂಸ್ಕೃತ ಕೃತಿಗಳನ್ನು ಅಧ್ಯಯನ ಮಾಡಿ ತಾವು ಸಂಗ್ರಹಿಸಿದ ಜ್ಞಾನಸಂಪತ್ತನ್ನು ಈ ಸಮಾಜಕ್ಕೆ ಕಾಣಿಕೆಯಾಗಿ ನೀಡಿರುವುದು ಪ್ರಶಂಸನೀಯ.

ಈ ದಿಸೆಯಲ್ಲಿ ಅವರ ಜೀವನ ಮತ್ತು ಸಾಧನೆಯನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

೨. ಮನೆತನದ ಹಿನ್ನೆಲೆ

ಒಬ್ಬ ವ್ಯಕ್ತಿಯನ್ನು ಕುರಿತು ಆಳವಾದ ಅಧ್ಯಯನ ಕೈಗೊಳ್ಳುವಾಗ ಆ ವ್ಯಕ್ತಿಯ ಪರಿಸರವನ್ನು ಸೂಕ್ಷ್ಮ ಹಾಗೂ ಸಮಗ್ರವಾಗಿ ಗಮನಿಸಬೇಕಾಗುತ್ತದೆ. ಏಕೆಂದರೆ ಮನುಷ್ಯ ಪರಿಸರದ ಸೃಷ್ಟಿ. ಪರಿಸರಕ್ಕೆ ತಕ್ಕಂತೆ ಪ್ರತಿಭಾವಂತ ವ್ಯಕ್ತಿಯಾಗಿ ಮನುಷ್ಯ ಬೆಳೆಯುತ್ತಾನೆ. ಸಾಧನೆ ಮತ್ತು ಸೇವೆಗಳ ಅಧ್ಯಯನ ಸಂದರ್ಭದಲ್ಲಿ ಆ ಪರಿಸರದ ಪ್ರಭಾವವನ್ನು ಪರಿಗಣಿಸಬೇಕಾಗುತ್ತದೆ.

ಹನುಮಂತಯ್ಯನವರ ಪೂರ್ವಿಕರು ಮೂಲತಃ ಹಂಪಿಯ ಭಾಗದವರೆಂದು ಅವರ ವಂಶಜರು ಹೇಳುತ್ತಾರೆ.[೨]

೩. ಜೀವನ

ಬೆಂಗಳೂರು ಜಿಲ್ಲೆಯ ಉತ್ತರ ತಾಲೂಕು ೨೩ ಕಿ.ಮೀ. ದೂರವಿರುವ 'ವಿಶ್ವನಾಥಪುರ' ಒಂದು ಪುಟ್ಟ ಹಳ್ಳಿ. ಇಲ್ಲಿಯ ಜನಸಂಖ್ಯೆ ಅಂದಾಜು ನಾಲ್ಕು ಸಾವಿರ. ಆ ಊರಲ್ಲಿ ಕುರುಬರ ಕುಟುಂಬಗಳೇ ಹೆಚ್ಚಾಗಿವೆ. ಅಂದರೆ ನೂರಕ್ಕೆ ಅರವತ್ತೈದರಷ್ಟು ಕುಟುಂಬಗಳಿವೆ. ಈ ಹಳ್ಳಿಯಲ್ಲಿ ಬೀದಿಮನೆಯವರೆಂದು ಹನುಮಂತಯ್ಯನವರ ವಂಶಸ್ಥರು ಇದ್ದಾರೆ. ಅಂದು ಈ ಮನೆತನದವರು ಪಶುಪಾಲನೆ ಮತ್ತು ವ್ಯವಸಾಯದಲ್ಲಿ ತೊಡಗಿ ತುಂಬ ಅನುಕೂಲಸ್ಥರಾಗಿದ್ದರು.

ಹನುಮಂತಯ್ಯನವರು ಕ್ರಿ.ಶ. ೧೮೭೮ರಲ್ಲಿ ಜನಿಸಿದರು. ತಂದೆ ಬೀದಿಮನೆ ರಂಗಣ್ಣ, ತಾಯಿ ತಿಮ್ಮಕ್ಕ ಎಂಬ ದಂಪತಿಗಳಿಗೆ ನಾಲ್ಕು ಜನ ಗಂಡುಮಕ್ಕಳು ಇದ್ದರು. ಇವರಿಗೆ ಹೆಣ್ಣು ಸಂತಾನ ಇರಲಿಲ್ಲ. ಮೊದಲನೆಯವರು ದೊಡ್ಡ ಹನುಮಂತಪ್ಪ, ಎರಡನೆಯವರು ಪಿಳ್ಳಪ್ಪ, ಮೂರನೆಯವರೇ

ವಿದ್ವಾಂಸರಾದ ವಿ.ಆರ್. ಹನುಮಂತಯ್ಯ ಮತ್ತು ಕೊನೆಯವರು ನಡಕೇರಪ್ಪ ಎಂದು ತಿಳಿದುಬಂದಿದೆ. ಇವರು ವಿಶ್ವನಾಥಪುರದಲ್ಲಿ ತಮ್ಮ ಮೂಲ ಕಸುಬಾದ ಪಶುಪಾಲನೆ ಮತ್ತು ವ್ಯವಸಾಯದಲ್ಲಿ ತಮ್ಮ ಬದುಕನ್ನು ಸವೆಸುತ್ತ ಕಾಯಕಯೋಗಿಗಳಾಗಿದ್ದರು. ಹನುಮಂತಯ್ಯನವರು ಮಾತ್ರ ಬೆಂಗಳೂರು ಪಟ್ಟಣಕ್ಕೆ ಹೋಗಿ ವಿದ್ಯಾಭ್ಯಾಸ ಮಾಡಿ ಶಿಕ್ಷಕ ವೃತ್ತಿಯಲ್ಲಿ ತೊಡಗಿದ್ದರು.

೪. ಶಿಕ್ಷಣ ಮತ್ತು ವೃತ್ತಿ

ಹನುಮಂತಯ್ಯನವರು ಬೀದಿಮನೆಯವರ ಪಾಲಿಗೆ ಅಜ್ಞಾನ ಎಂಬ ಕತ್ತಲೆಯನ್ನು ಸೀಳಿಕೊಂಡು ಬಂದ ಬೆಳಕಿನ ಪುಂಜವಾಗಿ ಪರಿಣಮಿಸಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಗ್ರಾಮೀಣ ಪರಿಸರದವರಿಗೆ ಶಿಕ್ಷಣ ಎನ್ನುವುದು ಕನಸಿನ ಮಾತಾಗಿತ್ತು. ಕೇವಲ ಕೇಳಿ ತಿಳಿದಿದ್ದ ಸಂಗತಿಯೇ ಹೊರತು, ಕೂಡಿ ಕಲಿಯಲು ಅವಕಾಶವಿರಲಿಲ್ಲ. ಇದಕ್ಕೆ ಸಾಕಷ್ಟು ಕಾರಣಗಳು ಇದ್ದವು. ಶಿಕ್ಷಣವು ಕೇವಲ ಮಠ ಮಾನ್ಯಗಳಲ್ಲಿ ಮಾತ್ರ ಕಂಡುಬರುತ್ತಿತ್ತು. ಅಂದು ಯಾವುದೇ ವಾಹನಗಳ ಸೌಕರ್ಯ ಇರುತ್ತಿರಲಿಲ್ಲ. ಹೀಗಾಗಿ ಸಾಕಷ್ಟು ಆರ್ಥಿಕ ಅನುಕೂಲತೆ ಹೊಂದಿದ್ದ ಬೀದಿಮನೆ ರಂಗಣ್ಣನವರಿಗೆ ತಮ್ಮ ಮಕ್ಕಳನ್ನು ಬೆಂಗಳೂರಿನಲ್ಲಿ ಓದಿಸಬೇಕೆಂಬ ಆಸೆಯಾಯಿತು. ಮಕ್ಕಳನ್ನು ಬೆಂಗಳೂರಿನ 'ಕಾಟನ್‌ಪೇಟೆ'ಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿಸಿದರು. ಇವರ ಮಕ್ಕಳಲ್ಲಿ ಹನುಮಂತಯ್ಯನವರು ಮಾತ್ರ ತಂದೆಯು ನೀಡಿದ ಅಪೂರ್ವ ಅವಕಾಶವನ್ನು ಅರ್ಥಪೂರ್ಣವಾಗಿ ಬಳಸಿಕೊಂಡು ಮೆಟ್ರಿಕ್ಯುಲೇಷನ್ ಪಾಸು ಮಾಡಿದರು. ಇವರಿಗೆ ಮುಂದೆ ಇನ್ನೂ ಓದಬೇಕೆಂಬ ಆಸೆಯಿದ್ದರೂ ತಾನಾಗಿಯೇ ಉದ್ಯೋಗ ಕೈಬೀಸಿ ಕರೆಯುತ್ತಿದ್ದ ಸಂದರ್ಭ ಆ ಕಾಲವಾಗಿತ್ತು. ರಂಗಣ್ಣನವರು ಮಗನನ್ನು ನೌಕರಿಗೆ ತೊಡಗಿಸಿದರು. ತಂದೆಯ ಆಸೆಯಂತೆ ಎರಡು ದಶಕಗಳ ಕಾಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ದುಡಿದ ಹನುಮಂತಯ್ಯನವರು ಮೂಲತಃ ಶ್ರಮಜೀವಿಗಳಾಗಿದ್ದರು.

ಇವರು ಸಮಕಾಲೀನ ಶಿಕ್ಷಕರಲ್ಲಿಯೇ ಒಳ್ಳೆಯ ಸಮರ್ಥ ಶಿಕ್ಷಕರೆಂದು ಖ್ಯಾತಿ ಹೊಂದಿದ್ದರು. ಶಾಲಾ ಸಂವಿಧಾನ, ಪಾಲನೆ, ಲೆಕ್ಕಪತ್ರ ಇಡುವಿಕೆ, ಪ್ರಾಮಾಣಿಕ ನಡವಳಿಕೆ, ಕರ್ತವ್ಯದಲ್ಲಿ ಶ್ರದ್ಧೆಯುಳ್ಳವರಾಗಿದ್ದರು. ವಿದ್ಯಾರ್ಥಿಗಳಿಗೆ ಒಂದು ಸಲ ಪಾಠ ಹೇಳಿದರೆ ಸಾಕು ಇನ್ನೊಂದು ಸಲ ಆ ಪಾಠವನ್ನು ಹೇಳುವ ಅಗತ್ಯವಿರುತ್ತಿರಲಿಲ್ಲ. ಕನ್ನಡ, ಸಂಸ್ಕೃತ, ಇಂಗ್ಲಿಷ್ ಮತ್ತು ಗಣಿತದಲ್ಲಿ ಬೋಧನಾ ಸಾಮರ್ಥ್ಯ ಪಡೆದಿದ್ದರು. ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಸಂಸ್ಕೃತ ಶ್ಲೋಕಗಳನ್ನು ಬಾಯಿಪಾಠ ಮಾಡಿಸುತ್ತಿದ್ದರಂತೆ. ಈ ಶ್ಲೋಕಗಳನ್ನು ಇವರ ಪುಸ್ತಕಗಳಲ್ಲಿ ಕಾಣಬಹುದು.

೧. ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರಃ ।
ಗುರು ಸಾಕ್ಷಾತ್ಪರಬ್ರಹ್ಮ ತಸ್ಮೈ ಶ್ರೀ ಗುರುವೇನಮಃ ।।

೨. ಅಗಜಾನನ ಪದ್ಮಾರ್ಕಂ ಗಜಾನನ ಮಹರ್ನಿಶಂ ।
ಅನೇಕದಂತಂ ಭಕ್ತಾನಾಂ । ಏಕದಂತಮುಪಾಸ್ಮಹೇ ॥
ಗಜಾನನಂ ಭೂತ ಗಣಾದಿಸೇವಿತಂ ।
ಕಪಿತ್ಥ ಜಂಬೂಫಲಸಾರ ಭಕ್ಷಿತಂ ॥
ಉಮಾಸುತಂ ಶೋಕವಿನಾಶಕಾರಣಂ ।
ನಮಾಮಿ ವಿಘ್ನೇಶ್ವರ ಪಾದಪಂಕಜಂ ॥[೪]

೩. ಯಾಕುಂದೇಂದು ತುಷಾರ ಹಾರಧವಳಾ ಯಾ ಶುಭ್ರ ವಸ್ತ್ರಾನ್ವಿತಾ ।
ಯಾ ವೀಣಾ ವರದಂಡ ಮಂಡಿತಕರಾ ಯಾ ಶ್ವೇತ ಪದ್ಮಾಸನಾ ।
ಯಾ ಬ್ರಹ್ಮಚ್ಯುತ ಶಂಕರ ಪ್ರಭೃತಿಭಿರ್ದೇವೈಸ್ಸದಾ ಪೂಜಿತಾ ।
ಸಾಮಾಂ ಪಾತು ಸರಸ್ವತಿ ಭಗವತೀ ನಿಶ್ಶೇಷ ಜಾಡ್ಯಾಪಹಾ ।[೫]

ಈ ತರಹ ಗುರುಸ್ತುತಿ, ಗಣಪತಿ ಸ್ತುತಿ, ಶಾರದಾ ಸ್ತುತಿ(ಶ್ಲೋಕ)ಗಳನ್ನು ಹೇಳಿಕೊಡುತ್ತಿದ್ದರಂತೆ, ವಿದ್ಯಾರ್ಥಿಗಳಿಗೆ ನೀತಿ ನಿಯಮಗಳ ಭದ್ರ ತಳಹದಿ ಹಾಕುತ್ತಿದ್ದರು. ಹೀಗೆ ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರಾಗಿ ಅಲ್ಲಿಯ ಜನರ ಗೌರವದ ಶಿಕ್ಷಕರಾಗಿ ಹನುಮಂತಯ್ಯವರು ಪ್ರಸಿದ್ಧಿಯಾಗಿದ್ದರು.

೫. ಕೌಟುಂಬಿಕ ಜೀವನ

ಹನುಮಂತಯ್ಯನವರು ಅಕ್ಕಯ್ಯಮ್ಮ ಎಂಬುವವರನ್ನು ಮದುವೆಯಾಗಿದ್ದರು. ಈ ದಂಪತಿಗಳಿಗೆ 'ರಂಗಸ್ವಾಮಿ' ಎಂಬ ಏಕೈಕ ಪುತ್ರ ಜನಿಸಿದನು. ಇವರ ತಂದೆಯ ಹೆಸರನ್ನೇ ಮಗನಿಗೆ ಇಟ್ಟಿದ್ದರು. ತಂದೆಯಂತೆ ರಂಗಸ್ವಾಮಿಯವರು ವಿದ್ಯೆ-ಬುದ್ಧಿಯುಳ್ಳ ಸ್ವಭಾವದವರಾಗಿದ್ದರು. ಇವರು ಕರ್ನಾಟಕ ಸರ್ಕಾರದ ಅಬಕಾರಿ ಇಲಾಖೆಯಲ್ಲಿ ಅಧಿಕಾರಿಯಾಗಿ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದರು. ಮೈಸೂರು ಸರ್ಕಾರದ ಅಬಕಾರಿ ಇಲಾಖೆಯಲ್ಲಿ ಅಧಿಕಾರಿಯಾಗಿ, ಆ ಕ್ಷೇತ್ರಕ್ಕೆ ಅನುಪಮ ಕಾಣಿಕೆಯನ್ನು ನೀಡಿದ್ದಾರೆ. ಇಲ್ಲಿ ಒಬ್ಬ ಪಶುಪಾಲಕರ ಮಗ ಶಿಕ್ಷಕನಾಗಿ ಆ ಕ್ಷೇತ್ರಕ್ಕೆ ಹೆಸರಾಗಿದ್ದರು. ಈ ಶಿಕ್ಷಕನ ಮಗ ಅಂದು ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರೆ, ಆತನ ಮಕ್ಕಳು ಇಂದು ಬೆಂಗಳೂರಿನಲ್ಲಿ ವಿವಿಧ ಉದ್ಯೋಗಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೊಮ್ಮಕ್ಕಳು ವಿದೇಶಗಳಿಗೆ ಹೋಗಿ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ.

ಹನುಮಂತಯ್ಯ ಅವರದು ಚಿಕ್ಕ ಕುಟುಂಬವಾದರೆ, ರಂಗಸ್ವಾಮಿ ಅವರದು ದೊಡ್ಡ ಸಂಸಾರ. ಇವರಿಗೆ ಒಟ್ಟು ಹನ್ನೆರಡು ಜನ ಮಕ್ಕಳು. ಆರು ಜನ ಗಂಡುಮಕ್ಕಳು, ಆರು ಜನ ಹೆಣ್ಣುಮಕ್ಕಳು. ಮೊದಲನೆಯವರು ಕೃಷ್ಣದೇವರಾಯ, ಎರಡನೆಯವರು ವಿಜಯದೇವರಾಯ, ಮೂರನೆಯವರು

ಎ.ಆರ್. ಹನುಮಂತಯ್ಯನವರ ವಂಶವೃಕ್ಷ

ಬೀದಿ ಮನೆ ರಂಗಣ್ಣ(ಪವತಿ)

ತಿಮ್ಮಕ್ಕ ಉ!! ಚಂದ್ರಗುತಿ ಯಲ್ಲಮ್ಮ ಹೆಂಡತಿ(ಪವತಿ)

↓

ದೊಡ್ಡಹನುಮಂತ
ರಂಗಮ್ಮ(ಪವತಿ)
ಸಂತಾನವಿರುವುದಿಲ್ಲ

ಬೀದಿ ಮನೆ ಪಿಳ್ಳಪ್ಪ(ಪವತಿ)
ಯಲ್ಲಮ್ಮ(ಪವತಿ)
ತಿಮ್ಮಯ್ಯ-ಮಗ-(ಪವತಿ)
ಗಿರಿಯಮ್ಮ-ಹೆಂಡತಿ ೭೦ ವರ್ಷ

ಚಿಕ್ಕ ಹನುಮಂತ ಉ!!ವಿ.ಆರ್. ಹನುಮಂತಯ್ಯ(ಪವತಿ)
ಅಕ್ಕಯಮ್ಮ(ಪವತಿ)
ವಿ.ಹೆಚ್. ರಂಗಸ್ವಾಮಿ-ಮಗ(ಪವತಿ)
ಟಿ. ಪುಟ್ಟಮ್ಮ ಹೆಂಡತಿ(೮೫ ವರ್ಷ)

ನಡಕೇರಪ್ಪ(ಪವತಿ)
ತಿಮ್ಮಕ್ಕ(ಪವತಿ)
ಶ್ರೀ ರಂಗಪ್ಪ(ಪವತಿ)-ಮಗ-(ಪವತಿ)
ಯಲ್ಲಮ್ಮ ಹೆಂಡತಿ(೬೭ ವರ್ಷ)

↓

ಹನುಮಂತರಾಜು ಮಗ(೫೨ ವರ್ಷ)
ರಮೇಶ ಮಗ(೪೮ ವರ್ಷ)

೧. ವಿ.ಆರ್. ಕೃಷ್ಣದೇವರಾಯ ಮಗ(೬೭ ವರ್ಷ)
೨. ವಿ.ಆರ್. ವಿಜಯದೇವರಾಯ ಮಗ(೬೫ ವರ್ಷ)
೩. ವಿ.ಆರ್. ನಾಗರತ್ನ ಮಗಳು(೬೩ ವರ್ಷ)
೪. ವಿ.ಆರ್. ಬುಕ್ಕರಾಯ ಮಗ(೬೧ ವರ್ಷ)
೫. ವಿ.ಆರ್. ಪ್ರೌಢದೇವರಾಯ ಮಗ(೫೯ ವರ್ಷ)
೬. ವಿ.ಆರ್. ಚಂದ್ರವತಿ ಮಗಳು(೫೭ ವರ್ಷ)
೭. ವಿ.ಆರ್. ಗೌರಮ್ಮ ಮಗಳು(೫೬ ವರ್ಷ)

ನಾರಾಯಣಮ್ಮ ಮಗಳು(ಪವತಿ)
ರಂಗಮ್ಮ ಮಗಳು(೫೨ ವರ್ಷ)
ಲಕ್ಷಮಮ್ಮ ಮಗಳು(ಪವತಿ)
ಲಕ್ಷ್ಮಿನಾರಾಯಣ ಮಗ(೪೧ ವರ್ಷ)
ಲತಾ ಮಗಳು(೩೮ ವರ್ಷ)

೮. ವಿ.ಆರ್. ಅಹಲ್ಯದೇವಿ ಮಗಳು(೫೪ ವರ್ಷ)

೯. ವಿ.ಆರ್. ಹರಿಹರ ಮಗ(೫೨ ವರ್ಷ)

೧೦. ವಿ.ಆರ್. ರಂಗಮಹಾಲಕ್ಷ್ಮಿ ಮಗಳು(೫೧ ವರ್ಷ)

೧೧. ವಿ.ಆರ್. ವಿಶ್ವನಾಥ್, ಮಗ(೪೭ ವರ್ಷ)

೧೨. ವಿ.ಆರ್. ಶಂಕರಾಂಭ ಮಗಳು(೪೫ ವರ್ಷ)

ಕೃಷ್ಣದೇವರಾಯ	ವಿಜಯದೇವರಾಯ	ನಾಗರತ್ನ	ಬುಕ್ಕರಾಯ	ದೇವೇಂದ್ರ	ಹರಿಹರ	ಚಂದ್ರವತಿ	ಗೌರಮ್ಮ	ಅಹಲ್ಯಾದೇವಿ	ರಂಗಮಹಾಲಕ್ಷ್ಮಿ	ವಿಶ್ವನಾಥ್	ಶಂಕರಾಂಭ
ಬೃಂದ	ಗೀತ	ನಾಗರಾಜ	ಮಂಗಳಗೌರಿ	ಇಂದಿರ	ಉಷಾ	ಗೋಪಾಲ್	ನಾರಾಯಣಸ್ವಾಮಿ	ಬಾಬು	ರಾಜಶೇಖರ್	ಯಶೋಧ	ಕುಮಾರಸ್ವಾಮಿ
↓	↓	↓	↓	↓	↓	↓	↓	↓	↓	↓	↓
ಗೀತ	ರಶ್ಮಿ	ದೇವಿ	ಮಾನಸ	ತೇಜ	ಹರ್ಷಾ	ಪ್ರಮೋದ್	ಹೇಮಲತ	ಭವ್ಯ	ಶರಣ್ಯ	ಮಾಧುರ್ಯ	ಲೋಹಿತ್
ಹೇಮಂತ್		ತನುಜ	ಸುಜನ್	ಯಶಸ್ವಿನಿ	ಪ್ರೇರಣ	ದಿವಾಕರ	ರವಿಶಂಕರ್	ಚೈತ್ರ	ಚೈತನ್ಯ	ಪ್ರಜ್ವಲ್	

ಬುಕ್ಕರಾಯ, ನಾಲ್ಕನೆಯವರು ಪ್ರೌಢದೇವರಾಯ, ಐದನೆಯವರು ಹರಿಹರರಾಯ, ಆರನೆಯವರು ವಿಶ್ವನಾಥರಾಯ ಎನ್ನುವ ಹೆಸರುಗಳನ್ನು ಇಟ್ಟಿದ್ದಾರೆ. ಇವರಲ್ಲಿ ಕೊನೆಯವರ ಹೆಸರು ಮಾತ್ರ ಬದಲಾಗಿದೆ. ಕಾರಣ ತಮ್ಮ ಮೂಲ ಸ್ಥಳವಾದ ವಿಶ್ವನಾಥಪುರ ಹಾಗೂ ಮನೆಯ ಕುಲದೇವರ ನೆನಪಿಗೋಸ್ಕರ 'ವಿಶ್ವನಾಥ' ಎಂದು ನಮ್ಮ ಮಾವ ಹನುಮಂತಯ್ಯನವರೇ ಈ ಹೆಸರನ್ನು ಇಟ್ಟಿದ್ದಾರೆಂದು ಪುಟ್ಟಮ್ಮನವರು ಹೇಳುತ್ತಾರೆ. ತಮ್ಮ ಆರು ಜನ ಹೆಣ್ಣುಮಕ್ಕಳಿಗೆ ನಾಗರತ್ನ, ಚಂದ್ರಪ್ರಭ(ವತಿ), ಗೌರಮ್ಮ, ಅಹಲ್ಯಾದೇವಿ, ರಂಗಮಹಾಲಕ್ಷ್ಮೀ ಹಾಗೂ ಶಂಕರಾಂಬ ಎಂಬ ಹೆಸರುಗಳಿವೆ. ಇಲ್ಲಿ ವಿಶೇಷವೆಂದರೆ ಹನುಮಂತಯ್ಯನವರು ತಮ್ಮ ಮೊಮ್ಮಕ್ಕಳಿಗೆ ವಿಜಯನಗರ ಸಾಮ್ರಾಜ್ಯವನ್ನು ಆಳಿದಂತಹ ರಾಜರುಗಳ ಹೆಸರನ್ನು ಇಟ್ಟಿರುವರು. ಕಾರಣ ಇವರು ಮೂಲತಃ ಹಂಪಿಯ ಭಾಗದವರು ಮತ್ತು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದವರು ತಮ್ಮ ಸಮುದಾಯದವರು ಎನ್ನುವ ಅಭಿಪ್ರಾಯದಿಂದ ಈ ಹೆಸರುಗಳನ್ನು ಇಟ್ಟಿದ್ದಾರೆಂದು ಇವರ ವಂಶಸ್ಥರು ಹೇಳುವರು. ಇವರಲ್ಲಿ ಹರಿಹರರಾಯರು ಮಾತ್ರ ಸ್ವಲ್ಪಮಟ್ಟಿಗೆ ಸಾಹಿತ್ಯ ಕೃಷಿಯಲ್ಲಿ ತೊಡಗಿರುವುದು ತಿಳಿದುಬಂದಿದೆ. ಉಳಿದವರು ವಕೀಲರು, ಇಂಜಿನಿಯರ್ ಇತ್ಯಾದಿ ವೃತ್ತಿಯಲ್ಲಿ ತೊಡಗಿದ್ದಾರೆ.

೬. ಸಾಹಿತ್ಯಕ ಸಾಧನೆ

ಸಂಶೋಧನ ಕ್ಷೇತ್ರದಲ್ಲಿ ಎಲೆಮರೆಯ ಕಾಯಿಯಂತೆ ದುಡಿದ ಹನುಮಂತಯ್ಯನವರು ಎರಡು ದಶಕಗಳ ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ತಮ್ಮ ಅಪಾರವಾದ ಓದು ಮತ್ತು ಚಿಂತನೆಗಳಿಂದ ಇತಿಹಾಸ, ಸಮಾಜ, ಸಾಹಿತ್ಯ, ಸಂಸ್ಕೃತಿ, ಚರಿತ್ರೆಗಳಂಥ ಸಂಶೋಧನ ಕ್ಷೇತ್ರದತ್ತ ತಮ್ಮ ಹವ್ಯಾಸವನ್ನು ವಿಸ್ತರಿಸಿಕೊಂಡರು. ಇದರ ಫಲವಾಗಿ ಕನ್ನಡ, ಸಂಸ್ಕೃತ, ಇಂಗ್ಲಿಷ್, ಹಿಂದಿ ಭಾಷೆಗಳ ಜೊತೆಗೆ ನೆರೆಯ ರಾಜ್ಯ ಭಾಷೆಗಳಾದ ತೆಲುಗು, ತಮಿಳು, ಮರಾಠಿ ಇತ್ಯಾದಿ ಭಾಷೆಗಳನ್ನು ಕಲಿತು ಆ ಭಾಷೆಗಳಲ್ಲಿಯೂ ತಕ್ಕಮಟ್ಟಿಗೆ ಪಾಂಡಿತ್ಯವನ್ನು ಹೊಂದಿದ್ದರು. ಇವರಿಗಿದ್ದ ಅಪಾರ ಓದು, ಜ್ಞಾನ ಸಂಶೋಧನ ಕ್ಷೇತ್ರ ಮತ್ತು ಸೃಜನಶೀಲ ಸಾಮರ್ಥ್ಯವನ್ನು ರೂಢಿಸಿ ಬೆಳೆಸಿಕೊಳ್ಳಲು ಕಾರಣವಾಯಿತು. ಇದರ ಫಲವಾಗಿ 'ಕುರುಬರ ಚರಿತ್ರೆ' 'ಭಾರತ ದೇಶದ ಕುರುಬರ ಚರಿತ್ರೆ', 'ಸಂಕ್ಷಿಪ್ತ ವಿಜಯನಗರ ಸಾಮ್ರಾಜ್ಯ ಚರಿತ್ರೆ', 'ವಿಜಯನಗರ ಸಾಮ್ರಾಜ್ಯ ಚರಿತ್ರೆ', 'ಭೋಜರಾಜ ಕಾಳಿದಾಸ ಚರಿತ್ರೆ' ಮತ್ತು 'ಆನೆಗೊಂದಿ ಮಹಾಸಂಸ್ಥಾನ ಚರಿತ್ರೆ'ಗಳು ಹೆಸರಿನ ಪ್ರಮುಖ ಕೃತಿಗಳು ಇವರಿಂದ ರಚನೆಗೊಂಡವು. ಜೊತೆಗೆ ಒಬ್ಬ ಕುರುಬರ(ಗೊಲ್ಲರ) ಗುರುವಿನ ಮಹತ್ವದ ಸನ್ನದು, ಕನಕದಾಸರು ಕುರುಬರಲ್ಲವೇ? ಇತ್ಯಾದಿ ಲೇಖನಗಳನ್ನು ಪ್ರಕಟಿಸಿದ್ದಾರೆ.

೧೯೨೬ರ ಹಿಂದೆಯೇ ಹನುಮಂತಯ್ಯನವರು ಕುರುಬ ಸಮುದಾಯವನ್ನು ಕುರಿತು ಸಂಶೋಧನಾತ್ಮಕ ಗ್ರಂಥಗಳನ್ನು ರಚಿಸಿರುವುದು ಸಾಹಿತ್ಯಕ ಸಂಗತಿಯಾಗಿದೆ. ಈ ಜನಾಂಗದ ಇತಿಹಾಸ, ಪ್ರಾಚೀನತೆ, ಭಾರತ ದೇಶದಲ್ಲಿ ಇವರನ್ನು ಕರೆಯುವ ಹೆಸರುಗಳು, ಅರಸುಮನೆತನಗಳು, ಮಹಾಪುರುಷರ ಜೀವನಚರಿತ್ರೆ ಹೀಗೆ ಮೊದಲಾದ ರಾಜಕೀಯ, ಸಾಮಾಜಿಕ, ಧಾರ್ಮಿಕ ಜೀವನಚರಿತ್ರೆಯನ್ನು ತಿಳಿಸಿಕೊಟ್ಟಿದ್ದಾರೆ.

ಈ ಸಮುದಾಯದ ಮಹತ್ವ ಜಾಗತಿಕ ಇತಿಹಾಸದಲ್ಲಿ ಇವರಿಗಿರುವ ಸ್ಥಾನಮಾನ ಮತ್ತು ಸಾಧನೆಯ ಶಿಖರವನ್ನು ಗುರುತಿಸುವುದರ ಜೊತೆಗೆ ತಿಳಿಹೇಳುವುದು ಇವರ ಉದ್ದೇಶವಾಗಿತ್ತು. ಹೀಗೆ ಮಾಡುವಾಗ ಯಾವೊಂದು ತಪ್ಪುಗ್ರಹಿಕೆಗೆ ಆಸ್ಪದವಾಗದೆ, ಕೇವಲ ಭಾವಾತೀತವಾಗಿ ಕಂಡ ಹಾಗೆ ಹೇಳಿಬಿಡುವ ಅತಿಯಾದ ಉತ್ಸುಕತೆ ತೋರದೆ, ಸತ್ಯದ ಹಾದಿಯನ್ನು ಹಿಡಿಯುವುದು ಇವರ ಸಂಶೋಧನ ಪ್ರಜ್ಞೆಯನ್ನು ಮತ್ತು ಪ್ರಾಮಾಣಿಕತೆಯನ್ನು ಸೂಚಿಸುತ್ತದೆ.

ಇವರು ಯಾವುದೇ ಕೃತಿ ರಚನೆಗೆ ತೊಡಗುವ ಪೂರ್ವದಲ್ಲಿ ಆ ವಿಷಯಕ್ಕೆ ಸಂಬಂಧಿಸಿದಂತೆ ವೈವಿಧ್ಯಪೂರ್ಣವಾದ ಆಕರಗಳನ್ನು ಸಂಗ್ರಹಿಸುವುದು, ಅವುಗಳನ್ನು ಕ್ರಮಬದ್ಧವಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡುವುದು, ಪೂರಕವಾದ ಆಕರಗಳನ್ನು ಕೊಟ್ಟಿರುವುದು ಅವರ ಸಂಶೋಧನ ಕೃತಿಗಳಲ್ಲಿ ಕಾಣಬರುತ್ತದೆ. ಶ್ರೀ ಸಿ.ಲಕ್ಕಣ್ಣ(ಲಕ್ಷ್ಮಣ) ಹೆಗ್ಗಡೆ, ಬೀರಪ್ಪ ನಿಂಗಪ್ಪ ಬಿಜ್ಜೂರ, ಶ್ರೀಮಾನ್ ತೂಪ್ಪತ್ ರಾಘವಾಚಾರ್ಯರು, ಎಂ.ಸಿ.ಕೃಷ್ಣಸ್ವಾಮಿ ಅಯ್ಯಂಗಾರ್, ಆರ್.ಎನ್.ಬೀರಣ್ಣ, ರಾಮಸ್ವಾಮಪ್ಪ, ಸದಾಶಿವರಾವ್, ಸುಬ್ಬರಾವ್, ನರಸಿಂಗರಾವ್ ಮೊದಲಾದ ಮಹನೀಯರ ಸಹಾಯವನ್ನು ತಮ್ಮ ಕೃತಿಗಳಲ್ಲಿ ಸ್ಮರಿಸಿದ್ದಾರೆ.[೬] ಈ ಹೊತ್ತಿನ ಸಂಶೋಧನೆಯಲ್ಲಿ ವಕ್ತೃ ವಿವರ ನೀಡುವಂತೆ ತಮ್ಮ ಅಧ್ಯಯನಕ್ಕೆ ಮಾಹಿತಿ ನೀಡಿ ಸಹಕರಿಸಿದ ಮಹನೀಯರ ಸ್ಮರಣೆಯೂ ಕೂಡ ಸಂಶೋಧನ ವಿಧಾನದಲ್ಲಿ ಒಂದು. ಈ ವೈಧಾನಿಕತೆಯೇ ಹನುಮಂತಯ್ಯ ಅವರ ಬರಹದ ಲಕ್ಷಣವಾಗಿದೆ.

ಹತ್ತು ಹಲವು ನಿಟ್ಟಿನಿಂದ ಆಕರಗಳನ್ನು ಸಂಗ್ರಹಿಸುವುದು ಮತ್ತು ವಿಷಯವನ್ನು ಸ್ಪಷ್ಟಪಡಿಸುವುದು ಹನುಮಂತಯ್ಯನವರ ವಿಶಿಷ್ಟ ಗುಣ. ಇವರ ಬರಹಗಳಲ್ಲಿ ಸರಳತೆಯಿದೆ. ಪ್ರತಿಯೊಂದು ಗ್ರಂಥದಲ್ಲಿ ಕೊಟ್ಟಿರುವ ಅಡಿಟಿಪ್ಪಣಿಗಳು ಸಂಶೋಧನಾ ವ್ಯಾಪ್ತಿ ಮತ್ತು ಬಹುಭಾಷಾ ಪ್ರಭುತ್ವವನ್ನು ತೋರಿಸುತ್ತದೆ. ಕೇವಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಇವರು "ಭಾರತ ದೇಶದ ಕುರುಬರ ಚರಿತ್ರೆ"ಯಂತಹ ಮಹತ್ವದ ಕೃತಿ ರಚನೆಗೆ ಕೈ ಹಾಕಲು ಕಾರಣವೇನು ಎಂಬುದು ಕುತೂಹಲ ಮೂಡಿಸುತ್ತದೆ. ೧೯೧೪ರಿಂದ ೧೯೨೬ರ ತನಕ ಆವರೆಗಿನ ಅನೇಕ ಮಹತ್ವದ ಹಾಗೂ ಅಪೂರ್ವವಾದ ಗ್ರಂಥೇತಿಹಾಸಾದಿಗಳ ಸಂಶೋಧನೆಯ ಪರಿಶ್ರಮದಿಂದ "ಕುರುಬರ ಚರಿತ್ರೆ' ಎಂಬ ಗ್ರಂಥವನ್ನು

ಪ್ರಕಟಿಸಿದರು. ಈ ಚರಿತ್ರೆ ಬರೆಯಲು ಉಂಟಾಗಿದ್ದ ಸಾಂದರ್ಭಿಕ ತುರ್ತುಗಳೇನು ಎನ್ನುವುದನ್ನು ಗ್ರಹಿಸಬಹುದು.

ಸಾಹಿತ್ಯ, ಇತಿಹಾಸ, ಪುರಾಣ ಗ್ರಂಥಗಳಿಂದ ಮಾಹಿತಿಯನ್ನು ಪಡೆಯುವುದು ತೀರ ಕಷ್ಟಕರವಾದ ಸಂಗತಿಯಾಗಿ ಉಳಿದಿಲ್ಲ. ಗ್ರಂಥಾಲಯ, ದೂರದರ್ಶನ, ಸಿನೇಮಾ, ರೇಡಿಯೋ, ಪತ್ರಿಕೆ ಮುಂತಾದ ಸಮೂಹಮಾಧ್ಯಮಗಳ ಸವಲತ್ತು ವಿವಿಧ ಹಂತಗಳಲ್ಲಿ ದೊರೆಯುತ್ತದೆ. ಆದರೆ ಹನುಮಂತಯ್ಯನವರು 'ಕುರುಬರ ಚರಿತ್ರೆ' ಪುಸ್ತಕ ಬರೆದಿದ್ದು ಸ್ವಾತಂತ್ರ್ಯ ಪೂರ್ವದಲ್ಲಿ. ಆ ಕಾಲಕ್ಕೆ ಕನಿಷ್ಠ ಪತ್ರಿಕೆಯೂ ದುರ್ಬಲವಾಗಿದ್ದ ಸಂದರ್ಭ ಪುಸ್ತಕಗಳು ದೊರೆಯದಂತಹ, ಮುದ್ರಣವೇ ಇಲ್ಲದೇ ಇದಕ್ಕೂ ಮಿಗಿಲಾಗಿ ಪುರಾಣ ಇತಿಹಾಸ ಗ್ರಂಥಗಳು "ಧರ್ಮ ಗ್ರಂಥ"ಗಳೆಂದು ಮೇಲ್ಜಾತಿಯವರ ಪೂಜೆ ಕೋಣೆಯಲ್ಲಿ ಇಲ್ಲವೆ ಮುರುಕು ಪೆಟ್ಟಿಗೆಯಲ್ಲಿ ಸವೆದು ಹೋಗುತ್ತಿದ್ದವು. ಅಂಥ ಕಾಲದಲ್ಲಿ ಇನ್ನೂ ಹೆಚ್ಚೆಂದರೆ ಇಂತಹ ಗ್ರಂಥಗಳನ್ನು ಶೂದ್ರರು ಮುಟ್ಟಲೇಬಾರದೆಂಬ ಕುರುಡುನಂಬಿಕೆ ಬಲವಾಗಿದ್ದ ಸಂದರ್ಭವದು. ಹೀಗೆ ಸಾಧ್ಯವಾದಷ್ಟು ಎಲ್ಲಾ ಪುರಾವೆಗಳನ್ನು ಸಂಗ್ರಹಿಸಿಕೊಂಡು ಸಂಶೋಧಿಸಿ, ತುಲನೆ ಮಾಡಿ ಸತ್ಯಾಸತ್ಯತೆಯ ಒರೆಗಲ್ಲಿನಲ್ಲಿ ತಿಕ್ಕಿ ಪುಸ್ತಕರೂಪಕ್ಕೆ ತಂದ ಇವರ ಸಾಹಿತ್ಯ ಸಾಧನೆ ಅಪಾರವಾದದ್ದು. ಹನುಮಂತಯ್ಯನವರ ನಾಲ್ಕನೇ ಗ್ರಂಥವಾದ "ಭಾರತ ದೇಶದ ಕುರುಬರ ಚರಿತ್ರೆ"(೧೯೫೮) ಕೃತಿಗೆ ಇಂದೂರ್ ಸಂಸ್ಥಾನದ ಶ್ರೀ ಮನ್ಮಹಾರಾಜ, ಶ್ರೀಮಂತ ಶ್ರೀ ಯಶವಂತರಾವ್ ಹೋಳ್ಕರ್ ಮಹಾರಾಜರು ೫೦೦-೦೦(ಐದುನೂರು) ರೂಪಾಯಿಗಳನ್ನು ಬಹುಮಾನವಾಗಿ ದಯಪಾಲಿಸಿರುವುದು ಇತರ ಮಹಾರಾಜರುಗಳಿಗೆಲ್ಲಾ ಆದರ್ಶಪ್ರಾಯವಾಗಿರುತ್ತದೆ. ಈ ಮಹಾರಾಜರ ಔದಾರ್ಯವೂ ಕನ್ನಡ ಭಾಷಾಭಿಮಾನವೂ ತುಂಬಾ ಸ್ತುತ್ಯವೂ ಚಿರಸ್ಮರಣೀಯವೂ ಆಗಿದೆ. ಜಗನ್ಮಾತಳಾದ ಶ್ರೀದೇವಿ ಅಹಲ್ಯಾಬಾಯಿ ಮಹಾರಾಣಿ ಹೋಳ್ಕರ್ ಮನೆತನದವರಿಗಿಂತಹ ಔದಾರ್ಯಬುದ್ಧಿ ಸ್ವಾಭಾವಿಕವಾಗಿಯೇ ಅವರ ಮನೆತನಕ್ಕೆ ಬಂದಿದೆ.[೭]

ಇವರ ಗ್ರಂಥಗಳನ್ನು ಸರ್ವರೂ ಆದರದಿಂದ ಎಡಬಿಡದೆ ಓದತಕ್ಕದಷ್ಟೇ ಆಗಿರದೆ, ಎಲ್ಲಾ ಸರ್ಕಾರೀ ಸ್ಕೂಲ್, ಕಾಲೇಜ್, ವಿಶ್ವವಿದ್ಯಾಲಯಾದಿಗಳ ಗ್ರಂಥಾಲಯಗಳಿಗೂ, ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೂ, ಹೆಚ್ಚಾಗಿ ಇತಿಹಾಸ ಪ್ರೇಮಿಗಳಿಗೂ ಅತ್ಯಾವಶ್ಯಕವಾದ ಗ್ರಂಥಗಳಾಗಿವೆ[೮] ಎಂದು ಪಂಡಿತ ಅಮರವಾಣಿಪ್ರಿಯ, ಸಂಸ್ಕೃತರತ್ನ, ಸಾಹಿತ್ಯ ಕವಿಭೂಷಣ, ವಿದ್ಯಾಲಂಕಾರ ಎಂ.ಸಿ.ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ಹೇಳಿದ್ದಾರೆ.

೭. ಸಾಮಾಜಿಕ ಸೇವೆ

ಮನುಷ್ಯನು ಸಮಾಜಜೀವಿ. "Man is a Social Animal." ಸಮಾಜ ಬಿಟ್ಟು ಅವನಿಲ್ಲ. ಏಕಾಂಗಿಯಾಗಿದ್ದು ಮನುಷ್ಯ ಮನುಷ್ಯನಾಗಿ ಬಾಳಲಾರ, ನಮ್ಮ ಪ್ರತಿಯೊಂದು ಚಟುವಟಿಕೆಗಳು ಸಮಾಜದಲ್ಲಿಯೇ ನಡೆಯುತ್ತವೆ. ಈ ಕಾರಣ ನಾವು ಸಮಾಜದ ಋಣಿಯಾಗಿದ್ದೇವೆ. ತಂದೆತಾಯಿಗಳ

ಋಣ, ಮಾತೃಭಾಷೆಯ ಋಣ, ದೇಶದ ಋಣ ನಮ್ಮ ಮೇಲಿರುತ್ತದೆ. ನಾವು ನಮ್ಮವರು ಇರುವ ತನಕ ಈ ಋಣಭಾರದಿಂದ ಮುಕ್ತರಾಗಲು ಪ್ರಯತ್ನಿಸಬೇಕು. ಬಸವಣ್ಣನವರು ತಮ್ಮ ವಚನದಲ್ಲಿ ತಾವು ಮಾಡುವ ಪ್ರತಿಯೊಂದು ಕೆಲಸವು ಸಮಾಜದ ಋಣವನ್ನು ತೀರಿಸಲಿಕ್ಕಾಗಿ ಮುಡುಪಾಗಿಟ್ಟಿದ್ದೇನೆಂದು ಹೇಳುತ್ತಾರೆ. ಹನುಮಂತಯ್ಯನವರ ಉದ್ದೇಶ ಸಹ ಇದೇ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಇವರು ಸರಕಾರಿ ನೌಕರಿ ಮಾಡುತ್ತಲೇ ಸಮಾಜಕ್ಕೆ ಅಳಿಲುಸೇವೆ ಸಲ್ಲಿಸಿದ್ದಾರೆ.

ಸ್ವಾತಂತ್ರ್ಯಪ್ರಿಯರಾದ ಹನುಮಂತಯ್ಯನವರು ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಚರಿತ್ರೆಯ ಜೊತೆಗೆ ಸಾಮಾಜಿಕ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿದ್ದರು. ೧೯೨೩ರಲ್ಲಿ ಬೆಂಗಳೂರಿನಲ್ಲೊಂದು ವಿದ್ಯಾರ್ಥಿನಿಲಯದ ಅವಶ್ಯಕತೆ ಇರುವುದನ್ನು ಮನಗಂಡು ಇವರು ನೀಲಗಿರಿ ಎಸ್. ಗಿರಿಯಪ್ಪ, ನೀಲಗಿರಿ ಸಂಜೀವಯ್ಯ ಮತ್ತು ಇತರ ಮುಂದಾಳುಗಳೊಡನೆ ಕುರುಬ ಸಂಘವನ್ನು ನೋಂದಾಯಿಸಿ ವಿದ್ಯಾರ್ಥಿನಿಲಯದ ಕಟ್ಟಡಕ್ಕೆ ದ್ರವ್ಯ ಸಹಾಯ ನೀಡುವಂತೆ ಸಮಾಜಬಾಂಧವರಲ್ಲಿ ವಿನಂತಿಸಿಕೊಂಡಿರುವ ಸಮಾಜೋದ್ಧಾರಕ ಹನುಮಂತಯ್ಯನವರು ಕುರುಬರ ಚರಿತ್ರೆಯ ಕೃತಿಯ ಕೊನೆಯಲ್ಲಿ ಹೇಳಿಕೊಂಡಿದ್ದಾರೆ. ಹೆಚ್ಚು ವಿದ್ಯಾಭ್ಯಾಸ ಮಾಡಬೇಕೆಂದು ಬೆಂಗಳೂರಿಗೆ ಬಂದ ಬಡ ವಿದ್ಯಾರ್ಥಿಗಳು ತಮಗೆ ಸೌಕರ್ಯವಿಲ್ಲದುದರಿಂದ ವಿಮುಖರಾಗಿ ಹೊರಟುಹೋಗಿ ಸ್ವಸ್ಥಳದಲ್ಲಿ ಯಾವುದೇ ಕೆಲಸವನ್ನು ಮಾಡುವುದಕ್ಕೂ ಯೋಗ್ಯರಾಗದೆ ಉಭಯಸಂಕಟಕ್ಕೆ ಗುರಿಯಾಗುತ್ತಿರುವುದು ತುಂಬಾ ವಿಷಾದಕರವಾಗಿದೆ. ಇದರ ದಿಸೆಯಿಂದ ಬೆಂಗಳೂರಿನಲ್ಲೊಂದು ಹಾಸ್ಟಲನ್ನು ಕಟ್ಟಿಸದೆ ಬೇರೆ ಉಪಾಯವೇ ಇಲ್ಲ. ಸದರಿ ಕಟ್ಟಡಕ್ಕೆ ಬೇಕಾದ ಜಾಗದ ಸಲುವಾಗಿ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಲಾಗಿದೆ. ಈ ಹಾಸ್ಟಲನ್ನು ಕಟ್ಟಿಸುವಾಗ ಮೈಸೂರಿನ ಎಸ್.ಚಿಕ್ಕಣ್ಣನವರು ಮತ್ತು ಚೆನ್ನಪಟ್ಟಣದ ಶ್ರೀಯುತ ಸಂಜೀವ ಹೆಗ್ಗಡೆಯವರು ದ್ರವ್ಯ ಸಹಾಯವನ್ನು ಒದಗಿಸಿರುವುದರಿಂದ ಅವರಿಗೆ ನಾನು ತುಂಬ ಅಭಿನಂದಿಸುತ್ತೇನೆ ಎಂದು ಹೇಳಿಕೊಂಡಿದ್ದಾರೆ. 'ಕರ್ನಾಟಕ ಕುರುಬ ಸಂಘ' ಕಟ್ಟಿದರು. ವಿದ್ಯಾರ್ಥಿಗಳಿಗಾಗಿ ವಸತಿನಿಲಯವನ್ನು ಆರಂಭಿಸಿದರು. ತಾವು ಹಳ್ಳಿಗಳಿಗೆ ಹೋದಾಗ ವಸತಿನಿಲಯಕ್ಕೆ ಬೇಕಾದ ಹಣ ಹಾಗೂ ಧಾನ್ಯಗಳನ್ನು ಸಂಗ್ರಹಿಸಿಕೊಂಡು ಬಂದು ಕೊಡುತ್ತಿದ್ದರು. ಇದನ್ನು ಅವರು ಆಸಕ್ತಿಯಿಂದ ಮಾಡುತ್ತಿದ್ದರು. ಜೊತೆಗೆ ಸಂಘದ ಮತ್ತು ವಸತಿನಿಲಯದ ತಿಳುವಳಿಕೆಯನ್ನು ಕೊಡುತ್ತಿದ್ದರು. ಈ ಮುಖಾಂತರ ವಿದ್ಯಾರ್ಥಿಗಳ ಸೇವೆ ಮಾಡುವೆ ಎನ್ನುತ್ತಿದ್ದರು.[೮] ಜೊತೆಗೆ ಸಾರ್ವಜನಿಕ ವಿದ್ಯಾರ್ಥಿಗಳಿಗೂ ಸಹ ಅವಕಾಶವನ್ನು ಕಲ್ಪಿಸಿದ್ದರು. ಇದಕ್ಕೆ ಬೆಂಗಳೂರು ಪಟ್ಟಣದ 'ಕುರುಬರ ವಿದ್ಯಾರ್ಥಿ ನಿಲಯ'ವೇ ಪ್ರತ್ಯಕ್ಷ ನಿದರ್ಶನವಾಗಿದೆ.

ಹಾಲು ಹೇಗೆ ಬಡವರು ಮತ್ತು ಬಲ್ಲಿದರು, ಶ್ರೇಷ್ಠರು ಮತ್ತು ಕನಿಷ್ಠರು ಎಂಬ ಭೇದಭಾವವಿಲ್ಲದೆ ಸರ್ವರಿಗೂ ಹೇಗೆ ಸಮಾನವಾದ ಪೌಷ್ಟಿಕ ಆಹಾರವಾಗಿದೆಯೋ ಮತ್ತು ಈ ಅಮೂಲ್ಯವಾದ

ಹಾಲಿನ ಸೇವನೆಯಿಂದಾಗಿಯೇ ಯಾವ ಕೇಡು ಕೆಡಕುಗಳುಂಟಾಗುವುದಿಲ್ಲವೋ ಹಾಗೆಯೇ ಈ ಹಾಲುಮತಕ್ಕೆ ಇವರು ತನ್ನವರು ಅನ್ಯರು ಎಂಬ ಭೇದಭಾವ, ಸಂಕುಚಿತ ಬುದ್ಧಿಯಿಲ್ಲದೆ ಸರ್ವರನ್ನು ತನ್ನಂತೆ ತನ್ನ ಸಹೋದರಂತೆ ಕಾಣುತ್ತಿದ್ದರಂತೆ.[೧೦] "ಆತ್ಮವತ್ಸರ್ವ ಭೂತಾನಿ, ಸತ್ಯಂ ವದಾ ಧರ್ಮಂ ಚರಾ" ಅಂದರೆ ಎಲ್ಲರನ್ನು ತನ್ನಂತೆ ನೋಡುವುದು, ಸತ್ಯವನ್ನು ನುಡಿಯುವುದು, ಧರ್ಮದಂತೆ ನಡೆಯುವುದು ಹಾಲುಮತ ಸಮಾಜದ ಉದಾರತತ್ವಗಳಾಗಿರುತ್ತವೆ ಎಂದು ವಿ.ಆರ್.ಹನುಮಂತಯ್ಯ ಅವರು ಹೇಳಿದ್ದಾರೆ. ಇವರಲ್ಲಿ ಸರ್ವರನ್ನು ದಿವ್ಯದೃಷ್ಟಿಯಿಂದ ಕಾಣಬೇಕು ಎನ್ನುವ ಅಭಿಪ್ರಾಯ ವಿತ್ತೇ ವಿನಾ ಸಂಕುಚಿತ ಬುದ್ಧಿ ಇರಲಿಲ್ಲ.

ಆ ಕಾಲಕ್ಕೆ ತಮಗೆ ಲಭಿಸಿದ್ದ ಸರ್ಕಾರದ ಸಣ್ಣ ನೌಕರಿಯನ್ನು ತ್ಯಜಿಸಿ ೧೯೧೦ರಲ್ಲಿಯೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪಾದಾರ್ಪಣ ಮಾಡಿ ಕೆಲವು ವರ್ಷ ಸರ್ಕಾರಿ ಗ್ರಾಂಟ್ ಎನ್ ಏಡ್ ಸ್ಕೂಲ್ ಸ್ಥಾಪಿಸಿದರು. ನಂತರ ಹತ್ತು ವರ್ಷಗಳ ಕಾಲ 'ಭಾರತ ಪುತ್ರ' ಎಂಬ ಕನ್ನಡ ವಾರಪತ್ರಿಕೆ ಸಂಪಾದಕರಾಗಿದ್ದರು.[೧೧] ಇವರು ಕುರುಬ ಸಮಾಜದ ಮೊದಲ ಪತ್ರಕರ್ತ ಎಂಬ ಗೌರವಕ್ಕೆ ಪಾತ್ರರಾಗಿದ್ದರು.

ಜೊತೆಗೆ 'ಕರಾರು' ಮತ್ತು 'ಕ್ರಯ' ಪತ್ರಗಳನ್ನು ಕಡಿಮೆ ದರದಲ್ಲಿ ಬರೆಯುತ್ತಿದ್ದರು. ತಮ್ಮ ಮನೆಯ ಸುತ್ತಮುತ್ತಲಿನ ಜನರು ಇವರ ಹತ್ತಿರ ಲೆಕ್ಕಪತ್ರಗಳನ್ನು ಬರೆಸುತ್ತಿದ್ದರು. ಕೋರ್ಟ್ ಹತ್ತಿರ ಸಹ ಸುತ್ತಮುತ್ತಲಿಂದ ಬಂದಂತಹ ಹಳ್ಳಿಯ ಜನರ ಕಾಗದ ಪತ್ರಗಳನ್ನು ಬರೆದುಕೊಡುತ್ತಿದ್ದರು. ಈಗಲೂ ಹಿರಿಯರು ಹನುಮಂತಯ್ಯನನ್ನು ನೆನಪಿಸುತ್ತಾರೆ. ಇವರು ಇದ್ದ ಓಣಿಯ ಜನಗಳಿಗೆ ವರದಾನವಾಗಿದ್ದರು. ಇವರ ಅಕ್ಷರಗಳನ್ನು ನೋಡಿ ಇವರ ಮೊಮ್ಮಕ್ಕಳು ಈಗಲೂ ಖುಷಿಪಡುತ್ತಾರೆ ಮತ್ತು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಒಮ್ಮೊಮ್ಮೆ ಕೋರ್ಟಿನ ಹತ್ತಿರ ಮತ್ತು ಹಳ್ಳಿಗಳಲ್ಲಿ ಕರಾರು ಹಾಗೂ ಕ್ರಯಪತ್ರಗಳನ್ನು ಸಂಗ್ರಹಿಸಿಕೊಂಡು ಬಂದು ಮನೆಯಲ್ಲಿ ಕುಳಿತು ರಾತ್ರಿಯೆಲ್ಲಾ ಬರೆದು ಬೆಳಗ್ಗೆ ತೆಗೆದುಕೊಂಡು ಹೋಗುತ್ತಿದ್ದರು. ಇವರು ಇಂತಿಷ್ಟೇ ಹಣ ಕೊಡಬೇಕು ಎಂದು ಯಾವತ್ತೂ ಯಾರಿಂದಲೂ ನಿರೀಕ್ಷೆ ಮಾಡಿರಲಿಲ್ಲ. ಒಮ್ಮೊಮ್ಮೆ ಉಚಿತವಾಗಿಯೂ ಬಡವರಿಗೆ ಬರೆದುಕೊಡುತ್ತಿದ್ದರು ಎಂದು ಬಲ್ಲವರು ಹೇಳುತ್ತಾರೆ.

ಹನುಮಂತಯ್ಯನವರು ತಮ್ಮ ಬದುಕಿನಲ್ಲಿ ನಿರಂತರ ಪರಿಶ್ರಮ ಮತ್ತು ಸತತ ಅಧ್ಯಯನಶೀಲ ರಾಗಿದ್ದರು. ಸಾಹಿತ್ಯ, ಸಂಸ್ಕೃತಿ, ಸಂಶೋಧನೆ, ಸಾರ್ವಜನಿಕ ಸಮಾಜದ ಬಗ್ಗೆ ಅವರಿಗಿರುವ ಉತ್ಸಾಹದ ಚಿಲುಮೆ ಅಪೂರ್ವವಾದದ್ದು. ೯೦ರ ಇಳಿವಯಸ್ಸಿನಲ್ಲಿಯೂ ಹನುಮಂತಯ್ಯನವರು ಇನ್ನೂ ಹಲವು ಸಾಹಿತ್ಯ ಕೃತಿಗಳನ್ನು ಬರೆಯಿಸಬೇಕೆಂಬ ಉತ್ಕಟ ಆಕಾಂಕ್ಷೆಯನ್ನು ಹೊಂದಿದ್ದರು. ಇವರ ಸಾಹಿತ್ಯ, ಸಂಸ್ಕೃತಿ, ಆಸಕ್ತಿಗಳು ಓದುಗರಿಗೆ ಪ್ರೋತ್ಸಾಹವನ್ನು ನೀಡುವಂತಿವೆ.

ಸಂಘ-ಸಂಸ್ಥೆಗಳು ಕೈಗೆತ್ತಿಕೊಂಡು ಮಾಡಿ ಮುಗಿಸುವಂತ ಒಂದು ಕಾರ್ಯವನ್ನು ಸ್ಕೂಲ್ ಮಾಸ್ಟರಾಗಿದ್ದ ವಿ.ಆರ್. ಹನುಮಂತಯ್ಯನವರು ಏಕಾಂಗಿಯಾಗಿ ಕೈಗೊಂಡು ತಮ್ಮ ಸ್ವಂತ ಹಣದಲ್ಲಿ ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸಂಚರಿಸಿ, ಮಾಹಿತಿಗಳನ್ನು ಸಂಗ್ರಹಿಸಿ, ನಾನಾ ಗ್ರಂಥಗಳ ಅಧ್ಯಯನದಿಂದ ಆಧಾರಗಳನ್ನು ದೊರಕಿಸಿಕೊಂಡು ಅವುಗಳನ್ನೆಲ್ಲ ಕ್ರಮಬದ್ಧವಾಗಿ ಜೋಡಿಸಿ ಒಂದು ಗ್ರಂಥರೂಪಕ್ಕೆ ತರಬೇಕಾದರೆ ಅವರೆಷ್ಟು ಶ್ರಮಿಸಿದ್ದಾರೆ ಮತ್ತು ಚಿಂತಿಸಿದ್ದಾರೆ ಎಂಬುದನ್ನು ನಾವು ಊಹಿಸಿಕೊಳ್ಳಬೇಕಾಗುತ್ತದೆ. ಬರೀ ಕರ್ನಾಟಕದ ಕುರುಬರಿಗೆ ಮಾತ್ರ ಸೀಮಿತ ಮಾಡದೆ, ಆಂಧ್ರ, ತಮಿಳುನಾಡು, ಮಲೆಯಾಳ, ಮಹಾರಾಷ್ಟ್ರ ಮತ್ತು ಉತ್ತರ ಭಾರತದ ಕುರುಬರನ್ನು ಒಳಗೊಂಡಂತೆ ವಿಸ್ತೃತ ಅಧ್ಯಯನಕ್ಕೆ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಇಂದೂರ್ ಹೋಳ್ಕರರ ವಿವರವಾದ ಇತಿಹಾಸ ಮತ್ತು ಭಾವ ಚಿತ್ರಗಳನ್ನು ನೋಡಿದರೆ ಇವರು ಅಲ್ಲಿಗೆ ಖುದ್ದಾಗಿ ಹೋಗಿ ಬಂದಿದ್ದಾರೆ ಎಂಬುದು ಖಚಿತವಾಗುತ್ತದೆ. ಸಮಾಜ ಸಂಘಟನೆಯೇ ಸಮಾಜಾಭಿವೃದ್ಧಿಯೇ ತಮ್ಮ ಜೀವನದ 'ಗಾಯಿತ್ರಿ' ಮಂತ್ರವೆಂಬಂತೆ ದುಡಿಯುವ ಇಂಥ ವ್ಯಕ್ತಿಗಳು ಸಿಕ್ಕುವುದು ಅಪರೂಪ. ವಿದ್ಯೆ ಕಲಿತು ಉನ್ನತ ಅಧಿಕಾರಕ್ಕೇರಿದ ಎಷ್ಟೋ ಜನರಿಗೆ ತಮ್ಮ ಕುಟುಂಬದ ಹೊರತು ಸಮಾಜ ಕಾಣುವುದಿಲ್ಲ. ಹಣದಾಹದ ಹೊರತು ಸಮಾಜಾಭಿವೃದ್ಧಿಯ ದಾಹ ಅವರನ್ನು ಕಾಡುವುದಿಲ್ಲ. ಆದ್ದರಿಂದ ವಿ.ಆರ್. ಹನುಮಂತಯ್ಯನವರು ನಿಜಕ್ಕೂ ಪ್ರಾತಃಸ್ಮರಣೀಯರು[೧೨] ಎಂದು ಪ್ರೊ. ಸುಧಾಕರ ಅವರು ಹೇಳುತ್ತಾರೆ.

೮. ಬಹುಭಾಷಾ ವಿಧ

ಹನುಮಂತಯ್ಯನವರು ಪುಸ್ತಕಗಳನ್ನು ಬರೆಯುವ ಹೊತ್ತಿಗೆ ಬಹುಭಾಷಾ ಪಾಂಡಿತ್ಯವನ್ನು ಹೊಂದಿದ್ದರು. ಏಕೆಂದರೆ ಕರ್ನಾಟಕ ಕುರುಬರ ಚರಿತ್ರೆಯೊಂದಿಗೆ ಹಲವಾರು ರಾಜ್ಯಗಳ ಕುರುಬರ ಇತಿಹಾಸ, ಸಾಹಿತ್ಯ, ಸಂಸ್ಕಾರ, ನಂಬಿಕೆ, ಆಚಾರ-ವಿಚಾರ, ಸಾಂಸ್ಕೃತಿಕ ಚಟುವಟಿಕೆಗಳನ್ನು ತೌಲನಿಕವಾಗಿ ಹೇಳಿದ್ದಾರೆ. ಇಂತಹ ಸಾಮುದಾಯಿಕ ವಿವರಣೆ ಕೊಡುವಾಗ ಯಾವುದೇ ಒಂದು ಸಂಸ್ಕೃತಿಯ ಅಂಶಗಳು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುವುದು ಕಂಡುಬರುತ್ತದೆ. ಈ ವೈವಿಧ್ಯತೆಯನ್ನು ಗುರುತಿಸುವಾಗ ಭಾಷೆ ಒಂದು ಪ್ರಮುಖ ಸಾಧನವಾಗಿ ಕೆಲಸ ಮಾಡುತ್ತದೆ. ಅವರು ಬಹುಭಾಷೆಗಳನ್ನು ಕಲಿತು ಪಾಂಡಿತ್ಯವನ್ನು ಹೊಂದಿದ್ದರು ಎನ್ನುವುದಕ್ಕೆ ಅವರ ಪುಸ್ತಕಗಳ ಉದ್ದಕ್ಕೂ ಅನೇಕ ರೀತಿಯ ಆಧಾರಗಳು ದೊರೆಯುತ್ತವೆ,

ಇವರು ಕನ್ನಡವಲ್ಲದೆ ನಮ್ಮ ನೆರೆಯ ರಾಜ್ಯಗಳ ಭಾಷೆ ಬಲ್ಲವರಾಗಿದ್ದುಕೊಂಡು ತೌಲನಿಕ ಅಭ್ಯಾಸದಿಂದ ರಚಿಸಿರುವ "ಭಾರತ ದೇಶದ ಕುರುಬರ ಚರಿತ್ರೆ'ಯಲ್ಲಿ ಹಾಲುಮತದ ಎಲ್ಲಾ ವಿಷಯಗಳು ಬರುತ್ತವೆ. ಆ ಕಾಲಕ್ಕೆ ಹೊರತಂದ ಹನುಮಂತಯ್ಯನವರ ಈ ಗ್ರಂಥ ಎಲ್ಲರ ಮೆಚ್ಚುಗೆ ಪಡೆದಿತ್ತು.

೯. ವ್ಯಕ್ತಿತ್ವ

ಇಪ್ಪತ್ತನೇ ಶತಮಾನದ ಸಮಾಜ ಸಂಸ್ಕೃತಿಗೆ ಕಾಣಿಕೆ ಸಲ್ಲಿಸಿದವರಲ್ಲಿ ವಿ.ಆರ್. ಹನುಮಂತಯ್ಯನವರು ಪ್ರಮುಖರು. ನಾಡಿನಲ್ಲಿ ವಚನಪಿತಾಮಹ ಫ.ಗು.ಹಳಕಟ್ಟಿಯವರು ವಚನ ಸಾಹಿತ್ಯ ಸಂಶೋಧನೆಯಲ್ಲಿ ಅಗ್ರಗಣ್ಯರಾದರೆ, ಇವರು 'ಕುರುಬ ಸಾಹಿತ್ಯ' ಸಂಶೋಧನೆ ಮಾಡುವಲ್ಲಿ ಪರಿಣತರಾಗಿದ್ದರು. ಇವರ ಸಾಹಸ ಅತ್ಯದ್ಭುತವಾದುದು. ಸತ್ಯ ಶುದ್ಧ ಕಾಯಕದಲ್ಲಿ ನಿರತರಾಗಿದ್ದರು. ತಮ್ಮ ಬದುಕಿನಲ್ಲಿ ಶಿಸ್ತು, ಅಚ್ಚುಕಟ್ಟುತನ ಹಾಗೂ ನಿರ್ಮಲತೆಯನ್ನು ಪಾಲಿಸಿಕೊಂಡು ಬಂದಿದ್ದರು. ಶಿಸ್ತಿಲ್ಲದೆ ಸಂಸಾರ ಸುಂದರವಾಗಿರುವುದಿಲ್ಲ, ಅಚ್ಚುಕಟುತನವಿಲ್ಲದಿದ್ದರೆ ಜೀವನ ಅಸ್ತವ್ಯಸ್ತವಾಗುತ್ತದೆ ಎನ್ನುವ ವಾಕ್ಯವನ್ನು ಪಾಲಿಸುತ್ತಿದ್ದರು. ಅವರು ಉನ್ನತ ಆಚಾರ ವಿಚಾರಗಳ ಸಂಪನ್ನರಾಗಿದ್ದರು. ಎಲೆಮರೆಯ ಕಾಯಿಯಂತೆ ಜೀವನ ನಡೆಸಿದರು. ವಿದ್ಯಾರ್ಥಿದೆಸೆಯಿಂದಲೂ ಚುರುಕು ಬುದ್ಧಿವುಳ್ಳವರಾಗಿದ್ದರು. ತಾವು ಕಾರ್ಯ ನಿರ್ವಹಿಸುತ್ತಿರುವ ಶಾಲಾ ಗುಡಿಯೇ ದೇವಸ್ಥಾನ ಎಂದು ಭಾವಿಸಿ ವಿದ್ಯೆಯನ್ನು ಅರಸಿ ಬರುವ ವಿದ್ಯಾರ್ಥಿಗಳ ಮನಸ್ಸನ್ನು ತಲುಪಿ, ಅವರ ಬೌದ್ಧಿಕಮಟ್ಟ ಸುಧಾರಿಸುವಂತೆ ಪಾಠ ಬೋಧಿಸುತ್ತಿದ್ದರು. ಹೀಗಾಗಿ ಇವರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಗುರುಗಳಾಗಿ ಪ್ರಸಿದ್ಧಿಯನ್ನು ಪಡೆದವರಾಗಿದ್ದರು. ಯಾವುದೇ ಅಹಂ ತೋರದೆ ಬದುಕಿನುದ್ದಕ್ಕೂ ಸರಳತೆಯನ್ನು ಮೈಗೂಡಿಸಿಕೊಂಡಿದ್ದರು. ಸಹನೆ, ನಿಷ್ಠೆ, ಪ್ರಾಮಾಣಿಕತೆ, ಶ್ರದ್ಧೆ ಅವರ ಬದುಕಿನ ಅವಿಭಾಜ್ಯ ಅಂಗಗಳಾಗಿವೆ. ತರಗತಿಯಲ್ಲಿ ಶಿಸ್ತು ಮತ್ತು ಶಾಂತಿಯನ್ನು ಕಾಯ್ದುಕೊಂಡು ಸಮಯನಿಷ್ಠೆಯನ್ನು ಸದಾ ಪಾಲಿಸಿಕೊಂಡು ಬಂದಿದ್ದರು. ಮಕ್ಕಳಿಗೆ ಯಾವಾಗಲೂ ಹಿರಿಯರನ್ನು ಗೌರವದಿಂದ ಕಾಣಬೇಕು. ವಂದಿಸಬೇಕು ಎಂದು ಹೇಳುತ್ತಿದ್ದರು. ಹಾಗೆಯೇ ಕಿರಿಯರಿರಲಿ, ಹಿರಿಯರಿರಲಿ ಪ್ರತಿಯೊಬ್ಬರನ್ನೂ ಗೌರವಿಸುತ್ತಿದ್ದರು. ಇವರು ತಾವು ಹಿಡಿದ ಕೆಲಸವನ್ನು ತುಂಬಾ ಅಚ್ಚುಕಟ್ಟುತನದಿಂದ ಯಾರ ಹಂಗಿಗೂ ಒಳಗಾಗದೆ, ಮಾಡಿ ಮುಗಿಸುತ್ತಿದ್ದರು. ಎಂದಿಗೂ ಯಾರಿಗೂ ಕೇಡು ಬಯಸಿದವರಲ್ಲ. ತಮ್ಮನ್ನು ನಿಂದಿಸಿದವರನ್ನು ಬಹು ಆತ್ಮೀಯತೆಯಿಂದ ಕಾಣುವ ದೊಡ್ಡ ಗುಣ ಅವರಲ್ಲಿತ್ತು ಎಂದು ಹನುಮಂತಯ್ಯನವರ ವಂಶಜರು ಹೇಳುತ್ತಾರೆ.[೧೩]

ವಿದ್ಯಾರ್ಥಿ ದೆಸೆಯಿಂದಲೂ ಅಪಾರ ಜ್ಞಾನ ಹೊಂದಿರುವ ಹನುಮಂತಯ್ಯನವರು ಹಲವು ಭಾಷೆಗಳಲ್ಲಿ ಅಪಾರ ಪಾಂಡಿತ್ಯವನ್ನು ಹೊಂದಿದವರಾಗಿದ್ದರು. ಇವರ ದಾಯಾದಿಯಾದ ಮುನಿ ಸಂಜೀವಯ್ಯನವರು(ಕುರುಬ ಸಂಘದ ಪ್ರಥಮ ಜನರಲ್ ಸೆಕ್ರೆಟರಿ) ಚಿಕ್ಕವರಿರುವಾಗ ಸಂಸ್ಕೃತದಲ್ಲಿ ಅರ್ಥವನ್ನು ಕೇಳುತ್ತಿದ್ದರಂತೆ. ಇವರಿಗೆ ಉತ್ತರಿಸಲಾಗದೆ ಓಡಿ ಹೋಗುತ್ತಿದ್ದೆ ಎಂದರು. ಇವರು ಬರೆದಿರುವ ಪುಸ್ತಕಗಳನ್ನು ಬೆಂಗಳೂರಿನ ಕಾಟನ್ ಪೇಟೆಯಲ್ಲಿ ಪ್ರಿಂಟ್ ಮಾಡಿಸುತ್ತಿದ್ದರು ಎಂದು ಇವರ ಮೊಮ್ಮಕ್ಕಳು ಹೇಳುತ್ತಾರೆ.[೧೪]

ದೇವರಾಜ ಅರಸರ ಕಾಲದಲ್ಲಿ ಹೋಳ್ಕರ್ ಫ್ಯಾಮಿಲಿಯವರನ್ನು ಹೆಣ್ಣು ಕೇಳಲು ಹೋಗಿದ್ದರು. ಶಿವಾಜಿಯವರ ತಾಯಿ ಜೀಜಾಬಾಯಿ ಮತ್ತು ಕರಣ್‌ಸಿಂಗ್ ಅವರ ತಾಯಿ ಕುರುಬರು ಎಂದು ಕೋರ್ಟಿನಲ್ಲಿ ಸಾಬೀತು ಮಾಡಿದ್ದರು. ಒಕ್ಕಲಿಗರಿಗೂ ಕುರುಬರಿಗೂ ಒಮ್ಮೆ ಜಗಳವಾದಾಗ ಕೋರ್ಟಿನಲ್ಲಿ ವಾದ ಮಾಡಿ ಸತ್ಯಾಸತ್ಯತೆಗಳ ಆಧಾರಗಳನ್ನು ನ್ಯಾಯಾಧೀಶರ ಮುಂದೆ ಇಟ್ಟರಂತೆ. ನಾವೇ ದಕ್ಷಿಣ ಭಾರತದ ಮೂಲನಿವಾಸಿಗಳು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.[೧೫]

ಹನುಮಂತಯ್ಯನವರು ನೂರು ವರ್ಷಗಳ ಹಿಂದೆಯೇ ಕೋರ್ಟಿನಲ್ಲಿ ತಮ್ಮ ಸಮುದಾಯದ ಬಗ್ಗೆ ವಾದಿಸಿ ತಾವು ಯಾವುದರಲ್ಲಿ ಕಡಿಮೆಯಿಲ್ಲ ಎಂದು ತೋರಿಸಿದ್ದಕ್ಕಾಗಿಯೇ ಸರ್ಕಾರದಿಂದ ಯಾವುದೇ ಸೌಲಭ್ಯ ದೊರೆಯುತ್ತಿಲ್ಲ ಎಂದು ಮುನಿಸಂಜೀವಯ್ಯನವರು ಹೇಳುತ್ತಾರೆ.

ಬ್ರಾಹ್ಮಣರು ಕುರುಬರ ಬಗ್ಗೆ ಗೇಲಿ ಮಾಡಿದಾಗ ಅವರಿಗೆ ಪ್ರತ್ಯುತ್ತರವಾಗಿ "ಕುಂತರೆ ಕುರುಬ ನಿಂತರೆ ಕಿರುಬ" ಹುಷಾರ್ ಎಂದು ಹೇಳುತ್ತಿದ್ದರಂತೆ. ಸಮಾಜದಲ್ಲಿ ಎಲ್ಲರೂ ಶ್ರೇಷ್ಠರು. ಯಾರೂ ಹೆಚ್ಚಲ್ಲ ಯಾರೂ ಕೀಳಲ್ಲ. ಸಂಸ್ಕೃತವನ್ನು ಎಲ್ಲಾ ಜನಾಂಗದವರು ಓದುವ ಹಕ್ಕಿದೆ. ಸಂಸ್ಕೃತ ಬಲ್ಲವರು ಬ್ರಾಹ್ಮಣರು ಮಾತ್ರ ಅಲ್ಲ ಎಂದು ವಾದಿಸಿ ತಾವೇ ಗೆಲ್ಲುತ್ತಿದ್ದರೆಂದು ಹೇಳಿದರು.

ಸ್ವಾತಂತ್ರ್ಯಕ್ಕಿಂತ ಪೂರ್ವದಲ್ಲಿಯೇ ತಮ್ಮ ಸಮುದಾಯದ ಬಗ್ಗೆ ಹೋರಾಡಿದ ಹನುಮಂತಯ್ಯ ಅವರು ಮೂಲೆಗುಂಪಾಗಿದ್ದ ಕುರುಬರನ್ನು ಮುಂದೆ ತಂದರು. ಇವರ ಮಾರ್ಗದರ್ಶನವನ್ನೇ ಇಟ್ಟುಕೊಂಡು ನಮ್ಮ ಸಮುದಾಯದ ವಿದ್ಯಾರ್ಥಿಗಳು ಎಷ್ಟೋ ಸುಧಾರಣೆಯಾಗುತ್ತಾ ಬಂದಿದ್ದಾರೆಂದು ಹೇಳಿದರು.

ಹನುಮಂತಯ್ಯನವರಿಗೆ ನೇತ್ರಚಿಕಿತ್ಸೆಯಾದ ನಂತರ ತಮ್ಮ ಸಮುದಾಯದ ಸಭೆ, ಸಮಾರಂಭಕ್ಕೆ ಹೋಗುತ್ತಿದ್ದರು. ಸಭೆಯಲ್ಲಿ ಯಾರೇ ಇವರನ್ನು ಅಪಹಾಸ್ಯ ಮಾಡಿದಾಗ "ಕನಕನನ್ನು ಕೆಣಕಬೇಡಿ ಕೆಣಕಿ ತಿಣುಕಬೇಡಿ" ಎಂದು ಹೇಳುತ್ತಿದ್ದರಂತೆ. ಇವರಿಗೆ ಮೈಸೂರು ಚಾಮರಾಜ ಒಡೆಯರ ಮನೆತನದ ಜೊತೆ ಒಳ್ಳೆಯ ಸಂಬಂಧ ಇತ್ತು. ಆಗಾಗ ಅವರ ಮನೆಗೆ ಹೋಗಿ ಬರುತ್ತಿದ್ದರು. ಅವರು ಒಮ್ಮೆ ಕೆಂಗರಂಗಯ್ಯನವರನ್ನು ಕರೆದುಕೊಂಡು ಹೋಗಿದ್ದರಂತೆ. ಇವರನ್ನು ಅವರು ತುಂಬಾ ಗೌರವದಿಂದ ಆಹ್ವಾನಿಸಿದ್ದರು. ಇವರ ಪಾಂಡಿತ್ಯವನ್ನು ಕೇಳಿ ಮನಸೋತಿದ್ದರು ಎಂದು ಕೆಂಗರಂಗಯ್ಯನವರು ಹನುಮಂತಯ್ಯನವರ ವ್ಯಕ್ತಿತ್ವದ ಮಹತ್ವವನ್ನು ಹೇಳಿದರು. ಹನುಮಂತಯ್ಯನವರು ಸಮುದಾಯದ ಕೆಲಸಕ್ಕೆ ಅಷ್ಟೇ ಸೀಮಿತರಾಗದೇ ಅನ್ಯ ಸಮುದಾಯದ ಚರಿತ್ರೆಯನ್ನು ಆರೋಗ್ಯಕರವಾಗಿ ಒಪ್ಪಿಕೊಳ್ಳುತ್ತಿದ್ದರು. ಅದನ್ನು ನ್ಯಾಯಾಲಯ ಮತ್ತು ಸಭೆಗಳಲ್ಲಿ ಮಂಡಿಸುತ್ತಿದ್ದರು.

ಇವರಿಗೆ ಯಾವ ಪದವಿ ಇರದಿದ್ದರೂ ಪದವಿ ಪಡೆದವರಿಗಿಂತ ಹೆಚ್ಚಾಗಿ ಜ್ಞಾನ ಸಂಪಾದಿಸಿದವರಾಗಿದ್ದರು. ಸತತಾಭ್ಯಾಸ ಅವರ ಜೀವನದ ಉಸಿರಾಗಿತ್ತು. ಅವರಂತಹ ಆದರ್ಶವ್ಯಕ್ತಿಗಳು (ಸಂಶೋಧಕರು) ಇಂದು ಸಿಗುವುದು ಅಪರೂಪ. ಇವರು ಕರ್ನಾಟಕವಲ್ಲದೆ ನಮ್ಮ ಸಹೋದರ ರಾಜ್ಯಗಳ ವಿದ್ವಾಂಸರ ಸಂಪರ್ಕವಿಟ್ಟುಕೊಂಡಿದ್ದರು. ಇವರ ಕೀರ್ತಿ ನಾಡಿನ ಹೊರಗೂ ಹಬ್ಬಿತ್ತು. ಬರೋಡದ ಮಹಾರಾಜರು ಇವರನ್ನು ಆತ್ಮೀಯವಾಗಿ ಕಂಡು ಇವರೊಂದಿಗೆ ಹಲವಾರು ವಿಷಯಗಳನ್ನು ಚರ್ಚೆ ಮಾಡುತ್ತಿದ್ದರು. ಇವರ ಪುಸ್ತಕ ಪ್ರಕಟಣೆಗೆ ಉದಾರವಾಗಿ ನೆರವಾಗುತ್ತಿದ್ದರಂತೆ.

ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ್ದ ಹನುಮಂತಯ್ಯನವರು ಬೀರದೇವರ ಭಕ್ತರು. ಬೆಂಗಳೂರಿನ ಕಾಟನ್‌ಪೇಟೆಯಲ್ಲಿರುವ ಬೀರದೇವರ ದೇವಸ್ಥಾನದಲ್ಲಿ ಕುಳಿತುಕೊಂಡು ದೇವರ ಧ್ಯಾನ ಮಾಡುತ್ತಾ, ಸಂಸ್ಕೃತ ಶ್ಲೋಕಗಳನ್ನು ಪಠನ ಮಾಡಿ ನಂತರ ತಮ್ಮ ಬರವಣಿಗೆಯನ್ನು ಪ್ರಾರಂಭಿಸುತ್ತಿದ್ದರಂತೆ. ಈಗ ಈ ಬೀರದೇವರ ದೇವಸ್ಥಾನ ನೂತನವಾಗಿ ಕಟ್ಟಿರುವುದು ಕಂಡುಬರುತ್ತದೆ.

ನೇರ ನಡೆ-ನುಡಿಯ ಕ್ರಿಯಾಶೀಲ ವ್ಯಕ್ತಿತ್ವ ಇವರದು. "ಕಾಯಕವೇ ಕೈಲಾಸ" ಎಂದು ನಂಬಿ ಅದರಂತೆ ಬಾಳಿ ಬದುಕಿದವರು ವಿ.ಆರ್.ಹನುಮಂತಯ್ಯನವರು.

ಹವ್ಯಾಸಗಳು

ಸಾಮಾನ್ಯವಾಗಿ ವ್ಯಕ್ತಿಗಳು ಯಾವುದಾದರೊಂದು ಹವ್ಯಾಸಕ್ಕೆ ಅಧೀನರಾಗುವುದನ್ನು ನೋಡುತ್ತೇವೆ. ವಿಶಿಷ್ಟ ಜನರು ಸಂಗೀತಗಾರರಿರಬಹುದು, ಸಾಹಿತಿಗಳಿರಬಹುದು, ಚಿತ್ರಕಲಾವಿದರಿರಬಹುದು, ರಂಗ ನಟನಾಗಿರಬಹುದು. ಅವರಿಗೆ ಯಾವುದಾದರೊಂದು ಗುಣ ಅಂಟಿಕೊಂಡಿರುವುದನ್ನು ನಾವೆಲ್ಲಾ ಗಮನಿಸಿದ್ದೇವೆ. ಎಷ್ಟೋ ವ್ಯಕ್ತಿಗಳು ತಮ್ಮ ಮನಸ್ಸಿನ ದೌರ್ಬಲ್ಯದಿಂದ ಯಾವುದಾದರೊಂದು ಚಟಕ್ಕೆ ಬಲಿಯಾಗಿರುತ್ತಾರೆ. ಆದರೆ ಹನುಮಂತಯ್ಯನವರು ಯಾವುದೇ ದುರ್ಬಲ ಗುಣಗಳಿಂದ ದುಶ್ಚಟಕ್ಕೆ ಬಲಿಯಾದವರಲ್ಲ. ಪ್ರತಿ ದಿನ ನಾಲ್ಕು ಗಂಟೆಗೆ ಎದ್ದು, ಅರ್ಧಗಂಟೆ ವಾಕಿಂಗ್‌ಗೆ ಹೋಗಿ ಬರುತ್ತಿದ್ದರಂತೆ. ಬಂದ ನಂತರ ತಾವೇ ಒಂದು ಲೀಟರ್ ಹಾಲನ್ನು ಒಂದು ಲೋಟ ಆಗುವವರೆಗೆ ಮತ್ತು ಕೆನೆ ಬರುವವರೆಗೆ ತಾವೇ ಕಾಯಿಸಿ ಕುಡಿಯುತ್ತಿದ್ದರಂತೆ. ಇವರ ಮೂರು ಹೊತ್ತಿನ ಊಟ ಸ್ವಲ್ಪ ಮಿತ ಆಹಾರ. ಇವರಿಗೆ ಇಷ್ಟವಾದ ವಸ್ತುಗಳೆಂದರೆ ವಾರದಲ್ಲಿ ಮೂರು ದಿನ ಮಾಂಸಾಹಾರ ಬೇಕೇ ಬೇಕು. ಬೆಂಗಳೂರಿನ ಕಾಟನ್‌ಪೇಟೆಯಲ್ಲಿರುವ ಗೋವಿಂದ್‌ರಾಜ್ ಮಿಲಿಟರಿ ಹೋಟಲ್‌ನಲ್ಲಿ ಹೆಚ್ಚಾಗಿ ಬಿರಿಯಾನಿ ತಿನ್ನುತ್ತಿದ್ದರು ಮತ್ತು ಸಿಹಿ ದ್ರವ್ಯಗಳಾದ ಬಾದಾಮಿ ಹಲ್ವ, ಬಾದಾಮಿ ಹಾಲು ಗುಂಡಪ್ಪನ ಹೋಟಲ್‌ನಲ್ಲಿ ಕುಡಿಯುತ್ತಿದ್ದರು. ಈಗ ಈ ಹೋಟಲ್ ದೊಡ್ಡ ಸ್ವೀಟ್ ಅಂಗಡಿಯಾಗಿ ತುಂಬಾ ಪ್ರಸಿದ್ಧಿಯಾಗಿರುವುದನ್ನು ಕಾಣಬಹುದು. ಇವರಿಗೆ ಈ

ಊಟ ಮಾಡುವುದನ್ನು ಬಿಟ್ಟರೆ ಯಾವುದೇ ಕೆಟ್ಟ ಅಭ್ಯಾಸ ಇವರಿಗಿರಲಿಲ್ಲ ಎಂದು ಇವರ ಸೊಸೆ ಅಕ್ಕಯ್ಯಮ್ಮ ಅವರು ಹೇಳುತ್ತಾರೆ. ಇವರು ಭೋಜನಪ್ರಿಯರಾಗಿದ್ದರು. ರಾತ್ರಿ ಎಷ್ಟೇ ಸಮಯವಾಗಿದ್ದರೂ ಸಹ ಓದುವ ಬರೆಯುವ ಹವ್ಯಾಸ ಮಾಡುತ್ತಿದ್ದರು. ಹೀಗೆ ಯಾವುದೇ ವಿಷಯಾಸಕ್ತರಾಗದೇ ಒಳ್ಳೆಯ ಸಾತ್ವಿಕ ಸಜ್ಜನಿಕೆಯ ವೃತ್ತಿಯಿಂದ ತಮ್ಮ ಜೀವನವನ್ನು ನಡೆಸುತ್ತಿದ್ದರು.

ಹನುಮಂತಯ್ಯನವರು ತಮ್ಮ ಜೀವಿತದ ಕಾಲದಲ್ಲಿ ಬಣ್ಣದ ಬಟ್ಟೆಗಳನ್ನು ಧರಿಸಿದವರೇ ಅಲ್ಲ. ನೀವು ಬಣ್ಣದ ಬಟ್ಟೆಗಳನ್ನು ಏಕೆ ಧರಿಸುವುದಿಲ್ಲ ಎಂದು ಕೇಳಿದಾಗ ಬಿಳಿ ಬಟ್ಟೆ ಧರಿಸುವುದರಿಂದ ಮನಸ್ಸು ಸದಾ ಉಲ್ಲಾಸವಾಗಿರುವುದು. ಈ ಬಿಳಿ ಅಂಗಿ, ಬಿಳಿ ಧೋತರ, ಬಿಳಿ ಶರ್ಟ್ ಹಾಕಿಕೊಳ್ಳುವುದರಿಂದ ನನ್ನ ಮನಸ್ಸು ಯಾವಾಗಲೂ ಸಮಾಧಾನ, ಶಾಂತಿ ಮತ್ತು ಆನಂದಮಯವಾಗಿರುತ್ತದೆ. ಇವರು ತಲೆಗೆ ರುಮಾಲು ಸುತ್ತಿಕೊಂಡು ಮೇಲೊಂದು ಕರಿಕೋಟು, ಪಾಲಿಶ್ ಮಾಡಿದ ಬೂಟು, ಕೈಯಲ್ಲಿ ಯಾವಾಗಲೂ ಪುಸ್ತಕ ಹಿಡಿದು ಸದೃಢಕಾಯ ಹೊಂದಿದ ಹರೆಯದವರಂತೆ ತಿರುಗಾಡಬಲ್ಲಂತಹ ಸುಂದರ ವ್ಯಕ್ತಿಯಾಗಿದ್ದರು. ಜೊತೆಗೆ ಸಾಹಿತ್ಯದ ಪ್ರತಿಭೆ ಅವರ ಮುಖದಲ್ಲಿತ್ತು ಎಂದು ಇವರ ಭಾವಚಿತ್ರಗಳನ್ನು ನೋಡಿ ಗುರುತಿಸಬಹುದು.

ಹನುಮಂತಯ್ಯನವರ ದಿನಚರಿಯು ಅಷ್ಟೇ ಅಚ್ಚುಕಟ್ಟಾಗಿತ್ತು. ಬೆಳಗ್ಗೆ ನಾಲ್ಕು ನಾಲ್ಕೂವರೆಗೆ ಏಳುವುದು ಮುಖಮಾರ್ಜನ ಮಾಡಿಕೊಂಡು ದೇವರಿಗೆ ಕೈಮುಗಿದು, ನಂತರ ಓದುವುದು, ಬರೆಯುವುದು ನಂತರ ಹೊರಗಡೆ ತಿರುಗಾಡಲು ಹೋಗಿ ಸುಮಾರು ಏಳೂವರೆ ಗಂಟೆ ಹೊತ್ತಿಗೆ ಮರಳಿ ಬಂದು ಸ್ನಾನ ಮಾಡಿ, ನಂತರ ಪೂಜೆ ಮಾಡುತ್ತಿದ್ದರಂತೆ. ಅಲ್ಪ ಉಪಾಹಾರ, ಮಧ್ಯಾಹ್ನ ಊಟ-ವಿಶ್ರಾಂತಿ ತೆಗೆದುಕೊಳ್ಳುವುದು, ಪತ್ರ ಬರೆಯುವುದು, ರಾತ್ರಿ ಪುಸ್ತಕಗಳನ್ನು ಓದುವುದು, ವಿಷಯವನ್ನು ಸಂಗ್ರಹಿಸಿಕೊಂಡು ಬೆಳಗ್ಗೆ ಬರವಣಿಗೆಯನ್ನು ಪ್ರಾರಂಭಿಸುತ್ತಿದ್ದರು. ಹೊರಗಡೆ ಹೋದರೆ ಪುಸ್ತಕಗಳನ್ನು ತರುವುದೇ ಇವರ ಹವ್ಯಾಸವಾಗಿತ್ತು.

ಇವರದೆಯಾದ ಒಂದು ಕೋಣೆಯಲ್ಲಿ ಅನೇಕ ಗ್ರಂಥಗಳ ಸಂಗ್ರಹವಿತ್ತು. ಕಾಟನ್‌ಪೇಟೆಯಲ್ಲಿರುವ ಮನೆ ಬಿಟ್ಟು ರಾಜಾಜಿನಗರಕ್ಕೆ ಬಂದಾಗ ಅವುಗಳ ಪೋಷಣೆ ಇಲ್ಲದೇ ಅನೇಕ ಪುಸ್ತಕಗಳು ಗೆದ್ದಲು ಹತ್ತಿ ಹಾಳಾಗಿ ಹೋದವು. ಒಲೆ ಹಚ್ಚಲು ಸಹ ಅವುಗಳನ್ನು ಬಳಸಿದರು ಎಂದು ಹೇಳುತ್ತಾರೆ.

ಹನುಮಂತಯ್ಯನವರು ತಮ್ಮ ಮಕ್ಕಳು, ಮೊಮ್ಮಕ್ಕಳು ಮುಂದೆ ಯಾವ ರೀತಿ ಬದುಕಬೇಕು ಎನ್ನುವುದನ್ನು ತೋರಿಸಿಕೊಟ್ಟರು. ಇವರ ಮೊಮ್ಮಕ್ಕಳು ಬೆಂಗಳೂರಿನಲ್ಲಿ ವಿವಿಧ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಅವರು ಅವರ ತಾತನ ತರಹ ಸಾಹಿತ್ಯದಲ್ಲಿ ಯಾವುದೇ ರೀತಿಯ ಆಸಕ್ತಿಯನ್ನು ತೋರಿಸುತ್ತಿಲ್ಲ. ಹರಿಹರರಾಯ ಮಾತ್ರ ಸಾಹಿತ್ಯದಲ್ಲಿ ಸ್ವಲ್ಪ ಆಸಕ್ತಿಯನ್ನು ಹೊಂದಿದ್ದಾರೆ.

ಪ್ರತಿಯೊಂದಕ್ಕೂ ಲೆಕ್ಕ ಹಾಕಿ ಬರೆಯುತ್ತಿದ್ದರು. ಮಕ್ಕಳು ತಂದೆ–ತಾಯಿಯ ಮೇಲೆ ಅವಲಂಬಿತವಾಗಬಾರದು, ತಮ್ಮ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕು, ಯಾವ ವಸ್ತುವನ್ನು ನಿರ್ಲಕ್ಷ್ಯ ಭಾವದಿಂದ ನೋಡಬಾರದು, ಜೀವನಕ್ಕೆ ಒಂದು ಚೌಕಟ್ಟು ಇರಬೇಕು, ಅದನ್ನು ಮೀರಬಾರದು ಎನ್ನುವುದು ಅವರ ಉದ್ದೇಶವಾಗಿತ್ತು. ಮಾತು ಕಡಿಮೆ, ಕೆಲಸ ಹೆಚ್ಚು ಎಂಬುದು ಯಾವಾಗಲೂ ಅವರ ಚಿಂತನೆಯಾಗಿತ್ತು. ಇವರು ಮಾತುಗಾರರಲ್ಲ, ಸಾಹಿತ್ಯಗಾರರಾಗಿದ್ದರು. ಬಡವರ ಬಗ್ಗೆ ತುಂಬಾ ಕನಿಕರ ದಯೆಯನ್ನು ತೋರಿಸುತ್ತಾ ಉಪಕಾರವನ್ನು ಮಾಡುವವರಾಗಿದ್ದರು, ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ ಎಂಬಂತೆ ತಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡುತ್ತಾ ಬಂದಿರುವರು.

ಸ್ವಾವಲಂಬನೆಯ ಜೀವನ, ಮಿತವ್ಯಯ ಶಿಸ್ತು ಹಾಗೂ ಸಮಯನಿಷ್ಠರು. ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವ ಪ್ರವೃತ್ತಿ ಉಳ್ಳವರು. ಸಮಯಕ್ಕೆ ಯಾರು ಮಹತ್ವ ಕೊಡುವರೋ ಅವರನ್ನು ಆ ಸಮಯ ಜೀವನದಲ್ಲಿ ಮುಂದಕ್ಕೆ ತರುತ್ತದೆ. ಕೊನೆಯ ಉಸಿರಿರುವವರೆಗೂ ತಮ್ಮ ಕರ್ತವ್ಯವನ್ನು ಬಿಡಲಿಲ್ಲ. ಕಾಯಕ್ಕೆ ಯಾವತ್ತೂ ಕೆಲಸ ಇರಬೇಕೆಂಬುದೇ ಹನುಮಂತಯ್ಯನವರ ಉದ್ದೇಶವಾಗಿತ್ತು.

ಹಳ್ಳಿಯಲ್ಲಿ ಹುಟ್ಟಿ, ವಿದ್ಯಾಭ್ಯಾಸಕ್ಕೆ ಪಟ್ಟಣಕ್ಕೆ ಬಂದು ಉದಾತ್ತ ಆದರ್ಶಗಳನ್ನು ಇಟ್ಟುಕೊಂಡರೆ ಎಷ್ಟೊಂದು ಎತ್ತರಕ್ಕೆ ಏರಬಲ್ಲರು ಎಂಬುದಕ್ಕೆ ಹನುಮಂತಯ್ಯನವರು ನಿದರ್ಶನರಾಗಿದ್ದಾರೆ.

ಪಂಪ–ರನ್ನರನ್ನು ಮೊದಲು ಮಾಡಿಕೊಂಡು ಸಾಮಾನ್ಯ ಹಾಗೂ ಸಾಮ್ರಾಟರನ್ನು ಅಮರಗೊಳಿಸಿದವರು ಕವಿಗಳು, ಸಾಹಿತಿಗಳು. ಒಬ್ಬೊಬ್ಬ ಗಣ್ಯ ಸಾಹಿತಿಗಳಿಂದ ಒಂದೊಂದು ಸ್ಥಳಕ್ಕೆ ಅಮರತ್ವ ಪ್ರಾಪ್ತವಾಗಿದೆ. ಮೈಸೂರು ಎಂದಾಗ ಕುವೆಂಪು, ಧಾರವಾಡ ಎಂದರೆ ಬೇಂದ್ರೆ, ಪುತ್ತೂರು ಎಂದರೆ ಕಾರಂತ, ಹಲಸಂಗಿ ಎಂದರೆ ಮಧುರಚನ್ನ ಎಂದು ಜನಮನದ ಕಣ್ಣಿಗೆ ಕಟ್ಟುವ ಹಾಗೆ ವಿಶ್ವನಾಥಪುರದ ಹನುಮಂತಯ್ಯನವರು ಕುರುಬ ಸಮುದಾಯಕ್ಕೆ ಚಿರವಾಗಿರುವರು. ಒಟ್ಟಿನಲ್ಲಿ ಇವರು ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನಿಷ್ಠೆ, ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುವುದರ ಜೊತೆಗೆ ಪತ್ರಕರ್ತರಾಗಿ, ಲೇಖಕರಾಗಿ, ಸಾಹಿತಿಗಳಾಗಿ, ಸಂಸ್ಥೆಗಳ ಸ್ಥಾಪನೆ ಹಾಗೂ ಸಂಘಟನೆಗಳ ಯೋಜಕರಾಗಿ, ಶೈಕ್ಷಣಿಕ ವಿಚಾರವಂತರಾಗಿ, ಸಂಶೋಧಕರಾಗಿ, ಸಾಮಾಜಿಕ ಚಿಂತಕರಾಗಿ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಅದ್ಭುತ ವ್ಯಕ್ತಿತ್ವ ಹನುಮಂತಯ್ಯನವರದು.

ಬಾಳಿನುದ್ದಕ್ಕೂ ಸಾಹಿತ್ಯದ ಸೇವೆಗೆ ಅರ್ಪಿಸಿಕೊಂಡ ಇವರು 'ಪತ್ರ ಬರೆಯುವ ಹನುಮಂತಪ್ಪ' ಎಂದು ಜನಮಾನಸದಲ್ಲಿ ಈಗಲೂ ಸ್ಮರಣೆಯಾಗಿ ಉಳಿದಿದ್ದಾರೆ.

ಕೊನೆಟಿಪ್ಪಣಿಗಳು

೧. ಎಲ್.ಎಸ್. ಶೇಷಗಿರಿರಾವ್, 'ಹೊಸಗನ್ನಡ ಸಾಹಿತ್ಯ ಚರಿತ್ರೆ', ೨೦೦೨, ಪು. ೬

೨. ವಿ.ಆರ್. ಹನುಮಂತಯ್ಯನವರ ವಂಶಜರು(ಪುಟ್ಟಮ್ಮ), ರಾಜಾಜಿನಗರ, ಬೆಂಗಳೂರು

೩. ವಿ.ಆರ್. ಹನುಮಂತಯ್ಯ, 'ಭೋಜರಾಜ ಕಾಳಿದಾಸ ಚರಿತ್ರೆ', ೧೯೬೧, ಪು. ೨

೪. ಅದೇ, ಪು. ೨

೫. ಅದೇ, ಪು. ೨

೬. ಅದೇ, ಪು. ೮

೭. ಅದೇ, ಪು. ೫

೮. ಅದೇ, ಪು. ೫

೯. ವಿ.ಆರ್. ಹನುಮಂತಯ್ಯನವರ ವಂಶಜರು, ರಾಜಾಜಿನಗರ, ಬೆಂಗಳೂರು.

೧೦. ವಿ.ಆರ್. ಹನುಮಂತಯ್ಯ, 'ಭಾರತ ದೇಶದ ಕುರುಬರ ಚರಿತ್ರೆ', ೧೯೫೮, ಪು. ೭೪

೧೧. ವಿ.ಆರ್. ಹನುಮಂತಯ್ಯ, 'ಭೋಜರಾಜ ಕಾಳಿದಾಸ ಚರಿತ್ರೆ'. ಪು. ೪

೧೨. ವಿ.ಆರ್. ಹನುಮಂತಯ್ಯನವರ ವಂಶಜರು, ರಾಜಾಜಿನಗರ, ಬೆಂಗಳೂರು.

೧೩. ವಿ.ಆರ್. ಹನುಮಂತಯ್ಯ ಕುರುಬರ ಚರಿತ್ರೆ, ಪು. ೧೮೬

೧೪. ಸುಧಾಕರ (ಸಂ) ಕುರುಬರ ಚರಿತ್ರೆ (೧೯೯೬) ಪ್ರತಿಭಾ ಪ್ರಕಾಶನ, ಮೈಸೂರು, ಪು. viii

ಅಧ್ಯಾಯ ೩

ಹಾಲುಮತ ಸಾಹಿತ್ಯ

೧. ಕುರುಬರ ಚರಿತ್ರೆ(೧೯೨೬)

೧. ಕೃತಿಯ ಸ್ವರೂಪ ೨. ಕುರುಬ ಸಮಾಜದ ಪ್ರಾಚೀನತೆ

೩. ಕುರುಬರ ಉಪಪಂಗಡಗಳು ೪. ಆಂಧ್ರ ಕುರುಬರು

೫. ದ್ರಾವಿಡ ಕುರುಬರು ೬. ಮಹಾರಾಷ್ಟ್ರ ಕುರುಬರು

೭. ಕುರುಬರ ಅರಸುಮನೆತನಗಳು ೮. ಕುರುಬರ ಪ್ರಮುಖ ಮಹನೀಯರು

೨. ಭಾರತ ದೇಶದ ಕುರುಬರ ಚರಿತ್ರೆ(೧೯೫೮)

೧. ಕೃತಿಯ ಸ್ವರೂಪ ೨. ಕುರುಬರ ಮೂಲ ಚರಿತ್ರೆ

೩. ಕರ್ನಾಟಕದ ಕುರುಬರು ೪. ತೆಲುಗು ದೇಶದ ಗೊಲ್ಲರು

೫. ದ್ರಾವಿಡ (ತಮಿಳು) ಕುರುಬರು ೬. ದನಗಾರರು

೭. ಗಡರಿಯರು ೮. ಗಡ್ಡಿಯರು ೯. ಅಹೀರರು

೧೦. ಭರವಾಡರು ೧೧. ರಬಾರಿಯರು ೧೨. ರಾಜಪಾಲಿ

೧೩. ದಕ್ಷಿಣ ಭಾರತೀಯ ರಾಜರ ಚರಿತ್ರೆ

೧೪. ಕುರುಬ ಜನಾಂಗದ ಮಹನೀಯರ ಹಾಗೂ ಮಹಾಶೂರ ವೀರರ ಜೀವನ ಚರಿತ್ರೆ

ಅಧ್ಯಾಯ ೩

ಹಾಲುಮತ ಸಾಹಿತ್ಯ

ಪಶುಪಾಲನೆ ಅದರಲ್ಲೂ ಕುರಿಸಾಕಣೆ, ಕಂಬಳಿ ನೇಕಾರಿಕೆ ಮತ್ತು ಕೃಷಿಯನ್ನು ಪ್ರಧಾನ ಉದ್ಯೋಗವನ್ನಾಗಿಸಿಕೊಂಡು ಬಂದ ಇವರನ್ನು 'ಕುರುಬ'ರೆಂದೂ 'ಹಾಲುಮತ'ದವರೆಂದೂ ಕರೆಯುವ ವಾಡಿಕೆಯಿದೆ. ಕುರುಬ ಅಥವಾ ಹಾಲುಮತ ಎನ್ನುವುದು ಒಂದು ಜಾತಿ ಅಥವಾ ಒಂದು ಪ್ರದೇಶಕ್ಕೆ ಸೀಮಿತವಾದುದಲ್ಲ. ಅದು ಇಡೀ ಭೂಮಂಡಲವನ್ನು ವ್ಯಾಪಿಸಿ ಅನಂತತೆಯನ್ನು ಪಡೆದಿದೆ. ಪೌರಾಣಿಕ ಹಾಗೂ ಐತಿಹಾಸಿಕವಾಗಿ ತನ್ನದೇ ಸಂಸ್ಕೃತಿಯನ್ನು ಹೊಂದಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹಾಲುಮತದವರನ್ನು ಕಾಣುತ್ತೇವೆ. "ಕುಲದಲ್ಲಿ ಕುರುಬನೇ ಮೊದಲು", ಮತದಲ್ಲಿ "ಹಾಲುಮತವೇ ಮೇಲುಮತ"ಗಳೆಂಬ ಆದಿಕಾಲದಿಂದ ಹರಿದು ಬಂದ ಮಾತು.

ಕುರುಬ ಜನಾಂಗದವರು ತಮ್ಮನ್ನು ಹಾಲುಮತದವರೆಂದು ಕರೆದುಕೊಳ್ಳುತ್ತಾರೆ. ಈ ಜನಾಂಗವನ್ನು ಕುರಿತು ರಚನೆಗೊಂಡಿರುವ ಪುರಾಣಗಳನ್ನು, ಕಾವ್ಯಗಳನ್ನು ಕೂಡ 'ಹಾಲುಮತ ಪುರಾಣ', 'ಹಾಲ್ಮತೋತ್ತೇಜಕ ಪುರಾಣ', 'ಹಾಲುಮತ ಮಹಾಕಾವ್ಯ', 'ಹಾಲುಮತ ಚರಿತ್ರೆ'ಗಳೆಂದು ಕರೆದಿರುವುದು ಒಂದು ವಿಶೇಷ. ಈ ಜನಾಂಗದವರನ್ನು ಮಾತ್ರ ಹಾಲುಮತದವರೆಂದು ಏಕೆ ಕರೆಯುತ್ತಾರೆ? ಈ ಹೆಸರು ಉಂಟಾಗಲು ಕಾರಣಗಳೇನಿರಬಹುದು ಎಂಬುದು ಗಮನಾರ್ಹ ಸಂಗತಿಯಾಗಿದೆ.

ಹಾಲುಮತ ಸಂಸ್ಕೃತಿಯನ್ನು ಕುರಿತು ವ್ಯಾಪಕವಾದ ಅಧ್ಯಯನವನ್ನು ಕೈಗೊಂಡಿರುವ ಡಾ.ಶಂಬಾ ಜೋಶಿ ಅವರು ತಮ್ಮ 'ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ' ಗ್ರಂಥದಲ್ಲಿ 'ಕುರುಬರು' 'ದನಗರರು' ಬಗ್ಗೆ ವಿವರಣೆಯನ್ನು ನೀಡುತ್ತಾ ಹಾಲುಮತ ಎಂಬುದರ ಬಗ್ಗೆ ಹೀಗೆ ಸೂಚನೆಯನ್ನು ನೀಡುತ್ತಾರೆ.

ಹಟ್ಟಿಕಾರ, ದನಗಾರ ಕುರುಬರಿಗೆ ಅಂಡೆಕುರುಬ ಅಥವಾ ಹಂಡೆಕುರುಬ ಎಂದು ಕರೆಯುವ ವಾಡಿಕೆಯು ಕನ್ನಡದಲ್ಲಿ ಉಂಟು. ಈ ಅಂಡೆ ಶಬ್ದ ಸಂಕೇತವು ಹಲವು ದೃಷ್ಟಿಯಿಂದ ಅಭ್ಯಸನೀಯವಿದೆ ಎಂದು ಹೇಳುತ್ತಾ... ಸಂಸ್ಕೃತ ಅಂಧ=ಅಂಧಕ ಕಂದಮಿಳನ ಅಂಡೆ, ಅಂಡಾರ ಪದಗಳನ್ನು ಹೋಲುತ್ತಿರುವುದನ್ನು ಲಕ್ಷಿಸುವುದು ಅವಶ್ಯವಿದೆ. ಸಂಸ್ಕೃತ ಹಾಗೂ ಕಂದಮಿಳನಲ್ಲಿ 'ಅಂಡೆ' ಅಮ್ಡೆ ಇದರೊಳಗಿನ ಅಮ್ ಪದವು ಹಾಲು ರಸಾರ್ಥಕ ಸೂಚಕ ಇರುವುದಾಗಿ ತಮಿಳಿನ ಕೋಶದಿಂದ ತಿಳಿಯುತ್ತದೆ. ಅಮ್ಬು(ನೀರು), ಅಮ್ಬುಲ(ಗಂಜಿ) ಇಂತಹ ಪದಗಳ ಶಬ್ದ ಮೂಲದಲ್ಲಿ ಅದು ಹುದುಗಿರುವುದನ್ನು ಕಾಣಬಹುದು. ಅಂಡೆಯವರು, ಇಡೈಯರ್, ಕಳವರು ಈ ಜನಾಂಗದವರು ಒಂದು ಕಾಲಕ್ಕೆ ರಸ(ಹಾಲು) ವ್ಯವಹಾರಿಗಳು. ಈ ರಸ ವ್ಯವಹಾರವೇ ದನಗಾರಿಕೆಯ ಹಂತದಲ್ಲಿ ಗೋರಸ ಹಂತದಲ್ಲಿ ಮಾರ್ಪಟ್ಟದ್ದುಂಟು. ಬೃಹತ್ ಸಂಹಿತೆಯಲ್ಲಿ ವರಾಹಮಹಿರನು ತನ್ನ ಕಾಲದ ಮಹಾರಾಷ್ಟ್ರಿಕರ ಬಗೆಗೆ ಹೇಳುವಾಗ 'ಬಾಗ್ಯೇ ರಸವಿಕ್ರಯಿಣಿಃ' ಎಂದಿದ್ದಾನೆ. ಐದನೆಯ ದಶಕದಲ್ಲಿ ಅಂಡೆಕುರುಬರು ಅರಿಯ ದನಗರ ಮಹಾರಾಷ್ಟ್ರಿಕರಾದರೂ ರಸ ವ್ಯವಹಾರಿಯಾಗಿದ್ದುದು ಕಂಡುಬರುತ್ತದೆ[೧] ಎಂಬ ವಿವರಣೆಯನ್ನು ಗಮನಿಸಿದಾಗ ಕುರುಬರು ಪ್ರಾಚೀನ ಕಾಲದಿಂದಲೂ ಪಶುಪಾಲನೆಯ ಜೊತೆಗೆ ಹಾಲು ಮೊಸರಿನ ವ್ಯವಹಾರದಲ್ಲಿ ತೊಡಗಿರುವುದರಿಂದ ಇವರಿಗೆ 'ಹಾಲುಮತ'ದವರು ಎಂಬ ಹೆಸರು ಬರಲು ಕಾರಣವಾಗಿರಬಹುದು. ಕಲ್ಯಾಣಪಟ್ಟಣದಲ್ಲಿ ಹಾಲು, ಮೊಸರು ಮಾರಿಕೊಂಡು ಜೀವಿಸುತ್ತಿದ್ದ ಕುರುಬರು ಒಮ್ಮೆ ಹಾಲು ಹರವಿಯ ಮೇಲೆ ಸತ್ತ ಕುರಿಯನ್ನು ಹೊತ್ತು ಮಾರಿದ ಪ್ರಮಾದಕ್ಕೆ ಹನ್ನೆರಡು ವರ್ಷ ಹೊರಹಾಕಿಸಿಕೊಂಡ ಕಥೆಯನ್ನು 'ತಗರ ಪವಾಡ'(ಸಂಧಿ ಆರು) ಕೃತಿಯು ಹೇಳುವುದರಿಂದ ಕುರುಬರು ಹಾಲು ಮೊಸರಿನ ವ್ಯವಹಾರಿಗಳಾಗಿದ್ದರು ಎಂಬುದು ಸ್ಪಷ್ಟ ವಾಗುತ್ತದೆ. ಈ ಕಾರಣದಿಂದಲೇ ಇವರಿಗೆ 'ಹಾಲುಮತ'ದವರು ಎಂಬ ಹೆಸರು ಬಂದಿರ ಬಹುದು.

'ಹಾಲುಮತ'ದವರೆಂದು ಹೆಸರು ಬರಲು ಇನ್ನೊಂದು ಪೌರಾಣಿಕ ಹಿನ್ನೆಲೆಯ ಕಾರಣಗಳನ್ನು ಹೇಳುತ್ತಾರೆ. ಒಮ್ಮೆ ಶಿವ-ಪಾರ್ವತಿಯರು ರಮ್ಯವಾದ ಒಂದು ಸ್ಥಳದಲ್ಲಿ ಕುಳಿತಿರುವಾಗ ಪಾರ್ವತಿಯ ಸ್ತನಗಳಿಂದ ಹಾಲು ಚಿಮ್ಮಲು ಆ ಹಾಲು ವ್ಯರ್ಥವಾಗಬಾರದೆಂದು ಗಿರಿಜೆಯು ಶಿವನನ್ನು ಪ್ರಾರ್ಥಿಸಿದಳು. ಆಗ ಶಿವನು ಹಾಲು ಬಿದ್ದ ಕಡೆ ತನ್ನ ಎರಡು ಹಸ್ತಗಳನ್ನು ಚಾಚಿ ಎರಡು ಹಿಡಿ ಮಣ್ಣನ್ನು ತೆಗೆದುಕೊಂಡನು. ಎರಡು ಮಣ್ಣಿನ ಮುದ್ದೆಗಳನ್ನು ಮಾಡಿ ಅವುಗಳಿಗೆ ಜೀವಕಳೆಯನ್ನು ತುಂಬಿ ಮುದ್ದಪ್ಪ-ಮುದ್ದವ್ವನೆಂದು ಹೆಸರುಗಳನ್ನಿಟ್ಟು ದಂಪತಿಗಳನ್ನು ಮಾಡಿದರು. ಮುಂದೆ ಈ ದಂಪತಿಗಳಿಂದ ಉದ್ಭವಿಸಿದ ಸಂತತಿಯವರಿಗೆ ಹಾಲುಮತದವರೆಂಬ ಹೆಸರು ಬಂದಿತೆಂದು ಹಾಲುಮತ ಪುರಾಣವು ಹೇಳುತ್ತದೆ.[೨]

‘ಹಾಲುಮತ’ ಎಂಬುದು ‘ಪಾಲುಮತ’ ಎಂಬುದರಿಂದ ಬಂದಿರಲು ಸಾಧ್ಯವೆಂದು ಹೇಳುವವರು ಇದ್ದಾರೆ. ‘ಪಾಲ’ ಎಂಬುದಕ್ಕೆ ಕಾಪಾಡುವವನು ಎಂಬರ್ಥವಿದೆ. ಗೋಪಾಲರು (ಗೋವುಗಳನ್ನು ಪಾಲಿಸುವವರು), ಮೇಷಪಾಲಕರು(ಕುರಿಗಳನ್ನು ಪಾಲಿಸುವವರು) ಎಂಬುದಾಗಿ ಕುರುಬರಿಗೆ ಕಸುಬಿಗೆ ಸಂಬಂಧಪಟ್ಟಂತೆ ಕರೆಯುತ್ತಿದ್ದುದರಿಂದ ಅವರ ಮತವೇ ಪಾಲುಮತ >ಹಾಲುಮತ ಆಗಿರಲು ಸಾಧ್ಯವೆಂದೂ, ಇಲ್ಲವೇ ಉತ್ತರ ಭಾರತದಲ್ಲಿ ಪಾಲರು ರಾಜ್ಯವನ್ನು ಕಟ್ಟಿ ಆಳಿದುದರಿಂದ ಅಂಥವರ ಮತವೇ ಪಾಲುಮತ>ಹಾಲುಮತ ಎಂದಾಗಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ ಎಂದು ಶ್ರೀ ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಶಾಲಿವಾಹನ ಶಕೆ ೧೮೩೨ರಲ್ಲಿ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ಜರುಗಿದ ಹಾಲುಮತ ಮಹಾಸಭೆಯಲ್ಲಿ ಮಾಡಿದ ಭಾಷಣಗಳಲ್ಲಿ ಹೇಳಿದ್ದಾರೆ.[೩] ಆದರೆ ಉತ್ತರದ ‘ಪಾಲ’ದಿಂದಲೇ ಕುರುಬ ಜನಾಂಗದವರಿಗೆ ಹಾಲುಮತದವರು ಎಂಬ ಹೆಸರು ಬಂದಿತೆಂದು ಹೇಳುವರು. ಆದರೆ ಇದು ಅಷ್ಟೊಂದು ಸಮಂಜಸವಾಗಿ ತೋರದು. ಅದಕ್ಕಿಂತಲೂ ಹೆಚ್ಚಾಗಿ ಪಾರ್ವತಿಯ ಹಾಲಿನಿಂದ ಹುಟ್ಟಿದವರು ಎಂಬ ಪೌರಾಣಿಕ ಕಥೆಯ ಹಿನ್ನೆಲೆಯಲ್ಲಿಯೇ ಈ ಜನಾಂಗದವರಿಗೆ ಈ ಹೆಸರು ರೂಢಿಯಲ್ಲಿ ಬಂದಿರಬೇಕು. ಪಶುಸಂಪತ್ತನ್ನು ಪಾಲಿಸಿಕೊಂಡು ಅವುಗಳ ಹಾಲು ಮೊಸರನ್ನು ಮಾರಿ ಉಪಜೀವನವನ್ನು ಸಾಗಿಸುತ್ತಾ ಬಂದಿರುವುದರಿಂದ ಈ ಹೆಸರು ಬಂದಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಹಾಲುಮತ ಸಾಹಿತ್ಯವನ್ನು ಕುರಿತು ಮೊದಲಿಗೆ ಪರಿಚಯಿಸಿದವರು ವಿ.ಆರ್.ಹನುಮಂತಯ್ಯ ಅವರು. ಇವರ ಕೃತಿಗಳಾದ ‘ಕುರುಬರ ಚರಿತ್ರೆ’(೧೯೨೬), ಇದರ ಮುಂದುವರೆದ ಭಾಗ ೨ ‘ಭಾರತದ ದೇಶದ ಕುರುಬರ ಚರಿತ್ರೆ’(೧೯೫೮) ಈ ಕೃತಿಗಳು ಹಾಲುಮತ ಸಾಹಿತ್ಯವನ್ನು ಸಮಗ್ರವಾಗಿ ಪರಿಚಯಿಸುವ ಕೃತಿಗಳಾಗಿವೆ. ಇವರ ನಂತರ ಬಂದ ಕೃತಿ ಶಂಬಾ ಜೋಶಿಯವರ ‘ಹಾಲುಮತ ದರ್ಶನ’(೧೯೬೦) ಈ ಕೃತಿ ಕುರುಬರ ಪರಂಪರೆ, ಪ್ರಾಚೀನ ಹಾಗೂ ಕ್ಷಾತ್ರವನ್ನು ವಿವರಿಸುತ್ತದೆ. ಶಿವಾನಂದ ಗುಬ್ಬಣ್ಣವರ ‘ಕರ್ನಾಟಕ ಕುರುಬರು’ ಕೃತಿಯು ಕುರುಬರ ಪೌರಾಣಿಕ ಹಿನ್ನೆಲೆಯೊಂದಿಗೆ ಧಾರ್ಮಿಕ, ಸಾಮಾಜಿಕ ಜೀವನವನ್ನು ನಿರೂಪಿಸುತ್ತದೆ. ಡಾ. ಶ್ಯಾಮ್‌ಸಿಂಗ್ ಶಶಿಯವರ ‘ದಿ ಶೆಪರ್ಡ್ಸ್ ಆಫ್ ಇಂಡಿಯಾ’ ಕೃತಿಯನ್ನು ಬಿ.ಕೆ.ರವಿಯವರು ಕನ್ನಡಕ್ಕೆ ‘ಭಾರತದ ಕುರುಬರು’ ಎಂದು ಅನುವಾದ ಮಾಡಿದ್ದಾರೆ. ಈ ಕೃತಿ ಭಾರತದಾದ್ಯಂತ ನೆಲೆಸಿರುವ ಕುರುಬರನ್ನು ವಿಶ್ಲೇಷಿಸುತ್ತದೆ.

ಕುರುಬರಲ್ಲಿ ಮೌಖಿಕ ಚರಿತ್ರೆ ಪ್ರಮುಖ ಸ್ಥಾನ ಪಡೆದಿದೆ. ಮೌಖಿಕ ಕಥೆ, ಡೊಳ್ಳಿನ ಹಾಡುಗಳ ರೂಪದಲ್ಲಿದ್ದ ಚರಿತ್ರೆಯು ಇತ್ತೀಚೆಗೆ ಹಾಲುಮತ ಪುರಾಣಗಳ ರೂಪದಲ್ಲಿ ಲಿಖಿತವಾಗಿ

ಹೊರಹೊಮ್ಮಿದೆ. ಅವುಗಳಲ್ಲಿ ರಸ್ತಾಪುರ ಭೀಮಕವಿ ರಚಿಸಿದ 'ಹಾಲ್ಮತೋತ್ತೇಜಕ ಪುರಾಣ,' ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿಯವರ 'ಹಾಲುಮತ ಪುರಾಣ,' ಚನ್ನಬಸವ ಕವಿಗಳ 'ಹಾಲುಮತದ ಪುರಾಣ,' ಅಪ್ಪಣ್ಣ ಪೂಜಾರಿಯವರ ಶ್ರೀಸಿದ್ಧಬೀರೇಶ್ವರ ಪುರಾಣ, ಅಡಿವೆಪ್ಪ ಮಾಳಪ್ಪ ಸೋಮತ್ತೆ ಒಡೆಯರ ಸುಕ್ಷೇತ್ರ ಹುಲಿಜಂತಿ ಮಹಾಲಿಂಗರಾಯರ 'ಹಾಲುಮತ ಪುರಾಣ,' ಡಾ. ವೀರಣ್ಣ ದಂಡೆಯವರು ಸಂಪಾದಿಸಿದ ಸಿದ್ದಪ್ಪ ಮೇಟಿ ಹಾಡಿದ 'ಜನಪದ ಹಾಲುಮತ ಮಹಾಕಾವ್ಯ,' 'ತಗರಪವಾಡ ಹಸ್ತಪ್ರತಿ,' ಗಂಗಾಧರ ದೈವಜ್ಞರು ಸಂಪಾದಿಸಿದ ಅಡಿವೆಪ್ಪ ಒಡೆಯರ್ ಹಾಡಿದ 'ಮಾಳಿಂಗರಾಯನ ಕಾವ್ಯ' ಮೊದಲಾದವು. ಇತ್ತೀಚೆಗೆ ಅನೇಕ ಲೇಖನಗಳು, ಕೆಲವು ಮಹಾಪ್ರಬಂಧಗಳು ರಚಿಸಲ್ಪಡುತ್ತಿರುವುದು ಕಂಡುಬರುತ್ತದೆ. ಇವು ಕುರುಬರ ಮೂಲವನ್ನು ಪೌರಾಣಿಕವಾಗಿ ಉಲ್ಲೇಖಿಸುತ್ತವೆ. ಶಿವ–ಪಾರ್ವತಿಯರು ಕುರುಬರ ಸೃಷ್ಟಿಕರ್ತರು. ಇದರಿಂದ ಕುರುಬರ ಧಾರ್ಮಿಕ ಪರಂಪರೆಯ ಸೃಷ್ಟಿ ಚಿತ್ರ ದೊರೆಯುತ್ತದೆ.

ಹಾಲುಮತ ಸಾಹಿತ್ಯ ಸಂಸ್ಕೃತಿಯನ್ನು ಕುರಿತು ಡಾ.ಎಫ್.ಟಿ.ಹಳ್ಳಿಕೇರಿ ಅವರು ಹಾಲುಮತ ವ್ಯಾಸಂಗ, ಹಾಲುಮತ ಅಧ್ಯಯನ ಸಂಪುಟಗಳನ್ನು ಕನ್ನಡ ವಿಶ್ವವಿದ್ಯಾಲಯದ 'ಹಾಲುಮತ ಅಧ್ಯಯನ ಪೀಠ'ದಿಂದ ಪ್ರಕಟಿಸಿದ್ದಾರೆ. ಅವರಿಂದ ಹಾಲುಮತ ಸಂಸ್ಕೃತಿ ಹಾಗೂ ಅನೇಕ ಲೇಖನಗಳು ಪ್ರಕಟವಾಗಿವೆ.

ಪ್ರಸ್ತುತ ಅಧ್ಯಯನವು ವಿ.ಆರ್. ಹನುಮಂತಯ್ಯನವರ 'ಕುರುಬರ ಚರಿತ್ರೆ'(೧೯೨೬) ಮತ್ತು 'ಭಾರತ ದೇಶದ ಕುರುಬರ ಚರಿತ್ರೆ'(೧೯೫೮)ರ ಕೃತಿಗಳನ್ನು ಕುರಿತು ವಿಶ್ಲೇಷಿಸಬಹುದು.

೧. ಕುರುಬರ ಚರಿತ್ರೆ (೧೯೨೬)

೨. ಭಾರತ ದೇಶದ ಕುರುಬರ ಚರಿತ್ರೆ (೧೯೫೮)

'ಕುರುಬರ ಚರಿತ್ರೆ' ವಿ.ಆರ್. ಹನುಮಂತಯ್ಯನವರ ಮೊದಲ ಕೃತಿಯಾಗಿದೆ. ೧೯೨೬ರಲ್ಲಿ ಪ್ರಕಟವಾದ ಈ ಕೃತಿ ಒಂಬತ್ತು ಪ್ರಕರಣಗಳಲ್ಲಿ ವಿಸ್ತೃತಗೊಂಡಿದೆ.

೧. ಕೃತಿಯ ಸ್ವರೂಪ ೨. ಕುರುಬ ಸಮಾಜದ ಪ್ರಾಚೀನತೆ ೩. ಕುರುಬರ ಉಪಪಂಗಡಗಳು ೪. ಆಂಧ್ರ ಕುರುಬರು ೫. ದ್ರಾವಿಡ ಕುರುಬರು ೬. ಮಹಾರಾಷ್ಟ್ರ ಕುರುಬರು ೭. ಕುರುಬರ ಅರಸುಮನೆತನಗಳು ೮. ಕುರುಬರ ಪ್ರಮುಖ ಮಹನೀಯರು ಎಂದು ಎಂಟು ಪ್ರಮೇಯಗಳಲ್ಲಿ ವಿವೇಚಿಸಬಹುದು.

೧. ಕೃತಿಯ ಸ್ವರೂಪ

ಕೃತಿಯ ಉಪೋದ್ಘಾತದಲ್ಲಿ ಹನುಮಂತಯ್ಯನವರು ತಮ್ಮ ಉದ್ದೇಶ ಮತ್ತು ಪರಿಶ್ರಮವನ್ನು ಹೇಳುತ್ತ "ಈ ಪಂಗಡಗಳ ದ್ವೇಷಾಸೂಯೆಗಳು ನಾಶವಾಗಬೇಕಾದರೆ ಕುರುಬರು ಎಂದರೆ ಎಲ್ಲರೂ

ಒಂದೇ ಬುಡಕಟ್ಟಿನವರೆಂಬ ಮಹತ್ತಾದ ಮತಾಭಿಮಾನ ಮತ್ತು ಸ್ವಾಭಿಮಾನಗಳು ಉಂಟಾಗಬೇಕು. ಇಂಥ ಅಸಮಾನವಾದ ಮತಾಭಿಮಾನ ಮತ್ತು ಸ್ವಜನಾಭಿಮಾನಗಳಿಂದಲೇ ಒಂದು ಪಂಗಡವು ಮುಂದುವರೆಯಬೇಕಾಗಿರುವುದು. ಹೀಗೆಯೇ ಒಂದು ದೇಶವು ಅಭಿವೃದ್ಧಿಗೆ ಬರಬೇಕಾದರೂ ಜನರಲ್ಲಿ ಮೊದಲು ಸ್ವಜನಾಭಿಮಾನ, ಸ್ವಧರ್ಮಾಭಿಮಾನ, ರಾಜಶಕ್ತಿ ಮತ್ತು ದೈವಶಕ್ತಿ ನಮ್ಮ ಸಮಾಜದಲ್ಲಿ ಅಂಕುರಿಸಬೇಕೆಂಬ ಸದಭಿಪ್ರಾಯದಿಂದಲೇ ಸುಮಾರು ಏಳೆಂಟು ವರ್ಷಗಳಿಂದಲೂ ಅನೇಕ ಕಷ್ಟನಷ್ಟಗಳಿಗೂ ಪರಿಹಾಸ್ಯಗಳಿಗೂ ಒಳಗಾಗಿ ನಿಷ್ಪಕ್ಷಪಾತಿಗಳಾಗಿ ಅನೇಕ ಚರಿತ್ರಕಾರರಿಂದಲೂ ವಿದ್ವಾಂಸರುಗಳಿಂದಲೂ ಬರೆಯಲ್ಪಟ್ಟ ಈ ಗ್ರಂಥದ ಟಿಪ್ಪಣಿಯಲ್ಲಿ ವಿವರಿಸಲ್ಪಟ್ಟಿರುವ ಅಮೂಲ್ಯವಾದ ಗ್ರಂಥಗಳನ್ನು ಸಂಗ್ರಹಿಸಿ ತದ್ಗ್ರಂಥಾಧಾರಗಳಿಂದ ನಾನೀ "ಕುರುಬರ ಚರಿತ್ರೆ" ಎಂಬ ಪುಸ್ತಕವನ್ನು ಬರೆದಿರುವೆನು" ಎಂದಿರುವರು.

ಆರಂಭದಲ್ಲಿ ದೇಶಭಾಷಾರೀತ್ಯಾ ಕುರುಬರನ್ನು ಕರೆಯುವ ಹೆಸರುಗಳನ್ನು ಮತ್ತು ಕೆಲವು ಛಾಯಾಚಿತ್ರಗಳ ಸಹಿತ ನೀಡಿರುವುದನ್ನು ಕಾಣಬಹುದು. ದೇಶಭಾಷಾರೀತ್ಯಾ ಕುರುಬರನ್ನು ಕರೆಯುವ ಹೆಸರುಗಳು:

೧. ಕನ್ನಡ – ಕುರುಬರು, ಹೆಗ್ಗಡೆಗಳು, ಹಾಲುಮತದವರು.
೨. ತೆಲುಗು – ಕುರುಪುವಾರು, ಕುರುಬರ್‌ವಾರು, ಗೊಲ್ಲವಾರು
೩. ಸಂಸ್ಕೃತ – ಜಾಬಾಲ, ಅಜಾಜೀವಿ.
೪. ತಮಿಳು ಮತ್ತು ಮಲಯಾಳ–ದ್ರಾವಿಡ, ಕುರುಬ, ಕುರುಂಬನ್, ಕುರುಂಬ ಇಡ್ಯೆಯರ್
೫. ಮಹಾರಾಷ್ಟ್ರ, ಹಿಂದೂಸ್ಥಾನಿ– ಧನಗರ(ಧನಾಗಾರ)
೬. ಹಿಂದಿ– ಕುರುಂಬಿ(ಕುಳುಂಬಿ–ಕುಣುಬಿ) ಅಹೀರ್ ಗಡರಿಯ
೭. ಇಂಗ್ಲಿಷ್– ಷೆಫರ್ಡ್(Shepherd)
೮. ಜರ್ಮನ್– ಷಾಫಿರ್ಟ್ (Shophirt)
೯. ಈಜಿಪ್ಟ್– ಷಾಸ್(Shos) Hykoss (Shephred kings)

ಛಾಯಾಚಿತ್ರಗಳು

೧. ಮೈಸೂರು ಶ್ರೀಮನ್ಮಹಾರಾಜರು, ಯುವರಾಜರು ಪ್ರಿನ್ಸ್ ಶ್ರೀ ಜಯಚಾಮರಾಜ ಒಡೆಯರ್ ಮುಖಪತ್ರ.
೨. ಶ್ರೀಯುತ ಎಸ್. ಹನುಮಪ್ಪ ಹರ್ಲಾಪುರ, ಸ್ಕೂಲ್ ಮಾಸ್ಟರ್ ನಲವಡಿ ಮತ್ತು ಗ್ರಂಥಕರ್ತ.
೩. ಹಕ್ಕಬುಕ್ಕರು ವಿದ್ಯಾರಣ್ಯ ಸ್ವಾಮಿಗಳನ್ನು ಸಂದರ್ಶಿಸುವುದು
೪. ವಿಜಯನಗರ ರಾಜ್ಯಾಭಿಷಕ್ತರಾದ ಹರಿಹರ, ಬುಕ್ಕರಾಯ
೫. ಶ್ರೀಮಂತ ನೀಳಗಿರಿ ಎಸ್. ಗಿರಿಯಪ್ಪನವರು

ಇಂಡೋರ್ ಹೋಳ್ಕರ್ ಮಹಾರಾಜರ ಚಿತ್ರಗಳು

೧. ಇಂಡೋರ್ ರಾಜ್ಯ ಸ್ಥಾಪಕರಾದ ಶ್ರೀಮಂತ ಸುಬೇದಾರ ಮಲ್ಹಾರಿರಾವ್ ಹೋಳ್ಕರ್(ಜನನ ೧೬೯೪– ಮರಣ ೧೭೬೬)

೨. ಅಹಲ್ಯಾಬಾಯಿ ಹೋಳ್ಕರ್ ಅವರು (ಜನನ ೧೭೨೫– ಮರಣ ೧೭೯೫)

೩. ಶ್ರೀಮನ್ಮಹಾರಾಜ ೧ನೇ ತುಕೋಜಿರಾವ್ ಹೋಳ್ಕರ್ ಅವರು(ರಾಜ್ಯಭಾರ ೧೭೯೫–೧೭೯೭).

೪. ಶ್ರೀಮನ್ಮಹಾರಾಜ ಯಶವಂತರಾವ್ ಹೋಳ್ಕರ್ ಅವರು(ರಾಜ್ಯಭಾರ ೧೭೯೪–೧೮೧೧).

೫. ಶ್ರೀಮನ್ಮಹಾರಾಜಾಧಿರಾಜ ರಾಜರಾಜೇಶ್ವರ ೨ನೇ ತುಕೋಜಿರಾವ್ ಹೋಳ್ಕರ್ ಅವರು(ಜನನ ೧೮೩೪– ಮರಣ ೧೮೮೬).

೬. ಶ್ರೀಮನ್ಮಹಾರಾಜಾಧಿರಾಜ ರಾಜರಾಜೇಶ್ವರ ಶ್ರೀ ಶಿವಾಜಿರಾವ್ ಹೋಳ್ಕರ್ ಅವರು(ಜನನ ೧೮೫೯– ಮರಣ ೧೯೦೮).

೭. ಶ್ರೀ ಕನಕದಾಸ

೮. ಶ್ರೀ ಕಾಳಿದಾಸ

೯. ಶ್ರೀ ಗುರು ಕೈ.ವಾ. ಗುರುಸಿದ್ಧಪ್ಪಯ್ಯ ಒಡೆಯರರು ಹುಲ್ಲೂರು.

ಹೀಗೆ ಮೊದಲಾದ ರಾಜರ ಮತ್ತು ಸಂತರ ಛಾಯಾಚಿತ್ರಗಳು ಈ ಕೃತಿಯಲ್ಲಿ ಕಾಣಬರುತ್ತವೆ.

ಮೊದಲನೇ ಪ್ರಕರಣವು 'ಭರತಖಂಡದ ಸಂಕ್ಷಿಪ್ತ ಇತಿಹಾಸ' ಎಂಬ ಶೀರ್ಷಿಕೆಯನ್ನು ಹೊಂದಿದೆ. ಅದರಲ್ಲಿ ಗಿರಿನದಿಗಳ ವರ್ಣನೆ, ಮೂಲನಿವಾಸಿಗಳು, ದ್ರಾವಿಡರು, ಅನಾರ್ಯರು, ಆರ್ಯರು ಮೊದಲಾದ ಜನಾಂಗಿಕ ಚರಿತ್ರೆಯನ್ನು ವಿವರಿಸಿದ್ದಾರೆ. ಎರಡನೆಯ ಪ್ರಕರಣವು ಪ್ರಾಚೀನ ಕುರುಬರು ಎಂಬ ವಿಷಯದ ಕುರಿತಾಗಿದ್ದು, ಇಲ್ಲಿ ಪ್ರಾಚೀನ ಕುರುಬರ ಸಂಕ್ಷಿಪ್ತ ಚರಿತ್ರೆ, ಕುರುಬರೆಂಬ ಹೆಸರು ಬರಲು ಕಾರಣಗಳು, ಕುರುಬರಲ್ಲಿಯ ಎರಡು ದೊಡ್ಡ ಪಂಗಡಗಳು ಮತ್ತು ಕುರುಬರನ್ನು ದೇಶಾಭಾಷಾರೀತ್ಯಾ ನಾಲ್ಕು ಭಾಗಗಳಾಗಿ ವಿಂಗಡಿಸಿದ್ದು, ಹೀಗೆ ಅನೇಕ ಸಂಗತಿಗಳನ್ನು ವಿವರಿಸಲಾಗಿದೆ. ಮೂರನೆಯ ಪ್ರಕರಣವು ಕರ್ನಾಟಕ ಕುರುಬರ ಒಳಭೇದಗಳು ಅಥವಾ ಒಳಪಂಗಡಗಳಿಗೆ ಸಂಬಂಧಿಸಿದ್ದು, ಕೆಲ ಪ್ರಮುಖ ಪಂಗಡಗಳಾದ ಹಾಲುಮತ, ಕಂಬಳಿಕುರುಬರು, ಕನಕಯ್ಯನ ಜಾತಿಯವರು, ಪ್ರಥಮ ಶೂದ್ರರು, ಇಂದ್ರ ಶೂದ್ರರು, ಅಂಡೆಕುರುಬರು, ಒಡೇರು, ದಾಸಯ್ಯಗಳು, ವಾರದ ಕುರುಬರು ಮುಂತಾದವು. ಹಾಗೆಯೇ ಅವರ ಪಂಗಡಗಳ ಬಗ್ಗೆ ಚರ್ಚಿಸಿದ್ದಾರೆ. ಅವರ ಆಚಾರ–ವಿಚಾರಗಳು, ಮತಾಚಾರ, ಉಡುಗೆ–ತೊಡುಗೆಗಳು, ವೃತ್ತಿಜೀವನ, ಆಹಾರ, ಜನನ, ಋತುಮತಿ, ವಿವಾಹ, ಮರಣ, ಗುರುಮಠಗಳು–ಕುಲದೇವರುಗಳು, ಮೈಲಾರಲಿಂಗನ ಮಹಿಮೆ,

ಕುಲದ ಕಟ್ಟುಗಳು, ವಿಧವಾವಿವಾಹ, ಕುರುಬರಲ್ಲಿರುವ ೮೮ ಬೆಡಗುಗಳು ಹೀಗೆ ಭಿನ್ನ ಆಯಾಮದಲ್ಲಿ ವಿಷಯವನ್ನು ವಿಮರ್ಶೆಗೆ ಒಳಪಡಿಸಿದ್ದಾರೆ.

ನಾಲ್ಕನೇ ಪ್ರಕರಣವು ಆಂಧ್ರ(ತೆಲುಗು) ಕುರುಬರ ಚರಿತ್ರೆಯ ನಿರೂಪಣೆಗೆ ಮೀಸಲಾಗಿದೆ. ಗೊಲ್ಲವಾಡು, ಕುರುಪು, ಯಾದವುಲು, ಕುರುಮ ಅಥವಾ ಕುರುಮರಾರು ಎಂಬ ಹೆಸರುಗಳಿಂದ ಆಂಧ್ರದಲ್ಲಿ ಕರೆಯುವ ವಿವರಗಳನ್ನು ಹಾಗೂ ಕುರುಬರ ಆಚಾರ-ವಿಚಾರ ಸಂಪ್ರದಾಯಗಳ ವಿಷಯಗಳನ್ನು ಕ್ರೋಡೀಕರಿಸಲಾಗಿದೆ. ಐದನೆಯ ಪ್ರಕರಣದಲ್ಲಿ ದ್ರಾವಿಡ ಕುರುಬರ ಪೂರ್ವ ಇತಿಹಾಸವನ್ನು ಕುರಿತು ವಿವರಿಸಿದ್ದಾರೆ. ಆರನೆಯ ಪ್ರಕರಣವು ಮಹಾರಾಷ್ಟ್ರದ ಕುರುಬರು ಮತ್ತು ಅವರ ಒಳಪಂಗಡಗಳು ಎಂಬ ಶೀರ್ಷಿಕೆಯನ್ನು ಹೊಂದಿದೆ. ಧನಗಾರ ಎಂಬ ಪದದ ನಿಷ್ಪತ್ತಿ, ಅರ್ಥ, ಧನಗಾರರ ಒಳಪಂಗಡಗಳು, ಕ್ಷೇತ್ರಾಧಾರಿತ ಹೆಸರುಗಳು, ಧನಗಾರರಲ್ಲಿರುವ ೧೧೭ ಗೋತ್ರಗಳು, ಮದುವೆ, ಜನನ, ಮತಕಟ್ಟಳೆ, ಗವಳಿ, ಹಟ್ಕರ್ ಮೊದಲಾದವುಗಳನ್ನು ಚರ್ಚೆಗೆ ಒಳಪಡಿಸಿದ್ದಾರೆ.

ಕುರುಬರ ರಾಜ್ಯಸ್ಥಾಪನೆ ಕುರಿತಂತೆ ಏಳನೆಯ ಪ್ರಕರಣದಲ್ಲಿ ಪಲ್ಲವರು, ಕದಂಬರು, ದೇವಗಿರಿಯ ಯಾದವರು, ವಿಜಯನಗರ ಅರಸರ ವಂಶವೃಕ್ಷದ ರೇಖಾಚಿತ್ರ, ವಿಜಯನಗರದ ಬಳ್ಳಾರಿ ಪಾಳೆಯಗಾರರು, ಕುರುಗೋಡು, ಇಂದೋರ್ ಹೋಳ್ಕರ್ ಮಹಾರಾಜರು ಮೊದಲಾದ ಅರಸರ ಚರಿತ್ರೆಯನ್ನು ಪರಿಚಯಿಸಿದ್ದಾರೆ. ಎಂಟನೆಯ ಪ್ರಕರಣ ಕುರುಬ ಸಮಾಜದ ಮಹಾನುಭಾವರ ಜೀವನಚರಿತ್ರೆಗೆ ಮೀಸಲಾಗಿದೆ. ಕನಕದಾಸ, ಕಾಳಿದಾಸ, ದೇವಿ ಅಹಲ್ಯಾಬಾಯಿ ಹೋಳ್ಕರ್, ಸಿದ್ಧಪ್ಪಯ್ಯ ಒಡೆಯರ ಅವರ ಜೀವನಚರಿತ್ರೆ ಮತ್ತು ಅವರ ಸಾಧನೆಗಳನ್ನು ಸಾಧಾರಪೂರ್ವಕವಾಗಿ ನಿರೂಪಿಸಲಾಗಿದೆ.

ಒಂಭತ್ತನೆಯ ಪ್ರಕರಣವು ಪತ್ರಿಕೆಗಳಲ್ಲಿ ಮತ್ತು ಹುಲ್ಲೂರಿನಲ್ಲಿ ನಡೆದ ಹಾಲುಮತ (ಕುರುಬ) ಎರಡನೆಯ ಧಾರ್ಮಿಕ ಮಹಾಸಭೆಯನ್ನು ಕುರಿತಾದ ವಿವರಗಳನ್ನು ಹೊಂದಿದೆ.

ಒಟ್ಟಿನಲ್ಲಿ ಹನುಮಂತಯ್ಯನವರ ಈ ಕೃತಿ ಕುರುಬ ಸಮಾಜದ ರಾಷ್ಟ್ರೀಯ ಇತಿಹಾಸ, ಸ್ಥಳೀಯ ಸಂಸ್ಕೃತಿ, ಸಮುದಾಯಗಳ ಚರಿತ್ರೆ, ರಾಜಕೀಯ ವಿವರ ಹಾಗೂ ಧಾರ್ಮಿಕ ಪುರುಷರ ಚರಿತ್ರೆಯನ್ನು ನಿರೂಪಿಸುವ ದೃಷ್ಟಿಯಿಂದ ಮಹತ್ವದ ಕೃತಿ ಎಂದು ಹೇಳಬಹುದು.

೨. ಕುರುಬ ಸಮಾಜದ ಪ್ರಾಚೀನತೆ

ಆದಿಮಾನವ ಬೇಟೆಯಿಂದ ಪಶುಪಾಲನೆ ವೃತ್ತಿಗೆ ಪರಿವರ್ತನೆಗೊಂಡಾಗಿನಿಂದಲೇ ಇತಿಹಾಸ ಪ್ರಾರಂಭವಾಗುತ್ತದೆ. ಮೂಲತಃ ಕುರುಬರು ಅಲೆಮಾರಿಗಳಾಗಿದ್ದು, ನಂತರ ನೆಲೆಗೊಂಡು ಬುಡಕಟ್ಟು ಸಮುದಾಯದವರಾಗಿ ಜೀವಿಸುತ್ತಿದ್ದರು. ವಿಶ್ವದ ಎಲ್ಲಾ ಜಲಾನಯನ ಪ್ರದೇಶಗಳಲ್ಲಿ ನೆಲೆಸಿದ

ಕುರುಬರು ಈ ನಾಡಿನ ಪ್ರಾಚೀನ ಜನಸಮುದಾಯವೆಂದು ವಿದ್ವಾಂಸರು ಆಧಾರಗಳ ಮೂಲಕ ಖಚಿತಪಡಿಸಿದ್ದಾರೆ. ಕರ್ನಾಟಕದಲ್ಲಿ ಇವರು ಪ್ರಾಚೀನರೆಂಬುದಕ್ಕೆ ಪೌರಾಣಿಕ ಹಾಗೂ ಐತಿಹಾಸಿಕ ಆಧಾರಗಳಿವೆ. ತಗರಪವಾಡ, ಸಿದ್ಧಮಂಕಚರಿತೆ, ರಸ್ತಾಪುರ ಭೀಮಕವಿಯ ಹಾಲ್ಮತೋತ್ತೇಜಕ ಪುರಾಣ, ಹಾಲುಮತ ಪುರಾಣ, ಡಾ. ವೀರಣ್ಣ ದಂಡೆ ಅವರು ಸಂಪಾದಿಸಿರುವ ಜನಪದ ಹಾಲುಮತ ಮಹಾಕಾವ್ಯ, ಶಾಂತವಿಜಯ ಪುರಾಣ, ಸಿದ್ಧರಾಮ ಸಾಂಗತ್ಯ ಮೊದಲಾದ ಪುರಾಣಗಳು ಮತ್ತು ಕುರುಬರ ಮೌಖಿಕ ಪರಂಪರೆಯ ಡೊಳ್ಳಿನ ಹಾಡುಗಳು, ಕಥೆ, ಐತಿಹ್ಯಗಳು ಮೊದಲಾದವುಗಳು ಕುರುಬರ ಪ್ರಾಚೀನತೆ ಬಗ್ಗೆ ತಿಳಿದುಕೊಳ್ಳಲು ಆಕರಗಳಾಗಿವೆ.

'ತಗರಪವಾಡ' ಅಥವಾ 'ವಿಜಯಪುರಾಣ' ಇದು ೮ ಸಂಧಿಗಳಿಂದ ಕೂಡಿದ ಒಂದು ಸಾಂಗತ್ಯ ಕೃತಿಯಾಗಿದ್ದು, ಇದರಲ್ಲಿ ೯೩೮ ಪದ್ಯಗಳಿವೆ.[೪] ಇದರ ಪ್ರಕಾರ "ಒಂದು ದಿನ ಶಿವ ಕೈಲಾಸದಲ್ಲಿ ಭೃಂಗಿ ಮೊದಲಾದ ಗಣಗಳೊಡನೆ ಒಡ್ಡೋಲಗದಲ್ಲಿರುತ್ತಾನೆ. ಆ ಸ್ಥಳಕ್ಕೆ ನಾರದನು ಬಂದು ಶಿವನಲ್ಲಿ ಈ ರೀತಿ ವಿವರಿಸುತ್ತಾನೆ. ಭೂಲೋಕದಲ್ಲಿ ಕೊಲ್ಲಾಪುರವೆಂಬ ಪಟ್ಟಣದಲ್ಲಿ "ಮಾಯೆ" ಎಂಬ ವೇಶ್ಯೆಯಿದ್ದಾಳೆ. ಅವಳ ರೂಪ ಲಾವಣ್ಯಕ್ಕೆ ಮರುಳಾಗಿ ಅನೇಕ ಸಿದ್ಧರು ಅವಳ ಬಳಿ ಹೋಗುತ್ತಾರೆ. ಹೀಗೆ ಮೋಹದಿಂದ ಹೋದ ಸಿದ್ಧರಿಗೆ ಮಾಯೆಯು ವಿಷವನ್ನು ನೀಡುತ್ತಾಳೆ. ಅದರಿಂದಾಗಿ ಅವರೆಲ್ಲಾ ಜೀತದಾಳುಗಳಾಗಿ ದುಡಿಯುತ್ತಾರೆ. ಶಿವನೇ ನೀನು ಆ ಮಾಯೆಯನ್ನು ಸಂಹರಿಸಿ ಸಿದ್ಧರನ್ನು ಬಂಧಮುಕ್ತರನ್ನಾಗಿ ಮಾಡಬೇಕೆಂದು ಕೇಳಿಕೊಂಡರು."

"ತಕ್ಷಣ ಕೊಲ್ಲಾಪುರದಲ್ಲಿದ್ದ ಮಾಯೆಯ ಬಳಿ ಹೋದ ಶಿವ ಅವಳು ನೀಡಿದ ವಿಷವನ್ನು ಸೇವಿಸುತ್ತಾನೆ. ಇದನ್ನು ಕಂಡ ಮಾಯೆ ಶಿವನನ್ನು ಕ್ಷಮೆ ಕೋರುತ್ತಾಳೆ. ಆದರೆ ಶಿವ ಅವಳ ಮೂರು ಮುಂದಲೆಗಳನ್ನು ಕೊಯ್ದು ರಂಡೆ ನೀ ಹೋಗೆಂದು ಝುಂಕಿಸುತ್ತಾನೆ. ನಂತರ ಅವಳ ಸೆರೆಯಾಗಿದ್ದ ನವಕೋಟಿಸಿದ್ಧರುಗಳನ್ನು ಕುರಿಗಳಾಗಿರೆಂದು ಶಾಪ ಕೊಡುತ್ತಾನೆ. ಆಗ ಸಿದ್ಧರೆಲ್ಲಾ ಕುರಿಗಳಾಗುತ್ತಾರೆ. ಕೆಲವು ಕಾಲ ದೇವತೆಗಳು ಕಾಯುತ್ತಾರೆ. ಆದರೆ ಕೊನೆಗೆ ಶಿವ ತಾನೇ ಕುರಿಗಳನ್ನು ಮೇಯಿಸುತ್ತಾ 'ತೊಗರಿಸಿ' ಎಂಬ ಊರಿಗೆ ಬರುತ್ತಾನೆ. ಅಲ್ಲಿ 'ಆದಿಗೊಂಡ'ನೆಂಬ ಒಕ್ಕಲಿಗನು ಏಳುಮಂದಿ ಮಕ್ಕಳೊಂದಿಗೆ ಕೃಷಿ ವೃತ್ತಿಯಲ್ಲಿ ತೊಡಗಿರುತ್ತಾನೆ. ಆದಿಗೊಂಡನ ಹೊಲದಲ್ಲಿದ್ದ ಒಂದು ಹುತ್ತದಲ್ಲಿ ಕುರಿಗಳನ್ನು ಅಡಗಿಸಿಟ್ಟನಲ್ಲದೆ, ಅದರ ಕಾವಲಿಗಾಗಿ ಬೀರೇಶನನ್ನು ಸೃಷ್ಟಿಸುತ್ತಾನೆ."

ಕಾಲಾನಂತರ ಆದಿಗೊಂಡನ ಮಕ್ಕಳಲ್ಲಿ ಕೊನೆಯವನಾದ ಪದ್ಮಣ್ಣ ಎಲ್ಲರ ಒತ್ತಾಯದಿಂದ ಹೊಲದ ಕೆಲಸ ಮಾಡಲು ಹೊರಡುತ್ತಾನೆ. ಹೊಲದಲ್ಲಿ ಕೆಲಸ ಮಾಡುತ್ತಿದ್ದ ಪದ್ಮಣ್ಣ ಅಲ್ಲಿದ್ದ ಹುತ್ತವನ್ನು ಒಡೆಯುತ್ತಾನೆ. ಅದರೊಳಗಿದ್ದ ಕುರಿಗಳೆಲ್ಲಾ ಹೊರಬರುತ್ತವೆ. ಇವನ್ನು ಕಂಡು

ಆಶ್ಚರ್ಯಗೊಂಡ ಪದ್ಮಣ್ಣನನ್ನು ಶಿವನು ಸಮಾಧಾನಗೊಳಿಸುತ್ತಾನೆ. ಈ ಕುರಿಗಳನ್ನು ಪಾಲಿಸುವುದು ನಿನ್ನ ಕರ್ತವ್ಯವೆಂದು ತಿಳಿಸಿ, ಅವನ ಜೊತೆಗೆ ಬೀರಯ್ಯನನ್ನು ಕೂಡಿಸುತ್ತಾನೆ. ಅಂದಿನಿಂದ ಪದ್ಮಣ್ಣ ಕುರಿಗಳನ್ನು ಕಾಯುತ್ತಾ ಅಡವಿಯಲ್ಲಿ ಸಂಚರಿಸುತ್ತಾನೆ. ಹೀಗೆ 'ಪದ್ಮಣ್ಣ'ನನ್ನು ಕುರುಬರ ಮೂಲಪುರುಷನೆಂದು ಹೇಳಲಾಗಿದೆ.

'ಹಾಲುಮತ ಪುರಾಣ' ಕುರುಬರ ಮೂಲವನ್ನು ಕುರಿತು ಈ ರೀತಿ ವಿವರಿಸುತ್ತದೆ. "ಒಂದು ದಿನ ಶಿವನ ಸಭಾಂಗಣದಲ್ಲಿ ಭೃಂಗಿಯು ಶಿವನಿಗೆ ಒಂದೇ ಕೈಯಿಂದ ನಮಸ್ಕರಿಸುತ್ತಾನೆ. ಇದನ್ನು ಸಹಿಸದ ಪಾರ್ವತಿ ಭೃಂಗಿಯ ಮೇಲೆ ಕೋಪಗೊಂಡು ಅವನ ದೇಹದ ಮಾಂಸಖಂಡಗಳಿಗೆ ನಾನೇ ಕಾರಣವೆಂದು ಹೇಳಿ ಅವುಗಳನ್ನೆಲ್ಲಾ ಹಿಂತಿರುಗಿ ಪಡೆಯುತ್ತಾಳೆ. ಇದರಿಂದ ಭೃಂಗಿ ಅಸ್ಥಿಪಂಜರವಾದನು. ಆದರೆ ಶಿವನನ್ನು ಭೃಂಗಿ ಪ್ರಾರ್ಥಿಸಿದ್ದರಿಂದ ಮೊದಲಿನಂತಾದನು. ಇದನ್ನು ಕಂಡ ಸಭಿಕರೆಲ್ಲಾ ನಗುತ್ತಾರೆ. ಆಗ ಪಾರ್ವತಿಯು ತನ್ನ ಹಿಂದೆ ನಕ್ಕವರೆಲ್ಲ ಮೇಕೆಗಳಾಗಿ, ಮುಂದೆ ನಕ್ಕವರೆಲ್ಲಾ ಕುರಿಗಳಾಗಿ ಎಂದು ಶಾಪ ಕೊಡುತ್ತಾಳೆ. ನಂತರ ಆ ಕುರಿ-ಮೇಕೆಗಳನ್ನು ಭೂಲೋಕದಲ್ಲಿ ದೇವಾನುದೇವತೆಗಳು ಸಾಕುತ್ತಾರೆ. ಕೊನೆಗೆ ಆ ಕುರಿಗಳನ್ನೆಲ್ಲಾ ಸಾಕುತ್ತಾ ಬೇಸತ್ತ ಪಾರ್ವತಿ ಅವುಗಳನ್ನೆಲ್ಲಾ ಒಂದು ಗವಿಯಲ್ಲಿ ಕೂಡಿಹಾಕಿ ಅದರ ಬಾಗಿಲ ಕೊಂಡಿಗೆ ತನ್ನ ಮೂಗುತಿಯನ್ನಿಟ್ಟು ಕೈಲಾಸಕ್ಕೆ ಹೊರಡುತ್ತಾಳೆ. ಆ ಮೂಗುತಿ ಮುತ್ತಲ ಮರವಾಗಿ ಬೆಳೆಯುತ್ತದೆ."

ಪಾರ್ವತಿ ಕುರಿಗಳನ್ನು ಕೂಡಿಟ್ಟ ಪ್ರದೇಶ ಮಹಾಭಾರತದ ಕುರುಕ್ಷೇತ್ರದ ಹತ್ತಿರವಿರುವ 'ಕುರುವರೇಶ್ವರ' ಹಾಗೂ ಸ್ಯಾಮಂತ ಪಂಚಕ' ಪ್ರವಾಹಕ್ಕೆ ಸಮೀಪದಲ್ಲಿತ್ತು. ಆ ಪ್ರದೇಶಕ್ಕೆ 'ಕುರುಪತಿಪುರ'ವೆಂದು ಕರೆಯುತ್ತಿದ್ದರು.[3] ಈ ಕುರು ಶಬ್ದಕ್ಕೆ ಕನ್ನಡದಲ್ಲಿ ಎತ್ತರ ಎಂಬ ಅರ್ಥವಿದೆ. ಹಾಗೆಯೇ 'ಕುರುಬ' ಪದಕ್ಕೆ ಎತ್ತರ ಪ್ರದೇಶದಲ್ಲಿ ವಾಸಿಸುವವನು ಎಂಬ ಅರ್ಥವಿರುವುದರಿಂದ ಈ 'ಕುರು' ಶಬ್ದವೇ ನಂತರ 'ಕುರುವ', 'ಕುರುಬ' ಎಂದಾಗಿರುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಕುರುಪತಿಪುರವು ಕುರುಬರ ಪ್ರಾಚೀನ ನೆಲೆಯಾಗಿರಬಹುದೆಂದು ಊಹಿಸಬಹುದಾಗಿದೆ.

ಶಿವ-ಪಾರ್ವತಿಯರು ಮತ್ತೊಮ್ಮೆ ಭೂಲೋಕ ಸಂಚಾರ ಮಾಡಲು ಬಂದರು. ಭೂಲೋಕದ ಸುಂದರ ತಾಣಗಳನ್ನು ನೋಡಿದ ಉತ್ಸಾಹದಲ್ಲಿ ಪಾರ್ವತಿಯ ಮೊಲೆಗಳಿಂದ ಹಾಲು ಉಕ್ಕುತ್ತವೆ. ಆ ಹಾಲನ್ನು ಹಾಳು ಮಾಡದೆ ಮಣ್ಣಿನಲ್ಲಿ ಬೆರಸಿ ಮಣ್ಣಿನ ಮುದ್ದೆಗಳನ್ನು(ಬೊಂಬೆಗಳನ್ನು) ಮಾಡುತ್ತಾಳೆ. ಅವುಗಳಿಗೆ ಶಿವ ಜೀವ ನೀಡುತ್ತಾನೆ. ಗಂಡು ಗೊಂಬೆಗೆ ಮುದ್ದಪ್ಪನೆಂದು, ಹೆಣ್ಣು ಗೊಂಬೆಗೆ ಮುದ್ದವ್ವನೆಂದು ನಾಮಕರಣ ಮಾಡುತ್ತಾರೆ. ನೀವಿಬ್ಬರು ಸತಿ-ಪತಿಗಳಾಗಿ ಬಾಳಿರೆಂದು ಹರಸಿ ಕೈಲಾಸಕ್ಕೆ ಹಿಂದಿರುಗುತ್ತಾರೆ. ನಂತರ ಮುದ್ದಪ್ಪ-ಮುದ್ದವ್ವನಿಗೆ 'ಆದಿಗೊಂಡ'ನೆಂಬ ಮಗನು ಹುಟ್ಟುತ್ತಾನೆ. ಪಾರ್ವತಿಯ ಎದೆ ಹಾಲಿನಿಂದ ಸೃಷ್ಟಿಗೊಂಡಿದ್ದರಿಂದ 'ಹಾಲುಮತ'ದವರೆಂದೂ

ಕುರುಬರಿಗೆ ಹೆಸರಿದೆ. ಪಾರ್ವತಿ ಕುರಿಗಳನ್ನು ಕೂಡಿಟ್ಟ ಪ್ರದೇಶದಲ್ಲಿ ಆದಿಗೊಂಡನು ನೆಲೆಸಿದ್ದನು. ಅವನಿಗೆ ಆರು ಜನ ಮಕ್ಕಳಿದ್ದರು. ಐದು ಜನ ಅಣ್ಣ–ತಮ್ಮಂದಿರು ಹೊಲದಲ್ಲಿ ಕಷ್ಟಪಟ್ಟು ಕೆಲಸ ಮಾಡಿದರೆ ಆರನೆಯವನಾದ 'ಪದ್ಮಣ್ಣ' ಉಂಡಾಡಿ ಗುಂಡನಾಗಿದ್ದ. ಇದನ್ನು ಸಹಿಸದ ಅಣ್ಣಂದಿರು ಪದ್ಮಣ್ಣನು ಕೆಲಸ ಮಾಡಬೇಕೆಂದು ಹಟ ಮಾಡಿದರು. ಇದರಿಂದಾಗಿ ಪದ್ಮಣ್ಣನು ಹೊಲದಲ್ಲಿ ಕೆಲಸ ಮಾಡಲಾರಂಭಿಸಿದನು. ಆ ಹೊಲದಲ್ಲಿ ಬೆಳೆದಿದ್ದ ಮುತ್ತಲ ಮರವನ್ನು ಕಡಿದನು. ತಕ್ಷಣ ಅದರೊಳಗಿಂದ ನೂರಾರು ಕುರಿಗಳು ಹೊರಬಂದವು. ಇದನ್ನು ಕಂಡು ಆಶ್ಚರ್ಯಗೊಂಡ ಪದ್ಮಣ್ಣನಿಗೆ ಶಿವನು ಪ್ರತ್ಯಕ್ಷನಾಗಿ ನೀನು ಈ ಕುರಿ ಕಾಯುವ ವೃತ್ತಿ ಕೈಗೊಳ್ಳುವಂತೆ ಆಜ್ಞೆ ಮಾಡಿದನು. ಅಂದಿನಿಂದ 'ಕುರಿ ಕಾಯುವ ವೃತ್ತಿ' ಆರಂಭವಾಯಿತೆಂದು ಹೇಳುವ ಪ್ರತೀತಿಯಿದೆ.

ಕುರುಬರ ಮೂಲವನ್ನು ಕುರಿತು ಎಡ್ಗರ್ ಥರ್ಸ್ಟನ್ ಅವರ "ದಿ ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್ ಆಫ್ ಸದರನ್ ಇಂಡಿಯಾ" ಕೃತಿಯಲ್ಲಿ ಈ ರೀತಿ ನಿರೂಪಣೆಯಿದೆ.[೬] ಮೂಲತಃ ಕುರುಬರು ಕಾಡಿನ ವಾಸಿಗಳಾಗಿದ್ದರು. ಅವರ ಪೂರ್ವಜರು ಮಸಿರೆಡ್ಡಿ ಮತ್ತು ನೀಲಮ್ಮ ದಂಪತಿಗಳು ಕಟ್ಟಿಗೆ ಮಾರಿ ಜೀವಿಸುತ್ತಿದ್ದರು. ಅವರಿಗೆ ಆರು ಜನ ಗಂಡುಮಕ್ಕಳು. ಅವರ ಬಡತನವನ್ನು ಕಂಡು ಮರುಗಿದ ಶಿವನು ಜಂಗಮ ವೇಷಧಾರಿಯಾಗಿ ಅವರ ಮನೆಗೆ ಬಂದು ವಿಭೂತಿ ಪ್ರಧಾನ ಮಾಡುತ್ತಾನೆ. "ನಿಮಗೆ ಆರನೆಯ ಮಗುವಿನ ಜನನವಾಗುತ್ತಲೇ ಬಡತನ ನಿವಾರಣೆಯಾಗುವುದೆಂದು ಹೇಳಿ ಭಸ್ಮ ಕೊಟ್ಟು ಹೋದನು. ಅದರಂತೆ ಮಸಿರೆಡ್ಡಿ–ನೀಲಮ್ಮ ದಂಪತಿಗಳಿಗೆ ಹುಟ್ಟಿದ ಆರನೆಯವನೇ 'ಪದ್ಮಣ್ಣ' ಉಂಡಾಡಿ ಗುಂಡನಂತೆ ಕೆಲಸ ಮಾಡದೇ ತಿರುಗುತ್ತಿದ್ದ ಪದ್ಮಣ್ಣ, ತಂದೆ–ತಾಯಿ ಹಾಗೂ ಸಹೋದರರ ಒತ್ತಾಯದ ಮೇರೆಗೆ ಹೊಲದಲ್ಲಿ ಕೆಲಸ ಮಾಡಲಾರಂಭಿಸಿದನು. ಆ ಹೊಲದಲ್ಲಿದ್ದ ಹುತ್ತವನ್ನು ಕಡಿದಾಗ ಅದರೊಳಗಿಂದ ನೂರಾರು ಕುರಿಗಳು ಹೊರಬಂದವು. ಕೊನೆಗೆ ಶಿವನಾಜ್ಞೆಯಂತೆ ಕುರಿಗಳನ್ನು ಸಾಕಲಾರಂಭಿಸಿದನು. ಕುರಿ ಕಾಯುತ್ತಾ ಅಡವಿಯಲ್ಲಿ ಸಂಚರಿಸುತ್ತಿದ್ದಾಗ ರಾಕ್ಷಸಿಯ ಬಂಧನದಲ್ಲಿದ್ದ ಕನ್ಯೆಯ ಪರಿಚಯವಾಗುತ್ತದೆ. ಅವಳನ್ನು ರಾಕ್ಷಸಿಯ ಬಂಧನದಿಂದ ಬಿಡಿಸಿ ವಿವಾಹವಾದನು. ಕಾಡಿನಲ್ಲಿ ಅವಳಿಗೆ ಕುರಿಯ ಉಣ್ಣೆಯಿಂದ ಮಾಡಿದ ಕಂಕಣವನ್ನು ಕಟ್ಟಿದ್ದರಿಂದ ಉಣ್ಣೆಕಂಕಣದವರೆಂದು ಕರೆಯಲ್ಪಟ್ಟರು. ಈ ಮೊದಲೇ ವಿವಾಹವಾಗಿದ್ದ ಸಮಯದಲ್ಲಿ ಹತ್ತಿಕಂಕಣವನ್ನು ಕಟ್ಟಿದ್ದನು. ಆದ್ದರಿಂದ ಅವರ ವಂಶಸ್ಥರನ್ನು ಹತ್ತಿಕಂಕಣದವರೆಂದು ಕರೆದರು. ಇಂದಿಗೂ ಕುರುಬರ ಮದುವೆಯಲ್ಲಿ ಹತ್ತಿಕಂಕಣ ಮತ್ತು ಉಣ್ಣೆಕಂಕಣ ಕಟ್ಟುವ ಸಂಪ್ರದಾಯ ವಿರುವುದನ್ನು ನೋಡಬಹುದು.

ರಸ್ತಾಪುರದ ಭೀಮಕವಿ ರಚಿಸಿದ "ಹಾಲುಮತೋತ್ತೇಜಕ ಪುರಾಣ"ದಲ್ಲಿ ಕುರುಬರ ಮೂಲದ ಬಗ್ಗೆ ಪ್ರಸ್ತಾಪವಿದೆ. ಭೀಮಕವಿ ಕುರುಬರ ಮೂಲದ ಬಗ್ಗೆ ಹೇಳುವಾಗ ಸಂಸ್ಕೃತದಲ್ಲಿ ರಚಿಸಿದ

ಆಗ್ನೇಯ ಪುರಾಣದ ಆಧಾರ ನೀಡಿದ್ದಾನೆ. ಇದರ ಪ್ರಕಾರ ಕೌರಭ ಋಷಿಯ ಉಗ್ರತಪಸ್ಸಿನ ಫಲವಾಗಿ 'ಕುರುಬ' ಸಮುದಾಯ ಸೃಷ್ಟಿಯಾಯಿತೆಂದು ತಿಳಿಯುತ್ತದೆ.

ಈ ಮೇಲಿನ ಹೇಳಿಕೆಗೆ ಭೀಮಕವಿಯು ಈ ಕೆಳಗಿನ ಸಾಲುಗಳನ್ನು ಆಧಾರವಾಗಿ ಕೊಟ್ಟಿದ್ದಾನೆ.

"ಕುರರೇ ಮೃಗಸ್ತ್ರಾಣಿ ಕೃತ್ವಂತ್ಯೆ
ಕೌರಭ ಋಷಿ
ತನಮಾ ಸಾರ್ಥಕಂ ಚಕ್ರದೇವಾನಾಂ
ಹಿತಕಾವ್ಯ ॥[೭]

ಇದರಿಂದ ಕೌರಭ ಋಷಿಯಿಂದ ಕುರುಬರು ಸೃಷ್ಟಿಯಾದರೆಂದು ತಿಳಿಯುತ್ತದೆ. ಕೌರವ ಎಂಬ ಪದ ಕೌರಭ>ಕುರುವ>ಕುರುಬ ಎಂದಾಗಿರುವುದು ಕಂಡುಬರುತ್ತದೆ.

ಕುರುಬರ ಸೃಷ್ಟಿಮೂಲದ ಬಗ್ಗೆ ಇನ್ನೊಂದು ಕಥೆ ಪ್ರಚಲಿತದಲ್ಲಿದೆ[೮] ಅದರ ಪ್ರಕಾರ "ಒಂದು ದಿನ ಶಿವ-ಪಾರ್ವತಿಯರು ತಾವು ಸೃಷ್ಟಿಸಿದ ಭೂಲೋಕವು ಎಷ್ಟರಮಟ್ಟಿಗೆ ಯೋಜನಾ ಬದ್ಧವಾಗಿದೆಯೆಂಬುದನ್ನು ತಿಳಿಯುವುದಕ್ಕೋಸ್ಕರ ಭೂಲೋಕಕ್ಕೆ ಬಂದರು. ಪ್ರಕೃತಿಯ ಸೊಬಗನ್ನು ಕಂಡು ಮಾರು ಹೋದರು. ಕೆಲ ಸಮಯದ ನಂತರ ಅವರಿಗೆದುರಾಗಿ ಕಾಲ್ನಡಿಗೆಯಿಂದ ಬ್ರಹ್ಮದೇವ ಬಂದನು. ಬ್ರಹ್ಮದೇವರನ್ನು ಕಂಡು ಶಿವದಂಪತಿಗಳು 'ಇದೇನು ಬ್ರಹ್ಮದೇವ ಕಾಲ್ನಡಿಗೆಯಿಂದ ಸಂಚಾರವೇ?' ಎಂದು ಪ್ರಶ್ನಿಸಿದರು. ಆಗ ಬ್ರಹ್ಮನು ಶಿವದಂಪತಿಗಳು ನನಗೆ ವಾಹನವನ್ನೇ ಒದಗಿಸಲಿಲ್ಲವೆಂದನು. ಆದ್ದರಿಂದ ಶಿವನು ನಾಲ್ಕು ಕಾಲಿನ ಎರಡು ಜೀವಿಗಳನ್ನು ಸೃಷ್ಟಿಸಿ ಒಂದಕ್ಕೆ ಮೇಷವೆಂದು ಇನ್ನೊಂದಕ್ಕೆ ಮೇಖ(ಮೇಕೆ) ಎಂದು ಹೆಸರಿಟ್ಟನು. ಮೇಷವು ವಿನಯ, ಮುಗ್ಧ, ಸೇವಾಭಾವಸರಳ ಜೀವಿಯಾಗಿತ್ತಲ್ಲದೆ, ಮೈಮೇಲೆ ಮೃದುವಾದ ಊರ್ಣವನ್ನು ಹೊಂದಿತ್ತು. ಬ್ರಹ್ಮನು ಮೇಷವನ್ನು ವಾಹನವನ್ನಾಗಿ ಮಾಡಿಕೊಂಡು ಬ್ರಹ್ಮಪುರಿಗೆ ಮರಳಿದನು. ಶಿವ ದಂಪತಿಗಳು ಕೈಲಾಸಕ್ಕೆ ತೆರಳಿದರು. ಆದರೆ ಮೇಷಿಣಿಗಳು ಭೂಲೋಕದಲ್ಲಿಯೇ ಉಳಿದವು."

ಕೈಲಾಸದಲ್ಲಿ ಶಿವನ ಒಡ್ಡೋಲಗ ನಡೆದಿತ್ತು. ಗರುಡ-ಗಂಧರ್ವರು, ಕಿನ್ನರ-ಕಿಂಪುರುಷರು, ಸಿದ್ಧವಿದ್ಯಾಧರರು, ಮತ್ಸ್ಯನಾಗರು, ಕೌರಭ ಸಕಲ ಋಷಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಆಗ ಅನಿರೀಕ್ಷಿತವಾಗಿ ಭಯಂಕರ ಹಿಮಪಾತವಾಯಿತು. ದೇವ-ದೇವತೆಗಳೆಲ್ಲರೂ ಭಯಭೀತರಾದರು. ಅವರ ಜೀವಕ್ಕೆ ಆಪತ್ತು ಬಂದಿತು. ತಕ್ಷಣ ಶಿವನು ಮೂರನೆಯ ಕಣ್ಣನ್ನು ತೆರೆದು ಬಿಸಿಯನ್ನು ಒದಗಿಸಿದನು. ದೇವತೆಗಳೆಲ್ಲರೂ ಗಂಡಾಂತರದಿಂದ ಪಾರಾದರು. ಆದರೆ ಈ ಪರಿಹಾರ ತಾತ್ಕಾಲಿಕವಾಗಿತ್ತು. ಹೀಗಾಗಿ ಎಲ್ಲರೂ ಶಿವನನ್ನು ಕುರಿತು ಶಾಶ್ವತವಾದ ಹಾಗೂ ಸುರಕ್ಷಿತವಾದ ಪರಿಹಾರವೊಂದನ್ನು ಕಂಡುಹಿಡಿಯಲು ಕೇಳಿಕೊಂಡರು. ಶಿವನು ಇದಕ್ಕೆ ಪರಿಹಾರ ಸೂಚಿಸಲು

ಕೌರಭನಿಗೆ ಹೇಳಿದನು. ಆಗ ಕೌರಬನು ಊರ್ಣವಸ್ತ್ರಗಳನ್ನು ನೇಯ್ದು ದೇವತೆಗಳಿಗೆ ಹೊದಿಸಿದರೆ ಈ ಶೀತಬಾಧೆಯಿಂದ ಮುಕ್ತರಾಗಬಹುದೆಂದು ತಿಳಿಸಿದರು. ಆದರೆ ಅದಕ್ಕೆ ಹೆಚ್ಚಿನ ಊರ್ಣವು ಬೇಕಾಗುತ್ತದಲ್ಲದೇ ಆ ಊರ್ಣಕ್ಕಾಗಿ ಹಿಂದೆ ತಾವು ಸೃಷ್ಟಿಸಿದ ಮೇಷಗಳ ಪಾಲನೆ ಆಗಬೇಕು ಎಂದು ಶಿವನು ತಿಳಿಸಿದನು. ಅದಕ್ಕಾಗಿ ಶಿವ-ದಂಪತಿಗಳು ಕೌರಭರನ್ನೊಳಗೊಂಡು ಭೂಲೋಕದ ಮೇಷಮಂಡಲಕ್ಕೆ ಬಂದರು. ಮೊದಲು ಭೂಲೋಕದಲ್ಲಿದ್ದ ಮೇಷಿಣಿಗಳಿಗೆ ಬ್ರಹ್ಮನ ವಾಹನವಾದ ಮೇಷದಿಂದ ಸಂಪರ್ಕ ಮಾಡಲಾಯಿತು. ಇದರಿಂದ ಅಸಂಖ್ಯಾತ ಮೇಷಗಳು ಉತ್ಪತ್ತಿಯಾದವು.

ಮೇಷ ಪಾಲನೆಗಾಗಿ ಕೌರಭರೊಂದಿಗೆ ದೇವ-ದೇವತೆಗಳು ಭೂಲೋಕದಲ್ಲಿಯೇ ಉಳಿದರು. ದಿನದಿಂದ ದಿನಕ್ಕೆ ಮೇಷಗಳ ಸಂಖ್ಯೆ ಬೆಳೆಯತೊಡಗಿತು. ಆದರೆ ಮೇಷಪಾಲಕನನ್ನು ಯಾವ ಹೆಸರಿನಿಂದ ಕರೆಯಬೇಕೆಂಬ ಬಗ್ಗೆ ಶಿವನಲ್ಲಿ ವಿಚಾರ ಬಂದಿತು. ಮೇಷಪಾಲನೆ ಮಾಡುವುದು ಮತ್ತು ಊರ್ಣವಸ್ತ್ರಗಳನ್ನು ನೇಯ್ದು ದೇವತೆಗಳಿಗೆ ಪೂರೈಸುವ ಉಪಾಯವನ್ನು ಸೂಚಿಸಿದರು. ಕೌರಭರಾಗಿದ್ದರೂ ಇದೊಂದು ಕೌರಭಸಿದ್ಧ ಯೋಜನೆಯಾಗಿತ್ತು. ಈ ಹಿನ್ನೆಲೆಯಲ್ಲಿ ಕೌರಭರ ಹೆಸರಿನಿಂದಲೇ ಕರೆಯಲ್ಪಟ್ಟರು. ಮೇಷಪಾಲಕನು ಕೌರಭನಾದನು, ಕಾಲಾನಂತರ ಕೌರಭ ಶಬ್ದವು 'ಕುರುಬ'ನಾಗಿ ಪರಿವರ್ತನೆಗೊಂಡಿತು. ಹೀಗೆ ಕುರುಬರು ಪ್ರಾಚೀನ ಕುರುಬರಾದರು.

ಈ ಪುರಾಣಗಳಲ್ಲಿನ ಕೆಲವು ವಿಷಯಗಳನ್ನು ಆಧಾರವಾಗಿಟ್ಟುಕೊಂಡರೆ ಕುರುಬರ ಮೂಲದ ಬಗ್ಗೆ ಸಾಕಷ್ಟು ವಾಸ್ತವ ಸಂಗತಿಗಳು ತಿಳಿದುಬರುತ್ತವೆ. ಕುರುಬರ ಮೂಲಪುರುಷ ಪದ್ಮಗೊಂಡ ಕುರಿಗಳನ್ನು ಕಾಯುವ ವೃತ್ತಿ ಆರಂಭಿಸಿದಂದಿನಿಂದಲೇ ಕುರುಬರೆಂದು ಕರೆಯಲ್ಪಟ್ಟರು. ಕುರುಬರು ಮೂಲದಿಂದಲೂ ದೈವನಾಗಿ ಶಿವ ಅಥವಾ ಬೀರದೇವನನ್ನು ಆರಾಧಿಸುತ್ತಾ ಬಂದಿರುವ ಸಾಕಷ್ಟು ವಿಷಯಗಳ ಮಾಹಿತಿ ಈ ಕೃತಿಯಲ್ಲಿ ದೊರೆಯುತ್ತದೆ.

'ಕುರು' ಎಂಬುದು ಒಂದು ಗುಂಪು. 'ಕುರು' ಪದಕ್ಕೆ ಕನ್ನಡದಲ್ಲಿ ಎತ್ತರ ಎಂಬ ಅರ್ಥವಿದೆ. ಆದ್ದರಿಂದ ಕು ಅಥವಾ ಕೊ ಜನರು ಕುರುಬರಾದರು.[೯] ಕುರುಬರನ್ನು ತುರುಕಾರರು ಕರೆಯಬಹುದು. ಈ ತುರುಕಾರರಂ ಮುಂದೆ ಕುರುಕಾರ>ಕುರಿಗಾರ>ಕುರುಬರು> ಕುರಿಕಾಯುವವರು ಎಂದು ಪರಿವರ್ತನೆ ಹೊಂದಿದವರೆಂದು ಶಂಬಾ ಜೋಶಿಯವರು ಅಭಿಪ್ರಾಯಪಟ್ಟಿದ್ದಾರೆ.[೧೦]

ಕುರುಬರು ತಮ್ಮ ದನ, ಕುರಿಗಳನ್ನು ಕ್ರೂರಮೃಗಗಳಿಂದ ಮತ್ತು ಕಳ್ಳರಿಂದ ರಕ್ಷಿಸಿಕೊಳ್ಳಲು ನಾಯಿಗಳನ್ನು ಸಾಕುತ್ತಿದ್ದರು. ಇಂದಿಗೂ ಪ್ರತಿಯೊಂದು ಕುರುಬರ ಹಟ್ಟಿಯಲ್ಲಿ ನಾಯಿಗಳನ್ನು ಕಾಣಬಹುದು. ಹಟ್ಟಿಕಾರ(ಕುರುಬ)ರ ನಾಯಿಗಳು ಬಹಳ ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿ ಹೊಂದಿವೆ. ಕ್ರಿ.ಶ. ೨ನೆಯ ಶತಮಾನದ ಕವಿ 'ಮಾಮೂಲನಾರ್ ಹಟ್ಟಿಕಾರ(ಕುರುಬ)ರು ಕ್ರೂರವಾದ ನಾಯಿಗಳನ್ನು ಸಾಕಿಕೊಂಡಿರುತ್ತಾರೆಂದು ವರ್ಣಿಸಿದ್ದಾರೆ.[೧೧] ವಿದರ್ಭದ ನಾಯಿಗಳ ಗರ್ಜನೆಯ

ಬಗ್ಗೆ ವೈದಿಕ ಸಾಹಿತ್ಯದಲ್ಲಿ ಉಲ್ಲೇಖವಿದೆ. ವಿದರ್ಭದಲ್ಲಿ ಹುಲಿಯನ್ನು ಕೊಲ್ಲುವ ನಾಯಿಗಳಿದ್ದವೆಂದು ಜೈಮಿನಿಯ ಉಪನಿಷತ್ ಬ್ರಾಹ್ಮಣರಲ್ಲಿ ಹೇಳಲಾಗಿದೆ.[೧೨] ಕುರೆ ಕುರೆ ಎಂದು ಕನ್ನಡದಲ್ಲಿ ನಾಯಿಗೆ ಕರೆಯುವ ರೂಢಿಯಿದೆ. ಇದರಿಂದ ಸಂಸ್ಕೃತದಲ್ಲಿ ಕುರ್ಕರ, ಕುಕ್ಕರ, ಕುಕರ ಎಂಬ ಶಬ್ದಗಳು ಬಳಕೆಯಲ್ಲಿ ಬಂದಿರಬಹುದೆಂದು ಕಿಟೆಲ್ಲರು ಅಭಿಪ್ರಾಯಪಟ್ಟಿದ್ದಾರೆ.[೧೩] ಥೋಟಾನಾಗಪುರದ ಶೋಣ ನದಿ ತೀರದ ಜನರು ಕುರುಬರನ್ನು ಕುರುಕ ಧನಗರರೆಂದು ಕರೆಯುತ್ತಾರೆ. ಇದರಿಂದ ಕುರುಬರಿಗೂ ನಾಯಿಗೂ ಅನೋನ್ಯತೆ ಇರುವುದು ಕಂಡುಬರುತ್ತದೆ. ಕುಕರ(ನಾಯಿಗಳ ನಾಡು) ಎಂಬ ದೇಶವಿದ್ದ ಬಗ್ಗೆ ಕ್ರಿ.ಶ. ೨ನೆಯ ಶತಮಾನದ ಶಾಸನಗಳಿಂದಲೂ ಹಾಗೂ ವರಾಹಮಿಹಿರನ ಬೃಹತ್ ಸಂಹಿತೆಯಿಂದಲೂ ತಿಳಿದುಬರುತ್ತದೆ. ಕುರುಬರು ಬೀರಪ್ಪ ಹಾಗೂ ಮಲ್ಲಯ್ಯನನ್ನು ಪೂಜಿಸುತ್ತಾರೆ. ಕುರುಬರ ಬೀರೇಶ್ವರನೇ ಆರ್ಯರ ಭಾಷೆಯಲ್ಲಿ ಭೈರವನಾಗಿದ್ದಾನೆ. ಈ ಭೈರವ ಮಲ್ಲಯ್ಯನ ಮೂರ್ತಿಗಳಲ್ಲಿ ಮಲ್ಲಯ್ಯ ಕುದುರೆ ಮೇಲೆ ಸವಾರನಾಗಿದ್ದರೆ ಕೆಳಗಡೆ ನಾಯಿಯ ಚಿತ್ರವಿರುತ್ತದೆ. ಹೀಗಾಗಿ ಕುರುಬರಲ್ಲಿ ನಾಯಿಗೆ ಪ್ರಮುಖ ಸ್ಥಾನವಿದೆ.[೧೪]

ಮಲ್ಲಯ್ಯ ಮಲ್ಹಾರಿಗಳಲ್ಲಿ ಇವೆರಡು ಸಮುದಾಯಗಳ ಸಂಗಮವಾಗಿರುವುದು ಕಂಡುಬರುತ್ತದೆ. ಮಲ್ಲಯ್ಯನೆಂದರೆ ಪರ್ವತೇಶ್ವರ, ಮಲ್ಹಾರಿಯು ಮಲೆಗಳ ಅರಿ ಇವೆರಡು ಒಂದೇ ಅರ್ಥ ಕೊಡುತ್ತವೆ. ಮಲ್ಲಯ್ಯನು ಶಿವನು, ರುದ್ರನು. ಆದರೆ ಮಲೆಗಳ ಹರಿಯು ಇಂದ್ರನು. ಮಲ್ಹಾರಿ ಮಲ್ಲಯ್ಯಗಳ ಪೂಜೆಯಲ್ಲಿ ಇಂದ್ರ ರುದ್ರ ಜೋಡಿಯಿದೆ. ಇದರಿಂದ ಮಲ್ಲಯ್ಯ ಮಲ್ಹಾರಿಗಳ ಪೂಜೆಯು ವೈದಿಕ ಕಾಲದಿಂದಲೂ ನಡೆದುಕೊಂಡು ಬಂದಿದೆ. ಆರ್ಯರ ಇಂದ್ರನು ಹಟ್ಟಿಕಾರರ ರುದ್ರನೂ ಒಂದುಗೂಡಿ ಉಂಟಾದ ಮಲ್ಹಾರಿ ಮಲ್ಲಯ್ಯನು ಆರ್ಯ ದ್ರಾವಿಡ ಸಂಸ್ಕೃತಿಯ ಪ್ರತಿನಿಧಿಯಾಗಿದ್ದಾನೆ.[೧೫] ಮಲ್ಲಾರಿ(ಮಲ್ಲಯ್ಯ)ಗೆ ಖಂಡೋಬನೆಂದು ಇನ್ನೊಂದು ಹೆಸರಿದೆ. ಈ ಖಂಡೋಬ ಪದ ಇಂದ್ರನಿಗಿರುವ ಅಖಂಡನೆಯ ಪರ್ಯಾಯ ನಾಮವನ್ನು ಸೂಚಿಸುತ್ತದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಋಗ್ವೇದದೊಳಗಿನ 'ಅಹಂಸಪ್ತಾಹಾ' ಎಂಬ ಸಂಸ್ಕೃತ ಮಂತ್ರಕ್ಕೆ, ಕಾಲಾನಂತರ ಕುರುಬರು ತಮ್ಮ ಮಾತಿನಲ್ಲಿ 'ಏಳುಕೋಟೆ' ಎಂದು ಜಯ ಜಯಕಾರವನ್ನು ಕನ್ನಡಿಸಿಕೊಂಡಿರುವ ಸಾಧ್ಯತೆಯಿದೆ. ನರ್ಮದಾ ಕಾವೇರಿಗಳ ನಡುವಿನ ನಾಡಿನ ರಾಷ್ಟ್ರೀಯ ದೇವತೆಯಾದ 'ಮಲ್ಲಯ್ಯ' ಕುರುಬರಂತೆ ದೇಶಸ್ಥ ಕಣ್ವ ಕರ್ನಾಟಕ ಬ್ರಾಹ್ಮಣರಲ್ಲಿ ಅನೇಕರ ಕುಲದೇವನಾಗಿದ್ದಾನೆ.[೧೬] ಈ ಮಲ್ಲಯ್ಯನನ್ನು ಬ್ರಾಹ್ಮಣರು ಮ್ಹಾಳಸಾ ಮಾತಾಂಡ, ಮಲ್ಲಾರಿ ಮಾತಾಂಡ, ಮಾಲತೇಶ ಹಾಗೂ ಖಂಡೋಬ ಎಂಬ ಹೆಸರಿನಿಂದ ಕರೆಯುತ್ತಾರೆ. ಹೀಗಾಗಿ ಧಾರ್ಮಿಕವಾಗಿ ಕುರುಬರು ಮತ್ತು ಆರ್ಯರ ನಡುವೆ ಸಾಮ್ಯತೆಗಳಿರುವುದನ್ನು ಕಾಣಬಹುದು. ಉತ್ತರದಲ್ಲಿ ದ್ವಾರಕೆ ಥೋಟಾನಾಗಪುರದಿಂದ ದಕ್ಷಿಣಕ್ಕೆ ನೀಲಗಿರಿಯವರೆಗೆ, ಪೂರ್ವ–ಪಶ್ಚಿಮ ಸಮುದ್ರ ತೀರಗಳವರೆಗೂ ಹಟ್ಟಿಕಾರರು(ಕುರುಬ)

ಕುಂತಲರೂ, ಹಂಡೆಯರು, ಇಡೈಯರು ಮೊದಲಾದ ಹೆಸರುಗಳಿಂದ ವ್ಯಾಪಿಸಿಕೊಂಡು ಕ್ರಿ.ಶ.ದ ಆರಂಭ ಕಾಲದಲ್ಲಿ ಬಹಳ ಪ್ರಬಲ ಸಮುದಾಯ ವಾಗಿದ್ದಿತೆಂದು ತಮಿಳು ಸಾಹಿತ್ಯಗಳಿಂದ ಸ್ಪಷ್ಟಪಡುತ್ತದೆ.[೧೭] ಕ್ರಿ.ಶ. ೫ನೆಯ ಶತಮಾನದಿಂದ ಸಂಸ್ಕೃತ ಶಬ್ದಗಳಿಗೆ ಇಂಬು ದೊರೆಯಿತು ಎಂದು ಪಿ.ಟಿ.ಶ್ರೀನಿವಾಸ ಅಯ್ಯಂಗಾರರು ಅಭಿಪ್ರಾಯಪಟ್ಟಿದ್ದಾರೆ.[೧೮] ಭೌಗೋಳಿಕತೆಯ ಆಧಾರದ ಮೇಲೆ ದ್ರಾವಿಡರಲ್ಲಿ ತಮಿಳರಿಗಿಂತ ಮೊದಲೇ ಹಟ್ಟಿಗಾರರಿಗೆ(ಕುರುಬ) ಆರ್ಯರ ಸಂಪರ್ಕ ಉಂಟಾಯಿತೆಂದು ತಿಳಿಯುತ್ತದೆ. ಕ್ರಿ.ಶ. ೧೨ನೆಯ ಶತಮಾನದ ನಂತರ ಕನ್ನಡ ಕಾವ್ಯಗಳಲ್ಲಿ ಸಂಸ್ಕೃತ ಪರಿಭಾಷೆಯನ್ನು ನೋಡಿದರೆ ಆರ್ಯರೊಡನೆ ಈ ಸಮುದಾಯದ ಬಳಕೆ ಪ್ರಾರಂಭವಾಗಿ ಎಷ್ಟೋ ಕಾಲ ಕಳೆದು ಹೋಗಿರಬೇಕೆಂದು ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಕುರುಬರು ಆರ್ಯ ಮೂಲದವರೆಂದು ಹೇಳಬಹುದಾಗಿದೆ.

ಒಟ್ಟಾರೆ ಕುರುಬ ಸಮುದಾಯದ ಬಗ್ಗೆ ವಿದ್ವಾಂಸರಲ್ಲಿ ಹಲವಾರು ಭಿನ್ನಾಭಿಪ್ರಾಯಗಳಿದ್ದರೂ ಕುರುಬರು ಭಾರತದ ಮೂಲನಿವಾಸಿಗಳಲ್ಲಿ ಪ್ರಮುಖರಾಗಿದ್ದರು. ಅವರಿಗೆ ಕ್ರಿ.ಪೂ. ೧೨೦೦-೨೦೦೦ ವರ್ಷಗಳಷ್ಟು ಪ್ರಾಚೀನವಾದ ಚರಿತ್ರೆ ಇರುವುದು ಸ್ಪಷ್ಟ.

೩. ಕುರುಬರ ಉಪಪಂಗಡಗಳು

ದಕ್ಷಿಣ ಭಾರತದಲ್ಲಿ ವಾಸಿಸುತ್ತಿರುವ ಜನಸಮುದಾಯದಲ್ಲಿ 'ಕುರುಬರು' ಪ್ರಮುಖರಾಗಿದ್ದಾರೆ. ಪರಂಪರಾಗತವಾಗಿ ಪಶುಪಾಲನೆಯನ್ನು ತಮ್ಮ ಜೀವನೋಪಾಯವನ್ನಾಗಿ ಮಾಡಿಕೊಂಡಿರುವ ಇವರು ಕಾಲಾನಂತರ ಪಶುಪಾಲನೆಯಿಂದ ಕೃಷಿಗೆ ಪರಿವರ್ತನೆಗೊಂಡರು. ಕೃಷಿಯನ್ನು ಅವಲಂಬಿಸಿದ ಮೇಲೆ ಇವರಲ್ಲಿ ಬಹಳಷ್ಟು ಪ್ರಗತಿಯಾಯಿತು. ತಮ್ಮ ಕುಲಕಸುಬಿನ ಜೊತೆಗೆ ಇಂದು ಕೈಗಾರಿಕೆ, ವ್ಯಾಪಾರ, ವಾಣಿಜ್ಯ ವೃತ್ತಿಗಳನ್ನು, ಸರ್ಕಾರಿ ಮತ್ತು ಸರ್ಕಾರೇತರ ವೃತ್ತಿಗಳನ್ನು ಅವಲಂಬಿಸಿದ್ದಾರೆ. ತಮ್ಮ ವೃತ್ತಿ ಮತ್ತು ಪ್ರವೃತ್ತಿಗಳಿಂದ ಭಾರತಕ್ಕೆ ಅಪಾರ ಕೊಡುಗೆಯನ್ನು ನೀಡುವ ಜೊತೆಗೆ ರಾಜಕೀಯ, ಸಾಮಾಜಿಕ, ಆರ್ಥಿಕ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿ, ಕನ್ನಡ ನಾಡು-ನುಡಿ-ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ.

ಮೂಲತಃ ಒಂದೇ ಜನಾಂಗವಾಗಿದ್ದ ಕುರುಬರಲ್ಲಿ ಕಾಲಾನಂತರ ಅನೇಕ ಕಾರಣಗಳಿಂದಾಗಿ ಅನೇಕ ಉಪಪಂಗಡಗಳು ಸೃಷ್ಟಿಗೊಂಡವು. ಪ್ರತಿಯೊಂದು ಪಂಗಡವು ತಮ್ಮದೇ ಆದ ವೃತ್ತಿ ಆಚಾರ ವಿಚಾರಗಳನ್ನು ಹೊಂದಿದವಲ್ಲದೇ ಮೂಲ ಪಂಗಡದಿಂದ ದೂರವಾದವು. ಅವು ತಮ್ಮದೇ ಆದ ಜೀವನಕ್ರಮವನ್ನು ಅನುಸರಿಸುತ್ತಾ ಹೊಸ ಹೆಸರನ್ನು ಪಡೆದುಕೊಂಡವು. ಅವುಗಳನ್ನು ಕುರಿತು ಎಂಥೋವನ್, ಥರ್ಸ್ಟನ್, ಸೊಂಥೈಮರ್, ವೆಂಕಟರಂಗೋಕಟ್ಟಿ, ಹಯವದನರಾವ್, ಎಚ್.ಎ. ನಂಜುಂಡಯ್ಯ, ಎಲ್.ಕೆ. ಅನಂತಕೃಷ್ಣ ಅಯ್ಯರ್, ವಿ.ಆರ್. ಹನುಮಂತಯ್ಯ, ಶ್ಯಾಮಸಿಂಗ್

ಶಶಿ, ಶಿವಾನಂದ ಗುಬ್ಬಣನವರ, ಡಾ. ಎಫ್.ಟಿ. ಹಳ್ಳಿಕೇರಿ ಮೊದಲಾದ ವಿದ್ವಾಂಸರು ಆನುಷಂಗಿಕವಾಗಿ ತಮ್ಮ ಕೃತಿಗಳಲ್ಲಿ ಚರ್ಚಿಸಿದ್ದಾರೆ.

ಹನುಮಂತಯ್ಯನವರು ಕರ್ನಾಟಕ ಕುರುಬರಲ್ಲಿ ಕಂಡುಬರುವ ಅತೀ ದೊಡ್ಡ ಪಂಗಡಗಳೆಂದರೇ 'ಹತ್ತಿಕಂಕಣ' ಮತ್ತು 'ಉಣ್ಣೆ ಕಂಕಣ' ಎಂದು ಹೇಳಿದ್ದಾರೆ. ಹತ್ತಿಕಂಕಣದವರನ್ನು ಹೊಸ ಕುರುಬರೆಂದು, ಉಣ್ಣೆಕಂಕಣದವರನ್ನು ಹಳೆ ಕುರುಬರೆಂದು ಹೇಳಿ, ಈ ಎರಡು ಪಂಗಡಗಳ ಮಧ್ಯೆ ನೀರು ಬಳಕೆ, ಊಟ ಉಪಚಾರ ಯಾವುದೇ ಭೇದವಿಲ್ಲದೇ ನಡೆಯುತ್ತದೆ. ಇವರು ಹಬ್ಬ, ಹರಿದಿನ, ಜಾತ್ರೆ, ಉತ್ಸವ ಸಂದರ್ಭದಲ್ಲಿ ಹೆಣ್ಣು ಗಂಡಿನ ಕೊಡು-ಕೊಳ್ಳುವಿಕೆಯ ವ್ಯವಹಾರ ನಡೆಯುವುದಿಲ್ಲ. ಕಾರಣ ಈ ಎರಡು ಪಂಗಡದವರು ಅಣ್ಣ-ತಮ್ಮಂದಿರು ಎಂದು ಹೇಳಿದ್ದಾರೆ.

ಈ ಎರಡು ಪಂಗಡಗಳನ್ನು ಕುರಿತು ಹಾಲುಮತ ಪುರಾಣ, ತಗರಪವಾಡ, ಪುರಾಣ ಕೃತಿಗಳು, ಕಾವ್ಯ, ಶಾಸನ ಮೊದಲಾದ ದಾಖಲೆಗಳು ಆಕರಗಳಾಗಿ ದೊರೆಯುತ್ತವೆ.

'ಕುರುಬರ ಚರಿತ್ರೆ'ಯಲ್ಲಿ ಹನುಮಂತಯ್ಯನವರು ಹೇಳಿರುವ ಒಂದು ಕಥೆ ಹೀಗಿದೆ: "ಕೈಲಾಸದಲ್ಲಿ ಪಾರ್ವತಿ-ಪರಮೇಶ್ವರರು ಒಡ್ಡೋಲಗದಲ್ಲಿರುವಾಗ ಭೃಂಗಿ ತನ್ನ ಮೂರು ಕಾಲುಗಳಿಂದ ನರ್ತನ ಮಾಡಿದ್ದನ್ನು ಕಂಡು ದೇವತೆಗಳು ಅಪಹಾಸ್ಯ ಮಾಡಿ ನಕ್ಕರು. ಆಗ ಭೃಂಗಿಯು ಕೋಪದಿಂದ 'ನೀವು ಭೂಲೋಕದಲ್ಲಿ ಕುರಿಗಳಾಗಿ ಹುಟ್ಟಿರಿ' ಎಂದು ಶಪಿಸಿದನೆಂದು, ಅದರಂತೆ ಶಾಪವಿಮೋಚನೆ ಯವರೆಗೂ ಅವರು ಭೂಲೋಕದೊಳಗೆ ಒಂದು ಹುತ್ತದಲ್ಲಿ ಅಡಗಿದ್ದರೆಂದು ಕಥೆಯಿದೆ."[೧೯]

ಈ ಕುರಿಗಳು ಅಡಗಿದ್ದ ಹುತ್ತವು ಇರುವ ಭೂಮಿಯು ಕುರುಬರ ಮೂಲಪುರುಷನಾದ ಆದಿಗೊಂಡನಿಗೆ ಸೇರಿತ್ತು. ಇವನು ತನ್ನ ನಾಲ್ಕು ಜನ ಅಣ್ಣಂದಿರಂತೆ ಹೊಲಗದ್ದೆಗಳಲ್ಲಿ ಕಷ್ಟಪಟ್ಟು ಕೆಲಸ ಮಾಡದೇ ಮನೆಯಲ್ಲಿ ಎರಡು ಹೊತ್ತು ಉಂಡು ಸುಖವಾಗಿ ಸಂಗಡಿಗರೊಂದಿಗೆ ಆಡಿಕೊಂಡು ಇರುತ್ತಿದ್ದುದರಿಂದ ಈತನಿಗೆ ಉಂಡಾಡು ಪದ್ಮಣ್ಣ ಎಂಬ ಅಡ್ಡ ಹೆಸರು ಬಂದಿತ್ತು. ಇದನ್ನು ಅವನ ಅಣ್ಣಂದಿರು ಸಹಿಸದೇ ತಮ್ಮ ಹಾಗೆ ಕಷ್ಟಪಟ್ಟು ಹೊಲಗದ್ದೆಗಳಲ್ಲಿ ಕೆಲಸ ಮಾಡಲು ತಮ್ಮ ಸಂಗಡ ಕಳುಹಿಸಬೇಕೆಂದು, ಇಲ್ಲವಾದರೆ ತಾವೂ ಕೆಲಸಕ್ಕೆ ಹೋಗುವುದಿಲ್ಲವೆಂದು ಹಟ ಹಿಡಿದರು. ವಿಧಿಯಿಲ್ಲದೆ, ತಂದೆ ಮರುದಿನ ಮುಂಜಾನೆ ಪದ್ಮಣ್ಣನನ್ನು ಮುದ್ದಿಸಿ ಅಣ್ಣಂದಿರೊಂದಿಗೆ ಹೊಲಗದ್ದೆಯ ಕೆಲಸಕ್ಕೆ ಕಳುಹಿಸಿದನು. ಅವರು ಪದ್ಮಗೊಂಡನಿಗೆ ವ್ಯವಸಾಯದ ಓನಾಮ ಗೊತ್ತಿಲ್ಲದ್ದರಿಂದ ತಮ್ಮ ಹೊಲದಲ್ಲಿದ್ದ ಹುತ್ತವನ್ನು ಅಗೆದು ಸಮಗೊಳಿಸಲು ಹೇಳಿದರು. ದೇವತೆಗಳು ಕುರಿಗಳಾಗಿ ಅಡಗಿದ್ದ ಹುತ್ತ ಎಂದು ಯಾರಿಗೂ ಗೊತ್ತಿರಲಿಲ್ಲ. ಪದ್ಮಗೊಂಡ ಇದೊಂದು ವಿನೋದದ ಆಟವೆಂಬಂತೆ ಅಗೆಯುತ್ತಿರುವಾಗ ಹುತ್ತಿನ ಬಾಯಿಗೆ ಮುಚ್ಚಿದ ಕಲ್ಲು ಚಪ್ಪಡಿಯು ಪಕ್ಕಕ್ಕೆ ಸರಿದು ಅದರೊಳಗಿಂದ ಆರು ಬಣ್ಣದ ಕುರಿಗಳು ತೂರಿಬಂದವು. ಪದ್ಮಣ್ಣ ದಿಗ್ಭ್ರಾಂತನಾಗಿ ಕಾಡಿನ ಕಡೆಗೆ ಓಡಿದನು. ಕುರಿಗಳು ಅವನನ್ನು ಹಿಂಬಾಲಿಸಿದವು. ಆಗ ಪದ್ಮಣ್ಣ ಸಾಕಾಗಿ ಬಂದು ನಿಂತುಬಿಟ್ಟನು. ಆ

ಕುರಿಗಳು ನಮ್ಮನ್ನು 'ರಕ್ಷಿಸು' ಎಂಬಂತೆ ಸುತ್ತುವರಿದು ಅವನನ್ನೇ ನೋಡುತ್ತಾ ಅರಚುತ್ತಿದ್ದವು. ಆಗ ಪದ್ಮಣ್ಣ ಏನು ಮಾಡಲು ತೋಚದೇ ಪರಮೇಶ್ವರನನ್ನು ಪ್ರಾರ್ಥಿಸಿದನು. ಆಗ ಪರಮೇಶ್ವರನು ಪ್ರತ್ಯಕ್ಷನಾಗಿ ಭೃಂಗಿಯ ಶಾಪದಿಂದ ದೇವತೆಗಳೇ ಕುರಿಗಳಾಗಿರುವರೆಂದೂ ಅವರನ್ನು ಕಾಪಾಡುವುದ ಕ್ಕಾಗಿಯೇ ನನ್ನ ಅಂಶದಿಂದ ನೀನು ಹುಟ್ಟಿರುವಿಯೆಂದು ಸುಖವಾಗಿ ಬಾಳಿರೆಂದು ಹರಸಿ ಅಂತರ್ಧಾನ ವಾದನು.

ಹೀಗೆ ಪದ್ಮಗೊಂಡನು ಅರಣ್ಯದಲ್ಲಿ ಕುರಿಗಳನ್ನು ಮೇಯಿಸುತ್ತಿದ್ದಾಗ ದೂರದಿಂದ ಹೊಗೆ ಬರುತ್ತಿರುವುದನ್ನು ಕಂಡು ಕುತೂಹಲಭರಿತನಾಗಿ ಅಲ್ಲಿಗೆ ಹೋಗಿ ನೋಡಿದಾಗ ಗುಹೆಯಲ್ಲಿ ಒಬ್ಬ ಸುಂದರ ಕನ್ಯೆ ಇದ್ದಳು. ಒಬ್ಬ ರಾಕ್ಷಸ ಅಪಹರಿಸಿಕೊಂಡು ಬಂದಿದ್ದಾನೆಂದೂ ಬಂಧನ ಬಿಡಿಸಿ ನನ್ನನ್ನು ವಿವಾಹವಾಗೆಂದು ಅವಳು ಗೋಗರೆಯುತ್ತಾಳೆ. ಆಗ ಪದ್ಮಣ್ಣ ಇಷ್ಟದೈವವನ್ನು ಧ್ಯಾನಿಸುತ್ತಾನೆ. ಪಾರ್ವತಿ–ಪರಮೇಶ್ವರರು ಪ್ರತ್ಯಕ್ಷರಾಗಿ ಅವರಿಬ್ಬರಿಗೂ ಮದುವೆ ಮಾಡಿದರು. ವಿವಾಹ ಸಮಯದಲ್ಲಿ ಕುರಿಯ ಉಣ್ಣೆಯಿಂದ ದಾರವನ್ನು ಪಾರ್ವತಿಯ ಕೊರಳಲ್ಲಿದ್ದ ಅರಿಷಿಣವನ್ನು ಅದಕ್ಕೆ ಕಟ್ಟಿಕಂಕಣವನ್ನು ಕಟ್ಟಿದರು. ಅಂದಿನಿಂದ ಪದ್ಮಣ್ಣ ವಂಶದವರಿಗೆ ಉಣ್ಣೆಕಂಕಣದವರೆಂದೂ ಅವನ ಅಣ್ಣಂದಿರ ವಂಶದವರಿಗೆ ಹತ್ತಿಕಂಕಣದವರೆಂದು ಹೆಸರಾಗಿ ಎರಡು ಪಂಗಡಗಳಾದವು[೨೦] ಎಂದು ಹನುಮಂತಯ್ಯನವರು ಹೇಳಿದ್ದಾರೆ.

ಇದೇ ವಿಚಾರವನ್ನು ಚಂದ್ರಕಾಂತ ಬಿಜ್ಜರಗಿಯವರು ಇನ್ನೊಂದು ರೀತಿಯಲ್ಲಿ ಹೇಳುತ್ತಾರೆ. ಇಬ್ಬರು ಅಣ್ಣತಮ್ಮಂದಿರಲ್ಲಿ ಒಬ್ಬ ಕುರಿ ಕಾಯುತ್ತಾ ಅಡವಿಯಲ್ಲಿ ಉಳಿದ. ಇನ್ನೊಬ್ಬ ಒಕ್ಕಲು ಮಾಡುತ್ತ ಹಳ್ಳಿಯಲ್ಲಿ ಉಳಿದ. ಕಾಡಿನಲ್ಲಿರುವವನ ಮದುವೆಯ ಸಂದರ್ಭದಲ್ಲಿ ಉಣ್ಣೆಯ ನೂಲಿನ ಸುರಗಿ ಸುತ್ತಿದರು. ಹಳ್ಳಿಯಲ್ಲಿರುವವನ ಮದುವೆಯ ಸಮಯದಲ್ಲಿ ಉಣ್ಣೆಯ ನೂಲು ಸಿಗಲಿಲ್ಲ. ಹತ್ತಿಯ ನೂಲಿನ ಸುರಗಿ ಸುತ್ತಿ ಹತ್ತಿಯ ಕಂಕಣವನ್ನು ಕಟ್ಟಿದರು. ಇದರಿಂದಾಗಿ ಅಡವಿಯಲ್ಲಿರುವವನ ಸಂತತಿಯುವರು ಉಣ್ಣೆಕಂಕಣದವರಾದರು. ಹಳ್ಳಿಯಲ್ಲಿರುವವನ ಸಂತತಿಯುವರು ಹತ್ತಿಕಂಕಣದವರಾದರು ಎನ್ನುವುದನ್ನು ಬಿ.ಜಿ.ಬಿರಾದಾರ ಅವರು ಪ್ರಸ್ತಾಪಿಸಿದ್ದಾರೆ.[೨೧]

ಇನ್ನೊಂದು ಕಥೆಯ ಪ್ರಕಾರ ಕುರುಬರ ಮೂಲಪುರುಷನಾದ ಉಂಡಾಡು ಪದ್ಮಣ್ಣನಿಗೆ ಇಬ್ಬರು ಹೆಂಡತಿಯರಿದ್ದರು. ಹಿರಿಯ ಹೆಂಡತಿ ಲಿಂಗಮ್ಮನ ಮಕ್ಕಳು ಹತ್ತಿಕಂಕಣದವರೆಂದು ಕರೆಯಲ್ಪಟ್ಟರೆ ಎರಡನೆಯ ಹೆಂಡತಿ ಶುಚಿಲಾದೇವಿಯ ಮಕ್ಕಳು ಉಣ್ಣೆಕಂಕಣದವರೆಂದು ಕರೆಯಲ್ಪಟ್ಟರು. ಮೊದಲನೆಯ ಹೆಂಡತಿಯ ಮಕ್ಕಳು ಊರಲ್ಲಿ ವಾಸಿಸುತ್ತಿದ್ದರಿಂದ ಊರು ಕುರುಬರೆಂದು ಕರೆಯಲ್ಪಟ್ಟರೆ, ಎರಡನೆಯ ಹೆಂಡತಿಯ ಮಕ್ಕಳು ಕಾಡಿನಲ್ಲಿ ಕುರಿ ಕಾಯುತ್ತಿದ್ದರಿಂದ ಕಾಡುಕುರುಬರೆಂದು ಕರೆಯಲ್ಪಟ್ಟರು. ಉಣ್ಣೆಕಂಕಣ ಮತ್ತು ಹತ್ತಿಕಂಕಣದವರು ಸವತಿ ಮಕ್ಕಳಾದ್ದರಿಂದ

ಇವರ ನಡುವೆ ವಿವಾಹ ನಡೆಯುವುದಿಲ್ಲ. ಕಾಲಾನಂತರ ಹತ್ತಿಕಂಕಣದಲ್ಲಿ ಹಂಡೆಕುರುಬ ಮತ್ತು ಬಂಡೆಕುರುಬರು ಎಂದು ಎರಡು ಪಂಗಡಗಳಾದವು. ಹಾಗೆಯೇ ಉಣ್ಣೆಕಂಕಣದಲ್ಲಿ ಝುಂಡೆ ಕುರುಬರು ಮತ್ತು ಡಂಗೆ ಕುರುಬರು ಎಂದು ಎರಡು ಪಂಗಡಗಳಾದವು.[೨೩] ಹೀಗೆ ಇವರ ವಂಶ ಬೆಳೆಯುತ್ತಾ ಅನೇಕ ಕುಲಗೋತ್ರಗಳಾದವು. ಈ ಕುಲಗೋತ್ರಗಳ ಆಧಾರದ ಮೇಲೆ ಇಂದಿಗೂ ವಿವಾಹ ಸಂಬಂಧ ವೇರ್ಪಡುತ್ತಿರುವುದು ಕಂಡುಬರುತ್ತದೆ.

ಡಾ. ಕೆ.ಎಂ. ಮೇತ್ರಿಯವರು ಹಾಲುಮತ ಪುರಾಣಗಳಲ್ಲಿಯ ವಿಭಿನ್ನ ಪಾಠಾಂತರಗಳು ಕುರುಬ ಜನಾಂಗದ ಮೂಲವನ್ನು ಅರಿಯಲು ಆಕರಗಳಾಗಿವೆ ಎಂದು ಹೇಳುತ್ತಾ ಆದಿಗೊಂಡ ಆದಮ್ಮರಿಂದ ಗೊಂಡ ಕುರುಬರ ಉಗಮವು ಶಿವಪಾರ್ವತಿಯರ ಆಶಯದ ಮೇರೆಗೆ ನೆರವೇರಿಸುವುದು, ಕೃಷಿ ಶಿವಪದ್ಮರಿಂದ ಕುರಿಗಳನ್ನು ಶೋಧಿಸುವುದು ಹಾಗೂ ಪಾಲಿಸುವುದು, ಉಣ್ಣೆ ಹಾಗೂ ಹತ್ತಿಕಂಕಣಗಳೆಂಬ ಭೇದ ಕಲ್ಪಿಸಿ ಜನಾಂಗ ಒಡೆಯುವುದು, ಉಣ್ಣೆ ಕನಿಷ್ಠ ಎಂದು ಹತ್ತಿ ಶ್ರೇಷ್ಠ ಎಂದು ನಂಬಿಸಿ ಭೇದಭಾವಕ್ಕೆ ನೀರೆರೆಯುವುದು, ಬೀರೇಶ್ವರನನ್ನು ಸಾಂಸ್ಕೃತಿಕ ವೀರನನ್ನಾಗಿ ರೂಢಿಸುವುದು ಇತ್ಯಾದಿಗಳೆಲ್ಲವೂ ವೀರಶೈವ ಮತ ಪ್ರೇರಿತ ಹತ್ತಿಕಂಕಣದ ಹೆಗಳಿಕೆಗೆ ಒಳಗಾದ ಲೇಖಕರ ಅಥವಾ ಕವಿಗಳ ಕಲ್ಪಿತ ರೂಪವಾಗಿರುವುದು. ಇದರಿಂದ ಕುರುಬ ಜನಾಂಗದ ಮೂಲ ಇತಿಹಾಸ ಮರೆಮಾಚಿದಂತಾಗಿದೆ. ಕುರಿ, ಉಣ್ಣೆ, ಉಣ್ಣೆಕಂಕಣ ಇವು ಕುರುಬರ ಕುರುಹುಗಳು. ಕೃಷಿ, ಹತ್ತಿ, ಹತ್ತಿಕಂಕಣ ಇವು ಕುರಿಗಾರಿಕೆಯಿಂದ ಕೃಷಿಗೆ ಕೂಡಿಕೊಂಡವರ ಕುರುಹುಗಳು. ಹಾಗೆಂದು ಕೃಷಿಕರು ಕುರುಬರಲ್ಲ ಎಂದರ್ಥವಲ್ಲ, ಅವರ ಮೂಲವು ಕುರಿಗಾರಿಕೆಯೇ ಆಗಿರುವುದು. ಆದರೆ ಕೃಷಿಗೆ ಕೂಡಿಕೊಂಡ ಕುರುಬರು ಕುರಿಪಾಲನೆ ಕನಿಷ್ಠವೆಂದು ಬಗೆದು ಕುರಿಪಾಲಕರನ್ನು ಕೀಳಾಗಿ ಕಂಡರು. ಕುರಿಗೆ ಬದಲಾಗಿ ನಂದಿಗೆ ಅಗ್ರಸ್ಥಾನ ನೀಡುತ್ತಾ ಅಜಪ ಮಂತ್ರದ ಬದಲಾಗಿ ಅಜಪ ಗಾಯಿತ್ರಿಗೆ(ಕುರಿ–ದನ) ಮಹತ್ವ ನೀಡುತ್ತಾ ಕೊನೆಗೆ ಅಜಪ ಮಂತ್ರದ ಬದಲಾಗಿ ಗಾಯತ್ರಿ ಮಂತ್ರಕ್ಕೆ ಅಗ್ರಸ್ಥಾನ ನೀಡಿದರು. ಕುರಿಗೆ ಉಚ್ಚ ಎಂಬ ಪಟ್ಟ ಕಟ್ಟಿದರೆ ಎಮ್ಮೆಯ ಕೊರಳಿಗೆ ಚಪ್ಪಲಿ ಕಟ್ಟಿದರು. ಕೃಷಿಯ ಜೀವಾಳದಿಂದ ನಂದಿಯನ್ನು ಪೂಜಿಸತೊಡಗಿದರು. ಇಲ್ಲಿ ಸಂಸ್ಕೃತೀಕರಣದ ಪ್ರಭಾವ ಕಂಡುಬರುವುದು. ಆದರೂ ಕುರಿ ಮತ್ತು ಕೋಣಗಳು ದೇವತೆಗಳು ಬಲಿಗೊಂಡ ಪವಿತ್ರ ಎಡೆಗಳಾಗುತ್ತವೆ. ಕೃಷಿಕರ ಪಳೆಯುಳಿಕೆಗಾಗಿ ಅಲ್ಲಲ್ಲಿ ಕುರಿ, ಕುರುಬ ಇವು ಪವಿತ್ರ ಹಾಗೂ ಸತ್ಯದ ಪ್ರತೀಕವೆಂದು ಭಾವಿಸಿ ಸಂದರ್ಭೋಚಿತವಾಗಿ ಗೌರವಿಸಲಾಗಿದೆ. ಇವು ಕುರುಬರ ಕುರುಹುಗಳಾಗಿವೆ[೨೪] ಎಂದು ಹೇಳುತ್ತಾರೆ.

ಇವರ ಹೇಳಿಕೆಯನ್ನು ಗಮನಿಸಿದಾಗ ಕುರುಬರು ಮೂಲದಲ್ಲಿ ಒಂದೇ ಜನಾಂಗವಾಗಿದ್ದು ಅವರೆಲ್ಲರೂ ಉಣ್ಣೆ ಕಂಕಣದವರಾಗಿದ್ದರೆಂಬುದು ಸ್ಪಷ್ಟ. ಏಕೆಂದರೆ ಕುರಿಸಾಕಣೆ ಕುರಿಯಿಂದ ಉಣ್ಣೆಯನ್ನು ತೆಗೆದು ನೂಲು ತಯಾರಿಸುವುದು, ಕಂಬಳಿ ಮುಂತಾದ ವಸ್ತುಗಳನ್ನು ತಯಾರಿಸುತ್ತಿದ್ದರು

ಎಂಬುದು ಉಣ್ಣೆ ಕಂಕಣದ ಸಾಂಕೇತಿಕ ವಸ್ತ್ರಗಳನ್ನು ತಯಾರಿಸುತ್ತಿದ್ದರು ಎಂಬುದು ಉಣ್ಣೆ ಕಂಕಣದ ಸಾಂಕೇತಿಕ ಕಲೆಯನ್ನು ಹೇಳುತ್ತದೆ. ಹೀಗೆ ಪಶುಪಾಲನೆಯಲ್ಲಿ ತೊಡಗಿದ್ದ ಕುರುಬರು ಮುಂದಿನ ಕಾಲಘಟ್ಟದಲ್ಲಿ ಕೃಷಿಗೆ ತೊಡಗಿಕೊಂಡದ್ದು, ಕೃಷಿಯ ಪ್ರಧಾನತೆಯು ಪಡೆದುಕೊಂಡಿರುವುದು ಸಂಕೇತವಾಗಿ ಕಾಣುತ್ತದೆ. ಅದೂ ಅಲ್ಲದೆ ಹತ್ತಿಯ ನೂಲು ಉಣ್ಣೆಯ ನೂಲಿಗಿಂತಲೂ ಸುಂದರವಾಗಿ ಆಕರ್ಷಕವಾಗಿ ಕಾಣುವುದು. ಅನ್ಯ ಧರ್ಮಗಳ ಪ್ರಭಾವವೂ ಹತ್ತಿಕಂಕಣ ಧರಿಸುವುದಕ್ಕೆ ಕಾರಣವಾಗಿದೆ. ಈ ದೃಷ್ಟಿಯಿಂದ ಉಣ್ಣೆಕಂಕಣವು ಪ್ರಾಚೀನವಾದುದು, ಹತ್ತಿಕಂಕಣ ಅರ್ವಾಚೀನವಾದುದು ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಹನುಮಂತಯ್ಯನವರು ಉಣ್ಣೆಕಂಕಣದವರನ್ನು ಹಳೆಕುರುಬರೆಂದೂ, ಹತ್ತಿಕಂಕಣದವರನ್ನು ಹೊಸಕುರುಬರೆಂದು ಹೇಳಿರುವುದು ಸ್ಪಷ್ಟವಾಗುತ್ತದೆ.

ಹತ್ತಿಕಂಕಣದವರು ಮತ್ತು ಉಣ್ಣೆಕಂಕಣದವರು ಇವರಲ್ಲಿ ಯಾರು ಮೊದಲು ಎಂಬ ಪ್ರಶ್ನೆ ಕಾಡುತ್ತದೆ. ಪುರಾಣಗಳಲ್ಲಿ ಹತ್ತಿಕಂಕಣದ ಕುರುಬರು ಮೊದಲಿಗರೆಂದು ಹೇಳಲ್ಪಟ್ಟಿದೆ. ಕುಟುಂಬದ ಬದುಕಿನ ಚಿತ್ರಣದ ಆಧಾರದ ಅನುಭವದಿಂದ ಉಣ್ಣೆಕಂಕಣದ ಕುರುಬರೇ ಮೊದಲಿಗರೆಂದು ಹೇಳುವರು. ಆದರೆ ಇದೊಂದು ಕಲ್ಪಿತ ಕತೆಯಾಗಿರುವುದೆಂದು ವಿದ್ವಾಂಸರು ತರ್ಕಿಸುತ್ತಾರೆ.

ಶಂಬಾ ಜೋಶಿಯವರ ಪ್ರಕಾರ ಹತ್ತಿಗಿಂತ ಮೊದಲು ಉಣ್ಣೆಯೆಂಬುದು ಗೊತ್ತಿರುವ ಸಂಗತಿ. ಒಕ್ಕಲುತನವು ಗೊತ್ತಾದ ಬಳಿಕ ಕಾಡುಹತ್ತಿಯ ಗಿಡಗಳು ದೊರೆತ ನಂತರ ಅದು ಮನುಷ್ಯನಿಗೆ ತಿಳಿಯಿತು. ಅಲ್ಲಿಯವರೆಗೆ ಹಟ್ಟಿಕಾರ, ದನಗಾರನಾಗಿದ್ದಾಗ ಸುಲಭವಾಗಿ ಸಿಕ್ಕುವ ಉಣ್ಣೆಯಿಂದ ಬಟ್ಟೆಯನ್ನು ಮಾಡಿಕೊಳ್ಳುವ ಬಗೆಯನ್ನು ಮನುಷ್ಯನು ಮೊಟ್ಟಮೊದಲಿಗೆ ಕಲಿತಿರಬೇಕು. ಆದುದರಿಂದ ಮೊಟ್ಟಮೊದಲಿಗೆ ಉಣ್ಣೆಕಂಕಣದವರು, ನಂತರ ಹತ್ತಿ ಕಂಕಣದವರು ಎಂಬುದು ಅವರ ಅಭಿಪ್ರಾಯವಾಗಿದೆ.[೨೫]

ಕುರುಬರು ಜೈನ, ಬೌದ್ಧ ಧರ್ಮವನ್ನು ಸ್ವಿಕರಿಸಿ ಕದಂಬ, ಪಲ್ಲವರೆಂಬ ಹೆಸರು ಪಡೆದ ಮೇಲೆ "ಅಹಿಂಸಾ ಪರಮೋಧರ್ಮಃ" ಎಂಬ ತತ್ವವನ್ನು ಅನುಸರಿಸಿ ಉಣ್ಣೆಯ ಸಂಗ್ರಹದಿಂದ ಪ್ರಾಣಿ ಹಿಂಸೆಯಾಗಬಹುದು ಎಂಬ ಅಭಿಪ್ರಾಯದಿಂದ ಇವರು ಹತ್ತಿಕಂಕಣವನ್ನು ಕಟ್ಟಲಾರಂಭಿಸಿದರು. ಬೌದ್ಧ, ಜೈನ ಧರ್ಮಗಳಲ್ಲಿ ಈ ಪದ್ಧತಿ ರೂಢಿಯಲ್ಲಿರುವುದು. ಉಳಿದವರು ಉಣ್ಣೆಕಂಕಣ ಕಟ್ಟುತ್ತಾ ಬಂದರು. ಇದರಿಂದ ಹತ್ತಿಕಂಕಣದವರು ಮತ್ತು ಉಣ್ಣೆಕಂಕಣದವರು ಎಂಬ ಭಾಗಗಳಾಗಿವೆ ಎಂದು ಹನುಮಂತಯ್ಯನವರು ಹೇಳಿದ್ದಾರೆ.[೨೬] ಈ ಎರಡು ಪಂಗಡಗಳ ಜೊತೆಗೆ ಹಾಲುಮತ, ಕಂಬಳಿ ಕುರುಬರು, ಕನಕಯ್ಯನ ಜಾತಿಯವರು, ಪ್ರಥಮ ಶೂದ್ರ, ಇಂದ್ರಶೂದ್ರರು, ಹಂಡೆಕುರುಬರು, ಒಡೇರು, ಗೊರವಯ್ಯಗಳು, ದಾಸಯ್ಯಗಳು, ವಾರದ ಕುರುಬರು ಮೊದಲಾದ ಉಪಪಂಗಡಗಳಿವೆ ಎಂದು ಕುರುಬರ ಚರಿತ್ರೆಯಲ್ಲಿ ಅವುಗಳನ್ನು ಹಂತ–ಹಂತವಾಗಿ ಪರಿಚಯಿಸುತ್ತಾ ಹೋಗಿದ್ದಾರೆ.

ಎಂ.ಎಂ. ಕಲಬುರ್ಗಿ ಅವರು ಲಿಂಗಾಯತ(ಉಪಪಂಗಡಗಳ ದಾಖಲೀಕರಣ, ೨೦೦೯) ಕೃತಿಯಲ್ಲಿ ಲಿಂಗಾಯತ ಸಮುದಾಯದ ಮೂವತ್ತೈದು ಉಪಪಂಗಡಗಳನ್ನು ಹಲವು ವಿದ್ವಾಂಸರ ನೆರವಿನಿಂದ ಕೈಗೊಂಡಿದ್ದಾರೆ.

ಈ ಕೃತಿಯ ಹೊರಸುತ್ತಿನ ಲಿಂಗಾಯತರು ಪಟ್ಟಿಯಲ್ಲಿ ಡಾ. ಎಫ್.ಟಿ.ಹಳ್ಳಿಕೇರಿ ಅವರ ಕುರುಬ ಲಿಂಗಾಯಿತರು ಎಂಬ ಲೇಖನದಲ್ಲಿ ಈ ನೆಲದ ಮೂಲನಿವಾಸಿಗಳು ಬೇಟೆ ಸಂಸ್ಕೃತಿ, ಪಶುಪಾಲನಾ ಸಂಸ್ಕೃತಿ ಮತ್ತು ಕೃಷಿ ಸಂಸ್ಕೃತಿ ಹೀಗೆ ಈ ಮೂರು ಘಟ್ಟದಲ್ಲಿ ಪಶುಪಾಲನಾ ಸಂಸ್ಕೃತಿ ಮಹತ್ವದ ಪಾತ್ರ ವಹಿಸಿರುವುದು ಆಕರಗಳಿಂದ ದೃಢಪಟ್ಟಿದೆ. ರೇವಣಸಿದ್ಧೇಶ್ವರ, ಸಿದ್ಧೇಶ್ವರ, ಅಮೋಘಸಿದ್ಧೇಶ್ವರ, ಬೀರೇಶ್ವರ, ಗೊಲ್ಲಾಳೇಶ್ವರ ಮೊದಲಾದವರು ಈ ಸಮಾಜದ ಆರಾಧ್ಯ ದೈವಗಳಾಗಿದ್ದಾರೆ. ಹೀಗಾಗಿ ಇವರು ಶೈವಸಂಪ್ರದಾಯದವರೆಂಬುದು, ಶಿವನಾರಾಧಕರು ಎಂಬುದು ಸ್ಪಷ್ಟ. ಕುರುಬರಿಗೂ ಲಿಂಗಾಯತರಿಗೂ ಕೆಲವು ಆಚರಣೆಗಳಲ್ಲಿ ಸಮಾನತೆ ಕಂಡುಬರುತ್ತದೆ. ಕುರುಬರ ದೇವತೆಯ ಬೀರಪ್ಪನ ಪರಿಷ್ಕೃತ ರೂಪವೇ ಲಿಂಗಾಯತರಲ್ಲಿ ವೀರಣ್ಣ ದೇವರೆಂದು ವಿದ್ವಾಂಸರು ಹೇಳುತ್ತಾರೆ. ಲಿಂಗಾಯಿತರ ಪುರವಂತರಂತೆ, ಕುರುಬರಲ್ಲಿ ವೀರಗಾರರು ಕಂಡುಬರುತ್ತಿದ್ದು ಜಾತ್ರೆ, ಉತ್ಸವಗಳಂಥ ಮಂಗಳಕಾರ್ಯಗಳಲ್ಲಿ ಇವರಿಬ್ಬರ ವೇಷಭೂಷಣ, ಆಯುಧ, ಕುಣಿತ, ಘೋಷಣೆಗಳಲ್ಲಿ ತುಂಬಾ ಸಾಮ್ಯತೆಗಳಿರುವುದನ್ನು ಕಾಣಬಹುದು. ಜನನ, ನಾಮಕರಣ, ಮದುವೆ, ಮರಣ ಇತ್ಯಾದಿ ಸಂಸ್ಕಾರಗಳಲ್ಲಿಯೂ ಪರಸ್ಪರ ಹೋಲುವಂಥ ಆಚರಣೆಗಳಿವೆ. ಇಷ್ಟೇ ಅಲ್ಲದೇ ಕುರುಬರ ಉಪಪಂಗಡಗಳಾದ ಒಡೆಯರು, ಹಂಡೆಕುರುಬರು, ಲಿಂಗಾಯಿತರಂತೆ ಬದುಕುತ್ತಿದ್ದಾರೆ. ದೊಡ್ಡಬಳ್ಳಾಪುರ ಹತ್ತಿರದ ಕುರುಬರಹಳ್ಳಿ ಹೆಸರಿನ ಗ್ರಾಮದಲ್ಲಿ ಎಲ್ಲರೂ ಲಿಂಗಾಯಿತರಿರುವುದು ಕುರುಬರು ಲಿಂಗಾಯಿತರಾಗಿ ಮತಾಂತರಗೊಂಡುದರ ಸೂಚನೆಯಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕುರುಬ ಮತ್ತು ಲಿಂಗಾಯತ ಸಮಾಜಗಳು ತುಂಬಾ ಹತ್ತಿರದ ಸಮಾಜಗಳಾಗಿವೆ ಎಂದು ಹೇಳುತ್ತಾ ಸಂಶೋಧಕರಾದ ಡಾ. ಎಂ.ಎಂ.ಕಲಬುರ್ಗಿ ಅವರು ಒಂದರ್ಥದಲ್ಲಿ ಕುರುಬ ಸಂಸ್ಕೃತಿಯ ಪರಿಷ್ಕೃತ ರೂಪವೇ ಶೈವ, ವೀರಶೈವ ಸಂಸ್ಕೃತಿಯಾಗಿದೆ ಎಂದಿರುವರು.[೨೭]

ಈ ಎರಡೂ ಸಮಾಜಗಳಲ್ಲಿ ಕಂಡುಬರುವ ಒಡೆಯರು, ಮಂಕ ಒಡೆಯರ ಸಂಪ್ರದಾಯ, ಶಾಂತ ಒಡೆಯರ ಸಂಪ್ರದಾಯ, ಒಡೆಯರ ಆಚರಣೆಗಳು ಮತ್ತು ಹಂಡೆಕುರುಬರ ಆಚರಣೆಗಳು, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಕುರುಬ ಮತ್ತು ಲಿಂಗಾಯತ ಸಮಾಜಗಳ ಸಂರಚನೆಯಲ್ಲಿ ಪರಸ್ಪರ ಪೂರಕವಾದ ಹೋಲಿಕೆಗಳಿರುವುದನ್ನು ತಿಳಿಸಿದ್ದಾರೆ.

ಶಂಬಾ ಜೋಶಿಯವರು ಹೇಳುವಂತೆ ವೀರಶೈವ ಲಿಂಗಾಯತ ಪಂಥ ಒಂದು ಪ್ರಸಾರಕ ಧರ್ಮವಾದ್ದರಿಂದ ಕುರುಬ, ರೆಡ್ಡಿ, ಒಕ್ಕಲಿಗರಂಥ ಅನೇಕ ಉಪಜಾತಿಗಳು ಆ ಧರ್ಮದಲ್ಲಿ ಸೇರಿಹೋದವು. ಲಿಂಗಾಯಿತ ಪಂಥದಲ್ಲಿ ಸೇರಿಹೋದ ಪ್ರಾಚೀನ ಜಾತಿಗಳು, ಜನರ ಹೆಸರು,

ಇಂದಿಗೂ ಅಸ್ಪಷ್ಟವಾಗಿ ಕೇಳಿಬರುತ್ತವೆ. ಅವುಗಳಲ್ಲಿ ತುರುಕಾರ(ದನಗರ)ರದೂ ಒಂದು ಉಪಜಾತಿಯಾಗಿದೆ. ಬೆಳವಡಿಯ ದೇಸಾಯಿಣಿ ಮಲ್ಲಮ್ಮ ವೀರ ತುರುಕಾರರ ಮನೆತನದವಳು. ಇದು ಅಲ್ಲಿಯ ಹಳೆಯ ದಫ್ತರುಗಳಲ್ಲಿ ನಮೂದಾಗಿದೆ. ಈ ತುರುಕಾರರು ಜಹಗೀರದಾರ, ದೇಸಾಯಿ, ಇವರೆಲ್ಲ ಪಾಟೀಲ ಗೌಡರ ಮನೆತನದವರು ಎಂದು ಬಿ.ಬಿ. ಪಾಟೀಲ ಅವರು ನಿರೂಪಿಸಿದ್ದಾರೆ.[೨೮]

ಡಾ. ಎಫ್.ಟಿ. ಹಳ್ಳಿಕೇರಿ ಅವರು ಕನ್ನಡ ವಿಶ್ವವಿದ್ಯಾಲಯದ 'ಹಾಲುಮತ ಅಧ್ಯಯನ ಪೀಠ'ದ ಅಡಿಯಲ್ಲಿ ಚಳ್ಳಕೆರೆಯಲ್ಲಿ ೨ನೆಯ ಹಾಲುಮತ ಸಂಸ್ಕೃತಿ ಸಮ್ಮೇಳನವನ್ನು ಏರ್ಪಡಿಸಿದ್ದರು. ಈ ಸಮ್ಮೇಳನದಲ್ಲಿ ವಿವಿಧ ವಿದ್ವಾಂಸರಿಂದ ಕುರುಬರ ಉಪಪಂಗಡಗಳ ಬಗೆಗೆ ಸಂಪ್ರಬಂಧಗಳು ಮಂಡಿಸಲ್ಪಟ್ಟವು. ಅವುಗಳನ್ನು ವ್ಯವಸ್ಥಿತವಾಗಿ ಹಾಲುಮತ ವ್ಯಾಸಂಗ ಸಂಪುಟ-೨(೨೦೦೯)ರಲ್ಲಿ ಅವರು ಸಂಪಾದಿಸಿದ್ದಾರೆ.

ಕಾಡುಕುರುಬ, ಅಲೆಮಾರಿಕುರುಬ, ಹತ್ತಿಕಂಕಣ, ಉಣ್ಣೆಕಂಕಣ ಕುರುಬರು, ಒಡೆಯರು, ಹಂಡೆಕುರುಬರು, ಧನಗರ ಗವಳಿಗರು, ಹೆಗ್ಗಡೆಯರವರು, ಗೊಂಡಕುರುಬರು, ಕುಡುವೊಕ್ಕಲಿಗರು, ಕುಂಚಟಿಗರು, ಗೊಲ್ಲರು, ನೊಣಬರು, ಕ್ರೈಸ್ತ ಕುರುಬರು, ದಾಸಕುರುಬರು, ಮತ್ತು ಝುಂಡೆ ಕುರುಬರು ಹೀಗೆ ಹದಿನೆಂಟು ಪಂಗಡಗಳು ಕುರುಬರ ಸಮುದಾಯದಲ್ಲಿವೆ. ಮೂಲ ಆಚರಣೆ, ಸಂಪ್ರದಾಯ, ಸಾಮಾಜಿಕ, ಧಾರ್ಮಿಕ, ಕೌಟುಂಬಿಕ, ಆರ್ಥಿಕ ಮೊದಲಾದ ವಿವರಗಳನ್ನು ಈ ಸಂಪ್ರಬಂಧಗಳು ಒಳಗೊಂಡಿವೆ. ಜನಪದ ವಿದ್ವಾಂಸರಾದ ಡಾ. ತೀ.ನಂ.ಶಂಕರನಾರಾಯಣ ಅವರು ಇವುಗಳನ್ನು ಅಧ್ಯಯನ ಮಾಡಿದರೆ ಕುರುಬರ ಉಪಜಾತಿಗಳ ಒಂದು ಸ್ಥೂಲವಾದ ಚಿತ್ರ ದೊರೆಯುತ್ತದೆ. ಇವು ಒಂದು ರೀತಿಯಲ್ಲಿ ಆರಂಭಿಕ ಸಮೀಕ್ಷೆ ರೂಪದಲ್ಲಿದ್ದು ಮುಂದಿನ ಅಧ್ಯಯನಗಳಿಗೆ ಒಳ್ಳೆಯ ತಳಹದಿ ಹಾಕಿತು ಎಂದು ಹೇಳಿರುವರು. ಜಾಗತೀಕರಣದ ಇಂದಿನ ದಿನಗಳಲ್ಲಿ ಕುರುಬ ಸಮುದಾಯ, ಅದರಲ್ಲಿನ ಉಪಜಾತಿಗಳು ಮತ್ತು ಬೆಡಗುಗಳು ಯಾವ ರೀತಿ ಮುಂದುವರೆಯಬೇಕು ಎಂಬುದರ ಬಗ್ಗೆಯೂ ಅಧ್ಯಯನಗಳು ನಡೆಯಬೇಕಾಗಿದೆ ಎಂದಿದ್ದಾರೆ.[೨೯] ಸಂಪಾದಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರು ಕುರುಬ ಸಮುದಾಯದಲ್ಲಿ ಪ್ರಮುಖವಾದ ನಾಲ್ಕು ಒಳಪಂಗಡಗಳಾದ ಹತ್ತಿಕಂಕಣ, ಉಣ್ಣೆಕಂಕಣ, ಹಂಡೆಕುರುಬರು ಮತ್ತು ಒಡೆಯರು ಎಂದು, ಇವುಗಳ ಜೊತೆಗೆ ಕಂಬಳಿ ಕುರುಬರು, ಕನಕಯ್ಯನ ಜಾತಿಯವರು, ಗೊರವಯ್ಯಗಳು, ಗೊಂಡರು, ವಾರದ ಕುರುಬರು, ಹೆಗ್ಗಡೆಗಳು ಹೀಗೆ ಮುಂತಾದ ಹೆಸರಿನ ಒಳಪಂಗಡಗಳನ್ನು ಕಾಣುತ್ತೇವೆ. ಅವೆಲ್ಲವೂ ಮೇಲೆ ವಿವರಿಸಿದ ಹತ್ತಿಕಂಕಣ ಮತ್ತು ಉಣ್ಣೆಕಂಕಣ ಪಂಗಡಗಳಿಗೆ ಸೇರಿದವರಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಎನ್ನುತ್ತಾರೆ.[೩೦]

ಎ.ಬಿ. ಬಾಳಪ್ಪ ಅವರ "ಕರ್ನಾಟಕ ಕುರುಬರ ಒಳಪಂಡಗಳು: ಸಾಂಸ್ಕೃತಿಕ ಅಧ್ಯಯನ" ಎಂಬ ಮಹಾಪ್ರಬಂಧದಲ್ಲಿ ಕರ್ನಾಟಕದ ಕುರುಬರ ಒಳಪಂಗಡಗಳಾದ ಕಾಡುಕುರುಬರು, ಜೇನುಕುರುಬರು, ಗೊಂಡಕುರುಬರು, ಅಲೆಮಾರಿ ಕುರುಬರು, ಹತ್ತಿಕಂಕಣ ಕುರುಬರು, ಉಣ್ಣೆಕಂಕಣ ಕುರುಬರು, ಹಂಡೆಕುರುಬರು, ಒಡೆಯರು, ದನಗಾರಗವಳಿಗ ಕುರುಬರು, ಕುಂಚಟಿಗ ಕುರುಬರು, ಕುಡುವೊಕ್ಕಲಿಗ ಕುರುಬರು, ಗೊಲ್ಲಕುರುಬರು, ಜಂಡೆ(ಝುಂಡೆ) ಕುರುಬರು, ಸಾಧುಕುರುಬರು, ಕ್ರೈಸ್ತಕುರುಬರು, ನೊಣಬರ ಕುರುಬರು, ಹೆಗ್ಗಡೆಕುರುಬರು, ಒಕ್ಕೈಕುರುಬರು, ಕಂಬಳಿ ಕುರುಬರು, ವಾರದ ಕುರುಬರು ಮತ್ತು ಇತರೆ ಒಳಪಂಗಡಗಳು ಎಂದು ೨೨ ಕುರುಬರ ಒಳಪಂಗಡಗಳನ್ನು ಹೆಸರಿಸಿದ್ದಾರೆ.

ಎ.ಬಿ. ಬಾಳಪ್ಪ ಅವರು ಕುರುಬ ಸಮುದಾಯದಲ್ಲಿ ಒಳಪಂಗಡಗಳಾಗಲು ಕಾರಣಗಲನ್ನು ಈ ರೀತಿ ಹೇಳಿದ್ದಾರೆ. ಪ್ರದೇಶ, ವಲಸೆ, ಮತಾಂತರ ಅಥವಾ ಜಾತ್ಯಂತರ, ವೃತ್ತಿ, ತಂತ್ರಜ್ಞಾನ, ಭಾಷೆ ಮಾತ್ರವಲ್ಲದೇ ವಿಭಿನ್ನ ಪ್ರದೇಶಗಳಲ್ಲಿ ವಾಸ ಮಾಡುವ ಒಂದೇ ಸಮುದಾಯದ ಜನರಲ್ಲಿ ಒಳಪಂಗಡಗಳು ಹುಟ್ಟಿಕೊಳ್ಳಲು ಸಾಧ್ಯತೆಗಳಿವೆ. ಆಧುನಿಕ ಪೂರ್ವದಲ್ಲಿ, ಸಂಪರ್ಕ ಸಾಧನಗಳ ಕೊರತೆಯ ಕಾಲದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಹೋಗಲು ಸಾಧ್ಯವಾಗದೆಯೂ ಒಳಪಂಗಡಗಳಾದವು. ಈ ರೀತಿಯಲ್ಲಿ ಸೃಷ್ಟಿಯಾದ ಒಳಪಂಗಡಗಳು ಪ್ರತ್ಯೇಕವಾಗಿ ಉಳಿದು ಭಿನ್ನ ರೀತಿಯ ಸಂಪ್ರದಾಯಗಳನ್ನು ರೂಪಿಸಿಕೊಂಡಿರಬಹುದು. ಒಂದು ಸಮುದಾಯದವರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಬಂದಾಗ, ವಲಸೆ ಬಂದವರನ್ನು ತಮ್ಮವರೆಂದು ಭಾವಿಸದೆಯೂ ಅಥವಾ ವಲಸೆ ಬಂದವರು ಸ್ಥಳೀಯರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೇ ಪ್ರತ್ಯೇಕವಾಗಿ ಉಳಿದಾಗಲೂ ಒಳಪಂಗಡಗಳಾಗಿರುವ ಸಂಭವವಿದೆ. ರಕ್ತಸಂಬಂಧದ ಕಾರಣವಾಗಿಯೂ ಒಳಪಂಗಡದ ರೀತಿಯನ್ನು ತಳ್ಳಿಹಾಕುವಂತಿಲ್ಲ. ಅಲ್ಲದೇ ಇವರಲ್ಲಿಯೇ ಶ್ರೇಷ್ಠತೆ ಮತ್ತು ಸೌಲಭ್ಯಗಳಿಗೋಸ್ಕರವಾಗಿ ಸಮುದಾಯದಲ್ಲಿ ಪ್ರತ್ಯೇಕತೆಯ ಭಾವನೆ ಕೆಲಸ ಮಾಡಿರಬಹುದು. ಕೆಲವೊಮ್ಮೆ ಆಹಾರದ ರಾಜಕಾರಣವು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೆ. ಒಂದೇ ಸಮುದಾಯದಲ್ಲಿ ಬೇರೆ ಬೇರೆ ಭಾಷೆ ಉಪಭಾಷೆಗಳನ್ನಾಡುವ ಗುಂಪುಗಳು ಪ್ರತ್ಯೇಕ ಒಳಪಂಗಡಗಳಾಗಿ ರೂಪುಗೊಳ್ಳುತ್ತವೆ.

ಒಡೆಯರು

ಒಡೆಯರು ಕುರುಬ ಸಮುದಾಯದ ಪ್ರಮುಖ ಉಪಪಂಗಡ. ಪುರೋಹಿತ ವರ್ಗವನ್ನು ಹೊಂದಿರುವ ಹಲವಾರು ಸಮುದಾಯಗಳಲ್ಲಿ ಕುರುಬ ಸಮುದಾಯವು ಒಂದು. ಕುರುಬರ ಪುರೋಹಿತ ವರ್ಗವನ್ನು 'ಒಡೆಯರು' ಎಂದು ಕರೆಯುತ್ತಾರೆ. ಒಡೆಯರು ಕುರುಬರ ಧಾರ್ಮಿಕ

ಹಾಗೂ ಸಾಮಾಜಿಕ ಸಂಸ್ಕಾರಗಳಲ್ಲಿ ದೀಕ್ಷೆ ನೀಡುವುದರಿಂದ ಕುರುಬರ ಕುಲಗುರುಗಳಾಗಿದ್ದಾರೆ. ಇವರು ಹನ್ನೆರಡನೆಯ ಶತಮಾನದಿಂದ ಅಸ್ತಿತ್ವಕ್ಕೆ ಬಂದರೆಂಬುದಕ್ಕೆ ಕಾವ್ಯ, ಪುರಾಣ ಹಾಗೂ ಶಾಸನಗಳಲ್ಲಿ ಪೂರಕ ಮಾಹಿತಿ ದೊರೆಯುತ್ತದೆ. ಇಂಥ ವಿಶಿಷ್ಟ ಪರಂಪರೆಯನ್ನು ಹೊಂದಿದ ಒಡೆಯರನ್ನು ಕುರಿತು ಮೊದಲ ಅಧ್ಯಯನ ಮಾಡಿದವರು ಸಂಶೋಧಕರಾದ ಎಂ. ಚಿದಾನಂದಮೂರ್ತಿ ಅವರು. ಐನೋರು ಮತ್ತು ಕಾಲಿಲ್ಲದ ಐನೋರು(ಗ್ರಾಮೀಣ ೧೯೭೭) ಹಾಗೂ ಕುರುಬ ಜಾತಿಯ ಒಡೆಯರು ಮತ್ತು ಒಡೇರಮ್ಮ(ಪಗರಣ ೧೯೮೪) ಎಂಬ ಎರಡು ಲೇಖನಗಳನ್ನು ಪ್ರಕಟಿಸುವುದರ ಮೂಲಕ 'ಒಡೆಯರ' ಸಮುದಾಯದ ಅಧ್ಯಯನಕ್ಕೆ ಶ್ರೀಕಾರ ಹಾಕಿದರು. ಈ ಎರಡು ಲೇಖನಗಳಲ್ಲಿ ಒಡೆಯರ ಮೂಲ ಆಚರಣೆ, ಸಂಪ್ರದಾಯಗಳನ್ನು ಚರ್ಚಿಸುತ್ತಾ "ಕಾಲಿಲ್ಲದ ಐನೋರು" ಎಂಬ ವಿಶಿಷ್ಟ ಸಂಪ್ರದಾಯಗಳ ಬಗೆಗೆ ದೀರ್ಘವಾಗಿ ವಿವರಿಸಿದ್ದಾರೆ.

ಒಡೇರಮ್ಮ ಎಂದರೆ ಒಡೆಯರ ಹೆಂಡತಿ, ಒಡೆಯರು ನಿಧನರಾದ ನಂತರ ಕುರುಬರು ನಡೆಸುತ್ತಿದ್ದ ಎಲ್ಲಾ ಧಾರ್ಮಿಕ ಕಾರ್ಯಗಳು ಇವಳ ನೇತೃತ್ವದಲ್ಲಿ ನಡೆಯುತ್ತವೆ. ವಿಧವೆಯಾದರೂ ಆಕೆ ಮುತ್ತೈದೆ. ಶುಭ ಸಂಕೇತಗಳಾದ ತಾಳಿ, ಬಳೆ, ಕುಂಕುಮಗಳನ್ನು ತೆಗೆಯುವಂತಿಲ್ಲ. ಕುರುಬ ಸಮಾಜವು ಮಹಿಳೆಗೆ ನೀಡಿದ ಈ ಸ್ಥಾನಮಾನವನ್ನು ವಿಶ್ವದ ಯಾವುದೇ ಸಮಾಜ ನೀಡಿಲ್ಲ ಎಂದು ಚಿದಾನಂದಮೂರ್ತಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ.

'ಒಡೆಯರು' ಉಪಪಂಗಡ ಕುರಿತು ಡಾ. ಎಫ್.ಟಿ. ಹಳ್ಳಿಕೇರಿ ಅವರು "ಕುರುಬರ ಗುರು ಒಡೆಯರು" ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಹಾಗೂ ಅನೇಕ ವಿದ್ವಾಂಸರು ಒಡೆಯರ ಸಮಗ್ರ ಪರಿಚಯವನ್ನು ಕೃತಿ ಮತ್ತು ಲೇಖನಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

"ರೇವಣಸಿದ್ಧೇಶ್ವರ, ಸಿದ್ಧರಾಮೇಶ್ವರ, ಅಮೋಘಸಿದ್ಧೇಶ್ವರ, ಬೀರೇಶ್ವರ, ಗೊಲ್ಲಾಳೇಶ್ವರ ಮೊದಲಾದವರು ಈ ಸಮಾಜದ ಆರಾಧ್ಯ ದೈವಗಳಾಗಿದ್ದಾರೆ. ಹೀಗಾಗಿ ಇವರು ಶೈವ ಸಂಪ್ರದಾಯದ ಶಿವನ ಆರಾಧಕರೆಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಇವರನ್ನು ಹಾಲುಮತದವರು ಎಂದು ಕರೆಯುತ್ತಾರೆ. ಕುರುಬರ ಗುರುಪರಂಪರೆಯಲ್ಲಿ ಮುಖ್ಯವಾಗಿ ಮೂರು ಸಂಪ್ರದಾಯಗಳಿವೆ. ಒಂದು ರೇವಣಸಿದ್ಧ, ಸಂಪ್ರದಾಯ ಇನ್ನೊಂದು ಸಿದ್ಧರಾಮ ಸಂಪ್ರದಾಯ, ಮತ್ತೊಂದು ಅಮೋಘಸಿದ್ಧ ಸಂಪ್ರದಾಯ. ಈ ಮೂರು ಸಂಪ್ರದಾಯಗಳ ಮುಂದುವರಿಕೆಯಾಗಿ ಒಡೆಯರು ಹೆಸರಿನ ಗುರುಗಳು ಕರ್ನಾಟಕದಾದ್ಯಂತ ಇದ್ದಾರೆ"[೧] ಎಂದು ಹೇಳಿದ್ದಾರೆ.

ಹಾಗೇನೇ ಇವರು "ಕುರುಬರ ಗುರುಪರಂಪರೆಯಲ್ಲಿ ಮುಖ್ಯವಾಗಿ ರೇವಣಸಿದ್ಧ, ಸಿದ್ಧರಾಮ ಮತ್ತು ಅಮೋಘಸಿದ್ಧ ಎಂಬ ಮೂರು ಸಂಪ್ರದಾಯಗಳಿವೆ. ಈ ಮೂರು ಸಂಪ್ರದಾಯಗಳ

ಮುಂದುವರಿಕೆಯಾಗಿ 'ಒಡೆಯರು' ಹೆಸರಿನ ಗುರುಗಳು ಪ್ರಾಚೀನ ಕಾಲದಿಂದಲೂ ದಕ್ಷಿಣ ಭಾರತದಾದ್ಯಂತ ಕುರುಬ ಸಮುದಾಯದಲ್ಲಿದ್ದಾರೆ. ಈ ಸಮಾಜವು ತನ್ನ ಎಲ್ಲ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಇವರ ನೇತೃತ್ವದಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ. ಜನನ, ನಾಮಕರಣ, ಮದುವೆ ಮರಣಗಳಂಥ ಎಲ್ಲಾ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಒಡೆಯರು ಜಂಗಮರಂತೆ ನಿಂತು ಪೌರೋಹಿತ್ಯವನ್ನು ನಡೆಸಿಕೊಡುತ್ತಾರೆ. ಇವರಿಗೆ ಪರ್ಯಾಯವಾಗಿ ಕುಲಗುರುಗಳು, ಅಯ್ನೋರು, ಗುರುವಿನವರು ಎಂದು ಕರೆಯಲಾಗುತ್ತಿದೆ. ಹೀಗಾಗಿ ಕುರುಬ ಸಮಾಜದಲ್ಲಿ ಇವರಿಗೆ ಉನ್ನತವಾದ ಗೌರವ ಸ್ಥಾನವಿದೆ"[೩೨] ಎಂದು ಹೇಳುತ್ತಾರೆ.

ಡಾ. ಬಿ.ಜಿ. ಬಿರಾದಾರ ಅವರು ಕುರುಬರ ಒಳಪಂಗಡಗಳನ್ನು ಕುರಿತು ಮೂಲದಲ್ಲಿ ಒಂದೇ ಜನಾಂಗವಾಗಿದ್ದ ಕುರುಬರು ನಂತರದಲ್ಲಿ ಹಲವಾರು ಒಳಪಂಗಡಗಳಾಗಿ ವಿಭಜನೆಗೊಂಡಂತೆ ಕಂಡುಬರುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಹತ್ತಿಕಂಕಣದ ಕುರುಬರು, ಉಣ್ಣೆಕಂಕಣದ ಕುರುಬರು, ಮಿಶ್ರಕಂಕಣದವರು, ಹಂಡೆಕುರುಬರು ಕಂಬಳಿ ಕುರುಬರು, ಕನಕಯ್ಯನ ಜಾತಿಯವರು, ವಾರದ ಕುರುಬರು ಮತ್ತು ಒಡೆಯರು ಮುಂತಾದವುಗಳನ್ನು ಹೆಸರಿಸಬಹುದು. ಇಷ್ಟೆಲ್ಲಾ ಒಳಪಂಡಗಳಿದ್ದರೂ ಸಹಿತ ಕುರುಬರಲ್ಲಿ ಪ್ರಮುಖವಾಗಿ ಮೂರು ಒಳಪಂಗಡಗಳನ್ನು ಗುರುತಿಸಬಹುದು. ಅವು ಹತ್ತಿಕಂಕಣ ಕುರುಬರು, ಉಣ್ಣೆಕಂಕಣದ ಕುರುಬರು, ಮತ್ತು ಹಂಡೆ ಕುರುಬರು ಅಥವಾ ಅಂಡೇ ವಜೀರರು ಇವು ಮುಖ್ಯವಾದವು ಎಂದು ಹೇಳಿದ್ದಾರೆ.[೩೩]

ಅಲೆಮಾರಿ ಕುರುಬರು

ಕುರುಬರು ಕುರಿಗಳ ಪಾಲನೆ ಪೋಷಣೆಗಾಗಿ ಒಂದೂರಿನಿಂದ ಮತ್ತೊಂದು ಊರಿಗೆ ತಮ್ಮ ಕುರಿಮಂದಿಯೊಂದಿಗೆ ಕುಟುಂಬ ಸಮೇತರಾಗಿ ಸಂಚರಿಸುತ್ತಾರೆ. ಅಂಥ ಕುರುಬರಿಗೆ 'ಅಲೆಮಾರಿ ಕುರುಬರು' ಎಂದು ಕರೆಯುತ್ತಾರೆ. ಇವರು ಮೂಲತಃ ಬೆಳಗಾವಿ ಜಿಲ್ಲೆಯ ನಿಪ್ಪಾಣಿ, ಸಂಕೇಶ್ವರ, ಚಿಕ್ಕೋಡಿ ತಾಲೂಕಿನ ಕುರುಬರಲ್ಲಿ ಬಹುತೇಕರು 'ಅಲೆಮಾರಿ'ಗಳಾಗಿದ್ದಾರೆ. ಇವರು ತಮ್ಮ ಕುರಿಮಂದಿಗಳೊಂದಿಗೆ ಆಹಾರ, ನೀರು ಹುಡುಕುತ್ತಾ ವರ್ಷಾನುಗಟ್ಟಲೆ ಪ್ರಯಾಣ ಮಾಡುತ್ತಾರೆ. ಇಂಥ ಅಲೆಮಾರಿಗಳಾಗಿದ್ದ ಕುರಬರನ್ನು ಕುರಿತು ಡಾ. ಯರ‍್ರಪ್ಪ ಅವರು ತಮ್ಮ ಈ ಪ್ರಬಂಧದಲ್ಲಿ ಸಮಗ್ರವಾಗಿ ಪರಿಚಯಿಸಿದ್ದಾರೆ.

ಡಾ. ಯರ‍್ರಪ್ಪ ಅವರು ಕುರುಬರ ಉಪಪಂಗಡಗಳನ್ನು ಕುರಿತು "ಅಲೆಮಾರಿ ಕುರುಬ ಸಮುದಾಯವನ್ನು ಮೂರು ಬಗೆಯಾಗಿ ವರ್ಗೀಕರಿಸಲಾಗುವುದು, ಅವೆಂದರೆ ಉಣ್ಣೆಕಂಕಣದವರು, ಹತ್ತಿಕಂಕಣದವರು ಹಾಗೂ ಹಂಡೆ ಕುರುಬರು" ಎಂದು ಹೇಳಿದ್ದಾರೆ. ಇವರೇ ಮುಂದುವರೆದು ಇವುಗಳ ಜೊತೆಗೆ ಒಡೆಯರು, ಬೆಟ್ಟ ಕುರುಬರು, ಜೇನು ಕುರುಬರು, ಒಕ್ಕೈ ಕುರುಬರು ಮೊದಲಾದ ಉಪಪಂಗಡಗಳಿವೆ[೩೪] ಎಂದು ಹೇಳಿದ್ದಾರೆ.

ಅಂಡೇ(ಹಂಡೇ) ಕುರುಬರು

ಕುರುಬರಲ್ಲಿ 'ಹಂಡೇ ಕುರುಬ' ಎಂಬ ಉಪಪಂಗಡವು ಪ್ರಮುಖವಾದ ಪಂಗಡವಾಗಿದೆ. ಇವರು ಲಿಂಗವನ್ನು ಧಾರಣೆ ಮಾಡಿಕೊಂಡಿರುವರು. ಇವರು ಎಲ್ಲಾ ಭಾಗಗಳಲ್ಲಿ ಕಂಡುಬರುತ್ತಾರೆ. ಆದರೆ ಇವರು ಕುರಿಗಳನ್ನು ಸಾಕುವುದಿಲ್ಲ. ಕಂಬಳಿಗಳನ್ನು ನೇಯುವರು ಮತ್ತು ಆಕಳು, ಎಮ್ಮೆಗಳನ್ನು ಸಾಕಿಕೊಂಡು ಅವುಗಳ ಹೈನುಗಳನ್ನು ಮಾರಿ ಜೀವನ ಮಾಡುವರು. ಹೈನು ಪದಾರ್ಥಗಳನ್ನು ಬಿದಿರು ಅಂಡೆಗಳಲ್ಲಿ ಉಪಯೋಗಿಸುತ್ತಿದ್ದುದರಿಂದ ಇವರಿಗೆ ಅಂಡೇ(ಹಂಡೇ) ಕುರುಬರೆಂದು ಹೆಸರು ಬಂದಿರುವುದು, ಇವರು ಪಾಳೆಗಾರರಾಗಿದ್ದ ಹಂಡೆ ಮನೆತನದವರು. ಬಳ್ಳಾರಿ, ಬಂಕಾಪುರ ಅನಂತಪುರಗಳನ್ನು ಮುಖ್ಯ ಕೇಂದ್ರಗಳನ್ನಾಗಿ ಮಾಡಿಕೊಂಡು ರಾಜ್ಯವಾಳಿದವರು. ಇವರನ್ನು ಕುರಿತು ವಿ.ಆರ್.ಹನುಮಂತಯ್ಯ, ಶಂಬಾ ಜೋಶಿ, ಶಿವಾನಂದ ಗುಬ್ಬಣವರ, ವಿ.ರಾಜಶೇಖರಪ್ಪ, ಚನ್ನಕ್ಕ ಪಾವಟೆ ಮೊದಲಾದ ವಿದ್ವಾಂಸರು, ಅಧ್ಯಯನ ಮಾಡಿದ್ದಾರೆ. ವೈ.ಕೆ.ಗುಂಡಕರ್ಜಿ ಅವರು 'ಹಂಡೆ ಕುರುಬರು: ಒಂದು ಅಧ್ಯಯನ' ಎಂಬ ವಿಷಯವನ್ನು ಕುರಿತು ಪಿಎಚ್.ಡಿ. ಮಾಡಿ ಅವರ ಸಮಗ್ರ ವಿಷಯವನ್ನು ಪರಿಚಯಿಸಿದ್ದಾರೆ.

ಡಾ. ವೀರೇಶ ಬಡಿಗೇರ ಅವರ 'ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು: ಒಂದು ಸಾಂಸ್ಕೃತಿಕ ಅಧ್ಯಯನ' ಈ ಕೃತಿಯಲ್ಲಿ "ಕುರುಬ ಜನಾಂಗದಲ್ಲಿ ಐದು ಪ್ರಧಾನ ಪಂಗಡಗಳಿರುವುದಾಗಿ ಹೇಳಿದ್ದಾರೆ. ಹಾಲುಕುರುಬ, ಹಂಡೆಕುರುಬ, ಕಂಬಳಿಕುರುಬ, ಹತ್ತಿಕಂಕಣದವರು ಮತ್ತು ಉಣ್ಣೆಕಂಕಣದವರೆಂದು ಈ ಪಂಗಡಗಳಿಂದ ಹಲವಾರು ಉಪಪಂಗಡಗಳು ಜನ್ಮ ತಾಳಿವೆ. ಈ ಪಂಗಡಗಳಲ್ಲಿ ಹಂಡೆಕುರುಬರು ಎನ್ನುವುದು ಪ್ರಮುಖ ಪಂಗಡವಾಗಿದೆ. ಕರ್ನಾಟಕದ ನೆರೆಯ ಪ್ರಾಂತಗಳಾದ ಆಂಧ್ರ, ತಮಿಳುನಾಡು, ಮತ್ತು ಮಹಾರಾಷ್ಟ್ರಗಳಲ್ಲಿ ಜೀವವೆತ್ತಿ ಬಾಳಿ ಬದುಕಿದ ಬಹು ಬಲಾಢ್ಯ ಜನಾಂಗ. ಹಂಡೆಕುರುಬರಿಗೆ ಹಂಡೆರಾವುತರು, ಹಂಡೇವಜೀರರು ಎಂಬ ಹೆಸರುಗಳಿವೆ. ಇವರು ಕುರಿ ಸಾಕಾಣಿಕೆಗಿಂತ ಕಂಬಳಿ ನೇಯ್ಗೆಯಲ್ಲಿ ಮುಂದೆ ಇರುವಂತವರು, ಸಾಹಸಪ್ರಿಯರು, ಯುದ್ಧಪ್ರವೀಣರು, ಆಡಳಿತಗಾರರು ಆಗಿದ್ದ ಬಗ್ಗೆ ವಿವರಗಳು ಸಿಗುತ್ತವೆ"[೩೫] ಎಂದಿದ್ದಾರೆ.

ಶಂಬಾ ಜೋಶಿಯವರು "ಕುರುಬ ಸಮುದಾಯದವರು ಆರ್ಯಪೂರ್ವ ಕಾಲದಿಂದಲೂ ಪಂಜಾಬದವರೆಗೆ ವ್ಯಾಪಿಸಿಕೊಂಡಿದ್ದರು. ಕುರುಗಾರರು, ದನಗಾರರು, ವೀರರು, ವರ್ತಕರು ಹಾಗೂ ಪುರಪತಿಗಳು ಎಂಬ ಬಗೆಯ ಜನರು ವ್ಯವಸಾಯ ಭೇದವಿಲ್ಲದೇ ಅವರಲ್ಲಿ ಒಳಪಂಗಡಗಳು ಆಗಿದ್ದು ಕಂಡುಬರುತ್ತವೆ[೩೬] ಎಂದು ಹೇಳಿದ್ದಾರೆ.

ಬೇಟೆಗಾರಿಕೆಯಿಂದ ಕವಲೊಡೆದ ಪಶುಪಾಲಕರಲ್ಲಿ ಮುಖ್ಯವಾಗಿ ವ್ಯಾಸ(ಮೇಷ) ಬೇಡರು, ಕಾಡುಗೊಲ್ಲರು, ಕುರುಬರು ಮತ್ತು ದನಗಾರರು ಮುಖ್ಯ ಎಂದು ಡಾ. ಕೆ.ಎಂ. ಮೇತ್ರಿಯವರು

ಗುರುತಿಸಿದ್ದಾರೆ.[೩೭] ಶ್ಯಾಮಸಿಂಗ್ ಶಶಿಯವರು ತಮ್ಮ 'ಭಾರತದ ಕುರುಬರು' ಕೃತಿಯಲ್ಲಿ ಹಸನ್ ಧನಗರ್, ಹಟ್ಕರ್, ಅಸಂತ್ ಮತ್ತು ಖಿಲಕಾರಿ ಎಂಬ ನಾಲ್ಕು ರೀತಿಯ ಧನಗಾರರನ್ನು ಗುರುತಿಸಿದ್ದಾರೆ.[೩೮]

ಕರ್ನಾಟಕ ಪ್ರದೇಶ ಕುರುಬ ಸಂಘ ೧೯೭೮ರಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಮನವಿ ಪತ್ರದಲ್ಲಿ ಹಾಲುಮತ, ಒಕ್ಕಲಿಗ, ಕುರುಬ, ಕುರಿಕಾಯುವ ಕುರುಬ, ಗೊಂಡರು, ಗೊಂಡಕುರುಬ, ಧನಗಾರರು, ಭಾರವಾಡ, ಕರಡಿ ಮತ್ತು ಮರದಿವೇಳರು, ಹಂಡೆಕುರುಬರು, ಜೋಗಯ್ಯಗಳು, ಹಣಬರು, ಹರಿಕರು, ಪೆದ್ದರು, ಸುಡುಗಾಡುಸಿದ್ಧರು, ಗವಳಿಗರು, ಸಿಂಧರು, ಒಡೆಯರು, ಕಂಬಳಿಕುರುಬರು, ಕನಕಯ್ಯನ ಜಾತಿಯವರು, ಪ್ರಥಮಶೂದ್ರರು, ಇಂದ್ರಶೂದ್ರರು, ವಾರದ ಕುರುಬರು, ದಾಸಯ್ಯಗಳು, ಗೊಲ್ಲಕೊರವ, ಜೇನುಕುರುಬ, ಊರುಕುರುಬ, ಹೊಸಕುರುಬ, ಹಳೆಕುರುಬ, ಮುಳ್ಳುಕುರುಬರು, ಕೊಳ್ಳಿಕುರುಬರು, ಬೆಟ್ಟಕುರುಬರು ಎಂದು ಕುರುಬ ಸಮುದಾಯದ ಒಳಪಂಗಡಗಳನ್ನು ಹೆಸರಿಸಿದೆ.[೩೯]

ಡಾ. ಚಂದ್ರಶೇಖರ ಕಂಬಾರರು ತಮ್ಮ 'ಜಾನಪದ ವಿಶ್ವಕೋಶ' ಸಂಪುಟ ೧ರಲ್ಲಿ ಕುರುಬರಲ್ಲಿ ಎರಡು ಸೂಕ್ಷ್ಮ ವಿಭಾಗಗಳಿದ್ದು, ನೀಲಗಿರಿಯಲ್ಲಿ ವಾಸಿಸುವ ಕುರುಂಬಿನ್ ಉಪಭಾಷೆಯನ್ನಾಡುವ ಕಾಡುಜನರು ಮತ್ತು ಬಯಲುಸೀಮೆಯಲ್ಲಿ ವಾಸಿಸುವ ಕನ್ನಡವನ್ನು ಮಾತನಾಡುವ ನಾಗರಿಕ ಕುರುಬರು ಎಂಬ ಒಳಪಂಗಡಗಳಿವೆ[೪೦] ಎಂದು ಉಲ್ಲೇಖಿಸುತ್ತಾರೆ.

ಡಾ. ಎಂ.ಎಂ. ಕಲಬುರ್ಗಿ ಮತ್ತು ಡಾ. ವೈ.ಸಿ. ಭಾನುಮತಿಯವರು ಸಂಪಾದಿಸಿರುವ ಸಿದ್ಧಮಂಕ ಚರಿತೆಯಲ್ಲಿ "ಸರೂರು ಒಡೆಯಲ್ಲಿರುವ ತಗರಪವಾಡ" ಎಂಬ ಹಸ್ತಪ್ರತಿಯ ಒಂದನೆಯ ಸುರಳಿಯಲ್ಲಿ ಉಣ್ಣೆಕಂಕಣ, ಹತ್ತಿಕಂಕಣ, ಹಂಡೆಲವರು(ಹಂಡೆಯವರು) ಒಳಪಂಗಡಗಳನ್ನು ಉಲ್ಲೇಖಿಸಿರುವುದರ ಜೊತೆಗೆ ಆವ(ಗು)ಕುರುಬ, ಹಂಡೆಲ(ಯ)ವರು, ಸಾದುಗು(ಕು)ರುಬ ಪಂಚಮಗು(ಕು)ರುಬ ಕಂಬಳಿಗು(ಕು)ರುಬ, ಕುರಿ ಆಡಿನವರು ಮುಂತಾದ ಒಳಪಂಗಡಗಳ ಉಲ್ಲೇಖವನ್ನು ಮಾಡಲಾಗಿದೆ.[೪೧]

ಶ್ರೀರಾಮ ಇಟ್ಟಣ್ಣನವರು ಕರ್ನಾಟಕದಲ್ಲಿರುವ ಕುರುಬರಲ್ಲಿ ಮೂರು ಪ್ರಮುಖ ಪಂಗಡ ಗಳಿರುವುದನ್ನು ಗುರುತಿಸಿದ್ದಾರೆ. ಹಾಲುಕುರುಬ(ಹಾಲುಮತದವರು) ಕಂಬಳಿಕುರುಬರು ಮತ್ತು ಹಂಡೆಕುರುಬರು ಎಂದು ವ್ಯಕ್ತಪಡಿಸಿದ್ದಾರೆ.[೪೨]

ಈ ಮೇಲಿನ ಎಲ್ಲಾ ವಿದ್ವಾಂಸರು ಗುರುತಿಸಿರುವ ಒಳಪಂಗಡಗಳ ವಿಭಜನೆಯನ್ನು ಅವಲೋಕಿಸಿದರೆ ವಿ.ಆರ್.ಹನುಮಂತಯ್ಯನವರು ಹೇಳಿರುವ ಪಂಗಡಗಳ ಜೊತೆಗೆ ತಮ್ಮ ಪಂಗಡಗಳನ್ನು ಗುರುತಿಸಿರುವುದು ಕಂಡುಬರುತ್ತದೆ.

ಹನುಂತಯ್ಯನವರು ಕುರುಬರ ಒಳಪಂಗಡಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿದ್ದರು. ಅವುಗಳನ್ನು ಕುರಿತು ವಿಶ್ವವಿದ್ಯಾಲಯಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಒಂದೊಂದೇ ಪಂಗಡವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿ, ಇಡಿಯಾದ ಮತ್ತು ಬಿಡಿಲೇಖನಗಳು ಮತ್ತು ಕೃತಿಗಳು ಪ್ರಕಟಗೊಂಡಿವೆ. 'ಹಂಡೆ ಕುರುಬರು: ಒಂದು ಅಧ್ಯಯನ', 'ಅಲೆಮಾರಿ ಕುರುಬರು, ಕಾಡುಕುರುಬರು ಮತ್ತು ಜೇನು ಕುರುಬರ ಸಂಸ್ಕೃತಿ', 'ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ', 'ಬೀದರ್ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ: ಒಂದು ಸಮಾಜಶಾಸ್ತ್ರೀಯ ಅಧ್ಯಯನ' ಎಂಬ ಕೃತಿಗಳು ಮತ್ತು ರಾಜಗೊಂಡ ಬುಡಕಟ್ಟು, ಗೊಂಡರು ಲಾಳಗೊಂಡರು, ರಾಜಗೊಂಡ ಬುಡಕಟ್ಟಿನ ಚರಿತ್ರೆ ಮತ್ತು ಸಿಂದಿಗೇರಿ ನೀಲಮ್ಮನ ಚರಿತ್ರೆ' ಎಂಬ ಲೇಖನಗಳು ಬಂದಿವೆ.

ಪ್ರತಿಯೊಂದು ಜಾತಿ ಅಥವಾ ಉಪಜಾತಿಗಳ ಹುಟ್ಟು ಅನುಸರಿಸುತ್ತಿರುವ ಉದ್ಯೋಗಕ್ಕೆ ಅವರದೇ ಆದ ಕಥೆಯ ಹಿನ್ನೆಲೆಯಿದೆ. ಕುರುಬರು ಉದ್ಯೋಗ ನೆಲೆ ಮತ್ತು ಅವರ ಬುಡಕಟ್ಟಿನ ಲಕ್ಷಣಗಳ ಆಧಾರದ ಮೇಲೆ ಬೇರೆ ಬೇರೆ ಗುಂಪುಗಳಾಗಿ ಗುರುತಿಸಿಕೊಳ್ಳುತ್ತಾರೆ.

೪. ಆಂಧ್ರ ಕುರುಬರು

ಕರ್ನಾಟಕದಲ್ಲಿರುವಂತೆ ಆಂಧ್ರದಲ್ಲಿಯೂ ಕುರುಬರು ಕಂಡುಬರುತ್ತಾರೆ. ಆಂಧ್ರದಲ್ಲಿ ಕರೆಯುವ ಕುರುಬರ ಹೆಸರುಗಳನ್ನು ಹಂತ ಹಂತವಾಗಿ ಪರಿಚಯಿಸುತ್ತಾ ಹೋಗಿದ್ದಾರೆ. ಗೊಲ್ಲವಾಡು, ಕುರುಪ, ಯಾದವರು, ಕುಲಿಮವಾರು ಇತ್ಯಾದಿ.

i. ಗೊಲ್ಲವಾಡು

ತೆಲುಗು ಭಾಷೆಯಲ್ಲಿ ಕುರಿಗಳನ್ನು ಗೊರ್ರೆಲು ಅಥವಾ ಗೊಗಲ್ಲ ಎಂದು ಕರೆಯುತ್ತಾರೆ. ಅದೇ ಗೊಲ್ಲ>ಗೊಲ್ಲ ಆಗಿ ಅವುಗಳನ್ನು ಕಾಪಾಡುವವರಿಗೆ ಗೊಲ್ಲವಾಡು, ಗೊಲ್ಲವಾರು ಎಂಬ ಹೆಸರು ಬಳಕೆಗೆ ಬಂದಿತೆಂದು ತೆಲುಗು ದೇಶದವರಿಂದ ಮತ್ತು ತೆಲುಗು ವಿದ್ವಾಂಸರಿಂದ ತಿಳಿಯುತ್ತದೆ. ಈ ಗೊಲ್ಲ ಎಂಬ ಹೆಸರು ಮುಖ್ಯವಾಗಿ ಕುರುಬರಿಗೆ ಅನ್ವಹಿಸುತ್ತದೆ ಎಂದಿದ್ದಾರೆ.[೪೩] ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲಿ ಕುರುಬರು ಹೇಗೋ ಆಂಧ್ರದಲ್ಲಿ ಗೊಲ್ಲವಾರು ಕಂಡುಬರುತ್ತಾರೆ. ಇವರು ಎಲ್ಲಾ ಸ್ಥಳಗಳಲ್ಲಿಯೂ ಕಾಣಸಿಗುತ್ತಾರೆ.

ii. ಕುರುಪ

ಕುರುಪ ಎಂಬ ಪದಕ್ಕೆ ತೆಲುಗು ನಿಘಂಟಿನ ಪ್ರಕಾರ 'ಗೊರ್ರೆಲು' ತುಪ್ಪಟಿನಿಂಚಿ ಕಂಬಡಿ ನೇಯು ಗೊಲ್ಲ ಎಂದು ಇದೆ.[೪೪] ಅಂದರೆ 'ಕುರಿಗಳ ಉಣ್ಣೆಯಿಂದ ಕಂಬಳಿಗಳನ್ನು ನೇಯುವ ಕುರುಬ' ಎಂದು ಅರ್ಥ ಬರುತ್ತದೆ.

iii. ಯಾದವರು

ಯಾದವ ಎಂಬ ಹೆಸರು ದ್ರಾವಿಡದ ಇಡೈಯಾರ್ ಎಂಬುದರ ಅಪಭ್ರಂಶ ರೂಪ. "ಯಾದವರು ವಿಜಯನಗರದ ಮೊದಲ ರಾಜಮನೆತನದವರಾದ ಕುರುಬರು ತಮ್ಮನ್ನು ಯಾದವರು ಅಥವಾ ಯದುವಂಶ ಸಂಭೂತರು" ಎಂದು ಹೇಳಿಕೊಳ್ಳುತ್ತಿದ್ದರೆಂದು ಹೊರೇಸ್ ಎಸ್.ವಿಲ್ಸನ್ ಅವರು ಅಭಿಪ್ರಾಯಪಟ್ಟಿದ್ದಾರೆ.[೪೫] ಇದನ್ನು ಹನುಮಂತಯ್ಯನವರು ತಮ್ಮದೆಯಾದ ಸಂಶೋಧನೆಯ ಹಿನ್ನೆಲೆಯಲ್ಲಿ ವಿಮರ್ಶಿಸಿದ್ದಾರೆ.

iv. ಕುರುಮವಾರು

ಕುರುಬರನ್ನು ತೆಲುಗು ದೇಶದ ಕೆಲವು ಭಾಗಗಳಲ್ಲಿ ಕುರುಮ ಅಥವಾ ಕುರುಮವಾಡು ಎಂದು ಕರೆಯುತ್ತಾರೆ. ಇವರು ಕ್ರಿ.ಶ. ಏಳನೆಯ ಶತಮಾನದಲ್ಲಿ "ದಕ್ಷಿಣ ಭಾರತದ ಪ್ರಬಲ ಅರಸ ಮನೆತನವಾದ ಪಲ್ಲವರ ಆಧುನಿಕ ಪ್ರತಿನಿಧಿಗಳು"[೪೬] ಎಂಬುದನ್ನು ವಿದ್ವಾಂಸರು ಹೇಳಿರುವುದನ್ನು ಹನುಮಂತಯ್ಯನವರು ಈ ಕೃತಿಯಲ್ಲಿ ಪ್ರಸ್ತಾಪಿಸಿರುವುದು ಕಂಡುಬಂದಿದೆ.

ಹೀಗೆ ಹನುಮಂತಯ್ಯನವರು ಆಂಧ್ರದ ಕುರುಬರ ಪದ ನಿಷ್ಪತ್ತಿ ಮತ್ತು ಅವರ ಜೀವನ ವಿಧಾನ ಕುರಿತು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ.

೫. ದ್ರಾವಿಡ ಕುರುಬರು

ಕುರುಬರನ್ನು ದ್ರಾವಿಡ(ತಮಿಳು, ಅರವು), ತುಳು, ಮಲಯಾಳಂ ಭಾಷೆಗಳಲ್ಲಿ ಕುರುಂಬ, ಕುರುಂಬ, ಇಡೈಯರ್ ಕುರುಂಬನ್ ಎಂದು ಕರೆಯುತ್ತಾರೆ. ತಮಿಳುನಾಡು ಕುರುಬರ ವೀರಪಾಂಡ್ಯ ಕಟ್ಟಬೊಮ್ಮನಿಗೆ ಜನ್ಮ ನೀಡಿದ ನಾಡು. ಕುರುಂಬರವರಸ ಎಂದರೆ ಬಹುತೇಕವಾಗಿ ಕುರುಬರ ಅರಸುಮನೆತನದವರೆಂದು ಎಂ. ಕರಿಯಪ್ಪ ಅವರ ಅಭಿಪ್ರಾಯ. ಇದು ಪುರಾತನ ಸಮಾಜವೆಂದು ತಿಳಿದುಬಂದಿದೆ. ಈ ಪ್ರದೇಶವು ಕುರುಬರ ನಾಡು ಅಂದರೆ ಕುರಿಕಾಯುವವರ ಸಾಮ್ರಾಜ್ಯ ಎಂದು ಹೆಸರಾಗಿತ್ತು.[೪೭]

ತಮಿಳು ನಿಘಂಟನ್ನು ಬರೆದ ಪಿಂಗಳ ಮುನಿ ಕುರುಂಬರ್ ಎನ್ನುವುದಕ್ಕೆ ಕುರುನೀಲಮನ್ನಾರ್, ಸಾಮಂತರಾಜ, ಮಾಂಡಲಿಕ, ಪಾಳೆಯಗಾರ ಹಾಗೂ ಕೆಟ್ಟವನು ಎಂಬರ್ಥ ಕೊಟ್ಟಿದ್ದಾನೆ.[೪೮]

ಹನುಮಂತಯ್ಯನವರು ಈ ಅರ್ಥಕ್ಕೆ "ಬಹುಶಃ ಕೆಟ್ಟವನು ಎಂಬ ಅರ್ಥ, ಚೋಳರಿಂದ ಪಲ್ಲವರು ಸೋತು ದಿಕ್ಕುಪಾಲಾಗಿ ಚದುರಿ ಬೆಟ್ಟ-ಗುಡ್ಡ ಸೇರಿದ ಮೇಲೆ ಮರಳಿ ಅಧಿಕಾರಕ್ಕಾಗಿ ಗಾಯಗೊಂಡ ಹುಲಿಗಳಂತೆ ನೆರೆಹೊರೆಯವರೊಡನೆ ವರ್ತಿಸುತ್ತಿದ್ದ ಕಾರಣದಿಂದ ಈ ಅರ್ಥ ಬಂದಿರಬಹುದು"[೪೯] ಎಂದು ಹೇಳಿದ್ದಾರೆ.

ಕುರುಬರ ನಾಡು ರಾಜವೀರವರ್ಮನಿಂದ ಆಳಲ್ಪಟ್ಟಿತ್ತು. ಅನಂತರದ ಅರಸರು ವರ್ಮ ಎಂಬುದನ್ನು ತಮ್ಮ ಹೆಸರಿನ ಭಾಗವಾಗಿಸಿಕೊಂಡರು. ಕೆಲವು ಇತಿಹಾಸಜ್ಞರ ಪ್ರಕಾರ ಈ ಕುರುಬ ಅರಸರು

ಹಡಗುಗಳನ್ನು ಕಟ್ಟಿ, ಕೈಗಾರಿಕೆಗಳನ್ನು ಸ್ಥಾಪಿಸಿ, ನಾಣ್ಯಗಳನ್ನು ತಯಾರಿಸುತ್ತಿದ್ದರು. ಈ ನಾಣ್ಯಗಳು ಕುರುಬರ ಚಿತ್ರಗಳನ್ನು ಹೊಂದಿದ್ದವು. ನಾಣ್ಯದ ಒಂದು ಕಡೆ ಹಡಗು ಮತ್ತು ಎರಡು ಎತ್ತುಗಳು ಇದ್ದವು. ಅಂದರೆ ಇವರ ಸಾಮ್ರಾಜ್ಯವು ಸಮುದ್ರಗಳಾಚೆಗೆ ಹರಡಿತ್ತು ಮತ್ತು ಕುರಿಗಿಂತ ದನ ಸಾಕುವುದಕ್ಕೆ ಹೆಚ್ಚು ಪ್ರಾಶಸ್ತ್ಯ[೪೦] ಇತ್ತು ಎಂಬುದು ತಿಳಿದುಬರುತ್ತದೆ.

೬. ಮಹಾರಾಷ್ಟ್ರ ಕುರುಬರು

ಮಹಾರಾಷ್ಟ್ರದಲ್ಲಿ ಕುರುಬರನ್ನು ಧನಗರ ಅಥವಾ ಧನಗಾರ ಎಂದು ಕರೆಯುತ್ತಾರೆ. ಈ ಧನಗಾರರು ಮಧ್ಯಪ್ರದೇಶದ ಇಂದೋರಿನಲ್ಲಿ ಕಾಣಬರುತ್ತಾರೆ. ಈ ಧನಗಾರ ಎಂಬ ಪದ ಪಶುಸಂಪತ್ತಿನಿಂದಾಗಿ ಬಂದಿರಬಹುದು ಎಂಬುದು ಕೆಲವರ ಅನಿಸಿಕೆ.

"ಧನಗಾರ" ಪದಕ್ಕೆ ಹನುಮಂತಯ್ಯನವರು "Tribes and castes of Bombay" ಎಂಬ ಕೃತಿಯನ್ನು ಆಧರಿಸಿ ಈ ಹೇಳಿಕೆಯನ್ನು ನೀಡಿದ್ದಾರೆ. ಖಂಡೋಬ(ಮೈಲಾರೇಶ್ವರ–ಬೀರೇಶ್ವರ) ಅರಣ್ಯದಲ್ಲಿ ಸಂಚರಿಸುತ್ತಿರುವಾಗ ಧನಗಾರರ ಮೂಲಪುರುಷನನ್ನು ಕಂಡು, ಆತನ ಮಹಿಮಾಶಕ್ತಿಗೆ ಮೂಕವಿಸ್ಮಿತನಾದನೆಂದೂ, ಆಗ ತನ್ನ ಕುಲಬಾಂಧವರೊಡನೆ ತನ್ನ ಮಗಳಾದ 'ಬನೆ'ಯನ್ನು ಖಂಡೋಬನಿಗೆ ಒಪ್ಪಿಸಿದರು. ಖಂಡೋಬನು ಇವರ ಭಕ್ತಿ, ಪ್ರೀತಿ, ವಾತ್ಸಲಕ್ಕೆ ಮಾರುಹೋಗಿ ಅವಳನ್ನು ಪತ್ನಿಯಾಗಿ ಸ್ವೀಕರಿಸಿದನೆಂದೂ ಹಾಗೂ ನೀವು ಕುರಿಗಳನ್ನು ಕಾಪಾಡಿಕೊಂಡು ಧನವಂತರಾಗಿ ಸುಖವಾಗಿ ಬಾಳಿರೆಂದು ಆಶೀರ್ವಾದ ಮಾಡಿದನು. ಖಂಡೋಬನ ಆಶೀರ್ವಾದದಿಂದ ಇವರಿಗೆ "ಧನಗಾರ" ಎಂಬ ಹೆಸರು ಬಂದಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[೪೧] 'ಧನಗಾರ್' ಎಂಬುದು ದನ ಕಾಯುವವರು ಅಥವಾ ಕುರುಬರು ಎಂಬುದನ್ನು ಸೂಚಿಸುತ್ತದೆ.[೪೨] ಮಹಾರಾಷ್ಟ್ರದ ಪುಣೆ ಜಿಲ್ಲೆಯ ಬೌದ್ಧ ಗುಹೆಯೊಂದರಲ್ಲಿ 'ಧನ್ಗರ್' ಎಂಬುದನ್ನು ಕೆತ್ತಲಾಗಿದೆ. ಈ ಗುಹೆ ಮೊದಲ ಮತ್ತು ಮೂರನೆಯ ಶತಮಾನದ ಮಧ್ಯಕಾಲಕ್ಕೆ ಸಂಬಂಧಿಸಿದ್ದು. "ಧನಗರ್" ಎನ್ನುವ ಪದದಿಂದ ಬಂದಿದೆ ಎಂದು ಡಾ. ಭಗವಾನ್ ಲಾಲ್ ಇಂದ್ರಾಜಿಯವರು ಹೇಳಿರುವುದನ್ನು ಡಾ. ಶ್ಯಾಮ್‌ಸಿಂಗ್ ಶಶಿಯವರು ಈ ರೀತಿ ಹೇಳುತ್ತಾರೆ.[೪೩] ಇದು ಸಂಸ್ಕೃತದ ದಂಗ್ ಪದದಿಂದ ಬಂದಿದ್ದು ಎಂದರೆ ಬೆಟ್ಟ ಎನ್ನುವ ಅರ್ಥ ಕೊಡುತ್ತದೆ ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಹೀಗೆ ಈ ಜನಾಂಗ ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಿರುವುದರಿಂದ ಇವರನ್ನು 'ಧನಗರ್' ಎಂದು ಕರೆಯುತ್ತಾರೆ. ಇನ್ನೊಂದು ಸಂಸ್ಕೃತದ ಪದ ದಂಡಕಾದಲ್ಲಿ ಅರಣ್ಯಗಳಲ್ಲಿ ವಾಸಿಸುವವರು ಎಂಬರ್ಥ ಇದೆ. ಮರಾಠಿಯ ಮೈದಪಾಳ್ ಎಂದರೆ ಕುರುಬರು. ಕನ್ನಡದಲ್ಲಿ ದನ ಮತ್ತು ಕುರಿ ಎಂಬ ಪದಗಳನ್ನು ಕಾಣುತ್ತೇವೆ. ಆದ್ದರಿಂದ ಧನಗರ ಎನ್ನುವ ಪದ ಈ ಮೂಲದಿಂದ ಬಂದಿದೆ ಎಂಬುದು ಕೆಲವರ ಅಭಿಪ್ರಾಯ ಎಂದು ಹೇಳಿದ್ದಾರೆ.

ಧನಗಾರರಲ್ಲಿರುವ ಒಳಪಂಗಡಗಳು

ಹನುಮಂತಯ್ಯನವರು ಕರ್ನಾಟಕದಲ್ಲಿರುವ ಕುರುಬರ ಒಳಪಂಗಡಗಳನ್ನು ಪರಿಚಯಿಸಿದಂತೆ ಮಹಾರಾಷ್ಟ್ರದ ಧನಗಾರರಲ್ಲಿರುವ ಒಳಪಂಗಡಗಳನ್ನು ಪರಿಚಯಿಸಿದ್ದಾರೆ. ಅವು: ಅಹೀರ್, ಅಸಲ್ ಮಾರಾಟ, ಬರ್ಗೆ ಬಂಡೆ, ಮೆಟ್ಕರಿ, ಹಾಂಗೆ, ಗಡನೆ, ಬಿನಿ, ಗವಳಿ, ಗೋಟಾರಣ್ಯ, ಹಟ್ಕರ್, ಜಂಡೇವಾಲ್, ಹೋಲ್ಕರ್, ಕಾಂಗಾರ, ಖಿಕ್ರಿ, ಕಿಲಾಲಾ, ತಿಲಾರಿ, ಖೂಟಿಕಾರ್ ಖೂಟ, ಕುಕ್ಷೆಕಾರ, ಲ್ಯಾಡ್, ಮೈಂಡೆ, ಮಷ್ಕೆ, ಸನಗರ, ಷೆಗಾರ್, ಶಿಲೋತ್ಯ, ಊಟೆಗಾರ್ ಹೀಗೆ ಮುಂತಾದ ಪಂಗಡಗಳನ್ನು ಗುರುತಿಸಿದ್ದಾರೆ.

ಧನಗಾರರ ಮತಗಳನ್ನು ಕುರಿತು ಡಾ. ಶ್ಯಾಮ್‌ಸಿಂಗ್ ಶಶಿಯವರು ಈ ರೀತಿ ಹೇಳಿದ್ದಾರೆ. "ಮಹಾರಾಷ್ಟ್ರದ ಜಾನಪದ ಕಥೆಯೊಂದರ ಪ್ರಕಾರ ಹಾವೊಂದು ಕುರಿ ಮತ್ತು ಆಡುಗಳ ವಾಸಸ್ಥಾನಕ್ಕೆ ಹೊಕ್ಕಿತು. ಇದರಿಂದ ಕುರಿ ಮತ್ತು ಆಡುಗಳು ಹೊಲಗದ್ದೆಗಳಿಗೆ ಹೋದವು. ರೈತರು ಆತಂಕಗೊಂಡರು. ಶಿವನನ್ನು ಪ್ರಾರ್ಥಿಸಿ ಪಶುಗಳನ್ನು ಹೊಲಗದ್ದೆಗಳಿಂದ ಹಿಂತೆಗೆದುಕೊಳ್ಳಲು ಕೋರಿಕೊಂಡರು. ಅದಕ್ಕೆ ಶಿವನು ಪಶುಗಳಿಗೂ ಸೃಷ್ಟಿಯ ಒಂದು ಅಂಗವಾದ್ದರಿಂದ ಅವುಗಳಿಗೂ ಹಕ್ಕು ಇರುವುದೆಂದು ಹೇಳಿ ಅವುಗಳನ್ನು ಪಾಲಿಸಿಕೊಂಡು ಮತ್ತು ಹೊಲಗದ್ದೆಗಳನ್ನು ರಕ್ಷಿಸಿಕೊಳ್ಳಲು ಹೇಳಿದನು.[೫೪] ಇದರಿಂದ "ಧನ್ಗರ್" ಸಮುದಾಯ ನಿರ್ಮಿಸಿದನೆಂದು ಹೇಳಿದ್ದಾರೆ. ಇದಕ್ಕೆ ಪೂರಕವಾಗಿ ಧನ್ಗರ್‌ಗಳು ಖಂಡೋಬ ದೇವತೆಯಿಂದ ನಿರ್ಮಿಸಲ್ಪಟ್ಟವರು ಎಂದಿದ್ದಾರೆ. ಅವನು ರೈತರುಗಳಿಗೆ ಕುರಿ ಮತ್ತು ಆಡುಗಳನ್ನು ನೋಡಿಕೊಳ್ಳಲು ತಿಳಿಸಿದನಂತೆ, ಹೀಗಾಗಿ ಧನ್ಗರ್‌ಗಳು ಖಂಡೋಬನನ್ನು ಅತ್ಯುನ್ನತ ದೇವತೆಯೆಂದು ಪೂಜಿಸುತ್ತಾರೆ. ಅವರು ಒಟ್ಟಿಗೆ ಉಂಡು ತಿಂದು ಕೆಲಸ ಮಾಡುತ್ತಾರೆ. ಆದರೂ ಅವರ ನಡುವೆ ಸಂಬಂಧಗಳಿಲ್ಲ, ಈ ಉಪಪಂಗಡಗಳು ತಮ್ಮನ್ನು ಧನ್ಗರ್‌ಗಳೆಂದು ಕರೆದುಕೊಳ್ಳುತ್ತಾರೆಂದು ಅಭಿಪ್ರಾಯ ಪಟ್ಟಿದ್ದಾರೆ.[೫೫]

ಶ್ಯಾಮಸಿಂಗ್ ಶಶಿ ಅವರು ನಾಲ್ಕು ರೀತಿಯ ಧನ್ಗರ್‌ಗಳನ್ನು ಗುರುತಿಸಿದ್ದಾರೆ. ಅಸಲ್ ಧನ್ಗರ್, ಹಟ್ಕರ್(ಬರ್ಗಿರ್ ಧನ್ಗರ್) ಅಥವಾ ಭಲಾಯತ್, ಅಹಿರ್ ಮತ್ತು ಖಿಲಕಾರಿ ಎಂದು ಹೇಳಿದ್ದಾರೆ.[೫೬]

ಮಹಾರಾಷ್ಟ್ರದ ಪ್ರಖ್ಯಾತ ಧನ್ಗರ್(ಕುರುಬ) ವಿದ್ವಾಂಸರಾದ ಶ್ರೀ ಶಂಕರ ಬಾಬುರಾವ್ ಲಾಂಡೆ ಅವರು ೩೫ ಉಪಜಾತಿಗಳಿವೆ ಎಂದು ಹೇಳಿದ್ದಾರೆ.[೫೭] ಅವುಗಳನ್ನು ಅವಲೋಕಿಸಿದರೆ ಹನುಮಂತಯ್ಯನವರು ಹೇಳಿರುವ ಹೆಸರುಗಳು ಇವರಲ್ಲಿಯೂ ಕಂಡುಬಂದಿವೆ.

ಕೆಲವು ಪಂಗಡಗಳನ್ನು ಹನುಮಂತಯ್ಯನವರು ಪರಿಚಯಿಸಿದ್ದಾರೆ. 'ಅಸಲ್ ಧನಗಾರ' ರೆಂದರೆ ಶುದ್ಧ, ಶ್ರೇಷ್ಠ ಕುಲದವರೆಂದು, 'ಬರ್ಗೆ' ಧನಗಾರರು ಶಿವಾಜಿ ಮಹಾರಾಜರ ಕಾಲದಲ್ಲಿ ಕುದುರೆ ಸವಾರರಾಗಿಯೂ ಪದಾದಿಗಳಾಗಿಯೂ ಇದ್ದರು. 'ಡಾಂಗೆ' ಧನಗಾರ ಇವರಿಗೆ ಗವಳಿ ಧನಗಾರರೆಂದು

ಕರೆಯುತ್ತಾರೆ. ಇವರು ಪಶುಪಾಲನೆ ಮಾಡಿ ಅವುಗಳಿಂದ ಬಂದ ಹೈನು ಪದಾರ್ಥಗಳನ್ನು ಮಾರಿಕೊಂಡು ಬದುಕುವವರು. 'ಖೂಟಿಕಾರ' ಧನಗಾರರು ಈ ಹೆಸರು ಕಂಬಳಿ ನೇಯುವಾಗ ಉಪಯೋಗಿಸುವ ಖೂಟೆ ಅಂದರೆ ಕುಂಟೆ ಎಂಬ ಸಾಧನದಿಂದ ಬಂದುದೆಂದು ಹೇಳಿದ್ದಾರೆ. 'ಮೈಂಡೆ ಧನಗಾರರು' ಇವರು ಆಡು ಕುರಿ ಕಾಯುವವರು, ಮಷ್ಕೆ ಧನಗಾರರು ಮಹಿಷ ಅಂದರೆ ಎಮ್ಮೆ ಅಥವಾ ಮೇಷ(ಕುರಿ) ಸಾಕಾಣಿಕೆಯಿಂದ ಬಂದ ಹೆಸರು ಎಂದು ಪರಿಚಯಿಸಿದ್ದಾರೆ.

ಹೀಗೆ ಹನುಮಂತಯ್ಯನವರು ಆಂಧ್ರ, ತಮಿಳುನಾಡು ಮತ್ತು ಮಹಾರಾಷ್ಟ್ರ ಕುರುಬರ ಪದ ನಿಷ್ಪತ್ತಿ ಮತ್ತು ಅವರ ಜೀವನ ಹಾಗೂ ಅವರ ಸಾಮಾಜಿಕ, ರಾಜಕೀಯ ಕುರಿತಾಗಿ ಸಂಕ್ಷಿಪ್ತವಾಗಿ ಗುರುತಿಸಿರುವುದು ಕಂಡುಬರುತ್ತದೆ.

ಒಟ್ಟಿನಲ್ಲಿ ಕುರುಬರು ಮೂಲತಃ ಕುರಿಗಾಹಿಗಳಾಗಿ, ಕೃಷಿಕರಾಗಿ ಕುರುಬರೆನಿಸಿಕೊಂಡ ಈ ಸಮುದಾಯ ದೇಶ್ಯಾದ್ಯಾಂತ ಹರಡಿಕೊಂಡಿದೆ. ಇವರ ಜಾತಿ ಉಪಜಾತಿಗಳಿಗೆ ಒಂದೇ ಮೂಲ ತಲೆಮಾರಿದೆ.

೭. ಕುರುಬರ ಅರಸುಮನೆತನಗಳು

ಪಲ್ಲವರು, ಕದಂಬರು, ಹೊಯ್ಸಳರು, ದೇವಗಿರಿ ಯಾದವರು, ವಿಜಯನಗರ ಅರಸರು ಜಿಂಜೀ ಪಾಳೇಗಾರರು, ಕೃಷ್ಣಗಿರಿಯ ರಾಜರು, ಚಾಲುಕ್ಯರು, ಶಾತವಾಹನರು, ಮಧ್ಯಭಾರತದಲ್ಲಿ ಬರೋಡದ ಗಾಯಕವಾಡರು, ಮಾಡು ಮತ್ತು ಮಗಧ, ಶಿವಾಜಿ, ರಾಷ್ಟ್ರಕೂಟ ಮೊದಲಾದ ಅರಸುಮನೆತನಗಳು ಕುರುಬರು ಎಂಬುದಕ್ಕೆ ಇತಿಹಾಸದ ಪುಟಗಳಿಂದ ಸಾಕಷ್ಟು ಸಾಕ್ಷ್ಯಾಧಾರಗಳು ಸಿಗುತ್ತವೆ.

ಇವರನ್ನು ಕುರಿತು ವಿ.ಆರ್. ಹನುಮಂತಯ್ಯ ಅವರು ಕುರುಬರ ಚರಿತ್ರೆ(೧೯೨೬) ಕೃತಿಯಲ್ಲಿ ಪರಿಚಯಿಸಿದ್ದಾರೆ. ಅವರ ನಂತರ ಎಚ್.ಕೆ. ಲಕ್ಕಪ್ಪಗೌಡ ಅವರು ಕುರುಬ ಜನಾಂಗದ ಐತಿಹಾಸಿಕ ಹಿನ್ನೆಲೆ(ಗುರುವಂದನ ಪು. ೧೦೨-೨೧೩) ಲೇಖನದಲ್ಲಿ ಪರಿಚಯಿಸಿದ್ದಾರೆ. ಎಚ್.ಎಂ.ಆರ್. ಗೌಡ ಅವರ "ದಕ್ಷಿಣ ಭಾರತದಲ್ಲಿ ಕುರುಬರು(ಹಾಲುತೊರೆ, ಪು. ೧೨೩) ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ ಬಿ.ವಿ.ಪಾಟೀಲ ಅವರ ಕುರುಬ ಜನಾಂಗದ ಐತಿಹಾಸಿಕ ಕೆಲಚಿಂತನೆಗಳು(ಪಾವನ, ೧೯೯೨ ಪು. ೫೦) ಎಂಬ ಲೇಖನದಲ್ಲಿ ಪರಿಚಯಿಸಲಾಗಿದೆ. ಶಿವಪ್ಪ ನೇರಲಗಿ ಅವರ "ಕುರುಬರೇ ವಿಜಯ ನಗರ ಸ್ಥಾಪಕರು"(ಹಾಲತೊರೆ, ಪು. ೧೩೧) ಲೇಖನದಲ್ಲಿ ಹೇಳಿದ್ದಾರೆ. ಒಡೆಯರ ಹೆಗ್ಗಡೆ ಅವರ "ಹಾಲುಮತ ಕುರುಬ ಜನಾಂಗದ ಇತಿಹಾಸ"(೨೦೦೫) ಕೃತಿಯಲ್ಲಿ ಹೇಳಿದ್ದಾರೆ. ಹಾಗೆಯೇ ಇವರ ಇನ್ನೊಂದು ಕೃತಿ "ಕುರುಬರ ಜನಾಂಗದ ರಾಜವಂಶಗಳು" ಎಂಬ ಕೃತಿಯಲ್ಲಿ ಪರಿಚಯಿಸಲಾಗಿದೆ. ಚಂದ್ರಕಾಂತ ಬಿಜ್ಜರಗಿಯವರ ಕುರುಬರ ಹೆಜ್ಜೆಗಳು ಒಂದು ಅಧ್ಯಯನ

ಕೃತಿಯಲ್ಲಿ ಅಧ್ಯಾಯ ೮ರಲ್ಲಿ ಕುರುಬ ಮೂಲದ ರಾಜಮನೆತನಗಳು(ಪು. ೩೨೬-೨೬೪) ಎಂಬ ಶೀರ್ಷಿಕೆಯಲ್ಲಿ ಪರಿಚಯಿಸಿದ್ದಾರೆ. ಇನ್ನೂ ಅನೇಕ ಕೃತಿ ಮತ್ತು ಲೇಖನಗಳು ಕುರುಬರ ಚರಿತ್ರೆಯನ್ನು ತಿಳಿಸುವಲ್ಲಿ ಪ್ರಮುಖವಾಗಿವೆ.

ಹಾಲುಮತ ಕುರುಬ ಜನಾಂಗವು ಪ್ರಾಚೀನ ಕಾಲದಿಂದಲೂ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಹೆಸರಿನಿಂದ ರಾಜ್ಯಾಧಿಕಾರ ನಡೆಸುತ್ತಿತ್ತು ಎಂಬುದು ಅನೇಕ ಚಾರಿತ್ರಿಕಾಧಾರಗಳಿಂದ ತಿಳಿದುಬಂದಿದೆ.

ಒಂದು ಸಮುದಾಯದ ಅಥವಾ ಒಂದು ನಾಡಿನ ಚರಿತ್ರೆಯೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ಇತಿಹಾಸವೆಂಬ ಭಾವನೆ ಪ್ರಚಲಿತವಾಗಿದೆ. ಆದರೆ ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಮಾತ್ರವಲ್ಲ, ಅಲ್ಲಿ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆಗಳು ಮತ್ತು ಅವರ ಜೀವನ ಮೌಲ್ಯಗಳು ಆಗಿರುತ್ತವೆ.[೫೮]

ಡಾ. ಎಚ್.ಜೆ.ಲಕ್ಕಪ್ಪಗೌಡರು ಕುರುಬರ ಚರಿತ್ರೆಯನ್ನು ಕುರಿತು "ಪರಸ್ಪರ ಎಷ್ಟೇ ಬೇರೆ ಬೇರೆಯಾಗಿದ್ದರೂ ತಾವು ವಾಸಿಸುತ್ತಿದ್ದ ದ್ರಾವಿಡ ಪಂಗಡದಿಂದ ಎಷ್ಟೇ ಚದುರಿ ಚೆಲ್ಲಾಪಿಲ್ಲಿಯಾಗಿ ಹೋಗಿದ್ದರೂ ಮತ್ತು ಈಗ ಎಷ್ಟೇ ದೂರ ದೂರವಾಗಿ ಜೀವಿಸಿದ್ದರೂ ಪ್ರಾಚೀನ ಕಾಲದಲ್ಲಿ ಈ ಜನಾಂಗ ಅಸ್ತಿತ್ವದಲ್ಲಿತ್ತೆನ್ನುವುದಕ್ಕೆ ಕೆಲವು ಅವಶೇಷಗಳನ್ನಾದರೂ ಹೊಂದಿರದ ಯಾವ ಪ್ರಾಂತವೂ ಭರತವರ್ಷದಲ್ಲಿಲ್ಲ" ಎನ್ನುತ್ತಾರೆ.[೫೯]

ಇದಕ್ಕೆ ಆಧಾರವೆಂಬಂತೆ "ಗುಪ್ತಾನ್ ಒಪರ್ಟ್ ಅವರು "Indian the kurubas must be regarded as very old inhabitants of this land. who contest with their Dravidian king manship the priority of Occupation of the India Soil" ಎಂದು ಅಭಿಪ್ರಾಯಪಡುತ್ತಾರೆ.[೬೦] ಇದರಿಂದ ಮುಂದಿನ ಪ್ರಮುಖ ಮನೆತನಗಳಿಗೆ, ಜಾತಿಗಳಿಗೆ ನಾಗರಿಕತೆಯ ಮೂಲಪುರುಷರಾಗಿ ಕುರುಬರು ಕಾಣಸಿಗುತ್ತಾರೆ.

ಇವರು ಪ್ರಾಚೀನ ಮರವ ಸಮುದಾಯಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಿದ್ದ ಸೂತಪತಿಗಳು ದಕ್ಷಿಣ ಭಾರತದಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಅವರನ್ನು ಸೋಲಿಸಿದರಲ್ಲದೆ, ದಕ್ಷಿಣದ ತುತ್ತ ತುದಿಗೆ ಓಡಿಸಿದರು.[೬೧] ಇವರ ಮುಖಂಡರನ್ನು 'ಕಾಮಂಡಪ್ರಭು' ಎಂದು ಕರೆಯುತ್ತಿದ್ದರು. ಹಾಗೆಯೇ 'ಪುಲಾಲದ ರಾಜ' ಎಂದು ಕರೆಸಿಕೊಂಡು ದ್ರಾವಿಡ ದೇಶದ ಅಧಿಪತಿಯಾದನು. ಅವನು ಆಳಿದ ರಾಜ್ಯ ಕುರುಬ ಭೂಮಿ ಎಂದು ಹೆಸರಾಯಿತು. ಕುರುಬರ ನಾಡು ಎಂಬುದು ಮಲಬಾರ್ ತೀರದಲ್ಲಿ ಸುಪ್ರಸಿದ್ಧವಾಗಿರುವುದು ಕಂಡುಬರುತ್ತದೆ. ಕುಸುಬಾ ಕುರುಬರ ನಾಡಿನಲ್ಲಿ "ಕುಸುಬ ಕುರುಬ ನಾಡು, ೨. ವಾಯುನಾಡು, ೩. ಕೋಲ್ ಘಾಟ್, ೪. ಪಾಯುಮಲ್ಯೆ, ೫. ತೈಕುಂಪುರಮ್, ೬. ವಾರಕ್ಕಂ ಪುರವರ್, ೭. ಪೋಲ್ಯೆ ಎಂಬ ಏಳು ತಾಲೂಕುಗಳು ಮಾತ್ರ

ಇದ್ದವು.[೬೨] ಒಂದು ಕಾಲದಲ್ಲಿ ನೀಲಗಿರಿ ಕುರುಬರ ಪ್ರಮುಖ ನೆಲೆಯಾಗಿತ್ತು. ಕಾಮಂಡ ಕುರುಬ ಪ್ರಭುವಿನ ವಂಶಕ್ಕೆ ಸಂಬಂಧಪಟ್ಟ ಶಾಖೆಯವರು ಎಯ್ಯೂರು ಮಲೈ ಎಂಬುದನ್ನು ವಶಪಡಿಸಿಕೊಂಡರು.[೬೩] ಹಾಗೆಯೇ ೧. ಪುಲಾಲ್ ಕೋಟ್ಟೈ, ೨. ಅಮೂರ್ ಕೊಟ್ಟೈ, ೩. ಕಲ್ಲತೂರು ಕೋಟ್ಟೈ, ೪. ಪುಲಿಯೂರು ಕೋಟ್ಟೈ, ೫. ಚೆಂಪೂರು ಕೋಟ್ಟೈ, ೬. ಊರು ಕೋಟ್ಟೈ, ೭. ವೆನಕುನ ಕೋಟ್ಟೈ, ೮. ಇಕ್ಕಟ್ಟು ಕೊಟ್ಟೈ, ೯. ಪಟ್ಟು ವೋರಂ ಕೋಟ್ಟೈ, ೧೦. ಮನವೂರು ಕೋಟ್ಟೈ ಈ ರೀತಿಯ ಅನೇಕ ಪಟ್ಟಣ ಪ್ರದೇಶದಲ್ಲಿ ಕೋಟೆ ಕಟ್ಟಿಸಿರುವುದು ತಿಳಿಯುತ್ತದೆ.[೬೪]

ಮಹಾರಾಷ್ಟ್ರ, ಮಧ್ಯಪ್ರದೇಶ, ಗಂಗಾ ಶೋಣ ಹಾಗೂ ಭದ್ರ ಪ್ರದೇಶಗಳಲ್ಲಿನ ಅನೇಕ ಆದಿಪತ್ಯಗಳ ಮುಖ್ಯಸ್ಥರು ಇಲ್ಲೇ ಆಳರಸರಾಗಿ ಕುರುಬರು ಜನಪ್ರಿಯರಾದರು, ಪ್ರಾಚೀನ ಕಾಲದಲ್ಲಿ ಇಂದ್ರಪುರವೆಂಬ ಪ್ರಸಿದ್ಧ ಇಂದೂರಾಜ್ಯವನ್ನು ಕುರುಬ ಅರಸ ಆಳುತ್ತಿದ್ದ.[೬೫]

ಹೀಗೆ ದಕ್ಷಿಣ ಭಾರತದಲ್ಲಿ ಕುರುಬರ ರಾಜಕೀಯ ಪರಂಪರೆ ದೀರ್ಘವಾದುದು, ವೀರ್ಯವತ್ತಾದುದು ಆಗಿದೆ. ಪಲ್ಲವರಿಂದ ಆರಂಭಗೊಂಡು ಮೈಸೂರು ಅರಸರವರೆಗೆ ಇದೆ ಎಂದು ಹನುಮಂತಯ್ಯ ನವರು ಹಾಲುಮತ ಅರಸರ ಚರಿತ್ರೆಯನ್ನು ಪರಿಚಯಿಸಿದ್ದಾರೆ. ಅವರನ್ನು ಈ ಮುಂದಿನಂತೆ ಒಂದೊಂದಾಗಿ ನೋಡಬಹುದು.

i. ಪಲ್ಲವ ಅರಸರು

ಪಲ್ಲವ ಅರಸರು ಕುರುಬರು ಎಂಬ ಅಭಿಪ್ರಾಯವಿದೆ. ಇವರು ದಕ್ಷಿಣ ಭಾರತದ ಮೂಲ ನಿವಾಸಿಗಳು. ಇವರು ದಕ್ಷಿಣ ಕುರುಂಬ ಅಥವಾ ಪುಳಿಂದರು. ಅಶೋಕನ ಶಾಸನಗಳಲ್ಲಿ ಉಲ್ಲೇಖಿಸಿರುವ ಪುಳಿಂದರೇ ಪಲ್ಲವರೆಂಬುದಾಗಿ ಆರ್.ಸತ್ಯನಾಥಯ್ಯನವರು ಅಭಿಪ್ರಾಯಪಟ್ಟಿದ್ದಾರೆ. ಪಲ್ಲವರು ಅಶೋಕನ ಸಾಮ್ರಾಜ್ಯದಲ್ಲಿದ್ದ ತೊಂಡಮಂಡಲಮ್‌ನಲ್ಲಿ ನೆಲೆಸಿದ್ದರು. ಇವರು ತಮ್ಮನ್ನು ತೊಂಡಮಂಡಲಮ್‌ನ ಕುರುಂಬರೊಂದಿಗೆ ಸಮೀಕರಿಸಿಕೊಳ್ಳುತ್ತಾರೆ.[೬೬] ಕ್ರಿ.ಶ. ೧೮೯೧ರ ಮದರಾಸು ಜನಗಣತಿ ಕುರುಬರು ಅಥವಾ ಪ್ರಾಚೀನ ಪಲ್ಲವರು ಆಧುನಿಕ ಪ್ರತಿನಿಧಿಗಳೆಂದು ತಿಳಿಸುತ್ತದೆ. ಅಲ್ಲದೆ ಪಲ್ಲವರ ನಾಣ್ಯಗಳ ಮೇಲೆ ಕುರುಂಬ ಎಂದು ಮುದ್ರಿಸಿದೆ. ಪಲ್ಲವರನ್ನು ತಮಿಳು ಕುರಂಬರ್ ಹಾಗೂ ಕುರುನಿಲಮನ್ನಿಯರ್ ಎಂದು ಕರೆಯುತ್ತಿದ್ದರೆಂದು ಶ್ರೀ ಎಸ್.ಕೃಷ್ಣಸ್ವಾಮಿ ಅಯ್ಯಂಗಾರರು ಅಭಿಪ್ರಾಯಪಟ್ಟಿದ್ದಾರೆ.[೬೭]

ಈ ಪಲ್ಲವರ ಮೂರು ಶಾಖೆಗಳವರು ಮೂರು ಕಡೆಗಳಲ್ಲಿ ಮೂರು ರಾಜ್ಯಗಳನ್ನು ಸ್ಥಾಪಿಸಿ ರಾಜ್ಯವಾಳಿರುವರು. ಒಂದನೆಯ ಶಾಖೆಯವರು ಬಿಜಾಪುರ ಜಿಲ್ಲೆ ಬಾದಾಮಿಯಲ್ಲಿ ಕ್ರಿ.ಶ. ೩೦೦–೫೦೦ರವರೆಗೆ ರಾಜ್ಯವಾಳಿ ನಂತರ ಗೋದಾವರಿ ಜಿಲ್ಲೆಯಲ್ಲಿರುವ ವೆಂಗಿ ಎಂಬ ಸ್ಥಳಕ್ಕೆ ಹೋಗಿ ಸುಮಾರು ಕ್ರಿ.ಶ. ೬೧೫ರ ತನಕ ಶೌರ್ಯ ಪರಾಕ್ರಮಗಳಿಂದ ರಾಜ್ಯವಾಳಿದರು. ಎರಡನೆಯ ಶಾಖೆಯವರು ಕಾಂಚೀಪುರದಲ್ಲಿ ನಿಂತು ಬಲಾಢ್ಯ ರಾಜರೆನಿಸಿಕೊಂಡರು. ಕಾಂಚೀಪುರದ ಪಲ್ಲವ ರಾಜ್ಯವು

ಕ್ರಿಶ. ೭೮೦ರಲ್ಲಿ ಲುಪ್ತವಾಯಿತು. ನಂತರ ಆ ಸಂತತಿಯವರು ಮೈಸೂರು ಸಂಸ್ಥಾನದ ನೊಳಂಬವಾಡಿಯಲ್ಲಿ ಕೆಲಕಾಲ ಆಳಿದರು. ನೊಳಂಬವಾಡಿಯ ಪಲ್ಲವರೇ ಮೂರನೆಯ ಶಾಖೆಯವರು. ಹೀಗೆ ಒಂದು ಕಾಲದಲ್ಲಿ ಪಲ್ಲವರಾಜ್ಯವು ಬಹು ವಿಸ್ತಾರವಾಗಿದ್ದಿತು ಎಂದು ವಿ.ಆರ್. ಹನುಮಂತಯ್ಯನವರು ಹೇಳಿದ್ದಾರೆ. ಬಿಜಾಪುರ, ಬೆಳಗಾವಿ, ಕಡಪ, ಕರ್ನೂಲು, ಬಳ್ಳಾರಿ, ನೆಲ್ಲೂರು, ಗುಂಟೂರು, ಕೃಷ್ಣ, ಗೋದಾವರಿ, ಚೆಂಗಲ್ಪಟ್ಟು, ನೊಳಂಬವಾಡಿ ಜಿಲ್ಲೆಗಳೆಲ್ಲಾ ಕೂಡಿ ಪೂರ್ವದ ಪಲ್ಲವ ರಾಜ್ಯವಾಗಿದ್ದಿತು[೬೮] ಎಂದಿದ್ದಾರೆ.

ಪಲ್ಲವ ರಾಜರಲ್ಲಿ ನರಸಿಂಹಮಹಾಮಲ್ಲನ ಆಳ್ವಿಕೆ ಹೆಸರಾದುದು. ಇವನ ಕಾಲದಲ್ಲಿ ಚೀನಾ ದೇಶದ “ಹ್ಯೂಯನ್ ತ್ಸಾಂಗ್”ನೆಂಬ ಪ್ರವಾಸಿಯು ಹಿಂದೂಸ್ಥಾನದಲ್ಲಿ ಸಂಚಾರ ಮಾಡಿ, ಪಲ್ಲವರ ರಾಜ್ಯವನ್ನು ಮತ್ತು ಅವರ ಪ್ರಜೆಗಳನ್ನು ಕುರಿತು ಹೀಗೆ ಬರೆದಿದ್ದಾನೆ. “ಕಾಂಚೀಪುರದ ಸುತ್ತಮುತ್ತಲಿನ ಪ್ರದೇಶವೇ ದ್ರಾವಿಡ ದೇಶವಾಗಿದೆ. ಭೂಮಿಯು ಫಲವತ್ತಾಗಿದೆ. ದವಸಧಾನ್ಯಗಳೂ, ಹಣ್ಣುಹೂಗಳು, ಹೇರಳವಾಗಿ ಬೆಳೆಯುತ್ತವೆ. ಹವೆಯೂ ಉಷ್ಣವಾಗಿದೆ. ಜನರು ಬಹು ಧೈರ್ಯಶಾಲಿಗಳು, ಸತ್ಯಸಂದರು, ಪ್ರಾಮಾಣಿಕರು. ಈ ದೇಶದಲ್ಲಿ ವಿದ್ವಾಂಸರನ್ನು ಪೂಜ್ಯಬುದ್ಧಿಯಿಂದ ಗೌರವಿಸುತ್ತಾರೆ. ಅನೇಕ ಮಂದಿ ಜೈನರೂ, ಹತ್ತು ಸಾವಿರ ಜೈನ ಸನ್ಯಾಸಿಗಳೂ ಇರುವರು. ಬ್ರಾಹ್ಮಣರ ಎಂಬತ್ತು ದೇವಸ್ಥಾನಗಳಿರುವುದು. ಕಾಂಚೀಪುರವು ಸುತ್ತಮುತ್ತ ಐದು ಮೈಲಿಗಳ ವಿಸ್ತಾರವಾಗಿ ಬಹುಸೊಗಸಾಗಿ ಕಟ್ಟಲ್ಪಟ್ಟು ಕಣ್ಣಿಗೆ ಆನಂದಕರವಾದ ಪಟ್ಟಣವಾಗಿರುವುವು”[೬೯] ಎಂದು ವರ್ಣಿಸಿರುವುದನ್ನು ಹನುಮಂತಯ್ಯನವರು ಈ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ.

ii. ಕದಂಬರು

ಕದಂಬರು ಮೂಲತಃ ಕುರುಬರು ಎಂಬ ಅಭಿಪ್ರಾಯವಿದೆ. ಕುರುಬರು ಕದಂಬರೆಂಬ ಹೆಸರಿನಿಂದ ರಾಜ್ಯಭಾರ ಮಾಡಿದರೆಂದು ಕುರುಬ ಶಬ್ದವು ಸಂಸ್ಕೃತದ ಸಂಸರ್ಗದಿಂದ ಕದಂಬ ಎಂದಾಗಿರಬೇಕೆಂದು ಲೂಯಿಸ್ ರೈಸರು ಅಭಿಪ್ರಾಯ ಪಟ್ಟಿದ್ದಾರೆ.[೭೦]

ದ್ರಾವಿಡ ಶಬ್ದ ಕುರುಬ ಎಂಬುದೇ ಸಂಸ್ಕೃತೀಕರಣಗೊಂಡು ‘ಕದಂಬ’ವಾಗಿದೆ ಎಂಬ ಅಭಿಪ್ರಾಯವಾಗಿದೆ. ಈ ಅರಸರ ಅರಮನೆಯ ಮುಂದೆ ಕದಂಬ ವೃಕ್ಷವಿದ್ದುದರಿಂದ ಈ ಹೆಸರು ಬಂದಿರುತ್ತದೆಂದು ಹೇಳಿರುವರು.[೭೧] ಇವರು ಕದಂಬ ವೃಕ್ಷದಿಂದ ಮದ್ಯವನ್ನು ತೆಗೆಯುವ ವೃತ್ತಿಯವರಾಗಿದ್ದರಲ್ಲದೆ ಮುರುಗನ್ ದೇವತೆಯ ಆರಾಧಕರಾಗಿದ್ದರು. ಆದ್ದರಿಂದ ಮುರುಗನ್ ದೇವತೆಯ ವಾಸಸ್ಥಾನವಾದ ಕದಂಬ ವೃಕ್ಷ ಹಾಗೂ ಮುರುಗನ್ ವಾಹನ ಮಯೂರವೂ ಇವರಿಗೆ ಪವಿತ್ರವಾಗಿದ್ದವು. ಕದಂಬ ರಾಜರು ಮಯೂರವರ್ಮನ, ಮೃಗೇಶವರ್ಮನ ಎಂಬ ಹೆಸರುಗಳನ್ನು ಹೊಂದಿದ್ದರು. ಹೀಗಾಗಿ ಕದಂಬರು ಬ್ರಾಹ್ಮಣರಲ್ಲಿ ದ್ರಾವಿಡ ಗುಂಪಿಗೆ ಸೇರಿದವರೆಂದು

ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಹಾಗೆಯೇ ಬನವಾಸಿಯ ಕದಂಬರು ಬ್ರಾಹ್ಮಣ ಮಾದರಿಯ ಕುರುಬರಾಗಿದ್ದರು ಎಂದು ಟೇಲರ್ ಅವರು ಅಭಿಪ್ರಾಯ ಪಟ್ಟಿದ್ದಾರೆ.[೨೨]

ಕರ್ನಾಟಕದ ಕುರುಬರಲ್ಲಿ ಮತ್ತು ಮಹಾರಾಷ್ಟ್ರದ ಧನಗಾರರಲ್ಲಿ ಕದಂ ಎಂಬ ಕುಲ ಅಥವಾ ಬೆಡಗಿದೆ. ಈ ಕದಂ ಎಂಬ ಬೆಡಗು ಕದಂಬ ಎಂದು ಆಗಿರುವ ಸಾಧ್ಯತೆಯಿದೆ.

iii. ಹೊಯ್ಸಳರು

ಹೊಯ್ಸಳರೂ ಸಹ ಕುರುಬರು ಎಂಬ ಅಭಿಪ್ರಾಯವಿದೆ. ಈ ವಂಶದ ಮೂಲದ ಬಗ್ಗೆ ಶಾಸನಗಳು ಮಾಹಿತಿ ಒದಗಿಸುತ್ತವೆ. ಒಂದು ಮೂಲದ ಪ್ರಕಾರ ಶಶಕಪುರದ ಬಳಿ ಹೆಬ್ಬುಲಿಯೊಂದು ವಾಸವಾಗಿದ್ದು ಜನರಿಗೆ ಕಿರುಕುಳ ನೀಡುತ್ತಿತ್ತು. ಈ ಹುಲಿಯ ಭಯದಿಂದ ಪಾರಾಗಲು ಜನರು ಹುಲಿಯನ್ನು ಕೊಂದವರಿಗೆ ತಲಾ ವರ್ಷ ಪ್ರತಿ ಒಂದು ಹಣ ತೆರಿಗೆ ಕೊಡುವುದಾಗಿ ತಿಳಿಸಿದರು. ಸಳನು ಆ ಹುಲಿಯನ್ನು ಕೊಂದನು. ಜನರು ಕಾಣಿಕೆ ನೀಡಿದ್ದರಿಂದ ಸಾಕಷ್ಟು ನಿಧಿಯು ಸಂಗ್ರಹವಾಯಿತು. ಅದರಿಂದ ಒಂದು ಸೈನ್ಯವನ್ನು ಕಟ್ಟಿ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಆಡಳಿತ ನಡೆಸಿದನು.[೨೩] ಅದೇ ಸಮಯದಲ್ಲಿ ಗಂಗರ ಅವನತಿ ಹಾಗೂ ಚಾಲುಕ್ಯ, ಚೋಳರ ಘರ್ಷಣೆಯ ಲಾಭ ಪಡೆದು ರಾಜ್ಯ ಸ್ಥಾಪಿಸಿದನೆಂದು ತಿಳಿಯುತ್ತದೆ. ತೊರವರೆಮಾಡಿರ್‌ಮಲೆ, ಪರೋಳ್ಕಂಡ, ಮಲೆವರಮಾರಿ ಮೊದಲಾದ ಬಿರುದುಗಳು ಇವರು ಮಲೆನಾಡು ಪ್ರದೇಶದ ನಿವಾಸಿಗಳಾಗಿದ್ದರಲ್ಲದೆ ಕನ್ನಡಿಗರಾಗಿದ್ದರೆಂದು ತಿಳಿಯುತ್ತದೆ.[೨೪] ಇದರಿಂದಾಗಿ ಹೊಯ್ಸಳರು 'ಕುರುಬ' ಸಮುದಾಯಕ್ಕೆ ಸಂಬಂಧಿಸಿದ ನಿವಾಸಿಗಳು ಅದೇ ರೀತಿ ಹೊಯ್ಸಳರು ಹೊಂದಿರುವ ಬಿರುದುಗಳು ಮಲೆವರ ಮಾರಿ, ಮಲೆಪಲೋಳ್ಕಂಡ ಇವು ಇವರು ಮಲೆನಾಡಿನ ನಿವಾಸಿಗಳೆಂದು ಸ್ಪಷ್ಟಪಡಿಸುತ್ತದೆ.

ತಮಿಳುನಾಡಿನ ಪ್ರಸಿದ್ಧ ಕುರುಬರ ವೀರಪಾಂಡ್ಯನ ಮಗ ಕೂನಪಾಂಡ್ಯನ ಪಟ್ಟದರಾಣಿ ಏಚಲಾದೇವಿಯು ಗರ್ಭವತಿಯಾದಾಗ ಅವಳನ್ನು ತವರಿಗೆ ಕಳುಹಿಸಲಾಯಿತು. ಆಕೆ 'ಹೊಯ್ಸಳ'ನಿಗೆ ಜನ್ಮ ನೀಡಿದಳು. ಇವನೇ ನಂತರದಲ್ಲಿ ದೋರಸಮುದ್ರದ ರಾಜ್ಯಭಾರ ಮಾಡಿದನಲ್ಲದೆ, ಜೈನ ವಿರೋಧಿಯಾಗಿದ್ದನೆಂದು ದೇವಚಂದ್ರನು ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ.[೨೫]

ಹೊಯ್ಸಳರ ನಾಲ್ಕನೆಯ ಬಲ್ಲಾಳನಿಗೆ ಹಕ್ಕ-ಬುಕ್ಕರ ಸೋದರಿಯೊಂದಿಗೆ ವಿವಾಹ ಮಾಡಿ ಕೊಡಲಾಗಿತ್ತು. ಹೀಗಾಗಿ ಇದರಿಂದ ಹೊಯ್ಸಳರಿಗೆ ಮತ್ತು ಸಂಗಮರೊಂದಿಗೆ(ಹಂಪಿ ದೆಂಕಿ) ರಕ್ತಸಂಬಂಧವಿತ್ತೆಂದು ತಿಳಿಯುತ್ತದೆ.[೨೬] ಕುರುಬರಲ್ಲಿ ಅಸಲು ಎಂಬ ಬೆಡಗಿದೆ. ಅಸಲು ಬೆಡಗು ಮುಂದ ಅಸಲರು, ಹೊಸಲರು, ಹೊಯ್ಸಲರು, ಹೊಯ್ಸಳರು ಎಂದು ರೂಪಾಂತರಗೊಂಡಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಹೊಯ್ಸಳರು ತಮ್ಮನ್ನು ಯಾದವರೆಂದು ಕರೆದುಕೊಂಡಿರುವುದರಿಂದ ಇವರು ಕುರುಬರು ಎಂದು ಹೇಳುವುದರಲ್ಲಿ ಯಾವುದೇ ಅನುಮಾನ ಇಲ್ಲ.

iv. ದೇವಗಿರಿಯ ಯಾದವರು

ಇವರೂ ಕುರುಬರಾಗಿ ಯಾದವರು ಎಂಬ ಹೆಸರಿನಿಂದ ರಾಜ್ಯಭಾರ ಮಾಡಿದರು. ಆಂಧ್ರಪ್ರದೇಶದಲ್ಲಿ ಕುರುಬರನ್ನು ಯಾದವರೆಂದು ಕರೆಯುತ್ತಾರೆ. ಈ ಯಾದವರಿಗೂ ಮತ್ತು ವಿಜಯನಗರ ಅರಸರಿಗೂ ವೈವಾಹಿಕ ಸಂಬಂಧವಿತ್ತೆಂದು ತಿಳಿದುಬಂದಿದೆ. ಈ ಯಾದವರು ಎರಡು ರಾಜ್ಯಗಳಲ್ಲಿ ಕಂಡುಬರುತ್ತಾರೆ. ಉತ್ತರದ ಯಾದವರು ಮತ್ತು ದಕ್ಷಿಣದ ಯಾದವರು. ಈ ಎರಡೂ ವಂಶಗಳು ಒಂದೇ ಜಾತಿಗೆ ಸೇರಿದರೂ ಉತ್ತರದವರು ಕುರಿಯ ನಂತರ ದನಕಾಯಲು ಪ್ರಾರಂಭಿಸಿದರು. ದಕ್ಷಿಣದವರು ಕುರಿಕಾಯುವುದರಿಂದಲೇ ಬಂದವರಾಗಿದ್ದರು.

ಯಾದವ ಎಂಬ ಪದ ತಮಿಳಿನ ಯಾಡು(=ಆಡು, ಕುರಿ)ನಿಂದ ಬಂದಿದ್ದು ಕುರಿಯಿಂದ 'ಕುರುಬ' ಬಂದಂತೆ 'ಯಾಡು'ವಿನಿಂದ 'ಯಾದವ' ಬಂದಿದೆ. ಯಾಡವ ಉಚ್ಚಾರ ವ್ಯತ್ಯಾಸದಿಂದ 'ಯಾದವ' ಎಂದಾಗಿವೆ[೬೬] ಎಂದು ಚಂದ್ರಕಾಂತ ಬಿಜ್ಜರಗಿಯವರು ಅಭಿಪ್ರಾಯಿಸಿದ್ದಾರೆ.

ದೇವರಿಗಿಯ ರಾಜರಲ್ಲಿ ಒಬ್ಬರಾದ ಲಕ್ಕೋಜಿ ಜಾಧವನು ಬಾರಗಿ ಧನಗಾರನೆಂದು ಕೆಲವು ಗ್ರಂಥಗಳಲ್ಲಿ ಉಕ್ತವಾಗಿದೆ. ಈ ಸಂತತಿಯ ಸ್ಥಾಪಕ ೫ನೆಯ ಶತಮಾನದಲ್ಲಿದ್ದ ಹೇಮಾಜಿಯೆಂಬುದಾಗಿ ಕಾಣುತ್ತದೆ. ಅವನು 'ಕುರುಬ' ಎಂಬುದಾಗಿ ವಿ.ಸೂರ್ಯನಾರಾಯಣರಾವ್ ಅವರು ಹೇಳುತ್ತಾರೆ.[೬೭] ಈ ಹಿನ್ನೆಲೆಯಲ್ಲಿ ದೇವಗಿರಿಯ ಯಾದವರು ಕುರುಬರೆಂಬುದು ಸ್ಪಷ್ಟ.

v. ವಿಜಯನಗರದ ಅರಸರು

ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕರಾದ ಹಕ್ಕಬುಕ್ಕರು ಕುರುಬರು ಎಂಬುದನ್ನು ಎಲ್ಲಾ ಇತಿಹಾಸಜ್ಞರೂ ಏಕಕಂಠದಲ್ಲಿ ಸಾರಿದ್ದಾರೆ. ಎಸ್.ರಾಮಕೃಷ್ಣಸ್ವಾಮಿ ಅಯ್ಯಂಗಾರ್ "The Sources of Vijayanagar" ಎಂಬ ಗ್ರಂಥದಲ್ಲಿ ಉದಾಹರಿಸಿರುವ ತಿರುಮಲಾರ್ಯನ 'ಚಿಕ್ಕದೇವರಾಜ ವಂಶಾವಳಿ' ಪದ್ಯವೊಂದು "ಅತ್ತಲುತ್ತರ ದೇಶದೋಳ್ ತುಂಗಾಭದ್ರ ತೀರದೊಳ್ ವಿದ್ಯಾನಗರಿಯನಾಳ್ದ ಹರಿಹರ ಬುಕ್ಕರ್ಮೊದಲಾದ ಕುರುಬ ರಾಯರ ಅನಂತರದೊಳ್ ಅರಸುಗೆಯ್ದು ತುಳುವ ಕುಳಾಧೀಶ್ವರ ನರಸವೀರ ನರಸಿಂಗ ಕೃಷ್ಣಾಚ್ಯುತರೆಂಬ ರಾಯರ್ಶೈವರ ತರುವಾಯಂ" ಹೇಳಿಕೆಯೂ ಹಕ್ಕ ಬುಕ್ಕರು ಕುರುಬರು ಎಂಬುದನ್ನು ಖಚಿತಪಡಿಸುತ್ತದೆ.[೬೯]

ರಾಬರ್ಟ್ ಸಿವೆಲ್ಲರೂ ತಮ್ಮ ಕೃತಿಯಲ್ಲಿ ದಾಖಲಿಸಿರುವಂತೆ "ಸನ್ಯಾಸಿ ಮಾಧವನ ಗುಪ್ತ ನಿಧಿಯ ಶೋಧದ ನಂತರ ವಿಜಯನಗರವನ್ನು ಸ್ಥಾಪಿಸಿದನೆಂದೂ ತಾನೇ ಆಳಿದನೆಂದೂ ಮತ್ತು ತನ್ನ ಮರಣಾನಂತರ ಅದನ್ನು ಒಂದು ಕುರುಬ ಮನೆತನಕ್ಕೆ ಬಿಟ್ಟು ಹೋದನೆಂದು ಅವರೇ ಕ್ರಮಬದ್ಧ ರಾಜವಂಶವನ್ನು ಸ್ಥಾಪಿಸಿದರೆಂದೂ"[೭೦] ಹೇಳಲಾಗಿದೆ.

ಕೌಟೋ ಹೇಳಿರುವ ಕಥೆಯೊಂದು ಹೀಗಿದೆ:[೮೧] "ಪರ್ವತಗಳಲ್ಲಿ ಮಾಧವ ಸನ್ಯಾಸಿ ಜೀವನ ನಡೆಸುತ್ತಿದ್ದಾಗ ಬುಕ್ಕನೆಂಬ ಬಡಕುರುಬ ತಂದುಕೊಡುತ್ತಿದ್ದ ಊಟಗಳೇ ಅವನ ಆಧಾರವಾಗಿದ್ದವು. ಒಂದು ದಿನ ಬ್ರಾಹ್ಮಣನು ನೀನು ಇಡೀ ಹಿಂದೂಸ್ಥಾನದ ರಾಜ ಮತ್ತು ಸಾಮ್ರಾಟನಾಗುವಿ ಎಂದು ಆತನಿಗೆ ಹೇಳಿದನು. ಉಳಿದ ಕುರುಬರಿಗೆ ಇದು ತಿಳಿದು ಅವನನ್ನು ಭಕ್ತಿಯಿಂದ ಕಾಣತೊಡಗಿದರು ಮತ್ತು ತಮ್ಮ ಮುಖ್ಯಸ್ಥನನ್ನಾಗಿ ಮಾಡಿಕೊಂಡರು. ಅವನು ರಾಜ ಎಂಬ ಹೆಸರು ಸಂಪಾದಿಸಿದ. ಮತ್ತ ಕ್ಯಾನರಾ, ತಳಿಗರು, ಕಾಂಗ್ವಿವರಾವ್, ನೆಗಪತಾಟ, ತನ್ನದೇ ಬಡಗರು ಹೀಗೆ ಐದು ನೆರೆಯವರನ್ನು ಗೆಲ್ಲತೊಡಗಿದನು. ಮತ್ತು ಕೊನೆಗೆ ಎಲ್ಲರ ಪ್ರಭುವಾದನು. ತನ್ನನ್ನು ಬೊಕ್ಕರಾವ್ ಎಂದು ಕರೆದುಕೊಂಡರು. ದಿಲ್ಲಿಯ ರಾಜ ಅವನ ಮೇಲೆ ದಾಳಿಯಿಟ್ಟ ಆದರೆ ಸೋತು ಹಿಂತಿರುಗಿದ. ಆ ಕಾರಣದಿಂದ ಬುಕ್ಕ ಒಂದು ನಗರವನ್ನು ಸ್ಥಾಪಿಸಿದ ಮತ್ತು ಅದನ್ನು ವಿಜಯನಗರ ಎಂದು ಕರೆದ. ನಾವು ಈ ರಾಜ್ಯವನ್ನೆಲ್ಲಾ ಆ ಹೆಸರಿನಿಂದ ಕರೆಯುತ್ತೇವೆ. ಆದರೆ ನಾಡಿಗರು ಯಾವಾಗಲೂ ಅದನ್ನು "ಕ್ಯಾನರಾದ ರಾಜ್ಯ" ಎಂದು ಕರೆಯುತ್ತಾರೆ.

ಸಿವೆಲ್ ಅವರು "ಮಹಾನ್ ರಾಜ್ಯದ ಹುಟ್ಟಿನ ಬಗೆಗೆ ಪರಿಗಣಿಸಲು ಮತ್ತು ನಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳಲು ಕಥೆಗಳ ಮತ್ತು ವಾಡಿಕೆಗಳ ಕಂತೆಯೇ ಲಭ್ಯವಿದೆ. ಇನ್ನೂ ಅನೇಕ ಕತೆಗಳು ಉಂಟು. ಬಹುಶಃ ಅತ್ಯಂತ ಯುಕ್ತಾಯುಕ್ತ ವೃತ್ತಾಂತವೆಂದರೆ ಹಿಂದೂಗಳ ಸಾಮಾನ್ಯ ಒಲವಿನ ದಂತಕತೆಗಳಿಂದ ಆಯ್ದುಕೊಂಡು ಅದನ್ನು ಐತಿಹಾಸಿಕ ಸಂಗತಿಗಳ ನಿಶ್ಚಿತತೆಯೊಂದಿಗೆ ಸಂಯೋಜಿಸಿದ್ದುದು. ಈ ದೃಷ್ಟಿಯಿಂದ ನಾವು ಸದ್ಯಕ್ಕೆ ಭಾವಿಸಬಹುದಾದುದೇನೆಂದರೆ ಅವರಿಬ್ಬರು ಸಹೋದರರು ಕುರುಬ ಜಾತಿಯ ಹಿಂದೂಗಳಾಗಿದ್ದರು ಎಂದು ಹೇಳಬಹುದು.[೮೨] ದೇವಚಂದ್ರ ಕವಿಯ ರಾಜಾವಳಿ ಕಥಾಸಾರದಲ್ಲಿ[೮೩] "ಉತ್ತರ ದೇಶದ ತುಂಗಭದ್ರಾ ತಡದೊಳ್ ರಾಜಿಸುತ್ತಿದ್ದ ವಿದ್ಯಾನಗರಿ ಯೊನಾಳ್ದ ಹರಿಹರ ವೀರಬುಕ್ಕರ ಮೊದಲಾದ ಕುರುಬಾಯರಿಂದಿತ್ತು..."

ಚಿತ್ರದುರ್ಗ ಜಿಲ್ಲೆಯ ತಾಳಿಕಟ್ಟೆ ಗ್ರಾಮದ ಬೀರಪ್ಪನ ಗುಹೆಯ ಆವರಣದಲ್ಲಿ ನೆಟ್ಟಿರುವ ಶಿಲಾ ಶಾಸನವು ಈ ರೀತಿ ಉಲ್ಲೇಖಿಸಿದೆ. "ಶ್ರೀ ಗಡದ ದೇವರಾಯ । ಬೋಜರಾಯ । ಮಲ್ಲರಾಯ । ದೊಡರಾಯ । ಬುಕರೆಯ । ಜೋಗರೆಯ । ವಿತಾ ಕುರುಬರಾಯರು ಆಳಿದರು । ರಾಮರಾಜ । ಯಕಟರಾಯರು । ತಾಳವಾರತಿರುಮಲಾರಾಜಾ । ದಳವಾಯಿ ಜಗಾಮ್ಯೆಯ । ವಿಜಯ ನಗರವ ಆಳಿದರು । ಎನ್ನುವ ವಿವರಗಳಿವೆ.[೮೪]

ಹಕ್ಕ ಬುಕ್ಕ, ಕಂಪಣ್ಣ, ಮಾರಪ್ಪ ಮತ್ತು ಮುದ್ದಪ್ಪ ಎಂಬ ಐವರು ಸಂಗಮವಂಶದ ಸಹೋದರರು. ಇವರಿಗೆ ಕ್ರಮವಾಗಿ ಹರಿಯಪ್ಪ ವೊಡೆಯರ್, ಬುಕ್ಕಣ್ಣೊಡೆಯರ್, ಕಂಪಣ್ಣೊಡೆಯರ್, ಮಾರಪ್ಪೊಡೆಯರ್ ಮತ್ತು ಮುದ್ದಪ್ಪೊಡೆಯರ್ ಎಂದು ಅನೇಕ ಶಾಸನಗಳಲ್ಲಿ ಕರೆಯಲಾಗಿದೆ.[೮೫] ಈ ಮಾಹಿತಿಯ ಪ್ರಕಾರ ಹಕ್ಕಬುಕ್ಕ 'ಕುರುಬ' ಸಮುದಾಯದಲ್ಲಿ 'ಒಡೆಯರು' ಎನ್ನುವ ಪಂಗಡಕ್ಕೆ ಸೇರಿದವರಿರಬೇಕು ಎಂದು ತಿಳಿದುಬರುತ್ತದೆ.

ವಿಜಯನಗರಕ್ಕೆ ಸಂಬಂಧಿಸಿದ ಶಾಸನವೊಂದರಲ್ಲಿ ಹಕ್ಕಬುಕ್ಕ ಸಹೋದರರು ಕ್ಷೀರಸಾಗರ ಸಂಭವಃ ಎಂಬ ಉಲ್ಲೇಖವಿದೆ.[೮೬] ಕುರುಬರಿಗೆ ಹಾಲುಮತದವರು, ಕ್ಷೀರವಂಶದವರು ಎಂದು ಕರೆಯುತ್ತಾರೆ.

ಕುರುಬರಲ್ಲಿ ಒಟ್ಟು ೮೭೭ ಬೆಡಗುಗಳನ್ನು ಪತ್ತೆ ಹಚ್ಚಿ ಸಂಗ್ರಹಿಸಲಾಗಿದೆ. ಇವುಗಳಲ್ಲಿ ಸಂಗಮ ಎಂಬುದೂ ಕೂಡ ಸೇರಿದೆ. ಇದರಿಂದ ವಿಜಯನಗರ ಸಾಮ್ರಾಜ್ಯವನ್ನಾಳಿದ ಮೊದಲ ಕುಲ ಸಂಗಮವಾಗಿರುವುದರಿಂದ ಮತ್ತು ಆ ಕುಲದ ಹಕ್ಕಬುಕ್ಕರು ಮೊದಲ ದೊರೆ ಹಾಗೂ ಸಂಸ್ಥಾಪಕರು. ಇದರಿಂದ ವಿಜಯನಗರದ ಸ್ಥಾಪಕರ ಮೂಲ 'ಕುರುಬ' ಸಮುದಾಯ ಎಂದು ಹೇಳಬಹುದಾಗಿದೆ.

ಈ ದಾಖಲೆಗಳ ಹಿನ್ನೆಲೆಯಿಂದ ಕುರುಬರು ಹಂಪಿಯನ್ನು ತಮ್ಮದೆಂದು ವಾದಿಸುತ್ತಾರೆ. ಇದಕ್ಕೆ ಎರಡು ಕಾರಣಗಳನ್ನು ಕೊಡುತ್ತಾರೆ. ಈಗಿನ ವಿರೂಪಾಕ್ಷ ದೇವಸ್ಥಾನದ ಪಕ್ಕದಲ್ಲಿರುವ ಮೂಲ ವಿರುಪಾಕ್ಷನು ಮೂಲತಃ ಬೀರಪ್ಪ ಅಥವಾ ಬೀರದೇವರು. ಈ ಬೀರದೇವರು ಕುರುಬರ ದೇವತೆ. ಹಾಗಾಗಿ ದೇವಸ್ಥಾನಗಳ ಒಡೆತನ ಮೂಲತಃ ಕುರುಬರಿಗೆ ಸೇರಿದೆ. ವಿಜಯನಗರ ಸಂಸ್ಥಾನದ ಸಂಸ್ಥಾಪಕರಾದ ಹಕ್ಕ ಬುಕ್ಕರು ಕುರುಬರಾಗಿದ್ದರು ಎಂದು ಹೇಳುತ್ತಾರೆ. ಹಂಪಿಯ ಸಂಸ್ಥಾನ ಕುರುಬರದ್ದು. ವಿಜಯನಗರ ವಾಸ್ತುವಿನಲ್ಲಿರುವ ಕುರುಂಬನ ಚಿತ್ರ ಕಂಬಳಿ ಹೊದ್ದುಕೊಂಡು ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಕುರಿ ಕಾಯುವ ಕುರುಬನ ಚಿತ್ರ ವಿಜಯನಗರದ ಅನೇಕ ದೇವಾಲಯದ ಕಂಬಗಳಲ್ಲಿ ಕಾಣಸಿಗುತ್ತದೆ.[೮೭] ಆದ್ದರಿಂದ ಕುರುಬರೇ ವಿಜಯನಗರದ ಸ್ಥಾಪಕರು ಎಂದು ತಿಳಿದುಬಂದಿದೆ.

vi. ಬಿದನೂರು ಮತ್ತು ಇಕ್ಕೇರಿಯ ಅರಸರು

ಇವರು ಸಹ ಕುರುಬರೆನ್ನುವುದಕ್ಕೆ ಆಧಾರಗಳಿವೆ. ಕುರುಬರಾಗಿದ್ದ ಈ ಅರಸರು ವಿಜಯನಗರದ ಸದಾಶಿವರಾಯನ ಪ್ರಭಾವದಿಂದ ವೀರಶೈವ ಮತವನ್ನವಲಂಬಿಸಿದರು. ಕೆಳದಿ ಅರಸರಿಗೆ 'ಮನ್ನೆಯರು' ಎಂಬ ಹೆಸರಿದ್ದು ಇದು ಮುಂದೆ ಮಾನೆಯರಾಗಿ ಪರಿವರ್ತಿತಗೊಂಡು ಕುರುಬರಲ್ಲಿ 'ಮಾನೆ' ಎಂಬ ಗೋತ್ರಕ್ಕೆ ಸಾಕ್ಷಿಯಾಗಿದೆ. ಬಿದನೂರಿನಲ್ಲಿ ಹೊನ್ನಯ್ಯ ಕಂಬಳಿ ಎಂಬ ಪ್ರಸಿದ್ಧ ಪಾಳೆಯಗಾರನು ಆಳ್ವಿಕೆ ನಡೆಸಿದ್ದಕ್ಕೆ ಆಧಾರಗಳಿವೆ.[೮೮] ಬೆಳವಡಿ ದೇಸಾಯರ ಪೂರ್ವಜ ಬೊಮ್ಮನಾಯಕನೆಂಬುವನು 'ಧನಗಾರ'ನೆಂದು ತಿಳಿದುಬಂದಿದೆ.

vii. ಶಾತವಾಹನರು

ಶಾತವಾಹನರೂ ಕುರುಬರೆಂಬ ಅಭಿಪ್ರಾಯವಿದೆ. ಶಾತವಾಹನ ಎಂಬುದು ಒಂದು ಕುಲ ಅಥವಾ ಜಾತಿಯಾಗಿದೆ. ಶಾತ ಎಂದರೆ ವೇಗವಾದ, ಹರಿತವಾದ ಎಂದರ್ಥ.[೮೯] ಶಾತವಾಹನರೆಂದರೆ ಶೀಘ್ರಗಾಮಿ ಕುದುರೆಯನ್ನೇರಿ ಹೋಗುವ ರಾವುತರು. ಮಹಾರಾಷ್ಟ್ರದ ಹಟ್ಕರ್(ಧನಗಾರ)ರಲ್ಲಿ

ಭರ್ಜಿ ಹಿಡಿದ ಸ್ವಂತ ಕುದುರೆ ಮೇಲೆ ಸವಾರಿ ಮಾಡುವ ವೀರರಿದ್ದಾರೆ. ಇವರಿಗೆ ಭರ್ಗೆ ಅಥವಾ ಭರ್ಜಿ ಧನಗಾರರೆಂದು ಕರೆಯಲಾಗಿದೆ.[೬೦] ಕರ್ನಾಟಕದ ಹಂಡೆಕುರುಬರು, ಹಂಡೆವಜೀರರು ಕುದುರೆ ಸವಾರರಾಗಿದ್ದರು.

viii. ಮೈಸೂರು ಒಡೆಯರು

ಇವರ ಮೂಲದ ಬಗ್ಗೆ ಪುರಾಣಗಳಲ್ಲಿ ಬರುವ ದ್ವಾರಕೆಯ 'ಯದುವಂಶ'(ಶ್ರೀ ಕೃಷ್ಣವಂಶ) ಎಂದು ಗುರುತಿಸುವ ಸಂಪ್ರದಾಯವಿದೆ.[೬೧] ಒಡೆಯರ ಮನೆತನದ ಮೂಲಪುರುಷನಾದ ಯದುರಾಯ ತನ್ನ ಸೋದರ ಕೃಷ್ಣರಾಯನೊಂದಿಗೆ ಒಂದು ರಾಜ್ಯ ಸ್ಥಾಪಿಸಿದನೆಂದು ಹೇಳಲಾಗಿದೆ.

ಒಡೆಯರ ವಂಶದ ಮೂಲ ಪುರುಷನು ಚಂದ್ರವಂಶಕ್ಕೆ ಸೇರಿದ ಕೆಲವು ದಕ್ಷಿಣ ಭಾರತೀಯ ರಾಜಮನೆತನಗಳೊಂದಿಗೆ ಸಂಬಂಧವಿತ್ತು, ಹೊಯ್ಸಳ ರಾಜಮನೆತನ ನಾಶವಾದ ಮೇಲೆ ಓಡಿಹೋಗಿದ್ದ ರಾಜಪುರುಷರು ಇವರೇ ಎಂದು, ಇವರ ರಾಜಧಾನಿ ಧ್ವಾರಾವತಿ ಅಥವಾ ದ್ವಾರಸಮುದ್ರವಾಗಿದ್ದಿತೆಂದು ಎಸ್.ಕೆ.ಅಯ್ಯಂಗಾರರು ಅಭಿಪ್ರಾಯಪಡುತ್ತಾರೆ.[೬೨]

ಒಡೆಯರ ಮೂಲದ ಬಗ್ಗೆ ಒಂದು ಕಥೆ ಪ್ರಚಲಿತದಲ್ಲಿದೆ. ಅದರ ಪ್ರಕಾರ ಕ್ರಿ.ಶ. ೧೩೯೯ರಲ್ಲಿ ಉತ್ತರ ಭಾರತದ ಕಡೆಯಿಂದ ಯದುವಂಶದ ಯದುರಾಯ, ಕೃಷ್ಣರಾಯ ಎಂಬ ಸಹೋದರರು ದಕ್ಷಿಣ ಭಾಗಕ್ಕೆ ವಲಸೆ ಬಂದರು. ಕಾವೇರಿಯನ್ನು ದಾಟಿ ಮೈಸೂರು ಭಾಗಕ್ಕೆ ಬಂದರು. ಆಗ ಮೈಸೂರು ಭಾಗದಲ್ಲಿ ಆಳ್ವಿಕೆ ನಡೆಸಿದ್ದ ಪಾಳೆಯಗಾರ ಚಾಮರಾಜ ಮೃತನಾದನು. ಇವನ ಪತ್ನಿ ಮತ್ತು ಮಕ್ಕಳನ್ನು ಮಾರನಾಯಕ ಹಿಂಸಿಸತೊಡಗಿದನು. ಮಾರನಾಯಕನ ವಿರುದ್ಧ ಹೋರಾಡಿ ಅವನನ್ನು ಕೊಲೆ ಮಾಡಿದರು. ಈ ಸಹಾಯಾರ್ಥಕವಾಗಿ ಚಾಮರಾಜನ ಮಗಳನ್ನು ಯದುರಾಯ ವಿವಾಹವಾದನು. ಹೀಗಾಗಿ ಈ ಯದುವಂಶಕ್ಕೆ ಮೂಲಪುರುಷನಾದನು. ರಾಜ್ಯ ಸ್ಥಾಪಿಸಿದ ಮೇಲೆ ಒಡೆಯರ ಎಂಬ ಅಂಕಿತವನ್ನು ಸೇರಿಸಿಕೊಂಡನು. ಅಂದಿನಿಂದ ಈ ವಂಶಸ್ಥರು ಒಡೆಯರು ಎಂದು ಕರೆಯಲ್ಪಟ್ಟರು.

ಮೈಸೂರು ಒಡೆಯರು ಕುರುಬರು ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕುರುಬರಲ್ಲಿ 'ಅರಸು' ಎಂಬ ಕುಲವಿದೆ.[೬೩] ಅಲ್ಲದೆ ರೇವಣಸಿದ್ಧನ ಅನುಯಾಯಿಗಳಿಗೆ 'ಒಡೆಯರು' ಎಂದು ಕರೆಯಲಾಗಿದೆ. ಇಂದಿಗೂ ಈ ಒಡೆಯರು ಕುರುಬರ ಕುಲಗುರುಗಳಾಗಿರುವರು.

ix. ಹಂಡೆಯ ಪಾಳೆಯಗಾರರು(ಬಳ್ಳಾರಿ)

ಬಾಲದ ಹನುಮಪ್ಪ ನಾಯಕನಿಂದ ಈ ಹಂಡೆ ಪಾಳೆಯಗಾರರು ಎಂಬ ಮನೆತನ ಸೃಷ್ಟಿಗೊಂಡಿದೆ. ಈ ಮನೆತನ ಕ್ರಿ.ಶ. ೧೫೯೭ರಿಂದ ೧೮೮೯ರವರೆಗೆ ಆಳ್ವಿಕೆ ನಡೆಸಿತು. ಹಂಡೆಕುರುಬರ ಮೂಲವನ್ನು ತಿಳಿಯಲು ಕುರುಗೋಡು ಮತ್ತು ಬಳ್ಳಾರಿ ಕೈಫಿಯತ್ತು ಪ್ರಮುಖ ಆಧಾರವಾಗಿದೆ.

ಕುರುಗೋಡು ಕೈಫಿಯತ್ತು ಬಾಲದ ಹನುಮಪ್ಪ ನಾಯಕನು ವಿಜಾಪುರದ ಬಾದಶಹನಲ್ಲಿ ಸರದಾರನಾಗಿದ್ದು, ಹಂಡೆಕುರುಬರ ಜಾತಿಗೆ ಸೇರಿದ್ದು, ಮುತ್ತಿಗೆ ಗ್ರಾಮದವನೆಂದು ಹೇಳುತ್ತದೆ.

ವಿಜಾಪುರದ ಬಾದಶಹನಲ್ಲಿ ಬಿಜಾಪುರದ ಸೀಮೆಯಲ್ಲಿ ಮುತ್ತಿಗೆಯಂಬೋ ಗ್ರಾಮದ ಗೌಡ ಹಂಡೆಕುರುಬರ ವಂಶಸ್ಥ ಹಂಡೆ ಬಾಲದ ಹನುಮಪ್ಪನಾಯಕನೆಂಬುವನು ವಿಜಾಪುರದ ಬಾದಶಹನಲ್ಲಿ ಸರದಾರನಾಗಿದ್ದ.[೯೪] ಅಲ್ಲಿಂದ ಬಾದಶಹನು ಈತನನ್ನು ದಕ್ಷಿಣ ಭಾಗದಲ್ಲಿ ರಾಜ್ಯವನ್ನು ವಿಸ್ತರಿಸುವ ಸಲುವಾಗಿ ಬಂಕಾಪುರವನ್ನು ಜಹಗೀರಾಗಿ ಕೊಟ್ಟು ಕ್ರಿ.ಶ. ೧೪೮೮ರಲ್ಲಿ ಕಳುಹಿಸಿದನೆಂದು ಅದೇ ಕುರುಗೋಡು ಕೈಫಿಯತ್ತು ಹೇಳುತ್ತದೆ.[೯೫] ಅಂದರೆ ಈ ಕೈಫಿಯತ್ತಿನ ಪ್ರಕಾರ ಬಳ್ಳಾರಿ ಪಾಳೆಯಗಾರರು ಹಂಡೆಕುರುಬರ ಜಾತಿಗೆ ಸೇರಿದವರಾಗಿದ್ದರೆಂದು ಹೇಳಬಹುದು.

ಇದೇ ಅಭಿಪ್ರಾಯವನ್ನು ಬಳ್ಳಾರಿ ಕೈಫಿಯತ್ತು ಎತ್ತಿ ಹಿಡಿಯುತ್ತದೆ. ಅದರ ಪ್ರಕಾರ "ಬಿಜಾಪುರ ದೇಶದಲ್ಲಿ ಕೃಷ್ಣನದಿಗೆ ಉತ್ತರ ಭಾಗದಲ್ಲಿರುವ ಮೂರ್ತಿಗಿರಿಯೆಂಬ ಗ್ರಾಮದಲ್ಲಿ 'ಹಂಡೆಕುರುಬ' ಜಾತಿಯವರು ಗೌಡಿಕೆ ಮಾಡಿಕೊಂಡು ಇದ್ದರು. ಅವರ ಸಂತತಿಯ ಬಾಲದ ಹನುಮಪ್ಪ ನಾಯಕನು ಪ್ರತಿ ದಿನದಲ್ಲಿಯೂ ದೇವರ ಅನುಗ್ರಹದಿಂದ ಬುದ್ಧಿವಂತನೆನಿಸಿಕೊಂಡು ಬಿಜಾಪುರದ ಬಾದುಶಹರವರ ಅನುಗ್ರಹವನ್ನು ಸಂಪಾದಿಸಿದುದರಿಂದ ಈತನಿಗೆ ಪೌಜುದಾರಿ ಮೊಕರೂರ್ ಮಾಡಿಕೊಟ್ಟರು. ಕೆಲವು ದಿವಸ ಆ ಕೆಲಸದಲ್ಲಿದ್ದು ಒಂದೆರಡು ಸ್ವಾಮಿಕಾರ್ಯದಲ್ಲಿ ಮೆಹನತ್ತು ಮಾಡಿದ್ದು ಕಂಡುಬಂದು, ಬಾದುಷಾಹರವರು ವಜೀರಪ್ಪ ಸಹಿ ಎಂಬ ಕಿತಾಬು ಕೊಟ್ಟರು. ತರುವಾಯ ಕರ್ನಾಟಕ ದೇಶವು ಅರಾಜಕತೆಯಿಂದ ಹಾಳಾಗಿರಲಾಗಿ ಈ ಬಾಲದ ಹನುಮಪ್ಪ ನಾಯಕನನ್ನು ಕಳುಹಿಸಿದರೆ ರಾಜ್ಯ ಬಸ್ತಿ ಆದೀತೆಂದು ಬಾದುಷಹಾರವರು ತಿಳಿದು ಕೆಲವು ಫೌಜು ಕೊಟ್ಟು ಈ ದಕ್ಷಿಣ ಪ್ರಾಂತ್ಯಕ್ಕೆ ಕಳುಹಿಸಿದರು..."

ಬಾಲದ ಹನುಮಪ್ಪನಾಯಕನು ಬಂಕಾಪುರಕ್ಕೆ ಬಂದು ಕಿಲ್ಲೆ ಕಟ್ಟಿಸಿ ಆ ರಾಜ್ಯ ಬಸ್ತಿಮಾಡಿ ಅಲ್ಲಿಂದ ತುಂಗಭದ್ರಾ ಮಹಾನದಿಯನ್ನು ದಾಟಿ ಈ ಸೀಮೆಗೆ ಬಂದು ಬಳ್ಳಾರಿಯ ಗುಡ್ಡಕ್ಕೆ ಪೂರ್ವ ಭಾಗದಲ್ಲಿ ಗುಡ್ಡದ ಮೇಲೆ ಕಿಲ್ಲೆ ಕಟ್ಟಿಸಿ ಅಲ್ಲೇ ಮೊಕ್ಕಾಂ ಮಾಡಿಕೊಂಡು ಸುತ್ತಮುತ್ತಲ ಗ್ರಾಮಗಳನ್ನು ತನ್ನ ರಕ್ಷೆಗೆ ಒಳಪಡಿಸಿಕೊಂಡು ಆಳ್ವಿಕೆ ನಡೆಸಿದನೆಂದು ತಿಳಿಸುತ್ತದೆ.[೯೬]

ಬಳ್ಳಾರಿ ಕೈಫಿಯತ್ತು ಮತ್ತು ಕುರುಗೋಡು ಕೈಫಿಯತ್ತುಗಳಲ್ಲಿರುವಂತೆ ಈ ಪಾಳೇಗಾರರು ಮೂಲತಃ ಹಂಡೆಕುರುಬ ಜಾತಿಯವರೆಂದು ಸ್ಪಷ್ಟವಾಗಿ ಹೇಳಿವೆ. ಮೂಲತಃ ಹಂಡೆಕುರುಬ ವಂಶದವರಾಗಿದ್ದ ಇವರು ಬಿಜಾಪುರದ ಬಾದಶಹನ ಕೃಪೆಯಿಂದ ರಾಜ್ಯ ಸ್ಥಾಪಿಸಿದರು. ನಂತರ ಇವರ ವಂಶ ರಾಜವಂಶವಾಯಿತು. ಇವರು ರಾಜರಾದ ಮೇಲೆ ತಮ್ಮ ಜಾತಿಯನ್ನು

ಉದಾತ್ತೀಕರಿಸಿಕೊಳ್ಳಲು ಒಂದು ಹಂತದಲ್ಲಿ ವೀರಶೈವ ಧರ್ಮವನ್ನು ಸ್ವೀಕರಿಸಿ, ನಂತರ ವೀರಶೈವರಾದರು ಎನ್ನಬಹುದು. ಹೀಗೆ ಬಳ್ಳಾರಿ ಪಾಳೇಗಾರರು ಮೂಲತಃ ಹಂಡೇಕುರುಬರೇ ಆಗಿದ್ದಾರೆ ಎಂಬುದು ಸ್ಪಷ್ಟವಾಗಿದೆ.

ಶಂಬಾ ಜೋಶಿ ಅವರು ಹೇಳುವಂತೆ "ವೀರಶೈವ ಲಿಂಗಾಯತ ಪಂಥ ಒಂದು ಪ್ರಸಾರದ ಧರ್ಮವಾಗಿರುವುದರಿಂದ ಕುರುಬ, ರೆಡ್ಡಿ, ಒಕ್ಕಲಿಗರಂತಹ ಅನೇಕ ಉಪಜಾತಿಗಳು ಆ ಧರ್ಮದಲ್ಲಿ ಸೇರಿಹೋದವು. ಲಿಂಗಾಯಿತ ಪಂಥದಲ್ಲಿ ಸೇರಿಹೋದ ಪ್ರಾಚೀನ ಜಾತಿಗಳ ಜನರ ಹೆಸರು ಇಂದಿಗೂ ಅಸ್ಪಷ್ಟವಾಗಿ ಕೇಳಿಬರುತ್ತದೆ."[೯೭] ಬಳ್ಳಾರಿ ಪಾಳೆಯಗಾರರ ವಿಷಯದಲ್ಲಿಯೂ ಶಂಬಾ ಜೋಶಿಯವರ ಹೇಳಿಕೆಯನ್ನು ಗಮನಿಸಬೇಕಾಗುತ್ತದೆ.

x. ಇಂದೋರಿನ ಹೋಳ್ಕರ್ ಅರಸುಮನೆತನ

ಮಹಾರಾಷ್ಟ್ರದ ಇಂದೋರಿನ ಹೋಳ್ಕರ್ ಅರಸುಮನೆತನ ಕುರುಬ(ಧನಗರ) ಸಮುದಾಯಕ್ಕೆ ಸೇರಿದುದು. ಇತ್ತೀಚಿನ ದಿನಗಳಲ್ಲಿ ಹೆಸರು ಮಾಡಿದ ಕುರುಬರ ರಾಜವಂಶಗಳಲ್ಲಿ ಪ್ರಸಿದ್ಧ ಮತ್ತು ಬಲಾಢ್ಯಕ್ಕೆ ಹೆಸರು ಮಾಡಿದ ಮನೆತನ. ಈ ಮನೆತನದ ಸಂಸ್ಥಾಪಕ ಮಲ್ಹಾರಿರಾವ್ ಮೂಲತಃ ಒಬ್ಬ ಕುರಿ ಕಾಯುವವನ ಮಗನಾಗಿ ಹುಟ್ಟಿದ್ದನು. ಇವನ ತಂದೆಯು ಕುರಿ ಕಾಯುವುದನ್ನು ಬಿಟ್ಟು ಲಾಭದಾಯಕ ಕಂಬಳಿ ನೇಕಾರಿಕೆಯನ್ನು ಕೈಗೊಂಡ. ಈತನ ತಂದೆ ತೀರಿಕೊಂಡಾಗ ಇವನಿಗೆ ೮–೧೦ ವರ್ಷ ವಯಸ್ಸು. ಇವನ ತಾಯಿಯ ಸೋದರ ಪೇಶ್ವೆಯವರಲ್ಲಿ ಕುದುರೆ ಲಾಯದಲ್ಲಿ ಕೆಲಸಕ್ಕಿದ್ದ. ಮಲ್ಹಾರಿಯನ್ನು ತಾನು ಕೆಲಸ ಮಾಡುತ್ತಿರುವ ಲಾಯದಲ್ಲಿಯೇ ಕೆಲಸಕ್ಕೆ ಸೇರಿಸಿದ, ಕುದುರೆ ಲಾಯದಲ್ಲಿ ಕಸ ಗುಡಿಸುವ, ಕುದುರೆ ಮೈತೊಳೆಯುವ ಕೆಲಸದಲ್ಲಿ ಸೋದರ ಮಾವನಿಗೆ ಸಹಾಯಕನಾಗಿದ್ದನು. ಸ್ವಲ್ಪ ಸಮಯದಲ್ಲಿಯೇ ಉತ್ತಮ ಕುದುರೆ ಸವಾರನಾಗಿ ಯುದ್ಧಕಲೆಯಲ್ಲಿ ನಿಪುಣನಾಗಿದ್ದನು. ತನ್ನ ೨೧ನೆಯ ವಯಸ್ಸಿನಲ್ಲಿ ಸೇನಾ ತುಕಡಿಯ ಮುಖ್ಯಸ್ಥನಾಗಿ ಕೀರ್ತಿ ಗಳಿಸಿದ್ದನು. ಅನೇಕ ಯುದ್ಧಗಳಲ್ಲಿ ಪೇಶ್ವೆಗೆ ಸಹಾಯಕನಾಗಿ ಜಯ ದೊರಕಿಸಿಕೊಟ್ಟಾಗ ಇವನ ಋಣ ತೀರಿಸಲು ಇಂದೋರ್ ಪ್ರದೇಶದ ಆಡಳಿತಭಾರ ವಹಿಸಿಕೊಟ್ಟನು. ಇವನ ನಂತರ ಈತನ ಮುದ್ದಿನ ಸೊಸೆ 'ಅಹಲ್ಯಾದೇವಿ'ಯು ಈ ಮನೆತನದ ಜನಪ್ರಿಯ ರಾಣಿಯಾಗಿ ಮೂವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದಳು. ಲೇಖಕರಾದ ವಿ.ಆರ್. ಹನುಮಂತಯ್ಯನವರು ಹೇಳುವಂತೆ "ಈಕೆಯ ನ್ಯಾಯೈಕಪರಾಯಣತೆ, ನಿಷ್ಪಕ್ಷಪಾತ ಧೋರಣೆ, ಪರೋಪಕಾರ, ರಾಜಕಾರ್ಯ ನಿರ್ವಾಹಕ ಶಕ್ತಿ, ದಕ್ಷತೆ, ಶಾಂತಿ, ಸಹನೆಗಳನ್ನು ಕಂಡ ಜನ ಹಿಂದೆ ಇಂಥವರು ಇರಲಿಲ್ಲವೆಂದು, ಮುಂದೆ ಬರಲಾರರೆಂದು ಭಾವಿಸಿಕೊಂಡು, ಈಕೆ ದೈವಾಂಶ ಸ್ವರೂಪಿಣಿ ಎಂಬಂತೆ ದೇವಿ ಅಹಲ್ಯಾಬಾಯಿ ಎಂದು ಸಂಬೋಧಿಸತೊಡಗಿದರು. ಈಗಲೂ ಈಕೆಯನ್ನು ದೇವತೆಯೆಂದು

ಪೂಜಿಸುವರು.[೬೮] ಮಹಾರಾಷ್ಟ್ರದ ಧೀರ ಮಹಿಳೆಯರ ಸಾಲಿನಲ್ಲಿ ಬರುವ ಜೀಜಾಬಾಯಿ, ಯೇಸುಬಾಯಿ, ತಾರಾಬಾಯಿ, ರಾಧಾಬಾಯಿ, ಗೋಪಿಕಬಾಯಿ, ಬಾಯಜಾಬಾಯಿ, ಲಕ್ಷ್ಮೀಬಾಯಿಯರಲ್ಲಿ ಅಹಲ್ಯಾಬಾಯಿಯ ಏಕಮೇವ ಹೆಸರು ರಾಜಾಜಿಸುತ್ತದೆ.[೬೯]

ಹೀಗೆ ದಕ್ಷಿಣ ಭಾರತದಲ್ಲೆಲ್ಲ ತೋಳ್ಬಲದಿಂದ ರಾಜ್ಯ ಕಟ್ಟಿ ವಿಜೃಂಭಿಸಿದ ಹೆಮ್ಮೆ ಈ ಜನಾಂಗಕ್ಕಿದೆ ಎಂದು ಹೇಳಬಹುದು.

೮. ಕುರುಬರ ಪ್ರಮುಖ ಮಹನೀಯರು

ಹಾಲುಮತ ಕುರುಬ ಜನಾಂಗವು ಪ್ರಾಚೀನ ಕಾಲದಿಂದಲೂ ಭಾರತೀಯ ಮತ್ತು ಕನ್ನಡ ಸಾಹಿತ್ಯ ಸಂಸ್ಕೃತಿಗೆ ವಿಶಿಷ್ಟವಾದ ಮತ್ತು ಅನನ್ಯವಾದ ಕೊಡುಗೆ ನೀಡುತ್ತಾ ಬಂದಿದೆ. ಈ ಹಾಲುಮತ ಕೊಡುಗೆ ಪರಂಪರೆಯು ಸಂಸ್ಕೃತದ ಮಹಾಕವಿ ಕಾಳಿದಾಸನ ಮೂಲಕ ಮುಂದುವರೆದು ಬಂದಿದೆ. ವಿ.ಆರ್.ಹನುಮಂತಯ್ಯನವರು ಕನಕದಾಸ, ಕಾಳಿದಾಸ, ಅಹಲ್ಯಾಬಾಯಿ ಹೋಳ್ಕರ್ ಮತ್ತು ಕೈ.ವಾ.ಶ್ರೀಗುರು ಸಿದ್ದಪ್ಪಯ್ಯಸ್ವಾಮಿಗಳ ಜೀವನಚರಿತ್ರೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ.

ಕನಕದಾಸ

ದಾಸ ಸಾಹಿತ್ಯದ ಪರಂಪರೆಯಲ್ಲಿ ಕನಕದಾಸರು ಪ್ರಮುಖರು. ಇವರು ಪುರಂದರದಾಸರ ಸಮಕಾಲೀನರಲ್ಲಿ ಹಾಗೂ ವ್ಯಾಸರಾಯರ ಶಿಷ್ಯರಲ್ಲಿ ಒಬ್ಬರು. ಪುರಂದರದಾಸರನ್ನು ಮತ್ತು ಕನಕದಾಸರನ್ನು ದಾಸಪಂಥದ ಅಶ್ವಿನಿ ದೇವತೆಗಳೆಂದು ಕರೆಯುತ್ತಾರೆ. ಪುರಂದರ ದಾಸರ ಜೊತೆಗೆ ಪ್ರತಿಷ್ಠಿತ ಸಾಲಿನಲ್ಲಿ ನಿಲ್ಲುವ ಹೆಸರು ಕನಕದಾಸರದು. ಇವರು ಕೇವಲ ದಾಸರಾಗದೇ ಕವಿಗಳಾಗಿಯೂ ಪ್ರಮುಖರೆನಿಸಿಕೊಂಡವರು.

ಇವರು ಕುರುಬ ಜಾತಿಯಲ್ಲಿ 'ಹಂಡೆ'ಕುರುಬರೆಂಬ ಒಳಪಂಗಡಕ್ಕೆ ಸೇರಿದವರೆಂದು ಹನುಮಂತಯ್ಯನವರು ಹೇಳಿದ್ದಾರೆ. ಈತನ ಜನ್ಮಸ್ಥಳ ತುಂಗಭದ್ರಾ ತೀರದಲ್ಲಿರುವ ಆನೆಗೊಂದಿ ಸಂಸ್ಥಾನಕ್ಕೆ ಸೇರಿದ 'ಬಾಡ' ಎಂಬ ಗ್ರಾಮ. ತಂದೆ ಹೆಸರು ಬೀರೇಗೌಡ, ತಾಯಿ ಬಚ್ಚಮ್ಮ. ಕನಕದಾಸರ ಪೂರ್ವಾಶ್ರಮದ ಹೆಸರು ತಿಮ್ಮಪ್ಪನಾಯಕ. ಈತನ ಕಾಲ ಕ್ರಿ.ಶ. ೧೫೦೯ರಿಂದ ೧೬೦೭. ಆರಾಧ್ಯ ದೇವರು ಕಾಗಿನೆಲೆಯ ಆದಿಕೇಶವ. ಬೀರಪ್ಪನು ಎಪ್ಪತ್ತೆಂಟು ಗ್ರಾಮಗಳಿಗೆ ಪಾಳೆಯಗಾರನಾಗಿ ಸೇವೆ ಸಲ್ಲಿಸುತ್ತಿದ್ದನು. ಇವರಿಗೆ ಮಕ್ಕಳಿಲ್ಲದ್ದರಿಂದ ಮನೆದೇವರಾದ ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊತ್ತು ಪುತ್ರನನ್ನು ಪಡೆದರು. ಈ ಮಗುವಿಗೆ ಜನ್ಮಾನುಸಾರವಾಗಿ ತಿಮ್ಮಪ್ಪ ಎಂದು ನಾಮಕರಣ ಮಾಡಿದರು. ತಿರುಪತಿ ತಿಮ್ಮಪ್ಪನಿಗೆ ಕನಕಗಿರಿವಾಸ ಎಂಬ ನಾಮ ಇರುವುದರಿಂದ ಅವರನ್ನು 'ಕನಕಪ್ಪ' ಎಂದು ಕರೆಯುತ್ತಿದ್ದರು. ಇವರು ವೈರಾಗ್ಯ ಜೀವನಕ್ಕೆ ಇಳಿದು ದಾಸನಾದಾಗ 'ಕನಕದಾಸ'ರೆಂಬ ಹೆಸರಿನಿಂದ ಪ್ರಖ್ಯಾತರಾದರು.

ಇವರು ಚಿಕ್ಕವರಿರುವಾಗಲೇ ತಂದೆ–ತಾಯಿಯರು ತೀರಿಕೊಂಡರು. ವಂಶಾನುಗತವಾಗಿ ಬಂದ ದಂಡನಾಯಕ ವೃತ್ತಿಯು ಪ್ರೌಢಾವಸ್ಥೆಗೆ ಬಂದ ಕನಕನಿಗೆ ದೊರಕಿತು. ವೀರ ಶೃಂಗಾರರಸದ ಹೊಳೆಯಲ್ಲಿ ಮಿಂದು ಬದುಕುವ ಇವನಿಗೆ ಭೂಶೋಧನೆ ನಡೆಸಿದಾಗ ಅಪಾರವಾದ ಧನಕನಕ ಪ್ರಾಪ್ತವಾಯಿತು. ಈ ಹಣದಿಂದಲೇ ಕಾಗಿನೆಲೆಯಲ್ಲಿ ಆದಿಕೇಶವ ಗುಡಿಯನ್ನು ಜೀರ್ಣೋದ್ಧಾರ ಮಾಡಿದ. ಅನಂತರ ವಿಜಯನಗರದ ಅರಸರ ಕೃಪೆಗೆ ಪಾತ್ರನಾದ. ಬಂಕಾಪುರಕ್ಕೆ ಒಡೆಯನಾದ ಈ ಪದವಿ ಬಹುಕಾಲ ಉಳಿಯಲಿಲ್ಲ. ನೆರೆಪಾಳೆಯದಿಂದ ಒಡೆಯ ದಂಡೆತ್ತಿ ಬಂದ. ಕದನ ಕೈ ತಪ್ಪಿತು. ರಕ್ತದ ಹೊಳೆ ಹರಿಯಿತು. ಇವನು ಸೋತ. ರಕ್ತಸಿಕ್ತನಾಗಿ ಅನಾಥನಾಗಿ ರಣರಂಗದಲ್ಲಿ ಕುಸಿದುಬಿದ್ದ. ಹರಿಯನ್ನು ಪ್ರಾರ್ಥಿಸಿದ. ಹರಿ ಪ್ರತ್ಯಕ್ಷನಾದ. ಕೂಡಲೇ ಇವನು 'ಕಂಡೆ ಹರಿಯ ಕಂಡೆ ದೇವಾನುದೇವನ' ಎಂದು ಹಾಡಿದ. ಕತ್ತಿ ಎಸೆದು ತಂಬೂರಿ ಹಿಡಿದ. ವಸ್ತ್ರಾಭರಣ ತೊರೆದು ತುಂಡುಗಂಬಳಿ ತೊಟ್ಟು ಹುಟ್ಟೂರು ಬಿಟ್ಟ. ಉಡುಪಿಯ ಕಡೆ ಹೊರಟು ವ್ಯಾಸರಾಯರ ಶಿಷ್ಯನಾದನು.

ಇವರ ಜೀವನ ವಿಕಾಸಗೊಂಡಿರುವುದು ಮೂರು ಮಜಲುಗಳಲ್ಲಿ ಇವರ ಬದುಕಿಗೊಂದು ತಿರುವು ಕೊಟ್ಟ ಸ್ಥಳ ವಿಜಯನಗರದ ವ್ಯಾಸರಾಯರ ಶ್ರೀಮಠ. ಇಲ್ಲಿ ಪುರಂದರದಾಸರ ಸಖ್ಯ, ವ್ಯಾಸರಾಯರ ವಾತ್ಸಲ್ಯಗಳು ದೊರೆತವು. ಕುಲದ ಕಹಿ ದೊರೆತದ್ದು ಇಲ್ಲಿಯೇ. ಇವರು ಕವಿ, ಅನುಭಾವಿ ಮತ್ತು ಕೀರ್ತನಕಾರರಾಗಿ ಅನೇಕ ಕೀರ್ತನೆಗಳನ್ನು ರಚಿಸಿ, ಕರ್ನಾಟಕ ಸಂಗೀತ ಪದ್ಧತಿಯಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದರು. ಇವರು ಮಾಧ್ವ ಪ್ರಭಾವಕ್ಕೆ ಒಳಗಾಗಿ ಭಾಗವತ ದೃಷ್ಟಿಯ ಕವಿಯಾದರು.

ಇವರ ಮಹಿಮೆಯ ಪ್ರಭಾವವನ್ನರಿಯದ ಕೆಲ ಬ್ರಾಹ್ಮಣರು ನೀನು ಯಾರು? ನಿನ್ನ ಜಾತಿ ಯಾವುದು? ನಿನ್ನ ತಂದೆ ತಾಯಿಗಳಾರು? ಎಂದು ಪ್ರಶ್ನಿಸಿದಾಗ ಅವರಿಗೆ ಉತ್ತರವನ್ನು ಈ ರೀತಿಯಾಗಿ ಕೊಡುತ್ತಾನೆ.

ನಾವು ಕುರುಬರು! ನಮ್ಮ ದೇವರೋ ಬೀರಯ್ಯ
ಕಾವ ನಮ್ಮಜ್ಜ! ನರಕುರಿಯ ಹಿಂಡುಗಳು ॥
ಅಷ್ಟಮದ ಮತ್ಸರಗಳೆಂಬ ತಗರುಗಳು
ದೃಷ್ಟಿ ಜೀವಾತ್ಮಗಳೆಂಬೋ ಆಡು
ಸೃಷ್ಟಿ ಪ್ರಸಿದ್ಧವೆಂಬುವ ಹೋತಗಳು
ಕಟ್ಟಿಕೋಲಿನಲಿ ಇರಂತಿರು ನಮ್ಮಜ್ಜ
....

....

....

ಕಲಿಯುಗಕೆ ಗೌಡನಿಗೆ ಸಂಗಾತಿಮಂತಿಸುವ

ಕಲಿಯುಗಂಗಳನ್ನೆಲ್ಲ ಮರೆತನೀತ

ಜಲಜಾಕ್ಷನಾಗಿ ನೆಲೆಯಾಗಿ ಕೇಶವನ ಮನದಿ

ಒಲಿಸಿ ಭಜಿಸಿದ ಮನುಜ ತಾ ಹುಚ್ಚ ಕುರುಬ

ಎಂದು ಉತ್ತರಿಸಿರುವುದು ತಿಳಿದುಬರುತ್ತದೆ.[೧೦೦] ಕನಕದಾಸರು ಆಳುವ ಕುಟುಂಬಕ್ಕೆ ಸೇರಿದ್ದ ಇವರಿಗೆ ವ್ಯವಸ್ಥಿತವಾಗಿ ಎಲ್ಲಾ ಪಾರಂಪರಿಕ ವಿಧಾನಗಳಲ್ಲಿ ಮಹಾಕಾವ್ಯಗಳ, ಶಾಸ್ತ್ರಗಳ, ಧರ್ಮಗಳ ಶಿಕ್ಷಣ ದೊರಕಿತ್ತು. ಇವರು ವ್ಯವಸ್ಥಿತವಾಗಿ ಕವಿ ಕಾವ್ಯ ಪರಂಪರೆಯನ್ನು ವ್ಯಾಕರಣ ಛಂದಸ್ಸುಗಳನ್ನು ಕಾವ್ಯಗಳನ್ನು ಅಭ್ಯಸಿಸಿ ಸ್ವಯಂ ಪ್ರತಿಭೆಯುಳ್ಳ ಮಹಾಕವಿಯೂ ಆಗಿದ್ದರು.

ಕಾಳಿದಾಸ

ಕಾಳಿದಾಸನು ಪವಿತ್ರವಾದ ಹಾಲುಮತ ಕುರುಬ ಜಾತಿಯವನು. ಈತನು ತನ್ನ ಯಾವುದೇ ಗ್ರಂಥಗಳಲ್ಲಿ ತನ್ನ ಹೆಸರಾಗಲೀ ಸ್ಥಳ, ಕುಲ–ಗೋತ್ರಗಳನ್ನು ಹೇಳಿಕೊಂಡಿಲ್ಲ. ಆದರೂ ಕಾಳಿದಾಸ ಯಾರು ಎಂದರೆ 'ಕುರುಬ'ರವನೆಂಬುದು ಆದಿಕಾಲದಿಂದಲೂ ಕರೆಯುವ ವಾಡಿಕೆಯಿದೆ.

ಇವನು 'ಕುರುಬ'ನೆಂಬುದಕ್ಕೆ ಇವನ ನಾಟಕಗಳೇ ಸಾಕ್ಷಿ. ಇದಕ್ಕೆ ಹನುಮಂತಯ್ಯನವರು 'ಪ್ರೌಢರಾಯನ ಕಾವ್ಯ'ವನ್ನು ಉಲ್ಲೇಖಿಸಿದ್ದಾರೆ.

೧. ಹರಿಣಶಿಶುನೇತ್ರ ಪದ್ಮಾವತಿಗೆ ।
ತಕ್ಕ ಸುಂದರ ಸುಗುಣಿಪುರುಷನು
ತುರುವುದೆನ ಲೊಳಿತೆಂದು । ಕುರುಬನು ಕರೆತಂದು
ಜನಮರಿಯದೋಲ್ತನ್ನು ಮಂದಿರದೊಳಿರಿಸಿಕ್ಕೊಂದು ॥

೨. ಒಂದೆರಡು ಮಾಸ ನೀರೆರದು ಪರಿಮಳ ದ್ರವ್ಯ ।
ಸಂದಿ ಸಂದಿಗೆ ತೀಡಿ । ಪರಮಾನ್ನ ದಕ್ಷದಳ ।
ಚಂದದಿಂದುಣಿಸಿ ವಸ್ತ್ರವನುಣಿಸಿ ।
ರತ್ನಖಚಿತಾಭರಣಗಳನೆ ತೊಡಿಸಿ ॥
ಬಂದ ರಸಿಗತಿ ಪ್ರಬುಢನೆಂದೊರೆಯೆ ಕರೆದು ತಾ ।
ರೆಂಟ್ಟ ಲೈ ತಂದು ಮಾ ಮಹೇಶ್ವರ ನಿಮ್ಮನಿಂದು
ರಕ್ಷಿಸಲೆಂದು ಜನಪನು ಪರಸೆನುತ ಕುರುಬರಿಗೆ ಕಲಿಸಿ ತರಲು ॥[೧೦೧]

ಈ ಮೇಲಿನ ಕಾವ್ಯ ಮತ್ತು ನಾಟಕದ ಕಥಾ ಸಾರಾಂಶಗಳೆರಡು ಒಂದೇ ಇರುವುದರಿಂದ ಇವನು ಕುರುಬ ಸಮುದಾಯದವನೇ ಎಂಬುದು ಸ್ಪಷ್ಟ. ಕಾಳಿದಾಸನು ಕುಮಾರಸಂಭವ ಮೇಘಸಂದೇಶ, ರಘುವಂಶ, ಶಾಕುಂತಲ, ವಿಕ್ರಮೋರ್ವಶಿಯ, ಚಂಡಕೌಶಿಕ, ಮಾಳವಿಕಾಗ್ನಿಮಿತ್ರ, ನಳೋದಯ, ಲಂಬೋದರ ಪ್ರಹಸನ, ಪ್ರಶ್ನೋತ್ತರಮಾಲ, ಕವಿಕಂಠಪಾಠ, ಗರಿಗಾಷ್ಟಕ ಮೊದಲಾದ ಗ್ರಂಥಗಳನ್ನು ಬರೆದಿರುವನು.

ಈ ಗ್ರಂಥಗಳೆಲ್ಲವೂ ಗಂಭೀರವಾಗಿಯೂ ನಾನಾರ್ಥ ಗರ್ಭಿತವಾಗಿಯೂ ಶೃಂಗಾರೋಪ ಮಾಲಂಕಾರ ಮೊದಲಾದ ನವರಸಗಳಿಂದ ಕೂಡಿರುವುದು. ಓದುಗರನ್ನು ಆನಂದಗೊಳಿಸುವವು. ಕವಿಗಳೂ ಮರುಳಾಗಿ ಹೋಗಿರುವರು. ಹಾಗಾಗಿಯೇ ಇವನನ್ನು ಷೇಕ್ಸ್‌ಪಿಯರ್ ಎಂಬ ಪ್ರಸಿದ್ಧ ಇಂಗ್ಲಿಷ್ ಕವಿಗೆ ಹೋಲಿಸುವುದು ಸಮಂಜಸವೆನಿಸುತ್ತದೆ.

ಎಂ.ಎಲ್. ವಿಜಯಕುಮಾರಿ ಅವರು ಕಾಳಿದಾಸನನ್ನು ಕುರಿತು "ಕಾಳಿದಾಸನು ಎಲ್ಲಾ ಪ್ರಾಚೀನ ಅರ್ವಾಚೀನ, ದೇಶೀಯ, ವಿದೇಶೀಯ ವಿದ್ವಾಂಸರಿಂದ ಮುಕ್ತಕಂಠದಿಂದ ಪ್ರಶಂಸಿಸಲ್ಪಟ್ಟಿರುವ ಅದ್ವಿತೀಯ ಸಂಸ್ಕೃತ ಕವಿ ಎಂದು ಪರಿಗಣಿತನಾಗಿದ್ದಾನೆ. ವಿಶ್ವದ ಸರ್ವ ಶ್ರೇಷ್ಠ ಸಾಹಿತ್ಯ ಸಾಮ್ರಾಟರ ಸಾಹಿತ್ಯದಲ್ಲಿ ಸರಿಸಾಟಿಯಿಲ್ಲದ ಕೃತಿಗಳನ್ನು ರಚಿಸಿ, ಇಂಗ್ಲೆಂಡಿನ ಹೆಸರಾಂತ ನಾಟಕಕಾರ ಶೇಕ್ಸ್‌ಪಿಯರಿಗೆ ಸಮನಾಗಿ ಬಾಳಿಬದುಕಿದವನು ಎಂದು ಅಭಪ್ರಾಯಪಟ್ಟಿದ್ದಾರೆ. ಈತನು ಉಜ್ಜೈನಿಯಲ್ಲಿ ಕ್ರಿ.ಪೂ. ಒಂದನೆಯ ಶತಮಾನದಲ್ಲಿ ಜನಿಸಿದ್ದುದು, ಕುರಿಗಾಹಿಯಾಗಿದ್ದುದು ನಂಬಬಹುದಾದ ಮತ್ತು ಕಾಲದೇಶ ಜಾತಿ ಬಗ್ಗೆ ಇರುವ ಸತ್ಯಸಂಗಿಯಾಗಿರುವುದು ಪಶ್ಚಿಮ ಬಂಗಾಲದವನೆಂದು ಕೆಲವರ ನಂಬುಗೆಯಾದರೂ ಉಜ್ಜೈನಿಯಲ್ಲಿ ಕುರಿಗಾಹಿಯಾಗಿ ಜನಿಸಿದ್ದನು ಎನ್ನುವುದೇ ಒಪ್ಪತಕ್ಕ ಸಂಗತಿ"[೧೦೨] ಎಂದು ಹೇಳಿದ್ದಾರೆ.

ಕೈ.ವಾ.ವೇ. ಶ್ರೀ ಸಿದ್ಧಯ್ಯ ಒಡೆಯರ್(೧೭೯೯–೧೮೪೭)

ಕುರುಬ ಜನಾಂಗಕ್ಕೆ 'ಒಡೆಯರು' ಎಂಬ ವಿಶಿಷ್ಟ ಗುರುವರ್ಗವೊಂದನ್ನು ಹುಟ್ಟುಹಾಕಿ, ಅವರ ಧಾರ್ಮಿಕ ಪರಂಪರೆಗೆ ಒಂದು ನೆಲೆಗಟ್ಟನ್ನು ಒದಗಿಸಿಕೊಟ್ಟವರು ಪ್ರಾಚೀನ ಪುರುಷರು. ಇವರು ಹುಟ್ಟುಹಾಕಿರುವ 'ಒಡೆಯರು' ಎಂಬ ಗುರುವರ್ಗ ಕುರುಬರಿಗೆ ಆರಾಧಕರಾಗಿ, ಕುಲಗುರುಗಳಾಗಿ, ಅನೂಚಾನವಾಗಿ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ. ಹೀಗೆ ಕುರುಬರ ಮಠಾಧಿಪತಿಗಳಾಗಿ, ಕುಲಗುರುಗಳಾಗಿ ಕಾರ್ಯವನ್ನು ನಿರ್ವಹಿಸುತ್ತಾ ಬಂದಿರುವ ಗುರುವರ್ಗದವರಲ್ಲಿ ಕುರುಬ ಜನಾಂಗದ ಸಾಮಾಜಿಕ ಶೈಕ್ಷಣಿಕ ಪ್ರಗತಿಗಾಗಿ ದುಡಿದಿರುವ ಕೈ.ವಾ.ವೇ. ಶ್ರೀ ಸಿದ್ಧಯ್ಯ ಒಡೆಯರ್ ಅವರ ಜೀವನ ಮತ್ತು ಸಾಧನೆಯನ್ನು ಹನುಮಂತಯ್ಯನವರು ಪರಿಚಯಿಸಿದ್ದಾರೆ. ಇವರು ಸ್ವಾತಂತ್ರ್ಯಪೂರ್ವದಲ್ಲಿ

ಪ್ರಮುಖರು. ಇವರ ನಂತರದ ವಂಶಪರಂಪರೆಯನ್ನು ಡಾ. ಬಿ.ಜಿ.ಬಿರಾದಾರ ಅವರು ಪರಿಚಯಿಸಿರುವುದು ಕಂಡುಬಂದಿದೆ.

೧. ವೇದಮೂರ್ತಿ ರಾಮಪ್ಪಯ್ಯ ಒಡೆಯರು

೨. ವೇದಮೂರ್ತಿ ಶ್ರೀ ಗುರುಸಿದ್ಧಯ್ಯ ಸ್ವಾಮಿಗಳು, ಸಂಗ್ರೇಶಕೊಪ್ಪ

೩. ತುಮಕೂರಿನ ಶ್ರಿ ಸಿರಿಯಪ್ಪ ಒಡೆಯರ್(೧೯೧೨-೧೯೯೨)

೪. ಆಧುನಿಕ ಸಿದ್ಧಯ್ಯ ಒಡೆಯರು

೫. ಶ್ರೀ ಚನ್ನಯ್ಯ ಒಡೆಯರು

೬. ಶಂಕರಗೌಡ ಚ.ಮಾಲಿ ಪಾಟೀಲ ಒಡೆಯರು ಹಾಲುಮತ ಸಮಾಜಕ್ಕೆ ಸೇವೆಯನ್ನು ಸಲ್ಲಿಸಿದ್ದಾರೆ.

ಅಹಲ್ಯಾಬಾಯಿಯವರ ಚರಿತ್ರೆ

ಕುರುಬರ ರಾಜಪರಂಪರೆಯಲ್ಲಿ ಹೋಳ್ಕರ್ ಮನೆತನವೂ ಒಂದು. ಈ ಮನೆತನದಲ್ಲಿ ಅಹಲ್ಯಾಬಾಯಿ ಪ್ರಸಿದ್ಧ ರಾಣಿ. ಈ ರಾಣಿಯ ಜೀವನ ಚರಿತ್ರೆಯನ್ನು ಹನುಮಂತಯ್ಯನವರು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ.

ಇವಳು ಮಹಾರಾಷ್ಟ್ರದ ಬಾಂಬೆ ಪ್ರಾಂತದ ಅಹಮದ್ ನಗರ ತಾಲೂಕಿನ ಪಾಥರಟ ಗ್ರಾಮದ ಆನಂದರಾವ್ ಅವರ ಮಗಳು. ಇವರು ಕುರುಬರೆಂದು ತಿಳಿದುಬರುತ್ತದೆ. ಇವಳ ತಂದೆ-ತಾಯಿಗಳಿಗೆ ತುಂಬಾ ವರ್ಷಗಳ ಕಾಲ ಮಕ್ಕಳಾಗಿರಲಿಲ್ಲ. ಕೊಲ್ಲಾಪುರದ ಜಗದಂಬೆಯ ವರಪ್ರಸಾದದಿಂದ ೧೭೩೫ರಲ್ಲಿ ಜನಿಸಿದಳು.[೧೦೩] ಈಕೆಯಲ್ಲಿ ದೈವಿಕ ಸುಗುಣಗಳೂ, ವಿದ್ಯಾತೇಜಸ್ಸು ಕಂಡುಬರುತ್ತಿದ್ದವು. ಯಾವಾಗಲೂ ಸತ್ಯವನ್ನು ಹೇಳುತ್ತಿದ್ದಳು. ಚಿಕ್ಕವಯಸ್ಸಿನಲ್ಲಿಯೇ ವಿದ್ಯಾಭ್ಯಾಸ ಪ್ರಾರಂಭಿಸಿ ವೀರಪುರುಷರ ಮತ್ತು ಪತಿವ್ರತ ಸ್ತ್ರೀಯರ ಚರಿತ್ರೆಗಳನ್ನು, ಭಗವದ್ಭಕ್ತಿಸಾರವನ್ನು ಬೋಧಿಸುತ್ತಿದ್ದಳು. ವಿದ್ಯಾಬುದ್ಧಿ ಸದ್ಗುಣಗಳು ತಾವಾಗಿಯೇ ಪ್ರಕಾಶಿಸತೊಡಗಿದವು.

ಮಲ್ಲಾರಿರಾವ್ ಹೋಳ್ಕರ್‌ನ ಮಗ ಖಂಡೇರಾಯನ ಜೊತೆಗೆ ಈಕೆಯ ಮದುವೆಯಾಗಿತ್ತು. ಅಹಲ್ಯಾಬಾಯಿ ಬಡ ಕುಟುಂಬದಲ್ಲಿ ಹುಟ್ಟಿ ಒಬ್ಬ ಶ್ರೀಮಂತ ಸರದಾರನ ಸೊಸೆಯಾದಳು. ಮದುವೆಯಾಗಿ ಹತ್ತು ವರ್ಷಗಳ ಕಾಲ ಮಾತ್ರ ಸುಖವಾಗಿದ್ದಳು. ಖಂಡೇರಾಯ ಅತಿ ಪರಾಕ್ರಮದಿಂದ ಯುದ್ಧ ಮಾಡುತ್ತಿರುವಾಗ ಮೃತನಾದನು. ಇವರಿಗೆ ಮಾಲೀರಾವ್ ಎಂಬ ಮಗ, ಮಂಚೂಬಾಯಿ ಎಂಬ ಮಗಳು ಇದ್ದರು ಎಂಬುದು ತಿಳಿದುಬಂದಿದೆ. ಪತಿಯ ಮರಣಾನಂತರ ಅಹಲ್ಯಾಬಾಯಿ ರಾಜ್ಯಭಾರ ವಹಿಸಿಕೊಂಡಳು. ಈಕೆಯ ಮಾವ ಮಲ್ಲಾರಿರಾವ್ ಹೋಳ್ಕರ್ ಎಲ್ಲಾ ರೀತಿಯ ಅಕ್ಷರಾಭ್ಯಾಸ, ರಾಜನೀತಿ, ಯುದ್ಧನೀತಿ ಮತ್ತು ರಾಜ್ಯ ಶಾಸ್ತ್ರಗಳನ್ನು ಕಲಿಸಲು ಹಲವಾರು ಗುರುಗಳನ್ನು ನೇಮಿಸಿದ್ದರು. ನೆರೆಹೊರೆಯ ಹಲವು ಭಾಷೆಗಳನ್ನು ಕಲಿತಿದ್ದಳು. ಒಬ್ಬ ಪುರುಷ ರಾಜಕುಮಾರನಿಗೆ

ಇರಬೇಕಾದ ಎಲ್ಲಾ ವಿದ್ಯೆ ಇವಳಲ್ಲಿತ್ತು. ಇಂದೋರ್ ಹೋಳ್ಕರ್ ವಂಶದ ಪ್ರಖ್ಯಾತ ವ್ಯಕ್ತಿಯಾಗಿ ಹೋಳ್ಕರ್ ಮನೆತನದ ರಕ್ಷಣೆಗಾಗಿ, ಕುರುಬರ ಕ್ಷಾತ್ರ ಪರಂಪರೆಯ ಮುಂದುವರಿಕೆಯಾಗಿ, ಕತ್ತಿ ಹಿಡಿದು ರಾಜ್ಯಭಾರ ಮಾಡಿದ್ದಾಳೆ.[೧೦೪]

ಈಕೆಯು ಅನೇಕ ಕಡೆಗಳಲ್ಲಿ ಕುರುಬ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿದಳು. ಬದರಿನಾಥ, ಗಯಾ, ಕಾಶಿ, ರಾಮೇಶ್ವರ, ಪಂಡರಾಪುರ ಹೀಗೆ ಮೊದಲಾದ ಪುಣ್ಯಕ್ಷೇತ್ರಗಳನ್ನು ಕಟ್ಟಿಸಿದಳೆಂದು ಚರಿತ್ರೆಯಿಂದ ತಿಳಿದುಬರುತ್ತದೆ. ಮಹಾರಾಷ್ಟ್ರದ ಧೀರಮಹಿಳೆಯರ ಸಾಲಿನಲ್ಲಿ ಅಹಲ್ಯಾಬಾಯಿಯ ಹೆಸರು ಇತಿಹಾಸ ಪುಟಗಳಲ್ಲಿ ರಾರಾಜಿಸುತ್ತದೆ[೧೦೫] ಎಂದು ಹನುಮಂತಯ್ಯನವರು ತುಂಬಾ ಸ್ಪಷ್ಟವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ.

ಈಕೆಯನ್ನು ಕುರಿತು ಹನುಮಂತಯ್ಯನವರ ನಂತರ ಅನೇಕ ಲೇಖನಗಳು ಮತ್ತು ಕೃತಿಗಳು ಬಂದಿವೆ. ಚಂದ್ರಕಾಂತ ಬಿಜ್ಜರಗಿ ಅವರು ಅಹಲ್ಯಾಬಾಯಿ ಹೋಳ್‌ಕರ ಎಂಬ ಕೃತಿಯನ್ನು ರಚನೆ ಮಾಡಿದ್ದಾರೆ. ಅಹಲ್ಯಾಬಾಯಿಯ ಇತಿವೃತ್ತ ವಿಚಾರದೊಡನೆ ಹೋಳ್ಕರ್ ಮನೆತನದ ಸಮಗ್ರ ಇತಿಹಾಸವನ್ನು ಪರಿಚಯಿಸಿದ್ದಾರೆ ೪೩೪ ಪುಟಗಳ ಈ ಕೃತಿಯು ಮೂವತ್ತಾರು ವಿಭಾಗಗಳನ್ನು ಹೊಂದಿದೆ.

ಈ ಕೃತಿಗೆ ಮುನ್ನುಡಿಯನ್ನು ಬರೆಯುತ್ತ ಮಲ್ಲಿಕಾ ಘಂಟಿ ಅವರು "ಮಹಿಳಾ ಚರಿತ್ರೆ ಬರೆಯುವವರಿಗೆ ಮತ್ತು ಬದುಕಿನ ಧಾವಂತಗಳಲ್ಲಿ ನಲುಗಿ ಹೋಗಿರುವ ಮಹಿಳೆಯರಿಗೆ ಆತ್ಮಗೌರವ ಬದುಕಿನ ಬಗೆಗೆ ಪ್ರೀತಿ, ಪ್ರಯತ್ನಶೀಲತೆಯನ್ನು ಈ ಕೃತಿ ತಂದುಕೊಡುತ್ತದೆ"[೧೦೬] ಎಂದು ಅಭಿಪ್ರಾಯ ಪಟ್ಟಿದ್ದಾರೆ.

"ಅಹಲ್ಯಾಬಾಯಿ ಮಹಾರಾಷ್ಟ್ರದ ವೀರವನಿತೆಯ ಸಾಲಿನಲ್ಲಿ ಅಗ್ರಗಣ್ಯರು ಮತ್ತು ಭಾರತದ ಇತಿಹಾಸದಲ್ಲಿ ಪ್ರಸಿದ್ಧ ಹೆಸರು. ಈಕೆಯು ಪತಿಯ ಮರಣನಂತರ ತಮ್ಮ ಮಾವನವರಾದ ಮಲ್ಲಾರಿರಾವ್ ಅವರ ಅಭಿಮಾನದಿಂದ "ರಾಜ್ಯಸೂತ್ರವನ್ನು ಹಿಡಿದುಕೊಂಡ ಕಾರಣಕ್ಕೆ ಇತಿಹಾಸದಲ್ಲಿ ಮೈಲುಗಲ್ಲೆನ್ನುವುದು ಚರಿತ್ರೆಯ ಸರಳೀಕರಣವಾದೀತು. ಯಾವ ಸಮಾಜ, ದೇಶ, ಧರ್ಮ, ಮಹಿಳೆರಯನ್ನು ಕಡೆಗಣಿಸಿತ್ತೋ ಅಂತಹ ಸಮಾಜದಲ್ಲಿ ಅಹಲ್ಯ ಪುರುಷರ ಹಾಗೆ ರಾಜ್ಯಾಡಳಿತ ನಡೆಸಿದ್ದಕ್ಕಷ್ಟೇ ಅಲ್ಲ, ತನ್ನಂತಹ ಹೆಣ್ಣುಮಕ್ಕಳನ್ನು ಸೇರಿಸಿ, ಸಂಘಟಿಸಿ ಅವರಲ್ಲಿ ಸುಪ್ತವಾಗಿದ್ದ ಭಾವನೆಗಳನ್ನೆಲ್ಲ ಹೊರತಂದಳು. ಶಕ್ತಿಸ್ವರೂಪಿಣಿ, ದುಷ್ಟಮರ್ದಿನಿ, ಶಿಷ್ಟಜನ ಪರಿಪಾಲಕಳು ಎನ್ನುವ ಉಕ್ತಿಗಳಿಗೆ ಯುಕ್ತವಾಗಿ ಕಾರ್ಯ ನಿರ್ವಹಿಸಿದಳು. ಆದರೂ ಹೆಣ್ಣು ಎಷ್ಟೇ ಸಬಲಳಾಗಿದ್ದರೂ ಅಬಲೆ ಎನ್ನುವ ಸಾಮಾನ್ಯ ಸೂತ್ರಕ್ಕೆ ಒಳಪಡಿಸಿ ಅವಳನ್ನು ನೋಡುವುದು ಅಂದಿನಿಂದ ಇಂದಿನವರೆಗೂ ನಡೆದುಕೊಂಡು ಬಂದಿರುವ ಸಂಗತಿ"[೧೦೭] ಎಂದಿದ್ದಾರೆ.

ಶಂಕರ ಶಿ. ಕುಂಬಾರ ಅವರು ಅಹಲ್ಯಾಬಾಯಿಯನ್ನು ಕುರಿತು "ಹಾಲುಮತದ ಅಹಲ್ಯಾಬಾಯಿ ಹೋಳ್ಕರರು ಕಿತ್ತೂರು ರಾಣಿ ಚೆನ್ನಮ್ಮನಂತೆ, ಝಾನ್ಸಿರಾಣಿ ಲಕ್ಷ್ಮೀಬಾಯಿಯಂತೆ ಸ್ವತಃ ಕೈಯಲ್ಲಿ ಖಡ್ಗ ಹಿಡಿದು ದಿಟ್ಟತನದಿಂದ ಹೋರಾಡಿ ರಾಜ್ಯಭಾರ ಮಾಡಿದ್ದಾಳೆ. ಅನೇಕ ಮಠ ಮಂದಿರಗಳನ್ನು ಕಟ್ಟಿಸಿದ್ದಾಳೆ. ಬಡಜನರಿಗೆ ಧನಧಾನ್ಯಗಳನ್ನು ಸಹಾಯ ಮಾಡಿದ್ದಾಳೆ. ಕೆರೆ-ಬಾವಿ ತೋಡಿಸಿ ಬಡವರ ಬಂಧು ಅನ್ನಿಸಿಕೊಂಡಿದ್ದಾಳೆ"[೧೦೮] ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಎಚ್.ಎಂ.ರೇವಣ್ಣ ಅವರು "ಇಂದೋರ್ ಸಂಸ್ಥಾನದ ಮಹಾರಾಣಿ ಅಹಲ್ಯಾಬಾಯಿ ಹೋಳ್ಕರ್ ಪೇಶ್ವೆಯ ಕಾಲದಲ್ಲಿ ರಾಜ್ಯವಾಳಿದ ವೀರ ಮಹಿಳೆ. ಚರಿತ್ರೆಯಲ್ಲಿ ದಾಖಲಾದಂತೆ ಆಕೆ ರಾಜ್ಯಭಾರ ಮಾಡುವಲ್ಲಿ ದಕ್ಷತೆ ಮೆರೆದ ಮಹಿಳೆ ಮಾತ್ರವಲ್ಲ. ಧರ್ಮಾತ್ಮಳೂ, ಭೂತದಯಾಪರಳೂ ಆಗಿದ್ದು ಆಕೆ ಕಟ್ಟಿಸಿದ ಕೆರೆಕಟ್ಟೆ ರಸ್ತೆಗಳು, ಪ್ರವಾಸಿ ಛತ್ರಗಳು ದೇಶದ ಉದ್ದಗಲಕ್ಕೂ ಹರಡಿಕೊಂಡಿದ್ದು, ಈಗಲೂ ಈಕೆಯ ಹೆಸರು ಹೇಳುತ್ತವೆ. ಮರಾಠ ಸರದಾರನ ಮಡದಿಯಾಗಿ ರಾಜಮನೆತನಕ್ಕೆ ಸೇರಿದ ಅಹಲ್ಯೆಯ ಕತೆ ಅದೊಂದು ವೀರಗಾಥೆ. ಇಪ್ಪತ್ತರ ಹರೆಯದಲ್ಲಿಯೇ ವಿಧವೆಯಾಗಿ, ಸಂಸ್ಥಾನದ ರಾಜ್ಯಸೂತ್ರ ಹಿಡಿದು ದಿಟ್ಟತನ ಪ್ರದರ್ಶಿಸಿ, ಮೂವತ್ತು ವರ್ಷಗಳ ಕಾಲ ಪ್ರಜೆಗಳನ್ನು ಶಾಂತಿ ಸುವ್ಯವಸ್ಥೆಯಿಂದ ಕಾಪಾಡಿದ ಮೇಧಾವಿ. ನಮ್ಮ ದೇಶದ ವೀರ ಪರಂಪರೆಯನ್ನು ಎತ್ತಿ ಹಿಡಿದ ಕಿತ್ತೂರುರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿಯರ ಸಾಲಿಗೆ ನಿಲ್ಲುವ ವೀರಾಗ್ರಣಿ ಅಹಲ್ಯಾಬಾಯಿ ಹೋಳ್ಕರ್" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧೦೯]

ಎಂ.ಕೆ.ಪುಷ್ಪಾ ಅವರು 'ಅಹಲ್ಯಾಬಾಯಿ'ಯನ್ನು ಕುರಿತು ಈ ರೀತಿ ಹೇಳಿದ್ದಾರೆ "ಗೃಹಸ್ಥಳಾಗಿ ಹೋಳ್ಕರ್ ಮನೆ ಸೇರಿದ ಅಹಲ್ಯಾಬಾಯಿ ೧೭೫೪ರಲ್ಲಿ ತನ್ನ ಪತಿ ಖಂಡೇರಾಯ ಯುದ್ಧವೊಂದರಲ್ಲಿ ಮರಣ ಹೊಂದುವವರೆಗೆ ಸದ್ಗೃಹಸ್ಥೆಯಾಗಿ, ಪತಿಯ ದುರ್ಗುಣಗಳನ್ನು ಸರಿಪಡಿಸುತ್ತಾ ಹೆಚ್ಚು ಗಮನ ಕೊಟ್ಟು ತನ್ನ ಪ್ರೀತಿಯ ಮಾವ ಹೋಳ್ಕರ್‌ರ ನೇತೃತ್ವದಲ್ಲಿ ರಾಜ್ಯಭಾರದ ಪ್ರಥಮ ಪಾಠಗಳನ್ನು, ರಣಕೌಶಲ್ಯಗಳನ್ನು ರೂಢಿಸಿಕೊಂಡಿದ್ದಳು. ತನ್ನ ಪತಿಯ ಮರಣಾನಂತರ ಸಂಪೂರ್ಣವಾಗಿ ತನ್ನ ಎಲ್ಲಾ ಶಕ್ತಿಸಾಮರ್ಥ್ಯವನ್ನು, ಧಾರ್ಮಿಕ ಭಾವನೆಗಳನ್ನು ತನ್ನ ಮಾವನವರ ದಕ್ಷ ಮಾರ್ಗದರ್ಶನದಲ್ಲಿ ವೃದ್ಧಿಸಿಕೊಂಡಳು. ೧೭೬೬ರಲ್ಲಿ ತನಗೆ ಸಕಲ ವಿದ್ಯೆಯನ್ನು ಧಾರೆಯೆರೆದಿದ್ದ ಮಾವ ಮಲ್ಹಾರಿರಾವ್ ಹೋಳ್ಕರ್‌ರು ತೀರಿಕೊಂಡರು. ನಂತರ ಅಹಲ್ಯಾಬಾಯಿ ರಾಜ್ಯಭಾರದ ಸಮಸ್ತ ಜವಾಬ್ದಾರಿಯನ್ನು ನಿರ್ವಹಿಸಿದ್ದಳು. ೧೭೯೫ರಲ್ಲಿ ತಾನು ಸ್ವರ್ಗಸ್ಥಳಾಗುವವರೆಗೆ ರಣಕೌಶಲ್ಯದಲ್ಲಿ ಅಪ್ರತಿಮ ಹೋರಾಟಗಾರ್ತಿಯಾಗಿ, ಪ್ರಜಾಪಾಲಕಳಾಗಿ, ಸಹಜ ಸ್ವಭಾವದಿಂದ ಅನ್ಯಧರ್ಮಿಯರಿಗೂ ಸಮಾನಗೌರವಾದರಗಳನ್ನು ಸಮರ್ಪಣಾ ಭಾವದಿಂದ ನೋಡುತ್ತಾ ದೇಶವಿದೇಶಗಳ, ಸಾಹಿತಿ ಕಲಾವಿದರಿಂದ, ಇತಿಹಾಸಕಾರರಿಂದ ಪ್ರಶಂಸೆಗೆ ಪಾತ್ರಳಾದ ಮಹಿಳಾ ರಾಜಾಜ್ಞೆ ದೈವಸಂಭೂತೆ

ಅಹಲ್ಯಾಬಾಯಿ ಭಾರತದ ಇತಿಹಾಸ ಪುಟಗಳಲ್ಲಿ ಚಿರಸ್ಥಾಯಿಯಾಗಿ ನಿಲ್ಲುವಳು. ತನ್ನ ಹೆತ್ತ ತಂದೆತಾಯಿಗಳಿಗೆ, ತನ್ನನ್ನು ಸೊಸೆಯಾಗಿ ಸ್ವೀಕರಿಸಿದ ಹೋಳ್ಕರ್ ಮನೆತನಕ್ಕೆ, ತಾನು ರಾಜ್ಯಭಾರ ನಡೆಸಿದ ಮಾಳ್ವಸಂಸ್ಥಾನಕ್ಕೆ, ಮರಾಠ ರಾಜ್ಯದ ಕೀರ್ತಿಗೆ, ಇಡೀ ಸ್ತ್ರೀ ಕುಲಕ್ಕೆ ಗೌರವ ತರುವಂತೆ ಆದರ್ಶ ಮಹಿಳೆಯಾಗಿ ಅಖಂಡ ಭಾರತದ ಹಿಂದೂ ಸಾಮ್ರಾಜ್ಯದ ಮಹಿಳಾ ಹೋರಾಟಗಾರ್ತಿಯಾಗಿ ರಾಜಾಜಿಸಿದ್ದು ಇತಿಹಾಸ ಪುಟಗಳಿಂದ ತಿಳಿದುಬರುತ್ತದೆ[೧೧೦] ಎಂದು ಅವರು ಸ್ಪಷ್ಟಪಡಿಸಿರುವರು.

ಹೀಗೆ ಹನುಮಂತಯ್ಯನವರ ಕುರುಬರ ಚರಿತ್ರೆ ಕೃತಿಯು ಕುರುಬರ ಪ್ರಚೀನತೆ, ಪಂಗಡ ಉಪಪಂಗಡಗಳು, ಕುರುಬರ ರಾಜಕೀಯ ಚರಿತ್ರೆ ಮತ್ತು ಕುರುಬರ ಸಾಧು ಸಂತರ ಮಹಾನುಭಾವರ ಜೀವನ ಚರಿತ್ರೆ ತಿಳಿಸುವಲ್ಲಿ ಮಹತ್ವದ ಕೃತಿಯಾಗಿದೆ.

೨. ಭಾರತ ದೇಶದ ಕುರುಬರ ಚರಿತ್ರೆ

ಈ ಕೃತಿಯನ್ನು ೧. ಕೃತಿಯ ಸ್ವರೂಪ, ೨. ಕುರುಬರ ಮೂಲಚರಿತ್ರೆ, ೩. ಕರ್ನಾಟಕದ ಕುರುಬರು, ೪. ತೆಲುಗುದೇಶದ ಗೊಲ್ಲರು ೫. ದ್ರಾವಿಡ(ತಮಿಳು) ಕುರುಬರು, ೬. ದನಗಾರರು, ಹಟ್ಟಿಕಾರರು ಅಥವಾ ಭಾರಗೀ ದನಗಾರರು, ೭. ಗಡರಿಯರು, ೮. ಗಡ್ಡಿಯರು, ೯. ಆಹೀರರು, ೧೦. ಭರವಾಡರು ಮತ್ತು ರಾಜಪಾಲಿ, ೧೧. ದಕ್ಷಿಣ ಭಾರತೀಯ ರಾಜರ ಚರಿತ್ರೆ, ೧೨. ಕುರುಬ ಜನಾಂಗದ ಮಹಾನೀಯರ ಹಾಗೂ ಮಹಾಶೂರ ವೀರರ ಜೀವನ ಚರಿತ್ರೆ ಎಂಬ ಪ್ರಮೇಯಗಳನಿಟ್ಟುಕೊಂಡು ವಿಶ್ಲೇಷಿಸಬಹುದು.

೧. ಕೃತಿಯ ಸ್ವರೂಪ

"ಕುರುಬರ ಚರಿತ್ರೆ"ಯ ವಿಸ್ತೃತ ಮತ್ತು ಪರಿಷ್ಕೃತ ಕೃತಿಯಾಗಿ ಸುಮಾರು ಮೂವತ್ತೆರಡು ವರ್ಷಗಳ ಅಂದರೆ ೧೯೫೮ರಲ್ಲಿ "ಭಾರತ ದೇಶದ ಕುರುಬರ ಚರಿತ್ರೆ" ಕೃತಿಯು ಪ್ರಕಟಗೊಂಡಿದೆ.

ಈ ಕೃತಿಯು ೩೨೪ ಪುಟಗಳನ್ನು ಹೊಂದಿದೆ. ಮುನ್ನುಡಿಯನ್ನು ಸಂಸ್ಕೃತ ರತ್ನ ಕವಿಭೂಷಣರೆಂದು ಪ್ರಸಿದ್ಧರಾದ ವಿದ್ವಾಂಸ ಎಂ.ಸಿ.ಕೃಷ್ಣಸ್ವಾಮಿ ಅಯ್ಯಂಗಾರ್ ಬರೆದು ಕೃತಿಯ ವೈಶಿಷ್ಟ್ಯಗಳನ್ನು ವಸ್ತುನಿಷ್ಠವಾಗಿ ಹೀಗೆ ಗುರುತಿಸುತ್ತಾರೆ.

"The author Sri V.R.Hanumanthaiah though as old 80 by now. is to full of verve, vigour and enthusiam as to bring out a second, improved and exhaustive edition of his work. "The history of the shepherds of India" called out from various authentic

in a handbook to about 350 pages, which i have been able to persue from beginning to end. I am of opinion that it is a book intended for all the youngstern and the old.

It may prove very useful to all students especially of both sexes. The book is one well fit to be kept in all the libraries of the state.... it may be also useful for every future research scholar in history who has to go through it with a charonologically and scientifically critical eye."[೧೧೧]

ಈ ಕೃತಿ ಆರಂಭದಲ್ಲಿ ಮೈಸೂರು ರಾಜರ ಸುಂದರ ಭಾವಚಿತ್ರ ಮತ್ತು ಕೆಲ ಗಣ್ಯವ್ಯಕ್ತಿಗಳ ಛಾಯಾಚಿತ್ರಗಳಿಂದ ಕೂಡಿದೆ. ಕರ್ನಾಟಕದ ರಾಜ್ಯಪಾಲರಾದ ಮೈಸೂರಿನ ಶ್ರೀ ಜಯ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು, ಶ್ರೀ ಎ.ಬಿ.ಮರಿಯಪ್ಪನವರು Advocate and General Secretary Kurubara sangha, Gandhinagar, Bangalore, ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು B.sc.

1. First lady Graduate to Kurubara community
2. First lady Vice-president of Bangalore D Board.
3. University senate Member.
4. University academic council Member.
5. Member: Maharanis college, Engineering collage committee, Engineering School committee, Medical college committee, Medical School Committee scholarship committees for Girls and Boys.
6. Representative Assembly Member from 1945.
7. Bangalore city corporation elected member.
8. Legislative Assembly Hoskote-Anekal 1952-57
9. Legislative Assembly Chamarajpet from 1957
10. As Joint Secretary was chiefly responsible for the construction of Kurubara hostel Gandhi Nagar.

11. M.P.CC Member.

12. President Kurubara Anathalaya, Etc.

ಶ್ರೀ ಎಲ್.ತಿಮ್ಮಯ್ಯ B.A.B.T. Deputy Director Public Instruction, Bangalore Division, Bangalore city. ವಿ.ಆರ್.ಹನುಮಂತಯ್ಯನವರ ೯೪ನೇ ವರ್ಷದ ಭಾವಚಿತ್ರ, ಮತ್ತು ೧೯೩೬ರಲ್ಲಿ ಹಂಪೆಯಲ್ಲಿ ನೆರವೇರಿದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಶತಮಾನ ವಾರ್ಷಿಕೋತ್ಸವದ ಸಮಯದಲ್ಲಿ 'ಸಂಕ್ಷಿಪ್ತ ವಿಜಯನಗರ ಸಾಮ್ರಾಜ್ಯ ಚರಿತ್ರೆ' ಪುಸ್ತಕವನ್ನು ಬರೆದಾಗ ತೆಗೆದ ಚಿತ್ರವಿರುವುದು ಕಂಡುಬರುತ್ತದೆ. ಕುರುಬರ ಪಶುಪಾಲನೆ ಮತ್ತಿಯ ದೃಶ್ಯ, ಕುರುಬರ ಹುಡುಗನು ಮತ್ತು ಆ ದೇಶದ ರಾಜನಿರುವ ದೃಶ್ಯ, ಕುರುಬರ ಕುರಿಗಳ ಪಾಲನೆ, ಉಣ್ಣೆ(ತುಪ್ಪಟ)ಯನ್ನು ಕತ್ತರಿಸುವುದಕ್ಕೆ ಮೊದಲೇ ಕುರಿಗಳನ್ನು ಚೆನ್ನಾಗಿ ಕೆರೆಯ ನೀರಿನಲ್ಲಿ ತೊಳೆದು, ಒಣಗಿದ ಮೇಲೆ ಕತ್ತರಿಸುವ ದೃಶ್ಯ, ಬೀರದೇವರ ಜಾತ್ರೆಯಲ್ಲಿ ಪೂಜಾರಿಗಳು ಶ್ರೀ ಬೀರದೇವರನ್ನು ಅರ್ಚಿಸುವ ದೃಶ್ಯ, ಧರ್ಮಾಂಬುಧಿ ಕೆರೆಯಲ್ಲಿ ಹೊಳೆಯಾಡಿ ಹೊರಟ ಶ್ರೀ ಬೀರದೇವರ ಉತ್ಸವವು ಅರಳೇಪೇಟೆ ಮುಖ್ಯ ರಸ್ತೆಯಿಂದ ರಾಣಾಸಿಂಗ್‌ನ ಪೇಟೆಯಲ್ಲಿರುವ ಶ್ರೀ ಬೀರೇಶ್ವರನ ದೇವಾಲಯವನ್ನು ಸೇರಿದ ದೃಶ್ಯ, ನಮ್ಮ ನೆರೆಯ ರಾಜ್ಯವಾದ ಆಂಧ್ರಪ್ರದೇಶದ ಗೊಲ್ಲರ ಪಶುಪಾಲನೆ ದೃಶ್ಯ, ಮಹಾರಾಷ್ಟ್ರದ ದನಗಾರರ ಪಶುಪಾಲನೆಯ ದೃಶ್ಯ, ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಹಕ್ಕ-ಬುಕ್ಕ ಸಹೋದರರು ತಮ್ಮ ಸೈನ್ಯದೊಂದಿಗೆ ರಾಜಬೀದಿಗಳಲ್ಲಿ ಸಂಚಾರ ಹೊರಟಿರುವ ಚಿತ್ರ, ಹಂಪೆಯ ಶ್ರೀ ವಿರೂಪಾಕ್ಷೇಶ್ವರ ದೇವಾಲಯ, ವಿಜಯ ಚಕ್ರವರ್ತಿ ಸಾರ್ವಭೌಮ ಶ್ರೀಕೃಷ್ಣದೇವರಾಯನ ಚಿತ್ರ, ಶ್ರೀಮಾನ್ ಲೇಟ್ ಸುಬೇದಾರ್ ಮಲ್ಹಾರೀರಾವ್ ಹೋಳ್ಕರರು, ಶ್ರೀ ಲೇಟ್ ಶಿವಾಜಿರಾವ್ ಹೋಳ್ಕರರು, ಎರಡನೇ ಲೇಟ್ ತುಕೋಜೀರಾವ್ ಹೋಳ್ಕರರು, ಮಾಜಿ ಮಹಾರಾಜ ಶ್ರೀಮಾನ್ ಸವಾಯಿ ತುಕೋಜಿರಾವ್ ಹೋಳ್ಕರರು, ಶ್ರೀಮಾನ್ ಯಶವಂತರಾವ ಹೋಳ್ಕರರು, ಸಯ್ಯಾಜಿರಾವ್ ಗಾಯಕ್‌ವಾಡ್ ಮಹಾರಾಜರು, ಬರೋಡ ಸಂಸ್ಥಾನ, ಸಯ್ಯಾಜಿರಾವ್ ಗಾಯಕ್‌ವಾಡರನ್ನು ಬರೋಡದ ಮಹಾರಾಣಿ ಜಮ್ನಾಬಾಯಿಯವರು ದತ್ತು ಮಾಡಿಕೊಂಡಾಗ ತೆಗೆದ ಚಿತ್ರ, ಪ್ರತಾಪ್‌ಸಿಂಗ್ ಗಾಯಕ್‌ವಾಡರು, ಕನ್ನಡ ಕವಿ ಕುಲತಿಲಕ ಶ್ರೀ ಕನಕದಾಸರ, ಶ್ರೀ ಕಾಳಿದಾಸನ ಶ್ಯಾಮಲಾದಂಡಕ, ಶ್ರೀ ಕಾಳಿದಾಸನು ಭೋಜರಾಜ ಮಹಾರಾಜರ ಆಸ್ಥಾನ ಪ್ರವೇಶ, ಶ್ರೀ ದೇವಿ ಅಹಲ್ಯಾಬಾಯಿ ಮಹಾರಾಣಿ ಚಿತ್ರ ಹೀಗೆ ಅನೇಕ ಗಣ್ಯ ವ್ಯಕ್ತಿಗಳ, ರಾಜರ, ಸಮುದಾಯಕ್ಕೆ ಸಂಬಂಧಪಟ್ಟ ದೃಶ್ಯಗಳಿರುವುದು ಕಂಡುಬರುತ್ತದೆ.

ನಾಲ್ಕು ಭಾಗಗಳಲ್ಲಿ ಈ ಕೃತಿ ವಿಸ್ತೃತಗೊಂಡಿದೆ. ಮೊದಲನೆಯ ಭಾಗವು ಒಂಬತ್ತು ಪ್ರಕರಣಗಳಲ್ಲಿ ವಿಭಾಗಿಸಲ್ಪಟ್ಟಿದೆ. ಕುರುಬರ ಮೂಲ ಚರಿತ್ರೆಯನ್ನು ಚರ್ಚಿಸುತ್ತ ಅಂದಿನ ಆರ್ಯರೇ ಇಂದಿನ ಕುರುಬರು ಎನ್ನುವುದಕ್ಕೆ ವೇದಶಾಸ್ತ್ರಗಳ ಸಾಕ್ಷ್ಯಾಧಾರಗಳನ್ನು ಒದಗಿಸುತ್ತ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಪಶುಗಳ ಹೆಸರಿನಿಂದಲೇ ಪ್ರಪಂಚ, ಪ್ರಾಚೀನ ಪಶುಪಾಲಕರು, ಆರ್ಯರಿಗೆ ದೇವರೊಬ್ಬ, ಒಂದೇ ಜಾತಿ, ಕುರುಬರ ಪಶುಪಾಲನ ವೃತ್ತಿ, ಆರ್ಯ ಜಾತಿಯಿಂದಲೇ ಅನೇಕ ಜಾತಿಮತಗಳುಂಟಾದುದು, ಕುರುಬರು ವ್ಯವಸಾಯ ವೃತ್ತಿಯನ್ನವಲಂಬಿಸಿ ಬೇರ್ಪಟ್ಟ ವಿಷಯಗಳು ಬಹುಶಿಸ್ತೀಯ ನೆಲೆಯಲ್ಲಿ ವೇದಗಳ ಹಿನ್ನೆಲೆಯಿಂದ ಕೂಡಿವೆ. ಇವಕ್ಕೆ ಅನೇಕ ಪೂರಕ ಆಕರಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದ್ದಾರೆ.

ಎರಡನೆಯ ಭಾಗವು ಕರ್ನಾಟಕ ಕುರುಬರು ಎಂಬ ಉಪಶೀರ್ಷಿಕೆ ಹೊಂದಿದೆ. ಕುರುಬರ ಒಳಪಂಗಡಗಳು ಮತ್ತು ಅವರ ಸಂಪ್ರದಾಯಗಳು ಭಾರತದ ಇತರೇ ರಾಜ್ಯಗಳಲ್ಲಿರುವ ಕುರುಬರನ್ನು ಅಂಕಿ-ಸಂಖ್ಯೆಗಳ ಸಹಿತ ಪರಿಚಯಿಸಲಾಗಿದೆ. ಹಂಡೆಕುರುಬರಲ್ಲಿ ಸಿದ್ಧರು, ಕುರುಬ ಒಡೆಯರ ಮತಾಚಾರ ಆಹಾರ, ಉಡುಗೆ-ತೊಡುಗೆಗಳು, ಕುರುಬರ ದೇವರುಗಳು, ವಿವಾಹ ಸಂದರ್ಭದಲ್ಲಿ ಗುರುಹಿರಿಯರು(ಒಡೆಯರು) ವಧು-ವರರನ್ನು ಉದ್ದೇಶಿಸಿ ವಚನಗಳಿಂದ ಆಶೀರ್ವದಿಸುವುದು. ವಿದ್ಯೆಯ ಮಹಿಮೆ, ಹಣದ ಪ್ರಭಾವ, ಅಹಿಂಸಾವಾದ, ಬೀರದೇವರ 'ದೊಡ್ಡ ಜಾತ್ರೆ'ಯಲ್ಲಿ ತಲೆಯ ಮೇಲೆ ತೆಂಗಿನ ಕಾಯಿಯನ್ನು ಒಡೆಯುವ ಸಂಪ್ರದಾಯವನ್ನು ಒಂದೆಡೆ ದಾಖಲಿಸಿದ್ದಾರೆ. ಹೀಗೆ ಅನೇಕ ವಿಷಯಗಳ ಜೊತೆಗೆ ಆ ಸಂಪ್ರದಾಯವನ್ನು ವೀಕ್ಷಿಸಿದ ಅಂದಿನ ಮುಖ್ಯಮಂತ್ರಿ ಶ್ರೀ ಎಸ್.ನಿಜಲಿಂಗಪ್ಪ, ಅರ್ಥಸಚಿವ ಶ್ರೀ ಟಿ.ಮರಿಯಪ್ಪ, ರೆವಿನ್ಯೂ ಸಚಿವ ಶ್ರೀ ಯಲ್ಲನಗೌಡ ಪಾಟೀಲ ಇವರು ಪಾಲ್ಗೊಂಡಿರುವ ಕೆಲವು ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ. ತಲೆಯ ಮೇಲೆ ತೆಂಗಿನಕಾಯಿ ಒಡೆಯುವ ಆಚರಣೆ ಬೆಂಗಳೂರು ಕೋಲಾರ ಮೊದಲಾದ ಕೆಲವು ಪ್ರದೇಶಗಳಲ್ಲಿ ಈಗಲೂ ರೂಢಿಯಲ್ಲಿದೆ. ಕುರುಬರ ಒಳಪಂಗಡಗಳಾದ ನೊಣಬರು ಮತ್ತು ಕುಡುವಕ್ಕಲಿಗರು, ತೆಲುಗು ದೇಶದ ಗೊಲ್ಲರು, ಯಾದವರು, ಕುರುಪರು, ಕುರುಮರು, ಗಂಗರು, ಭೋಜಗೊಲ್ಲರು, ದ್ರಾವಿಡ(ತಮಿಳು) ಕುರುಬರು, ದನಗಾರರು, ಗಡರಿಯ, ಗಡ್ಡಿ ಅಹೀರರು, ಭರವಾಡರು ಇತ್ಯಾದಿ ಹೆಸರುಗಳಿಂದ ಭಾರತ ದೇಶದ ಎಲ್ಲಾ ಭಾಗಗಳಲ್ಲಿ ವಿಸ್ತರಿಸಿರುವ ಜನಸಾಂದ್ರತೆಯ ಪ್ರದೇಶಗಳನ್ನು ಕುರುಬರನ್ನು ಅಂಕಿಸಂಖ್ಯೆಗಳೊಂದಿಗೆ ಪರಿಚಯಿಸಿರುವುದು ಕಂಡುಬಂದಿದೆ.

ಮೂರನೆಯ ಭಾಗದಲ್ಲಿ ದಕ್ಷಿಣ ಭಾರತ ಮತ್ತು ಉತ್ತರ ಭಾರತ ದೇಶದ ಕುರುಬ ರಾಜಮನೆತನದವರ ಚರಿತ್ರೆಗಳನ್ನು ಸಂಕ್ಷಿಪ್ತ ಸಾಕ್ಷ್ಯಾಧಾರಗಳಿಂದ ಪರಿಚಯಿಸಿದ್ದಾರೆ. ವಿಜಯನಗರ

ಸಾಮ್ರಾಜ್ಯವು ಹಾಲುಮತದ ಹಕ್ಕ-ಬುಕ್ಕರಿಂದ ವಿದ್ಯಾರಣ್ಯರ ಸಮ್ಮುಖದಲ್ಲಿ ಸ್ಥಾಪಿತವಾದ, ಅವರ ಪ್ರಮುಖ ರಾಜರುಗಳ, ಕೆಳದಿ ಬಿದನೂರು, ಕದಂಬ, ಪಲ್ಲವ ಅರಸರ ಚರಿತ್ರೆ, ಕೃಷ್ಣಗಿರಿ ಮತ್ತು ಜಿಂಜೀರಾಯರು ಕಟ್ಟಿಸಿದ ಕಲ್ಲಿನ ಕೋಟೆ, ಹೆಗ್ಗಡ ದೇವನಕೋಟೆ, ಬಾರಕೂರು ರಾಜ್ಯ ಸ್ಥಾಪಕನಾದ ನಂದನಂದನ ರಾಯನ ಚರಿತ್ರೆ, ಮಧ್ಯಭಾರತದ ರಾಜವಂಶಗಳ, ಇಂದೋರ್ ಹೋಳ್ಕರ ಮಹಾರಾಜರು, ಬರೋಡಾ ಸಂಸ್ಥಾನ, ಮಾಂಡು ಮತ್ತು ಮಗಧ ಸಂಸ್ಥಾನ, ರಾಜ ಪುತಾಣದ ರಾಜವಂಶಗಳು, ಒಂದುನೂರು ರಾಜವಂಶಗಳ ಮೂಲ, ಪುರುಷ ಒಪ್ಪಾರಾವಳ, ಮೇಷ ಪಾಲಕರಾದ ಚವ್ಹಾಣರು, ದೇಶ ಪಾಲಕರಾದ ರಾಜವಂಶಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ನಾಲ್ಕನೆಯ ಭಾಗವು ಹಾಲುಮತದ ಮಹನೀಯರ ಚರಿತ್ರೆಯನ್ನು ಹೊಂದಿದೆ. ಕನಕದಾಸ, ಶಿವಾಜಿ ಹುಲಜಂತಿ, ಮಾಳಿಂಗರಾಯ, ಸಂಗೊಳ್ಳಿ ರಾಯಣ್ಣ, ಹೊಯ್ಸಳ ಜಿಂಜೀರಾಣಿ, ಇಂದೋರಿನ ಅಹಲ್ಯಾಬಾಯಿ ಹೋಳ್ಕರ, ದುರ್ಗಾವತಿದೇವಿ ಚಂದೇಲರ ಚರಿತ್ರೆಯನ್ನು ವಿಶ್ಲೇಷಿಸಲಾಗಿದೆ.

ಒಟ್ಟಿನಲ್ಲಿ ಈ ಕೃತಿ ಧರ್ಮ, ಸಾಹಿತ್ಯಗಳ ಜೊತೆಗೆ ಐತಿಹಾಸಿಕ ವಿಷಯಗಳನ್ನು ಒಳ ಗೊಂಡಿರುವುದು ಈ ಕೃತಿಯಿಂದ ತಿಳಿಯಲಾಗಿದೆ.

೨. ಕುರುಬರ ಮೂಲಚರಿತ್ರೆ

ಕುರುಬರ ಮೂಲ ಚರಿತ್ರೆ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಕುರುಬರನ್ನು ಆರ್ಯ ಮೂಲದವರೆಂದು ಹೇಳಿದರೆ, ಇನ್ನು ಕೆಲವರು ದ್ರಾವಿಡ ಮೂಲದವರೆಂದು ಹೇಳುತ್ತಾರೆ. ಅಲ್ಲದೆ ಮತ್ತೆ ಕೆಲವರು ಕುರುಬರು ದ್ರಾವಿಡಪೂರ್ವ ಗುಂಪಿಗೆ ಸೇರಿದವರೆಂದು ಅಭಿಪ್ರಾಯಪಡುತ್ತಾರೆ.

ಭಾರತದ ವಿಭಿನ್ನ ಭಾಗಗಳಲ್ಲಿರುವ ಕುರುಬರನ್ನು ಭಾರತೀಯ ಆರ್ಯ ಹಾಗೂ ಆಗ್ನೇಯ ಏಷಿಯಾ, ಮೂಲದವರೆಂದು ಎರಡು ವಿಧವಾಗಿ ರಿಸ್ಲೆ ಮತ್ತು ಹಟ್ಸನ್‌ರು ವಿಂಗಡಿಸಿದ್ದಾರೆ.[೧೧] ಇವರಿಬ್ಬರ ಪ್ರಕಾರ ಮೊದಲ ವರ್ಗದ ಕುರುಬರು ಉತ್ತರದಲ್ಲಿ ಹಾಗೂ ದ್ವಿತೀಯ ವರ್ಗದ ಕುರುಬರು ದಕ್ಷಿಣದಲ್ಲಿ ನೆಲೆಸಿದ್ದಾರೆ. ಆದರೆ ಇವರ ಉದ್ಯೋಗ ಆರ್ಥಿಕ ಸ್ಥಿತಿಗಳು ಒಂದೇ ಬಗೆಯಾಗಿದ್ದವು. ಅಲ್ಲದೇ ಇವರ ದೇಹರಚನೆ ಲಕ್ಷಣಗಳು ಭಾರತೀಯರ ಆರ್ಯರನ್ನು ಹೋಲುತ್ತಿದ್ದವು. ಕಂದಮಿಳರು, ಆಯಜ್ಞೆಯರು ಹಾಗೂ ಅರೆಮತ್ತಿನವರೆಂದು ಅವರನ್ನು ಕರೆಯಲಾಗಿತ್ತು.[೧೧೨]

ಕುರುಬರು ಭಾರತದಲ್ಲಿ ನೆಲೆಸಿದ ತೀರ ಪ್ರಾಚೀನ ನಿವಾಸಿಗಳಾಗಿದ್ದು, ಭಾರತ ನೆಲದ ಉದ್ಯೋಗ ಪ್ರಾಶಸ್ತ್ಯದಲ್ಲಿ ದ್ರಾವಿಡ ವಂಶಜರ ಸಂಪರ್ಕಕ್ಕೆ ಬಂದವರೆಂದು ಗೆಸ್ಟೂವ್ ಓಪರ್ಟ್ ಅವರು

ಅಭಿಪ್ರಾಯ ಪಟ್ಟಿದ್ದಾರೆ.[೧೧೩] ಅಲ್ಲದೇ ಕುರುಬರು ಭಾರತದ ಪೂರ್ವ ಜನಸಂಖ್ಯೆಯ ಮಹತ್ವದ ಮೂಲಗಳಲ್ಲಿ ಓರ್ವ ಸಮುದಾಯವಾಗಿರುವರೆಂದು ಇಲಿಯಟ್‌ರು ಅಭಿಪ್ರಾಯ ಪಟ್ಟಿದ್ದಾರೆ.[೧೧೪] ಹೀಗಾಗಿ ಕುರುಬರು ಮೂಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪಾಯಗಳಿವೆ.

ಭಾರತದಲ್ಲಿ ಆರ್ಯರಿಗಿಂತ ಪೂರ್ವದಲ್ಲಿ ಎರಡು ಜನಾಂಗಗಳು ಪ್ರಚಲಿತದಲ್ಲಿದ್ದವೆಂದು ಸಂಶೋಧಕರ ಅಭಿಪ್ರಾಯ. ಒಂದನ್ನು ಆಸ್ಟ್ರೋ ಏಶಿಯಾಟಿಕ್ ಎಂದು, ಇನ್ನೊಂದನ್ನು ದ್ರಾವಿಡರೆಂದು ಹೆಸರಿಸಿದ್ದಾರೆ[೧೧೫] ದ್ರಾವಿಡರು ಆಸ್ಟ್ರೋ ಏಶಿಯಾಟಿಕ್ ಜನರ ಮೇಲೆ ಆಕ್ರಮಣ ಮಾಡಿ ಅವರ ಮೇಲೆ ತಮ್ಮ ವರ್ಚಸ್ಸನ್ನು ಸ್ಥಾಪಿಸಿದರು. ಆಸ್ಟ್ರೋ ಏಶಿಯಾಟಿಕ್ ಜನರು ಮೂಲೆಗುಂಪಾಗಿ ಸಂಪೂರ್ಣ ದ್ರಾವಿಡರ ವಶವಾದರು. ಈ ದ್ರಾವಿಡರು ಮೊದಲು ಧನಗಾರ ಪಶುಪಾಲಕರಾಗಿದ್ದರು. ನಂತರ ಪದವಿಯನ್ನು ಸಂಪಾದಿಸಿದರೆಂದು ಪ್ರೊ. ವ್ಹಿ.ಬಿ.ದೀಕ್ಷಿತ್ ಅವರು ಅಭಿಪ್ರಾಯಪಟ್ಟಿದ್ದಾರೆ. ಭಾರತದ ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ವಾಸಿಸುತ್ತಿದ್ದ ಜನರೆಲ್ಲಾ ದ್ರಾವಿಡರೇ ಆಗಿದ್ದರು. ಈ ದ್ರಾವಿಡರು ನಿಸ್ಸಂದಿಗ್ಧವಾಗಿ ಕುರುಬರು ಎಂದು ಆಧುನಿಕ ವಂಶಶಾಸ್ತ್ರಜ್ಞರಾದ ಹ್ಯಾಡೋನರು ಅಭಿಪ್ರಾಯ ಪಟ್ಟಿದ್ದಾರೆ.[೧೧೬]

ಮೂಲತಃ ದ್ರಾವಿಡರು ಕುರುಬ ಸಮುದಾಯದ ಲಕ್ಷಣಗಳನ್ನು ಹೊಂದಿದ ದೃಢಕಾಯರು, ಆಜಾನುಬಾಹುಗಳು, ಕೃಷ್ಣವರ್ಣದವರಾಗಿದ್ದರು. ಮೈಮೇಲೆ ಧೋತರ, ಕಂಬಳಿಗಳು ಪ್ರಮುಖ ವಸ್ತ್ರಗಳಾಗಿದ್ದವು. ಕೈಯಲ್ಲಿ ಕೋಲು ಹಿಡಿದು ಕುರಿಗಳನ್ನು ಸಾಕುತ್ತಿದ್ದರು. ಕುರಿಯ ಮಾಂಸವನ್ನು ಆಹಾರಕ್ಕೂ, ಉಣ್ಣೆಯನ್ನು ಕಂಬಳಿ ನೇಯ್ಗೆಗೆ ಉಪಯೋಗಿಸುತ್ತಿದ್ದರು. ಪಶುಪಾಲನೆಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದು ಅನಿವಾರ್ಯವಾಗಿತ್ತು. ಕಾಡುಮೇಡುಗಳಲ್ಲಿ, ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದ ಕುರುಬರು ತಮ್ಮ ಹಾಗೂ ತಮ್ಮ ಪ್ರಾಣಿಗಳ ರಕ್ಷಣೆಗಾಗಿ ಅನೇಕ ಆಯುಧಗಳನ್ನು ಹೊಂದಿರುತ್ತಿದ್ದರು. ಶತ್ರುಗಳನ್ನು ಹೊಡೆದೋಡಿಸುವಲ್ಲಿ ಅಪಾರ ಶಕ್ತಿಯುತ ರಾಗಿದ್ದರಲ್ಲದೆ ಯುದ್ಧ ಕಲೆಗಳಲ್ಲಿ ಅನುಭವವುಳ್ಳವರಾಗಿದ್ದರು. ಕುರುಬರು ಎಂತಹ ದುಷ್ಟಮೃಗಗಳಿಗೂ ಅಂಜುವವರಲ್ಲ.[೧೧೭] ಇವರ ಎರಡು ವರ್ಷಗಳ ಮೇಲ್ಪಟ್ಟ ಮಕ್ಕಳೂ ಧೈರ್ಯವಾಗಿ ಕಾಡಿನಲ್ಲಿ ಸಂಚರಿಸುತ್ತಿದ್ದರು. ಕೆಲವು ಸಲ ಎರಡು ಕೊಳ್ಳಿಗಳನ್ನು ಕ್ರೂರಮೃಗಗಳ ಮುಖದತ್ತ ಹಿಡಿದು ಅಬ್ಬರಿಸಿ ಓಡಿಸುತ್ತಿದ್ದರು. ಒಟ್ಟಿನಲ್ಲಿ ಇವರು ಕಷ್ಟಸಹಿಷ್ಣುಗಳು, ಧೈರ್ಯಶಾಲಿಗಳು, ಸತ್ಯವಂತರು ಆಗಿದ್ದರೆಂದು ಎಂಥೋವೆನ್ನರು ಅಭಿಪ್ರಾಯ ಪಟ್ಟಿದ್ದಾರೆ.[೧೧೮]

ಇವರು ಪಶುಪಾಲನೆ ಮತ್ತು ಕೃಷಿಯನ್ನು ಪ್ರಮುಖ ವೃತ್ತಿಯನ್ನಾಗಿ ಅವಲಂಬಿಸಿದ್ದರೂ ಕಾಲಾನಂತರ ರಾಜಕೀಯದಲ್ಲಿ ಆಸಕ್ತಿ ವಹಿಸತೊಡಗಿದರು. ಪ್ರಾಚೀನ ಮರವ ಸಮುದಾಯಕ್ಕೆ ಸೇರಿದವರೆಂದು ಹೇಳಿಕೊಳ್ಳುತ್ತಿದ್ದ ಸೂತಪತಿಗಳು ದಕ್ಷಿಣ ಭಾರತದಲ್ಲಿ ರಾಜ್ಯಭಾರ ಮಾಡುತ್ತಿದ್ದರು.

ಅವರನ್ನು ಸೋಲಿಸಿದರಲ್ಲದೆ ದಕ್ಷಿಣದ ತುತ್ತತುದಿಗೆ ಓಡಿಸಿದರು. ಕುರುಬರ ಮುಖಂಡರನ್ನು ಕಾಮಂಡ ಕುರುಂಬ ಪ್ರಭು ಎಂದು ಕರೆಯುತ್ತಿದ್ದರು. ಹಾಗೆಯೇ 'ಪುಲಾಲದ ರಾಜ' ಎಂದು ಕರೆಯಿಸಿಕೊಂಡು ದ್ರಾವಿಡ ದೇಶದ ಅಧಿಪತಿಯಾದನು. ಅವನು ಆಳಿದ ರಾಜ್ಯ ಕುರುಬ ಭೂಮಿ ಎಂದು ಹೆಸರಾಯಿತು. ಅಲ್ಲದೇ ಆಡಳಿತದ ಎಲ್ಲಾ ದಾಖಲೆಗಳಲ್ಲಿ ಕುರುಬರ ನಾಡು ಎಂದು ಸೇರ್ಪಡೆಯಾಯಿತು. ಕುರುಬರ ನಾಡು ಎಂಬುದು ಈಗಲೂ ಮಲಬಾರ್ ತೀರದಲ್ಲಿ ಸುಪ್ರಸಿದ್ಧವಾಗಿರುವುದು ಕಂಡುಬರುತ್ತದೆ."[೧೧೯] ಈ ಹಿನ್ನೆಲೆಯಲ್ಲಿ ಕುರುಬರು ಶೂರರಾದ ಸಮುದಾಯದವರೆಂದು ಹೇಳಬಹುದು.

ಕುರುಬರ ಮೂಲದ ಬಗ್ಗೆ ವಿದ್ವಾಂಸರಲ್ಲಿ ಮತ್ತೊಂದು ಅಭಿಪ್ರಾಯವಿದೆ. ಕೆಲವರು ಕುರುಬರನ್ನು ಆರ್ಯಮೂಲದವರೆಂದು ಹೇಳುತ್ತಾರೆ. ರಿಸ್ಲೆ ಮತ್ತು ಹಟ್ಟನ್ ಅವರು ಕುರುಬರು ಆರ್ಯ ಮೂಲದವರಾಗಿದ್ದಾರೆ. ಅವರು ಉತ್ತರ ಭಾಗದಲ್ಲಿ ನೆಲೆಸಿದ್ದರು ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧೨೦] ಅವರ ಉದ್ಯೋಗ, ಆರ್ಥಿಕ ಸ್ಥಿತಿ ಹಾಗೂ ದೇಹರಚನೆ ಲಕ್ಷಣಗಳು ಭಾರತೀಯ ಆರ್ಯರನ್ನು ಹೋಲುತ್ತಿದ್ದವೆಂದು ಅಭಿಪ್ರಾಯ ಪಟ್ಟಿದ್ದಾರೆ. ಇದರಿಂದ ಕುರುಬರು ಆರ್ಯ ಮೂಲದವರೆಂದು ಕೂಡ ಹೇಳಬಹುದಾಗಿದೆ.

ಭಾರತದ ಉತ್ತರ, ದಕ್ಷಿಣ, ಪಶ್ಚಿಮ ಎಲ್ಲಾ ಭಾಗಗಳಲ್ಲಿ ವಾಸಿಸುತ್ತಿದ್ದ ದ್ರಾವಿಡರ ಮೇಲೆ ಆರ್ಯರು ಆಕ್ರಮಣ ಮಾಡಿ ಸೋಲಿಸಿದರು. ಹೀಗಾಗಿ ಸಿಂಧು, ಗಂಗಾ, ಯಮುನಾ ನದಿಗಳ ಸಮೃದ್ಧ ಭೂಮಿಯು ಆರ್ಯರ ವಶವಾಯಿತು. ಆರ್ಯರಿಗೆ ಸೋತ ದ್ರಾವಿಡರಲ್ಲಿ ಕೆಲವರು ಆರ್ಯರಾಗಿ ಪರಿವರ್ತನೆ ಹೊಂದಿದರು. ಆರ್ಯರೆಂದರೆ ಪೂಜ್ಯರು, ಸುಸಂಸ್ಕೃತರು ಎಂಬ ಭಾವವಿದೆ. ವಾಯವ್ಯ ದಿಕ್ಕಿನಿಂದ ಭಾರತಕ್ಕೆ ಪ್ರವೇಶ ಮಾಡಿದವರಲ್ಲಿ ಇವರೇ ಪ್ರಥಮವಾಗಿದ್ದಾರೆ. ತಮ್ಮ ಕುರಿ, ದನಗಳನ್ನು ಮೇಯಿಸುತ್ತಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುತ್ತಿದ್ದರು. ಮೂಲತಃ ಆರ್ಯರಿಗೆ ಕೃಷಿ ಮತ್ತು ಪಶುಪಾಲನೆ ಮುಖ್ಯ ವೃತ್ತಿಗಳಾಗಿದ್ದವು.[೧೨೧] ಆರ್ಯರು(ಪಂಜಾಬ ಕುರುಬರು) ಕಾಲಾನಂತರ ಬ್ರಾಹ್ಮಣರು ಮತ್ತು ರಜಪೂತರೆಂಬ ಅಭಿದಾನಗಳನ್ನು ಪಡೆದು ಕ್ರಮೇಣ ಭಾರತವನ್ನೆಲ್ಲ ಆಕ್ರಮಿಸಿಕೊಂಡರು ಎಂದು ಪ್ರೊ. ಮ್ಯಾಕ್ಸ್‌ಮುಲ್ಲರ್ ಅಭಿಪ್ರಾಯ ಪಟ್ಟಿದ್ದಾರೆ.[೧೨೨]

ಪ್ರಾಚೀನ ಕಾಲದಲ್ಲಿ ಆರ್ಯರಿಗೆ ಪಶುಪಾಲನೆಯೇ ಮುಖ್ಯ ವೃತ್ತಿಯಾಗಿತ್ತು. ಆರ್ಯರು ತಮ್ಮ ಹಾಗೂ ತಮ್ಮ ಪ್ರಾಣಿಗಳ ರಕ್ಷಣೆಗಾಗಿ ಎತ್ತರವಾದ ಅಥವಾ ಗುಡ್ಡ ಬೆಟ್ಟಗಳಲ್ಲಿ ವಾಸ ಮಾಡುತ್ತಿದ್ದರು. ಅದೇ ರೀತಿ ಕುರುಬರೂ ಬೆಟ್ಟ ಗುಡ್ಡ ಅಥವಾ ಎತ್ತರವಾದ ಸ್ಥಳಗಳನ್ನೇ ವಾಸ ಸ್ಥಳಗಳನ್ನಾಗಿಸಿ ಕೊಂಡಿದ್ದರು. ದನ ಕುರಿಗಳ ಪಾಲನೆ ಪ್ರಮುಖ ಉದ್ಯೋಗವಾಗಿತ್ತು. ಆರ್ಯರು ಪಂಜಾಬಿನಿಂದ ಗಂಗಾ, ಯಮುನಾ ನದಿಗಳ ಬಯಲಿಗೆ ಉತ್ತರ ಪ್ರದೇಶದ ಇಡೀ ಪಶ್ಚಿಮ ಭಾಗಕ್ಕೆ ವಿಸ್ತರಿಸಿಕೊಂಡು

ಭರತರು ಮತ್ತು ಪುರುಗಳು ಒಂದಾಗಿ 'ಕುರು' ಎಂಬ ರಾಜಕುಲವನ್ನು ರೂಪಿಸಿಕೊಂಡರು.[೧೨೩] ಆರಂಭದಲ್ಲಿ ನಡುಬಯಲಿನ ಅಂಚಿನಲ್ಲಿರುವ ಸರಸ್ವತಿ ಮತ್ತು ದೃಶದ್ವತಿ ನದಿಗಳ ನಡುವಿನ ಪ್ರದೇಶದಲ್ಲಿ ವಾಸ ಮಾಡತೊಡಗಿದರು. ನಂತರ ದೆಹಲಿ ಮತ್ತು ನಡುಬಯಲಿನ ಮೇಲುಭಾಗವನ್ನು ವಶಪಡಿಸಿಕೊಂಡರು. ಉತ್ತರ ವೇದಕಾಲದಲ್ಲಿ ಗಂಗಾಬಯಲಿನ ಮೇಲುಭಾಗದಲ್ಲಿ ಈ ಕುರುಬರು ಅಧಿಕಾರವನ್ನು ಸ್ಥಾಪಿಸಿದರು.[೧೨೪] ಕುರು ಎಂಬುದು ಕುರುದೇಶ ಕುರುವಂಶ ಎಂಬ ಅರ್ಥ ಕೊಡುತ್ತದೆ. ಇದರಿಂದ ಮಹಾಭಾರತದಲ್ಲಿ ಪ್ರಸಿದ್ಧರಾದ ಕುರುವಂಶದ ಕೌರಭ ಶಬ್ದದಿಂದಲೇ ಕುರುವ>ಕುರುಬ ಎಂದಾಗಿದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೧೨೫] ಅಲ್ಲದೆ 'ಕುರು' ದೇಶದ ಕೆಲವು ಭಾಗವನ್ನು 'ಪ' ಎಂದರೆ ಪಾಲಿಸುತ್ತಿದ್ದ ಕಾರಣದಿಂದಾಗಿ ಕುರುಪ ಎಂಬುದೇ ಕುರುಬ ಆಗಿದೆ ಎಂದು ಮತ್ತೊಂದು ವಾದವಿದೆ.[೧೨೬] ಇದರಿಂದ ಕುರುಬರು 'ಕುರು' ವಂಶದವರು ಎಂದು ಹೇಳಬಹುದಾಗಿದೆ. ಹೀಗಾಗಿ ಕುರುಬರು ಆರ್ಯ ಮೂಲದವರೆಂದು ಒಂದು ಅಭಿಪ್ರಾಯವಿದೆ.

ಕುರುಬರು ಪ್ರಾಚೀನ ಆರ್ಯ ಕುಲದವರೆಂದು ವೇದಪುರಾಣಗಳು ತಿಳಿಸುತ್ತವೆ. ಆರ್ಯರು ತಮ್ಮ ಮೂಲಸ್ಥಳ ತೊರೆದು ಪಂಜಾಬಿಗೆ ಬಂದು ನೆಲೆಸಿದ ಸ್ಮಾರಕ ಗ್ರಂಥವೇ ಋಗ್ವೇದವೆಂಬ ಅಭಿಪ್ರಾಯವಿದೆ.[೧೨೭] ಋಗ್ವೇದದಲ್ಲಿ ಕುರುಬರನ್ನು ಭಾರತದ ಮೂಲನಿವಾಸಿಗಳೆಂದು ಉಲ್ಲೇಖಿಸಲಾಗಿದೆ. ಆರ್ಯರು ಉತ್ತರ ಭಾಗದಲ್ಲಿ ನೆಲೆಸಿದರು. ಇದಕ್ಕೆ ಒಂದು ಕಥೆಯು ಪ್ರಚಲಿತದಲ್ಲಿದೆ. ಅಗಸ್ತ್ಯನೆಂಬೋರ್ವನು ವಿಂಧ್ಯ ಪರ್ವತವನ್ನು ಮೆಚ್ಚಿಸಿ, ಒಲಿಸಿ ಆರ್ಯರಿಗೆ ತೆಂಕಣಕ್ಕೆ ಬರಲು ಇದ್ದ ತೊಂದರೆಯನ್ನು ನಿವಾರಿಸಿದನೆಂದು ತಿಳಿಯುತ್ತದೆ.[೧೨೮] ಈ ವಿಂಧ್ಯ ಎನ್ನುವುದು ಒಂದು ಗೊಂಡಾರಣ್ಯವಾಗಿದೆ.[೧೨೯] ಇಲ್ಲಿ ಗೊಂಡರು ಎಂಬ ಕಾಪಾಡಿಗಳು ಇಂದಿಗೂ ನೆಲೆಸಿದ್ದಾರೆ. ಗೊಂಡರು ಎಂಬುದು ಕುರುಬರ ಒಂದು ಪಂಗಡವಾಗಿದೆ. ಇದರಿಂದ ಗೊಂಡ(ಕುರುಬ)ರು ಆರ್ಯರ ಪ್ರಭಾವಕ್ಕೊಳಗಾಗಿರುವುದು ಕಂಡುಬರುತ್ತದೆ.

ಅಂದಿನ 'ಆರ್ಯರೇ ಇಂದಿನ ಕುರುಬರು' ಎನ್ನುವುದಕ್ಕೆ ವೇದಗಳು ಪ್ರಾಚೀನ ಕಾಲದ ಇತಿಹಾಸವನ್ನು ತಿಳಿಸುತ್ತವೆ. ಆರ್ಯರ ಪೂರ್ಣೇತಿಹಾಸವನ್ನು ತಿಳಿಸುವ ಆದಿಗ್ರಂಥಗಳು ವೇದಗಳು. ಅಷ್ಟು ಪ್ರಾಚೀನವಾದ ಸಾಹಿತ್ಯರಾಶಿ ಪ್ರಪಂಚದಲ್ಲಿ ಮತ್ತೆಲ್ಲಿಯೂ ಇಲ್ಲ. ಆದರೂ ಒಂದು ಮಾತ್ರೆಯೂ ವ್ಯತ್ಯಾಸವಾಗದೆ, ಮೂಲ ರೂಪದಲ್ಲಿಯೇ ಮುಖವಿದ್ಯೆಯಾಗಿ ಇಲ್ಲಿಯವರೆಗೂ ಬೆಳೆದುಕೊಂಡು ಬಂದಿರುವುದು ಅದರ ವೈಶಿಷ್ಟ್ಯ. ಆದುದರಿಂದ ಅದು ಅದರ ದ್ರಷ್ಟಾರರ ಪ್ರತ್ಯಕ್ಷ ಪರಿಚಯವನ್ನು ಮಾಡಿಸುವ ಹಾಗೆ, ಹನುಮಂತಯ್ಯನವರು ಕುರುಬರ ಮೂಲ ಇತಿಹಾಸವನ್ನು ಈ ವೇದಗಳ ಮುಖಾಂತರ ಈ ಕೆಳಗಿನಂತೆ ಮಾಡಿರುವುದು ಕಂಡುಬರುತ್ತದೆ.

ಪಶುಪಾಲಕರಿಗಿಂದು ಕರೆಯುವ ಕುರುಬರು, ಗೊಲ್ಲರು ಎಂಬ ಹೆಸರುಗಳು ವೇದಗಳಲ್ಲಿ ಅವಿ(ಕುರಿ) ಪಾಲ, ಅಜ(ಮೇಕೆ) ಪಾಲ, ಮೇಷ(ಕುರಿ) ಪಾಲ, ಗೋ(ಗೋವು) ಪಾಲರೆಂಬ ಹೆಸರುಗಳಿದ್ದವು ಎಂಬುದನ್ನು ತಿಳಿಸಿಕೊಟ್ಟಿದ್ದಾರೆ.

"Rigveda is the oldest book in the library of the world" ಎಂಬುದನ್ನು ಸ್ವಾಮಿ ಶ್ರೀ ದಯಾನಂದ ಸರಸ್ವತಿಯವರು ಮತ್ತು ಮ್ಯಾಕ್ಸ್ ಮುಲ್ಲರ್ ಅವರು ಪ್ರಶಂಸಿಸಿರುವುದನ್ನು ಹನುಮಂತಯ್ಯನವರು ಉಲ್ಲೇಖಿಸಿದ್ದಾರೆ. ವೇದ ಮತ್ತು ಪುರಾಣಾದಿಗಳಲ್ಲಿ ಮೇಷ(ಕುರಿ–ಮೇಕೆ) ವೇ ಮೊದಲಿನದು. ಎಂದರೆ ಮೇಷರಾಶಿಯೇ ಮೊದಲಿನದು. ವೃಷಭ(ಎತ್ತು) ರಾಶಿ ಎರಡನೆಯದು, ಮಿಥುನ(ಗಂಡು–ಹೆಣ್ಣು) ರಾಶಿಯೇ ಮೂರನೆಯದು. ಈ ಮೂರನೆಯ ರಾಶಿ ಒಕ್ಕಲುತನ(ಸಂಸಾರ)ದ ದ್ಯೋತಕವು ಎಂದು ಹೇಳಿದ್ದಾರೆ.

ಹನ್ನೆರಡು ರಾಶಿಗಳಲ್ಲಿ ಮೊದಲ ರಾಶಿ ಮೇಷರಾಶಿ, ವಾರಗಳಲ್ಲಿ ಮೊದಲವಾರ ಭಾನುವಾರ, ಇದು ಕುರುಬರ ದೈವ ಮೈಲಾರನ ವಾರ. ಉತ್ತಮೋತ್ತಮರ ಪರಮ ಜ್ಞಾನದೇವತೆ ಬ್ರಹ್ಮನ ತಲೆ, ಕುರಿ ತಲೆ(ಈ ಕುರಿಗಳನ್ನು ಪೋಷಿಸಿಕೊಂಡು ಬಂದವರು ಕುರುಬರು). ಅಗ್ನಿಯ ವಾಹನ ಮೇಷ. ಕುರುಬರ ಮಂದಿ ಅಗ್ನಿಕುಲಕ್ಷತ್ರಿಯರೆನಿಸಿಕೊಂಡರೆಂದು ಇತಿಹಾಸದಲ್ಲಿ ಉಲ್ಲೇಖವಿದೆ.

ಋಗ್ವೇದದಲ್ಲಿ ಬರುವ ಅನೇಕ ದೇವತೆಗಳು ಪ್ರಕೃತಿಯ ನಾನಾ ಮುಖಗಳು. ಸೋಮ, ಸೂರ್ಯ, ಅಗ್ನಿ, ವಾಯು, ರಾತ್ರಿ, ಪೃಥ್ವಿ, ಮರ ಮೊದಲಾದ ದೇವತೆಗಳೆಲ್ಲಾ ಪ್ರಕೃತಿಯ ವಿವಿಧ ರೂಪಗಳು.

ಕುರುಬರು ಅನೇಕ ಪ್ರಕೃತಿಯ ರೂಪಗಳಲ್ಲಿ 'ಸೂರ್ಯ'ನನ್ನು ಕುರಿತು ಪೂಜಿಸುತ್ತಿರುವುದು (ಪ್ರಾರ್ಥಿಸುತ್ತಾರೆ) ವೇದಗಲಲ್ಲಿ ಕಂಡುಬಂದಿದೆ. ಓ ದೇವರೇ ಕುರಿ ಮತ್ತು ದನಗಳಲ್ಲಿ ನಾವು ಸಮೃದ್ಧಿ ಹೊಂದೋಣ. ನಾವು ಯಾರನ್ನೂ ಕೊಲ್ಲುವುದಿಲ್ಲ. ಕಾಡುಗಳಲ್ಲಿ ವಿರಾಮ ಜೀವನ ನಡೆಸುತ್ತಾ ಮಂತ್ರಗಳನ್ನು ಜಪಿಸುತ್ತ ದನಗಳನ್ನು ಮೇಯಿಸುತ್ತೇವೆ ಎಂಬ ಪ್ರಾರ್ಥನೆಗಳು ಇವೆ. ಭಾರತದಲ್ಲಿ ಬಹು ಪ್ರಾಚೀನ ಕಾಲದಿಂದಲೂ ಸೂರ್ಯನನ್ನು ಪೂಜಿಸಲಾಗುತ್ತದೆ. ವೇದ ಮತ್ತು ಇತಿಹಾಸಗಳ ದೇವಕಥನಗಳಲ್ಲಿ ಸೂರ್ಯ ಹಾಗೂ ಅವನ ವಿವಿಧ ರೂಪಗಳು ಬಹು ಮುಖ್ಯ ಪಾತ್ರವಹಿಸಿವೆ. ಅನಂತರ ಕಾಲದಲ್ಲಷ್ಟೇ ಈ ದೇವರು ಧಾರ್ಮಿಕ ಚಳುವಳಿಯ ಕೇಂದ್ರಬಿಂದು ವಾಗಿ ಕಾಣಿಸಿಕೊಳ್ಳುತ್ತಾನೆ. ಕ್ರಿ.ಶ. ಆರಂಭದ ಹಿಂದಿನ ಮತ್ತು ಮುಂದಿನ ಕೆಲವು ಶತಮಾನಗಳಲ್ಲಿ ಒಂದು ಸ್ಥಳೀಯ ಸೂರ್ಯಾರಾಧಕ ವರ್ಗವಿದ್ದಿರಬಹುದು. ಆದರೆ ಕ್ರಿ.ಶ. ಮೊದಲ ಶತಮಾನಗಳಲ್ಲಿ ಪೂರ್ವ ಇರಾಣೀಯ(ಶಕದ್ವೀಪೀ) ರೀತಿಯ ಸೂರ್ಯಪಂಥವು ಉತ್ತರ ಭಾರತದ ಕೆಲವು ಭಾಗಗಳಲ್ಲಿ ಹರಡಲ್ಪಟ್ಟಿತ್ತು ಎಂಬುದು ತಿಳಿದುಬಂದಿದೆ. ಮಗಧರನ್ನು ಭಾರತಕ್ಕೆ

ಕರೆತಂದವನೆಂದು ಹೇಳುವ ಶಾಂಬಿನ(ಕೃಷ್ಣನ) ಬಗ್ಗೆ ಇರುವ ಪೌರಾಣಿಕ ಕಥೆಗಳು ಹಾಗೂ ಇತರ ಸಾಹಿತ್ಯಕ ಮತ್ತು ಪುರಾಣಾತ್ಮಕ ಮಾಹಿತಿಗಳು ಈ ವಿಷಯಕ್ಕೆ ಸಾಕ್ಷ್ಯವೊದಗಿಸುತ್ತವೆ.[೫೦] ಸೂರ್ಯಾರಾಧನೆಯು ಭಾರತದಲ್ಲಿ ಕೆಲವು ಕಾಲ ಪ್ರಚಲಿತವಾಗಿದ್ದರೂ ಅದು ವೈಷ್ಣವ ಅಥವಾ ಶೈವ ಪಂಥಗಳು ಹೊಂದಿದಂಥ ಪ್ರಮುಖ ಸ್ಥಾನವನ್ನು ಎಂದೂ ಪಡೆಯಲಿಲ್ಲ.

ಕುರುಬರು ಪ್ರಕೃತಿಯ ವಸ್ತುಗಳನ್ನು ಪೂಜ್ಯಭಾವದಿಂದ ಕಾಣುತ್ತಿದ್ದರಾದರೂ, ತಮ್ಮ ಗ್ರಹಿಕೆಯಾಚೆಗೆ ಒಂದು ಶಕ್ತಿ ಇರುವುದನ್ನು ಅನುಭವದಿಂದ ಅರಿತು ಅದನ್ನು 'ಪರಮ'ನೆಂದರು. ಅಮೂರ್ತದಲ್ಲಿ ಮೂರ್ತರೂಪ ಕಲ್ಪಿಸಿ ಅವನನ್ನು 'ಬರಮ'ನೆಂದರು. ಕಾಲಾಂತರದಲ್ಲಿ ಅವನು ಆರ್ಯೀಕರಣಗೊಂಡು, ಭರಮನಾದ, ಬ್ರಹ್ಮನಾದ. ಬ್ರಹ್ಮದೇವ ಸೃಷ್ಟಿಕರ್ತ ಎಂದು ಭಾವಿಸಬಹುದು. ಸೃಷ್ಟಿಕ್ರಿಯೆಗೆ ಈ 'ಪರಮ'ನೇ ಕೃತಶಕ್ತಿ ಎಂಬ ಭಾವನೆ ಬಲಿತು ವಿಶ್ವದೇವನಾದ. ಅವನು ಆತ್ಮೀಯನಾಗಿ ಪರಮಾತ್ಮನಾದ. ಚೆಲುವನಾಗಿ ಕಂಡು ಪರಶಿವನಾದ. ಈ ದೃಷ್ಟಿಯಿಂದ ಆದಿದೈವ ತ್ರಿಮೂರ್ತಿಗಳಲ್ಲಿ ಪ್ರಥಮ.[೫೧]

ಆರ್ಯ(ಕುರುಬ)ರ ಸ್ತ್ರೀಯರು ರಥವನ್ನು ನಡೆಸುತ್ತಿದ್ದರು. ರಣರಂಗದಲ್ಲಿ ಯುದ್ಧವನ್ನು ಮಾಡುತ್ತಿದ್ದರು. ಬಾಣಗಳನ್ನು ಬಿಡುವುದರಲ್ಲಿ ಮುರ್ದಲ ಎಂಬಾತನ ಪತ್ನಿ ಇಂದ್ರಾಣಿಯು ಹೆಸರುವಾಸಿಯಾಗಿದ್ದಳು. ವೈರಿಗಳ ವಿರುದ್ಧ ಯುದ್ಧ ಮಾಡಿ ತನ್ನ ಗೋವುಗಳನ್ನು ಬಿಡಿಸಿಕೊಂಡಳು ಎಂಬುದನ್ನು ಶರಣ ಸಂದೇಶ ಪತ್ರಿಕೆಯಲ್ಲಿ(೧೯೩೯) ಬಂದಿರುವುದನ್ನು ಉಲ್ಲೇಖಿಸುತ್ತಾರೆ. ಹಾಗೆಯೇ ಆರ್ಯರ ಸ್ತ್ರೀಯರು ವಿದ್ಯೆಯನ್ನು ಕಲಿಯುತ್ತಿದ್ದರು. ವೇದ ಮಂತ್ರಗಳನ್ನು ಅನೇಕ ಸ್ತ್ರೀಯರು ರಚಿಸಿರುವುದನ್ನು ಹೇಳಿದ್ದಾರೆ.

೧. ೧–೧೨೬–೭ನೆಯ ಮಂತ್ರವನ್ನು ಲೋಮಶಾ ಎಂಬುವಳೂ

೧೦–೪೦ನೆಯ ಸೂಕ್ತವನ್ನು ಘೋಷಾ ಎಂಬುವಳೂ

೮–೨೮ನೆಯ ಸೂಕ್ತವನ್ನು ವಿಶ್ವಾವಾರಾ ಎಂಬುವಳೂ

೧೦–೪೫ನೆಯ ಸೂಕ್ತವನ್ನು ಇಂದ್ರಾಣಿ

೧೦–೧೫೦ನೆಯ ಸೂಕ್ತವನ್ನು ಶಚೀ

೫–೯ನೆಯ ಸೂಕ್ತವನ್ನು ಅಪಾಲಾ ಎನ್ನುವಳು

ರಚಿಸಿರುತ್ತಾರೆಂದು ಮತ್ತು ಋಗ್ವೇದದಲ್ಲಿಯೇ ಮಂತ್ರಗಳನ್ನು ರಚಿಸಿರುವುದನ್ನು ಪ್ರಸ್ತಾಪಿಸಿದ್ದಾರೆ.[೫೨] ಅಂದರೆ ಮೂಲ ಮಾತೃಪ್ರಧಾನ ವ್ಯವಸ್ಥೆಯ ನಮ್ಮ ದೇಶದಲ್ಲಿ ಮಹಿಳೆಯರಿಗೆ ವಿಶಿಷ್ಟ ಸ್ಥಾನವಿದೆ.

ವೇದಗಳ ಕಾಲದಲ್ಲಿ ಹಲವು ಮಹಿಳೆಯರು ತತ್ವಜ್ಞಾನವನ್ನು ಪಡೆದವರಾಗಿದ್ದರು ಮತ್ತು ಶ್ಲೋಕ ರಚಿಸಿ ಹೆಸರುವಾಸಿಯಾಗಿದ್ದರೆಂಬುದು ತಿಳಿದುಬಂದಿದೆ.

ಪಶುಗಳ ಹೆಸರಿಂದಲೇ ಪ್ರಪಂಚ

ಪ್ರಾಚೀನ ಕಾಲದಲ್ಲಿ ಮಾನವರ ಸಂಪತ್ತು ಮುಖ್ಯವಾಗಿ 'ಧನಂಚಗೋಧನಂ'(cattle capital) ಎನ್ನುವಂತೆ ಅವರಲ್ಲಿದ್ದ ಗೋವುಗಳ ಸಂಖ್ಯೆಯೇ ಆಗಿದ್ದಿತು. ಅವರು ದಂಡ ಕೊಡುವಾಗ, ಪದಾರ್ಥಗಳನ್ನು ಕೊಳ್ಳುವಾಗ, ದಾನ ಮಾಡುವಾಗ ಹಣಕ್ಕೆ ಬದಲು ಗೋವುಗಳನ್ನೋ ಅಥವಾ ಕುರಿ, ಮೇಕೆಗಳನ್ನೋ ಕೊಡುತ್ತಿದ್ದರು. ದೇವಾಲಯಗಳಲ್ಲಿ ನಡೆಯುವ ದೀಪಾರಾಧನೆಗಳಿಗೆ ಕೂಡ ನೂರಾರು ಸಹಸ್ರಾರು ದನ, ಕುರಿ, ಮೇಕೆಗಳನ್ನು ದತ್ತಿಯಾಗಿ ಬಿಡುತ್ತಿದ್ದರು. ಅವುಗಳ ತುಪ್ಪದಿಂದ ದೇವಾಲಯಗಳಲ್ಲಿ ಸದಾ ನಂದಾದೀಪವು ಉರಿಯುತ್ತಿದ್ದಿತು ಎಂದು ಪ್ರಸ್ತಾಪಿಸಿದ್ದಾರೆ.

ಪುರಾಣದ ಕ್ಷೀರಸಾಗರ ಕಲ್ಪನೆ ಹಾಲುಮತ ಕೇಂದ್ರಿತವಾಗಿದೆ. ಪುರಾಣಿಕರು ಮನೋಹರವಾದ ರೂಪಕದಿಂದ ಅರ್ಥಪೂರ್ಣವಾದ ಸಾಂಕೇತಿಕ ಪರಿಭಾಷೆಯೊಂದಿಗೆ ಕ್ಷೀರಸಾಗರವನ್ನು ನಿರ್ಮಿಸಿದರು. ಹಾಲಿನಂತಹ ಬೆಳ್ದಿಂಗಳನ್ನು ಸುರಿಸುವ ಚಂದಪ್ಪನು ಹುಟ್ಟಿದುದು ಕ್ಷೀರಾಬ್ಧಿಯಲ್ಲಿ. ಬೆಳ್ದಿಂಗಳೆಂಬ ಹಾಲಿನಲ್ಲಿ, ಬೆಣ್ಣೆಯಂತಹ ಚಂದ್ರನು ಹಾಲುಮತದವರು(ಯದು–ತುರ್ವಶರು) ಚಂದ್ರವಂಶದವರೆಂದು ಪುರಾಣಗಳು ಸಾರುತ್ತವೆ. ಈ ಕ್ಷೀರಸಾಗರದಲ್ಲಿ ಹುಟ್ಟಿದವಳು ಲಕ್ಷ್ಮಿ ಧನ ಕೊಡುವವಳು ಆದ್ದರಿಂದ ಹಾಲುಮತದವರು ಧನವಂತರಾದರು. ದನಗಳೇ ಅವರ ಧನ ಆದ್ದರಿಂದ ಅವರು ದನ(ಧನ)ಗರರು. ೧೩ನೇ ಶತಮಾನಕ್ಕಿಂತ ಮೊದಲೇ ದನ ಶಬ್ದ ರೂಪ ಹೊಂದಿತ್ತು. ಲ್ಯಾಟಿನ್ ಭಾಷೆಯಲ್ಲಿ ಸಹ PECUS ಎಂದರೆ ಪಶು, PECUVIA ಎಂದರೆ ಧನ. ಅಂದಿನ ದಿನಗಳಲ್ಲಿ ಪಶುಗಳೇ ಸಂಪತ್ತು.[೧೩೩] ಇದರಿಂದಾಗಿ ಹನುಮಂತಯ್ಯನವರು ಹೇಳಿರುವ ಪಶುಗಳ ಹೆಸರಿನಿಂದಲೇ ಪ್ರಪಂಚ ಎಂಬುದು ಸ್ಪಷ್ಟ.

ಪ್ರಾಚೀನ ಪಶುಪಾಲಕರ ಭಾಷೆ

ಕುರುಬರನ್ನು ಸಂಸ್ಕೃತ ಭಾಷೆಯಲ್ಲಿ 'ಪಾಲ'ರೆಂಬ ಹೆಸರಿನಲ್ಲಿ ಕರೆಯಲ್ಪಡುತ್ತಿದ್ದರು ಮತ್ತು ರಾಜಪುತ್ರರ ಸ್ಥಾನದಲ್ಲಿ ಕುರುಬರನ್ನು ಇಂದಿಗೂ ಪಾಲ, ಪಾಲಿ, ರಾಜಪಾಲ ಹಾಗೂ ಪಾಲಕ್ಷತ್ರಿಯರೆಂದು[೧೩೪] ಕರೆಯುವವರ ವಿವಿಧ ಹೆಸರುಗಳನ್ನು ಹೇಳಿದ್ದಾರೆ. ಈ ಭಾಷೆಯು ಜೈನ, ಬೌದ್ಧ ಧರ್ಮಗಳು ಅತ್ಯುಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಹೆಚ್ಚು ಬಳಕೆಯಲ್ಲಿತ್ತು ಎಂಬುದನ್ನು ತಿಳಿಸಿದ್ದಾರೆ. ಪ್ರಾಚೀನ ಕಾಲದಲ್ಲಿ ಧರ್ಮಗ್ರಂಥಗಳು, ತಾಮ್ರ ಪಟಗಳು, ಶಿಲಾಶಾಸನಗಳು ಮತ್ತು ಲೇಖನಗಳು ಪಾಲಿ ಭಾಷೆಯಲ್ಲಿದ್ದವು ಎನ್ನುವುದಕ್ಕೆ ಇತಿಹಾಸದ ಸಾಕ್ಷಿಗಳಿವೆ.

ಈ ಭಾಷೆಯೇ ಈಗಿನ ಎಲ್ಲಾ ಭಾಷೆಗಳಿಗೂ ಮಿಶ್ರವಾಗಿರುತ್ತದೆಂದು ಆಂಗ್ಲಭಾಷಾ ಶಾಸ್ತ್ರಜ್ಞರು, ಇತಿಹಾಸ ಸಂಶೋಧಕರು ಹೇಳಿದ್ದಾರೆ.

ಹಾಲು ಎಂದರೆ ಕರೆಯುವ ಇಂದಿನ ಶಬ್ದ ಅಂದು ಪಾಲು ಎಂಬ ಪದದಿಂದ ಗುರುತಿಸಲ್ಪಡುತ್ತಿತ್ತು. 'ಪ'ಕಾರಕ್ಕೆ 'ಹ'ಕಾರಾಗಮವಾದದ್ದು ೧೦-೧೧ನೆಯ ಶತಮಾನದ ಇತ್ತೀಚೆಗೆ. ಸಂಸ್ಕೃತದ 'ಪಯಸ್' ಶಬ್ದಕ್ಕೆ ಆರ್ಯ ಭಾಷೆಯಲ್ಲಿ ಜಾತಿವಾಚಕ ಶಬ್ದಗಳು ಇಲ್ಲದಿರುವುದರಿಂದ ಅದು 'ಪಾಲ' ಶಬ್ದದಿಂದಲೇ ರೂಪುಗೊಂಡಿರಬೇಕು ಎಂದು ಶಂಬಾ ಅವರು ಅಭಿಪ್ರಾಯ ಪಟ್ಟಿದ್ದಾರೆ.[೧೩೫]

ಚಂದ್ರಕಾಂತ ಬಿಜ್ಜರಗಿ ಅವರು ಅಂದು 'ರಸ' ಎಂಬ ಅರ್ಥದಲ್ಲಿ ಪಾಲ್ ಎಂಬ ಶಬ್ದದ ಬಳಕೆಯು ಸಾಮಾನ್ಯವಾಗಿತ್ತು. ಕ್ರಿ.ಶ. ೨ನೆಯ ಶತಮಾನದಲ್ಲಿ ರಚಿಸಿರುವ ಪ್ರಸಿದ್ಧ ಭೂಗೋಳ ಶಾಸ್ತ್ರಜ್ಞ ಟಾಲೆಮಿಯ ಗ್ರಂಥದಲ್ಲಿ ಬಿಜಾಪುರ ಜಿಲ್ಲೆಯ ತಾಲೂಕು ಕೇಂದ್ರವಾದ ಇಂದಿನ 'ಇಂಡಿ'ಯ ಹೆಸರಿನ ಉಲ್ಲೇಖವಿದೆ. 'ಭೀಮ ಮಹಾತ್ಮೆ' ಪುರಾಣದಲ್ಲಿ ಪಯಕ್ಷೇತ್ರ(ಪಾಲಕ್ಷೇತ್ರ) ಎಂದು ಉಲ್ಲೇಖಿಸಿದೆ.[೧೩೬] ಭೀಮಾ ನದಿಯ ದಡದಲ್ಲಿರುವ ಈ ಗ್ರಾಮ ಪಶುಪಾಲಕರಿಂದ ಕಿಕ್ಕಿರಿದು ತುಂಬಿತ್ತು. ಇವತ್ತಿಗೂ ಆ ಭಾಗದಲ್ಲಿ ಕುರುಬರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದನ್ನು ಗಮನಿಸಬಹುದೆಂದು ಹೇಳುತ್ತಾರೆ.

ಉತ್ತರ ಪ್ರದೇಶದಲ್ಲಿ ಅತ್ಯಂತ ಪ್ರಚಲಿತ ಪದವೆಂದರೆ 'ಪಾಲ್' ಅಥವಾ 'ಬಘೇಲ್' ಈ ಸಮುದಾಯದ ಅನೇಕರು ತಮ್ಮ ಹೆಸರಿಗೆ ಪಾಲ್, ರಾಜ್ಪಾಲ್, ಪಾಲಿ ಅಥವಾ ಬಘೇಲ್ ಎಂದು ಸೇರಿಸಿಕೊಳ್ಳುತ್ತಾರೆ. ಪಾಲ್ ಎಂದರೆ ಕುರಿ ಸಾಕುವವ ಅಥವಾ ದನ ಸಾಕುವವ ಎಂದಾಗಿದ್ದು, ಬಘೇಲ್ ಎಂಬುದು ಸಿಂಹಕ್ಕೆ ಸಮನಾದ ಪದವಾಗಿದೆ. ಸಿಂಹದಂತಹ ಶಕ್ತಿ ಉಳ್ಳವರಾಗಿದ್ದವರು ಪಾಲ್ ಎಂದಿದ್ದಾರೆ.[೧೩೭] ಪಾಲ್ ಎಂಬ ಪದವು ಮೇಷಪಾಲ್ ಎಂಬುದರ ಭೇದವಾಗಿದೆ.

ನೇಪಾಳಿ ಮತ್ತು ಸಿಕ್ಕಿಂ ಭಾಷೆಗಳಲ್ಲಿ ಪಾಲ್ ಎಂದರೆ ಉಣ್ಣೆ ಬಟ್ಟೆಗಳನ್ನು ಮಾಡಲು ಇರುವ ಒಂದು ಒಳ್ಳೆಯ ಆಡು ಎಂದರ್ಥ. ಪಾಲ್‌ನ ಮತ್ತೊಂದು ಅರ್ಥವೆಂದರೆ ಗುಂಪು, ರೇವಾರಿ ಎಂಬ ಹರ್ಯಾಣದ ಶಹಶೀಲ್‌ಗಳಲ್ಲಿ ಧನಗರ್‌ಪಾಲ್, ಅಹಿರ್‌ಪಾಲ್ ಇದ್ದರು.

ಪಾಲ ಎಂಬ ಪದವು ಬಂಗಾಳವನ್ನಾಳಿದ ಪಾಲ ವಂಶಸ್ಥರಿಂದ ಹಿಡಿದು ದಕ್ಷಿಣ ಭಾರತದ ಪಲ್ಲವರವರೆಗೆ ಪ್ರಚಲಿತದಲ್ಲಿತ್ತು ಎಂಬುದು ತಿಳಿದುಬಂದಿದೆ.

ಹನುಮಂತಯ್ಯನವರು ಪಾಲ ಅಥವಾ ಪಾಲಿ ಎಂಬ ಪದವು ಪ್ರಾಚೀನ ಕುರುಬರ ಭಾಷೆ ಎಂದು ಹೇಳಿದರೆ ಶಂಬಾ ಅವರು ಪಾಲು ಎಂಬುದು ಜಾತಿವಾಚಕ ಪದ ಎಂದಿದ್ದಾರೆ.

ಶ್ಯಾಂಸಿಂಗ್ ಶಶಿ ಅವರು ಪಾಲ ಎಂಬ ಪದ ರಾಜಮನೆತನಕ್ಕಿದ್ದ ಹೆಸರು ಎಂದು ಹೇಳಿದ್ದಾರೆ. ಭಾರತದ ಗೆಝೆಟಿಯರ್ ಇದೇ ಅರ್ಥವನ್ನು ಹೇಳುತ್ತದೆ.

ಆರ್ಯರ ಪಂಗಡಗಳು

ವೇದಕಾಲದ ಆರ್ಯರಲ್ಲಿ ಆರ್ಯ ಮತ್ತು ಅನಾರ್ಯರೆಂಬ ಎರಡು ದೊಡ್ಡ ಪಂಗಡಗಳಿದ್ದವು. ಇವರಲ್ಲಿ ಒಂದು ಗುಂಪಿನವರು ಏಶಿಯಾ ಖಂಡದ ಪಶ್ಚಿಮ ಭಾಗದಲ್ಲಿ ಎಂದರೆ ಇರಾಣ ದೇಶದಲ್ಲಿ ಕಂಡುಬಂದರೆ, ಇನ್ನೊಂದು ಗುಂಪಿನವರು ಪಂಜಾಬ ಮೊದಲಾದ ಭರತಖಂಡದ ಉತ್ತರ ಭಾಗದಲ್ಲಿಯೂ ವಾಸವಾಗಿದ್ದರು ಎಂಬುದು ತಿಳಿದುಬಂದಿದೆ.

ಭಾರತದ ಗ್ಯಾಝೆಟಿಯರ್‌ನಲ್ಲಿ 'ಆರ್ಯ ಮತ್ತು ಅನಾರ್ಯ ಬುಡಕಟ್ಟು ಒಂದೆಡೆ ನೆಲೆ ಹೂಡಿ, ಜೊತೆಗೆ ಬೆರೆಯುತ್ತಿದ್ದಂತೆ ಏಕಜಾತಿ ಪರಂಪರೆಯು ದೇವ ಹಾಗೂ ಅಸುರ ಅಥವಾ ಆರ್ಯ ಹಾಗೂ ದಾಸ(ದಣಿ–ಗುಲಾಮ) ಈ ದ್ವಿಜಾತಿ ಸಮಾಜ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿತು. ಇದು ಮೂಲ ವಿಶ್‌ನ ಒಡೆಯುವಿಕೆಯಿಂದ ಆದುದಲ್ಲ, ಇದು ಆದುದು ಹಿಂದೆ ಹಗೆಗಳಾಗಿದ್ದ ಮೂಲವಾಸಿಗಳನ್ನು ಆರ್ಯ ಸಮಾಜದಲ್ಲಿ ಭೃತಕರು ಮತ್ತು ಕೂಲಿಗಳಾಗಿ ಸೇರಿಕೊಂಡುದರ ಪರಿಣಾಮವಾಗಿ. ಋಗ್ವೇದವು ಹೆಸರಿಸುವಂತೆ ಬಿಳಿಚರ್ಮದವರು ಮತ್ತು ಕರಿಚರ್ಮದವರು, ಮತ್ತು ಧಣಿಗಳು ಮತ್ತು ದಾಸರ ಎರಡು ಜಾತಿ ಅಥವಾ ವರ್ಣಗಳು ಆದವು ಎಂದು ಹೇಳಿದೆ.[೧೩೮]

ಹನುಮಂತಯ್ಯನವರು ಈ ಎರಡು ಪಂಗಡಗಳು ಪೂಜಿಸುವ ವಿಧಾನ ಕುರಿತು ಈ ಕೆಳಗಿನಂತೆ ಪರಿಚಯಿಸಿದ್ದಾರೆ.

'ಆರ್ಯರು' ಮತ್ತು 'ಅನಾರ್ಯರು' 'ಪಾರ್ವತಿ ಮತ್ತು ಪರಮೇಶ್ವರ'ರನ್ನು ಪೂಜಿಸುವ ವಿಧಾನ ಕುರಿತು "ಶಿವನು ಪ್ರಾಣಿಗಳನ್ನು ಸಂಹಾರ ಮಾಡಿ, ಮತ್ತೆ ಅವುಗಳನ್ನು ಸೃಷ್ಟಿಸುವ ಕಾರಣ ಅವನನ್ನು ಮಹಾದೇವ(ದೊಡ್ಡದೇವ)ನೆಂದು ಹೆಸರಿಟ್ಟು, ಅವನ ಮೂರ್ತಿಯ ಬಣ್ಣ ಕೆಂಪು, ಕೈಯಲ್ಲಿ ತ್ರಿಶೂಲ, ಗಹನವಾದ ಧ್ಯಾನದ ಮುಖ ಲಕ್ಷಣ. ತಲೆಯ ಮೇಲೆ ಸಮೃದ್ಧಿಯಾಗಿ ಧಾನ್ಯ ಬೆಳೆಯಲಿಕ್ಕೆ ಆಕರವಾದ ಗಂಗೆ, ಮುಂಭಾಗದಲ್ಲಿ ಆರ್ಯ ಜನರ ಒಕ್ಕಲುತನಕ್ಕೆ ಆಧಾರವಾದ ನಂದಿ(ಎತ್ತು) ಈ ಪ್ರಕಾರದ ಮೂರ್ತಿಯನ್ನು ಕಲ್ಪಿಸಿಕೊಂಡು ಪೂಜಿಸುತ್ತಿದ್ದರು"[೧೩೯] ಎಂದು ತಿಳಿಸಿದ್ದಾರೆ.

ಅನಾರ್ಯರು "ಈ ಮೂರ್ತಿಯನ್ನು ಸಹಸ್ರನಾಮಗಳಲ್ಲಿ ಹೆಸರಿಸಿ, ಕೊರಳಲ್ಲಿ ಈ ಮೂರ್ತಿಯ ರುಂಡಮಾಲೆ, ಕೈಗಳಲ್ಲಿ ನರಕಪಾಲ ಐದು ಮುಖಗಳು, ಸ್ಮಶಾನದಲ್ಲಿ ವಾಸ, ಭಸ್ಮಲೇಪನ,

ಗಜಚರ್ಮಾಂಬರ ಈ ಪ್ರಕಾರ ಕಲ್ಪಿಸಿಕೊಂಡು ಪೂಜಿಸುತ್ತಿದ್ದರಂತೆ." ಇದು ಪರಮೇಶ್ವರನ ಪೂಜಾ ವಿಧಾನವಾದರೆ,

ಪಾರ್ವತಿಯನ್ನು ಸಹ ಎರಡು ರೂಪಗಳನ್ನು ಕಲ್ಪಿಸಿಕೊಂಡು ಪೂಜಿಸುತ್ತಿದ್ದರಂತೆ. ಆರ್ಯರು "ಪಾರ್ವತಿಗೆ ಉಮೆ(ಪ್ರಕಾಶಮಾನಳು) ಎಂಬ ಹೆಸರನ್ನಿಟ್ಟು ರಕ್ತ ಸುರಿಸುವಂಥ ಅತಿ ಭಯಂಕರವಾದ ಮುಖ, ಸರ್ಪಗಳ ಕಿರೀಟ, ಮನುಷ್ಯರ ತಲೆಬುರುಡೆಗಳ ಮಾಲೆ ಸಿಂಹವಾಹನ, ಇತ್ಯಾದಿ ಭಯಂಕರ ರೂಪಗಳನ್ನು ಕಲ್ಪಿಸಿಕೊಂಡು ಆಕೆಗೆ(ದುರ್ಗಿ) ಹೆದರಿಸುವವಳು ಎಂಬ ಹೆಸರನ್ನಿಟ್ಟು ಪಶುಬಲಿ, ನರಬಲಿ ಮುಂತಾದ ಮಾಂಸಾಹಾರಾದಿಗಳಿಂದ ಪೂಜಿಸುತ್ತಿದ್ದರು"[೧೪೦] ಎಂಬುದನ್ನು ಹೇಳಿದ್ದಾರೆ.

ಇತಿಹಾಸಜ್ಞರು ಹೇಳಿರುವುದನ್ನು ಹನುಮಂತಯ್ಯನವರು ಈ ರೀತಿ ವ್ಯಕ್ತಪಡಿಸಿದ್ದಾರೆ "ಅಗ್ನಿದೇವೋ ದ್ವಿ ಜಾತೀನಾಂ" ಅಂದರೆ ಆರ್ಯರು ಲಿಂಗ, ಮಾತೃದೇವತೆ, ಪಶು ಮತ್ತು ವೃಕ್ಷ ಇವುಗಳನ್ನು ಪೂಜಿಸುತ್ತಿರಲಿಲ್ಲ ಎಂದು ಹೇಳಲಾಗದು. ವೇದದಲ್ಲಿ ಹೇಳಲ್ಪಟ್ಟ 'ಶಿಶ್ನ ದೇವರು ಕೆಲವು ಆರ್ಯಪಂಗಡಗಳಿಗೆ ವಿರೋಧವಾಗಿದ್ದ ಮಾತ್ರಕ್ಕೆ ಅನಾರ್ಯರೆಂದು ಹೇಳುವುದು ಸಹಜ."[೧೪೧]

ಇದೇ ಅಭಿಪ್ರಾಯವನ್ನು ಆಂಗ್ಲ ಲೇಖಕರು ಹೇಳಿರುವ ಅಭಿಪ್ರಾಯ ಹೀಗಿದೆ. "Our country is a very ancient once, different people have come into it at different times, from different parts of the world.

They all speak different languages had different degrees of civilizations.

Most of them settled themselves here in these for distant ages and inter married.

We are their present discendants, cannot-exactly say to what races we belong."[೧೪೨]

ಆರ್ಯರಿಗೆ ದೇವರೊಬ್ಬನೇ, ಜಾತಿ ಒಂದೇ

ಪ್ರಾಚೀನ ಕುರುಬರಲ್ಲಿ ದೇವರು ಒಬ್ಬನೇ ಮತ್ತು ಜಾತಿ ಸಹ ಒಂದೇ ಇತ್ತು ಎಂದು ತಿಳಿಸಿದ್ದಾರೆ.

ಏಕೋವಶೀ ಸರ್ವಭೂತಾಂತರಾತ್ಮಾ ।
ಏಕಂ ರೂಪಂ ಬಹುಧಾಯಃ ಕರೋತಿ ।
ತಮಾತ್ಮಸ್ಥಂ ಯೋನುಪಶ್ಯಂತಿಧೀರಾಃ
ತೇಷಾಂ, ಸುಖಂ, ಶಾಶ್ವತಂ ನೇತರೇಷಾಂ ।

ಅಂದರೆ ಭಗವಂತನೊಬ್ಬನೇ ಸಮಸ್ತ ಜಗತ್ತಿನ ಒಡೆಯನು. ಸಮಸ್ತಭೂತಗಳಲ್ಲಿಯೂ(ಆತ್ಮ) ವ್ಯಾಪಿಸಿರತಕ್ಕವನು. ಸರ್ವದಾ ನೀಲಾಕಾರನು, ಸಾಕಾರನಲ್ಲ, ತನ್ನ ಏಕರೂಪವು ವಿಶ್ವದಲ್ಲೆಲ್ಲಾ ನಾನಾ ಪ್ರಕಾರದಲ್ಲಿ ಪ್ರಕಟಗೊಳಿಸುವುದು. ಅಂತಹ ಪರಮಾತ್ಮನನ್ನು ಯಾವ ಧೀ(ಬುದ್ಧಿ)ಮಂತರು ತಮ್ಮ ಆತ್ಮದಲ್ಲಿಯೇ ಇರುತ್ತಾನೆಂದು ಅರಿಯುತ್ತಾರೋ ಅವರು ಶಾಶ್ವತವಾದ ಸುಖ-ಸಂತೋಷವನ್ನು ಹೊಂದುವರು. ಆತನನ್ನು ಬಾಹ್ಯದಲ್ಲಿ ನೋಡಲು ಮಾತ್ರ ಯಾರಿಗೂ ಸುಲಭವಲ್ಲ, ಶಕ್ಯವೂ ಅಲ್ಲ ಎಂದು ವಿ.ಆರ್.ಹನುಮಂತಯ್ಯನವರು ಪ್ರಸ್ತುತಪಡಿಸಿದ್ದಾರೆ.

ಇವರ ಪೂಜೆ ಅಗ್ನಿ. ಆರ್ಯರು ಚಳಿದೇಶದಲ್ಲಿ ವಾಸಿಸುತ್ತಿದ್ದುದರಿಂದ ಅಗ್ನಿಯನ್ನು ಮನೆಯಲ್ಲಿ ಸದಾ ಕಾಯ್ದಿಟ್ಟುಕೊಳ್ಳುತ್ತಿದ್ದರೆಂಬುದು ಇತಿಹಾಸಜ್ಞರ ಅಭಿಪ್ರಾಯ.

ಆರ್ಯರ ಪ್ರಾಚೀನ ಗ್ರಂಥವಾದ ಋಗ್ವೇದದಲ್ಲಿ ಬ್ರಾಹ್ಮಣಾದಿ ನಾಲ್ಕು ವರ್ಣಗಳ ಹೆಸರೇ ಕಂಡುಬರುವುದಿಲ್ಲ. ಆದುದರಿಂದ ಬ್ರಾಹ್ಮಣರು ಶ್ರೇಷ್ಠರೆಂದು, ಶೂದ್ರರು ನಿಕೃಷ್ಟರೆಂದು ಆ ಗ್ರಂಥದಲ್ಲೆಲ್ಲಿಯೂ ಉಲ್ಲೇಖಿಸಿರುವುದಿಲ್ಲವೆಂದು ಪಂಡಿತ ಮ್ಯಾಕ್ಸ್ ಮುಲ್ಲರ್ ಮಹಾಶಯರು ಈ ರೀತಿ ಹೇಳಿದ್ದಾರೆ. ಋಗ್ವೇದದ ನಂತರ ಯಜುರ್ವೇದದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳನ್ನು ಹೇಳಿದೆ. ಇವು ವೃತ್ತಿಸೂಚಕ ಹೆಸರುಗಳೇ ಹೊರತು ಜಾತಿಸೂಚಕವಾದ ಹೆಸರುಗಳಲ್ಲ. ಪ್ರಾಚೀನ ಕಾಲದಲ್ಲಿ ಯಾವ ವರ್ಗವೂ ಅಸ್ಪೃಶ್ಯವಾಗಿರಲಿಲ್ಲ. ಬ್ರಾಹ್ಮಣಾದಿ ನಾಲ್ಕು ವರ್ಣಗಳಲ್ಲಿಯೂ ಶರೀರ ಸಂಬಂಧವಾಗುತ್ತಿದ್ದಿತೆಂಬುದಕ್ಕೆ ರಾಜರ, ಋಷಿಗಳ ಚರಿತ್ರೆಗಳೇ ಸಾಕ್ಷಿಯಾಗಿವೆ. ಈಗಿನ ಸಹಸ್ರಾರು ಜಾತಿ, ಮತ, ಪಂಥ, ಪಂಗಡಗಳೆಲ್ಲವೂ ಅವರವರ ಗುಣ ಮತ್ತು ಕಸುಬುಗಳ ಮೇಲಿಂದ ಉಂಟಾಗಿರುತ್ತವೆಯೇ ಹೊರತು ಜನ್ಮದಿಂದಲ್ಲವೆಂದರಿತು ಸರ್ವರೂ ಸೌಹಾರ್ದ ಭಾವದಿಂದ ವರ್ತಿಸುವುದು ಪ್ರಾಚೀನ ಕಾಲಕ್ಕೆ ಶ್ರೇಯಸ್ಸು. ಇದರಿಂದ ಕುರುಬರಿಗೆ(ಆರ್ಯ) ದೇವರು ಒಬ್ಬನೇ ಮತ್ತು ಜಾತಿ ಸಹ ಒಂದೇ ಇತ್ತು ಎಂದು ಸ್ಪಷ್ಟಪಡಿಸಿದ್ದಾರೆ.

ಮೇಕೆಯ ಹಾಲುಸೇವನೆ ಕುರಿತು ವೈದ್ಯಶಾಸ್ತ್ರಜ್ಞರು ಪ್ರಶಂಸಿಸಿರುವುದನ್ನು ಹನುಮಂತಯ್ಯನವರು ಈ ಕೃತಿಯಲ್ಲಿ ವ್ಯಕ್ತಪಡಿಸಿರುವುದು ಕಂಡುಬಂದಿದೆ. ಮೇಕೆಗಳು ಭೂಮಿಯ ಮೇಲೆ ದೊರೆಯುವ ಅತ್ಯಮೂಲ್ಯವಾದ ತೃಣಪರ್ಣಾದಿಗಳನ್ನು ತಿನ್ನುವುದಷ್ಟೇ ಅಲ್ಲದೇ ಎಂತಹ ಎತ್ತರವಾದ ಗುಡ್ಡ-ಬೆಟ್ಟಗಳ ಇಕ್ಕಟ್ಟಾದ ಹಾಗೂ ಅತಿ ಕಡುದಾದ ಕಣಿವೆಯ ಸ್ಥಳಗಳಿಗಾದರೂ ಅನಾಯಾಸವಾಗಿ ಏರಿಹೋಗಿ ಅಲ್ಲಿ ದೊರೆಯುವ ಅತ್ಯಮೋಘವಾದ ದಿವ್ಯವನಸ್ಪತಿಗಳನ್ನು ತಿಂದು ಬರುತ್ತವೆ. ಇದರಿಂದ ಮೇಕೆ ಹಾಲು ತಾಯಿ ಮೊಲೆಯ ಹಾಲಿಗಿಂತ ಮಕ್ಕಳಿಗೆ ಸಂಜೀವದಂತೆ ಶ್ರೇಷ್ಠ ವಾದುದೆಂದು ಹೇಳಿದ್ದಾರೆ. ಈ ಹಾಲನ್ನು ಕುಡಿದು ಬೆಳೆದ ಮಕ್ಕಳು ತುಂಬಾ ಲವಲವಿಕೆಯಿಂದಿರುವರು.

ಡಾ. ರಾಬರ್ಟ್ ಮೆಕ್ಕರ್ಸನ್ ಎಂಬ ಆಂಗ್ಲ ಪಂಡಿತರು ಮೇಕೆಯ ಹಾಲು ಮತ್ತು ಅದರ ಮಾಂಸ ಸೇವನೆಯಿಂದಾಗುವ ಪ್ರಯೋಜನ ಕುರಿತು "ಅತ್ಯಂತ ಭಯಂಕರವಾದ ಕ್ಷಯರೋಗದ ಜಂತು(ಕ್ರಿಮಿ)ವನ್ನು ನಾಶಪಡಿಸುವ ಅಲೌಕಿಕ ಶಕ್ತಿಯು ಮೇಕೆಯ ಹಾಲಿನಲ್ಲಿರುತ್ತದೆಂದು"[೧೪೩] ಹೇಳಿದ್ದಾರೆ.

ಭಾರತೀಯ ವೈದ್ಯರಾದ ಶ್ರೀ ಸುರೇಶ್ವರರೂ ಮತ್ತು ಶ್ರೀ ಭಾವಮಿತ್ರ ಮಹಾಶಯರು "ಮೇಕೆಯ ಮಾಂಸವನ್ನು ತಿನ್ನಬೇಕು. ಅದರ ಹಾಲನ್ನು ಕುಡಿಯಬೇಕು. ಶುಂಠಿ ಮಿಶ್ರಣವಾದ ಮೇಕೆಯ ತುಪ್ಪವನ್ನು ತಿನ್ನಬೇಕು. ಮೇಕೆಯ ಮಗ್ಗುಲಲ್ಲಿ ಮಲಗುವುದರಿಂದ ಅದರ ಗಾಳಿ ಸೋಂಕಿ ಕ್ಷಯರೋಗದ ಕ್ರಿಮಿಗಳು ನಾಶವಾಗುವುವು"[೧೪೪] ಎಂದು ಹೇಳಿದ್ದಾರೆ.

ಮೇಕೆಯು ತಿನ್ನದ ತೃಣ, ಪರ್ಣಗಳೇ ಇಲ್ಲ(ಸೊಪ್ಪಿಲ್ಲ). ಅಂದರೆ ಇದು ಸುಮಾರು ಐದುನೂರು ಜಾತಿಯ ಸೊಪ್ಪು ಮತ್ತು ಹುಲ್ಲುಗಳನ್ನು ತಿನ್ನುತ್ತವೆ. ಆಕಳ ಹಾಲಿಗಿಂತ ಆಡಿನ (ಮೇಕೆ) ಹಾಲು ಸುಲಭವಾಗಿ ಜೀರ್ಣವಾಗುವುದು. ಆಡಿನ ಹಾಲಿನಲ್ಲಿ ಆಕಳ ಹಾಲು ಮತ್ತು ತಾಯಿ ಹಾಲುಗಳಿಗಿಂತಲೂ ಹೆಚ್ಚು ಪೌಷ್ಟಿಕ ಪದಾರ್ಥಗಳಿರುತ್ತವೆ.

ನೀರು ೮೬ ೧/೨, ಕೊಬ್ಬು, ಸಕ್ಕರೆ ೪ ೧/೨, ಉಪ್ಪು ೧, ಪ್ರೋಟಿನ್ ೪ ಭಾಗಗಳಿರುತ್ತವೆಂದು ವೈದ್ಯಶಾಸ್ತ್ರರು ಹೇಳಿರುವರು. ಗಾಂಧೀಜಿಯವರು ತಮ್ಮ ಅವಸಾನ ಕಾಲದವರೆಗೂ ಮೇಕೆಯ ಹಾಲನ್ನೇ ಸೇವಿಸುತ್ತಾ ನಿರೋಗಿಗಳಾಗಿದ್ದರು ಎಂಬುದು ತಿಳಿದು ಬಂದ ಸಂಗತಿ.

ಮೇಕೆಯ ಹಾಲಿನ ಸೇವನೆಯಿಂದ ಕ್ಷಯರೋಗದ ಜಂತುಗಳು ನಾಶವಾಗುತ್ತವೆ. ಆ ಕ್ಷಯ ರೋಗಕ್ಕೆ ಸಂಬಂಧಪಟ್ಟ ಜ್ವರ, ಕೆಮ್ಮು, ಕಫ, ಉಬ್ಬಸ ಮತ್ತು ಇತರ ವ್ಯಾಧಿಗಳನ್ನು ಮಾಯ ಮಾಡುವ ಶಕ್ತಿ ಈ ಹಾಲಿನಲ್ಲಿರುತ್ತದೆ ಎಂದು ಮೇಕೆಯ ಹಾಲಿನಿಂದ ಆಗುವ ಪ್ರಯೋಜನ ತಿಳಿಸಿದ್ದಾರೆ.

ಆರ್ಯ(ಕುರುಬ)ರು ಆಕಳ ಹಾಲನ್ನು ಸೇವಿಸುತ್ತಿದ್ದುದರಿಂದ ಅವರ ಶರೀರವು ಪುಷ್ಟಿಕರವೂ, ಕುರಿಯ ಹಾಲನ್ನು ಸೇವಿಸುತ್ತಿದ್ದುದರಿಂದ ವೀರ್ಯವೃದ್ಧಿಯೂ, ಮೇಕೆಯ(ಆಡಿನ) ಹಾಲನ್ನು ಕುಡಿಯುತ್ತಿದ್ದುದರಿಂದ ನಿರೋಗಿಗಳಾಗಿ ತುಂಬಾ ತೇಜಸ್ವಿಗಳಾಗಿಯೂ, ಶರೀರವು ಸ್ಥೂಲವಾಗಿಲ್ಲದೇ ಹಗುರವಾಗಿ ಲವಲವಿಕೆವುಳ್ಳವರಾಗಿಯೂ ಇರುತ್ತಿದ್ದರು. ಹೀಗೆ ಮೇಕೆ, ಆಕಳು, ಕುರಿಯ ಹಾಲು ಎಷ್ಟು ಪ್ರಯೋಜನ ಎಂಬುದು ತಿಳಿಯಬಹುದಾಗಿದೆ. ಮೇಕೆ-ಕುರಿ ಹಾಲಿನ ಪ್ರಯೋಜನ ತಿಳಿಸುವುದರ ಜೊತೆಗೆ ಅವುಗಳನ್ನು ಕಾಯುವ ಪಾಲಕನನ್ನು ಕುರಿತು ಈ ರೀತಿ ವರ್ಣಿಸಿದ್ದಾರೆ.

ಪ್ರಾಚೀನ ಕಾಲದಲ್ಲಿ ಪ್ರಜೆಗಳು ತಮಗೆ ರಾಜನಾಗತಕ್ಕವನು ತೇಜೋವಂತನು, ವೀರ್ಯವಂತನೂ ಆಗಬೇಕಾಗಿದ್ದುದರಿಂದ ಅವರು ಪಶುಪಾಲಕರ ಮಕ್ಕಳನ್ನೇ ತಮ್ಮ ರಾಜನನ್ನಾಗಿ ಆರಿಸಿಕೊಳ್ಳುತ್ತಿದ್ದರೆಂದು ಪೂರ್ವ ಇತಿಹಾಸಗಳಿಂದ ತಿಳಿದುಬಂದಿದೆ. ಹಾಗೆಯೇ "The shepherds(ಕುರುಬರು) have in past ages given rulers to the people.

It is not impossible however that the earliest kings of many dynasties of the south rose from this shepherd caste"[೧೪೫] ಎಂದು ಮೈಸೂರು ಗೆಜೆಟಿಯರ್‌ನಲ್ಲಿ ಇರುವುದನ್ನು ಉಲ್ಲೇಖಿಸಿದ್ದಾರೆ.

ಅಂದರೆ "ಯಾರು ತಮ್ಮ ಕುರಿಗಳ ಮಂದೆಗಳನ್ನು ಮನೋಹರವಾದ ಹುಲ್ಲುಗಾವಲುಗಳಲ್ಲಿ ಮೇಯಿಸುತ್ತಾ ಹಾಗೆಯೇ ನೀರನ್ನು ಕುಡಿಸುತ್ತಾ ಆ ಕುರಿಗಳ ಹತ್ತಿರ ಇರುವ ವಿಶಾಲವಾದ ಮರದ ನೆರಳಿನಲ್ಲಿ ಕುಳಿತು ಪಿಳ್ಳಂಗೋವಿಯನ್ನು ನುಡಿಸಿಕೊಂಡು ತಮ್ಮ ಪವಿತ್ರವಾದ ಸ್ವತಂತ್ರ ಪಶುಪಾಲನ ವೃತ್ತಿಯಲ್ಲಿ ನಿಮಗ್ನರಾಗಿರುವರೋ ಅವರೇ ಕುರುಬರು."

೨. The shepherds who wear fine cfloths and have ample time to play upon musical instruments and make love to attractive village maidens, their sheep seem to cfons earn them more than anything else.[೧೪೬]

ಕುರುಬ ಕುಮಾರನು ಅಂದವಾದ ಬಟ್ಟೆಗಳನ್ನು ಧರಿಸುತ್ತಾರೆ. ಅವರಿಗೆ ಹುಲ್ಲುಗಾವಲುಗಳಲ್ಲಿ ವಿನೋದವಾದ ಸಂಗೀತ(ಪಿಳ್ಳಂಗೋವಿ) ಮುಂತಾದ ವಾದ್ಯಗಳನ್ನು ನುಡಿಸುವುದಕ್ಕೆ ಬೇಕಾದಷ್ಟು ಕಾಲಾವಕಾಶವಿರುತ್ತದೆ. ಇವರ ಅಂದದ ಚಂದದ ಉಡುಪಿಗೂ ಮತ್ತು ಇವರು ನುಡಿಸುವ ವೇಣುವಾದದ ಇಂಪಿಗೂ ಹಳ್ಳಿಯ ಯುವತಿಯರು ಮುಗ್ಧರಾಗುತ್ತಾರೆ. ಅವರಿಗೆ ತಮ್ಮ ಮಂದೆಗಳ ಮೇಲಿರುವಷ್ಟು ಮಮತೆಯು ಬೇರಾವ ವಸ್ತುಗಳ ಮೇಲೂ ಇರುವುದಿಲ್ಲ.

ಕುರುಬರ ಹುಡುಗನು ಮತ್ತು ರಾಜನ ನಡುವೆ ನಡೆದ ಸಂಭಾಷಣೆಯ ಕತೆಯನ್ನು ಕುರಿತು ಈ ರೀತಿ ವ್ಯಕ್ತಪಡಿಸಿದ್ದಾರೆ. "ಕುರುಬರ ಹುಡುಗನು ಒಂದು ಅರಣ್ಯ ಮಧ್ಯದಲ್ಲಿನ ಬೆಟ್ಟದ ಕಣಿವೆಯಲ್ಲಿ ತನ್ನ ಕುರಿಗಳನ್ನು ಮೇಯಿಸುತ್ತಾ ಸಂತೋಷಭರದಲ್ಲಿ ಪದಗಳನ್ನು ಹಾಡಿಕೊಂಡು ಕುಣಿದಾಡುತ್ತಿದ್ದನು. ಸಮೀಪದಲ್ಲಿಯೇ ಆ ದೇಶದ ರಾಜನು ಬೇಟೆಯಾಡುತ್ತಿದ್ದನು. ಆ ಕುರುಬ ಬಾಲಕನು ಇಷ್ಟೊಂದು ಆನಂದದಿಂದ ಹಾಡಿಕೊಂಡು ಕುಣಿದಾಡುತ್ತಿರುವ ದೃಶ್ಯವನ್ನು ನೋಡಿ ಅಚ್ಚರಿಗೊಂಡು ಹರುಷಿತನಾಗಿ ಆ ಹುಡುಗನನ್ನು ತನ್ನ ಸಮೀಪಕ್ಕೆ ಕರೆದು ಓ ನನ್ನ ಮಗುವೇ ನೀನು ಈ ಅರಣ್ಯ ಮಧ್ಯದಲ್ಲಿ ಇಷ್ಟೊಂದು ಆನಂದದಿಂದ ಹಾಡುತ್ತಾ ಕುಣಿದಾಡುತ್ತಿರುವುದಾದರೂ

ಯಾವ ಬಲದಿಂದ ಎಂದು ಪ್ರಶ್ನೆ ಮಾಡಿದನು. ಈತನು ರಾಜನೆಂಬುದನ್ನು ಆ ಕುರುಬ ಕುಮಾರನರಿಯದೇ ಅದೇಕೆ ನಾನು ಸಂತೋಷವಾಗಿರಬಾರದು? ನಮ್ಮ ರಾಜನು ನನಗಿಂತ ಹೆಚ್ಚಾದ ಐಶ್ವರ್ಯವಂತನೇನೂ ಅಲ್ಲವಲ್ಲ ಎಂದುತ್ತರವಿತ್ತನು.

ಆ ಮಾತನ್ನಾಲಿಸಿ ರಾಜನು ಚಕಿತನಾಗಿ ಅದು ಹೇಗೆ? ನಿನ್ನ ಐಶ್ವರ್ಯ ವಿಷಯವನ್ನೆಲ್ಲಾ ತಿಳಿಸು ನನಗೆ ಎಂದನು.

ಅದಕ್ಕೆ ಕುರುಬ ಬಾಲಕನು "ನಿರ್ಮಲವಾದ ನೀಲಮೇಘದಲ್ಲಿ ಸೂರ್ಯನ ಪ್ರಕಾಶವು ಹೇಗೆ ನಮ್ಮ ಮಹಾರಾಜನ ಮೇಲೆ ಬೀಳುತ್ತಿದೆಯೋ ಆ ತದ್ವತ್ತು ನನ್ನ ಮೇಲೂ ಪ್ರಕಾಶಿಸುತ್ತದೆ. ಈ ಪರ್ವತ ಕಣಿವೆಯಲ್ಲಿರುವ ವೃಕ್ಷ ಲತಾದಿಗಳು ಹೇಗೆ ಹಸಿರಾಗಿ ವಿವಿಧ ಬಣ್ಣದ ಪುಷ್ಪಗಳಿಂದ ಕೂಡಿ ಘಮಘಮಿಸುವ ಸುವಾಸನೆ(ಸೌರಭ್ಯ)ಯಿಂದ ನನ್ನ ಕಣ್ಮನಗಳನ್ನು ಥಣಿಸಿ ಆನಂದಗೊಳಿಸುತ್ತವೆ. ನಾನು ನನ್ನ ಅನ್ನವಸ್ತ್ರಾದಿಗಳಿಗಾಗಿ ನನ್ನೆರಡು ಕೈಗಳನ್ನಾಗಲಿ ಪಾದಗಳನ್ನಾಗಲಿ ಮಾರಿಕೊಂಡಿರುವುದಿಲ್ಲ. ನನ್ನ ಜೀವನೋಪಾಯಕ್ಕೆ ಬೇಕಾದುದೆಲ್ಲ ನನ್ನಲ್ಲಿಯೇ ಇದೆ. ನನ್ನ ವೃತ್ತಿಯಿಂದಲೇ ನನಗೆಲ್ಲಾ ಸುಖ ಸೌಕರ್ಯಗಳೂ ಲಭಿಸಿರುತ್ತವೆ. ಹೊದೆದುಕೊಳ್ಳುವುದಕ್ಕೆ ಉಣ್ಣೆಯ ನೂಲಿನಿಂದ ನೆಯಿದುಕೊಂಡ ಶಾಖವಾದ ತುಪ್ಪಟ(ಉಣ್ಣೆ)ವನ್ನು ವರುಷಕ್ಕೊಮ್ಮೆ ಮಾರಿಕೊಳ್ಳುವುದರಿಂದ ಕೈತುಂಬ ಹಣ ಬರುತ್ತದೆ. ನಮ್ಮ ದನ, ಕುರಿ, ಮೇಕೆಗಳ ಹಾಲು, ಮೊಸರು, ಬೆಣ್ಣೆ, ತುಪ್ಪ ಇವುಗಳ ಸೇವನೆಯಿಂದ ನನಗೆ ನಿಶ್ಚಿಂತೆಯಾದ ಪೌಷ್ಟಿಕ ಆಹಾರ ಸಿಗುತ್ತದೆ ಎಂದು ಇದಕ್ಕಿಂತಲೂ ಹೆಚ್ಚಾಗಿ ನಮ್ಮ ರಾಜನಿಗಿರುವುದೇನೆಂಬುದನ್ನು ಹೇಳಬಲ್ಲೆಯಾ? ಎಂದು ಉತ್ತರಿಸಿದನು.

ಈ ಮಾತುಗಳನ್ನು ಆಲಿಸಿದ ರಾಜನು ಸಂತೋಷಗೊಂಡು ನೀನು ಹೇಳಿದುದೆಲ್ಲವೂ ಸಹಜವೂ ಸತ್ಯವೂ ಆಗಿದೆ. ನಿನ್ನ ಮಾತಿಗೆ ನಾನು ಮನಃಸಾಕ್ಷಿಯಾಗಿ ಒಪ್ಪಿದ್ದೇನೆ. ದೇವರು ಇದರಂತೆಯೇ ನಿನ್ನನ್ನು ಸದಾ ಸುಖ-ಸಂತೋಷದಿಂದ ಕಾಪಾಡುತ್ತಿರಲೆಂದು ನಿನ್ನ ರಾಜನಾದ ನಾನು ಹಾರೈಸುತ್ತೇನೆ" ಎಂದು ಆ ಬಾಲಕನ ಮೈದಡವಿ ಹೋದನು.

ಈ ರೀತಿಯ ತುಂಬಾ ಸ್ವಾರಸ್ಯವೂ ಮತ್ತು ಬೋಧಪ್ರದವೂ ಇರುವ ಕಥೆಗಳನ್ನು ಪರಿಚಯಿಸಿದ್ದಾರೆ.

ಪಶುಪಾಲಕರ ಪವಿತ್ರ ವೃತ್ತಿಯನ್ನು ಕುರಿತು ಸರ್ವಜ್ಞ ಕವಿಯು ವರ್ಣಿಸಿರುವ ವಚನವೊಂದನ್ನು ಉಲ್ಲೇಖಿಸುತ್ತಾರೆ.

> ತುರುಕರಿಲ್ಲದ ಊರು ನರಕಭಾಜನವಕ್ಕು
> ತುರುಕರಿದ್ದೂರು ಉಣಲುಂಟು, ಉಡಲುಂಟು
> ತುರುಕರೆ ದೈವಲೋಕಕ್ಕೆ ಸರ್ವಜ್ಞ"[೧೪]

ತುರುಕರು ಎಂದರೆ ಹಸು ಮತ್ತು ಅದರ ಕರು ಎಂದರ್ಥ. ಇವುಗಳ ಪಾಲಕರಿಗೆ ದನಗಾರ, ತುರುಗಾರ, ಕುರಿಗಾರ ಎಂಬ ಹೆಸರುಗಳಿರುವುದನ್ನು ಹನುಮಂತಯ್ಯನವರು ಪರಿಚಯಿಸಿದ್ದಾರೆ.

ದಕ್ಷಿಣಕನ್ನಡ ಜಿಲ್ಲೆಗೆ ಆರಂಭದಲ್ಲಿದ್ದ ತುಳುನಾಡು ಎಂಬ ಹೆಸರಿನ ಔಚಿತ್ಯದ ಬಗ್ಗೆ ವಿವೇಚಿಸಿರುವ ಪಿ.ಗುರುರಾಜ ಭಟ್ಟರು "ತುರುವರ ನಾಡು ತುಳುವಾಯ್ತು ಈ ತುರುಕಾರರು ಗೋವಳಿಗರು. ಗೋಪಾಲಕರ ವೃತ್ತಿಯನ್ನು ಅವಲಂಬಿಸಿದವರು. ಇವರು ಬಹಳ ಪ್ರಾಚೀನ ಕಾಲದ ಜನ ಪ್ರಭೇದ. ಇವರು ಚಂದ್ರವಂಶಕ್ಕೆ ಸೇರಿದವರೆಂದು ಹೇಳಿಕೊಂಡಿದ್ದರು. ಇವರ ಪ್ರಾಚೀನತೆಯನ್ನು ವೇದಕಾಲದವರೆಗೂ ಕೊಂಡುಹೋಗಬಹುದು. ಒಂದು ಕಾಲದಲ್ಲಿ ಇಡೀ ಭಾರತವನ್ನೇ ವ್ಯಾಪಿಸಿಕೊಂಡಿದ್ದ ಜನಾಂಗವಿದು. ಈ ತುರುವರು ಹಿಂದಕ್ಕೆ ಬಹಳ ಪ್ರಾಮುಖ್ಯತೆಯನ್ನು ಹೊಂದಿದ್ದ ಜನಾಂಗವಾಗಿ ನಮ್ಮ ನಾಡಿನಲ್ಲಿ ಇದ್ದಿರಬೇಕು"[೧೪೮] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕುರುಬರು ವ್ಯವಸಾಯ ವೃತ್ತಿಯನ್ನವಲಂಬಿಸಿ ಬೇರ್ಪಟ್ಟದ್ದು ಕುರಿತು ತಿಳಿಸಿದ್ದಾರೆ. "ಆರ್ಯ (ಕುರುಬ)ರು ತಮ್ಮ ಮೂಲನಿವಾಸ ಸ್ಥಾನವನ್ನು ಬಿಟ್ಟು ಪಂಜಾಬಿಗೆ ಬಂದು ನೆಲೆಸಿದ ಮೇಲೆ ಅವರಲ್ಲಿ ಕೆಲವರು ಅನೇಕ ವರ್ಷಗಳಿಂದ ಅಲೆದಾಡಿ ಜೀವಿಸಿದ ತಮ್ಮ ಪಶುಪಾಲನ ವೃತ್ತಿಗೆ ಬೇಸತ್ತು ವ್ಯವಸಾಯವನ್ನು ಮಾಡತೊಡಗಿದರು. ಈ ಒಕ್ಕಲುತನವನ್ನು ಅವಲಂಬಿಸಿದ ಗುಂಪಿನವರು ಪಶುಪಾಲನ ಗುಂಪಿನವರಿಗಿಂತ ಸ್ವಲ್ಪ ಹೆಚ್ಚು ಸಂಪತ್ತುಳ್ಳವರಾದರು. ಪಶುಪಾಲಕರಾದವರು ತಮ್ಮ ಸಹೋದರ ವರ್ಗದವರನ್ನೇ ಅಲಕ್ಷ್ಯ, ಅಗೌರವ, ಅಹಂಕಾರದಿಂದ ಕಾಣಹತ್ತಿದರು ಎನ್ನುವುದನ್ನು 'ಸಮಾನೇಶೋಭತೇ ಸ್ನೇಹಃ' ಎಂಬ ನೀತಿಶಾಸ್ತ್ರವನ್ನು ಉದಾಹರಣೆಯ ಮುಖಾಂತರ ಹೇಳಿದ್ದಾರೆ.

ಸ್ನೇಹದಲ್ಲಾಗಲೀ, ಬಂಧುತ್ವದಲ್ಲಾಗಲೀ ಹಾಗೂ ಅಧಿಕಾರ, ಐಶ್ವರ್ಯದಿಂದಾಗಲೀ ಉಭಯ ವ್ಯಕ್ತಿಗಳು ಸರಿಸಮಾನರಾಗದಿದ್ದರೆ ಪರಿಶೋಭಿಸಬಲ್ಲದೇ ಹೊರತು ಅಸಮಾನ(ಭಿನ್ನ)ವಾಗಿದ್ದರೆ ಎಂದಿಗೂ ಶೋಭಿಸದು ಎಂದು ಹೇಳಿದ್ದಾರೆ.

ಈ ಪಶುಪಾಲ ಕುರುಬರಿಗೂ ಮತ್ತು ವ್ಯವಸಾಯ ವೃತ್ತಿಯ ಒಕ್ಕಲಿಗರಾದ ಅಣ್ಣ–ತಮ್ಮಂದಿರಿಗೂ ಇದ್ದ ದ್ವೇಷದ ಕಥೆಯು ಬೈಬಲ್ಲಿನಲ್ಲಿದೆ. ಶ್ರೀಕೃಷ್ಣನು ಪಶುಪಾಲಕನಾಗಿದ್ದರೆ, ಇವನ ಅಣ್ಣ ಬಲರಾಮನು ಒಕ್ಕಲಿಗನಾಗಿದ್ದನು ಎಂಬುದು ತಿಳಿದುಬಂದಿರುವ ಸಂಗತಿ.

ಹೀಗೆ ಅಂದಿನ ಆರ್ಯರೇ ಇಂದಿನ ಕುರುಬರೆನ್ನುವುದಕ್ಕೆ ವೇದಗಳಲ್ಲಿ ವೈದಿಕ ಸಾಹಿತ್ಯ, ಖಗೋಳ ಶಾಸ್ತ್ರ, ಪುರಾಣಗಳು ಮತ್ತಿತರ ಕೃತಿಗಳಲ್ಲಿ ಒಂದಲ್ಲಾ ಒಂದು ರೂಪದಲ್ಲಿ ಇದರ ಉಲ್ಲೇಖವಿದೆ.

ಇವುಗಳ ಆಧಾರಗಳನ್ನು ಇಟ್ಟುಕೊಂಡು ಹನುಮಂತಯ್ಯನವರು ಭರತಖಂಡದ 'ಕುರುಬರ ಮೂಲ ಚರಿತ್ರೆ'ಯನ್ನು ಪರಿಚಯ ಮಾಡಿಕೊಟ್ಟಿದ್ದಾರೆ.

೩. ಕರ್ನಾಟಕದ ಕುರುಬರು

ಹನುಮಂತಯ್ಯನವರು ತಮ್ಮ ಮೊದಲ ಕೃತಿ 'ಕುರುಬರ ಚರಿತ್ರೆ'(೧೯೨೬)ಯಲ್ಲಿ ಪ್ರಾಚೀನ ಕುರುಬರ ಸಂಕ್ಷಿಪ್ತ ಚರಿತ್ರೆಯನ್ನು ತಿಳಿಸಿಕೊಟ್ಟಿದ್ದರು. "ಆರ್ಯರು ತಮ್ಮ ಮತ್ತು ತಮ್ಮ ಪಶುಪ್ರಾಣಿಗಳ ಪ್ರಾಣಸಂರಕ್ಷಣೆಗಾಗಿ ಎಂದರೆ ಕಾಡುಮೃಗಗಳ, ಪ್ರವಾಹಗಳ ಮತ್ತು ಶತ್ರುಗಳ ಉಪದ್ರವವಿಲ್ಲದಿರುವಂತೆ ಎತ್ತರವಾದ ಮತ್ತು ಭದ್ರವಾದ ಸ್ಥಳಗಳನ್ನು ಹುಡುಕಿ ಅಲ್ಲಿ ವಾಸ ಮಾಡತೊಡಗಿದರು. ಅಂಥ ಸ್ಥಳಗಳು ಆ ಕಾಲದಲ್ಲಿ ಬೆಟ್ಟ ಗುಡ್ಡಗಳೇ ಆಗಿದ್ದವು. ಇದರಿಂದ ಅಂದರೆ ದ್ರಾವಿಡ ಭಾಷೆಯಲ್ಲಿ ಕು, ಕೊ ಎಂಬಿವು ಬೆಟ್ಟಗಳೆಂದು, ಕೋರಿ ಎಂದರೆ 'ಕುರಿ' ಎಂದು ಕುರು ಎಂದರೆ ಕುರುಚ್ಚು ಕುಳ್ಳು ಎಂದು ಅರ್ಥವಾಗುವುದು. ಈ ಅರ್ಥಾನುಸಾರವಾಗಿ ಕುರುಬರು(ಆರ್ಯರು) ಬೆಟ್ಟ-ಗುಡ್ಡಗಳಲ್ಲಿ ವಾಸ ಮಾಡಿಕೊಂಡು ಕುರಿಗಳನ್ನು(ಪಶು) ಕಾಯುತ್ತಿದ್ದುದರಿಂದ 'ಕುರುಬ'ರೆಂಬ ಹೆಸರು ದ್ರಾವಿಡ ಭಾಷೆಯಿಂದ ಹುಟ್ಟಿರುತ್ತದೆಂದು"[೧೪೯] ಅಭಿಪ್ರಾಯಪಟ್ಟು, ಮತ್ತೆ ಮುಂದುವರೆದು "'ಕೌರಬ' ಎಂಬ ಋಷಿಯ ತಪಃಪ್ರಭಾವದಿಂದ ಹುಟ್ಟಿದವರಾಗಿದ್ದರಿಂದ 'ಕುರುಬ' ಎಂಬುದಕ್ಕೆ ಪೌರಾಣಿಕ ಉಲ್ಲೇಖವೊಂದನ್ನು ಕೊಡುತ್ತಾರೆ. ಸಂಸ್ಕೃತದಲ್ಲಿ ಕುರಿ ಎಂದರೆ 'ಕುರುದೇಶ,' ಕುರುವಂಶವೆಂದು ಆಗುವ ಅರ್ಥಾನುಸಾರವಾಗಿ ಮಹಾಭಾರತದಲ್ಲಿ ಸುಪ್ರಸಿದ್ಧರಾದ ಕುರುವಂಶದ 'ಕೌರವ' ಶಬ್ದದಿಂದ ಕುರುವ ಎಂದು ಕ್ರಮೇಣ ಈ ಶಬ್ದವೇ ಕುರುಬ ಎಂದು ರೂಢಿಗೆ ಬಂದಿರುವುದಲ್ಲದೆ ಕುರು-ಕುರುದೇಶದ ಕೆಲವು ಭಾಗವನ್ನು 'ಪ' ಪರಿಪಾಲಿಸುತ್ತಿದ್ದ ಕಾರಣ ಕುರುಪ ಎಂಬುದರ ತದ್ಭವ ಶಬ್ದವೇ 'ಕುರುಬ' ಎಂಬ ಹೆಸರಾಯಿತೆಂಬುದು ಸಮಂಜಸವಾಗಿರುವುದು. ಕುರುಬರಿಗೆ ಕುರಿಗಳನ್ನು ಕಾಯುವ ಮತ್ತು ಕಂಬಳಿಗಳನ್ನು ನೇಯುವ ಕಸುಬಿನಿಂದಲೇ 'ಕುರುಬ'ರೆಂಬ ಹೆಸರು ಕಸುಬನ್ನು ಮತ್ತು ಜಾತಿಯನ್ನು ಸಹ ಸೂಚಿಸುತ್ತವೆ ಎಂದು ಹೇಳಿದ್ದಾರೆ.[೧೫೦] ಕುರುಬರ ಎರಡು ದೊಡ್ಡ ಪಂಗಡಗಳನ್ನು ಪರಿಚಯಿಸಿ, ಈ ಎರಡು ಪಂಗಡಗಳ ನಂತರ ಬಂದ ಹಾಲುಮತ, ಕಂಬಳಿ ಕುರುಬರು, ಕನಕಯ್ಯನ ಜಾತಿಯವರು. ಪ್ರಥಮ ಶೂದ್ರರು, ಇಂದ್ರಶೂದ್ರರು, ಅಂಡೆಕುರುಬರು, ಒಡೇರು, ಗೊರವಯ್ಯಗಳು, ವಾರದ ಕುರುಬರನ್ನು ಕುರಿತು ಸಂಕ್ಷಿಪ್ತವಾಗಿ ಪರಿಚಯ ಮಾಡಿರುವುದು ಕಂಡುಬಂದಿತ್ತು.

ಭಾರತ ದೇಶದ ಕುರುಬರ ಚರಿತ್ರೆ(೧೯೫೮) ಕೃತಿಯಲ್ಲಿಯೂ ಸಹ ಕುರುಬರ ಪ್ರಾಚೀನ ಇತಿಹಾಸವನ್ನು ತಿಳಿಸಿ ಕುರುಬರ ಕೆಲವು ಪಂಗಡಗಳನ್ನು ಇದರಲ್ಲಿಯೂ ಸಹ ಪರಿಚಯಿಸಿದ್ದಾರೆ. ಕುರುಬರ ಸಾಮಾಜಿಕ ಜೀವನವನ್ನು ತಿಳಿಸಿದ್ದಾರೆ.

೧. ಕುರುಬರ ಸಾಮಾಜಿಕ ಜೀವನ

ಭಾರತವು ವಿವಿಧ ಸಮುದಾಯದ ಜನಾಂಗ ಧರ್ಮ, ಭಾಷೆ, ಸಂಸ್ಕೃತಿಗಳ ಬಹುರೂಪಿ ಸಮಾಜವಾಗಿದೆ. ಸಮಾಜವು ನಿಂತ ನೀರಲ್ಲ ಅದು ನಿತ್ಯ ಪರಿವರ್ತನಶೀಲವಾದುದು. ತನ್ನೊಳಗಿನ ಹಲವಾರು ಅಂಶಗಳಲ್ಲಿ ಬದಲಾವಣೆಗಳನ್ನು ಕಂಡಿದೆ. ಮಾನವ ಹಾಗೂ ಸಮಾಜ ಇವು ಒಂದನ್ನು ಬಿಟ್ಟು ಮತ್ತೊಂದು ಇಲ್ಲ. ಮಾನವನು ಜನಿಸಿ ಹಂತಹಂತವಾಗಿ ವಿಕಾಸ ಹೊಂದಿ ಬೌದ್ಧಿಕ ಹಾಗೂ ಭೌತಿಕ ಅಂಶಗಳಲ್ಲಿ ಬದಲಾವಣೆ ಹೊಂದಿದ್ದಾನೆ. ಹಾಗೆಯೇ ಸಮಾಜವು ಸಹ ವಿಕಾಸ ಹೊಂದುತ್ತಲೇ ಬಂದಿದೆ. ಈ ಬದಲಾವಣೆ ಮತ್ತು ಪರಿವರ್ತನೆ ಅಂಶಗಳಲ್ಲಿ ಕುರುಬ ಸಮುದಾಯದ ಜನರ ಜೀವನವೂ ಒಂದಾಗಿದೆ. ಕುರುಬರು ಪ್ರಾಥಮಿಕ ಹಂತದಲ್ಲಿ ಗುಡ್ಡ-ಬೆಟ್ಟಗಳಲ್ಲಿ ಸಾಕುಪ್ರಾಣಿಗಳೊಂದಿಗೆ ವಾಸಿಸುತ್ತಿದ್ದರು. ಕಾಲಾನಂತರ ಪಶುಪಾಲನೆಯಿಂದ ಕೃಷಿಗೆ ಪರಿವರ್ತನೆಗೊಂಡರು. ಕೃಷಿಯನ್ನು ಅವಲಂಬಿಸಿದ ಮೇಲೆ ಇವರಲ್ಲಿ ಬಹಳಷ್ಟು ಪ್ರಗತಿಯಾಯಿತು. ಕೃಷಿಗೆ ಯೋಗ್ಯ ಜಮೀನು ಇರುವಲ್ಲಿ ಹಟ್ಟಿಗಳನ್ನು ನಿರ್ಮಿಸಿಕೊಂಡರು. ಹಟ್ಟಿಗಳ ರೂಪಾಂತರವೇ ಗ್ರಾಮಗಳಾದವು. ಹೀಗೆ ಒಂದೆಡೆ ನೆಲೆಸಿದ ಮೇಲೆ ಕುರುಬರಲ್ಲಿ ಅನೇಕ ರೀತಿಯ ಬದಲಾವಣೆಗಳಾದವು. ದೇಶದ ವಿವಿಧೆಡೆ ನೆಲೆಸಿದ ಈ ಸಮುದಾಯದ ಬದುಕು ವಿವಿಧ ಕಾರಣಗಳಿಂದಾಗಿ ಸ್ಥಿತ್ಯಂತರಗೊಂಡಿದೆ.

ಇಂದಿನ ದಿನಮಾನಗಳಲ್ಲಿ ಸಮಾಜದ ಮೇಲೆ ಹಿಡಿತ ಸಾಧಿಸಿರುವ ಆಧುನೀಕರಣ, ನಗರೀಕರಣ, ಪಾಶ್ಚಾತ್ಯೀಕರಣ, ಔದ್ಯೋಗೀಕರಣ ಪ್ರಭಾವಕ್ಕೆ ಈ ಸಮುದಾಯ ಬದಲಾವಣೆ ಹೊಂದಿದೆ. ಕುರುಬ ಜನಾಂಗದಲ್ಲಿ ಆಚರಿಸುವ ಸಾಮಾಜಿಕ ಆಚರಣೆಗಳನ್ನು ಕುರಿತು ಹನುಮಂತಯ್ಯನವರು ಹಂತಹಂತವಾಗಿ ಹೇಳುತ್ತಾ ಹೋಗಿದ್ದಾರೆ.

ಅವರ ಮತಾಚಾರ, ಆಹಾರ, ಉಡುಗೆ-ತೊಡುಗೆಗಳು, ಕಸುಬು, ಜನನ, ವಿವಾಹ, ಗುರುಮಠಗಳು, ಕುಲದೇವರು, ಮರಣ, ವಿಧವಾವಿವಾಹ, ಕುಲ ಕಟ್ಟಳೆಗಳು, ಮೈಲಾರಲಿಂಗನ ಮಹಿಮೆ ಮತ್ತು ಇವರಲ್ಲಿರುವ ಒಳಭೇದಗಳು ಅಥವಾ ಬೆಡಗುಗಳನ್ನು ಹೇಳಿರುವುದು ಕಂಡುಬಂದಿದೆ.

ಇವುಗಳನ್ನು ಅವಲೋಕಿಸಿದರೆ ಕುರುಬ ಜನಾಂಗದವರಿಗೂ ಮತ್ತು ಅನ್ಯ ಜನಾಂಗದವರಿಗೂ ಹೆಚ್ಚಿನ ವ್ಯತ್ಯಾಸ ಕಂಡುಬರುವುದಿಲ್ಲ. ಆದರೆ ಇವರಲ್ಲಿ ಮದುವೆಯ ಆಚರಣೆಯಲ್ಲಿ ವೈಶಿಷ್ಟ್ಯಗಳಿರುವುದನ್ನು ಕಾಣಬಹುದಾಗಿದೆ.

ಮದುವೆಯ ಸಂದರ್ಭದಲ್ಲಿ ಗುರುಸ್ವಾಮಿ ಅಥವಾ ಒಡೆಯರು ವಧುವರರಿಗೆ ಈ ರೀತಿಯಾಗಿ ಹರಸುತ್ತಾರೆ.[೧೫೧]

ವರನಿಗೆ:

ಗಿರಿಶೆಟ್ಟಿ ಗಿರಿರಾಮ

ಸರಿಗೆ ರೇವಕ್ಕ

ಮಗಳು ಬರುತಾಳೆಂದು

ಕಂಚಿ ಕಾಳಂಗಿ

ಕುಡಿ ನೀರಗಿಂಡಿ

ಎಂದು ವರನಿಗೆ ಹೇಳಿದರೆ,

ವಧು-ವರರಿಬ್ಬರಿಗೂ

ಕಲಿಕಲಿಯಾಗಿ

ಕರ್‍ಯಜ್ಜನಾಗಿ

ಭೀಮಣ್ಣನಾಗಿ

ಬಿಲ್ಲರಾಜ್ಯವನಾಗಿ

ಗುರು ರೇವಣಸಿದ್ಧ ಕಟ್ಟಿದ

ಸೇಸೆ ಸ್ಥಿರವಾಗಲಿ

ಸರೂರು ಶಾಂತಮುತ್ತಯ್ಯ

ಕಟ್ಟಿದ ಕಲ್ಯಾಣ ಸ್ಥಿರವಾಗಿ

ಸೋಬತಿ ಸೋಬಾನ

ಸೋಬತಿ ಸೋಬಾನ

ವಧುವಿಗೆ

ಪುಣ್ಯವಂತರ ಮಗಳೇ

ಭಾಗ್ಯವಂತರ ಮಗಳೇ

ಬಸವಣ್ಣ ಬರುತಾನೆ

ತೆಗೆ ನಿನ್ನ ಮುಸುಕ

ಈ ವಚನಗಳು ಮದುವೆಯ ಕಾರ್ಯಗಳಲ್ಲಿ ಒಡೆಯರು ವಧುವರರಿಗೆ ಹೇಳುವ ಆರ್ಶೀವಚನಗಳು. ಇದನ್ನು ಹನುಮಂತಯ್ಯನವರು ಪ್ರಥಮ ಬಾರಿಗೆ ದಾಖಲಿಸಿದ್ದಾರೆ. ಇಲ್ಲಿ ಉಲ್ಲೇಖಿತರಾದ ಶಾಂತಮುತ್ತಯ್ಯ ಮತ್ತು ರೇವಣಸಿದ್ಧರ ಪ್ರಸ್ತಾಪವು ಅವರ ಪ್ರಾಚೀನತೆಯನ್ನು ತಿಳಿಸುತ್ತದೆ.

೨. ಬೆಡಗುಗಳು

ಕುರುಬರ ಸಮುದಾಯದಲ್ಲಿ ಕಂಡುಬಂದಷ್ಟು ಬೆಡಗುಗಳು ಬೇರೆ ಸಮುದಾಯಗಳಲ್ಲೆಲ್ಲಿಯೂ ಕಂಡುಬರುವುದಿಲ್ಲ. ಬೆಡಗುಗಳು ಎಲ್ಲಾ ಜಾತಿಗಳಲ್ಲಿಯೂ ಕಂಡುಬರುವ ಒಳಭೇದಗಳು. ಹನುಮಂತಯ್ಯನವರು ಬೆಡಗುಗಳನ್ನು ಸಾಲುಗಳೆಂದು ಹೇಳಿದ್ದಾರೆ. ಜಾತಿ ಆಧಾರದ ಮೇಲೆ ಇವುಗಳನ್ನು ಕರೆದುಕೊಂಡಿದ್ದಾರೆ. ಇವು ಕುಲ, ಗೋತ್ರ, ಬರಿ, ಬಳಿ ಮೊದಲಾದ ಪದಗಳು ವಂಶದ ಅರ್ಥವನ್ನು ಸೂಚಿಸುವ ಪದಗಳಾಗಿವೆ.

ಬ್ರಾಹ್ಮಣರು ಗೋತ್ರವೆಂದು ಕರೆದರೆ, ಬ್ರಾಹ್ಮಣೇತರರು ವಂಶ, ಕುಲ, ಬಳಿ, ಬೆಡಗು ಎಂದು ಕರೆಯುತ್ತಾರೆ.

ಗೋತ್ರವೆಂದರೆ ಒಬ್ಬ ಪ್ರಾಚೀನ ಪುರುಷನಿಂದ ಆರಂಭಗೊಂಡು ಮುಂದುವರೆಯುತ್ತಾ ಬಂದ ಆತನ ವಂಶವಾಹಿನಿಯೆಂದು ಹೇಳುತ್ತಾರೆ.

ಪುರಾಣಗಳಲ್ಲಿ ಕೌರಭ ಋಷಿಯ ತಪಸ್ಸಿನ ಫಲವಾಗಿ 'ಕುರುಬ' ಸಮುದಾಯ ಸೃಷ್ಟಿಯಾಯಿತೆಂದು ತಿಳಿಯುತ್ತದೆ.[೧೫೨] ಈ ಕೌರಭನಿಂದ ಕೌಟಿಲ್ಯ, ಪೃಥುಕ, ಶೃಣಿ, ಮಹಾಬಲ, ಗಣಕ, ದಿಬ್ರಾಜಿತ, ಕುಶಲ, ಪ್ರಭಾವ, ಕರುಣ, ಪ್ರಬಲ ಹಾಗೂ ವಿಭಾಗ ಎಂಬ ಪುರುಷರು ಜನಿಸಿದರು. ಇವರ ಹೆಸರಿನಿಂದ ಕುರುಬರ ಬೆಡಗುಗಳು ಗುರುತಿಸಲ್ಪಟ್ಟವು. ಅವು ಮುಂದೆ ಕೌಟಿಲ್ಯಗೋತ್ರ, ಪಥಕಗೋತ್ರ, ಶೃಣಿಗೋತ್ರ, ಮಹಾಬಲಗೋತ್ರ, ಗಣಕಗೋತ್ರ, ವಿಭಾಜಿತಗೋತ್ರ, ಕುಶಲಗೋತ್ರ, ಪ್ರಭಾವಗೋತ್ರ, ಕರುಣಗೋತ್ರ, ಪ್ರಬಲಗೋತ್ರ ಹಾಗೂ ವಿಭಾಗಗೋತ್ರಗಳೆಂದು ಕರೆಯಲ್ಪಟ್ಟವು. ಈ ಗೋತ್ರಗಳು ಋಷಿಮುನಿಗಳಿಂದ ಗುರುತಿಸಲ್ಪಡುವುದರಿಂದ ಆರ್ಯ(ಕುರುಬ) ಮೂಲದ ಗೋತ್ರಗಳಾಗಿರುವುದು ಕಂಡುಬರುತ್ತದೆ.

ಕುರುಬ ಜಾತಿಯ ಮೂಲಗುರುವಾದ ರೇವಣಸಿದ್ಧೇಶ್ವರ ಈ ಕುಲದವರನ್ನು ನಾಲ್ಕು ಸೇರು ಭತ್ತದ ಧಾನ್ಯದಷ್ಟು ಗೋತ್ರಗಳನ್ನಾಗಿ ವಿಂಗಡಿಸಿದನು. ಅವುಗಳಿಗೆ ಪ್ರಾಣಿ, ಸಸ್ಯಗಳ ಹೆಸರುಗಳನ್ನಿಟ್ಟು ಕೆಲವು ಗೋತ್ರಗಳು ಉಳಿದಿರುವುದರಿಂದ ಅವುಗಳಿಗೆ ಕ್ಷುಲ್ಲಕ ವಸ್ತುಗಳ ಹೆಸರುಗಳನ್ನು ಇಟ್ಟನಂತೆ.[೧೫೩] ಅವು ಮುಂದೆ ಮಾವನ ವಂಶಗಳನ್ನು ಗುರುತಿಸಲು ಸಹಾಯಕವಾದವು ಎಂಬುದು ಹಾಲುಮತ ಪುರಾಣದಲ್ಲಿ ಉಲ್ಲೇಖವಿರುವುದು ಕಂಡು ಬಂದಿದೆ.

ಒಂದೊಂದು ಬೆಡಗಿನ ಮತ್ತು ಮುಕ್ತತೆ ಹುಟ್ಟಿಗೂ ಒಂದೊಂದು ಕಥೆ ಇರುವಂತೆ ತೋರುತ್ತದೆ. ಇವು ಕಾಕತಾಳೀಯವಾಗಿಯಾದರೂ ಒಂದೊಂದು ಕುಲದ ಹೆಸರಿಗೆ ಹೊಂದಿ ಕೊಳ್ಳುತ್ತವೆ. ಎಲ್ಲಾ ಬೆಡಗುಗಳ ಹಿನ್ನೆಲೆಯಲ್ಲಿ ಬರುವ ಕಥೆಗಳನ್ನೆಲ್ಲಾ ಬಲ್ಲವರು ಅಪರೂಪ.

ಅವು ಒಂದು ಬಗೆಯಲ್ಲಿ ಒಂದು ಕುಲವನ್ನು ಏರಿಸುವ, ಕೆಳಕ್ಕಿಳಿಸುವ ಉದ್ದೇಶ ಹೊಂದಿರುತ್ತವೆ. ಕೆಲವು ಕುಲಗಳು ಆಯಾ ಕುಲದ ಮೂಲಪುರುಷನ ವೃತ್ತಿಯನ್ನು ಅನುಸರಿಸಿ ಹುಟ್ಟಿಕೊಂಡಿವೆ. ಬುಡಕಟ್ಟು ಕುಲಗಳ ಹೆಸರುಗಳು ಬಹುಮಟ್ಟಿಗೆ ಪ್ರಕೃತಿಯಲ್ಲಿಯ ವಸ್ತು, ಪ್ರಾಣಿ ಪಕ್ಷಿಯ ಹೆಸರನ್ನು ಹೊಂದಿರುತ್ತವೆ. ಬಹುಪಾಲು ಪ್ರಾಣಿ, ಗಿಡಮರ, ಹೂಗಳ ಹೆಸರಿನಲ್ಲಿಯೇ ಇರುವುದನ್ನು ಗಮನಿಸಬಹುದು.

'ಬೆಡಗು' ಎನ್ನುವುದಕ್ಕೆ ಸಾಮಾನ್ಯಾರ್ಥದಲ್ಲಿ ಕುಲಗಳ ಸಂಬಂಧದ ಮಹತ್ವ ತಿಳಿಸುವುದು ಎಂದು ಹೇಳಬಹುದು. ಈ ಪರಿಕಲ್ಪನೆಯು ಉತ್ತರ ಅಮೆರಿಕದ ಓಜಿಬ್ವಾದಿಂದ ನಿಷ್ಪತ್ತಿಯಾದ 'Ototeman'ದಿಂದ ಹುಟ್ಟಿಕೊಂಡ ಪದ. ಇದರರ್ಥವೂ ಸೋದರಸಂಬಂಧಿ ಎಂದು ಹೇಳಲಾಗುತ್ತದೆ. ಆಂಗ್ಲ ಭಾಷೆಯ 'Totem' ಎಂಬ ಪದದ ಕನ್ನಡ ರೂಪಾಂತರವೇ 'ಬೆಡಗು' ಈ ಪದವು 'ಕುಲಚಿಹ್ನೆ', 'ಕುಲಸಂಕೇತ' ಎಂಬರ್ಥ ನೀಡುವ ಇದು ೧೭೯೨ರಿಂದ ಬೆಳಕಿಗೆ ಬಂದಿದೆ. ಈ ಪದವು ಪುರಾತನವಾದದು. ಇದು ಶುದ್ಧ ದ್ರಾವಿಡ ಪದ. ವೇಡನ್>ವೇಡಂಕ> ವೇಡಂಗು>ಬೆಡಂಗು>ಬೆಡಗು ಎಂದಾಗಿದೆ. ಬ್ರಾಹ್ಮಣದ ಬ್ರಾಹ್ಮಣತನಕ್ಕೆ ಬ್ರಾಹ್ಮಣ್ಯವೆಂದಂತೆ ಬೇಡನ ಬೇಡತನದಿಂದ 'ಬೆಡಗು' ಬಂದಿದೆ ಎಂದು ಡಾ. ಮಂಜುನಾಥ ಬೇವಿನಕಟ್ಟಿಯವರು ಅಭಿಪ್ರಾಯ ಪಡುತ್ತಾರೆ.[೧೫೪] ಬೆಡಗು ಎನ್ನುವುದು ಒಂದು ಸಮುದಾಯದಲ್ಲಿ ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ ಪರಸ್ಪರ ಸಂಬಂಧವನ್ನು ಗುರುತಿಸುವುದು. ಹಾಗೆಯೇ ಇದು ಕುಲಚಿಹ್ನೆ ಅಥವಾ ಕುಲಲಾಂಛನ. ನಿರ್ದಿಷ್ಟ ರಕ್ತಸಂಬಂಧಿ ಪಂಗಡದ ಸದಸ್ಯರು ವಿಶೇಷ ಅಧ್ಯಾತ್ಮ ಸಂಬಂಧ ಹೊಂದಿರುವ ವಸ್ತು ಅಥವಾ ಚಿಹ್ನೆಯಾಗಿರುತ್ತದೆ. ಆ ವಸ್ತು ಹೆಸರಿನ ಮೂಲಕ ಒಂದು ಪಂಗಡ ಗುರುತಿಸಲ್ಪಡುವುದು. ಒಂದೇ ಕುಲಚಿಹ್ನೆಯಿರುವುದರಿಂದಾಗಿ ಗುರುತಿಸಲ್ಪಡುವ ಬಂಧುತ್ವವಾಗಿರುತ್ತದೆ ಎಂದು ಡಾ. ಚಂದ್ರಶೇಖರ ದಾಮ್ಲೆಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.[೧೫೫]

ಎನ್.ಬಸವಾರಾಧ್ಯರು ಕನ್ನಡ ನಿಘಂಟುವಿನಲ್ಲಿ "ಜಾತಿಯೊಳಗಿರುವ ಒಂದು ಉಪವಿಭಾಗ, ಪಂಗಡ, ವರ್ಗ, ಬಣ, ಕುಲ, ತಳಿ, ಬಳಿ ಈ ರೀತಿಯ ಗುಂಪುಗಳಿಗೆ ಬೆಡಗುಗಳೆಂದು ಹೆಸರು. ಬೆಡಗುಗಳೆಂದರೆ ಮನೆತನಗಳು ಇಲ್ಲವೇ ಗೋತ್ರಗಳು ಇರುತ್ತವೆ[೧೫೬] ಎಂದು ಬೆಡಗುಗಳನ್ನು ಕುರಿತು ಅರ್ಥೈಸುತ್ತಾರೆ.

ಜೇಮ್ಸ್ ಜಿ. ಫ್ರೇಜರ್ ಎಂಬ ಮಾನವಶಾಸ್ತ್ರಜ್ಞರು ಬೆಡಗುಗಳನ್ನು ಕುರಿತು "The classical definition was made by James Frazer that totemism is an intimate relation which is supported do exist between a group of kindered people on the one side and a

species of natural or artificial objects on the otherside, which objects are called the totems of the group"[೧೫೭] ಎನ್ನುವ ವ್ಯಾಖ್ಯಾನವನ್ನು ನೀಡಿದ್ದಾರೆ.

ಇವರೇ ಮುಂದುವರೆದು ಸ್ಪಷ್ಟವಾದ ಕುಲಚಿಹ್ನೆ ಬಗೆಗಿನ ಶ್ರದ್ಧೆ ಗೌರವಗಳು ಸ್ವತಂತ್ರ ಧರ್ಮ ನೀತಿಗಳಲ್ಲ. ಏಕೆಂದರೆ ದೇವರಂತೆ ನಂಬಿ ಯಾರೂ ಇವನ್ನು ಪೂಜಿಸುವುದಿಲ್ಲ. ಅದೇ 'ಬೆಡಗು' ಎಂದಿದ್ದಾರೆ.

ಮನೋವಿಜ್ಞಾನದ ಪಿತಾಮಹನೆನಿಸಿದ ಸಿಗ್ಮಂಡ್ ಪ್ರಾಯ್ಡ್ ಅವರ ಪ್ರಕಾರ ಬೆಡಗುಗಳೆಂದರೆ ಒಂದು ಪ್ರಾಣಿಯ ಸಂಕೇತ ಎಂದಷ್ಟೇ ಅರ್ಥ. ಈ ಪ್ರಾಣಿ ತಿನ್ನಲು ಬರುವಂಥದ್ದೋ ಅಥವಾ ನಿರುಪದ್ರವಿಯೋ ಆಗಿರಬಹುದು. ಹಾಗೆಯೇ ಈ ಚಿಹ್ನೆಯು ಗಿಡ, ಮರ, ಮಳೆಯೂ ಆಗಿರಬಹುದು ಎನ್ನುತ್ತಾರೆ.[೧೫೮]

ಆರಂಭದ ಕಾಲದಲ್ಲಿ ವಿವಾಹಗಳ ಬಗೆಗಿದ್ದ ಅವ್ಯವಸ್ಥೆ, ಅನೈತಿಕ ಸಂಬಂಧಗಳೆಲ್ಲಾ ಕ್ರಮೇಣ ತೊಲಗಿ ಒಂದು ಕುಟುಂಬ ಇನ್ನೊಂದು ಹೊಸ ಕುಟುಂಬದೊಡನೆ ವಿವಾಹ ಸಂಬಂಧ ಹೊಂದುವುದೇ ಒಳ್ಳೆಯದು ಎಂಬ ನೀತಿಯಡಿಯಲ್ಲಿ ಬೆಡಗುಗಳನ್ನು ತಾನಕಗಳಲ್ಲಿ ವಿಭಾಗಿಸಿರುವರು. ಒಂದೇ ಗೋತ್ರ ಅಥವಾ ಬೆಡಗಿನಲ್ಲಿ ವಿವಾಹ ನಿಷಿದ್ಧ ಎನ್ನುವುದನ್ನು ಅರಿತುಕೊಂಡರು. ಒಂದೇ ಗೋತ್ರ ಅಥವಾ ಬೆಡಗಿನಲ್ಲಿ ಸಂಬಂಧ ಏರ್ಪಟ್ಟರೆ ಹುಟ್ಟುವ ಮಕ್ಕಳು ಆರೋಗ್ಯಕರವಾಗಿರುವುದಿಲ್ಲ. ಯಾರೇ ಪರಸ್ಪರ ಅಣ್ಣ–ತಮ್ಮಂದಿರೋ ಅಥವಾ ದಾಯಾದಿಗಳಾಗುತ್ತಾರೆ ಎಂದು ಹೇಳಿಕೊಳ್ಳಲು ಪ್ರಯತ್ನಿಸುವರು ಇಂದೂ ಸಹ ವಿವಾಹ ಸಂದರ್ಭದಲ್ಲಿ ಕುಲ, ಗೋತ್ರ, ಬೆಡಗು ವಿಚಾರ ಅತಿ ಮುಖ್ಯವೆನಿಸಿವೆ.

ಇವು ಬ್ರಾಹ್ಮಣೇತರ ಸಮುದಾಯಗಳ ಧಾರ್ಮಿಕ, ಸಾಮಾಜಿಕ, ಮತ್ತು ಲೈಂಗಿಕ ಜೀವನದ ಮೇಲೆ ಅಧಿಕೃತವಾಗಿ ಅಧಿಕಾರವನ್ನು ಚಲಾಯಿಸುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಮುಕ್ತ ಲೈಂಗಿಕ ಸ್ವೇಚ್ಛಾಚಾರಕ್ಕಂತೂ ಲಗಾಮುಗಳಿದ್ದಂತೆ. ಇವುಗಳ ವಿಧಿ ನಿಷೇಧಗಳನ್ನು ಮೀರಿದವರಿಗೆ ಶಿಕ್ಷೆಯಾಗುತ್ತದೆ ಮತ್ತು ಪಾಪ ಕಾರ್ಯ ಮಾಡಿದಂತೆ ಎಂದು ನಂಬಲಾಗುತ್ತದೆ.

ಸ್ವಬೆಡಗಿನ ಎಷ್ಟೋ ಬುಡಕಟ್ಟುಗಳು ಮತ್ತು ಸಮುದಾಯಗಳು ನಾಶವಾಗಿವೆ. ಆಧುನಿಕ ಕಾಲದಲ್ಲಿ ಸಮಾಜಗಳ ಮೇಲೆ ಇವುಗಳ ಹಿಡಿತ ಸಡಿಲವಾಗುತ್ತದೆ ಎಂದು ಭಾವಿಸುವವರು ಭ್ರಮ ನಿರಸನಕ್ಕೆ ಒಳಗಾಗಿದ್ದಾರೆ. ಸ್ವಬೆಡಗು ಮತ್ತು ಸ್ವಗೋತ್ರ ವಿವಾಹ ನಿಷೇಧಕ್ಕೆ ವೈಜ್ಞಾನಿಕ ರಕ್ತ ಪರೀಕ್ಷೆಯ ಬೆಂಬಲವೂ ದೊರೆತಿದೆ.

ಎಸ್.ಎಸ್.ಮೆಹ್ತಾ ಅವರ ಪ್ರಕಾರ "Women are prohibited from marrying of they belong to the same gotra of descended from the great important rate lay in the fact.

if marriages would be quite effected and they would be consititute good citizens, even western science has proved in our days of progressive civilisation" ಎಂದು ಹೇಳಿದ್ದಾರೆ.[೧೫] ಇದು ಬ್ರಾಹ್ಮಣರಲ್ಲಿ ಮಾತ್ರವಲ್ಲದೇ ಬ್ರಾಹ್ಮಣೇತರ ಬುಡಕಟ್ಟು ಜನಾಂಗಗಳಲ್ಲಿ ರೂಢಿಯಲ್ಲಿದೆ. ಸ್ವಬೆಡಗುಗಳ ವಿವಾಹ ನಿಷಿದ್ಧವಾಗಿದೆ. ಅವು ತಾಯಿಮೂಲದ ಬೆಡಗು ಅಥವಾ ತಂದೆಮೂಲದ ಬೆಡಗುಗಳಾಗಿರಬಹುದು. ಬೆಡಗುಗಳನ್ನು ತಾಯಿ ಅಥವಾ ತಂದೆಮೂಲದಿಂದ ಗುರುತಿಸಿದರೂ ತಾಯಿಯ ಮೂಲವೇ ಬೆಡಗುಗಳ ಅಸಲಿ ಮೂಲ. ಬೆಡಗುಗಳು ಮಾತೃಸಂಸ್ಕೃತಿ ಪ್ರಧಾನವಾದವು. ಬ್ರಾಹ್ಮಣೇತರರು ಬ್ರಾಹ್ಮಣೀಕರಣ ಮತ್ತು ಶೂದ್ರೀಕರಣಕ್ಕೆ ಒಳಗಾದಂತೆ ಮಾತೃಸಂಸ್ಕೃತಿಯ ಜನಾಂಗಗಳು ಪಿತೃ ಸಂಸ್ಕೃತಿಯನ್ನು ಅನುಕರಣೆ ಮಾಡಿದವು. ಇದರಿಂದ ಬೆಡಗುಗಳು ವಿಸ್ಮೃತಿಗೆ ಒಳಗಾಗಿ ಬ್ರಾಹ್ಮಣೇತರರಲ್ಲೂ ಗೋತ್ರಗಳು ರೂಢಿಗೆ ಬಂದವು.

ವಿ.ಆರ್.ಹನುಮಂತಯ್ಯ ಅವರು 'ಕುರುಬರ ಚರಿತ್ರೆ'ಯಲ್ಲಿ ಗುರುತಿಸಿದಂತೆ ಈ ಕೃತಿಯಲ್ಲಿಯೂ ಸಹ ಕುರುಬ ಸಮುದಾಯದ ಬೆಡಗುಗಳ ಹೆಸರನ್ನು ಗುರುತಿಸಿದ್ದಾರೆ. ಅವು ಅಸಲು ಕುರುಬರು, ಅಲಿಗೆ, ಅಂದರ, ಅಣ್ಣಿ, ಅರಿಸಿಣ, ಅರಸು, ಅತ್ತಿ, ಆಡಿನ, ಆಸಲು, ಆರೆ, ಆಸೆ, ಇರುಳ, ಉಪ್ಪಿನ, ಉಣ್ಣೆ, ಎಮ್ಮೆ, ಐದುವರಹದ ಸಾಲೆ, ಓತಿ, ಓತಿನ, ಕಂಚಿನ, ಕುವಡಿ, ಕುಂಬಳ, ಕುಂದಣ, ಕುಣಿವ, ಕೊಪ್ಪಿನ, ಕೊಳ್ಳಿ, ಕೋಟೆ, ಗಾಲಿ, ಗೌಡನ, ಚಂದನ, ಚೆಟ್ಲು, ಜನಿ, ಜಂಡೆ, ಜಾಡಿ, ಜೀರಿಗೆ, ತಗರು, ತುಂಬೆ, ದಂಡೆ, ದಾಣಿ, ದಾಸರಿ, ದುಡ್ಡಿನ, ದೇವದಾರು, ನಗರೆ, ನಳಿಗೆ, ನಾಲಿ, ನಾಯಿ, ನಾಗರ, ನೆಲ್ಲಿ, ಬಂಡಿ, ಬನ್ನೆ, ಬಳ್ಳಾರಿ, ಬಸರಿ, ಬಾಸರಿ, ಬಾಣದ, ಬಾಣಗೆರೆ, ಬಾಸಲು, ಬಿಜ್ಜಳ, ಬೀರೆ, ಬುಜ್ಜಣಿಗೆ, ಮಜ್ಜಣ, ಮಾಸಲು, ಮಾನೆ, ಮಿಂಚಿನ, ಮೀಸಲು, ಮೀಸೆ, ಮುತ್ತಿನ, ಮೂರು ಹಿಂಡಿನ, ಮೆಣಸಿನ, ಶ್ಯಾವಿಗೆ, ಸಂಗಮ, ಸಣ್ಣಕಂಬಳಿ, ಸಂಪಿಗೆ, ಸಣಗಾರಿ, ಸಾಸಲು, ಸಾಮಂತ, ಸಾಲದ, ಸಾದು, ಸೇವಂತಿ, ಹರ್ಷ, ಹಂಡೆ, ಹಟ್ಟಿ, ಹಟ್ಟಿಕಾರ, ಮತ್ತು ಹಾಲು ಹೀಗೆ ಎಂಬತ್ತೆಂಟು ಬೆಡಗುಗಳ ಹೆಸರುಗಳನ್ನು ಅಕಾರಾದಿಯಾಗಿ ಗುರುತಿಸುವುದನ್ನು ಕಾಣಬಹುದು. ಇವರ ನಂತರ ಶಿವಾನಂದ ಗುಬ್ಬಣ್ಣವರು ಕರ್ನಾಟಕದ ಕುರುಬರು ಕೃತಿಯಲ್ಲಿ ೧೧೧ ಬೆಡಗುಗಳನ್ನು ಗುರುತಿಸಿದ್ದಾರೆ. ತದನಂತರ ಬಂದ ಚಂದ್ರಕಾಂತ ಬಿಜ್ಜರಗಿ ಅವರು 'ಕುರುಬರ ಹೆಜ್ಜೆಗಳ ಒಂದು ಅಧ್ಯಯನ' ಕೃತಿಯಲ್ಲಿ ೮೭೭ ಬೆಡಗುಗಳನ್ನು ಗುರುತಿಸಿದ್ದಾರೆ.

ಈ ಬೆಡಗುಗಳನ್ನು ಅವಲೋಕಿಸಿದರೆ ದಕ್ಷಿಣ ಭಾರತದ ದ್ರಾವಿಡ ಸಂಸ್ಕೃತಿಯು ಮುಖ್ಯವಾಗಿ ವೃಕ್ಷಾರಾಧನೆ, ಪ್ರಾಣಿಗಳ ಆರಾಧನೆ, ಸಂಸ್ಕೃತಿ, ನಿಸರ್ಗದಲ್ಲಿ ಅಪರಿಮಿತವಾಗಿ ಹರಡಿರುವ ವಸ್ತುಗಳಲ್ಲಿ ಯಾವುದೋ ಒಂದು ಕಲ್ಲು, ಬಂಡೆ, ಮರ, ಪ್ರಾಣಿ, ಪಕ್ಷಿ, ಆದಿಮಾನವನ ಗುಂಪಿಗೆ

ರಕ್ಷಣೆ ಒದಗಿಸಿರಬಹುದು ಅಥವಾ ಭಯಕ್ಕೆ ಕಾರಣವಾಗಿರಬಹುದು. ಇಂಥ ಒಂದೊಂದು ವಸ್ತುವೂ ಆಯಾ ಬುಡಕಟ್ಟಿನ ಗುಂಪಿಗೆ ಯಾವುದೋ ಶಕ್ತಿಯ ಸಂಕೇತವಾಗಿ ಕಂಡಿರಬಹುದು. ಆ ಸಂದರ್ಭದಲ್ಲಿ ಪ್ರಾಣಿ, ಪಕ್ಷಿ, ಮರ, ಗಿಡ, ಬಳ್ಳಿ, ಗುಡ್ಡ, ಬೆಟ್ಟ, ಬಂಡೆ, ಗುಂಪಿನ ಗುರುತಾಗಿ ಕುಲಸಂಕೇತವಾಗಿ ಸ್ವೀಕರಿಸಲ್ಪಟ್ಟು ಅವು ಪೂಜಿಸುವ ವಸ್ತುವೂ ಆಗಿಬಿಟ್ಟವು. ಒಂದೊಂದು ಬುಡಕಟ್ಟಿನ ಒಂದೊಂದು ಕುಲಕ್ಕೆ ಇವೇ ಹೆಸರು ಉಳಿದುಕೊಂಡು ಬಂದಂತೆ ಕಾಣುತ್ತದೆ. ಆದಿಮಾನವನ ಈ ಬಗೆಯ ಕುಲಕಲ್ಪನೆಗಳೇ ಮುಂದಿನ ಸಮಾಜದಲ್ಲಿ ಗೋತ್ರವಾಯಿತು. ಇದಕ್ಕೆ ಹೊರತಾಗಿ ಕುರುಬರು ಪ್ರಾಚೀನ ಕಾಲದಲ್ಲಿ ತಮ್ಮ ದನಕರು–ಕುರಿಗಳ ಸಂರಕ್ಷಣೆಗಾಗಿ ಹುಲ್ಲು ನೀರು ಇರುವ ಪ್ರದೇಶಗಳನ್ನು ಗುರುತಿಸಿ ಹಟ್ಟಿಗಳನ್ನು ಕಟ್ಟಿಕೊಂಡು ಅಲೆದಾಡುತ್ತಿದ್ದರು. ಬೆಟ್ಟ–ಗುಡ್ಡಗಳನ್ನು ಬೀಡು ಬಿಟ್ಟುಕೊಂಡು ವಾಸಿಸುತ್ತಿರುವಾಗ ಗುಂಪಿನಿಂದ ಪ್ರತ್ಯೇಕತೆ ಉಂಟಾಗಲು ತಮ್ಮದೇ ಆದ ಸಂಕೇತವನ್ನು ಇಟ್ಟುಕೊಳ್ಳಲಾರಂಭಿಸಿದರು. ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ಆಹಾರ ಇತ್ಯಾದಿಗಳು ಪ್ರಾಚೀನ ಕಾಲದ ಹಟ್ಟಿಕಾರರ ಗುಂಪಿನ ಹೆಸರುಗಳು. ಇವೇ ಮುಂದೆ ಬೆಡಗುಗಳಾಗಿ ಮಾರ್ಪಾಡಾದವು.

ಪ್ರಾಚೀನ ಭಾರತದ ಸಾಮಾಜಿಕ ವ್ಯವಸ್ಥೆಯನ್ನು ಅವಲೋಕಿಸಿದಾಗ ಬೆಡಗುಗಳ ವಿಂಗಡಣೆ ಎರಡು ರೀತಿಯಲ್ಲಿ ಆಗಿರುವುದು ಕಂಡುಬರುತ್ತದೆ. ಋಷಿ ಮುನಿಗಳ ಹೆಸರಿನಲ್ಲಿ ಆರ್ಯ ಮೂಲದವರ ಬೆಡಗುಗಳನ್ನು ವಿಂಗಡಿಸಿದರೆ ಶ್ರಮಸಂಸ್ಕೃತಿಯ ಶೂದ್ರವರ್ಗದವರು ಗಿಡ, ಮರ, ಪ್ರಾಣಿ, ಪಕ್ಷಿ, ಮತ್ತು ಇನ್ನಿತರೆ ಬದುಕಿಗೆ ಹತ್ತಿರವಾದ ನಿಸರ್ಗಕ್ಕೆ ಪೂರಕವಾದ ಹೆಸರಿನಲ್ಲಿ ಬೆಡಗುಗಳನ್ನು ವಿಂಗಡಿಸಿದ್ದಾರೆ. ಎರಡನೆಯ ವಿಂಗಡಣೆಯ ಶೂದ್ರವರ್ಗದವರು ದ್ರಾವಿಡ ಬುಡಕಟ್ಟಿನಿಂದ ವಿಕಾಸಗೊಂಡ ಜನಾಂಗಗಳು ನಿಸರ್ಗದ ಹೆಸರುಗಳಲ್ಲಿ ವರ್ಗೀಕರಣ ಮಾಡಿದ್ದಾರೆ.

ಹನುಮತಯ್ಯನವರು ಗುರುತಿಸಿರುವ ಬೆಡಗು ಅಥವಾ ಗೋತ್ರಗಳು ತನ್ನದೇ ಆದ ಸ್ಥಾನಮಾನ ಮತ್ತು ಸಾಮಾಜಿಕ ನೆಲೆಯನ್ನು ನಿರ್ವಹಿಸುವ ಗುಣವನ್ನು ಹೊಂದಿರುತ್ತವೆ. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡುತ್ತಾ ಹೋಗಬಹುದು.

i. ರಾಜಮನೆತನಕ್ಕೆ ಸಂಬಂಧಿಸಿದ ಬೆಡಗುಗಳು

೧. ಅರಸು, ೨ ಕದಂ, ೩. ಬಿಜ್ಜಳ, ೪. ಹಂಡೆ, ೫. ಝುಂಡು, ೬. ಗೌಡ, ೭. ಭೋಜ, ೮. ನೊಣಬ, ೯. ರಾಯ, ೧೦. ರಾಜ, ೧೧. ರಾಣಿ, ೧೨. ಸಂಗಮ, ೧೩. ಸಾಮಂತ.

ii. ದೇವರಿಗೆ ಸಂಬಂಧಿಸಿದ ಬೆಡಗುಗಳು

೧. ಅಗ್ನಿ, ೨. ಅಮೋಘ, ೩. ಕೃಷ್ಣ, ೪. ಕಾಮಣ್ಣ, ೫. ಬಸವ, ೬. ಬನಶಂಕರಿ, ೭. ಬೆನಕ, ೮. ನಾಗ, ೯. ಸೂರ್ಯ, ೧೦. ಶಿವ, ೧೧. ರುದ್ರ, ೧೨. ಸಿದ್ಧನ, ೧೩ ಲಿಂಗ, ೧೪. ಹನುಮ, ೧೫. ಶಂಕರ.

iii. ಗಿಡಮರ ಸಸ್ಯಕ್ಕೆ ಸಂಬಂಧಿಸಿದ ಬೆಡಗುಗಳು

ಅತ್ತಿ, ಅರಳಿ, ಅವರೆ, ಅರಸಿಣ, ಉದ್ದು, ಎಳ್ಳು, ಔಡಲ, ಕಡ್ಲಿ, ಕರಿಮಾವಿನ ಕಮಲ, ಕುಂಬಳ, ಗರಿಕೆ, ಗಂಧ, ಜೋಳ, ಜೀರಿಗೆ, ಬನ್ನಿ, ಬೆಳ್ಳುಳ್ಳಿ, ಬೇವಿನ, ನುಗ್ಗಿ, ನೆಲ್ಲಿ, ಮಲ್ಲಿಗೆ, ಮಾವಿನ, ಮಂದಾರ, ಮೆಣಸು, ಸಂಪಿಗೆ, ಸೇವಂತಿಗೆ, ಎಳ್ಳು, ಹುಣಸೆ, ಹುರುಳಿ.

iv. ಪಶು–ಪಕ್ಷಿ–ಪ್ರಾಣಿ ಮೂಲಕ್ಕೆ ಸಂಬಂಧಿಸಿದ ಬೆಡಗುಗಳು

೧. ಕುರಿ, ೨. ಟಗರು, ೩. ಆಕಳು, ೪. ಎಮ್ಮೆ, ೫. ನಾಯಿ, ೬. ಮೊಲ, ೭. ಹೋರಿ, ೮. ಬಿಳಿಕುರಿ, ೯. ಚೇಳು, ೧೦. ನವಿಲು, ೧೧. ನಾಗರ, ೧೨. ಗೀಜಗ, ೧೩. ಮಂಗ, ೧೪. ಹಾವಿನ, ೧೫. ಹೆಬ್ಬುಲಿ, ೧೬. ಆನೆ, ೧೭. ಆಡಿನ, ೧೮. ಓತಿನ, ೧೯. ಕೊಪ್ಪಿ ೨೦. ಇರುವೆ, ೨೧. ಕೋಗಿಲೆ.

v. ಆಹಾರಸೂಚಿ ಬೆಡಗುಗಳು

೧. ಶ್ಯಾವಿಗೆ, ೨. ಹಾಲು, ೩. ಮಜ್ಜಿಗೆ, ೪. ಉಪ್ಪು, ೫. ಉಗ್ಗಿ, ೬. ಉಂಡಿ, ೭. ಎಣ್ಣೆ, ೮. ಕಡ್ಲಿ, ೯. ಜೋಳ, ೧೦. ಚಕ್ಕಲಿ, ೧೧. ತುಪ್ಪ, ೧೨. ನುಚ್ಚು, ೧೩. ಸಣ್ಣಕ್ಕಿ, ೧೪. ಸೊಪ್ಪು, ೧೫. ಮಾವಿನ, ೧೬. ಹುರುಳಿ, ೧೭. ಮೆಣಸಿನ.

vi. ಲೋಹಸೂಚಿತ ಬೆಡಗುಗಳು

೧. ಕುಂದಣ, ೨. ಸುವರ್ಣ, ೩. ಬೆಳ್ಳಿ, ೪. ಕೆಂಗಲ್ಲು, ೫. ಮಾಣಿಕ್ಯ, ೬. ಚೂರಿ, ೭. ಹೊನ್ನು, ೮. ಕಂಚು, ೯. ಕಡಗ, ೧೦. ಮುತ್ತು, ೧೧. ಸೂಜಿ, ೧೨. ಕತ್ರಿ, ೧೨. ಉಂಗುರ.

vii. ಆಯುಧಸೂಚಿ ಬೆಡಗುಗಳು

ಕತ್ತಿ, ಕೊಡಲಿ, ಚೂರಿ.

viii. ವಸನಸೂಚಿ ಬೆಡಗುಗಳು

ಕಂಬಳಿ, ಕೋರಿ, ಗೊಂಡಿ, ಗೊಂಗಡಿ.

ix. ಊರು(ಸ್ಥಳ)ಸೂಚಿ ಬೆಡಗುಗಳು

ಆನೆಗೊಂದಿ, ಬಳ್ಳಾರಿ, ಸರೂರು, ಶಿವಮೊಗ್ಗ, ಸಾಗರ.

ಈ ಮೇಲಿನ ಬೆಡಗುಗಳಲ್ಲದೇ ಇನ್ನೂ ಅನೇಕ ಬೆಡಗುಗಳಿವೆ. ಇವು ಕುರುಬರಲ್ಲಿ ವಿವಾಹ ಸಂಬಂಧವನ್ನು ಮತ್ತು ವ್ಯಕ್ತಿ ಪರಸ್ಪರವಾಗಿ ಕಾರ್ಯ ಮಾಡುವುದರಲ್ಲಿ ಬಹು ಪ್ರಮುಖವಾದ ಪಾತ್ರ ವಹಿಸುತ್ತವೆ.

೩. ವಿದ್ಯೆಯ ಮಹಿಮೆ ಮತ್ತು ಹಣದ ಪ್ರಭಾವ

ಹನುಮಂತಯ್ಯನವರು ಸಮಾಜದಲ್ಲಿ ವಿದ್ಯೆಯ ಮಹಿಮೆ ಮತ್ತು ಹಣದ ಪ್ರಭಾವದ ಮಹಿಮೆ ಕುರಿತು ಚರ್ಚಿಸಿದ್ದಾರೆ. ಇವತ್ತಿನ ದಿನಮಾನಗಳಲ್ಲಿ ವಿದ್ಯೆ ಮತ್ತು ಹಣ ಎರಡು ಮುಖ್ಯವಾದವುಗಳು. ಪ್ರತಿಯೊಂದು ಕಾರ್ಯಕ್ಕೂ ಮುಖ್ಯವಾಗಿ ಹಣ ಬೇಕು. ಹಣವಿಲ್ಲದೇ ಯಾವುದೇ ಕಾರ್ಯಗಳು ನಡೆಯುವುದಿಲ್ಲ. ಹಣವಿದ್ದರೆ ಮನುಷ್ಯ ಏನೆಲ್ಲಾ ಮಾಡಬಹುದು. ಮತ್ತೊಂದು ಕಡೆ ವಿದ್ಯೆಯನ್ನೇ ಇವತ್ತು ಹಣ ಕೊಟ್ಟು ಕೊಳ್ಳುವ ಪರಿಸ್ಥಿತಿಯೂ ಇದೆ. ಈ ಎರಡರ ವಾದ ವಿವಾದವನ್ನು ಈ ಕೆಳಗಿನಂತೆ ವಿವರಿಸುತ್ತಾ ಹೋಗಿದ್ದಾರೆ.

ವಿದ್ಯಾಭಿಮಾನಿಯ ವಾದ:

ವಿದ್ಯಾನಾಮ ನರಸ್ಯರೂಪಮಧಿಕಂ ।
ಪ್ರಚ್ಛನ್ನಗುಪ್ತಂಧನಂ ।
ವಿದ್ಯಾಭೋಗಕರೀ, ಯಶಸ್ಸುಖಕರೀ ।
ವಿದ್ಯಾಗುರೂಣಾಂಗುರು ।
ವಿದ್ಯಾಬಂಧುಜನೋ ವಿದೇಶಗಮನೇ ।
ವಿದ್ಯಾಪರಾದೇವತಾ ।
ವಿದ್ಯಾರಾಜಿಸುಪೂಜ್ಯತೇ ।
ನಹಿಧನಂ ವಿದ್ಯಾಪಹೀನ ಪಶುಃ ।[೧೬೦]

ಅಂದರೆ ವಿದ್ಯೆಯೇ ಮನುಷ್ಯನಿಗೆ ಸುಂದರವಾದ ರೂಪು. ವಿದ್ಯೆಯೇ ಪ್ರಚ್ಛನ್ನವಾದ ಮತ್ತು ಗುಪ್ತವಾದ ಐಶ್ವರ್ಯವು. ವಿದ್ಯೆಯೇ ಭೋಗವನ್ನೂ ಯಶಸ್ಸನ್ನೂ ಸೌಖ್ಯವನ್ನೂ ಉಂಟುಮಾಡತಕ್ಕದ್ದು. ವಿದ್ಯೆಯೇ ಗುರುಗಳಿಗೂ ಗುರುವೆನಿಸಿಕೊಳ್ಳತಕ್ಕದ್ದು. ವಿದ್ಯೆಯೇ ದೇಶಾಂತರಗಳಿಗೆ ಹೋದಾಗ ಬಂಧುಜನರಂತೆ ಆದರಿಸತಕ್ಕದ್ದು. ವಿದ್ಯೆಯೇ ಶ್ರೇಷ್ಠವಾದ ದೇವತೆಯು. ವಿದ್ಯೆಯೇ ರಾಜಾಸ್ಥಾನಗಳಲ್ಲಿ ಪೂಜಾರ್ಹವಾದುದು. ಧನವು ಯಾವ ವಿಷಯದಲ್ಲಿಯೂ ವಿದ್ಯೆಗೆ ಸಮಾನವಾಗಲಾರದು. ಇಂತಹ ವಿದ್ಯೆಯಿಲ್ಲದ ಮನುಷ್ಯನು ಶುದ್ಧ ಪಶುವೆನಿಸಿಕೊಳ್ಳುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ ಎಂಬ ವಾದವನ್ನು ಹೇಳಿದ್ದಾರೆ.

ಧನಾಭಿಮಾನಿಯ ವಾದ

ಅಯ್ಯೋ ವಿದ್ಯಾಭಿಮಾನಿಯೇ? "ಧನವು ಯಾವ ವಿಷಯದಲ್ಲಿಯೂ ವಿದ್ಯೆಗೆ ಸಮಾನವಾಗಲಾರದು" ಎಂದು ನೀನು ಆಡಿದ್ದು ಮಾತ್ರ ಸಾಹಸದ ಮಾತಾಗಿರುತ್ತದೆ ಕೇಳು.

ಯಸ್ಯಾಸ್ತಿವಿತ್ತಂ ಸನರಃ ಕುಲೀನಃ ।
ಸಪಣ್ಣಿತಃ, ಸಶ್ರುತಪ್ರಾನ, ಗುಣಜ್ಞಃ
ಸವಿವವಕ್ತಾ, ಸಚದರ್ಶನೀಯಃ ।
ಸರ್ವೇಗುಣಾಃ ಕಾಂಚನಮಾಶ್ರಯಂತಿ[೧೬೧]

ಅಂದರೆ ಯಾವ ಮನುಷ್ಯನಲ್ಲಿ ಹಣವಿರುತ್ತದೆಯೋ ಅವನೇ ಸತ್ಕುಲ ಪ್ರಸೂತನು. ಅವನೇ ಪಂಡಿತನು. ಅವನೇ ವೇದಶಾಸ್ತ್ರಾದಿ ಸಮಸ್ತ ವಿದ್ಯೆಗಳನ್ನು ತಿಳಿದವನೆಂದು ಪ್ರಶಂಸಿಸಲ್ಪಡತಕ್ಕವನು. ಅವನು ಗುಣಜ್ಞನು. ಅವನೇ ವಾಗ್ಮಿಯು. ಅವನೇ ಸುಂದರನು. ಆದಕಾರಣ ಮಿತ್ರನೇ ಸಮಸ್ತ ಗುಣಗಳು ದ್ರವ್ಯವನ್ನೇ ಆಶ್ರಯಿಸಿರುವುದರಿಂದ ಮನುಷ್ಯನಿಗೆ ಧನವೇ ಭೂಷಣವು.

ವಿದ್ಯಾಭಿಮಾನಿ: ಅಯ್ಯೋ ಧನಾಭಿಮಾನಿಯೇ ಮನುಷ್ಯನಿಗೆ ಧನವೇ ಭೂಷಣವಾಗಿರುತ್ತದೆಂಬುದು ಮಾತ್ರ ಒಪ್ಪತಕ್ಕದಲ್ಲ ಕೇಳು,

ಕೇಯೂರಾನವಿಭೂಷಯಂತಿ ಪುರುಷಂ
ಹಾರಾನಚಂದ್ರೋಜ್ವಲಾ
ನಸ್ನಾನಂನವಿಲೇಪನಂ, ನಕುಸುಮಂ ನಾಲಂಕೃತಾಮೂರ್ಧಜಾಃ
ವಾಣ್ಯೇಕಾಸಮಲಂಕರೋತಿಪುರುಷಂ ಯಾಸಂಸ್ಕೃತಾ ಧಾರ್ಯತೇ[೨]
ಕ್ಷೀಯಂತೇಖಿಲ ಭೂಷಣಾನಿ, ಸತತಂ ವಾಗ್ಭೂಷಣಂ ಭೂಷಣಂ ।[೧೬೨]

ಅಂದರೆ ಭುಜಕೀರ್ತಿಗಳಾಗಲೀ, ದಿವ್ಯವಾದ ಹಾರಗಳಾಗಲೀ, ಸ್ನಾನಗಳಾಗಲೀ, ಗಂಧಾದ್ಯನುಲೇಪನವಾಗಲೀ, ಪುಷ್ಪಾದಿಗಳಿಂದಲಂಕರಿಸಲ್ಪಟ್ಟ ಕೂದ(ತಲೆ)ಲಾಗಲೀ ಯಾವುದೂ ಮನುಷ್ಯನಿಗೆ ಅಲಂಕಾರವೆನಿಸಿಕೊಳ್ಳುವುದಿಲ್ಲವು. ಮನುಷ್ಯನು ಕಲಿತಿರುವ ಪರಿಷ್ಕೃತವಾದ ಸದ್ವಿದ್ಯೆಯೇ ಅವನನ್ನು ಅಲಂಕರಿಸತಕ್ಕದು.

ಇತರ ಭೂಷಣಗಳೆಲ್ಲಾ ಮನುಷ್ಯನ ಮೈಮೇಲೆ ಅಲ್ಪಕಾಲವಿದ್ದು ಅಂತ್ಯ(ಮಾಯ)ವಾಗತಕ್ಕವುಗಳಾದ ಕಾರಣ ಮನುಷ್ಯನಿಗೆ ಯಾವಾಗಲೂ ಧರಿಸಿಕೊಂಡಿರಬಹುದಾದ ವಾಗ್ಭೂಷಣವೇ ಭೂಷಣವು.

ವಿದ್ಯಾಭಿಮಾನಿಯ ವಾದ

> ಮಾತೇವರಕ್ಷತಿ, ಪಿತೇವಹಿತೇನಿಯುಙ್ತೇ ।
> ಕಾಂತೇ ವಚಾಭಿ ರಮಯತ್ಯಪನೀಯ ಖೇದಂ
> ಕೀರ್ತಿಂತ ಸೋತಿ ವಿಮಲಾಂ, ವಿತನೋತಿ ಲಕ್ಷ್ಮೀಂ
> ಕಿಂ, ಕಿಂ, ನಸಾಧಯತಿ, ಕಲ್ಪಲತೇವ ವಿದ್ಯಾ[೧೬೩]

ಅಂದರೆ, ಹೋದ ಕಡೆಯಲ್ಲೆಲ್ಲಾ ವಿದ್ಯೆಯು ತಾಯಿಯಂತೆ ಸರ್ವದಾ ರಕ್ಷಿಸುತ್ತದೆ. ತಂದೆಯಂತೆ ಹಿತಕಾರ್ಯಗಳಲ್ಲಿಯೇ ಮನುಷ್ಯನನ್ನು ಪ್ರೇರೇಪಿಸುತ್ತದೆ. ಮನೋಹರಳಾದ ಹೆಂಡತಿಯಂತೆ ಮನೋವ್ಯಥೆಯನ್ನೆಲ್ಲಾ ಹೋಗಲಾಡಿಸಿ, ಯಾವಾಗಲೂ ಆನಂದಪಡಿಸುತ್ತದೆ. ವಿಶೇಷವಾದ ಐಶ್ವರ್ಯವನ್ನುಂಟು ಮಾಡಿಕೊಡುತ್ತದೆ. ಎಲ್ಲಾ ವಿಷಯದಲ್ಲೂ ಕಲ್ಪವೃಕ್ಷದಂತೆ ಇರುವ ಈ ವಿದ್ಯೆಯು ಮನುಷ್ಯನಿಗೆ ಎಲ್ಲಾ ವಿಷಯದಲ್ಲಿಯೂ ತೃಪ್ತಿಪಡಿಸುತ್ತದೆ.

ಧನಾಭಿಮಾನಿಯವಾದ

> ಮಾತಾ ನಿಂದತಿ ನಾಭಿನಂದತಿಪಿತಾ
> ಭ್ರಾತಾನ ಸಂಭಾಪತೆ, ಭೃತ್ಯಃ ಕುಪ್ಯತಿ
> ನಾನು ಗುಚ್ಚತಿಸುತಃ ಕಾಂತಾಚನಾಲಿಂಗತೆ
> ಅರ್ಥ ಪ್ರಾರ್ಥನ ಶಂಕಯಾ, ನ ಕರುತೇ
> ಸಲ್ಲಾಪಮಾತ್ರಂ ಸುಹೃತ್, ತಸ್ಮಾದರ್ಥ
> ಮುಪಾರ್ಜಯಶ್ರುಣುಸಖೇಹ್ಯರ್ಥೇನ ಸರ್ವೇವಶಾಃ[೧೬೪]

ಅಂದರೆ ಮನುಷ್ಯನು ಹಣವಿಲ್ಲದವನಾದರೆ ತಾಯಿಯು ನಿಂದಿಸುತ್ತಾಳೆ. ತಂದೆಯು ಸಂತಸಪಡುವುದಿಲ್ಲ. ಒಡಹುಟ್ಟಿದವರು ಮಾತನ್ನು ಕೂಡ ಆಡರು. ಸಾಮಾನ್ಯ ಜನರು ಕೂಡ ಮೇಲೆರಗಿ ಬರುತ್ತಾರೆ. ಹೊಟ್ಟೆಯಲ್ಲಿ ಹುಟ್ಟಿದ ಮಗನೂ ಅವನನ್ನು ಅನುಕರಿಸುವುದಿಲ್ಲ. ಕಡೆಗೆ ಕೈಹಿಡಿದ ಹೆಂಡತಿಯು ಸಹ ಆಲಂಗಿಸಿಕೊಳ್ಳುವುದಿಲ್ಲ. ಎಲ್ಲಿ ಹಣವನ್ನು ಸಾಲ ಕೇಳುತ್ತಾನೋ ಎಂಬ ಹೆದರಿಕೆಯಿಂದ ಸ್ನೇಹಿತರೂ ದೂರವಾಗುತ್ತಾರೆ. ಆದುದರಿಂದ ಹಣವನ್ನು ಸಂಪಾದನೆ ಮಾಡುವುದರಿಂದ ಸಮಸ್ತರೂ ವಶ್ಯರಾಗುತ್ತಾರೆ.

> ಯಸ್ಯಾರ್ಥಾಸ್ತಸ್ಯಮಿತ್ರಾಣಿ
> ಯಸ್ಯಾರ್ಥಾಸ್ತಸ್ಯಬಾಂಧವಾಃ
> ಯಸ್ಯಾರ್ಥಾಸ್ಸಪ್ರಮಾರ್ಲೋಕೇ
> ಯಸ್ಯಾರ್ಥಸ್ಸಚಪಂಡಿತ[೧೬೫]

ಅಂದರೆ ಹಣವಿರುವವನಿಗೆ ಸ್ನೇಹಿತರು, ಬಂಧುಗಳು ಎಲ್ಲರೂ ಉಂಟಾಗುತ್ತಾರೆ. ಹಣವಿರುವವನೇ ಲೋಕದಲ್ಲಿ ಪುರುಷನೆಂತಲೂ, ಪಂಡಿತನೆಂತಲೂ ಎನಿಸಿಕೊಳ್ಳುತ್ತಾನೆ.

ವಿದ್ಯಾಭಿಮಾನಿಯ ವಾದ

ಅರ್ಥಾನಾಮಾರ್ಜನೇ ದುಃಖ, ಮಾರ್ಜಿತಾನಾಂಚರಕ್ಷಣೆ
ನಾಶೆ ದುಃಖಂ, ವ್ಯಯೇ ದುಃಖಂ, ಅರ್ಥೋ ದುಃಖಸಭಾಜನಮ್ ।[೧೬೬]

ಅಂದರೆ ಹಣವನ್ನು ಸಂಪಾದಿಸುವಾಗ ದುಃಖವು, ಸಂಪಾದಿಸಿದುದನ್ನು ಕಾಪಾಡುವಾಗ ದುಃಖವು, ಅದು ನಾಶವಾದರೂ ದುಃಖವು, ಖರ್ಚಾಗಿ ಹೋದರೂ ದುಃಖವು, ಆದ ಕಾರಣ ಧನವನ್ನು ದುಃಖಕ್ಕೆ ಆವಾಸಸ್ಥಾನವೆಂಬುದನ್ನೂ ವಿದ್ಯೆಯು ಸದಾ ಸಕಲ ವಿಧದಲ್ಲಿಯೂ ಆನಂದಕ್ಕೆ ಆವಾಸಸ್ಥಾನವಾದ ಶಾಶ್ವತ ಧನವೆಂಬುದನ್ನೂ ಚೆನ್ನಾಗಿ ತಿಳಿದು ವಿದ್ಯೆಯನ್ನು ಕಲಿಯಿರಿ ಎಂದು ಹನುಮಂತಯ್ಯನವರು ವಿದ್ಯೆ ಮತ್ತು ಹಣದ ಮಹಿಮೆಯನ್ನು ಕುರಿತು ಈ ರೀತಿ ವರ್ಣಿಸಿರುವುದು ಕಂಡುಬರುತ್ತದೆ.

ಇದೇ ತರಹ ವಿದ್ಯೆ ಮತ್ತು ಹಣವನ್ನು ಕುರಿತು ಗಾದೆ ಮಾತುಗಳಿವೆ. ದುಡ್ಡೆ ದೊಡ್ಡಪ್ಪ, ವಿದ್ಯೆ ಅವರಪ್ಪ ಎಂಬ ಗಾದೆಯನ್ನು ನೋಡಬಹುದು.

ಸರ್ವಜ್ಞನ ವಚನಗಳಲ್ಲಿ ವಿದ್ಯೆ ಕುರಿತು ವಚನಗಳಿವೆ.

ವಿದ್ಯೆವುಳ್ಳವನ ಮುಖವು ಮುದ್ದು ಬರುವಂತಿಕ್ಕು
ವಿದ್ಯೆ ಇಲ್ಲದನ ಬರಿಮುಖವು ಹಾಳೂರ
ಹದ್ದಿನಂತಿಕ್ಕು ಸರ್ವಜ್ಞ[೧೬೭]

ವಿದ್ಯೆವುಳ್ಳವನು ನೆರೆ ಮುದ್ದಿನಂತಿರುತಿಕ್ಕು
ವಿದ್ಯೆವಿಲ್ಲದಿರ್ಪ ಬರುದೇಹಿ ಬಲ್ಲವರ
ಹೊದ್ದದೆ ಇರುವ ಸರ್ವಜ್ಞ[೧೬೮]

ವಿದ್ಯೆಯೇ ತಾಯ್ತಂದೆ ಬುದ್ಧಿಯೇ ಸಹೋದರರು
ವಿದ್ವಾನಕಾದವರ ನೆಂಟ ಸುಖದಿ ತಾ
ನಿದ್ದುದೇ ರಾಜ್ಯ ಸರ್ವಜ್ಞ
ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರುವು
ಬಿದ್ದಿರಲು ಬಂದು ನೋಡದ ತಾಯಿಯು
ಶುದ್ಧ ವೈರಿಗಳು ಸರ್ವಜ್ಞ[೧೬೯]

ಈ ರೀತಿಯ ವಿದ್ಯೆಯ ಮಹಿಮೆ ಕುರಿತ ವಚನಗಳು ಸರ್ವಜ್ಞನ ವಚನಗಳಲ್ಲಿ ಕಾಣಬಹುದು.

ವಿದ್ಯೆ ಮತ್ತು ಹಣ ಈ ಎರಡು ಇದ್ದರೆ ಮಾತ್ರ ಬದುಕು. ಇವು ಇಲ್ಲದಿದ್ದರೆ ಜೀವನ ನಶ್ವರ. ಸಮಾಜದಲ್ಲಿ ಇವೆರಡರಿಂದ ಮನುಷ್ಯ ಮನುಷ್ಯನಾಗಿ ಬಾಳುತ್ತಾನೆ. ಹಣ ಇರಬಹುದು. ಇದನ್ನು ಯಾರಾದರೂ ತೆಗೆದುಕೊಂಡು ಹೋದರೆ ಮುಗಿಯಿತು. ಅವನ ಜೀವನ ನಶ್ವರವಾಗುತ್ತದೆ. ಆದರೆ ವಿದ್ಯೆಯನ್ನು ಯಾರೂ ಕದಿಯಲು ಬರುವುದಿಲ್ಲ. ವಿದ್ಯೆ ಕಲಿತವನ ಪದವಿಯನ್ನು ಯಾರಿಂದಲೂ ಕಿತ್ತುಕೊಳ್ಳಲು ಆಗುವುದಿಲ್ಲ. ಆದ್ದರಿಂದ ವಿದ್ಯೆಗೆ ಬೆಲೆಯಿದೆ ಎಂಬುದನ್ನು ಅರಿಯಬಹುದು.

೪. ಶ್ರೀ ಬೀರದೇವರ ದೊಡ್ಡ ಜಾತ್ರೆಯ ಆಚರಣೆ

ಭಾರತೀಯ ಸಂಸ್ಕೃತಿಯ ಇತಿಹಾಸದುದ್ದಕ್ಕೂ ಧಾರ್ಮಿಕ ಆಚರಣೆಗಳು ಜರುಗುವವು. ಅಧರ್ಮ ಅಧಿಕವಾಗಿ ಧರ್ಮಕ್ಕೆ ಕೊಡಲಿಪೆಟ್ಟಾದಾಗ ಪರಮಾತ್ಮ ನಾನಾ ಅವತಾರಗಳಲ್ಲಿ ಅವತರಿಸಿ ಅಧರ್ಮದ ವಿರುದ್ಧ ಹೋರಾಡಿ ಧರ್ಮ ಸಂಸ್ಥಾಪನೆ ಮಾಡಿರುವ ಅನೇಕ ಕಥೆಗಳು ಮತ್ತು ಉಪಕತೆಗಳು ಕಂಡುಬರುತ್ತವೆ. ಪ್ರತಿಯೊಂದು ಜನಾಂಗದವರು ತಮ್ಮದೇ ಆದ ದೇವತೆಯೊಂದನ್ನು ಸೃಷ್ಟಿಸಿಕೊಂಡು ಬಂದಿರುತ್ತಾರೆ. ಇದಕ್ಕೆ ಕರ್ನಾಟಕ ಪ್ರಾಚೀನ ಜನಾಂಗಗಳಲ್ಲಿ ಒಂದಾದ ಕುರುಬ ಜನಾಂಗವೂ ಹೊರತಾಗಿಲ್ಲ. ಬೀರೇಶ್ವರನನ್ನು ತಮ್ಮ ಕುಲದೇವರನ್ನಾಗಿ ಮಾಡಿಕೊಂಡು ಅತ್ಯಂತ ಶ್ರದ್ಧೆ, ಭಕ್ತಿಗಳಿಂದ ಆದಿಕಾಲದಿಂದಲೂ ಆರಾಧಿಸಿಕೊಂಡು ಬಂದಿದ್ದಾರೆ.

ಬೀರಪ್ಪ ಕುರುಬ ಸಮುದಾಯದ ಆರಾಧ್ಯದೈವ ಮತ್ತು ಕುಲದೈವ. ಈತನನ್ನು ಬೀರೋಬ, ಕರಿಸಿದ್ಧ, ಕರೆಯ ಅರಸ, ಭೈರವ ಎಂಬ ಭಿನ್ನ ಹೆಸರುಗಳಿಂದ ಕರೆಯುತ್ತಾರೆ. ವೀರ–ಬೀರ–ಈರ ಎಂಬ ರೂಪಾಂತರ ಹೆಸರುಗಳಿವೆ. ಈತನ ಉತ್ಸವ, ಜಾತ್ರೆಗಳು ಕರ್ನಾಟಕವಲ್ಲದೇ ಆಂಧ್ರಪ್ರದೇಶ, ಮಹಾರಾಷ್ಟ್ರ, ಕೇರಳ, ತಮಿಳುನಾಡು ರಾಜ್ಯಗಳಲ್ಲಿಯೂ ನಡೆಯುತ್ತವೆ. ಹಾಲುಮತ ಸಮುದಾಯದವರಿರುವ ಪ್ರತಿ ಹಳ್ಳಿಯಲ್ಲಿಯೂ ಬೀರಪ್ಪನ ಗುಡಿಗಳಿವೆ. ಇದಕ್ಕೆ ಸಂಬಂಧಿಸಿದಂತೆ ಅನೇಕ ಕಥೆ, ಜನಪದ ಗೀತೆ, ಹಾಡುಗಳು ಸಾಕಷ್ಟು ಸಿಗುವುದು ಇದಕ್ಕೊಂದು ನಿದರ್ಶನ. ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ಈತನ ಪಲ್ಲಕ್ಕಿ, ಉತ್ಸವ, ಜಾತ್ರೆಗಳಂಥ ಆಚರಣೆಗಳನ್ನು ರಾಜ್ಯದ ವಿವಿಧೆಡೆಗಳಲ್ಲಿ ಕಾಣಬಹುದು. ಇಂಥ ಉತ್ಸವಗಳಿಗಿಂತ ಭಿನ್ನವಾಗಿ ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ತುಮಕೂರು, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಬೀರಪ್ಪನಿಗೆ ಹನ್ನೆರಡು ವರ್ಷಗಳಿಗೊಮ್ಮೆ ತೋಪುಜಾತ್ರೆ ನಡೆಯುವ ಪರಿಪಾಟವಿದೆ. ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ 'ಪರ' ಎಂದು ಕರೆದರೆ, ಚಿತ್ರದುರ್ಗದ ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ಭಾಗಗಳಲ್ಲಿ 'ದೊಡ್ಡಜಾತ್ರೆ' ಎಂದು ಕರೆಯುತ್ತಾರೆ. ಚಿತ್ರದುರ್ಗದ ಹೊಳಲ್ಕೆರೆ, ಹೊಸದುರ್ಗ ತಾಲೂಕುಗಳಲ್ಲಿ 'ತೋಪುಜಾತ್ರೆ'ಯೆಂದು ಪ್ರಸಿದ್ಧಿ ಪಡೆದಿದೆ.[೧೨೦] ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿಯೂ ತೋಪುಜಾತ್ರೆ ಎಂದೇ ಕರೆಯುವರು.

ಬೆಂಗಳೂರಿನ ರಾಣಾಸಿಂಗ್ ಪೇಟೆಯಲ್ಲಿ ಶ್ರೀ ಬೀರದೇವರ 'ದೊಡ್ಡಜಾತ್ರೆ'ಯ ಆಚರಣೆ ಕುರಿತು ಹನುಮಂತಯ್ಯನವರು ಈ ಕೃತಿಯಲ್ಲಿ ಪರಿಚಯಿಸಿರುವುದು ಕಂಡುಬಂದಿದೆ. "ದಿನಾಂಕ ೨೧.೪.೧೯೫೭ ಭಾನುವಾರ ಮತ್ತು ೨೨.೪.೧೯೫೭ ಸೋಮವಾರ ನಡೆಯಿತು. ಮಧ್ಯಾಹ್ನ ಸುಮಾರು ಎರಡು ಗಂಟೆಯ ವೇಳೆಗೆ ರಾಣಾಸಿಂಗ್ ಪೇಟೆಯಲ್ಲಿರುವ ಶ್ರೀ ಬೀರೇಶ್ವರ ದೇವಸ್ಥಾನದಿಂದ ಎಲ್ಲಾ ಕುಲದೇವತೆಗಳ ಮೂಲಕ ಉತ್ಸವವು ಅರಳೇಪೇಟೆ ಮಾರ್ಗವಾಗಿ ಸುಭಾಷ್ ನಗರಕ್ಕೆ ಆಗಮಿಸುತ್ತಲೇ ಅನೇಕ ಪೂಜೆಗಳು ನಡೆದವು. ವೀರ ಮಕ್ಕಳಿಂದ ಅಲಗು ಸೇವೆಯಾಗುತ್ತದೆ. ನಂತರ ಶ್ರೀ ಬೀರದೇವರ ಖಡ್ಗಾಮೃಗ ವಚನಗಳಿಂದ ಸ್ತೋತ್ರಗಳಾದವು. ದೇವರ ಸ್ತೋತ್ರ ಆಗುತ್ತಿದ್ದಂತೆಯೇ ಪೂಜಾರಿಗಳ ಮೇಲೆ ಆವೇಶ ಬಂದಂತಾಗಿ ಅವರು ಮಂಡಿಯೂರಿ ಕುಳಿತಾಗ ಅವರೊಡನೆ ಇರುವವರು ಪೂಜಾರಿಗಳ ಮೇಲೆ ಅರಿಸಿನವನ್ನು ಹಾಕಿ ತಲೆಯ ಮೇಲೆ ತೆಂಗಿನಕಾಯಿಯನ್ನು ಹೊಡೆದಂತೆಲ್ಲ ತೆಂಗಿನಕಾಯಿಗಳು ನಾಲ್ಕಾರು ತುಂಡುಗಳಾಗುತ್ತಿದ್ದವು. ಹೀಗೆ ಸುಮಾರು ಎಂಟು ಹತ್ತು ಪೂಜಾರಿಗಳ ತಲೆಯ ಮೇಲೆ ಸುಮಾರು ೫೦ ತೆಂಗಿನಕಾಯಿಗಳನ್ನು ಒಡೆಯಲಾಯಿತು ಎಂದು ಅಂದು ತಾವು ಕಂಡ ದೃಶ್ಯವನ್ನು ಈ ಕೃತಿಯ ೧೦೫ ಪುಟದಲ್ಲಿ ದಾಖಲಿಸಿದ್ದಾರೆ.

ಈ ಜಾತ್ರೆಯಲ್ಲಿ ಅನೇಕ ಬುಡಕಟ್ಟು ದೇವರು ಒಂದೆಡೆ ಸೇರುತ್ತವೆ. ಅವು

೧. ಸಂಪಿಗೆಹಳ್ಳಿ ಶ್ರೀ ಬೀರದೇವರು

೨. ಬಡದೇನಹಳ್ಳಿ ಕರಿಯಾಲ ದೇವರು

೩. ಇಗ್ಗಲೂರು ಶ್ರೀ ಬೀರದೇವರು

೪. ಇರಾಹಸಂದ್ರ ವನಗಹಳ್ಳಿ ದೇವರು

೫. ಕೊರಿಗಟ್ಟದ ಅಜ್ಜೇ ದೇವರು

೬. ಉಣವಿಗೆರೆ ಶ್ರೀ ಬೀರದೇವರು ಮತ್ತು ರಾಮದೇವರು

೭. ಅಗದೂರು ಶ್ರೀ ಬೀರದೇವರು

೮. ಮಂಗಳೂರು ಶ್ರೀ ಬೀರದೇವರು

೯. ಹುಲ್ಲೂರು ಆನೇಲಿಂಗ ದೇವರು

ಈ ಮೇಲಿನ ಬುಡಕಟ್ಟು ದೇವರುಗಳು ಮಧ್ಯಾಹ್ನ ಸುಮಾರು ಎರಡು ಗಂಟೆಗೆ ರಾಣಾಸಿಂಗ್ ಪೇಟೆಯಲ್ಲಿರುವ ಶ್ರೀ ಬೀರೇಶ್ವರ ದೇವಸ್ಥಾನದಿಂದ ಡೊಳ್ಳು-ವಾದ್ಯ-ಭಜನೆ, ಉತ್ಸವದೊಂದಿಗೆ

ಅರಳೆಪೇಟೆ ಮಾರ್ಗವಾಗಿ ಸುಭಾಷ್‌ನಗರಕ್ಕೆ ಆಗಮಿಸುತ್ತಿದ್ದವು ಎನ್ನುವುದನ್ನು ದಾಖಲಿಸಿದ್ದಾರೆ. ಮತ್ತು ಈ ಜಾತ್ರೆಯಲ್ಲಿ ನಡೆಯುವ ಪವಾಡಗಳನ್ನು ನೋಡಲು ಆಗಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ, ಅರ್ಥಸಚಿವ ಶ್ರೀ ಟಿ.ಮರಿಯಪ್ಪ, ರೆವಿನ್ಯೂ ಸಚಿವ ಶ್ರೀ ಮಲ್ಲನಗೌಡ ಪಾಟೀಲ್ ಮುಂತಾದ ಗಣ್ಯವ್ಯಕ್ತಿಗಳು ಮತ್ತು ಸುಮಾರು ಐದುಸಾವಿರ ಜನ ಸೇರಿದ್ದರು ಎಂದು ಹೇಳಿದ್ದಾರೆ.

೫. ಒಳಪಂಗಡಗಳು

ಹನುಮಂತಯ್ಯನವರು 'ಕುರುಬರ ಚರಿತ್ರೆ' ಕೃತಿಯಲ್ಲಿ ಹೇಳಿರುವ ಎರಡು ದೊಡ್ಡ ಪಂಗಡಗಳಾದ ಉಣ್ಣೆಕಂಕಣ ಕುರುಬರು, ಹತ್ತಿಕಂಕಣ ಕುರುಬರ ಜೊತೆಗೆ ಅನೇಕ ಉಪಪಂಗಡಗಳನ್ನು ಕುರಿತು ಪರಿಚಯಿಸಿರುವುದು ಕಂಡುಬಂದಿತ್ತು. ಈ ಕೃತಿಯಲ್ಲಿ ಅವೆಲ್ಲವುಗಳನ್ನು ಬಿಟ್ಟು ಕುರುಬರಲ್ಲಿ ಪ್ರತ್ಯೇಕವಾದ ಎರಡು ಒಳಪಂಗಡಗಳನ್ನು ಹೇಳಿದ್ದಾರೆ. ಅವು ನೊಣಬರು ಮತ್ತು ಕುಡಿವಕ್ಕಲಿಗರು ಎಂದು ಗುರುತಿಸಿದ್ದಾರೆ.

೧. ನೊಣಬರು

ಕುರುಬ ಸಮುದಾಯದಲ್ಲಿ ನೊಣಬರು ಎಂಬುದೊಂದು ಒಳಪಂಗಡವಿರುತ್ತದೆ. ಇವರು ಪ್ರಾಚೀನ ಕಾಲದಲ್ಲಿ 'ನೊಣಂಬವಾಡಿ' ಎಂಬ ರಾಜ್ಯದಲ್ಲಿ ವಾಸಿಸುತ್ತಿದ್ದುದರಿಂದ ಇವರಿಗೆ 'ನೊಣಬರು' ಎಂಬ ಹೆಸರುಂಟಾಗಿರುತ್ತದೆಂದು. 'ನೊಣಬರು' ಎಂಬುದು ನೋಣಂಬರು ಎಂಬುದರ ಅಪಭ್ರಂಶ ರೂಪವೆಂದು ತರ್ಕಿಸಿದ್ದಾರೆ.[೧೬]

ಈ ನೊಣಂಬವಾಡಿಗೆ ನೋಲಂಬವಾಡಿ ಎಂಬ ಹೆಸರು ಕೂಡ ಇದ್ದು ಈ ನೋಲಂಬವಾಡಿಯನ್ನು ಪಲ್ಲವರಾಜನು ಆಳುತ್ತಿದ್ದನು. ಆದ್ದರಿಂದ ಪಲ್ಲವರಿಗೆ ನೊಣಂಬಾಧಿರಾಜ, ನೊಣಂಬ ಪಲ್ಲವ ಮತ್ತು ಪಲ್ಲವರಾಜರೆಂದು ಕರೆಯುತ್ತಿದ್ದುದು ಸ್ಪಷ್ಟವಾಗುತ್ತದೆ.

ಹನುಮಂತಯ್ಯನವರು ಮೈಸೂರು ರಾಜ್ಯ ಗೆಝೆಟಿಯರನ್ನು ಉಲ್ಲೇಖಿಸುತ್ತಾ "These are called Nonabas because they are residents of this ancient kingdom of Nonambavadi this was ruled over by the Pallavas up to the 10th century A.D. the pallavas called themselves as Nolambavadi Rajas. Nonamba Pallava, Pallavadi Raja etc. their caste title is Gowda[೧೭] ಎಂದು ಹೇಳಿದ್ದಾರೆ.

ರೆವರೆಂಡ್ ಎಫ್.ಕಿಟಲ್ ಅವರು 'ನೊಣಬ' ಎಂದರೆ "A man of a caste division of the kurubas" ಎಂದಿದ್ದಾರೆ. ತಜ್ಞರ ಪ್ರಕಾರ ನೊಣಬ ಎಂದರೆ ಸುಂದರ, ಮುಂದುವರೆದವನು,

ಮುಂದಾಳತ್ವ ವಹಿಸುವ ಮುಂದಾಳು, ಮುನ್ನುಗ್ಗು, ಮೊದಲೇ ಹೋಗು, ಒಬ್ಬ ನಾಯಕನ ಮುಂದಾಳತ್ವದಲ್ಲಿನ ಜನರ ಗುಂಪು, ಇತರರನ್ನು ಮುನ್ನಡೆಸುವವರು.[೧೭೩]

ತಮಿಳು ಮೂಲದ ಪ್ರಕಾರ ನೂಳೈ ತೆವಳು ಎಂದು ಮತ್ತೊಂದು ಅರ್ಥದಲ್ಲಿ ಬೇರೆಯವರ ಮನಸ್ಸಿನ ಮೇಲೆ ತಮ್ಮ ಪ್ರಭಾವ ಬೀರುವವರು. 'ಕುಳೈ'–ಕುಲುಂಬ, 'ವರೈ'–ವರಾಂಬು ಪ್ರವೇಶ ಮಾಡುವವರು ಒಳನುಗ್ಗುವವರು ಎಂದರ್ಥವಾಗುತ್ತದೆ.[೧೭೪]

ಮೂಲರೂಪ ನುವಿಂಬ, ನೊವಿಂಬ ಆಗಿ ನೊಣಬ ಆಗಿದೆ. ಸಂಸ್ಕೃತದ 'ಪಲ್ಲವ'ವು ಕನ್ನಡದಲ್ಲಿ ಚಿಗುರು, ತಮಿಳಿನಲ್ಲಿ ನೊಳಂಬು ಎಂದರೆ ಕನ್ನಡದಲ್ಲಿ ಕೂಡಿ ಎಂದಾಗುತ್ತದೆ. ಅದನ್ನೇ ಪಲ್ಲವರು, ನೊಳಂಬರು, ಕಂಡಿಯರು ಎಂದು ಕರೆದಿರುವರು. ಕರ್ಮಯೋಗಿ ಸಿದ್ಧ ರಾಮನು ಕುಡಿಯರ ಕುಲಶಿರೋಮಣಿ ಮುದ್ದಗೌಂಡರ ಮಗ, ಹಿಂದಿನ ಪಲ್ಲವರು ನಂತರದ ನೊಳಂಬರು(ನೊಣಬರು) ಕೂಡಿಯ ರಾಜನಿಗೆ ಕುಂಡಿಯೊಕ್ಕಲಿಗ ಕುಂಡಿಯ ಕೂಸು ಎಂದಿದೆ.

ನೊಣಬ ಎಂಬುದರ ಹಳೆಯ ರೂಪಗಳಾಗಿ ನೊಣಂಬ, ನೊಳಂಬ ಎಂಬ ಪದಗಳು ಲಭ್ಯವಾಗುತ್ತವೆ. ಇವರು ಆಳಿದ ನೊಳಂಬವಾಡಿ ೩೨ ಸಾವಿರ ಪ್ರಾಂತವು ತುಮಕೂರು, ಚಿತ್ರದುರ್ಗ ಜಿಲ್ಲೆಗಳ ಭಾಗಗಳನ್ನು ಒಳಗೊಂಡಿದ್ದು, ಈ ಪ್ರಾಂತಕ್ಕೆ ಸಂಬಂಧಿಸಿದವರೇ ನೊಣಬರು ಎಂದು ಪ್ರಸಿದ್ಧರಾಗಿದ್ದಾರೆ. ಸೊಲ್ಲಾಪುರದ ಸಿದ್ಧರಾಮನನ್ನು ವಿಶೇಷವಾಗಿ ಈ ಕುಲವೆಂದು ಒಪ್ಪಿಕೊಂಡಿದ್ದಾರೆ. ಸಾಂಪ್ರದಾಯಿಕ ವ್ಯವಸಾಯ ವೃತ್ತಿಯನ್ನು ಅನುಸರಿಸುವವರು ಪಲ್ಲವರ ತರುವಾಯ ಸಾಮಂತರಾಗಿದ್ದ ನೊಳಂಬರು ಅವರ ರಾಜ್ಯಕ್ಕೆ ಒಡೆಯರಾದರು. ಕುರುಬರಲ್ಲಿ ನೊಣಬರು ಎಂಬ ಒಳಪಂಗಡವಿದ್ದು ನೊಳಂಬರು ಈ ನೊಣಬರೇ ಆಗಿರಬಹುದು. ನೊಳಂಬರು ತಾವು ಪಲ್ಲವ ಕುಲದವರೆಂದು ಹೇಳಿಕೊಳ್ಳುತ್ತಿದ್ದುದರಿಂದ ಚಿತ್ರದುರ್ಗ ಜಿಲ್ಲೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ನೊಳಂಬವಾಡಿ ಎಂಬ ಹೆಸರು ಇದ್ದಿತು. ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಹೇಮಾವತಿಯ ಸ್ತಂಭದ ಮೇಲೆ ಈ ಅರಸರ ವಂಶಾವಳಿಯನ್ನು ಕೊರೆಯಲ್ಪಟ್ಟಿದೆ. ಇವರು ಈಶ್ವರ ವಂಶದವರೆಂದೂ, ಇವರ ಮೂಲ ಪುರುಷರು ಪಲ್ಲವ ಕುಲಕ್ಕೆ ಸೇರಿದ 'ತ್ರಿನಯನಂತೆ' ಇವರ ಮೊದಲ ಅರಸ ಮಂಗಳ ಅಥವಾ ನೊಳಂಬಾದಿ ರಾಜನೆಂದು ಗೊತ್ತಾಗುತ್ತವೆ. ಈ ನೊಣಬರಲ್ಲಿ ಮೂರು ದಿನದವರು, ನಾಲ್ಕು ದಿನದವರು ಎಂಬ ಒಳಪ್ರಭೇದಗಳಿವೆ ಎಂದು ಹೇಳಿದ್ದಾರೆ.

ಕುರುಬರಲ್ಲಿ ಕೆಲ ವೀರರು ಸಾಹಸ ಮಾಡಿ ರಾಜ್ಯವನ್ನು ಕಟ್ಟಿ ಆಳಿದರು. ಅಂಥವರಲ್ಲಿ ವಿಜಯನಗರದ ಹಕ್ಕಬುಕ್ಕ ಸಹೋದರರು, ಕನಕದಾಸರು, ಬಳ್ಳಾರಿ ಕೋಟೆಯನ್ನು ಕಟ್ಟಿದ

ಹಂಡೆಯ ಪಾಳೆಯಗಾರ ಬಾಲದ ಹನುಮಪ್ಪನಾಯಕ ಇವರಿಗಿಂತಲೂ ಮುನ್ನ ಕರ್ನಾಟಕ ಪ್ರದೇಶವನ್ನು ಕ್ರಿ.ಶ. ೭೫೦ರಿಂದ ೧೦೫೪ರವರೆಗೆ ಆಳಿದ ಒಂದು ಜನಸಮುದಾಯವು ಕುರುಬರೇ ಆಗಿದ್ದರು. ಅವರೇ ನೊಳಂಬರು ಅಥವಾ ನೊಣಬರು ಆಗಿದ್ದರು ಎಂದು ತಿಳಿದು ಬಂದಿದೆ.

೨. ಕುಡಿವಕ್ಕಲಿಗರು

ಹನುಮಂತಯ್ಯನವರು ಇವರನ್ನು ಕುರುಬರ ಒಳಪಂಗಡದಲ್ಲಿ ಸೇರಿಸುತ್ತಾರೆ. ಅವರು ಕೊಡುವ ಆಧಾರವೆಂದರೆ ಕುರುಬರು ಮತ್ತು ಕುಡುವಕ್ಕಲಿಗರು ಒಂದೇ ಕುಲದ ದಾಯಾದಿಗಳು ಎಂದು ರುದ್ರ ಬ್ರಹ್ಮಾಂಡ ಪುರಾಣ ಎಂಬ ಪುರಾತನ ಗ್ರಂಥದಲ್ಲಿ ಹೇಳಿದೆ ಎಂಬುದು.

ಕುರುಬರ ಹಾಲುಮತ ಪುರಾಣದಲ್ಲಿ ಕುರುಬ ಮತ್ತು ಕುಂಡುವೊಕ್ಕಲಿಗರ ಉಲ್ಲೇಖ ಬರುತ್ತದೆ. ಬಿಜಾಪುರ ಸಮೀಪದ ಬಿಜ್ಜರಗಿ ಭೂತಾಳಸಿದ್ಧ ಕುಡು ಒಕ್ಕಲಿಗರ ಮನೆದೇವರು. ಭೂತಾಳಸಿದ್ಧನ ಗದ್ದುಗೆ ಹೊನವಾಡ ಗ್ರಾಮದಲ್ಲಿ ಹಂಡೆ ಕುರುಬರು ಪೂಜಾರಿಗಳಾಗಿ ಇದ್ದು ಎರಡು ಸಮುದಾಯಗಳ ಸಂಬಂಧವನ್ನು ಸೂಚಿಸುತ್ತದೆ[೧೭೫] ಎಂದು ಚಂದ್ರಕಾಂತ ಬಿಜ್ಜರಗಿ ಅವರು ಅಭಿಪ್ರಾಯ ಪಡುತ್ತಾರೆ.

ಕರ್ನಾಟಕದ ಒಕ್ಕಲಿಗರಲ್ಲಿ ಮುಖ್ಯವಾಗಿ ಎರಡು ಬಗೆಗಳು. ಒಂದು ದಕ್ಷಿಣ ಕರ್ನಾಟಕದ ಭಾಗದವರು ಮತ್ತೊಂದು ಉತ್ತರ ಕರ್ನಾಟಕದ ಒಕ್ಕಲಿಗರು. ಈ ಉತ್ತರ ಕರ್ನಾಟಕದಲ್ಲಿ ಕಂಡುಬರುವ ಒಕ್ಕಲಿಗರನ್ನೇ 'ಕುಡುಒಕ್ಕಲಿಗ'ರೆಂದು ಕರೆಯಲಾಗುತ್ತದೆ. ಕರ್ನಾಟಕದ ಕುಡುಒಕ್ಕಲಿಗ ಮತ್ತು ಮಹಾರಾಷ್ಟ್ರದ ಶೇತಕರಿ, ದನಗರ ಸಮುದಾಯಗಳಿಗೆ ಕೆಲವು ಹೋಲಿಕೆಗಳನ್ನು ಸಮಾಜಶಾಸ್ತ್ರಜ್ಞರು ಗುರ್ತಿಸಿದ್ದಾರೆ. ಅಂದರೆ ಕುಡುಒಕ್ಕಲಿಗ ಮೂಲವನ್ನು ಕುರುಬ ಮೂಲದಲ್ಲಿ ಗುರ್ತಿಸುತ್ತಾರೆ.

ಮುಂಬೈ ಕರ್ನಾಟಕ ಗೆಜೆಟಿಯರ್‌ನಲ್ಲಿ ರಡ್ಡೇರ್ ಬಗೆಗೆ ಹೇಳುವಾಗ ಕುರುಬರ ಮೂಲ ಪುರುಷನಾದ 'ಕುರುಪಿ' ಎಂಬುವವನಿಗೆ ಕುಡುವೊಕ್ಕಲಿಗ ಎಂಬ ಸಹೋದರನಿದ್ದನು ಎಂಬ ಮಾತು ಬರುತ್ತದೆ. ಇದರಿಂದಲೂ ಈ ಸಮುದಾಯಕ್ಕೆ ಕುಡುಒಕ್ಕಲಿಗ ಎಂಬ ಹೆಸರು ಬಂದಿರಬಹುದು.

ಪಶುಪಾಲಕ ಸಮುದಾಯವೊಂದು ಗುಡ್ಡಗಾಡು ಪ್ರದೇಶದಲ್ಲಿ ಹೈನುಗಾರಿಕೆ ಆರಂಭಿಸಿ ಗವಳಿಗರಾದರೆ, ಫಲವತ್ತಾದ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆಯನ್ನು ಆರಂಭಿಸಿ ಕುಡು ಒಕ್ಕಲಿಗರಾದರು. ಇದಕ್ಕೆ ಪೂರಕವೆನ್ನುವಂತೆ 'ತಗರಪವಾಡ'ದಲ್ಲಿ

ಕಂದ ನೀ ಕುಡಿವೊಕ್ಕಲಿಗ ಕುರಿಗೂಡಿದ ಕಾರಣ
ದಿಂದ ಕುರುಬಗೌಡನಾಗಿ
ನಿನ್ನಯ ಕುಲದೈವ ಬೀರಬೀರಯ್ಯಗೆ
ಮುಂದೆ ಒಕ್ಕಲು ಆಗಿ ಬದುಕು[೧೭೬] (ಸಂಧಿ ೨ ಪದ್ಯ ೫೮)

ಎಂಬ ಪದ್ಯ ಲಭ್ಯವಾಗುತ್ತದೆ. ಈ ಪದ್ಯದಲ್ಲಿ ಶಿವನು ಉಂಡಾಡು ಪದ್ಮಣ್ಣನಿಗೆ ಹೇಳುತ್ತಿರುವುದರಿಂದ ಆದಿಗೊಂಡ ಮತ್ತು ಅವನ ಮಕ್ಕಳೆಲ್ಲ ಕುಡುಒಕ್ಕಲಿಗರೆಂಬುದು ಸ್ಪಷ್ಟ.

ಈ ಪದದ ನಿಷ್ಪತ್ತಿಯನ್ನು ಬೇರೆ ರೀತಿಯಲ್ಲಿ ಹೇಳಲಾಗುತ್ತದೆ. ಕುಡು ಒಕ್ಕಲಿಗ ಎಂಬ ವಿಗ್ರಹವಾಕ್ಯ ಮಾಡಿದರೆ ಕುಡು ಎನ್ನುವುದು ಒಕ್ಕಲುತನದ ಒಂದು ಉಪಕರಣವಾಗಿರುವುದರಿಂದ ಒಕ್ಕಲಿಗನಿಗೆ ಹೊಂದುತ್ತದೆ. ವ್ಯವಸಾಯದಲ್ಲಿ ಕುಡುವನ್ನು ಉಪಯೋಗಿಸುವ ಒಕ್ಕಲಿಗನು ಕುಡುವೊಕ್ಕಲಿಗನಾಗುವನೆಂದು ಸರಳವಾಗಿ ಅರ್ಥೈಸಬಹುದು. ಶಂಬಾ ಜೋಶಿಯವರು 'ಕುಡು' ಎಂದರೆ ಒಕ್ಕಲಿಗ ಎಂಬ ಅರ್ಥ ಕೊಟ್ಟು ಕುಡು ಒಕ್ಕಲಿಗ ಎರಡೂ ಸಮಾನಾರ್ಥಕಗಳೆನ್ನುತ್ತಾರೆ.

ಹನುಮಂತಯ್ಯನವರು ಕುಡುಒಕ್ಕಲಿಗರ ವೃತ್ತಿ ಒಕ್ಕಲುತನ(ವ್ಯವಸಾಯ). ಇವರ ಹೆಸರಿನ ಕೊನೆಯಲ್ಲಿ ಕುರುಬರಂತೆಯೇ 'ಗೌಡ' ಎಂಬ ಪದ ಇರುತ್ತದೆ. ಈ ಪಂಗಡದ ಅನೇಕ ಮಹನೀಯರೂ, ವಿಭೂತಿಗಳು, ದೇಸಾಯಿ, ದೇಶಪಾಂಡೆಗಳು, ಸಣ್ಣ ಪುಟ್ಟ ಸಂಸ್ಥಾನಿಕರೂ, ಜಹಗೀರ್‌ದಾರರೂ ಶ್ರೀಮಂತರೂ ದಾನವೀರರೂ ಹುಟ್ಟಿ ಈ ಮತವನ್ನು ಪವಿತ್ರಗೊಳಿಸಿದ್ದಾರೆ ಎಂದು ಹೇಳಿದ್ದಾರೆ.

ವೀರಶೈವ ಮತಸ್ಥಾಪಕನಾದ ಶ್ರೀ ಸಿದ್ಧರಾಮೇಶ್ವರನು ಈ ಕುಡಿಯ ಕುಲದವನೇ ಎಂದಿದ್ದಾರೆ. ಕೊಕಟನೂರು, ತೊರಗಲ್ಲು, ನವಲಗುಂದ(ಶಿರಸಂಗಿ) ಈ ದೇಸಾಯಿಗಳೆಲ್ಲರೂ ಕುಡಿವಕ್ಕಲಿಗರ ಮನೆತನಕ್ಕೆ ಸೇರಿದವರು ಎಂಬುದು ತಿಳಿದುಬಂದಿದೆ.

೪. ತೆಲುಗು ದೇಶದ ಗೊಲ್ಲರು

ಹನುಮಂತಯ್ಯನವರು ಕುರುಬರ ಚರಿತ್ರೆ ಕೃತಿಯಲ್ಲಿ ಆಂಧ್ರಪ್ರದೇಶದಲ್ಲಿ ಕುರುಬರನ್ನು ಕರೆಯುವ ಭಿನ್ನ, ಭಿನ್ನ ಹೆಸರುಗಳನ್ನು ಪರಿಚಯಿಸಿ ಅವುಗಳ ಪದನಿಷ್ಪತ್ತಿಯನ್ನು ಹೇಳಿರುವುದು ಕಂಡುಬರುತ್ತದೆ. ಈ ಕೃತಿಯಲ್ಲಿಯೂ ಅವುಗಳನ್ನೇ ಮುಂದುವರೆಸಿ ಗೊಲ್ಲರ ಮೂಲ ಮತ್ತು ಅವರಲ್ಲಿರುವ ಬೆಡಗುಗಳನ್ನು ಕುರಿತು ಚರ್ಚಿಸಿರುವುದು ಕಂಡುಬಂದಿದೆ.

ಸಾಮಾನ್ಯವಾಗಿ 'ಗೊಲ್ಲ' ಎಂದರೆ ಗೋವುಗಳನ್ನು ಕಾಯುವವನು ಎಂದು. ಸಂಸ್ಕೃತದ 'ಗೋಪಾಲ'ದಿಂದ ಕನ್ನಡದ ಗೊಲ್ಲ ಶಬ್ದ ರೂಪಗೊಂಡಿದೆ. ಗೋಪಾಲಕನನ್ನು ಗೊಲ್ಲ ಎಂದು ಕರೆಯುತ್ತಾರೆ.[೧೭೭]

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟು 'ಗೊಲ್ಲ' ಎಂಬ ಪದಕ್ಕೆ ಸರಾಪನ ಹಣದ ಚೀಲ ಒಯ್ಯುವ ಅಧಿಕಾರಿ ಇಲ್ಲವೇ ಸೇವಕ, ದನ ಕಾಯುವವನು, ಒಂದು ದೇಶದ, ಎಂಬ ಮೂರು ಅರ್ಥಗಳನ್ನು ಹೇಳಿದೆ. ಗೊಲ್ಲರು ರಾಜಭಂಡಾರದ ಸಂರಕ್ಷಕರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಅನೇಕ ಉಲ್ಲೇಖಗಳು ದೊರೆಯುತ್ತವೆ. 'ಬಾಗಿಲು ಕಾಯ್ದಿರ್ದ ಗೊಲ್ಲಗೆ ವೆಚ್ಚಕ್ಕೆ ಒಡೆತನವುಂಟೇ ಅಯ್ಯ' ಎಂಬ ಚನ್ನಬಸವಣ್ಣನವರ ವಚನವನ್ನು ನೋಡಬಹುದು. ಇವರು ಬಂಡಾರಕ್ಕೆ 'ಬೀಗಮುದ್ರೆ' ಮಾಡಿಕೊಂಡು ಕಾಯುತ್ತಿದ್ದುದರಿಂದ ಇವರನ್ನು 'ಬೀಗಮುದ್ರೆ' ಗೊಲ್ಲರು ಎಂದು ಕರೆಯುತ್ತಾರೆ. ಕಾವ್ಯಗಳಲ್ಲಿ ಇವರನ್ನು ಬಾಗಿಲು ಗೊಲ್ಲರು ಎಂದು ಉಲ್ಲೇಖಿಸಲಾಗಿದೆ. ಸರ್ಕಾರಿ ಟ್ರೆಜರಿ ವಿಭಾಗದಲ್ಲಿ 'ಗೊಲ್ಲರ್' ಎಂಬ ಶಬ್ದವನ್ನು ನೋಡಿದರೆ ಹಿಂದೆ ಗೊಲ್ಲರು ಭಂಡಾರವನ್ನು ಕಾಯುತ್ತಿದ್ದುದನ್ನು ಸೂಚಿಸುತ್ತದೆ. ತೆಲುಗಿನ ಒಂದು ಶಾಸನದಲ್ಲಿ 'ಗೊಲ್ಲಮು' ಎಂಬುದಕ್ಕೆ ದೇವಾಲಯದ ಸಮಸ್ತ ಸಿಬ್ಬಂದಿ ಎಂಬ ಅರ್ಥವಿದೆ. ಕವಿ ಪಂಪನ ಕಾವ್ಯಗಳಲ್ಲಿ ಅಂಗ, ವಂಗ, ಕಳಿಂಗ, ಕೊಂಗ, ಕೊಂಕಣ, ಗೊಲ್ಲ, ಕಾಂಭೋಜ ನಾನಾದ್ವೀಪಾ ದೇಶಾಧಿಶ್ವರರುಂ(ಪಂಪಭಾರತ ೯–೯೫) ಎಂಬ ಉಲ್ಲೇಖದಲ್ಲಿ ಗೊಲ್ಲ ಎಂಬ ದೇಶವೊಂದಿರುವ ಬಗ್ಗೆ ಮಾಹಿತಿ ದೊರೆಯುತ್ತದೆ. ಆಂಧ್ರದ ಗೋವಳಕೊಂಡ> ಗೋಪಲಗೊಂಡ> ಗೋಲ್ಕೊಂಡ>ಗೋಲ್ಕಂಡ ಎಂಬ ಪ್ರದೇಶದಲ್ಲಿ ಗೊಲ್ಲರಾಜನು ಆಳುತ್ತಿದ್ದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ.[೧೨೮] ಇವರು ಊರುಗೊಲ್ಲರು. ಆಂಧ್ರಪ್ರದೇಶದಲ್ಲಿ ಕಂಡುಬರುವವರು. ಇವರ ಮಾತೃಭಾಷೆ ತೆಲುಗು. ಕಾಡುಗೊಲ್ಲರು ಕರ್ನಾಟಕದಲ್ಲಿ ಕಂಡುಬರುತ್ತಾರೆ. ಇವರ ಮಾತೃಭಾಷೆ ಕನ್ನಡ ಎಂಬುದು ತಿಳಿದು ಬಂದಿರುವ ವಿಷಯ. ಕರ್ನಾಟಕದಲ್ಲಿ ಕುರುಬರು ಹೇಗೋ ಹಾಗೆ ಆಂಧ್ರದಲ್ಲಿ ಗೊಲ್ಲರ ಬಗ್ಗೆ ಇತಿಹಾಸ ಕುರಿತು ಮಾಹಿತಿಗಳು ಸಿಗುತ್ತವೆ.

ಗೊಲ್ಲರನ್ನು ಯಾದವ, ಅಡವಿಗೊಲ್ಲ ಮತ್ತು ಗೋಪಾಲರೆಂದು ಕರೆಯುವರು. ಇತರ ಸಮುದಾಯದ ಹೆಸರನ್ನು ಸಂಸ್ಕೃತದ ಗೋಪಾಲ ಎಂಬ ಶಬ್ದದಿಂದ ಹೇಳಲಾಗಿದೆ. ಇದರರ್ಥವನ್ನು 'ಹಸುವನ್ನು ಸಾಕುವವ' ಎಂದು ಹೇಳಲಾಗುತ್ತದೆ.

'ಪಂಡಿತ ಕವಲಿ'ಯವರ ಕಸ್ತೂರಿ ಕೋಶದಲ್ಲಿ ಗೊಲ್ಲ, ಗೋವಗಳ, ಗೊಲ್ಲವಾಳಿಗ, ಗೊಲ್ಲಳ ಮತ್ತು ಗೊಲ್ಲತಿ ಈ ಶಬ್ದಗಳಿಗೆ ಕ್ರಮವಾಗಿ ಗೋಪಾಲ, ಗೋವಳ, ದನಕಾಯುವವ, ಹಾಲು–ಮೊಸರು ಮಾರುವವ, ಗೊಲ್ಲನ ಹೆಂಡತಿ ಎಂದು ಅರ್ಥೈಸಲಾಗಿದೆ.[೧೨೯]

ಗೊಲ್ಲರು ಮೂಲತಃ ಪಶುಪಾಲಕರಾಗಿದ್ದರೆಂದು ಅವರನ್ನು ಗೋಪಾಲ, ಗೋಪಿ ಎಂದು ಸಂಸ್ಕೃತದಲ್ಲಿ ಕರೆಯಲಾಗುತ್ತಿತ್ತು. ಇದು ಮುಂದೆ ಪ್ರಾಕೃತದಲ್ಲಿ ಗೋವಾಲಿಯಾಗಿ ನಂತರದಲ್ಲಿ ಗೋವಳನೆಂದು ರೂಪಾಂತರ ಹೊಂದಿ ಇದೇ ಮುಂದೆ ಗವಳಿ, ಗೌ, ಗೋಲ ಎಂದು ವಿಕಾಸ ಹೊಂದಿರಬಹುದು.

ಮೂಲಸಂಸ್ಕೃತಿಯ ಸೊಗಡನ್ನು ಬಳಸಿಕೊಂಡು ಬಂದ ಜನಸಮುದಾಯಗಳಲ್ಲಿ ಗೊಲ್ಲ ಕುರುಬರು ಪ್ರಮುಖರು. ಕಾಡಿನಲ್ಲಿ ವಾಸ ಮಾಡುತ್ತಾ ದನಗಳನ್ನು ಮೇಯಿಸುವವರಿಗೆ 'ಕಾಡುಗೊಲ್ಲರು' ಎಂದು ಕರೆಯುತ್ತಾರೆ. ಹಿಂದೆ ಈ ಕಾಯಕವನ್ನು ಮಾಡುತ್ತಿದ್ದುದು ಬಿಟ್ಟು ಊರು ಸೇರಿದವರಿಗೆ ಊರುಗೊಲ್ಲ ಎಂದು ಕರೆದಿರಬಹುದು. ಆದರೆ ಈ ಎರಡು ಗೊಲ್ಲ ಬುಡಕಟ್ಟುಗಳಿಗೆ ಅನೇಕ ಸಾಂಸ್ಕೃತಿಕ ವ್ಯತ್ಯಾಸಗಳಿವೆ. ಇವುಗಳ ಮೂಲ ಸಹ ಬೇರೆ ಬೇರೆಯೇ ಆಗಿದೆ. ಕಾಡುಗೊಲ್ಲರು ಕರ್ನಾಟಕದಲ್ಲಿ ನೆಲೆಸಿದ್ದರೆ, ಊರುಗೊಲ್ಲರು ಆಂಧ್ರಪ್ರದೇಶದಲ್ಲಿ ಹೆಚ್ಚಾಗಿದ್ದಾರೆ. ಇವರನ್ನೇ ಕುರಿತು ಹನುಮಂತಯ್ಯನವರು ಪರಿಚಯಿಸಿರುವುದು ಕಂಡು ಬಂದಿದೆ.

ಗೊಲ್ಲರ ಮೂಲ

ಹನುಮಂತಯ್ಯನವರು ಗೊಲ್ಲರ ಮೂಲ ಕುರಿತು ಈ ರೀತಿ ಪರಿಚಯಿಸಿದ್ದಾರೆ. "ರಾಕ್ಷಸರ ಗುರುವಾದ ಶುಕ್ರಾಚಾರ್ಯನೆಂಬ ಬ್ರಾಹ್ಮಣನ ಮಗಳು 'ದೇವಯಾನಿಗೂ' ಕ್ಷತ್ರಿಯನಾದ ಯಯಾತಿ ಎಂಬ ರಾಜನಿಗೆ ಹುಟ್ಟಿದವರೇ ಗೊಲ್ಲರು" ಎಂದು ಹೇಳಿದ್ದಾರೆ.[೧೮೦] ಇವರು ಅಲ್ಲಿಂದ ಬಂದು ಬೃಂದಾವನದಲ್ಲಿ ನೆಲೆಸಿ ಗೋವುಗಳನ್ನು ಸಾಕಿಕೊಂಡು ಅವುಗಳ ಹೈನುಪದಾರ್ಥಗಳನ್ನು ಮಾರಿಕೊಂಡು ಜೀವನ ಮಾಡತೊಡಗಿದರು. ತರುವಾಯ ಇವರ ಜೊತೆ ಯದುವಂಶೀಯನಾದ ಶ್ರೀಕೃಷ್ಣನು ಗೊಲ್ಲತರುಣಿಯರೊಂದಿಗೆ ಕ್ರೀಡಿಸುತ್ತಾ ಇವರಲ್ಲಿ ಇರಹತ್ತಿದನು. ಇದರಿಂದ ಇವರು ಯಾದವರೆಂದು ಹೇಳಿಕೊಳ್ಳಲಾರಂಭಿಸಿದರು.

ಗೊಲ್ಲರಲ್ಲಿರುವ ಬೆಡಗುಗಳು

ಕರ್ನಾಟಕದ ಕುರುಬರಲ್ಲಿ ಹತ್ತಿಕಂಕಣ ಕುರುಬರು ಮತ್ತು ಉಣ್ಣೆಕಂಕಣಕುರುಬರು ಎಂಬ ಎರಡು ದೊಡ್ಡ ಬೆಡಗುಗಳಿರುವಂತೆ ಆಂಧ್ರದ ಗೊಲ್ಲರಲ್ಲಿಯೂ ಸಹ ಒಂಟಿ ಚಪ್ಪರದವರು ಜೋಡಿ ಚಪ್ಪರದವರು ಎಂಬ ಎರಡು ಬೆಡಗಿನವರಿರುತ್ತಾರೆ ಎಂದು ಅವರನ್ನು ಪರಿಚಯಿಸಿದ್ದಾರೆ.

ಜೋಡಿ(ಎರಡು) ಚಪ್ಪರಗಳೆಂದರೆ, ಹೆಣ್ಣಿನವರ ಮನೆಯ ಮುಂದೆ ಒಂದು ಚಪ್ಪರ, ಗಂಡಿನವರ ಮನೆಯ ಮುಂದೆ ಚಪ್ಪರ ಹಾಕುವ ಪದ್ಧತಿಯಿದೆ ಎಂಬುದನ್ನು ತಿಳಿಸಿದ್ದಾರೆ. ಈ ಎರಡು ಬೆಡಗುಗಳಲ್ಲದೇ ಇನ್ನೂ ಅನೇಕ ಬೆಡಗುಗಳನ್ನು ಸಂಗ್ರಹಿಸಿರುವುದು ಕಂಡುಬಂದಿದೆ.

ಎರ್ರಗೊಲ್ಲರು, (ಕಿಲಾರಿ), ಪುನಗು(ಕುಡಿಪೈಟಲ) ಗೊಲ್ಲರು, ಕರಣೆಗೊಲ್ಲರು, ಪೂಣೆ(ಪೂಜ) ಗೊಲ್ಲರು, ಬೀಗಮುದ್ರೆ(ಬೊಕ್ಕಸ) ಗೊಲ್ಲರು, ಕಂಚುಗೊಲ್ಲರು, ರಾಜಗೊಲ್ಲರು, ಮುಷ್ಕಿ ಗೊಲ್ಲರು, ಕುರುಪ(ಕುರುಬ) ಗೊಲ್ಲರು ಇತ್ಯಾದಿ ಬೆಡಗುಗಳಿವೆ ಎಂದು ಹೇಳಿದ್ದಾರೆ.

ಕರ್ನಾಟಕದ ಕುರುಬರಲ್ಲಿ ಕಂಡುಬರುವ ಹಂಡೆಕುರುಬರ ಹಾಗೆ ಇವರಲ್ಲಿಯೂ ಬೊಕ್ಕಸಗೊಲ್ಲರು ಕಂಡುಬರುತ್ತಾರೆ. ಇವರು ಪ್ರಾಚೀನ ಕಾಲದಲ್ಲಿ ಇವರ ಪ್ರಾಮಾಣಿಕತನ ಮತ್ತು

ಧೈರ್ಯ ದಕ್ಷತೆಗಳನ್ನು ತಿಳಿದು ಸರ್ಕಾರದವರು ಇವರನ್ನೇ ಖಜಾನೆ(ಭಂಡಾರ)ಗಳ ನೌಕರಿಗಳಲ್ಲಿ ಸೇರಿಸಿಕೊಂಡಿರುವುದರಿಂದ ಇವರಲ್ಲಿ ಬೀಗಮುದ್ರೆ ಮತ್ತು ಭಂಡಾರಗೊಲ್ಲರು ಪ್ರಸಿದ್ಧಿ ಹೊಂದಿದ್ದರು ಎಂಬುದು ತಿಳಿದುಬರುತ್ತದೆ.

ವೃತ್ತಿ

ಕರ್ನಾಟಕದ ಕುರುಬರಂತೆ ಇವರೂ ಸಹ ಪಶುಪಾಲನೆ, ವ್ಯವಸಾಯ, ವಿವಿಧ ಉದ್ಯೋಗಗಳಲ್ಲಿ ತೊಡಗಿರುವುದು ಕಂಡುಬರುತ್ತದೆ. ಮುಸಲ್ಮಾನರ ಆಕ್ರಮಣ ಕಾಲದವರೆಗೂ ಗೋಲ್ಕೊಂಡ(ಗೋವಳರ ಬೆಟ್ಟ)ವನ್ನು ಆಳಿದವರು ಈ ಗೊಲ್ಲ ರಾಜರೇ. ಇದರಿಂದ ಇದಕ್ಕೆ ಗೋಲ್ಕೊಂಡ ಎಂಬ ಹೆಸರುಂಟಾಯಿತೆಂದು ಹೇಳಿರುವುದು ತಿಳಿದುಬಂದಿದೆ.

೫. ದ್ರಾವಿಡ(ತಮಿಳು) ಕುರುಬರು

ದ್ರಾವಿಡ ಎಂಬ ಪದದ ಅರ್ಥ ತಮಿಳು ಎಂದಷ್ಟೇ ಇದ್ದರೆ ಈ ಪದದ ಬಳಕೆ ಪೂರ್ವ ವೇದಗಳಲ್ಲಿ ಎಲ್ಲೂ ಸಿಗುವುದಿಲ್ಲ. ಅಲ್ಲಿ ಸಿಗುವುದು 'ಅಂದಕ' ಎಂಬ ಪದ. ಕುರುಂಬರು ದ್ರಾವಿಡ ಪೂರ್ವ ಜನಾಂಗ. ಆಸ್ಟ್ರೋ ಏಶಿಯಾಟಿಕ್ ಶಾಖೆಗೆ ಸೇರಿದವರು ಎಂದು ಕೆಲ ಸಂಶೋಧಕರ ಅಭಿಪ್ರಾಯ. ತಮಿಳು ಕಾವ್ಯಗಳಲ್ಲಿ ಹಟ್ಟಿಕಾರರನ್ನು 'ಕುರುನಿಲ ಮನ್ನೆಯರ್' ಎಂದು ವರ್ಣಿಸಲಾಗಿದೆ. ಆದ್ದರಿಂದ ದ್ರಾವಿಡ ಎಂದರೆ ಕುರುಬ ಎನ್ನುವುದೇ ಸತ್ಯ. ದ್ರಾವಿಡರು ಭಾರತದ ಮೂಲನಿವಾಸಿಗಳೆಂದು ಸರ್ದಾರ್ ಪಣಿಕ್ಕರ್ ಹೇಳುತ್ತಾರೆ.

ಭಾರತದ ಪ್ರಾಚೀನ ಜನಾಂಗವಾದ ದ್ರಾವಿಡ ಕುರುಂಬರನ್ನು ಕುರುಬರ ಚರಿತ್ರೆ ಕೃತಿಯಲ್ಲಿ ಚರ್ಚಿಸಿರುವುದು ಕಂಡುಬರುತ್ತದೆ. ಈ ಕೃತಿಯಲ್ಲಿ ಅದೇ ವಿಷಯವನ್ನು ಮುಂದುವರೆಸಿ ಕುರುಬರೊಳಗೆ ಇಡೈಯರರೂ ಒಂದು ಒಳಪಂಗಡ, ಪುದುಕೋಟೆಯ ಕುರುಂಬರ ಮತವಿಚಾರ, ಕುರುಂಬರಲ್ಲಿಯ ಒಳಪಂಗಡಗಳು, ಎಡೈಯರಲ್ಲಿರುವ ಒಳಭೇದಗಳು ಮತ್ತು ಕುರುಂಬರ ಇಪ್ಪತ್ತನಾಲ್ಕು ಕೋಟೆಗಳ ಹೆಸರು ಕುರಿತು ಚರ್ಚಿಸಿರುವುದು ಕಂಡುಬಂದಿದೆ.

ಇತಿಹಾಸ ಸಂಶೋಧಕರು ಕುರುಂಬರನ್ನು ಕುರಿತು ಪ್ರಶಂಸಿಸಿರುವುದನ್ನು ಹನುಮಂತಯ್ಯನವರು ಈ ಕೃತಿಯಲ್ಲಿ ಈ ರೀತಿಯಾಗಿ ಪ್ರಸ್ತುತಪಡಿಸಿದ್ದಾರೆ.

Kurumbas

In one of the Mackenzee Mss. they are spoken of as a "eild people" who czred not for their lives; but we are also told that they were shepherds. weavers. time-sellers. traders. and that the kings of the cholas and the pandyas made war upon

them. The wildness of these people has, probably, been greatly exaggerated by the more timid races of the plain country of the south.

A people who built furtresses, who traded by sea and land, Who manufact ured goods and cultivated gardens, could not have been wild and uncivilized and vindictive as Arab traders now are.

Their fearfulness was their safety; finally, the kingdom of the kurumbas, known as kurumba Bhoomi, with its twent forts. which seems to have become very extensive, occupying the tract of the karnatic between the pennar and the palar and extending inlands as for as the western-ghats was overthrown by Adonda, the conquered country went, hence, by the name of Tondamandalam.

Their power, probably, survived longest in North Karnataka and in the southern hills of theat ancient country.

It was probably, from the dry lands of Karnataka, so well-suited for the parsturing of sheeo, that like the marathas in modern times. wedge wise they Originally pressed wedge-wise into the dry jungle tracts of the karnatic plain, whilst the alluvial land remained in the possession of the encroche dut wealthy races of the coast[೧೮೧] ಎಂದು ಪ್ರಸ್ತಾಪಿಸಿದ್ದಾರೆ.

ಇಡೈಯರ್

ಕುರುಬರ ಒಳಪಂಗಡವಾದ 'ಇಡೈಯರ' ಈ ಪದದ ನಿಷ್ಪತ್ತಿಯನ್ನು ಕುರಿತು ಹೇಳಿದ್ದಾರೆ. ಇರಾ, ಇಡಾ ಮತ್ತು ಇಳಾ ಎಂಬ ಶಬ್ದಕ್ಕೆ ಅನ್ನ, ಲಕ್ಷ್ಮೀ, ಅಮೃತ ಎಂದು. ಇಳಾ ಎಂದರೆ ಗೋವಿಗೂ ಅರ್ಥವಾಗುತ್ತದೆ. ಇದರಿಂದ ಇಳಾ, ಇಡಾ ಗೋವಿನ ಹಾಲಿಗೂ ಅರ್ಥ ಬರುತ್ತದೆ. ಇದರಿಂದಾಗಿ ತಮಿಳಿನಲ್ಲಿ ಗೋವಳರಿಗೆ 'ಇಡೈಯರ್' ಎಂಬ ಹೆಸರು ಇದೆ.[೧೮೨] ವೈದಿಕ ನಿಘಂಟಿನಲ್ಲಿ ಅಂಧಃ ಎಂದರೆ ಅನ್ನ ಮತ್ತು ಹಾಲು ಎಂದು ಹಾಲುಮತದಲ್ಲಿ ಅಂಡರರು, ಅಂಡೆ(ಹಂಡೆ)ಯವರು ಎಂಬ ಪಂಗಡವಿದೆ. ಹಂಡೆ ಎಂದರೆ ತಾಮ್ರದ ದೊಡ್ಡ ಪಾತ್ರೆ, ಪಶುಪಾಲನೆ ಮತ್ತು ಕೃಷಿಯನ್ನು ತಮ್ಮ ಮೂಲವೃತ್ತಿಯನ್ನಾಗಿ ಮಾಡಿಕೊಂಡಿದ್ದ ಈ ಜನಾಂಗ ನೀರು ತುಂಬಲು, ಹಾಲು ಸಂಗ್ರಹಿಸುವುದಕ್ಕಾಗಿ ಹಂಡೆಯನ್ನು ಬಳಸಿದ್ದರಿಂದ ಈ ಹೆಸರು

ಬಂದಿರಬಹುದೆಂಬುದು ಕೆಲವರ ಅಭಿಮತ. ಈ ಪದದ ಅರ್ಥವನ್ನು ಶಂಬಾ ಜೋಶಿಯವರು ತಮಿಳು ಮೂಲದಿಂದ ಹುಡುಕುವ ಪ್ರಯತ್ನವನ್ನು ಮಾಡಿದ್ದಾರೆ. ಸಂಸ್ಕೃತ ಹಾಗೂ ತಮಿಳಿನಲ್ಲಿ ಅಂಡೆ ಅಂದರೆ ಆಮ್ಮೆ. ಇದರೊಳಗಿನ ಅಮ್ ಪದವು ಹಾಲು ರಸಾರ್ಥಿ ಸೂಚಕವಿರುವುದಾಗಿ ತಮಿಳು ನಿಘಂಟುವಿನಿಂದ ತಿಳಿದುಬರುತ್ತದೆ. ಇನ್ನು ಮುಂದುವರೆದು ಅವರು ತಮಿಳುನಾಡಿನ ಕುರುಂಬ ಜನಾಂಗದಲ್ಲಿ ಅಂಡರ್, ಇಡೈಯರ್ ಎಂಬ ಉಪ ಪಂಗಡಗಳಿವೆ. ಅಂಡರ್ ಎಂಬುದೇ ಅಂಡೆ ಎಂದು ಬಳಕೆಗೆ ಬಂದಂತಿದೆ. ಕಾಲಕ್ರಮೇಣ ಈ ಪದದೊಂದಿಗೆ ಕುರುಬ ಎಂಬುದನ್ನು ಸೇರಿಸಿ ಅಂಡೆ ಕುರುಬ>ಹಂಡೆ ಕುರುಬ ಎಂಬ ರೂಪಗಳು ಹುಟ್ಟಿಕೊಂಡಂತಿವೆ. ಅಲ್ಲದೆ ತಮಿಳು ಪ್ರಾಚೀನ ಸಾಹಿತ್ಯಕೃತಿ ಶಿಲಪ್ಪದಿಗಾರಂನಲ್ಲಿ ಇಡೈಯರ್, ಅಂಡರ್ ಕುರುಂಬರ್ ಎಡುಗರ್ ಎಂಬ ಉಲ್ಲೇಖಗಳು ಬಂದಿರುವುದರಿಂದ ಈ ಜನಾಂಗವು ಕ್ರಿ.ಶ. ೨ನೆಯ ಶತಮಾನಕ್ಕೆ ಮೊದಲೇ ಅಸ್ತಿತ್ವವನ್ನು ಹೊಂದಿದ್ದರು ಎಂದು ಡಾ. ಎಂ.ಎಂ.ಕಲಬುರ್ಗಿ ಅವರು ಅಭಿಪ್ರಾಯ ಪಟ್ಟಿದ್ದಾರೆ.[೧೮೩]

ಕುರುಂಬರ ಮತಾಚಾರಗಳು

ಕುರುಂಬರು ಮುಖ್ಯವಾಗಿ ಶೈವಸಂಪ್ರದಾಯಗಳು ಮತ್ತು ಈಶ್ವರಾರಾಧಕರು ಕೂಡ. ಇವರು ನಡುವಿಗೆ ಧಟ್ಟಿಗಳನ್ನು ಸುತ್ತುವರು. ಹೆಂಗಸರು ತಲೆಯ ಮೇಲೆ ಮುಸುಕನ್ನು ಹಾಕುವರು. ಹಣೆಗೆ ವಿಭೂತಿಯನ್ನು ಧರಿಸುವರು. ಶೈವಸಂಪ್ರದಾಯಿಗಳಾದರೂ ಲಿಂಗಧಾರಿಗಳಲ್ಲ. ಇವರ ಕುಲದೇವತೆಗಳು ಕುರಿ ಬೆಟ್ಟರಾಯ, ಹಿರಿಯದೇವ ಮತ್ತು ಮಸಣೆ ಇವೇ ಇವರ ದೇವ ದೇವತೆಗಳು.

ಇವರ ನಿವಾಸಸ್ಥಾನಗಳಿಗೆ ಆಡಿ, ಮೊಟ್ಟೆ, ಕಂಬೈ, ಪುಲಕಂಬೈ, ಮಂಜಿಕಂಬೈ ಎಂಬ ಹೆಸರುಗಳಿವೆ. ಇವರ ಮುಖಂಡನಿಗೆ 'ಮುಪ್ಪನ್ನ' ಮತ್ತು 'ಮೊದಲಿ' ಎಂಬ ಹೆಸರುಗಳಿವೆ. ಇವರ ಹೆಸರ ಕೊನೆಯಲ್ಲಿ ಗೌಂಡರ, ನಾಯಕರ, ಕೋಪನ್, ಕೋನಾರ್, ಮಂದರಿ ಎಂಬ ಗೌರವ ಶಬ್ದಗಳಿರುತ್ತವೆ ಎಂದು ತಿಳಿಸಿದ್ದಾರೆ.

ಇವರಲ್ಲಿ ತೊನ್ನು-ಕುಷ್ಠ ಮುಂತಾದ ಭಯಂಕರ ರೋಗಗಳಿಂದ ಸತ್ತವರನ್ನು ಸುಡುತ್ತಾರೆ. ಒಳ್ಳೆಯವರನ್ನು ಹೂಳುತ್ತಾರೆ. ಮದುವೆಯಿಲ್ಲದವರು ಸತ್ತರೆ ಅವರನ್ನು ವೀರಕಾರರೆಂದು ಭಾವಿಸಿ ವರ್ಷಕ್ಕೊಮ್ಮೆ ತಮ್ಮ ಮನೆಗಳಲ್ಲಿ ಹಬ್ಬದ ದಿವಸ ಪೂಜಿಸುತ್ತಾರೆ.

ಇವರು ತಿರುಮಕೂಡಲು ನರಸೀಪುರದ ತಾಲೂಕಿನ ಮುಡುಕುತೊರೆಯೆಂಬ ಕ್ಷೇತ್ರದಲ್ಲಿ ನೆಲೆಸಿರುವ ಶ್ರೀ ಮಲ್ಲಿಕಾರ್ಜುನನಿಗೆ ನಡೆದುಕೊಳ್ಳುತ್ತಾರೆ. ಈ ದೇವರ ಜಾತ್ರೆಯು ಪ್ರತಿವರ್ಷ

ಫೆಬ್ರವರಿ ತಿಂಗಳಲ್ಲಿ ಕಾವೇರಿ ನದಿಯ ದಂಡೆಯ ಮೇಲೆ ನಡೆಯುತ್ತದೆ ಎಂದು ಮತ್ತು ಈ ಜಾತ್ರೆಯಲ್ಲಿ ದನಗಳ ಪರಿಸೆಯೂ ನಡೆಯುತ್ತದೆಂದು ಪರಿಚಯಿಸಿದ್ದಾರೆ.

ಹೀಗೆ ದ್ರಾವಿಡ ಕುರುಬರನ್ನು ಕುರಿತು ಸಂಕ್ಷಿಪ್ತವಾಗಿ ಪರಿಚಯಿಸಿರುವುದು ಕಂಡುಬಂದಿದೆ.

೬. ದನಗಾರರು

ಕುರುಬ ಎಂಬ ಪದಕ್ಕೆ ಪರ್ಯಾಯಪದ ಮಹಾರಾಷ್ಟ್ರ, ಮಧ್ಯಪ್ರದೇಶ ರಾಜ್ಯಗಳಲ್ಲಿ ಕುರುಬರಿಗೆ ದನಗಾರರೆಂದು ಕರೆಯಲಾಗುತ್ತದೆ. ಅಷ್ಟೇ ಏಕೆ ಕರ್ನಾಟಕದ ಬೆಳಗಾವಿ, ಉತ್ತರಕನ್ನಡ ಧಾರವಾಡ ಜಿಲ್ಲೆಗಳಲ್ಲಿಯ ಕೆಲವು ಕುರುಬರಿಗೆ 'ದನಗರ' ಎಂದೇ ಸಂಬೋಧಿಸಲಾಗುತ್ತದೆ. ದನಗಳನ್ನು ಇಟ್ಟುಕೊಂಡು ಸಾಕುವವರಿಗೆ 'ದನಗಾರ'ರೆಂದು ಹೆಸರಾಯಿತು ಎಂದು ಕುರುಬರ ಚರಿತ್ರೆ ಕೃತಿಯಲ್ಲಿ ಹೇಳಲಾಗಿತ್ತು. ಈ ಕೃತಿಯಲ್ಲಿಯೂ ಸಹ ಅದನ್ನೇ ಮುಂದುವರೆಸಿರುವುದು ಕಂಡುಬಂದಿದೆ.

ಎಡ್ಗರ್ ಥರ್ಸ್ಟನ್ ಅವರು 'ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ' ಗ್ರಂಥದಲ್ಲಿ "Dhanagar or Donigar is recorded in the madras census report 1901, as a marathi caste of shephered and cattle breeders. I gather from a note (Gezettear of the Bombay presidency, XV. part 1, 1883) on the Dhanagar of kanara district in the Bombay presidency, that the word Dhanagaris generally derived from the sanskrit Dhenu, a cow their homespech is marathi but they can speech kanarese they keep a special breed of cows and buffeloes, known a Dhanagar Mhasis and Dheonagar gavlis which are the largest cattle in kanara, many of shivaji's infantry were satar Dhanagars"[೧೮೪] ಎಂದು ವಿವರಿಸಿದ್ದಾರೆ.

ಅಂದರೆ ದನಗರ ಗವಳಿಗರು ಉತ್ತರ ಕನ್ನಡ ಜಿಲ್ಲೆಯಲ್ಲಿ ಆಕಳು ಎಮ್ಮೆಗಳನ್ನು ಸಾಕಿಕೊಂಡು ಹೈನುಗಾರಿಕೆಯನ್ನು ಮಾಡುವವರಾಗಿದ್ದಾರೆ. ಇದು ಅವರ ವೃತ್ತಿಯಾಗಿದ್ದು, ಕರ್ನಾಟಕದ ವಿಶಿಷ್ಟ ಬುಡಕಟ್ಟುಗಳಲ್ಲಿ ಒಬ್ಬರಾಗಿದ್ದಾರೆ. ಗವಳಿಗರು ದಟ್ಟವಾದ ಸಾಂಸ್ಕೃತಿಕ ಅನನ್ಯತೆಯನ್ನು ರೂಪಿಸಿಕೊಂಡು ಭಾಷೆ, ವೃತ್ತಿಜೀವನ ಕ್ರಮದಲ್ಲಿ ಇತರರಿಗಿಂತ ಪ್ರತ್ಯೇಕವಾದ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ಕರ್ನಾಟಕದ ಅನೇಕ ಸಮುದಾಯಗಳು ಪ್ರತ್ಯೇಕ ಗುಂಪುಗಳಾಗಿ ಬದುಕುತ್ತ ತಮ್ಮ ಜೀವನಕ್ರಮ ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬರುವಲ್ಲಿ ಸದಾ ಪ್ರಯತ್ನಶೀಲವಾಗಿರುತ್ತದೆ.

ಹನುಮಂತಯ್ಯನವರು ಸಹ್ಯಾದ್ರಿ ಪ್ರಾಂತಗಳಲ್ಲಿ ವಾಸಮಾಡುವವರು 'ಡಾಂಗೆ ಧನಗಾರರು' ಎಂದು ಕರೆಯಲ್ಪಡುವರು. ಇವರು ಪಶುಪಾಲನೆಯನ್ನು ಮಾಡಿಕೊಂಡು ಹಾಲು, ಮೊಸರು,

ತುಪ್ಪ ಮುಂತಾದ ಹೈನುಪದಾರ್ಥಗಳನ್ನು ಮಾರಿಕೊಂಡು ಜೀವನ ಮಾಡುವರು. ಇವರಿಗೆ 'ಗವಳಿ ದನಗಾರರು'[೧೮೫] ಎಂದು ಹೆಸರಿರುತ್ತದೆ ಎಂದು ಹೇಳಿದ್ದಾರೆ.

ಈ ಗವಳಿಗರು ಒಂದು ಶತಮಾನದ ಹಿಂದೆ ಮಹಾರಾಷ್ಟ್ರ ಮತ್ತು ಗೋವಾದಿಂದ ಕರ್ನಾಟಕಕ್ಕೆ ವಲಸೆ ಬಂದವರಾಗಿದ್ದಾರೆ. ಮೂರ್‍ನಾಲ್ಕು ತಲೆಮಾರುಗಳಿಂದ ಕರ್ನಾಟಕದಲ್ಲಿಯೇ ವಾಸಿಸುತ್ತಿರುವ ಬಗ್ಗೆ ಮಾಹಿತಿ ದೊರೆಯುತ್ತದೆ. ಕರ್ನಾಟಕ ಅನೇಕ ಸಮುದಾಯಗಳ ಮೂಲವನ್ನು ಮರೆತಿರುವಾಗ ಗವಳಿಗರು ಮಾತ್ರ ತಮ್ಮ ಮೂಲನೆಲೆ ಮತ್ತು ವಂಶಜರು, ಬಂಧುಬಾಂಧವರನ್ನು ನೆನಪಿಸಿಕೊಂಡು ಪದೇ ಪದೇ ಹೋಗಿಬರುತ್ತಾರೆ. ಮಹಾರಾಷ್ಟ್ರದ ಖಂಡೋಬಾ ಹಾಗೂ ಇತರೆ ದೈವಗಳ ಆರಾಧನೆಯಲ್ಲಿ ತೊಡಗಿರುವ ಇವರು ತಮ್ಮನ್ನು ದನಗರ(ದಂಗರ್) ಎಂದು ಕರೆದುಕೊಳ್ಳುತ್ತಾರೆ. ಕನ್ನಡಿಗರು ಇವರನ್ನು ಗೌಳಿಗರು ಎಂದು ಕರೆಯುತ್ತಾರೆ. ಮಹಾರಾಷ್ಟ್ರದ ದನಗಾರರಲ್ಲಿ ಇಪ್ಪತ್ತೆರಡು ಒಳಭೇದಗಳಿದ್ದು, ಎರಡು ಪ್ರಮುಖ ಪಂಗಡಗಳಿವೆ. ಅವೆಂದರೆ ಹಟ್ಟಿಕಾರ ದನಗಾರರು ಮತ್ತು ಬಾರ್ಗಿ ದನಗಾರರು. ಈ ಎರಡು ಪಂಗಡಗಳವರು ಮುಖ್ಯವಾಗಿ ಯುದ್ಧೋಪಜೀವಿಗಳು. ಶ್ರೀ ಶಿವಾಜಿ ಮಹಾರಾಜನ ಆಪ್ತ ಸೈನ್ಯಾಧಿಕಾರಿಗಳೆಲ್ಲರೂ ಈ ಪಂಗಡದವರೇ ಆಗಿದ್ದರೆಂದು ಚರಿತ್ರಾದಿಗಳಿಂದ ತಿಳಿದುಬರುತ್ತದೆ. ಮತ್ತು ಈತನ ತಾತ ಅಂದರೆ ತಾಯಿಯ ತಂದೆ ದೇವಗಿರಿಯ ಯಾದವರು ಈ ಬಾರಗಿ ಧನಗಾರರ ವಂಶಕ್ಕೆ ಸೇರಿದವನೆಂದು ಹೇಳುತ್ತಾರೆ. ಹಾಗೂ ಇಂದೂರಿನ ಶ್ರೀಮನ್ಮಹಾರಾಜರು ಸಹ ಈ ಪರಮಪವಿತ್ರ(Noble race)ವಾದ ದನಗಾರ ಸಮಾಜಕ್ಕೆ ಸೇರಿದವರು ಎಂಬ ಅಭಿಪ್ರಾಯವಿದೆ.

ಮಹಾರಾಷ್ಟ್ರದ ದನಗಾರರೊಳಗೆ ಸುಮಾರು ೧೧೮ ಗೋತ್ರಗಳಿವೆ ಎಂದು ಹನುಮಂತಯ್ಯನವರು ಹೇಳಿದರೆ, ಚಂದ್ರಕಾಂತ ಬಿಜ್ಜರಗಿ ಅವರು ಮಹಾರಾಷ್ಟ್ರದ ತುಂಬ ಕ್ಷೇತ್ರಕಾರ್ಯವನ್ನು ಕೈಗೊಂಡು ಬೆಡಗುಗಳನ್ನು ಸಂಗ್ರಹಿಸಿ ಸುಮಾರು ೪೨೮ ಬೆಡಗುಗಳನ್ನು ಹೇಳಿದ್ದಾರೆ. ಮಹಾರಾಷ್ಟ್ರದ ಕುರುಬರು ಮರಾಠ ಮತ್ತು ಕ್ಷತ್ರಿಯರಲ್ಲಿ ಹರಿದು ಹಂಚಿ ಹೋಗಿದ್ದರಿಂದ ಈ ಎಲ್ಲಾ ಜಾತಿಯ ಬೆಡಗುಗಳು ಮೂಲದಲ್ಲಿ ಕುರುಬರ ಬೆಡಗುಗಳಾಗಿಯೇ ಇರುವುದರಿಂದ ಇವುಗಳನ್ನು ಅಧಿಕೃತ ಕುರುಬರ ಬೆಡಗುಗಳೆಂದೇ ಪರಿಗಣಿಸಿ, ಕುರುಬರ ಬೆಡಗುಗಳು ೮೦% ಕ್ಷತ್ರಿಯ ಮತ್ತು ಮರಾಠರ ಗೋತ್ರಗಳಂತೆಯೇ ಭಾಸವಾಗುತ್ತವೆ. ಕ್ಷತ್ರಿಯ ಮತ್ತು ಮರಾಠರು ಕುರುಬ ಮೂಲದವರಾಗಿದ್ದಾರೆ ಎನ್ನುವುದಕ್ಕೆ ಈ ಬೆಡಗುಗಳು ಆಧಾರಗಳನ್ನು ಒದಗಿಸುತ್ತವೆ ಎಂದು ವ್ಯಕ್ತಪಡಿಸಿದ್ದಾರೆ.

ದನಗಾರರ ಮತಾಚಾರಗಳೆಲ್ಲವೂ ಮರಾಠ ಕುಣಬಿಗಳ ಮತಾಚಾರವನ್ನು ಹೋಲುತ್ತವೆ. ಇವರು ಪಶುಪಾಲನೆಯನ್ನಷ್ಟೇ ಅಲ್ಲದೇ ಕರ್ನಾಟಕ ಕುರುಬರಂತೆ ಎಲ್ಲಾ ಕಸುಬು ಕೈಗಾರಿಗಳನ್ನು ಮತ್ತು ಸರಕಾರಿ ಕೆಲಸಗಳಲ್ಲಿ ನಿರತರಾಗಿರುವುದನ್ನು ತಿಳಿಸಿದ್ದಾರೆ.

ಹಟ್ಟಿಕಾರ ದನಗಾರರು

ಹಟ್ಟಿಕಾರ ದನಗಾರರನ್ನು ಕುರಿತು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಈ ಪಂಗಡದ ಇತಿಹಾಸವು ತುಂಬಾ ಪ್ರಶಂಸನೀಯವಾದುದು. ಇವರ ಧೈರ್ಯ, ಸ್ಥೈರ್ಯ, ಶೌರ್ಯ, ಪ್ರತಾಪಗಳು ಇವರು ಹಿಂದುಸ್ತಾನದಿಂದ ಹನ್ನೆರಡು ಕುಟುಂಬಗಳಾಗಿ ಬಂದು ಮಹಾರಾಷ್ಟ್ರ ರಾಜ್ಯದಲ್ಲಿ ನೆಲೆಸಿದರು. ಇದರಿಂದ ಇವರಿಗೆ 'ಬಾರಾಹಟ್ಟಿಕಾರರು' ಅಂದರೆ ಹನ್ನೆರಡು ಹಟ್ಟಿಗಳನ್ನು ಸ್ಥಾಪಿಸಿದ್ದರಿಂದ ಈ ಹೆಸರು ಬಂದಿದೆ. ಅಂದಿನ ಹಟ್ಟಿಗಳೇ ಇಂದಿನ ಊರು, ಗ್ರಾಮಗಳಾದವು. ಈಗ ಈ ಹನ್ನೆರಡು ಹಟ್ಟಿಕಾರ ಕುಟುಂಬಗಳಲ್ಲಿ ಮೂರು ಕುಟುಂಬಗಳು ಮಾತ್ರ ಉಳಿದಿವೆ. ಅವು ೧. ಪೊಲಿ, ೨. ಗುರ್ಡಿ ಮತ್ತು ೩. ಮುಸಿ. ಈ ಮೂರು ಸೈನ್ಯದಲ್ಲಿ ಪದಾತಿಗಳು ಎಂದರೆ Foot men ಎಂದು ಹೇಳಿದ್ದಾರೆ.

ಹಟ್ಟಿಕಾರ ದನಗಾರರಲ್ಲಿ ಸುಪ್ರಸಿದ್ಧರಾದವರು

೧. ಬಜಾಜಿ ನಾಯಕ ನಿಂಬಾಳಕರ(ಇವರು ವೈಠಣದ ಅಧಿಕಾರಿ ಮತ್ತು ಶ್ರೀ ಶಿವಾಜಿ ಮಹಾರಾಜನ ಮಾವನವರು ಎಂದು ತಿಳಿಸಿದ್ದಾರೆ).

೨. ನವಸಾಜಿ ನಾಯಕ ಮುಕ್ಕಿ(ಹಿಂಗೋಲಿ ಜಹಗೀರದಾರ)

೩. ಲಕ್ಷ್ಮಣರಾವ ನಾಯಕ್ ಗುರ್ಡಿ(ಹತ್)

೪. ಜಂಬೀರ್ ರಾವ್ ಹಿಂಗೋಲಿ

೫. ಶ್ರೀಮಂತ ಮಾಮೋಜಿರಾವನಾಯಕ ಮುಂತಾದವರು ಹಟ್ಟಿಕಾರ ದನಗಾರರಲ್ಲಿ ಮುಖ್ಯವಾಗಿದ್ದರು ಎಂಬುದನ್ನು ಪರಿಚಯಿಸಿದ್ದಾರೆ.

'ಹಟ್ಟಿಕಾರ ದನಗಾರ'ರ ಆಚರಣೆಗಳನ್ನು ಕುರಿತು ಪರಿಚಯಿಸಿದ್ದಾರೆ. ಇವರಲ್ಲಿ ಅನೇಕರು ಮಧ್ಯಪಾನ ಮತ್ತು ಮಾಂಸವನ್ನು ಸೇವಿಸುವುದಿಲ್ಲ. ಸೋಮವಾರದ ದಿನ ಹೊತ್ತು ಮುಳುಗಿದ ಮೇಲೆ ಹಸು, ಎಮ್ಮೆಗಳ ಹಾಲನ್ನು ಕರೆಯುವುದಿಲ್ಲ ಮತ್ತು ಮಾರುವುದಿಲ್ಲ ಕೂಡ. ಇವರು ಕರ್ನಾಟಕದ ಕುರುಬರಂತೆಯೇ ಶ್ರೀಕೃಷ್ಣನನ್ನು ಶನಿವಾರದ ದಿನ ಪೂಜಿಸುವರು. ಆ ದಿವಸ ಹಾಲನ್ನು ಮಾರುವುದಿಲ್ಲ. ತಮ್ಮ ಕರುಗಳಿಗೆ ಬಿಟ್ಟುಬಿಡುವರು. ಯಾರಾದರೂ ಎಳೆಯ ಮಕ್ಕಳ ಸಲುವಾಗಿ ಹಾಲನ್ನು ಕೇಳಲು ಬಂದರೆ, ಅವರನ್ನು ತಮ್ಮ ಹಸುಗಳಲ್ಲಿ ಕರೆದುಕೊಂಡು ಹೋಗಿರೆಂದು ಹೇಳಿಬಿಡುತ್ತಾರೆಯೇ ಹೊರತು ಹಾಲಿನ ಬೆಲೆಯನ್ನು ತೆಗೆದುಕೊಳ್ಳುವುದಿಲ್ಲ. ಆ ದಿವಸ ತಮ್ಮ ಮನೆಯಿಂದ ಬೇರೆ ಪಂಗಡದವರಿಗೆ ಬೆಂಕಿಯನ್ನು ಸಹ ಕೊಡುವುದಿಲ್ಲ.

ಇವರ ಹಬ್ಬಗಳಲ್ಲಿ ದೀಪಾವಳಿ ಮತ್ತು ಸಂಕ್ರಾಂತಿ ಹಬ್ಬಗಳೇ ದೊಡ್ಡವು. ಈ ಎರಡು ಹಬ್ಬಗಳನ್ನು ಬಹಳ ವಿಜೃಂಭಣೆಯಿಂದ ಆಚರಿಸುವರು. ಸಂಕ್ರಾಂತಿ ಹಬ್ಬದ ದಿವಸ ಹಟ್ಟಿಕಾರರು ತಾವು ಸಾಕುವ ಹಸು, ಆಕಳು, ಕುರಿ, ಮೇಕೆ ಮೊದಲಾದವುಗಳನ್ನೆಲ್ಲಾ ತೊಳೆದು ಅವುಗಳ ಕೊಂಬಿಗೆ ವಿವಿಧ ಬಣ್ಣಗಳನ್ನು ಬಳಿದು ಅಂದವಾಗಿ ಅಲಂಕರಿಸಿ ಆನಂದಪಡುವರು. ಆಕಳುಗಳನ್ನು ಚೆನ್ನಾಗಿ ಅಲಂಕರಿಸಿ ಅರಸಿಣ ಕುಂಕುಮಗಳನ್ನು ಹಚ್ಚಿ ಹಣೆಯ ಮೇಲೆ ಕುರಿಯ ತುಪ್ಪಟ ಮತ್ತು ಅಕ್ಕಿಯ ಗಂಟನ್ನು ಕಟ್ಟುವರು. ತಮ್ಮ ಕುಲದೇವರಾದ ಶ್ರೀಕೃಷ್ಣನು ಗೋವರ್ಧನಗಿರಿಯನ್ನೆತ್ತಿ ಕೊಡೆ ಹಿಡಿದು ತಮ್ಮನ್ನು ಮತ್ತು ತಮ್ಮ ಪಶುಪ್ರಾಣಿಗಳನ್ನು ಆ ಭಯಂಕರವಾದ ಮಳೆಯಿಂದ ಸಂರಕ್ಷಿಸಿದನೆಂಬ ಭಾವವನ್ನು ಸೂಚಿಸುವಂತಹ ಗೋವರ್ಧನಗಿರಿಯ ಆಕಾರದ ವಿಗ್ರಹವನ್ನು ಮಣ್ಣಿನಲ್ಲಿ ಸೃಷ್ಟಿಸಿ, ಅದನ್ನು ಒಂದು ಬಯಲು ಪ್ರದೇಶದಲ್ಲಿರಿಸಿ, ಅಲ್ಲಿ ತಮ್ಮ ಮಂದೆಗಳನ್ನು ತುಂಬಾ ಅಟ್ಟಹಾಸದಿಂದಲೂ, ವಿನೋದದಿಂದಲೂ, ಉತ್ಸವದಂತೆ ಊರಿನ ಕಡೆಗೆ ಓಡಿಸುವರು.

ಇಷ್ಟೆಲ್ಲಾ ಆಚರಣೆಯನ್ನು ಕುರಿತು ಹನುಮಂತಯ್ಯನವರು ಬರೆದಿರುವುದನ್ನು ನೋಡಿದರೆ, ಇವರೇ ಖುದ್ದಾಗಿ ಹೋಗಿ ಅವರ ಆಚರಣೆ ಪದ್ಧತಿಗಳನ್ನು ಕಣ್ಣಾರೆ ನೋಡಿ ಬರೆದಂತಿದೆ.

ಪ್ರಾಚೀನ ಕಾಲದಲ್ಲಿ ದನಗಳಿಗೆ ಹಟ್ಟಿಗಳನ್ನು ಹಾಕಿಕೊಂಡು ತಾವೂ ಅಲ್ಲಿಯೇ ವಾಸ ಮಾಡಿಕೊಂಡಿರುತ್ತಿದ್ದುದರಿಂದ ಇವರಿಗೆ ಹಟ್ಟಿಕಾರರು ಎಂಬ ಹೆಸರುಂಟಾಯಿತು. ಆ ಹಟ್ಟಿಗಳೇ ಕ್ರಮೇಣ ಹಳ್ಳಿಗಳಾಗಿ, ಈ ಹಳ್ಳಿಗಳ ನಿವಾಸಿಗಳಿಗೆ 'ಹಳ್ಳಿಕಾರರು' ಎಂಬ ಹೆಸರುಂಟಾಗಿರುವುದು ತಿಳಿದುಬಂದಿದೆ.

ಕರ್ನಾಟಕದ ಕುರುಬರು, ಆಂಧ್ರದ ಗೊಲ್ಲರು, ದ್ರಾವಿಡದ ಕುರುಂಬರು ಮತ್ತು ಮಹಾರಾಷ್ಟ್ರದ ಧನಗಾರರ ಜೀವನವಿಧಾನ ಪದ್ಧತಿ ಕುರಿತು ಅವಲೋಕಿಸಿದಾಗ ಹೆಚ್ಚು ಕಡಿಮೆ ಒಂದೇ ರೀತಿ ಇರುವುದು ಕಂಡುಬರುತ್ತದೆ.

೨. ಗಡರಿಯರು

ಪಂಜಾಬ್, ಆಗ್ರ ಮತ್ತು ದೆಹಲಿ ಮುಂತಾದ ಪ್ರಾಂತಗಳ ಕಡೆ ಕುರುಬರನ್ನು 'ಗಡರಿಯ' ಅಥವಾ ಗಡ್ರಿ ಎಂದು ಕರೆಯುತ್ತಾರೆ. 'ಗಡರಿಯಾ' ಎಂಬ ಪದ. ಹಿಂದಿ 'ಗಡಾರ್' ಮತ್ತು ಯಾ ಸೇರಿಕೊಂಡು ಗಡರಿಯಾ ಆಗಿದೆ. ಗಡ್ಡಾರ್ ಪ್ರಾಕೃತದ ಪದ ಕುರಿ ಇದರೊಂದಿಗೆ ಸೇರುವ 'ಯಾ'ದಿಂದಾಗಿ ಇದು 'ಕುರುಬ' ಸಮುದಾಯ[೧೮೬] ಎನ್ನುವ ಅರ್ಥ ಬರುತ್ತದೆ.

ಕೆಲವು ವಿದ್ವಾಂಸರ ಪ್ರಕಾರ ಗಡಾರ ಮತ್ತು ಆರ್ಯ ಎಂಬ ಪದಗಳಿಂದಾಗಿ ಗಡಾರಾರ್ಯ ಅಥವಾ ಗಡಾರ್ಯ ಎನ್ನುವ ಪದ ಬಳಕೆಗೆ ಬಂದಿದೆ ಎನ್ನುತ್ತಾರೆ. ನಂತರ ಅದು ಗಡಾರಿಯಾ ಆಗಿರಬಹುದು. ಗಡ್ ಎಂದರೆ 'ಕೋಟೆ'. ಇವರು ಕೋಟೆಯ ರಕ್ಷಕರಾಗಿದ್ದರು. ಇದರಿಂದಾಗಿ ಅವರಿಗೆ ಗಡರಿಯಾ ಎನ್ನುವ ಹೆಸರು ಬಂದಿದೆ[೧೮೭] ಎಂಬುದು ಕೆಲವರ ಅಭಿಪ್ರಾಯ. ಇದರಂತೆಯೇ ಕನ್ನಡ ಪದ ಕುರಿಯಿಂದಾಗಿ 'ಕುರುಬ' ಎನ್ನುವ ಪದ ಬಳಕೆಗೆ ಬಂದಿರುವುದನ್ನು ಗಮನಿಸಬಹುದು.

ಗಡರಿಯಾ(ಕುರುಬ) ಅಥವಾ 'ಗ್ವಾಲಾ'(ಗೋವುಪಾಲಕ) ಎಂಬುವು ಯಾವುದೇ ಸಮುದಾಯವಾಗಿರದೆ ಬ್ರಾಹ್ಮಣರು, ಕ್ಷತ್ರಿಯರು ಮತ್ತು ಇತರ ಜಾತಿಗಳು ತೊಡಗಿರುವ ವೃತ್ತಿಗಳಲ್ಲೊಂದಾಗಿದೆ. ಮೊಘಲರ ಕಾಲದಲ್ಲಿ ಮತಾಂತರಗೊಳ್ಳುವ ಭಯದಿಂದ ಕಾಡುಗಳಿಗೆ ಹಾಗೂ ಬೆಟ್ಟಗಳಿಗೆ ಪಲಾಯನ ಮಾಡಿ ಜಾನುವಾರು ಪಾಲನೆಯನ್ನು ವೃತ್ತಿ ಮಾಡಿಕೊಂಡು 'ಅಹಿರ್' ಅಥವಾ 'ಗಡರಿಯಾ'ರೆಂದು[೧೮೮] ಕರೆಸಿಕೊಂಡರು. ಇವರು ಮೊದಲು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದರೂ ಕಾಡಿನ ವಾತಾವರಣದಿಂದಾಗಿ ಅವರ ಪರಿಸ್ಥಿತಿ ಕುಸಿಯಿತು. ಹೀಗಾಗಿ ಒಂದು ಗೌರವಾನ್ವಿತ ಸಮುದಾಯವು 'ಅಲೆಮಾರಿಗಳು' ಎಂಬಂತೆ ಕರೆಸಿಕೊಂಡು 'ಶೂದ್ರರು' ಎಂದು ಕರೆಸಿಕೊಳ್ಳುವಂತಾಯಿತು ಎಂದು ಬಿ.ಕೆ.ರವಿ ಅವರು ಹೇಳುತ್ತಾರೆ.

ಅಹೀರರು, ಗಡರಿಯರು, ಗೂಜರರು ಮತ್ತು ಗ್ವಾಲರು ಈ ನಾಲ್ಕು ಪಂಗಡದವರು ಒಂದೇ ಪಂಗಡ ಮತ್ತು ಒಂದೇ ಬುಡಕಟ್ಟಿಗೆ ಸೇರಿದವರು. ಈ ಕೆಳಗಿನ ಹಿಂದಿ ಪದ್ಯ ಮೂಲಕ ತೋರಿಸಿಕೊಟ್ಟಿದ್ದಾರೆ.

"ಅಹಿರ್, ಗಡರಿಯಾ ಗೂಜರ್ ।
ಏತೀನೋಮ್ಮೇ ಚಾಹೇ ಊಜರ್ ।
ಅಹಿದ್ ಗಡರಿಯ ಗೂಜರ ಗ್ವಾಲಾ ।
ಇನ್ ಚಾರೋಮ್ಮೇ ಹೇಲಾಮೇಲಾ ।"[೧೮೯]

ಇವರು ಕುರುಬರಂತೆ ಪಶುಪಾಲನೆ, ಕಂಬಳಿ ನೇಯ್ಗೆ, ವ್ಯಾಪಾರ, ಸೈನ್ಯ ಇತ್ಯಾದಿ ಉದ್ಯೋಗದಲ್ಲಿದ್ದರು ಎಂಬುದು ತಿಳಿದುಬಂದಿದೆ.

'ಗಡರಿಯಾ' ಜಾತಿಯೊಳಗೆ ಒಟ್ಟು ೧೧೩ ಪಂಗಡಗಳಿರುವುದನ್ನು ಹೇಳಿದ್ದಾರೆ. ಅತಿ ಪ್ರಾಚೀನ ಕಾಲದಲ್ಲಿ ಭರತವರ್ಷದ ಪಶ್ಚಿಮೋತ್ತರ ಭಾಗದಲ್ಲಿ 'ಗಡರಿಯ' ಪ್ರಾಂತವು ವಿಶೇಷವಾಗಿದ್ದಿತು. ಆ ಪ್ರಾಂತದಲ್ಲಿ ದನ, ಕುರಿ, ಮೇಕೆಗಳ ಪಶುಪಾಲನೆಗೆ ಅವಶ್ಯಕವಾದ

ಹುಲ್ಲುಗಾವಲುಗಳು ಯಥೇಚ್ಛವಾದ ನೀರು, ಶುದ್ಧ ಗಾಳಿ, ಹವೆ ಮುಂತಾದವು ಅನುಕೂಲಗಳಿದ್ದ ಪ್ರದೇಶಕ್ಕೆ 'ಗಾಂಧಾರ'ವೆಂದು ಹೆಸರು. ಕಾಬೂಲಿನ ಆಗ್ನೇಯದಲ್ಲಿದ್ದ ಪ್ರದೇಶಕ್ಕೆ 'ಗಾರ್' ದೇಶ(ಕುರಿಗಳ ದೇಶ)ವೆಂದು ಹೆಸರಿದ್ದಿತು. ಡೇರಿಯಸ್ಸನು ಕ್ರಿ.ಪೂ. ೫೧೬ನೆಯ ಸಂವತ್ಸರದ ಶಾಸನವೊಂದರಲ್ಲಿ 'ಗಾಂಧಾರ'ವೆಂಬ ಶಬ್ದವನ್ನು 'ಗಡರ' ಎಂದು ಉಲ್ಲೇಖ ಕೊಡುತ್ತಾರೆ.[೯೦]

೮. ಗಡ್ಡಿಯರು

ಇವರು ಟಿಬೆಟ್, ಕಾಂಗರಾ, ಚಾಂಬಾ ಸಂಸ್ಥಾನ ನೇಪಾಲ ಮತ್ತು ಹಿಮಾಲಯ ಪ್ರದೇಶಗಳಲ್ಲಿ ಕಂಡುಬರುತ್ತಾರೆ. ಇವರು ಔರಂಗಜೇಬನ ಆಡಳಿತ ಕಾಲದಲ್ಲಿ ಅನೇಕ ರಜಪೂತರು ತಮ್ಮ ಪವಿತ್ರ ಯಜ್ಞೋಪವೀತವನ್ನು ರಕ್ಷಿಸಿಕೊಳ್ಳಲು ಬೆಟ್ಟಗಳಿಗೆ ಓಡಿ ಹೋಗಿ ಆಶ್ರಯ ಪಡೆದರು. ಅಲ್ಲಿ ಅವರು ದನ, ಕುರಿ ಮತ್ತು ಆಡುಗಳನ್ನು ಸಾಕುವುದು ಬಿಟ್ಟರೆ ಬೇರೆ ಯಾವುದೇ ವೃತ್ತಿ ಇರಲಿಲ್ಲ. ಅವರೇ ಒಂದು ಜಾತಿಯಾಗಿ ಕಾಣಿಸಿಕೊಂಡು, 'ಗಾದಿ' ಎಂಬ ಸ್ವಂತ ಭಾಷೆಯನ್ನಾಡುತ್ತಿದ್ದರು.

ಹಿಮಾಲಯ ಪರ್ವತದಲ್ಲಿ ವಾಸ ಮಾಡುವ ಪರ್ವತವಾಸಿ ಜಾತಿಯ ಜನರಲ್ಲಿ ಗಡ್ಡಿ ಜನರೇ ಅತ್ಯಂತ ಸುಂದರರಾಗಿದ್ದರು. ಕಾಂಗಾಡ ಜಿಲ್ಲೆಯ ಕೆಳಭಾಗದಲ್ಲಿ ತರಾಯಿಯೊಳಗೆ ವಾಸ ಮಾಡುವ ಬ್ರಾಹ್ಮಣ, ಕ್ಷತ್ರಿಯ ಮೊದಲಾದವರು ರೋಗಗಳಿಂದ ನರಳುತ್ತಿದ್ದರೆ, ಈ ಗಡ್ಡಿ ಜನರು ದಷ್ಟಪುಷ್ಟರಾಗಿಯೂ ಸುಂದರರಾಗಿಯೂ ಕಾಣುತ್ತಾರೆ.

ಇವರ ಮೂಲ ನಿವಾಸಸ್ಥಾನ ಪಂಜಾಬ. ಮುಸಲ್ಮಾನರ ಆಕ್ರಮಣ ಕಾಲದಲ್ಲಿ ಭಯಪಟ್ಟು ಬಂದು ಈ ಹಿಮಾಲಯ ಪರ್ವತದಲ್ಲಿ ನೆಲೆಸಿರುವುದು ಇತಿಹಾಸದಿಂದ ತಿಳಿದುಬರುತ್ತದೆ. ಇವರಲ್ಲಿ ಇಂದಿಗೂ ತಮ್ಮ ಪ್ರಾಚೀನ ಕಾಲದ ಆರ್ಯ ಸಭ್ಯತೆಯಿರುವುದರಿಂದ ಈ ಕಾಲದ ಈ ಜನರಲ್ಲಿ ಆರ್ಯ ಸಂಸ್ಕೃತಿಯು ಇನ್ನೂ ಜೀವಿಸಿರುವುದು ಕಂಡುಬರುತ್ತದೆ.

೯. ಅಹೀರರು

ಇವರು ಪಶ್ಚಿಮ ಖಾನ್‌ದೇಶ, ನಾಸಿಕ್, ಮಹಾರಾಷ್ಟ್ರ ರಾಜ್ಯಗಳಲ್ಲಿ ಮತ್ತು ಕಚ್, ಕಾಥೇವಾಡ್, ಪಾಲನಪುರ, ಪಂಜಾಬ್, ದೆಹಲಿ ಮುಂತಾದ ಉತ್ತರ ಹಿಂದೂಸ್ಥಾನದ ಮತ್ತು ಗುಜರಾತಿನ ಪ್ರದೇಶಗಳಲ್ಲಿ ಕಂಡುಬರುತ್ತಾರೆ.

ಭಾರತ ದೇಶದಲ್ಲಿ ಎರಡು ಮುಖ್ಯ ಪಶುಪಾಲಕರ ಪಂಗಡಗಳೆಂದರೆ ದಕ್ಷಿಣ ಭಾರತದ ಕುರುಬರು ಮತ್ತು ಉತ್ತರ ಭಾರತದ ಅಹೀರರು. ದಕ್ಷಿಣ ಭಾರತದ ಕುರುಬರು ಅನೇಕ ರಾಜ್ಯಗಳನ್ನು ಅನೇಕ ಹೆಸರುಗಳಿಂದ ಸ್ಥಾಪಿಸಿ ಹೇಗೆ ಆಳಿರುವರೋ ಹಾಗೆಯೇ ಉತ್ತರ

ಭಾರತದಲ್ಲಿ ಅಹೀರರು ರಾಜ್ಯಗಳನ್ನು ಸ್ಥಾಪಿಸಿ ರಾಜ್ಯಭಾರ ಮಾಡಿದ್ದಾರೆ. ಕರ್ನಾಟಕದಲ್ಲಿ ಕುರುಬರ ಹೆಸರಿನ ಅನೇಕ ಊರುಕೇರಿಗಳಿರುವಂತೆ, ಉತ್ತರ ಭಾರತದಲ್ಲಿ ಅಹೀರರ ಹೆಸರಿನ ಊರುಕೇರಿಗಳು ಅಹೀರ್‌ವಾಡ, ಅಭೀರ್‌ಪಲ್ಲಿ, ಅಹರೌರ, ಅಸೀರಘಟ, ಎಂಚಿಷ್ಟೋ ಎಂಬ ಸ್ಥಳಗಳಿರುವುದನ್ನು ತಿಳಿಸಿದ್ದಾರೆ. ಈ ಪಂಗಡದ ರಾಜರಿಗೆ 'ಅಹೀರ್‌ರಾಜಾ' ಎಂಬ ಹೆಸರಿದೆ. ಅಹಿರ್ ಎಂಬುದು ಕುರುಬರ ಒಂದು ಗೋತ್ರ. ಉತ್ತರ ಭಾರತದಲ್ಲಿ ತಮ್ಮನ್ನು ಯಾದವರೆಂದು ಕರೆದುಕೊಳ್ಳುವ ಅಹೀರ್‌ಗಳು ಒಂದು ಕಾಲದಲ್ಲಿ ಈ ಸಮಾಜದ ಒಂದು ಭಾಗವಾಗಿದ್ದರು.

ಅಹಿರ್ ಎಂಬ ಪದ ಅಭಿರ್ ಎಂಬುದರ ಅಪಭ್ರಂಶ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಶಬ್ದಕೋಶಗಳು ಅಭಿರ ಅನ್ನು 'ಗ್ವಾಲಾ'(ಹಾಲಿನವನು) ಅಥವಾ ಮಹಾಶೂದ್ರ ಎಂದು ಉಲ್ಲೇಖಿಸುತ್ತವೆ.[೯೦] ಈ ಜಾತಿಯು ಆರ್ಯನ್ನರ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದರಿಂದ ಈ ಪದ್ಧತಿ ಆರ್ಯ ಎಂಬುದರ ಅಪಭ್ರಂಶವಾಗಿರಬೇಕೆಂಬುದು ಬಿ.ಕೆ.ರವಿ ಅವರ ಅಭಿಪ್ರಾಯ.

ಹನುಮಂತಯ್ಯನವರು ಅಮರಕೋಶದ ಉಲ್ಲೇಖವನ್ನು ಕೊಡುತ್ತಾರೆ. ಶೂದ್ರವರ್ಗದಲ್ಲಿ 'ಅಭೀರರ' ಎಂದರೆ ಗೊಲ್ಲರು ಮತ್ತು ಮಹಾಶೂದ್ರರೆಂದು ಮತ್ತು ಶಬ್ದ 'ಮಹಾಪೂರ್ಣವ' ಎಂಬ ನಿಘಂಟಿನಲ್ಲಿ ಅಭಿರ್, ಮೇಷ-ಕುರಿ ಎಂಬ ಉಲ್ಲೇಖ ಕೊಡುತ್ತಾರೆ. ಹೀಗೆ ಅಹೀರರನ್ನು ಪರಿಚಯಿಸಿದ್ದಾರೆ.

೧೦. ಭರವಾಡರು

ಇವರು ಗುಜರಾತ ಪ್ರಾಂತದಲ್ಲಿ ಕಂಡುಬರುತ್ತಾರೆ. ಒಂದು ಕಥೆಯ ಪ್ರಕಾರ ಶ್ರೀಕೃಷ್ಣನ ಸಾಕುತಂದೆ ನಂದಮಹೀರನು ಭರವಾಡದ ಗುಂಪಿಗೆ ಸೇರಿದವನೆಂದು ತಿಳಿದುಬಂದಿದೆ. ಇವರಿಗೂ ರಬಾರಿಯರಿಗೂ ಹತ್ತಿರದ ಸಂಬಂಧವಿರುವುದನ್ನು ಹೇಳಿದ್ದಾರೆ.

೧೧. ರಬಾರಿಯರು

ಇವರು ಮಹಾರಾಷ್ಟ್ರ ರಾಜ್ಯದಲ್ಲಿ ಕಂಡುಬರುತ್ತಾರೆ. ಇವರ ಮೂಲಸ್ಥಾನ ಬೆಲೂಚಿಸ್ತಾನ. ರಬಾರಿ ಎಂದರೆ ಕುರಿಮಂದೆಯ ಒಡೆಯ ಎಂಬರ್ಥ ಬರುತ್ತದೆ. ಇವರು ರಾಜಪುತ್ರ ಕುಲಕ್ಕೆ ಸೇರಿದವರೆಂದು ತಿಳಿದುಬಂದಿದೆ.

೧೨. ರಾಜಪಾಲಿ

ಅಜಮೀರ್, ಆಗ್ರಾ ಮತ್ತು ರಾಜಪುತಾನ ಮುಂತಾದ ಪ್ರದೇಶಗಳಲ್ಲಿ ಕುರುಬರಿಗೆ ರಾಜಪಾಲಿ, ರಾಜಪಾಲ, ಪಾಲಿ ರಾಜಪೂತ ಅಥವಾ ಪಾಲಕ್ಷತ್ರಿಯ ಹೆಸರುಗಳಿಂದ ಕರೆಸಿಕೊಳ್ಳುತ್ತಾರೆ. ೯ನೆಯ

ಶತಮಾನದಿಂದ ೧೧ನೆಯ ಶತಮಾನದವರೆಗೆ ಬಂಗಾಲದಲ್ಲಿ ಏಕಚಕ್ರಾಧಿಪತ್ಯವನ್ನಾಳಿದವರು ಈ ಪಾಲವಂಶೀಯರೇ ಎಂದು ತಿಳಿಸಿದ್ದಾರೆ. ರಾಜಪುತಾನದ ೩೬ ರಾಜ್ಯವಂಶಗಳಲ್ಲಿ ಪಾಲವಂಶವೇ ಅತೀ ಪ್ರಾಮುಖ್ಯವಾಗಿತ್ತು. ಇವರಲ್ಲಿ ಪದವೀಧರರು, ವಿದ್ಯಾಪ್ರವೀಣರು, ಸೈನ್ಯಾಧಿಕಾರಿಗಳು ಆಗಿರುವುದು ತಿಳಿದುಬಂದಿದೆ.

ಒಟ್ಟಾರೆಯಾಗಿ ಹನುಮಂತಯ್ಯನವರು ಭಾರತ ದೇಶದ ಮೂಲೆಮೂಲೆಗೆ ಹೋಗಿ ಅವರನ್ನು ಪ್ರತ್ಯಕ್ಷವಾಗಿ ಕಂಡು, ಅವರ ಜೀವನ ವಿಧಾನವನ್ನು ತಿಳಿದುಕೊಂಡು, ವಿದ್ವಾಂಸರ ಜೊತೆ ಚರ್ಚಿಸಿ, ಗ್ಯಾಜೆಟಿಯರ್‌ಗಳನ್ನು ಅಧ್ಯಯನ ಮಾಡಿ ಭಾರತ ದೇಶದ ಕುರುಬರ ಜೀವನ ಚಿತ್ರಣವನ್ನು ಉನ್ನತವಾಗಿ ಚಿತ್ರಿಸಿರುವುದು ಕಂಡುಬಂದಿದೆ.

೧೩. ದಕ್ಷಿಣ ಭಾರತೀಯ ರಾಜರ ಚರಿತ್ರೆ

ಪ್ರಾಚೀನ ಕಾಲದಿಂದಲೂ ಕುರಿ ಸಾಕಣೆ, ಕಂಬಳಿ ನೇಯ್ಗೆ, ಕೃಷಿಯನ್ನು ಮುಖ್ಯಕಸುಬನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಹೀಗೆ ಪರಂಪರಾನುಗತವಾಗಿ ಕುರಿಸಾಕಣೆಯನ್ನು ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಿರುವುದರಿಂದಲೇ ಇವರಿಗೆ 'ಕುರುಬರು' ಎಂಬ ಹೆಸರು ಬರಲು ಕಾರಣವಾಗಿದೆಯೆಂದು ಸಾಮಾನ್ಯವಾದ ತಿಳಿವಳಿಕೆಯಾಗಿದೆ. ಈ ಕುರುಬ ಜನಾಂಗವೇ ದಕ್ಷಿಣ ಭಾರತದ ಮೂಲನಿವಾಸಿಗಳೆಂದು 'ಕುರುಬರ ಚರಿತ್ರೆ' ಕೃತಿಯಲ್ಲಿ ಹೇಳಿರುವುದು ಕಂಡುಬಂದಿತ್ತು.

"ಭಾರತ ದೇಶದ ಕುರುಬರ ಚರಿತ್ರೆ" ಭಾಗ ೩ರಲ್ಲಿ ದಕ್ಷಿಣ ಭಾರತ ಮತ್ತು ಉತ್ತರ ಭಾರತ ರಾಜಮನೆತನದವರ ಚರಿತ್ರೆಗಳನ್ನು ಸಂಕ್ಷಿಪ್ತವಾಗಿ ಕಟ್ಟಿಕೊಟ್ಟಿರುವುದು ಕಂಡುಬಂದಿದೆ.

ದಕ್ಷಿಣ ಭಾರತದ ಇತಿಹಾಸದಲ್ಲಿ ಕುರುಬ ದೊರೆಗಳು ಆಳ್ವಿಕೆ ಮಾಡಿದ ಬಗ್ಗೆ ದೊರೆತ ಪ್ರಾಚೀನ ನಾಣ್ಯಗಳಿಂದ ಇಲಿಯಟ್ ಸ್ಪಷ್ಟ ಅಭಿಪ್ರಾಯ ಕೊಡುತ್ತಾನೆ. ಕ್ರಿ.ಶ. ಮೂರನೆಯ ಶತಮಾನದಲ್ಲಿ ಬಳಕೆಯಲ್ಲಿದ್ದ ನಾಣ್ಯ ಕುರುಬ ಜನಾಂಗದ ಅರಸರ ಆಡಳಿತದ ಚಲಾವಣೆಯಲ್ಲಿದ್ದವು ಎಂದು ನಿರ್ಣಯಿಸುತ್ತಾನೆ. ಅವುಗಳ ಬಗ್ಗೆ 'ಕುರನಿಲ ಮನ್ನೆಯರ್', ಇಡಿಯರ್, 'ಅಂಡರ ಕುರುಬರ' ಎಂಬ ಉಲ್ಲೇಖ ಇರುವುದರಿಂದ ಇವರು ಆ ಕಾಲದಲ್ಲಿ ಕಾರುಬಾರು ಮಾಡಿದ್ದಾರೆ ಎನ್ನುವುದು ಸ್ಪಷ್ಟಪಡುತ್ತದೆ.

ಆರ್ಯರು ಪಶುಪಾಲನೆಯೇ ಮುಖ್ಯ ಕಸುಬು ಎಂದು ತೊಡಗಿಕೊಂಡಂತೆ ಕುರುಬರದು ಕುರಿ ಪಾಲನೆಯೇ ಮುಖ್ಯ ಕಸುಬಾಗಿದ್ದು ಪ್ರಮುಖ ಪಾತ್ರ ವಹಿಸಿದ್ದರು. ರಾಷ್ಟ್ರಕೂಟರು, ಗಂಗರು, ಚಾಲುಕ್ಯರಲ್ಲಿ ವೈವಾಹಿಕ ಸಂಬಂಧವಿದ್ದುದರಿಂದ ಈ ರಾಜಮನೆತನಗಳು ಕುರುಬ

ಜನಾಂಗದವರು 'ವಡುಗರ್' ಎನ್ನುವ ಉಲ್ಲೇಖ ಕ್ರಿ.ಶ. ೨ನೆಯ ಶತಮಾನದಲ್ಲಿಯೇ ತಮ್ಮ ಅಸ್ತಿತ್ವ ಉಳಿಸಿಕೊಂಡವರಾಗಿದ್ದರು ಎಂದು ಡಾ. ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ಪ್ರತಿಪಾದಿಸುತ್ತಾರೆ. ಅಂಡರ್‌ರು ಆಂಧ್ರರು ಆಗಿರಬಹುದು. ಆಂಧ್ರ ಹೆಸರು ಐತರೇಯ ಬ್ರಾಹ್ಮಣರಲ್ಲಿ ಬರುತ್ತದೆ. ರುದ್ರಾಧ್ಯದಲ್ಲಿ ಪಟ್ಟಕಟ್ಟುಗಳಲ್ಲಿ ಉಲ್ಲೇಖವಿರುವುದರಿಂದ ಈ ಜನಾಂಗ ವೇದಕಾಲದಲ್ಲೂ ಒಳ್ಳೆ ಹೆಸರು ಹೊಂದಿದ್ದು ತಿಳಿದುಬರುತ್ತದೆ ಎನ್ನುವುದಕ್ಕೆ ಪ್ರಸಿದ್ಧ ಸಂಶೋಧಕರಾದ ಶಂಬಾ ಜೋಶಿಯವರ "ಈ ಜನಾಂಗ ಕ್ರಿ.ಪೂ. ೧೨೦೦-೨೦೦೦ ವರ್ಷಗಳಷ್ಟು ಪ್ರಾಚೀನ ಎನ್ನುವ ವಿಮರ್ಶೆ ಇದಕ್ಕೆ ಪುಷ್ಟಿಯಾಗಿದೆ. ಹಿಂದಿನ ಕವಿಯೊಬ್ಬ ಬಳಸಿದ 'ಅಂಡರ್ ಮಹಳಿರ್' ಎನ್ನುವ ಪದ 'ಗೋವಳರ ಯಾದವರು, ಅಂಡರ್ ಕುರುಬ ಪಂಗಡದವರು' ಎನ್ನುವುದಕ್ಕೆ ಸೇರಿ ಹೋಗುವುದರಿಂದ ಯಾದವರು ರಾಜ್ಯ ಕಟ್ಟಿ ಆಳಿದ್ದು ಇತಿಹಾಸ ಪುಟದಲ್ಲಿ ಸೇರಿದ್ದಾಗಿದೆ. ಅರ್ಕಾಟ್-ತಂಜಾವೂರಿನ ಈ ಜನಾಂಗ ರಾಜ್ಯ ಆಳಿದ್ದು ತಿಳಿದುಬರುತ್ತದೆ. ಅದರಂತೆ ವೃಷ್ಟಿ ಎಂದರೆ ಟಗರು ಎನ್ನುವ ಅರ್ಥವಿದ್ದು, ಈ ಪ್ರಾಣಿ ಪೋಷಕರೆ ಅಂಡೆಯರು ಎನ್ನುವ ಮಾತು ಋಗ್ವೇದದಲ್ಲಿ ಉಲ್ಲೇಖವಾಗಿರುವುದರಿಂದ ಈ ಅಂಡೆಯರು ಹಾಗೂ ಯಾದವರ ಆಳ್ವಿಕೆ ಕಾಲದ ಆಡಳಿತಕ್ಕೆ ಪೂರಕವಾಗಿ ದೊರೆತ ಹಡಗಿನ ಚಿತ್ರದ ನಾಣ್ಯಗಳು ಕುರುಬರ ನಾಣ್ಯಗಳೆಂದು ಸರ್ ಇಲಿಯಟ್ ಅಭಿಮತ. ಕ್ರಿ.ಪೂ. ೪೦೦೦-೫೦೦೦ ವರ್ಷ ಪೂರ್ವದಲ್ಲಿ ಕುರುಬ ಜನಾಂಗ ಇತ್ತು ಎಂದು ಹ್ಯಾಡೋನ್ ಕೂಡ ಒಪ್ಪುತ್ತಾರೆ. ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಪಸರಿಸಿದ್ದ ಈ ಜನಾಂಗದ ವಿಷಯವಾಗಿ ಪ್ರಾಚೀನ ಶಾಸನಗಳು ತಿಳಿಸುತ್ತವೆ. ಕುರುಬನ ಹಟ್ಟಿ, ಕುರುಬನ ಹಳ್ಳಿ ಎನ್ನುವ ಪ್ರಾಚೀನತೆಯ ಹಳ್ಳಿಗಳ ನಾಮ ವಿಶೇಷಗಳಿಂದ ಆ ಕಾಲದಲ್ಲಿಯೇ ರಾಜ್ಯಸ್ಥಾಪನೆ ಮಾಡಿದ ಪಟ್ಟಣ ಪುಲಾಲನ ಹೆಸರು ಹಾಗೂ ಕಾಮಾಂಧಪ್ರಭು ಎಂಬ ಹೆಸರಿನ ಆತನ ರಾಜಧಾನಿಯ ವಿಷಯಗಳ ಬಗ್ಗೆ ತಿಳಿದು ಬಂದುದರಿಂದ ಆಗಿನಿಂದಲೇ ಇವರು ರಾಜ್ಯ ಕಟ್ಟಿ ಆಳಿದ ವಿಷಯ ಸ್ಪಷ್ಟಪಡುತ್ತದೆ.

ಮಲಬಾರ್ ಜಿಲ್ಲೆಯಲ್ಲಿ ಬರುವ ಏಳು ತಾಲೂಕುಗಳು ಕಸುಬಾ, ಕುರುಂಬರನಾಡು ಇತ್ಯಾದಿಗಳಿದ್ದವುಗಳನ್ನು ಗಮನಿಸಿದಾಗ ಕುರುಂಬರಾಯ, ಕುರುಂಬ ಕ್ಷತ್ರಿಯ, ಪಲ್ಲವರಾಜ, ಕದಂಬ ಕ್ಷತ್ರಿಯ ಎನ್ನುವ ಹೆಸರುಗಳನ್ನು ಗಮನಿಸಿದಾಗ ಪಲ್ಲವರು, ಕದಂಬರು ಕುರುಬ ವಂಶಸ್ಥ ರಾಜಮನೆತನಕ್ಕೆ ಸೇರಿದವರು ಎಂದು ತಿಳಿದುಬರುತ್ತದೆ. ಕದಂಬರ ವಂಶದ ಮೂಲ ಸ್ಥಾಪಕ ಮಯೂರವರ್ಮ ಎಂದು ಇತಿಹಾಸ ಹೇಳುತ್ತಿದ್ದರೂ ಸತ್ಯ ಸಂಗತಿ ಬೇರೆ ಇದ್ದು ಕುರುಬರೇ ಕದಂಬ ಹೆಸರಿನಲ್ಲಿ ರಾಜ್ಯಭಾರ ಮಾಡಿರಬಹುದೆಂಬುದು ಲೂಯಿಸ್ ರೈಸ್ ಅಭಿಪ್ರಾಯ ಪಡುತ್ತಾನೆ(The kurumba have a special interest in kanara it seems possible, kadamba

the name of two of the leading dynastics of Banavasi is a Bratminica form of kurubas).

ಮತ್ತೊಬ್ಬ ಚರಿತ್ರೆಕಾರನು: "I suspect that behind the name kadamba harks that of kurumba for kurumba" ಎಂದು opper ಅವರು ಸೂಚಿಸುತ್ತಾರೆ.

ಮನೆಯ ಮುಂದಿದ್ದ ಕದಂಬ ವೃಕ್ಷದಿಂದ ಈ ಮನೆತನಕ್ಕೆ ಕದಂಬ ಹೆಸರು ಅಭಿದಾನ ವಾಯಿತೆನ್ನುವ ವಿಚಾರ ಇತ್ತೀಚಿನದು ಎಂದು ಕುರುಬ ಪದವಿ ಕದಂಬರಾಗಿ ಮಾರ್ಪಟ್ಟಿದೆ ಎನ್ನುವುದು ಹೆಚ್ಚು ಸೂಕ್ತ ಎನ್ನುತ್ತಾರೆ. ತಮಿಳು ಭಾಷಾ ಸೂಕ್ತಾರ್ಥ ಕುರುಂಬ ಮತ್ತು ಕದಂಬ ಎರಡು ಸಮನಾರ್ಥ ಪದಗಳು ಇರುವುದರಿಂದ ಗ್ರಿಗ್ ಅವರು ತಮ್ಮ Manual of the Nilagiri District ಎಂಬ ಕೃತಿಯಲ್ಲಿ "May not this word(kadamba) be a compound of katu or katam both meaning forest and kurumba and perhaps the same as kad-kurumba?" ಎಂದು ಪ್ರಶ್ನಿಸುತ್ತಾರೆ.

ವಿಜಯನಗರದ ಸಂಸ್ಥಾಪಕರು ಕುರುಬರೆನ್ನುವುದು ಮಾಧವ ಕರುಣ ವಿಲಾಸದಲ್ಲಿ ಹಿಂದಿನ ಅಭಿಪ್ರಾಯಗಳನ್ನು ಅಧರಿಸಿಯೇ ಗಳಗನಾಥರು ಸಂಗಮ ವಂಶದ ರಾಜಕುವರರು ರಾಜಭ್ರಷ್ಟರಾಗಿ ಹಂಪಿ ನಾಡಲ್ಲಿ ಕುರಿಗಾಹಿಗಳಾಗಿ ಅಲೆಯುವಾಗ ವಿದ್ಯಾರಣ್ಯರಿಗೆ ಕಂಡು ಅವರಲ್ಲಿದ್ದ ಕ್ಷಾತ್ರತೇಜ ಗುರ್ತಿಸಿ ವಿದ್ಯಾರಣ್ಯರು ಅವರಿಗೆ ರಾಜ್ಯ ಕಟ್ಟಲು ಪ್ರೇರೇಪಿಸಿ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರೆಂದು ತಿಳಿದುಬರುತ್ತದೆ.

ಹೀಗೆ ವಿ.ಆರ್. ಹನುಮಂತಯ್ಯನವರು ದಕ್ಷಿಣ ಭಾರತದ ರಾಜಮನೆತನಗಳು ಕದಂಬ, ಪಲ್ಲವ, ವಿಜಯನಗರ ರಾಜ್ಯಸ್ಥಾಪಕ ಹಕ್ಕ-ಬುಕ್ಕ, ಜಿಂಜಿ ಮತ್ತು ಕೃಷ್ಣಗಿರಿ ರಾಜರು ಆನೆಗೊಂದಿಯ ಸೋದರ ಅಣ್ಣನೊಡನೆ ಭಿನ್ನಾಭಿಪ್ರಾಯ ಹೊಂದಿ ಮೈಸೂರು ಸೀಮೆಯ ಹೆಗ್ಗಡದೇವನ ಕೋಟೆ ಕಟ್ಟಿಸಿ ರಾಜ್ಯಕಟ್ಟಿ ಆಳಿದ್ದನ್ನು ತಿಳಿಸಿದ್ದಾರೆ. ಹೆಗ್ಗಪ್ಪ, ಹೆಗ್ಗಡಿಯಪ್ಪ ಎನ್ನುವ ಹೆಸರು ಕುರುಬ ಜನಾಂಗದವರಲ್ಲಿಯೇ ಕಂಡುಬರುತ್ತಿದ್ದು, ಇವೆಲ್ಲಾ ರಾಜ್ಯಗಳು ಕುರುಬರು ರಾಜ್ಯವಾಳಿದ್ದು ಉಳಿದುಬಂದಿದೆ. ಕುರುಬರಿಗೆ ಯಾದವರೆಂದು, ದನಗಾರರೆಂದು ಕರೆಯುತ್ತಿದ್ದ ದೇವಗಿರಿ ಎನ್ನುವ ಅರಸರೂ ಕೂಡ ಕುರುಬರೆ. ೫ನೆಯ ಶತಮಾನದಲ್ಲಿ ಆಳಿದ ಯಾದವರ ಮೂಲಪುರುಷ ಹೇಮಾಜಿಯಿಂದ ಬೆಳೆದುಬಂದ ಈ ವಂಶದ ಕುಡಿ ಲಕೋಜಿ ಜಾಧವ ಧನಗಾರನಾಗಿದ್ದನೆಂದು ಕೆಲವು ಗ್ರಂಥಾಧಾರಗಳಿಂದ ತಿಳಿದುಬರುತ್ತಿದ್ದು ವಿಜಯನಗರ

ಅರಸರಿಗೂ ಯಾದವರಿಗೂ ವೈವಾಹಿಕ ಸಂಬಂಧ ಬೆಳೆದಿತ್ತು ಎನ್ನುವ ಅಭಿಪ್ರಾಯವನ್ನು ಶ್ರೀ ಬಿ.ಸೂರ್ಯನಾರಾಯಣರಾವ್ ಹೊಂದಿದ್ದಾರೆ.

ಈ ಎಲ್ಲಾ ಮೇಲಿನ ಆಧಾರಗಳಿಂದ ದಕ್ಷಿಣ ಭಾರತದ ಕುರುಬ ರಾಜರ ಚರಿತ್ರೆ ತಿಳಿದುಬಂದಿದೆ. ಉತ್ತರ ಭಾರತದ ಕುರುಬ ರಾಜರ ಚರಿತ್ರೆಯನ್ನು ಈ ರೀತಿಯಾಗಿ ನೋಡಬಹುದು. ಇಂದೂರ ಸಂಸ್ಥಾನದ ಹೋಳ್ಕರ ರಾಜರು ದನಗಾರ ಪಂಗಡಕ್ಕೆ ಸೇರಿದವರಾಗಿದ್ದು ದನಗಾರ ಎನ್ನುವ ಕುರುಬ ಜನಾಂಗ ಇಂದಿಗೂ ಮಹಾರಾಷ್ಟ್ರದಲ್ಲಿದ್ದು, ಈ ಮನೆತನದ ಮೂಲ ಪುರುಷ ಮಲ್ಲಾರಿರಾವ್ ಹೋಳ್ಕರ್ ಪುಣೆಯ ಹತ್ತಿರದ 'ಹೋಳ್' ಗ್ರಾಮದವನೆಂದು ಇತಿಹಾಸಕಾರರ ಅಭಿಪ್ರಾಯದಂತೆ ತನ್ನ ವಂಶದ ಮೂಲವನ್ನು 'ಹೋಳ್ಕರ' ಎಂದು ಕರೆದುಕೊಂಡಿರಬಹುದು. ಗ್ರಾಮದ ಮೂಲವನ್ನು ಉಳಿಸಿಕೊಂಡು ಕರ್(ಸಂಬಂಧಿಸಿದ) ಎನ್ನುವ ಊರ ಹೆಸರಿನ ಅಡ್ಡ ಹೆಸರುಗಳನ್ನು ರೂಢಿಸಿಕೊಂಡು ಬರುವುದು ಇಂದಿಗೂ ವಾಡಿಕೆಯಿದೆ. ವೀರನೂ ದಕ್ಷರಾಜನೂ ಆಗಿದ್ದ ಹೋಳ್ಕರ್ ಪೇಶ್ವೆಯವರ ಅಧೀನ ರಾಜನು. ಈ ಮನೆತನದ 'ಅಹಲ್ಯಾಬಾಯಿ'ಯವರು ಕೂಡ ಹೆಸರು ಬೆಳಗಿದವರು ಎಂಬುದು ಇತಿಹಾಸದಿಂದ ತಿಳಿದಿರುವ ವಿಷಯ.

ಕೆಲವು ಕಡೆ ಕುರುಬರು ಗೊಲ್ಲರೆಂದು ಕರೆದುಕೊಳ್ಳುತ್ತಿದ್ದು, ಗೊರ್ಲಾಕಪುರಿ ಮರಾಠಿಯಲ್ಲಿ ಗಾಯಕವಾಡ ಎಂದಾಗುವುದು. ಗಾಯಕವಾಡ ಎಂದರೆ ಪಶುಪಾಲಕ. ತೆಲುಗಿನಲ್ಲಿ ಗೊಲ್ಲವಾಡು ಹೀಗೆ ಭಾಷೆಯು ಬೇರೆ ಅರ್ಥದಲ್ಲಿ ಬದಲಾವಣೆಯಾಗಿ ಕಂಡರೂ ಇವರು ಕುರುಬರೇ ಎಂದು ಬರೋಡದಲ್ಲಿ ರಾಜ್ಯ ಕಾರುಬಾರು ಮಾಡಿದ ಗಾಯಕವಾಡರು ಕುರುಬರೇ ಎಂದು ಹೇಳಿರುವುದು ಸ್ಪಷ್ಟ.

ಉಜ್ಜಯನಿಯ ವಿಕ್ರಮಾದಿತ್ಯ ನೃಪನ ಕಾಲದಿಂದಲೂ ಮಾಂಡು ಸಂಸ್ಥಾನದ ಮಗಧರೂ ಕುರುಬರೇ ಎನ್ನುವುದನ್ನು ಮನ್ನೇಲಾಲ್ ಚಂದತಿಯವರು ತಮ್ಮ History of palakshatriva ಎಂಬ ಕೃತಿಯಲ್ಲಿ ತಿಳಿಸಿದ್ದಾರೆ. ಹೀಗೆ ಭಾರತದ ಎಲ್ಲೆಡೆಯಲ್ಲೂ ಕುರುಬರು ರಾಜ್ಯಭಾರ ಮಾಡಿದ್ದು ತಿಳಿದುಬರುತ್ತದೆ. ಮತ್ತು ಛತ್ರಪತಿ ಶಿವಾಜಿ ಮಹಾರಾಜರ ಮಹಾಮಾತೆ 'ಜೀಜಾಬಾಯಿ'ಯವರು ಕೂಡ ದೇವಗಿರಿ ಲಕ್ಕೋಜಿ ಯಾದವ ಅರಸರಲ್ಲಿ ಒಬ್ಬನಾದ ಜಾಧವರೇ ಎಂಬುವವರ ಮಗಳಾಗಿದ್ದು ದನಗಾರ ಮಹಾರಾಷ್ಟ್ರದ ಕುರುಬರು ಎಂದು ಹೇಳಿರುವುದು ಈ ಕೃತಿಯಿಂದ ತಿಳಿದುಬಂದಿದೆ.

ಹೀಗೆ ದಕ್ಷಿಣ ಭಾರತವನ್ನಲ್ಲದೆ ಉತ್ತರ ಭಾರತದಲ್ಲಿಯೂ ಸಹ ಕುರುಬರು ತೋಳ್ಬಲದಿಂದ ರಾಜ್ಯ ಕಟ್ಟಿ ವಿಜೃಂಭಿಸಿದ ಹೆಮ್ಮೆ ಈ ಜನಾಂಗಕ್ಕಿದೆ ಎಂದು ಹೇಳಬಹುದಾಗಿದೆ.

೧೪. ಕುರುಬ ಜನಾಂಗದ ಮಹನೀಯರ ಹಾಗೂ ಮಹಾಶೂರ ವೀರರ ಜೀವನ ಚರಿತ್ರೆ

ವಿ.ಆರ್.ಹನುಮಂತಯ್ಯ ಅವರ 'ಭಾರತ ದೇಶದ ಕುರುಬರ ಚರಿತ್ರೆ'ಯ ನಾಲ್ಕನೆಯ ಭಾಗದಲ್ಲಿ ಕುರುಬ ಜನಾಂಗದ ಮಹನೀಯರ ಹಾಗೂ ಮಹಾಶೂರ ವೀರರ ಜೀವನ ಚರಿತ್ರೆ ಕುರಿತು ಪರಿಚಯಿಸಿಕೊಟ್ಟಿದ್ದಾರೆ. ಶ್ರೀ ಕಾಳಿದಾಸ, ಶ್ರೀ ಕನಕದಾಸ ಹಾಗೂ ಅಹಲ್ಯಾಬಾಯಿ ಹೋಳ್ಕರರ ಜೀವನ ಚರಿತ್ರೆಯನ್ನು ೧೯೨೬ರ 'ಕುರುಬರ ಚರಿತ್ರೆ'ಯಲ್ಲಿ ಪರಿಚಯಿಸಿಕೊಟ್ಟಿದ್ದರು. ಈ ಕೃತಿಯಲ್ಲಿ ಮತ್ತೆ ಈ ಮೂವರ ಜೀವನ ಚರಿತ್ರೆಯ ಜೊತೆಗೆ ಶ್ರೀ ಶಿವಾಜಿ ಮಹಾರಾಜರ ಜೀವನ ಚರಿತ್ರೆ, ಹಲಜಂತಿಯ ಸಿದ್ಧನ ಚರಿತ್ರೆ, ಸಂಗೊಳ್ಳಿರಾಯಣ್ಣನ ಚರಿತ್ರೆ, ವೀರರಾಣಿ ಶ್ರೀ ದುರ್ಗಾವತೀದೇವಿ ಚಂದೇಲ್‌ರ ಜೀವನ ಚರಿತ್ರೆ ಕುರಿತು ಪರಿಚಯಿಸಿರುವುದು ಕಂಡುಬಂದಿದೆ.

i. ಶ್ರೀ ಶಿವಾಜಿ ಮಹಾರಾಜನ ಚರಿತ್ರೆ

ಛತ್ರಪತಿ ಶಿವಾಜಿಯು ಮಹಾರಾಷ್ಟ್ರದ ಐತಿಹಾಸಿಕ ಪುರುಷ. ಇವನು 'ಕುರುಬ'ರ ಜಾತಿಗೆ ಸೇರಿದವನೆಂದು ಹೇಳಿದ್ದಾರೆ. ಆದರೆ ಇವನನ್ನು ಮರಾಠ ಜಾತಿಗೆ ಸೇರಿದವನೆಂದು ಹೇಳಿರುವುದು ರೂಢಿಯಾಗಿದೆ. 'ಮರಾಠ' ಎಂಬುದು ದೇಶಸೂಚಕವೇ ಹೊರತು, ಜಾತಿ ಸೂಚಕವಲ್ಲ. ಕರ್ನಾಟಕ ದೇಶದವರು 'ಕನ್ನಡಿಗರು,' ಆಂಧ್ರಪ್ರದೇಶದಲ್ಲಿ 'ಆಂಧ್ರರು' ಎಂದ ಹಾಗೆ ಮಹಾರಾಷ್ಟ್ರದವರು ಮರಾಠಿಗಳು. ಮಹಾರಾಷ್ಟ್ರದಲ್ಲಿ ಶೂರರು, ಶ್ರಮಜೀವಿಗಳು ಆದ ಜನಾಂಗದವರೆಂದರೆ ದನಗಾರರು(ಕುರುಬರು) ಎಂಬುದನ್ನು ಇಂಗ್ಲಿಷ್‌ನ ಒಂದು ಗ್ರಂಥದಲ್ಲಿ ಪ್ರಶಂಸಿಸಿರುವುದನ್ನು ಈ ಗ್ರಂಥದಲ್ಲಿ ಈ ರೀತಿ ವ್ಯಕ್ತಪಡಿಸಿದ್ದಾರೆ.

"The Marathas who inhabit this country have, from remotest antiquity, been a strong and self reliant nation, for the most part husband men or shepherds, they were content to remain among their native mountains.

The National feeling once roused. the Marathas rose as one man and their nation of shepherds(ಕುರುಬರು) and peasants(ಒಕ್ಕಲಿಗರು) became one army which over run the richest provinces of the Empire".[೯೧]

ದೇವಗಿರಿಯ ಲಕ್ಕೋಜಿ ಯಾದವ ಅರಸರಲ್ಲಿ ಒಬ್ಬನಾದ ಜಾದವರಾಯ ಈ ದನಗಾರರಲ್ಲಿ 'ಭಾರಗೀ' ಎಂಬ ಪಂಗಡಕ್ಕೆ ಸೇರಿದವನು.[೯೨] ಈತನ ಮಗಳೇ ಜೀಜಾಬಾಯಿ. ಈಕೆಯೇ ಶಿವಾಜಿಯ ತಾಯಿ.

ಮರಾಠ ದೊರೆ ಛತ್ರಪತಿ ಶಿವಾಜಿಯು ಮೂಲತಃ ಕರ್ನಾಟಕದ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಸೊರಟೂರು ಗ್ರಾಮದವನು. ಮೇಲಾಗಿ ಈತ ದನಗರ ಗವಳಿಗ ಸಮುದಾಯಕ್ಕೆ

ಸೇರಿದವನೆಂಬುದನ್ನು[೧೯೩] ರಾ.ಚಿಂ. ಡೇರೆಯವರು ತಮ್ಮ ಗ್ರಂಥವೊಂದರಲ್ಲಿ ಆಧಾರಗಳೊಂದಿಗೆ ಸ್ಪಷ್ಟಪಡಿಸಿರುವುದನ್ನು ಡಾ. ಎಫ್.ಟಿ. ಹಳ್ಳಿಕೇರಿ ಅವರು ಹಾಲುಮತ ಸಂಸ್ಕೃತಿ ಕೃತಿಯ ದನಗರ ಗೌಳಿಗರು ಎನ್ನುವ ಲೇಖನದಲ್ಲಿ ಪ್ರಸ್ತುತಪಡಿಸಿರುವುದನ್ನು ಗಮನಿಸಬಹುದು.

ಈ ಹಿನ್ನೆಲೆಯಲ್ಲಿ ಶಿವಾಜಿಯ ಪೂರ್ವಜರ ಐತಿಹಾಸಿಕ ದಾಖಲೆಗಳಲ್ಲಿ ಮಾಲೋಜಿಯ ಉಲ್ಲೇಖ ಮೊದಲು ದೊರಕುತ್ತದೆ. ಮಾಲೋಜಿಗೆ ಬಾಬಾಜಿ ಮತ್ತು ಶಹಾಜಿ ಎಂಬ ಎರಡು ಗಂಡು ಸಂತಾನ. ಬಾಬಾಜಿಯ ಪುತ್ರ ವಿಠೋಜಿ, ವಿಠೋಜಿಗೆ ಖೆಲೋಜಿ, ಮಾಲೋಜಿ, ಮಹಾದಜಿ, ಕಾಕಾಜಿ, ನಾಗೋಜಿ, ಖಂಡೋಜಿ, ಸೆಕೋಜಿ ಮತ್ತು ಮಾನಕೋಜಿ ಎಂಬ ಅಷ್ಟ ಪುತ್ರರು. ಶಹಾಜಿಗೆ ಸಂಬಾಜಿ, ಶಿವಾಜಿ ಮತ್ತು ಏಕೋಜಿ ಎಂಬ ಮೂವರು ಪುತ್ರರು. ಶಿವಾಜಿಗೆ ಸಂಬಾಜಿ, ರಾಜಾರಾಮ(ರಾಮರಾಜೆ) ಸಂಬಾಜಿಗೆ ಶಾಹು ಛತ್ರಪತಿ, ಬಾಬಜಿಯ ತಂದೆ ಪರಸೋಜಿ ಎಂಬ ಉಲ್ಲೇಖ ಕೆಲವು ಕಡೆಗೆ ದೊರಕುತ್ತದೆ. ಮಾಲೋಜಿ ಮತ್ತು ಬಾಬಾಜಿ ಭೋಸಲೆ ಇವರಿಬ್ಬರೂ ಪಾಂಡೆ ಪೆಡೆಗಾಂವದ ಜಹಗೀರದಾರರು(ಇದು ಸರ್ಕಾರಿ ಕಾಗದ ಪತ್ರಗಳಲ್ಲಿ ಉಲ್ಲೇಖವಿದೆ).[೧೯೪] ಮಾಲೋಜಿಯು ತನ್ನ ಕೊನೆಯ ದಿನಗಳಲ್ಲಿ ಲಖುಜಿರಾವ ಜಾಧವನಲ್ಲಿ ತೋಪು ಬಂದೂಕುಗಳಿಗೆ ಮದ್ದು ತುಂಬುವ ಸೈನಿಕನಾಗಿದ್ದನು. ಇವನ ಸಮಕಾಲೀನ ಇತಿಹಾಸಕಾರರು ಹಾಗೂ ರಾಜರು ಇವನನ್ನು 'ಬಾರಗಿ ಧನಗರ್' ಎಂದೇ ಸಂಬೋಧಿಸಿದ್ದಾರೆ(ಬಾಗಿ=ಕುರಿ, ಆಡು; ಬಾರಗಿ=ಕುರುಬ) ಸೈನ್ಯದಲ್ಲಿರುವ ವಿವಿಧ ಶಾಖೆಗಳಲ್ಲಿ ದುಡಿಯುವ ಸೈನಿಕರನ್ನು ಗುರುತಿಸುವಾಗ ಹೆಸರಿನ ಜೊತೆಗೆ ಅವನ ಜಾತಿಯನ್ನು ಸೇರಿಸಿ ಕರೆಯುವ ಪದ್ಧತಿ ಅಂದು ಜಾರಿಯಲ್ಲಿತ್ತು. ಯುದ್ಧದಲ್ಲಿ ಧ್ವಜಗಳನ್ನು ಹಿಡಿದುಕೊಂಡು ಹೋಗುವವರಿಗೆ 'ಝುಂಡೆ ಧನಗಾರ' ಎಂದು ಕರೆಯುವ ಹಾಗೆ 'ಬಾರಗಿ ಧನಗರ' ಎಂದು ಕರೆದಿರುವುದರಿಂದ ಲಖುಜಿರಾವ ಜಾಧವನು ಕುರುಬ ಕುಲದವನೆಂದು ಸೂಚ್ಯವಾಗುತ್ತದೆ. ಲಖುಜಿರಾವ ಜಾಧವನ ಮಗಳಾದ ಜೀಜಾಬಾಯಿಯನ್ನು ಮಾಲೋಜಿಯು ತನ್ನ ಮಗ ಶಹಾಜಿಗೆ ತಂದುಕೊಂಡಿದ್ದ. ಸಾಂಘಣವನ್ನು ಪುಳಂಜ ಶಾಸನ 'ಜಾದವ ಕುಳ ಕಮಳ' ಎಂದು ವರ್ಣಿಸಿರುವುದೂ ಜಾದವ ಎನ್ನುವ ಶಬ್ದ 'ಯಾದವ'ದಿಂದ ನಿಷ್ಪತ್ತಿಯಾಗಿರುವುದೂ ದೇವಗಿರಿ(ಸೇವುಣ) ಯಾದವರು ದಕ್ಷಿಣದ ಯಾದವರಾಗಿರುವುದೂ ದಕ್ಷಿಣದ ಯಾದವರು ಕುರುಬರಾಗಿರುವುದೂ ಪರಸ್ಪರ ಸಾಕ್ಷಾಧಾರಗಳನ್ನು ಒದಗಿಸುತ್ತದೆ.

ಶಿವಾಜಿ ಭೋಸಲೆ ಮನೆತನದ ಮೂಲ ಪುರುಷ ಬಳೀಪ.[೧೯೫] ಇದು ಬಳಿಯಪ್ಪ(ಬಳಿಯಪ್ಪ-ಬೆಳ್ಳಿಯಪ್ಪ) ಎಂಬ ನಾಮದ ಸಂಕ್ಷಿಪ್ತ ರೂಪ ಮತ್ತು ಮರಾಠರ ಆಡುಭಾಷೆಯಲ್ಲಿ ಆದ ಉಚ್ಚಾರ ಬದಲಾವಣೆ. ಬಳಿಯಪ್ಪ ಎಂಬುದು ಕರ್ನಾಟಕದ ಕನ್ನಡಿಗನ ಹೆಸರು. ಬಳೀಪ 'ಹಿವಂಜಾ'ರ

ಕಥೆಯು ಶ್ರೀಚಕ್ರಧರನ 'ಲೀಳಾ ಚರಿತ್ರೆ'ಯಲ್ಲಿ ಬಂದಿದೆ.[೨೦೦] ಇದರ ನಂತರ 'ಕೃಷ್ಣದಾಸ ದಾಮಾ' ಎಂಬ ಮರಾಠಿ ಕವಿಯು ತನ್ನ ಮರಾಠಿ 'ಮಹಾಭಾರತ' ಕೃತಿಯಲ್ಲಿ ಬಳೀಪನ ಬಗ್ಗೆ ಉಲ್ಲೇಖಿಸಿದ್ದಾನೆ. ಮಹಾರಾಷ್ಟ್ರದ ಅಹ್ಮದನಗರ ಜಿಲ್ಲೆಯವನಾದ ಇವನು ಸಂಸ್ಕೃತದ ಮಹಾಭಾರತವನ್ನು ಮರಾಠಿ ಭಾಷೆಗೆ ಅನುವಾದಿಸಿದ್ದಾನೆ. ಇವನು ಬರೆದ ಆದೀಪರ್ವದ ಸಂಪೂರ್ಣ ಹಸ್ತಪ್ರತಿ ಇದೇ ಜಿಲ್ಲೆಯ ವಾಂಬೋರಿಯಲ್ಲಿ ದೊರೆತಿದೆ. ಬಳೀಪನು ರಾಜಸ್ಥಾನದ ರಜಪೂತನೆಂದು ಉಲ್ಲೇಖಿಸಿಲ್ಲ. ಕೃಷ್ಣದಾಸ ದಾಮ ತನ್ನ ಕೃತಿಯಲ್ಲಿ ಬಳೀಪ ಗೌಳಿಯು ತನ್ನ ೯ ಲಕ್ಷ ಗೌಳಿ ಮತ್ತು ೧೨ ಗೌಳಿ ಪ್ರಮುಖರ ಮಧ್ಯೆ ಸಭೆಯಲ್ಲಿ ಕುಳಿತಿದ್ದ ಎಂದು ಬರೆಯುತ್ತೆ. ಇದರಿಂದ ಬಳೀಪ ರಜಪೂತನಾಗದೇ ಅವನೊಬ್ಬ ಗೌಳಿಗ(ಧನಗರ) ಎಂಬುದು ಸ್ಪಷ್ಟ. ಇವನೊಬ್ಬ ಕರ್ನಾಟಕದ ದನಗಾರ ಎಂಬುದನ್ನು ಸೂಚಿಸುತ್ತದೆ.

ಶಿವಾಜಿಯ ಮೂಲಪುರುಷ ಬಳೀಪ ಇವನು ಶ್ರೀ ಚಕ್ರಧರನ ಪೂರ್ವದಲ್ಲಿದ್ದವನು. ಅಂದರೆ ೧೩ನೆಯ ಶತಮಾನದ ಉತ್ತರಾರ್ಧದಲ್ಲಿ ಬಿಳಿಯಪ್ಪ ಒಬ್ಬ ಗೌಳಿ ರಾಜ ಪುರುಷ. ಅವನೊಬ್ಬ ಕರ್ನಾಟಕದ ಯಾದವ ಕುಲದವ. ಇವನು ಕರ್ನಾಟಕದ ಹಾನಗಲ್ ತಾಲೂಕಿನ ಇಂದಿನ ಲಕ್ಷ್ಮೇಶ್ವರದವನು. ದಕ್ಷಿಣ ಕರ್ನಾಟಕದಲ್ಲಿ ಮೂರು ಶತಕ ರಾಜ್ಯವಾಳಿದ ಹೊಯ್ಸಳ ವಂಶದವನು.[೧೯೬] ಭೋಸಲೆ ಎಂಬ ಕುಲನಾಮವು ಹೊಯ್ಸಳ(ಪೊಯ್ಸಳ) ಎಂಬ ಕನ್ನಡ ಪದದ ಮರಾಠಿ ರೂಪ. ಹೊಯ್ಸಳದ ಮೊದಲಿನ ರೂಪ ಪೊಯ್ಸಳ. ಹಳಗನ್ನಡದಲ್ಲಿದ್ದ 'ಪ' ಹೊಸಗನ್ನಡಕ್ಕೆ 'ಹ' ಆಗಿ ರೂಪಾಂತರಗೊಂಡಿದೆ. ೧೯೫೭ರಲ್ಲಿ ಜೆ.ಡಂಕನ್ ಎಂ.ಡೆರೆಟರ ಸಂಶೋಧನ ಗ್ರಂಥದಲ್ಲಿ ಹೊಯ್ಸಳ ಕುಲನಾಮದ ರೂಪವು ತಮಿಳು ಗ್ರಂಥದಲ್ಲಿ ಮತ್ತು ದೇವನಾಗರಿ ಲಿಪಿಯಲ್ಲಿರುವ ಹೊಯಸಳ, ಹೊಸಲ, ಪೊಚಳ, ಭೊಚಳ, ಭೂಜಳ ಮತ್ತು ಹೊಯಿಸಳ ಆಗಿದ್ದು ಕಂಡುಬರುತ್ತದೆ ಎಂದು ಉಲ್ಲೇಖಿಸಿದ್ದಾರೆ.[೧೯೭] ಹೊಸಲ(ಪೊಸಲ) ಕುರುಬರಲ್ಲಿಯ ಒಂದು ಬೆಡಗು. ಹೊಯ್ಸಳ-ವಿಜಯನಗರ-ಬೋಸಲೆ ಮನೆತನಗಳು ಅಖಂಡವಾಗಿ ಕರ್ನಾಟಕ-ಆಂಧ್ರ-ಮಹಾರಾಷ್ಟ್ರ-ತಮಿಳುನಾಡು ಹೀಗೆ ದಕ್ಷಿಣ ಭಾರತದ ಪ್ರದೇಶಗಳನ್ನು ೯ನೇ ಶತಮಾನದಿಂದ ವಿಜೃಂಭಣೆಯಿಂದ ರಾಜ್ಯವಾಳಿದ ಯಾದವ(ಕುರುಬ) ಕುಲದ ಅರಸರಾಗಿದ್ದಾರೆ.

ಶಿವಾಜಿಯ ಭೋಸಲೆಯೆಂಬ ಹೆಸರು ಅವನು ವಾಸಸ್ಥಾನದ ಮೇಲಿಂದ ಬಂದ ಹೆಸರಂತೂ ಅಲ್ಲ. ಇದು ಅವರ ಪೊಸಲ ಹೊಸಲ ಎಂಬ ಬೆಡಗಿನಿಂದ ಬಂದದ್ದು ಈ ಬೆಡಗು ಕುರುಬರಲ್ಲಿದೆ ಎಂದು ಚಂದ್ರಕಾಂತ ಬಿಜ್ಜರಗಿ ಅವರು ಅಭಿಪ್ರಾಯ ಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಶಿವಾಜಿಯ ಕುಲ ಕುರುಬ ಎಂದು ವಿ.ಆರ್.ಹನುಮಂತಯ್ಯನವರು ಹೇಳಿರುವುದು ಸ್ಪಷ್ಟಪಡುತ್ತದೆ.

ii. ಹುಲಜಂತಿಯ ಸಿದ್ಧನ(ಮಾಳಿಂಗರಾಯ) ಚರಿತ್ರೆ

ಕುರುಬ ಸಮುದಾಯದ ಸಾಂಸ್ಕೃತಿಕ ವೀರವ್ಯಕ್ತಿಯಾಗಿ ಕಂಡುಬರುವ 'ಮಾಳಿಂಗರಾಯನ' ಜೀವನ ಚರಿತ್ರೆ ಕುರಿತು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ.

ಈ ಸಿದ್ಧ ಮಾಳಿಂಗರಾಯದೇವರ ಮೂಲ ದೇವಸ್ಥಾನವು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಮಂಗಳವೇಡ ತಾಲೂಕಿನ ಹುಲಜಂತಿ ಗ್ರಾಮದಲ್ಲಿದೆ. ಈ ಗ್ರಾಮದ ಸುತ್ತಲೂ ಸುತ್ತುವರೆದ ಕೋಟೆಯ ದ್ವಾರಗಳಿಗೆ ಹುಲಿಯ ಚಿತ್ರಣವಿರುವುದರಿಂದ ಇದಕ್ಕೆ ಹುಲಿಮುಖದ ಅಗಸಿ ಎನ್ನುತ್ತಾರೆ. ಈ ಕೋಟೆಯ ಹತ್ತಿರದಲ್ಲೇ ದೊಡ್ಡದಾದ ಹಳ್ಳಕ್ಕೆ 'ಹಾಲಹಳ್ಳ' ಮಾಳಿಂಗರಾಯನ ಹಳ್ಳ ತೀರ್ಥನದಿ ಎಂದು ಹಲವಾರು ಹೆಸರುಗಳಿವೆ. ಈ ಹಳ್ಳವು ಹುಟ್ಟಿದ ಸ್ಥಳದಿಂದ ಭೀಮಾನದಿಗೆ ಸಂಗಮವಾಗುವ ತನಕ ಇದರ ಅಕ್ಕಪಕ್ಕದ ದಂಡೆಗಳಲ್ಲಿ ಹಾಲುಮತ ಸಮುದಾಯದವರೇ ಹೆಚ್ಚಾಗಿ ವಾಸಿಸುತ್ತಿದ್ದಾರೆ ಮತ್ತು ಈ ಗ್ರಾಮದ ಒಂದು ಕಿ.ಮೀ. ದೂರದಲ್ಲಿ ಮಾಳಿಂಗರಾಯನ ಗದ್ದುಗೆಯಿದೆ. ಈ ಸ್ಥಳಕ್ಕೆ 'ಬೊಬ್ಬಿಲಿವನ' ಎಂದು ಹೆಸರು. ಆ ಗದ್ದುಗೆಯ ಮೇಲೆಯೇ ಸಪ್ತಕಳಸವನ್ನು ಹೊಂದಿದ ಮಾಳಿಂಗರಾಯನ ದೇವಾಲಯವಿದೆ. ಈ ಸ್ಥಳವು ಹಾಲುಮತ ಸಮುದಾಯದವರಿಗೆ ಪವಿತ್ರ ಸ್ಥಳವಾಗಿದ್ದು, ಹುಲಜಂತಿ ಗ್ರಾಮದಲ್ಲಿ ಮಾಳಪ್ಪನ ವಂಶಜರ ೧೫೦ಕ್ಕೂ ಹೆಚ್ಚು ಮನೆಗಳಿರುವುದರಿಂದ ಇವರಲ್ಲಿ ಯಾರಾದರೂ ಮರಣ ಹೊಂದಿದರೆ ಮಾಳಪ್ಪನ ಸಮಾಧಿಯ ಆವರಣದಲ್ಲಿಯೇ ಸಂಸ್ಕಾರ ಮಾಡುತ್ತಾ ಬಂದಿದ್ದಾರೆ. ಆ ಸ್ಥಳದಲ್ಲಿ ಸುಮಾರು ೨೫೦ಕ್ಕೂ ಹೆಚ್ಚು ಪೂಜಾರಿಗಳ ಸಮಾಧಿಗಳಿವೆ. ಮತ್ತು ಸಮಾಧಿಯ ಪೂರ್ವದಲ್ಲಿ ಮಾಳಪ್ಪನ ಕುರಿಗಳನ್ನು ನಿಲ್ಲಿಸುತ್ತಿದ್ದ(ಕುರಿಹಟ್ಟಿ) ಸ್ಥಳಕ್ಕೆ ಬಂದವರು ಈ ಜಾಗದಲ್ಲಿ ಅಗೆದು ಕುರಿಹಿಕ್ಕಿ ಹುಡುಕಾಡುವ ಪರಿಕಲ್ಪನೆ ರೂಢಿಯಲ್ಲಿದೆ. ಹಿಕ್ಕಿಗರು ಸಿಕ್ಕಿದರೆ ಲಕ್ಷ್ಮೀ ಸಿಕ್ಕ ಹಾಗೇ ಎಂದು ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗಿ ಜಗುಲಿಯ ಮೇಲಿಟ್ಟು ಪೂಜೆಯನ್ನು ಮಾಡುತ್ತಾರೆ.[೧೯೮]

ಹೀಗಾಗಿ ಹನುಮಂತಯ್ಯನವರು ಬಿಜಾಪುರ ಜಿಲ್ಲೆಯಲ್ಲಿ ನಾಥ ಮತ್ತು ಸಿದ್ಧ ಸಂಪ್ರದಾಯದ ಗುಡಿಗಳು ಮತ್ತು ಸ್ಮಾರಕಗಳು ಹೆಚ್ಚಾಗಿ ಕಂಗೊಳಿಸುವವು. ಇಲ್ಲಿ ಈ ಸಂಪ್ರದಾಯಕ್ಕೆ ಸೇರಿದ ಮಹನೀಯ ಮಾಳಿಂಗರಾಯ ಎಂದಿರುವುದು ಸ್ಪಷ್ಟ.

ಮಾಳಿಂಗರಾಯನ ತಂದೆ ಹೆಸರು ತುಕ್ಕಪ್ಪರಾಯ, ತಾಯಿಯ ಹೆಸರು ಕನಬಾಯಿ. ತಂದೆಯ ಊರು ಉಂಬ್ರಜಿ, ತಾಯಿಯ ತವರೂರು ಹಲಜಂತಿ ಎಂದು ತಿಳಿದುಬಂದಿದೆ.

ಬಾರಾಮತ್ಯಾಗ ಹುಟ್ಟಿದರು ದೇವರು
ತೇರಾಮತ್ಯಾಗ ಬೆಳೆದರು[೧೯೯]

ಎಂಬ ಜನಪದರ ಪ್ರಕಾರ ಮಾಳಿಂಗರಾಯನು ಬಾರಾಮತಿಯಲ್ಲಿ ಹುಟ್ಟಿ, ಬಾಲ್ಯದ ಜೀವನವನ್ನು ಬೀಜಗುಂದದಲ್ಲಿ ಕಳೆದರು. ಇವರು ಮುಂದೆ ಗೃಹಸ್ಥಾಶ್ರಮಿ ಆದನು. ಚಿಕ್ಕ ವಯಸ್ಸಿನಲ್ಲಿ ಈತನಲ್ಲಿ ಗುರುವಿನಲ್ಲಿ ಭಕ್ತಿ ಮತ್ತು ಅಧ್ಯಾತ್ಮದಲ್ಲಿ ಆಸಕ್ತಿ ಉಂಟಾದವು. ಈತನ ಗುರು ಬೀರಪ್ಪ. ಇವರ ಅನುಗ್ರಹದಿಂದ ಮಾಳಿಂಗರಾಯನು ಆತ್ಮಸಾಧನೆಯನ್ನು ಅಭಿವೃದ್ಧಿಗೊಳಿಸಿಕೊಂಡು ಯೋಗಸಿದ್ಧಿಯನ್ನು ಸಂಪಾದಿಸಿದನು ಎಂಬುದು ತಿಳಿದುಬಂದಿದೆ.

ಆ ಕಾಲಕ್ಕೆ ತನ್ನ ಸಂಪ್ರದಾಯದ ಏಳುನೂರು ಮಂದಿ ಸಿದ್ಧರನ್ನು ನೆರೆ ರಾಜನೊಬ್ಬನು ಕಾರಣಾಂತರದಿಂದ ಸೆರೆಹಿಡಿಸಿ ತನ್ನ ಕಾರಾಗೃಹದಲ್ಲಿ ಬಂದಿಸಿದ್ದನು. ಇವರ ಬಿಡುಗಡೆ ಮಾಡುವುದಾಗಿ ಮಾಳಿಂಗರಾಯನು ದೃಢಪ್ರತಿಜ್ಞೆ ಮಾಡಿಕೊಂಡು ತನ್ನ ಗುರುವಿನ ಹತ್ತಿರ ಬಂದನು. ತನ್ನ ಶಿಷ್ಯನು ಇಂತಹ ಘೋರ ಸಾಹಸಕೃತ್ಯದಲ್ಲಿ ಪ್ರವರ್ತಿಸುವುದು ಗುರುವಿನ ಮನಸ್ಸಿಗೆ ಹಿಡಿಯಲಿಲ್ಲ. ಗುರು ಬಹುವಾಗಿ ಪ್ರಯತ್ನಿಸಿದರೂ ಶಿಷ್ಯನು ತನ್ನ ಹಠವನ್ನು ಬಿಡಲಿಲ್ಲ. ತಾನು ಈ ಕೆಲಸವನ್ನು ಮಾಡಿಯೇ ತೀರಬೇಕೆಂದು ಶಿವನು ತನ್ನನ್ನು ಪ್ರೇರೇಪಿಸುತ್ತಿರುವನು ಎಂಬುದು ಶಿಷ್ಯನ ನಂಬಿಕೆ.

ಮಾಳಿಂಗರಾಯನು ತನ್ನ ಪ್ರಚಂಡ ದೃಢಪ್ರತಿಜ್ಞೆ ಮತ್ತು ಪರಾಕ್ರಮಗಳನ್ನು ತೋರಿ ಹೀನ ನೆರೆರಾಜನಾದ ಧರ್ಮ ರಾಜನನ್ನು ಪರಾಜಿತನನ್ನಾಗಿ ಮಾಡಿ ಸೆರೆಮನೆಯಲ್ಲಿದ್ದ ಏಳುನೂರು ಸಿದ್ಧರ ಹಿಂಡನ್ನು ಬಿಡುಗಡೆ ಮಾಡಿದನು. ಮಾಳಿಂಗರಾಯನ ಸಿದ್ಧಿಯ ಮತ್ತು ಸಾಹಸಕಾರ್ಯದ ಕೀರ್ತಿ ನಾಡಿನಲ್ಲೆಲ್ಲ ಹಬ್ಬಿತು. ಈತನ ಗುರು ಬೀರಪ್ಪನು ಮೆಚ್ಚಿದನು. ಇಂತಹ ಸಿದ್ಧಿ ಈ ಮಾಳಿಂಗರಾಯನ ಗುಡಿಯನ್ನು ಹುಲಿಜಂತಿಯಲ್ಲಿ ಕಟ್ಟಿರುವರು. ಪ್ರತಿವರ್ಷ ಆಶ್ವಯುಜ ಅಮಾವಾಸ್ಯೆಯ ದಿವಸ ಈತನ ಜಾತ್ರೆ ನಡೆಯುವುದು.

ಹಂಡೆಕುರುಬರು ಹುಲಜಂತಿಯ ಸಿದ್ಧ ಮಾಳಿಂಗರಾಯನ ಭಕ್ತರು. ಮಾಳಿಂಗರಾಯ ಹತ್ತಿಕಂಕಣದ ಹಂಡೆಕುರುಬರ ಜಾತಿಗೆ ಸೇರಿದವನು ಎಂದಿದ್ದಾರೆ.

ಹಾಲುಮತ ಸಮುದಾಯದ ಸಾಂಸ್ಕೃತಿಕವೀರ ವ್ಯಕ್ತಿಯಾಗಿ ಕಂಡುಬಂದ ಮಾಳಿಂಗರಾಯನ ಜೀವನ, ಪವಾಡಪುರುಷನಾಗಿದ್ದು, ಆತನ ಭೌಗೋಳಿಕ ವ್ಯಾಪ್ತಿ, ಸಮಾಜ ಕಾರ್ಯ ಇತ್ಯಾದಿ ವಿವರಗಳನ್ನು ಚರ್ಚಿಸಿದ್ದಾರೆ.

iii. ಸಂಗೊಳ್ಳಿ ರಾಯಣ್ಣ

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ ವೀರ ಮರಣವನ್ನಪ್ಪಿದ ಅಸಂಖ್ಯಾತ ಹೋರಾಟಗಾರರಲ್ಲಿ ಕುರುಬರ ಸಂಖ್ಯೆ ಕಡಿಮೆಯಿಲ್ಲ. ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣನ ಜೀವನಚರಿತ್ರೆ ಕುರಿತು ಚರ್ಚಿಸಿರುವುದು ಕಂಡುಬಂದಿದೆ. ರಾಯಣ್ಣನು ಜಾತಿಯಲ್ಲಿ

ಕುರುಬರವನು. ಬೆಳಗಾವಿ ಜಿಲ್ಲೆಯ ಸಂಪಗಾವಿ ತಾಲೂಕಿನ 'ಸಂಗೊಳ್ಳಿ' ರಾಯಣ್ಣನ ಹುಟ್ಟೂರು. ತಂದೆ ಭರಮಪ್ಪ, ತಾಯಿ ಕೆಂಚವ್ವ, ಅಜ್ಜ ರಾಗಪ್ಪನಾಗಿದ್ದನು. ರಾಯಣ್ಣನ ಮುತ್ತಜ್ಜ ರೋಗಿಗಳಿಗೆ ಆಯುರ್ವೇದ ವನಸ್ಪತಿಗಳನ್ನು ನೀಡಿ ರೋಗಗಳನ್ನು ಗುಣಪಡಿಸುತ್ತಿದ್ದನು. ಇದರಿಂದ ಜನರು ಇವರಿಗೆ ರೋಗಣ್ಣನವರ್ ಎಂಬ ಹೆಸರು ನೀಡಿದರು ಎಂಬ ಪ್ರತೀತಿಯಿದೆ.[೨೦೦] ಹೀಗಾಗಿ ಇಂದಿಗೂ ರೋಗಣ್ಣನವರ ಮನೆತನ ಸಂಗೊಳ್ಳಿಯಲ್ಲಿರುವುದು ಕಂಡುಬರುತ್ತದೆ.

ಕ್ರಿ.ಶ. ೧೮೨೪ರ ಪ್ರಥಮ ಹೋರಾಟದಲ್ಲಿ ರಾಯಣ್ಣ, ಚೆನ್ನಮ್ಮ ವೀರಯೋಧರಾಗಿ ಹೋರಾಡಿದರು. ಆದರೆ ಕಿತ್ತೂರು ಸಂಸ್ಥಾನ ಪತನವಾಗಿದ್ದರಿಂದ ಚೆನ್ನಮ್ಮ, ವೀರಮ್ಮ, ಜಾನಕಿಬಾಯಿ ಬಂಧಿತರಾದರು. ಅವರೊಂದಿಗೆ ರಾಯಣ್ಣನೂ ಬಂಧಿತನಾದ. ಬ್ರಿಟಿಷರ ಗುಲಾಮರಾಗಿದ್ದ ಕುಲಕರ್ಣಿಗಳು ಜನರಿಗೆ ಕಿರುಕುಳ ನೀಡತೊಡಗಿದರು. ಇದನ್ನು ಸಹಿಸದ ರಾಯಣ್ಣ ಸ್ವಾತಂತ್ರ್ಯಪ್ರಿಯ ಜನರನ್ನು ಒಗ್ಗೂಡಿಸಿಕೊಂಡು ಬ್ರಿಟಿಷರ ವಿರುದ್ಧ ಸಮರ ಸಾರಿದರು. ಕಿತ್ತೂರನಾಡಿನ ವೀರರಾದ ಬಿಚಗತ್ತಿ ಚನ್ನಬಸವ, ರಣಹಲಗೆಯ ಹನುಮಂತ ಮೊದಲಾದವರು ಇವರ ಜೊತೆಗೂಡಿದ್ದರು. ಇವರು ಬ್ರಿಟಿಷರ ದಿನನಿತ್ಯದ ಕಾರ್ಯಗಳಲ್ಲಿ ಅಡ್ಡಿ ಆತಂಕಗಳನ್ನು ಉಂಟುಮಾಡುತ್ತಿದ್ದರು. ಕಿತ್ತೂರು ಸಂಸ್ಥಾನವನ್ನು ಪುನಃ ಶಿವಲಿಂಗಪ್ಪನ ಆಧಿಪತ್ಯದಲ್ಲಿ ಸ್ಥಾಪಿಸುವುದೇ ಇವರ ಪ್ರಮುಖ ಧ್ಯೇಯವಾಗಿತ್ತು. ಗೆರಿಲ್ಲಾ ಯುದ್ಧ ತಂತ್ರವನ್ನು ಪ್ರಯೋಗಿಸಿ ಸರ್ಕಾರಿ ಕಛೇರಿಗಳ ಲೂಟಿ, ಕಾಗದ ಪತ್ರಗಳನ್ನು ಸುಡುವುದು ಮೊದಲಾದ ಕಾರ್ಯಗಳನ್ನು ಮಾಡತೊಡಗಿದರು. ಸಂಪಗಾವಿಯ ಮೇಲೆ ಜನವರಿ ೧೨, ೧೮೩೦ರಲ್ಲಿ ಮುತ್ತಿಗೆ ಹಾಕಿದನು. ಚಿಕ್ಕನಾಯಕನ ಕೂಪಕ್ಕೆ ಮುತ್ತಿಗೆ ಹಾಕಿ ಕಚೇರಿಯ ಕಾಗದ ಪತ್ರಗಳನ್ನು ಸುಟ್ಟುಹಾಕಿದರು. ಸಂಪಗಾವಿಯ ಹತ್ತಿರದ ಕೊಂಡದ ಬಳಿ ರಾಯಣ್ಣನ ಕೆಲವು ಜನರಿಗೂ ಹಾಗೂ ಕೃಷ್ಣರಾಯನ ನಡುವೆ ಯುದ್ಧ ನಡೆಯಿತು. ರಾಯಣ್ಣನ ಕಡೆ ಎಂಟು ಜನ ಕೊಲ್ಲಲ್ಪಟ್ಟು ೨೫ ಜನ ಗಾಯಗೊಂಡರು. ನಂತರದಲ್ಲಿ ಕೃಷ್ಣರಾಯ ರಾಯಣ್ಣನನ್ನು ಹಿಡಿಯಲು ಖಿದನಪುರ ಮತ್ತು ನೇಗಿನಹಾಳ ಗೌಡರನ್ನು ಜೊತೆಗೂಡಿಸಿಕೊಂಡು ಸಂಚು ಹೂಡಿದರು. ರಾಯಣ್ಣನ ಸ್ನಾನದ ನಂತರ ಊಟಕ್ಕೆ ಮುಂದಾದಾಗ ನೇಗಿನಹಾಳ ಗೌಡ ಲಕ್ಕಪ್ಪನು ರಾಯಣ್ಣನಿಗೆ ಕಾವಲುಗಾರನಾಗಿರುವನೆಂದು ಖಡ್ಗವನ್ನು ತನ್ನಲ್ಲಿರಿಸಿಕೊಂಡನು. ರಾಯಣ್ಣ ಊಟಕ್ಕೆ ಕುಳಿತಾಗ ಗೌಡರ ಸೈನಿಕರು ಹಠಾತ್ತನೆ ಆಕ್ರಮಣ ಮಾಡಿ ರಾಯಣ್ಣನನ್ನು ಬಂಧಿಸಿ ಧಾರವಾಡಕ್ಕೆ ಕೊಂಡೊಯ್ದರು. ೧೮೩೦ ಏಪ್ರಿಲ್ ೮ರಂದು ಇವನ ಜೊತೆಗೆ ೯ ಜನರಿಗೆ ಮರಣ ದಂಡನೆ ನೀಡಿದರು.

ರಾಯಣ್ಣ ಮರಣಪೂರ್ವದಲ್ಲಿ ತಿಳಿಸಿದ ಸ್ಥಳವಾದ ನಂದಗಡಕ್ಕೆ ಒಯ್ದರು. ಅಲ್ಲಿಯೇ ಅವನನ್ನು ಗಲ್ಲಿಗೇರಿಸಿದರು. ಗಲ್ಲಿಗೇರಿಸಿದ ಸ್ಥಳದಲ್ಲಿ ಇಂದು ರಾಯಣ್ಣನ ಸಮಾಧಿಯ ಸ್ಥಳದಲ್ಲಿ

ಆಲದ ಮರ ಬೆಳೆದಿದೆ. ಈ ಸಮಾಧಿ ಸ್ಥಳ ಜನರಿಗೆ ಬೇಡಿದ ವರ ಕೊಡುವ ದೇವಾಲಯವಾಗಿರುವುದು ಕಂಡುಬರುತ್ತದೆ. ಈಗ ಅಲ್ಲಿ ರಾಯಪುರ ೬೬ ಎಂಬ ಅವನ ಹೆಸರಿನ ಹಳ್ಳಿ ಇದೆ ಎಂದು ಹನುಮಂತಯ್ಯನವರು ತಿಳಿಸಿದ್ದಾರೆ.

ಹಾಗೆಯೇ ರಾಯಣ್ಣನ ಚರಿತ್ರೆ ಕುರಿತು ಅನೇಕ ಲೇಖನ, ಕೃತಿಗಳು, ಲಾವಣಿಗಳು ಬಂದಿವೆ. ಈತನ ಚರಿತ್ರೆಯನ್ನು ಅರಿಯದವರು ಯಾರೂ ಇಲ್ಲ. ಪ್ರತಿ ಪಟ್ಟಣದಲ್ಲಿ ಈತನ ಶಿಲಾಪ್ರತಿಮೆಗಳು ಆತನನ್ನು ನೆನಪಿಸುತ್ತವೆ. ಬ್ರಿಟಿಷರ ಕಾಲದಿಂದಲೂ ಈತನ ಚರಿತ್ರೆ, ಡೊಳ್ಳಿನ ಹಾಡು, ಹಂತಿಯ ಹಾಡು, ಸೋಬಾನದ ಹಾಡು, ಜಾನಪದ ಮೇಳದ ಮುಖಾಂತರ ಈತನ ಮಹಿಮೆ ಬಿತ್ತರಗೊಳ್ಳುತ್ತವೆ. ಈತನ ಕೈಯಲ್ಲಿ ಧರಿಸಿದ ಖಡ್ಗಕಂಠರಿಗಳೇ ಈತನು ಅದೆಂಥ ಶೂರನೆಂಬುದನ್ನು ಸಾರಿ ಹೇಳುತ್ತವೆ.

ಇಂಥ ರಾಷ್ಟ್ರವೀರನ ಜೀವನದ ಇತಿಹಾಸವನ್ನು ಹನುಮಂತಯ್ಯನವರು ಸಂಕ್ಷಿಪ್ತವಾಗಿ ತಿಳಿಸಿಕೊಟ್ಟಿದ್ದಾರೆ.

iv. ವೀರರಾಣಿ ಶ್ರೀ ದುರ್ಗಾವತಿದೇವಿ ಚಂದೇಲ್ ಚರಿತ್ರೆ

ಮಧ್ಯಭಾರತದ ಸಂಸ್ಥಾನದ ರಾಜನಾದ ಚಂದೇಲನ ಮಗಳು ದುರ್ಗಾವತಿದೇವಿ. ಇವರು ಕುರುಬ ಜಾತಿಯ 'ಚಂದೇಲ್' ಎಂಬ ಗೋತ್ರಕ್ಕೆ ಸೇರಿದವರು.[೨೦೧] ಇವಳನ್ನು ತನ್ನ ವಂಶಕ್ಕೆ ಅನುರೂಪನಾದ ಕುಲೀನ ರಾಜಪುತ್ರನಿಗೆ ಕೊಡಬೇಕೆಂದು ನಿರ್ಧರಿಸಿದ್ದನು. ಆದರೆ ಇವಳು ಗಾಥಾ ಮಂಡಲದ ಗೌಡರಾಜನಾದ 'ದಳಪತಿಶಹ'ನನ್ನು ಮನಸಾರೆ ಮೆಚ್ಚಿದ್ದಳು. ಇದು ಚಂದೇಲನಿಗೆ ಇಷ್ಟವಿರಲಿಲ್ಲ. ದಳಪತಿಶಹನು ಸಾಮಾನ್ಯ ರಾಜಪುತ್ರನೆಂದು ಅವನ ರಾಜ್ಯ ಬಹಳ ಚಿಕ್ಕದೆಂದು ಭಾವಿಸಿ, ಒಂದು ಉಪಾಯವನ್ನು ಮಾಡಿದನು. ಇವನು ತನ್ನ ಮಗಳನ್ನು ಮಧುವೆಯಾಗುವುದಾದರೆ ಅರ್ಧಲಕ್ಷ ಸೈನ್ಯದೊಡನೆ ಸ್ವಯಂವರಕ್ಕೆ ಬರಬೇಕೆಂದು ತಿಳಿಸಿದನು. ಇಷ್ಟೊಂದು ಸೈನ್ಯವನ್ನು ಕೂಡಿಸಲಾರದೆ ದಳಪತಿಶಹನು ಹಿಂದಿರುಗುವನೆಂದು ಚಂದೇಲನ ಅಭಿಮತ.

ಸ್ವಯಂವರದ ದಿನವು ಪ್ರಾಪ್ತವಾಯಿತು. ದುರ್ಗಾವತಿಯ ಸೌಂದರ್ಯ ಕೀರ್ತಿಯನ್ನು ಕೇಳಿ ಮೋಹಿತರಾದ ರಾಜಪುತ್ರರೆಲ್ಲರೂ ಮಂಟಪದಲ್ಲಿ ಬಂದು ನೆರೆದರು. ಆದರೆ ದಳಪತಿಶಹನು ಮಾತ್ರ ಇರಲಿಲ್ಲ. ಕನ್ನಿಕೆಯಾದ ದುರ್ಗಾವತಿಯು ಕೈಯಲ್ಲಿ ಪುಷ್ಪಮಾಲಿಕೆಯನ್ನು ಹಿಡಿದುಕೊಂಡು ಸ್ವಯಂವರ ಮಂಟಪಕ್ಕೆ ಬಂದಳು. ಆದರೆ ಅಲ್ಲಿ ದಳಪತಿಶಹನ ಉಜ್ವಲಮುಖವು ತೋರಲಿಲ್ಲ. 'ಆಶಿಸುವಂತಹನನ್ನು ಆಯ್ದುಕೊಳ್ಳು' ಎಂದು ಚಂದೇಲನು ಅಪ್ಪಣೆ ಕೊಟ್ಟನು. ದುರ್ಗಾದೇವಿಯು ನಿರುಕ್ತಳಾದಳು. ಸ್ವಯಂವರದ ಮಂಗಳ ಮುಹೂರ್ತವು ತಪ್ಪಿಹೋಗುವುದೆಂದು ಚಂದೇಲನು

ದುರ್ಗಾವತಿಯನ್ನು ತವಕಿಸಿದನು. ಅವಳು ಅಧೋವದನಳಾಗಿ ಕಣ್ಣೆತ್ತದೆ ಮುಂದೆ ಮುಂದೆ ಹೆಜ್ಜೆಯನ್ನಿಟ್ಟಳು. ಇವಳ ಈ ಅವಸ್ಥೆಯನ್ನು ನೋಡಿ ಆಮಂತ್ರಿತ ರಾಜಪುತ್ರರೆಲ್ಲರೂ ಆಶ್ಚರ್ಯಗೊಂಡರು. ಕೈಕಟ್ಟಿದಂತಾದ ಕನ್ಯೆಯು ಏನು ಮಾಡಬೇಕೆಂದು ತೋಚದೇ ನೆಟ್ಟನೆ ಮಂಟಪದ ಬಹಿದ್ವಾರಕ್ಕೆ ಹೋದಳು. ಎರಡು ಕಡೆಗಳಲ್ಲಿ ಕುಳಿತುಕೊಂಡ ಅತಿಥಿಗಳೆಲ್ಲ ಕೊರಳುಗಳನ್ನು ನೀಡುತ್ತಾ ಹೊರಬಾಗಿಲಿನ ಕಡೆಗೆ ತಮ್ಮ ದೃಷ್ಟಿಯನ್ನು ಚಾಚಿದರು. ರಾಜಾಂಗಣದಲ್ಲಿ ಆನೆಯನ್ನು ಹತ್ತಿ ದಳಪತಿಶಹನು ಬರುತ್ತಿದ್ದನು. ದುರ್ಗಾವತಿಯು ಪ್ರಾಣವಲ್ಲಭನಾದ ದಳಪತಿಶಹನು ಸ್ವಯಂವರಮಂಟಪದಲ್ಲಿ ಪಾದಾರ್ಪಣ ಮಾಡುತ್ತಲೇ ಪುಳಕಿತಳಾದ ಇವಳು ಓಡಿಹೋಗಿ ಕುಸುಮಮಾಲೆಯನ್ನು ಅವನ ಕೊರಳಿಗೆ ಹಾಕಿ ಅವನ ವಾಮಭಾಗವನ್ನು ಅವಲಂಬಿಸಿ ನಿಂತುಬಿಟ್ಟಳು. ಭಗ್ನಮನೋರಥನಾದ ಚಂದೇಲನು ತನ್ನ ಮಗಳ ನಡತೆಯನ್ನು ನೋಡಿ ಅವಕ್ಕಾದನು. ಮನಃಪೂರ್ವಕವಾಗಿ ಮಗಳನ್ನು ಅಳಿಯನಿಗೆ ಕೊಡುವುದಕ್ಕೆ ಅವನು ಸಮ್ಮತಿಸಲಿಲ್ಲ. ದುರ್ಗಾವತಿಯನ್ನು ಅಳಿಯನ ಕೈಗೆ ಖಡ್ಗಧಾರಾಪೂರ್ವಕವಾಗಿ ಕೊಡಬೇಕೆಂದು ನಿಶ್ಚಯಿಸಿದನು. ಕೂಡಲೇ ಇತ್ತಂಡಗಳ ಸೇನೆಗಳು ಸನ್ನದ್ಧವಾಗಿ ಬಂದವು. ಸ್ವಯಂವರ ಮಂಟಪವು ಸಮರಭೂಮಿಯಾಯಿತು. ಅಳಿಯನಿಗೂ ಮಾವನಿಗೂ ಕಾಳಗವಾಯಿತು. ಚಂದೇಲನು ಸೋತನು. ವಿಜಯಿಯಾದ ದಳಪತಿಶಹನು ದುರ್ಗಾವತಿಯನ್ನು ಕರೆದುಕೊಂಡು ಹೋದನು.

ಆದರೆ ಈ ಇಬ್ಬರು ಪ್ರೇಮಿಗಳು ಬಹಳ ಕಾಲ ಜೀವನ ಮಾಡಲಿಲ್ಲ. ಪುತ್ರ ಸಂತಾನವಾಗಿ ಸ್ವಲ್ಪಕಾಲದಲ್ಲಿಯೇ ತೀರಿಹೋದನು. ಗಾಢಾಮಂಡಲದ ಮೇಲೆ ಸ್ವಲ್ಪ ಕಾಲದವರೆಗೆ ಅಂಧಕಾರವು ಉಂಟಾಯಿತು. ದುರ್ಗಾವತಿಯು ತನಗೆ ಒದಗಿದ ಕಷ್ಟಸಂಕಷ್ಟಗಳನ್ನು ಮರೆತು, ಪತಿವಿಯೋಗದಿಂದ ಉಂಟಾದ ಕಣ್ಣೀರುಗಳನ್ನು ಕಣ್ಣುಗಳಿಂದ ಒರೆಸಿಬಿಟ್ಟಳು. ದುಃಖಸೂಚಕವಾದ ವ್ಯಸನಗಳನ್ನು ತೆಗೆದಿಟ್ಟಳು. ಪ್ರಜಾಪರಿಪಾಲನದಲ್ಲಿಯೂ ಸಂಸ್ಥಾನಾಭಿವೃದ್ಧಿಯಲ್ಲಿಯೂ ಬಾಲಕನ ಅಭ್ಯುದಯದಲ್ಲಿಯೂ ತನ್ನ ಮನಸ್ಸನ್ನೂರಿದಳು. ಮಗ ವೀರನರೇಂದ್ರನು ಪ್ರಾಯಕ್ಕೆ ಬರುವವರೆಗೆ ದುರ್ಗಾವತಿಯು ರಾಜಕಾರ್ಯಸೂತ್ರಗಳನ್ನು ಕೈಯಲ್ಲಿ ಹಿಡಿದುಕೊಂಡಳು. ಅವಳ ಆಳ್ವಿಕೆಯಲ್ಲಿ ಮಾರ್ಗಗಳು ಸಂಸ್ಥಾನವನ್ನು ಸೀಳಿಹೋದವು. ಪ್ರಯಾಣಿಕರಿಗೆ ಅನುಕೂಲವಾದ ಪ್ರವಾಸಿ ತಾಣಗಳು ತಲೆದೋರಿದವು. ಕೆರೆ, ಕಾಲುವೆಗಳು ವ್ಯವಸಾಯಕ್ಕೆ ಸಹಾಯಕವಾಗಿ ಹರಿದುಹೋದವು. ರಾಜ್ಯದ ಕಂದಾಯವು ಇಮ್ಮಡಿಯಾಯಿತು. ಗಾಢಾಮಂಡಲವು ಉನ್ನತಿಗೆ ಏರಿತು. ಪ್ರಜೆಗಳಿಗೆ ತಾಯಿಯಂತಿದ್ದ ದುರ್ಗಾವತಿಯ ಆಳ್ವಿಕೆಯಲ್ಲಿ ಸುಖವಂತರಾದ ಜನರೆಲ್ಲರೂ ತಮ್ಮ ಅಧಿಪತಿಯ ಅಕಾಲಿಕ ಮರಣ ದುಃಖವನ್ನು ಮರೆತುಬಿಟ್ಟರು.

ಈ ವೀರ ಯುವತಿಯನ್ನು ಕುರಿತು ಕರ್ನಲ್ 'ಸ್ಲೀಮೆನ್' ಸಾಹೇಬರು ಬರೆದಿರುವುದನ್ನು ಪ್ರಸ್ತುತಪಡಿಸಿರುವುದು ಹೀಗಿದೆ. "ರಣಸೂರಿ ರಾಣಿಯಾದ ದುರ್ಗಾವತಿಯ ಸ್ಮಾರಕವು ಅದೇ ಪರ್ವತ ಪ್ರದೇಶ ಮಧ್ಯದಲ್ಲಿ ಕಟ್ಟಲ್ಪಟ್ಟಿದೆ. ಅಲ್ಲಿ ಎರಡು ಪಾಷಾಣ ಸ್ತಂಭಗಳು ನೆಟ್ಟಗೆ ನಿಲ್ಲಿಸಿದ್ದು, ಅವುಗಳು ಆ ಯುದ್ಧಭೂಮಿಯು ಪ್ರೇಕ್ಷಕರ ಮನಸ್ಸಿನಲ್ಲಿ ಮೂರ್ತಿವಂತವಾದ ದೃಶ್ಯವನ್ನು ಉತ್ಪನ್ನ ಮಾಡುವವು. ಈ ಗಿರಿಶಿಖರದಲ್ಲಿ ರಾತ್ರಿ ಸಮಯದಲ್ಲಿ ಅತಿ ಭಯಂಕರವಾದ ರಣಘೋಷವು ಆಗುತ್ತದೆಂದು ಹೇಳುವರು. ಈ ನಿರ್ಜನವಾದ ಮತ್ತು ರಮಣೀಯವಾದ ಪ್ರದೇಶ ಮಧ್ಯದಲ್ಲಿ ಹೋಗುವ ಪ್ರವಾಸಿ ಜನರು ಅತ್ಯಾನಂದದಿಂದ ಈ ಸ್ಥಳದಲ್ಲಿ ನಡೆಯುವರು. ಈ ರಾಣಿಯ ಸಮಾಧಿಯ ದರ್ಶನವನ್ನು ಪ್ರೇಮಪೂರ್ವಕವಾಗಿ ಸ್ವೀಕರಿಸುವರು. ಅವಳ ಪರಾಕ್ರಮ ಗುಣಗಳಿಂದ ಬೆರಗಾಗಿ ಸ್ವಾನಂದ ಚಿತ್ತದಿಂದ ಅವಳನ್ನು ಪೂಜಿಸುವರು. ಈ ಪ್ರದೇಶ ಮಧ್ಯದಲ್ಲಿ ಹೊಳೆಹೊಳೆವ ಕಂಚಿನ ತುಂಡುಗಳು ಹೇರಳವಾಗಿ ಸಿಕ್ಕುತ್ತವೆ. ಅವನ್ನು ತೆಗೆದುಕೊಂಡು ಆ ಜನರು ಅಲ್ಲಿ ಸಮರ್ಪಿಸುವರು. ತಮ್ಮ ಪೂಜಾಭಕ್ತಿಗನುಸಾರವಾಗಿ ನಾನು ನೋಡುತ್ತಲೇ ಮಹಾರಾಣಿ ದುರ್ಗಾವತಿಯ ದಿವ್ಯಗುಣದ ಅಭಿನಂದನಾರ್ಥವಾಗಿ ಒಂದು ತುಂಡನ್ನು ಅರ್ಪಣೆ ಮಾಡಿದೆನು"[೨೦೨] ಎಂದು ಹೇಳಿರುವುದನ್ನು ಹನುಮಂತಯ್ಯನವರು ವ್ಯಕ್ತಪಡಿಸಿದ್ದಾರೆ.

ಕುರುಬರ ಧೀರ ಮಹಿಳೆಯರ ಸಾಲಿನಲ್ಲಿ ಅಹಲ್ಯಾಬಾಯಿಯಂತೆ ದುರ್ಗಾವತಿ ದೇವಿಯು ಒಬ್ಬಳು. ಅಹಲ್ಯಾಬಾಯಿ, ಯೇಸುಬಾಯಿ, ತಾರಾಬಾಯಿ, ರಾಧಾಬಾಯಿ, ಗೋಪಿಕಾಬಾಯಿ, ಲಕ್ಷ್ಮೀಬಾಯಿಯಂತೆ ದುರ್ಗಾವತಿಯು ಮಧ್ಯಪ್ರದೇಶದಲ್ಲಿ ಪ್ರಸಿದ್ಧಳಾಗಿದ್ದಾಳೆ.

ಒಟ್ಟಾರೆಯಾಗಿ ಹನುಮಂತಯ್ಯನವರ ಭಾರತ ದೇಶದ ಕುರುಬರ ಚರಿತ್ರೆಯನ್ನು ಅವಲೋಕಿಸಿದಾಗ ಭೂ ಉತ್ಖನನದಿಂದ ಹಿಡಿದು ಆಧುನಿಕ ಕಾಲದವರೆಗೆ ನಡೆದ ವಿದ್ಯಮಾನ ಗಳನ್ನು ಅವಲೋಕಿಸಿ ಚಾರಿತ್ರಿಕ ನೆಲೆಯ ಮೂಲಕ ತಿಳಿಸಿದ್ದಾರೆ.

೧೫. ವಿ.ಆರ್.ಹನುಮಂತಯ್ಯ ಅವರ ಕುರಿತು ವಿದ್ವಾಂಸರ ಅಭಿಪ್ರಾಯಗಳು

ಎಂ.ಸಿ.ಕೃಷ್ಣಸ್ವಾಮಿ ಅಯ್ಯಂಗಾರ್

ಸ್ವಾತಂತ್ರ್ಯಪ್ರಿಯರಾದ ಹನುಮಂತಯ್ಯನವರು ಆ ಕಾಲಕ್ಕೆ ತಮಗೆ ಲಭಿಸಿದ್ದ ಸರ್ಕಾರದ ಸಣ್ಣ ನೌಕರಿಯನ್ನು ತ್ಯಜಿಸಿ, ೧೯೧೪ನೆಯ ಸಂವತ್ಸರದಿಂದಲೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪಾದಾರ್ಪಣೆ ಮಾಡಿ, ಕೆಲ ವರುಷ ಸರ್ಕಾರೀ ಗ್ರಾಂಟನ್ ಏಡ್ ಸ್ಕೂಲನ್ನು ಸ್ಥಾಪಿಸಿದ್ದು, ತದನಂತರ ಕೆಲಕಾಲ "ಭಾರತ ಪುತ್ರ" ಎಂಬ ಕನ್ನಡ ವಾರಪತ್ರಿಕಾ ಸಂಪಾದಕರಾಗಿದ್ದರು.[೨೦೩]

೧. ೧೯೨೬ರಲ್ಲಿ ಪ್ರಥಮ ಮುದ್ರಣ "ಕುರುಬರ ಚರಿತ್ರೆ". ೨. ೧೯೩೬ರಲ್ಲಿ 'ಸಂಕ್ಷಿಪ್ತ ವಿಜಯನಗರ ಸಾಮ್ರಾಜ್ಯ ಚರಿತ್ರೆ', ೩. ೧೯೫೨ರಲ್ಲಿ ಸಂಪೂರ್ಣ 'ವಿಜಯನಗರ ಸಾಮ್ರಾಜ್ಯ ಚರಿತ್ರೆ', ೪.೧೯೫೨ರಲ್ಲಿ

ದ್ವಿತೀಯ ಮುದ್ರಣ 'ಭಾರತ ದೇಶದ ಕುರುಬರ ಚರಿತ್ರೆ', ೫. 'ಭೋಜರಾಜ ಕಾಳಿದಾಸ ಚರಿತ್ರೆ' ಎಂಬ ಗ್ರಂಥಾದಿಗಳನ್ನು ಪ್ರಕಟಿಸಿ ಅನುಭವಿಗಳಾಗಿರುತ್ತಾರೆ. ಇವರ ನಾಲ್ಕನೆಯ ಗ್ರಂಥಕ್ಕೆ(ಭಾರತ ದೇಶದ ಕುರುಬ ಚರಿತ್ರೆ) ಇಂದೂರು ಸಂಸ್ಥಾನದ ಶ್ರೀಮನ್ಮಹಾರಾಜ, ಶ್ರೀಮಂತ ಶ್ರೀಯಶವಂತರಾವ್ ಹೋಳ್ಕರ್ ಮಹಾರಾಜರು ೫೦೦-೦೦ ಐದು ನೂರು ರೂಪಾಯಿಗಳನ್ನು ಬಹುಮಾನವಾಗಿ ದಯಪಾಲಿಸಿರುವುದು ಇತರ ರಾಜ ಮಹಾರಾಜರುಗಳಿಗೆಲ್ಲಾ ಆದರ್ಶಪ್ರಾಯವಾಗಿರುತ್ತದೆ. ಈ ಮಹಾರಾಜರ ಔದಾರ್ಯವೂ, ಕನ್ನಡ ಭಾಷಾಭಿಮಾನವೂ ತುಂಬಾ ಸ್ತುತ್ಯವೂ, ಚಿರಸ್ಮರಣೀಯವೂ ಆಗಿದೆ. ಜಗನ್ಮಾನ್ಯಳಾದ ಶ್ರೀದೇವಿ ಅಹಲ್ಯಾಬಾಯಿ ಮಹಾರಾಣಿ ಹೋಳ್ಕರ್ ಮನೆತನದವರಿಗಿಂತ ಔದಾರ್ಯ ಬುದ್ಧಿಯು ಸ್ವಾಭಾವಿಕವಾಗಿಯೇ ಅವರ ಮನೆತನಕ್ಕೆ ಬಂದಿದೆ. ಈ ಮಹಾರಾಜರ ಕೀರ್ತಿಯು ಯಾವಚ್ಚಂದ್ರ ದಿವಾಕರ ಸ್ಥಿರವಾಗಿರಲಿ.

ಹನುಮಂತಯ್ಯನವರು ಮೇಲೆ ನಿರೂಪಿಸಿರುವಂತೆ ಇಂದಿನವರೆಗೆ ಸುಮಾರು ೫೦ ವರ್ಷಗಳ ಕಾಲ ಅವಿಶ್ರಾಂತವಾಗಿ ಅವಿಚ್ಛಿನ್ನವಾಗಿ ಕನ್ನಡ ಸಾಹಿತ್ಯ ಸೇವೆ, ಸ್ವಸಮಾಜ ಸೇವೆ, ಈಶ ಸೇವೆ, ಸ್ವದೇಶ ಸೇವೆಗಳನ್ನು ಸಲ್ಲಿಸಿರುವುದು ಶ್ಲಾಘ್ಯವೇ ಸರಿ. ಇವರಿಗೀಗ ಅಂದರೆ 'ಭೋಜರಾಜ ಕಾಳಿದಾಸ ಚರಿತ್ರೆ' ಕೃತಿ ಬರೆದು ಮುಗಿಸಿದಾಗ ೮೫ ವರ್ಷಗಳ ವಯಸ್ಸಾಗಿ ಮುಪ್ಪಿನ ದೆಶೆಯಲ್ಲಿದ್ದರೂ ಸಾಹಿತ್ಯ ಕ್ಷೇತ್ರದಲ್ಲಾಸಕ್ತರಾಗಿರುವುದನ್ನು ನೋಡಿ ತರುಣರು ಕೂಡ ತಲೆ ತಗ್ಗಿಸುವಂತಿದೆ.

ಇವರ ಗ್ರಂಥವನ್ನು ಸರ್ವರೂ ಆದರದಿಂದ ಎಡಬಿಡದೇ ಓದತಕ್ಕದಷ್ಟೇ ಆಗಿರದೇ ಎಲ್ಲಾ ಸರ್ಕಾರಿ ಸ್ಕೂಲ್, ಕಾಲೇಜ್, ವಿಶ್ವವಿದ್ಯಾಲಯಾದಿಗಳ ಲೈಬ್ರೇರಿಗಳಿಗೂ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಹೆಚ್ಚಾಗಿ ಇತಿಹಾಸ ಪ್ರೇಮಿಗಳಿಗೂ ಅತ್ಯಾವಶ್ಯಕವಾದ ಗ್ರಂಥವಾಗಿದೆ.

ದೇಹವು ಅಸ್ಥಿರವಾದುದು, ಕೀರ್ತಿಯು ಸುಸ್ಥಿರವಾದುದು ಎಂದು ಅವರ ವ್ಯಕ್ತಿತ್ವವನ್ನು ಕುರಿತು ಹೇಳಿದ್ದಾರೆ.

ಪ್ರೊ. ಸುಧಾಕರ

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಜನಾಂಗೀಯ ಅಧ್ಯಯನವನ್ನು ನಡೆಸಿ, "ಕುರುಬರ ಚರಿತ್ರೆ" ಎಂಬ ಗ್ರಂಥವನ್ನು ೧೯೨೬ರಲ್ಲಿ ಹೊರತಂದ ದಿವಂಗತ ವಿ.ಆರ್.ಹನುಮಂತಯ್ಯನವರು ದಿಟಕ್ಕೂ ಪ್ರಾತಃಸ್ಮರಣೀಯರು.

ಸಂಘ-ಸಂಸ್ಥೆಗಳು ಕೈಗೆತ್ತಿಗೊಂಡು ಮಾಡಿ ಮುಗಿಸುವಂಥ ಒಂದು ಕಾರ್ಯವನ್ನು ಸ್ಕೂಲ್ ಮಾಸ್ಟರಾಗಿದ್ದ ಹನುಮಂತಯ್ಯನವರು ಏಕಾಂಗಿಯಾಗಿ ಕೈಗೊಂಡು ತಮ್ಮ ಸ್ವಂತ ಹಣದಲ್ಲಿ ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿ ಸಂಚರಿಸಿ ಮಾಹಿತಿಗಳನ್ನು ಸಂಗ್ರಹಿಸಿ, ನಾನಾ ಗ್ರಂಥಗಳ

ಅಧ್ಯಯನದಿಂದ ಆಧಾರಗಳನ್ನು ದೊರಕಿಸಿಕೊಂಡು ಅವುಗಳನ್ನೆಲ್ಲಾ ಕ್ರಮಬದ್ಧವಾಗಿ ಜೋಡಿಸಿ, ಒಂದು ಗ್ರಂಥರೂಪಕ್ಕೆ ತರಬೇಕಾದರೆ ಅವರೆಷ್ಟು ಶ್ರಮಿಸಿದ್ದಾರೆ, ಚಿಂತಿಸಿದ್ದಾರೆ ಎನ್ನುವುದನ್ನು ನಾವು ಊಹಿಸಿಕೊಳ್ಳಬೇಕಾಗುತ್ತದೆ. ಬರೀ ಕರ್ನಾಟಕದ ಕುರುಬರಿಗೆ ಮಾತ್ರ ಸೀಮಿತ ಮಾಡದೆ ಆಂಧ್ರ, ತಮಿಳುನಾಡು, ಮಲೆಯಾಳ, ಮಹಾರಾಷ್ಟ್ರ ಮತ್ತು ಉತ್ತರಭಾರತದ ಕುರುಬರನ್ನು ಒಳಗೊಂಡಂತೆ ವಿಸ್ತೃತ ಅಧ್ಯಯನಕ್ಕೆ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಇಂದೂರ ಹೋಳ್ಕರರ ವಿವರವಾದ ಇತಿಹಾಸ ಮತ್ತು ಭಾವಚಿತ್ರಗಳನ್ನು ನೋಡಿದರೆ, ಅವರೇ ಅಲ್ಲಿಗೆ ಖುದ್ದಾಗಿ ಹೋಗಿ ಬಂದಿದ್ದಾರೆ ಎಂಬುದು ಖಚಿತವಾಗುತ್ತದೆ. ಸಮಾಜ ಸಂಘಟನೆಯೇ ಸಮಾಜಾಭಿವೃದ್ಧಿಯೇ ತಮ್ಮ ಜೀವನದ 'ಗಾಯಿತ್ರಿ ಮಂತ್ರ'ವೆಂಬಂತೆ ದುಡಿಯುವ ಇಂಥ ವ್ಯಕ್ತಿಗಳು ಸಿಕ್ಕುವುದು ಅಪರೂಪ. ವಿದ್ಯೆ ಕಲಿತು ಉನ್ನತ ಅಧಿಕಾರಕ್ಕೇರಿದ ಎಷ್ಟೋ ಜನರಿಗೆ ತಮ್ಮ ಕುಟುಂಬದ ಹೊರತು ಸಮಾಜ ಇರುವುದಿಲ್ಲ. ಹಣದಾಹದ ಹೊರತು ಸಮಾಜಾಭಿವೃದ್ಧಿಯ ದಾಹ ಅವರನ್ನು ಕಾಡುವುದಿಲ್ಲ. ಆದ್ದರಿಂದ ವಿ.ಆರ್. ಹನುಮಂತಯ್ಯ ಅವರು ನಿಜಕ್ಕೂ ಪ್ರಾತಃಸ್ಮರಣೀಯರು[೨೦೪] ಎಂದು ವ್ಯಕ್ತಪಡಿಸಿದ್ದಾರೆ.

ಡಾ. ಶಿವಾನಂದ ಗುಬ್ಬಣ್ಣವರು

ಭವ್ಯ ಪರಂಪರೆ ಹಾಗೂ ಕಲೆ ಸಾಹಿತ್ಯವನ್ನು ಹೊಂದಿರುವ ಕುರುಬ ಸಮುದಾಯ ಕುರಿತು ಪ್ರಕಟಗೊಂಡ ವಿ.ಆರ್.ಹನುಮಂತಯ್ಯ ಅವರ "History of Indian sheeperds" ಈ ಕೃತಿಯನ್ನು ಕುರಿತು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ.

"ಜನ್ಮತಃ ಕುರುಬರಾದ ಹನುಮಂತಪ್ಪ ಗ್ರಂಥಾರಂಭದಲ್ಲಿ ಜಾಗತಿಕ ಇತಿಹಾಸದಲ್ಲಿ ಕುರುಬರ ಸಂಸ್ಕೃತಿ, ಶ್ರಮ, ಸಾಧನೆ ಅನನ್ಯವಾದದ್ದು, ಅರಸರಾಗಿ, ಭೂಪಾಲಕರಾಗಿ, ಕುರಿಗಾಹಿಗಳಾಗಿ, ನಾಡು-ನುಡಿಯ ಸಂಸ್ಕೃತಿಗಾಗಿ ಈ ಜನಾಂಗದ ಕೊಡುಗೆ ಅಪರಿಮಿತವಾದದ್ದು. ಇಂತಹ ಭವ್ಯ ಪರಂಪರೆ ಹೊಂದಿರುವ ಕುರುಬ ಸಮಾಜವನ್ನು ಇಂದಿನವರಿಗೆ ಪರಿಚಯಿಸುವುದಕ್ಕಾಗಿ ಕೃತಿ ರಚಿಸಬೇಕಾಯಿತೆಂದು ಹೇಳಿಕೊಂಡರೂ ಬಹುಸಂಖ್ಯಾತ ಕುರುಬರಿಗೆ ಕನಿಷ್ಟ ಕನ್ನಡ ಓದು-ಬರಹ ಬಾರದಿರುವಾಗ ಅವರು ತಮ್ಮ ಆಂಗ್ಲ-ಆಂಗ್ಲ ಕೃತಿ ವಿಚಾರಗಳನ್ನು ಅರಿಯಲು ಅದೇಗೆ ಸಾಧ್ಯವೆಂಬ ಸಾಮಾನ್ಯ ಸಂಗತಿ ಸ್ವತಃ ಶಾಲಾ ಶಿಕ್ಷಕರಾದ ಹನುಮಂತಪ್ಪ ಅವರಿಗೆ ಹೊಳೆದಿದ್ದು ಆಶ್ಚರ್ಯವೆನಿಸುತ್ತದೆ. ಕುರುಬರ ಮೂಲ, ಇತಿಹಾಸ, ರಾಜಕೀಯ ಹಾಗೂ ಸಮಕಾಲೀನ ಚರಿತ್ರೆ ನಾಲ್ಕು ಅಧ್ಯಾಯಗಳಲ್ಲಿ ಹರಡಿಕೊಂಡು ಕುರುಬರ ಕುರಿತು ವಿಸ್ತೃತ ಮಾಹಿತಿ ನೀಡುವ ಕೃತಿ ೧೯೩೧ ರಷ್ಟು ಹಿಂದೆಯೇ ಪ್ರಕಟಗೊಂಡಿರುವುದರಿಂದ ಕುರುಬರ ಅನಂತರದ ಸಮಾಜೋ-ಆರ್ಥಿಕ-ರಾಜಕೀಯ ಬೆಳವಣಿಗೆಗಳ ವಿಶ್ಲೇಷಣೆ ಹಾಗೆಯೇ ಉಳಿದುಬಿಡುತ್ತದೆ[೨೦೫] ಎಂದು ತಮ್ಮ ಅನಿಸಿಕೆಯನ್ನು ಈ ರೀತಿಯಾಗಿ ಪ್ರಸ್ತಾಪಿಸಿದ್ದಾರೆ.

ಬ.ಪ.ನಾಯ್ಕರ

"ವಿ.ಆರ್. ಹನುಮಂತಪ್ಪ ಎಂಬುವರು ಏಳು-ಎಂಟು ಭಾಷೆ ಬಲ್ಲವರಾಗಿದ್ದು, ಕನ್ನಡವಲ್ಲದೇ ನಮ್ಮ ನೆರೆ ರಾಜ್ಯಗಳಾದ ತೆಲುಗು, ತಮಿಳು, ಮರಾಠಿ, ಭಾಷೆಗಳಲ್ಲದೇ, ಹಿಂದಿ, ಸಂಸ್ಕೃತ, ಇಂಗ್ಲೀಷ್ ಭಾಷೆ ತಿಳಿದವರಾಗಿದ್ದು ಭಾರತದಾದ್ಯಂತ ಪಸರಿಸಿದ ಈ ಜನಾಂಗದ ಬಗ್ಗೆ ಆ ಭಾಷೆಗಳಲ್ಲಿದ್ದ ಚರಿತ್ರೆಗಳ ತೌಲನಿಕ ಅಭ್ಯಾಸದಿಂದ ಬರೆದ "ಭಾರತ ದೇಶದ ಕುರುಬರ ಚರಿತ್ರೆ" ಕೃತಿಯಲ್ಲಿ ಈ ಜನಾಂಗದ ಸಂಸ್ಕೃತಿ, ಉದ್ಯೋಗ, ಕಲೆಗಳ ಬಗೆಗೆ ವಿವರವಾದ ವಿಷಯ ಬಂದಿದೆ. ಸುಮಾರು ಮುನ್ನೂರು ಪುಟಗಳನ್ನು ಮೀರಿ ಬರೆಯಲ್ಪಟ್ಟ ಈ ಕೃತಿ ನಾಲ್ಕು ವಿಭಾಗವಾಗಿ ಮುದ್ರಿಸಲ್ಪಟ್ಟಿದೆ. ಮುದ್ರಣ ಕಾರ್ಯದ ಪ್ರಗತಿ ಸಾಧಾರಣವಿದ್ದ ಆ ಕಾಲದಲ್ಲಿ ಹೊರ ತಂದ ಹನುಮಂತಪ್ಪನವರ ಗ್ರಂಥ ಆಧಾರ ಗ್ರಂಥದ ಹಿರಿಮೆ ಹೊಂದಿದೆ. ಅದಕ್ಕಾಗಿಯೇ ಇವರು "ಕುರುಬರ ಪಿತಾಮಹ" ಎನ್ನುವ ಗೌರವಕ್ಕೆ ಪಾತ್ರರಾಗಿದ್ದಾರೆ"[೨೦೬] ಎಂದು ಹೇಳಿದ್ದಾರೆ.

ಚಂದ್ರಕಾಂತ ಬಿಜ್ಜರಗಿ

"ಶ್ರೀ ಹನುಮಂತಯ್ಯನವರು ಬಹಳ ಹಿಂದೆಯೇ ಅಪಾರ ಪರಿಶ್ರಮದಿಂದ ರಚಿಸಿದ 'ಭಾರತ ದೇಶದ ಕುರುಬರ ಚರಿತ್ರೆ' ಈ ಕೃತಿಯು ತನ್ನ ಹಲವು ಮಿತಿಗಳ ನಡುವೆಯೂ ಇಂದಿಗೂ ಈ ಜನಾಂಗದ ಪರಂಪರೆಯ ಬಗ್ಗೆ ಏಕೈಕ ಮುಖ್ಯ ಗ್ರಂಥವಾಗಿದೆ"[೨೦೭] ಎಂದು ಪ್ರಸ್ತಾಪಿಸಿದ್ದಾರೆ.

ಡಾ. ಎಫ್.ಟಿ. ಹಳ್ಳಿಕೇರಿ

"ಹನುಮಂತಯ್ಯನವರ ಉಪಲಬ್ಧವಿರುವ ಕೃತಿ ಮತ್ತು ಲೇಖನಗಳನ್ನು ಪರಾಮರ್ಶಿಸಿದಾಗ ಇವರು ಕರ್ನಾಟಕದ ಪ್ರಮುಖ ಸಂಶೋಧಕರ ಸಾಲಿನಲ್ಲಿ ಸ್ಥಾನವನ್ನು ಪಡೆಯುತ್ತಾರೆಂದು ಖಂಡಿತವಾಗಿ ಹೇಳಬಹುದು. ಕುರುಬ ಸಮುದಾಯದ ಸಮಗ್ರ ಚರಿತ್ರೆಯನ್ನು ಮೊದಲ ಬಾರಿಗೆ ಕಟ್ಟಿಕೊಟ್ಟವರು ಹನುಮಂತಯ್ಯನವರು. ಈ ಹಿನ್ನೆಲೆಯಲ್ಲಿ ವಚನ ಸಾಹಿತ್ಯವನ್ನು ಶೋಧಿಸಿದ ಕಾರಣವಾಗಿ ಫ.ಗು. ಹಳಕಟ್ಟಿ ಅವರನ್ನು ವಚನ ಪಿತಾಮಹ ಎಂದು ಕರೆದಿದ್ದಾರೆಯೋ ಹಾಗೆಯೇ ಹನುಮಂತಯ್ಯನವರನ್ನು "ಹಾಲುಮತ ಪಿತಾಮಹ" ಎಂದು ಕರೆಯುವುದರಲ್ಲಿ ಅತಿಶಯೋಕ್ತಿಯೇನಲ್ಲ" ಎಂದು ಹೇಳುತ್ತಾರೆ.[೨೦೮]

ಚಿಕ್ಕಣ್ಣಯಣ್ಣೆಟ್ಟೆ

ವಿ.ಆರ್.ಹನುಮಂತಯ್ಯ ಅವರು "ಭಾರತ ದೇಶದ ಕುರುಬರ ಚರಿತ್ರೆ" ಬರೆಯುವ ಹಿಂದೆ ಬಹುಭಾಷಾ ಪಾಂಡಿತ್ಯವನ್ನು ಹೊಂದಿದ್ದರು ಅನ್ನುವುದು ಖಚಿತವಾಗುತ್ತದೆ. ಏಕೆಂದರೆ ಕುರುಬರ ಚರಿತ್ರೆಯೊಂದಿಗೆ ಹಲವಾರು ರಾಜ್ಯಗಳ ಕುರುಬರ ಸಂಸ್ಕಾರ, ನಂಬಿಕೆ, ಆಚಾರ, ವಿಚಾರಗಳನ್ನು ತೌಲನಿಕವಾಗಿ ಹೇಳುತ್ತಾರೆ. ಇಂತಹ ಚಿತ್ರ ಕೊಡುವಾಗ ಯಾವುದೇ ಒಂದು ಸಂಸ್ಕೃತಿಯಲ್ಲಿ

ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಹಲವಾರು ವ್ಯತ್ಯಾಸಗಳನ್ನು ಕಾಣಬಹುದು. ಈ ವೈವಿಧ್ಯವನ್ನು ಗುರುತಿಸಿದಾಗ ಭಾಷೆ ಒಂದು ಪ್ರಮುಖ ಸಾಧನವಾಗಿ ಕೆಲಸ ಮಾಡುತ್ತದೆ. ಹನುಮಂತಯ್ಯನವರು ಇಂಗ್ಲೀಷ್, ಹಿಂದಿ, ಸಂಸ್ಕೃತ, ತೆಲುಗು, ತಮಿಳು, ಮರಾಠಿ ಕಲಿತಿದ್ದರು ಎನ್ನುವುದು ಅವರ "ಭಾರತ ದೇಶದ ಕುರುಬರ ಚರಿತ್ರೆ"ಯ ಉದ್ದಕ್ಕೂ ಆಧಾರ ದೊರೆಯುತ್ತದೆ[೨೯] ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೧೬. ಕರ್ನಾಟಕ ಕುರುಬರು: ತೌಲನಿಕ ಅಧ್ಯಯನ

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಬ್ರಿಟಿಷರ ಆಡಳಿತಾತ್ಮಕ ಕಾರಣದಿಂದಾಗಿ ಭಾರತದ ವಿಭಿನ್ನ ಸಮುದಾಯವನ್ನು ಕುರಿತಂತೆ ಜನಾಂಗೀಯ ಅಧ್ಯಯನಗಳು ನಡೆದವು. ಆಗ ಕುರುಬ ಜನಾಂಗವನ್ನು ಕುರಿತು ವಿ.ಆರ್.ಹನುಮಂತಯ್ಯನವರ 'ಕುರುಬರ ಚರಿತ್ರೆ'(೧೯೨೬) ಕೃತಿಯನ್ನು ರಚಿಸಿದರು. ಇದು ಕುರುಬರ ಇತಿಹಾಸವನ್ನು ಸಮಗ್ರವಾಗಿ ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಈ ಕೃತಿ ಈ ಸಮುದಾಯದ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ರಾಜಕೀಯ ಬಗೆಗೆ ವಿವರಿಸುತ್ತದೆ. ಆದರೆ ರಾಜಕೀಯ ಜೀವನದ ಬಗ್ಗೆ ಸ್ಪಷ್ಟ ಆಧಾರಗಳ ಕೊರತೆ ಎದ್ದು ಕಾಣುತ್ತದೆ. ಮತ್ತು ಕುರುಬರ ಕಲೆಯ ಬಗೆಗೆ ಪ್ರಸ್ತಾಪಿಸಿಲ್ಲ. ಆದರೂ ಈ ಕೃತಿ ಕುರುಬ ಸಮುದಾಯವನ್ನು ಸಮಗ್ರವಾಗಿ ಪರಿಚಯಿಸಿದ ಮೊದಲ ಗ್ರಂಥವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂಬುದಂತೂ ಸ್ಪಷ್ಟ.

ಯಲ್ಲನಗೌಡ ಪ. ಅತ್ತಿಕೊಳ್ಳ ಅವರ ಹಾಲುಮತ ಚರಿತ್ರೆ(೧೯೪೯) ಗದ್ಯರೂಪದ ಕೃತಿ. ಹಾಲುಮತ ಸಂಸ್ಕೃತಿಯ ಚಾರಿತ್ರಿಕ ವಿಷಯಗಳನ್ನು ತಿಳಿಸುವಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಹನುಮಂತಯ್ಯನವರು ತಮಗೆ ದೊರೆತ ಆಧಾರಗಳಿಂದ ಕುರುಬರ ಪ್ರಾಚೀನ ಇತಿಹಾಸವನ್ನು ಪರಿಚಯಿಸಿದರೆ ಅತ್ತಿಕೊಳ್ಳವರು ಹಾಲುಮತದ ಪ್ರಾಚೀನತೆಯನ್ನು ಲಭ್ಯ ಪುರಾಣಗಳ ಆಧಾರದಿಂದ ಗುರುತಿಸಿದ್ದಾರೆ. ಪೌರಾಣಿಕ ನೆಲೆಯಲ್ಲಿ ನಿರೂಪಿಸುವ ಪ್ರಯತ್ನ ಇವರದಾಗಿದೆ. ಇವರು ಕುರುಬರ ಗುರುಪರಂಪರೆಯನ್ನು ತಿಳಿಸಿದ್ದಾರೆ. ಆದರೆ ಹನುಮಂತಯ್ಯನವರ ಕೃತಿಗಳಲ್ಲಿ ಹಾಲುಮತ ಸಮುದಾಯದ ಗುರುಪರಂಪರೆಯನ್ನಾಗಲಿ ಅಥವಾ ದೇವತೆಗಳನ್ನಾಗಲಿ ಕುರಿತು ಪ್ರಸ್ತಾಪ ಮಾಡಿಲ್ಲ. ಹಿಂದೆ ಆಗಿ ಹೋದ ಮಹಾನುಭಾವರ ಕೆಲವರ ಪರಿಚಯವನ್ನು ಮಾತ್ರ ಮಾಡಿದ್ದಾರೆ. ಇವರ ಮತ್ತೊಂದು ಕುರುಬ ಸಮುದಾಯವನ್ನು ತಿಳಿಸುವ ಕೃತಿ 'ಭಾರತ ದೇಶದ ಕುರುಬರ ಚರಿತ್ರೆ' (೧೯೫೮) ಯಲ್ಲಿ ಪ್ರಾಚೀನ ಕುರುಬ ಮೂಲವನ್ನು ವೇದಗಳ ಮುಖಾಂತರ ಪರಿಚಯಿಸಿದ್ದಾರೆ. ಅಂದಿನ ಆರ್ಯರೇ ಇಂದಿನ ಕುರುಬರು ಎನ್ನುವುದಕ್ಕೆ ಸಾಕ್ಷ್ಯಾಧಾರಗಳನ್ನು ಉಲ್ಲೇಖಿಸುತ್ತಾರೆ. ಡಾ.ಶ್ಯಾಂಸಿಂಗ್ ಶಶಿಯವರ 'ದಿ ಶೆಪರ್ಡ್ಸ್ ಆಫ್ ಇಂಡಿಯಾ' ಕೃತಿ ಭಾರತದಾದ್ಯಂತ ನೆಲೆಸಿರುವ ಕುರುಬರನ್ನು ಪರಿಚಯಿಸಿದರೆ, ಹನುಮಂತಯ್ಯನವರು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು

ಮಹಾರಾಷ್ಟ್ರದ ಕುರುಬರ ಸಾಹಿತ್ಯ ಸಂಸ್ಕೃತಿ, ವೃತ್ತಿಯನ್ನು ತಿಳಿಸುತ್ತಾರೆ. ಜೊತೆಗೆ ಉತ್ತರ ಭಾರತದ ಕುರುಬರನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಹನುಮಂತಯ್ಯನವರು 'ಕುರುಬರ ಚರಿತ್ರೆ'ಯಲ್ಲಿ ದಕ್ಷಿಣ ಭಾರತದ ರಾಜಕೀಯ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದರೂ ಈ ಕೃತಿಯಲ್ಲಿ ಪುನಃ ದಕ್ಷಿಣ ಭಾರತದ ರಾಜಕೀಯ ಚರಿತ್ರೆಯೊಂದಿಗೆ ಮಧ್ಯಭಾರತದ ಕುರುಬ ಮತ್ತು ಉತ್ತರ ಭಾರತದ ಕುರುಬರ ರಾಜಕೀಯ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಆದರೆ ಶಾಂಸಿಂಗ್ ಶಶಿಯವರು ರಾಜಕೀಯ ಇತಿಹಾಸಕ್ಕೆ ಮಹತ್ವ ಕೊಟ್ಟಿಲ್ಲ.

ಹನುಮಂತಯ್ಯನವರು ಕುರುಬರ ರಾಜಕೀಯ ಮನೆತನಗಳು ಕದಂಬ, ಪಲ್ಲವ, ಹೊಯ್ಸಳ, ಶಾತವಾಹನರು, ದೇವಗಿರಿಯ ಯಾದವರು, ಇಂದೋರಿನ ಹೋಳ್ಕರ, ಹೆಗ್ಗಡೆದೇವನ ಕೋಟೆ ಅರಸು ಜಿಂಜಿ ಮತ್ತು ಕೃಷ್ಣಗಿರಿಯ ರಾಜರು ವಿಜಯನಗರದ ಅರಸರು, ಬಳ್ಳಾರಿ ಪಾಳೆಗಾರರು, ಹಂಡೆ ಪಾಳೆಗಾರರು ಮತ್ತು ನೊಳಂಬರನ್ನು ಮಾತ್ರ ಪರಿಚಯಿಸಿದರೆ, ಚಂದ್ರಕಾಂತ ಬಿಜ್ಜರಗಿಯವರು ಕುರುಬರ ಹೆಜ್ಜೆಗಳು ಕೃತಿಯಲ್ಲಿ ಹನುಮಂತಯ್ಯನವರು ಹೇಳಿರುವ ರಾಜಕೀಯ ಮನೆತನಗಳೊಂದಿಗೆ ಕೌರವ, ಪಾಂಡವ, ನಂದ, ಮೌರ್ಯ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಕಲಚೂರಿ, ಸುರಪುರದ ನಾಯಕರು, ಬೂದಿಹಾಳು ಪಾಳೆಯಗಾರರು, ಕೊಲ್ಲಾಪುರದ ಶಿಲಾಹಾರರು, ಚಾವುಂಡರಾಯ ಮುಂತಾದ ಅರಸರುಗಳು ಹಾಲುಮತದವರೆಂಬ ಅಭಿಪ್ರಾಯವನ್ನು ಸುಮಾರು ೮೩ ಆಕರಗಳಿಂದ ಸ್ಪಷ್ಟಪಡಿಸಿದ್ದಾರೆ.

ಶಂಬಾ ಜೋಶಿ ಅವರು 'ಹಾಲುಮತ ದರ್ಶನ'(೧೯೮೦) ಕೃತಿಯಲ್ಲಿ ಕುರುಬರ ಸಂಸ್ಕೃತಿ ಮತ್ತು ಪರಂಪರೆಯನ್ನು ವಿವರಿಸುತ್ತಾರೆ ಮತ್ತು ಕುರುಬರ ಪ್ರಾಚೀನತೆ ಹಾಗೂ ಕ್ಷಾತ್ರವನ್ನು ಸ್ಥೂಲವಾಗಿ ವಿವರಿಸುತ್ತಾರೆ. ಹನುಮಂತಯ್ಯನವರು ಕುರುಬರ ಪ್ರಾಚೀನತೆಯನ್ನು ವೇದ ಪುರಾಣಗಳ ಮುಖಾಂತರ ತಿಳಿಸಿದರೆ ಇವರು ಪ್ರಾಚೀನತೆಯನ್ನು ಹುಡುಕುವ ಮೂಲಕ ಕರ್ನಾಟಕ ಸಂಸ್ಕೃತಿಯ ಬೇರುಗಳನ್ನು ಹುಡುಕುವ ನಿಟ್ಟಿನಲ್ಲಿ ವ್ಯಾಪಕವಾದ ಚರ್ಚೆ ಮಾಡಿದ್ದಾರೆ. ಅಂದರೆ ಇವರು ವರ್ತಮಾನದ ಅಭಾಸಗಳನ್ನು ಭೂತಕಾಲದಲ್ಲಿ ಹುಡುಕುವ ಮಾರ್ಗ ಇವರದಾಗಿರುತ್ತದೆ.

ಶಂಬಾ ಜೋಶಿ ಅವರಿಗೆ 'ಕನ್ನಡದ ನೆಲೆ' ಕೃತಿ ರಚಿಸುವಾಗ ಕಳ ಎಂದರೆ 'ಹಾಲು' ಎಂಬ 'ರಸ'ದ ವಿಚಾರ ಬಲಗೊಂಡು 'ಹಾಲುಮತ ದರ್ಶನ' ಕೃತಿ ರಚನೆಗೆ ಕಾರಣವಾಯಿತೆಂದು ಹೇಳಬಹುದು. "ಶಿವ-ಪಾರ್ವತಿಯರು ಭೂಲೋಕ ಸಂಚಾರದಲ್ಲಿ ಸುರಮ್ಯ ವನದಲ್ಲಿ ವಿಶ್ರಾಂತಿ ಪಡೆಯುತ್ತಿರುವಾಗ ಏಕಾಏಕಿ ಪಾರ್ವತಿಯ ಮೊಲೆಗಳಿಂದ ಹಾಲು ಉಕ್ಕುತ್ತದೆ. ಉಕ್ಕುವ ಹಾಲನ್ನು ಅಂಗೈಗಳಲ್ಲಿ ಹಿಡಿದು ಮಣ್ಣಿನಲ್ಲಿ ಬೆರಸಿ ಮಣ್ಣಮುದ್ದೆ(ಗೊಂಬೆ)ಗಳನ್ನು ಮಾಡಿ ಅವುಗಳಿಗೆ ಜೀವಕಳೆ

ತುಂಬುವಂತೆ ಶಿವನಲ್ಲಿ ಪ್ರಾರ್ಥಿಸುತ್ತಾಳೆ. ಶಿವ-ಪಾರ್ವತಿಯ ಕೋರಿಕೆ ಮನ್ನಿಸಿದ ಫಲವಾಗಿ ಮಣ್ಣು ಮುದ್ದೆಗಳಿಗೆ ಜೀವಕಳೆ ಬಂದು ಹಾಗೂ ಮೂಲದಲ್ಲಿ ಮಣ್ಣಿನ ಮುದ್ದೆಗಳಾಗಿದ್ದುದರಿಂದ ಅವರಿಗೆ ಮುದ್ದಪ್ಪ ಹಾಗೂ ಮುದ್ದವ್ವ ಎಂದು ನಾಮಕರಣ ಮಾಡಿ ಅವರೀರ್ವರ ವಿವಾಹ ಜರುಗಿಸಿ ಕೃಷಿಯಲ್ಲಿ ತೊಡಗಿ ಸಕಲ ಚರಾಚರ ಜೀವರಾಶಿಯನ್ನು ಸಲುಹಿರೆಂದು ಆಶೀವರ್ದಿಸುತ್ತಾರೆ. ಹೀಗೆ ಪಾರ್ವತಿಯ ಮೊಲೆ ಹಾಲಿನಿಂದ ಮೂರ್ತಿಭವಿಸಿದ ಮುದ್ದಪ್ಪ ಮುದ್ದವ್ವ ವಂಶಜರಿಗೆ ಹಾಲುಮತದವರೆಂದೂ ಹಾಗೂ ಹಾಲುಮತದ ಮೂಲ ವ್ಯಕ್ತಿಗಳಾದ ಮುದ್ದಪ್ಪ-ಮುದ್ದವ್ವ ಅವರಿಗೆ ಜೀವಕಳೆ ತುಂಬಿಸಿದ ಶಿವನಿಂದಾಗಿ ಹಾಲುಮತದವರು ಶೈವರಾದರೆಂದು ಸಾಮಾನ್ಯರಿಗೂ ಪರಿಚಿತವಿರುವ ಸಂಗತಿಯನ್ನು ವಿವರಿಸುವ ಹಾಲುಮತ ದರ್ಶನ ೧೯೬೦ರಲ್ಲಿ ಪ್ರಕಟಗೊಂಡರೂ ಜನಾಂಗದ ಮಧ್ಯ ಹಾಗೂ ಆಧುನಿಕ ಕಾಲಗಳ ಸಮಾಜೋ ಆರ್ಥಿಕ-ರಾಜಕೀಯ ವಿಶ್ಲೇಷಣೆ ನಡೆಸಿದ ಪ್ರಾಚೀನ ಕಾಲದ ವಿದ್ಯಮಾನಗಳಿಗೆ ಸೀಮಿತಗೊಳಿಸಿದುದು ಶಂಬಾ ಅವರ ಸಾಮಾಜಿಕ ಪ್ರಜ್ಞೆಯ ಅಭಾವ ಸೂಚಿಸುತ್ತದೆ. ನಂತರ ಬಂದಂತಹ ಡಾ. ಶಿವಾನಂದ ಗುಬ್ಬಣ್ಣವರ "ಕರ್ನಾಟಕದ ಕುರುಬರು" (೧೯೯೩) ಈ ಕೃತಿಯ ವಿಶೇಷವೆಂದರೆ ಉತ್ತರ ಕರ್ನಾಟಕದ ಕುರುಬರ ಸಾಂಸ್ಕೃತಿಕ ಪರಂಪರೆಗೆ ಹೆಚ್ಚಿನ ಗಮನ ನೀಡಿರುವುದು ಕಂಡುಬರುತ್ತದೆ. ಕುರುಬರ ಪೌರಾಣಿಕ ಹಿನ್ನೆಲೆ, ಧಾರ್ಮಿಕ, ಸಾಮಾಜಿಕ ಜೀವನವನ್ನು ನಿರೂಪಿಸುತ್ತದೆ. ೧೬ನೆಯ ಶತಮಾನದ ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣಕ್ಕೆ ಆಗ್ನೇಯ ಪುರಾಣ ಆಕಾರವಾಗಿದ್ದು ಕೌರಭ ಋಷಿಯ ತಪಸ್ಸಿನ ಫಲವಾಗಿ 'ಕುರುಬ' ಮತವು ಹುಟ್ಟಿದೆ ಎಂದು ಹೇಳಿದ್ದಾರೆ. ಅಂದರೆ ಇವರ ಪ್ರಭಾವ ಹನುಮಂತಯ್ಯನವರ ಮೇಲೆ ಬೀರಿರುವುದನ್ನು ಕಂಡುಕೊಳ್ಳಬಹುದು. ಹನುಮಂತಯ್ಯನವರು ಕುರುಬರ ಬೆಡಗುಗಳನ್ನು ನಂಜುಂಡಸ್ವಾಮಿ ಮತ್ತು ಅಯ್ಯರ್ ಅವರ ೧೦೦ ಕುಲಗಳ ಪಟ್ಟಿ ಜೊತೆಗೆ ತಾವು ಸಂಗ್ರಹಿಸಿದ ೩೩ ಗೋತ್ರ(ಬೆಡಗು)ಗಳನ್ನು ಸೇರಿಸುತ್ತಾರೆ. ಗುಬ್ಬಣ್ಣನವರು, ಹನುಮಂತಯ್ಯನವರು ಉಲ್ಲೇಖಿಸಿರುವ ಬೆಡಗುಗಳನ್ನು ಹೇಳುತ್ತಾರೆ. ಬೆಡಗುಗಳ ಕುರಿತು ಇವರಿಬ್ಬರಲ್ಲಿ ಸಾಮ್ಯತೆ ಕಂಡುಬರುತ್ತದೆ. ಅಸಂಖ್ಯಾತ ಹಾಲುಮತ ಜಾತಿಗಳನ್ನು ರೇವಣಸಿದ್ಧರು ನಾಲ್ಕು ಸೇರು ಭತ್ತದ ಧಾನ್ಯಗಳನ್ನು ಗೋತ್ರಗಳನ್ನಾಗಿ ಮಾಡಿ ಅವುಗಳಿಗೆ ಕ್ಷುಲ್ಲಕ ವಸ್ತುಗಳ ಹೆಸರನ್ನು ಪ್ರಾಣಿ ಸೂಚಕ ಚಿನ್ನೆಗಳನ್ನಿಟ್ಟು ಅವುಗಳನ್ನು ಬೆಡಗುಗಳೆಂದು ಕರೆದರು. ಹನುಮಂತಯ್ಯನವರು ತಮ್ಮ ಕೃತಿಗಳಲ್ಲಿ ಬೆಡಗುಗಳ ಪ್ರಸ್ತಾಪ ಮಾಡಿಲ್ಲ. ಕೇವಲ ಅವರು ಸಂಗ್ರಹಿಸಿರುವ ಪಟ್ಟಿಯನ್ನು ಅಕಾರಾದಿಯಾಗಿ ಹೇಳಿದ್ದಾರೆ. ಗುಬ್ಬಣ್ಣನವರ ಕೃತಿ ರಾಜಕೀಯ ಸ್ಪಷ್ಟತೆಯನ್ನು ಪಡೆದಿರುವುದಿಲ್ಲ. ಲಿಖಿತ ಮತ್ತು ಮೌಖಿಕ ಆಕರಗಳ ನೆರವಿನಿಂದ ರಚನೆ ಮಾಡಲಾಗಿದೆ. ಈವತ್ತಿನ ದಿನಮಾನಗಳಲ್ಲಿ

ಕುರುಬ ಸಮಾಜದ ಸಂಘಟನೆ, ವೃತ್ತಿ, ಶಿಕ್ಷಣ, ರಾಜಕಾರಣ, ಧಾರ್ಮಿಕ ವಿಷಯಗಳನ್ನು ತಿಳಿದುಕೊಳ್ಳಲು ನೆರವಾಗುತ್ತದೆ.

ಕುರುಬ ಸಮುದಾಯವನ್ನು ಕುರಿತ ಮತ್ತೊಂದು ಕೃತಿ ಚಂದ್ರಕಾಂತ ಬಿಜ್ಜರಗಿ ಅವರ "ಕುರುಬರ ಹೆಜ್ಜೆಗಳು: ಒಂದು ಅಧ್ಯಯನ"(೨೦೦೬) ಈ ಕೃತಿಯಲ್ಲಿ ಈವರೆಗೆ ಪ್ರಕಟಗೊಂಡ ಕೃತಿಗಳನ್ನು ತಮ್ಮ ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ. ಹಾಲುಮತದ ಮೂಲ, ಬೆಡಗು, ಗೋತ್ರ, ರಾಜವಂಶಗಳು ಆದಿದೇವತೆಗಳು ಮತ್ತು ಮತದ ಉನ್ನತಿಗಾಗಿ ಅನುಸರಿಸಬೇಕಾದ ಸೂಚನೆಗಳು ಇವೆ. ಹೀಗೆ ಹತ್ತು ಹಲವಾರು ವಿಷಯಗಳ ಬಗೆಗಿನ ತಲಸ್ಪರ್ಶಿ ಅಧ್ಯಯನ ಕೃತಿಯಾಗಿದೆ.

ಹನುಮಂತಯ್ಯನವರು 'ಕುರುಬ' ಎಂಬ ಪದಕ್ಕೆ ಪುರಾಣದ ಉಲ್ಲೇಖವನ್ನು ಕೊಟ್ಟಿದ್ದಾರೆ. ಬಿಜ್ಜರಗಿ ಅವರು ಈ ಪದಕ್ಕೆ ತಮಿಳು ಭಾಷೆಯಲ್ಲಿ ಮತ್ತು ದ್ರಾವಿಡ ಮೂಲದಲ್ಲಿ ಅರ್ಥವನ್ನು ವಿವರಿಸಿದ್ದಾರೆ. ಬ್ರಹ್ಮ, ಶಿವ, ಶಂಕರ, ಲಿಂಗ, ಶ್ರೀರಾಮ, ಶ್ರೀಕೃಷ್ಣ, ಮಾರುತಿ, ಬೀರಪ್ಪ, ವೀರಪ್ಪ, ಮೈಲಾರ ಮಲ್ಲಯ್ಯ, ವೀರಭದ್ರ, ವಿರೂಪಾಕ್ಷ, ಶ್ರೀಶೈಲ ಮಲ್ಲಿಕಾರ್ಜುನ, ಪಾಂಡುರಂಗ ವಿಠ್ಠಲ, ತಿರುಪತಿ ವೆಂಕಟೇಶ, ಬನಶಂಕರಿ, ಹುಲಜಂತಿ ಮಾಳಿಂಗರಾಯ, ಬಾಬಾ(ಸಿದ್ಧ) ಮೊದಲಾದ ದೇವರುಗಳನ್ನು ಕುರುಬ ದೇವರುಗಳೆಂದು ಸಾಕ್ಷಾಧಾರಗಳ ಮೂಲಕ ಹೇಳುತ್ತಾರೆ. ಆದರೆ ಹನುಮಂತಯ್ಯ ಕೇವಲ ಮೈಲಾರ, ಹುಲಜಂತಿ, ಮಾಳಿಂಗರಾಯ ಕೆಲವೇ ದೇವರುಗಳನ್ನು ಹೇಳಿದ್ದಾರೆ. ಹನುಮಂತಯ್ಯನವರು ಕರ್ನಾಟಕ ಮತ್ತು ಮಹಾರಾಷ್ಟ್ರದ ಬೆಡಗುಗಳ ಪಟ್ಟಿಯನ್ನು ಮಾತ್ರ ಮಾಡಿದ್ದಾರೆ. ಆದರೆ ಇವರು ವೇದ, ಶಾಸ್ತ್ರ, ರಾಮಾಯಣ, ಮಹಾಭಾರತಗಳಿಂದ ಪ್ರಾಚೀನ ಕೃತಿಗಳ ಸಾಕ್ಷಾಧಾರಗಳಿಂದ ಕುಲಗೋತ್ರ, ಬೆಡಗುಗಳನ್ನು ಚರ್ಚಿಸಿದ್ದಾರೆ. ಹನುಮಂತಯ್ಯನವರು ಕರ್ನಾಟಕ ಕುರುಬರ ಬೆಡಗುಗಳ ಪಟ್ಟಿಯನ್ನು ೧೪೪ ಕೊಟ್ಟರೆ ಇವರು ೮೭೭ ಬೆಡಗುಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಕುರುಬ ಪಂಗಡಗಳು ಮತ್ತು ಉಪ ಪಂಗಡಗಳನ್ನು ಕುರಿತು ಉಣ್ಣೆಕಂಕಣ ಕುರುಬರು ಮತ್ತು ಹತ್ತಿಕಂಕಣ ಕುರುಬರು ಇವು ಕುರುಬರಲ್ಲೇ ಅತೀ ದೊಡ್ಡ ಪಂಗಡಗಳೆಂದು ಹೇಳಿ, ಇವೆರಡರ ಜೊತೆಗೆ ಉಪಪಂಗಡಗಳನ್ನು ಪರಿಚಯಿಸುತ್ತಾರೆ. ಬಿಜ್ಜರಗಿಯವರು ಕೇವಲ ಉಣ್ಣೆಕಂಕಣ ಮತ್ತು ಹತ್ತಿಕಂಕಣ ಕುರುಬರನ್ನು ಕುರಿತು ಐದು ಐತಿಹ್ಯಗಳ ಮುಖಾಂತರ ಚರ್ಚಿಸಿದ್ದಾರೆ.

ಡಾ. ಎಫ್.ಟಿ. ಹಳ್ಳಿಕೇರಿ ಅವರು ಹಾಲುಮತ ವ್ಯಾಸಂಗ ೨, ಇದರಲ್ಲಿ ವಿ.ಆರ್.ಹನುಮಂತಯ್ಯ ಅವರು ಹೇಳಿರುವ ಪಂಗಡಗಳ ಜೊತೆಗೆ ೧೭ ಪಂಗಡಗಳನ್ನು ಚರ್ಚಿಸಿದ್ದಾರೆ. ಈ ಕೃತಿ ಕುರುಬರ ಒಳಪಂಗಡಗಳನ್ನು ಕುರಿತಾದ ಸಮಗ್ರ ಕೃತಿಯಾಗಿದೆ. ಈ ಕುರುಬರ ಒಳಪಂಗಡವನ್ನು ಕುರಿತು

ಎ.ಬಿ.ಬಾಳಪ್ಪ ಅವರು ಪಿಎಚ್.ಡಿ ಅಧ್ಯಯನವನ್ನು ಕೈಗೊಂಡು ಕುರುಬರ ಪ್ರಾಚೀನ ಇತಿಹಾಸವನ್ನು ತಿಳಿಸುತ್ತಾ ಈ ಪಂಗಡಗಳ ಸಮಗ್ರ ಇತಿಹಾಸವನ್ನು ತಿಳಿಸಿಕೊಟ್ಟಿದ್ದಾರೆ.

ವಿ.ಆರ್.ಹನುಮಂತಯ್ಯನವರು ಕುರುಬರ ಸಮಗ್ರ ಇತಿಹಾಸವನ್ನು ಸಂಕ್ಷಿಪ್ತವಾಗಿ ಪರಿಚಯಿಸಿದರೆ, ಮುಂದೆ ಬಂದಂತಹ ವಿದ್ವಾಂಸರು ಇವರು ಹೇಳಿರುವ ಪಂಗಡಗಳನ್ನು ಪ್ರತ್ಯೇಕವಾಗಿ ಒಂದೊಂದು ಪಂಗಡಗಳನ್ನಿಟ್ಟುಕೊಂಡು ಅಧ್ಯಯನವನ್ನು ನಡೆಸಿದ್ದಾರೆ. 'ಅಲೆಮಾರಿ ಕುರುಬರು ಒಂದು ಅಧ್ಯಯನ', 'ಹಂಡೆ ಕುರುಬರು ಒಂದು ಅಧ್ಯಯನ' 'ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ ಕೃತಿಗಳು ಬಂದಿವೆ. ಹೀಗೆ ಒಂದೊಂದು ಪಂಗಡದ ಇತಿಹಾಸ ಸಂಸ್ಕೃತಿಯನ್ನು ಸಮಾಜಕ್ಕೆ ಅನಾವರಣ ಮಾಡಿರುವುದು ಕಂಡುಬಂದಿದೆ.

ಇತ್ತೀಚೆಗೆ ಕನ್ನಡ ವಿಶ್ವವಿದ್ಯಾಲಯ 'ಹಾಲುಮತ ಅಧ್ಯಯನ ಪೀಠ'ದಿಂದ ಹಾಲುಮತ ಸಮುದಾಯವನ್ನು ಕುರಿತು ಸಾಹಿತ್ಯ ಸಂಸ್ಕೃತಿಯನ್ನು ಕುರಿತಂತೆ ಡಾ.ಎಫ್.ಟಿ.ಹಳ್ಳಿಕೇರಿ ಅವರು ನಾಲ್ಕು ಸಂಪುಟಗಳನ್ನು ಹೊರ ತಂದಿದ್ದಾರೆ. ಹಾಲುಮತ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾದ ಆಕರಗಳನ್ನು ಒದಗಿಸುವ ಕೃತಿ ಕಾವ್ಯ, ಪುರಾಣ, ದಾಖಲೆಗಳು, ಮೌಖಿಕ ಆಕರಗಳು ಪುರಾತತ್ವ ಮತ್ತು ಭಾಷಿಕ ಆಕರಗಳನ್ನಿಟ್ಟುಕೊಂಡು ಹಾಲುಮತದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಹೀಗೆ ಹಾಲುಮತ ಸಮುದಾಯದ ಇತಿಹಾಸಕ್ಕೆ ಸಂಬಂಧಿಸಿದಂತೆ ವಿ.ಆರ್.ಹನುಮಂತಯ್ಯ ಯಲ್ಲನಗೌಡ ಪ. ಅತ್ತಿಕೊಳ್ಳ, ಶಂಬಾ ಜೋಶಿ, ಶಿವಾನಂದ ಗುಬ್ಬಣವರ, ಚಂದ್ರಕಾಂತ ಬಿಜ್ಜರಗಿ, ಡಾ. ಎಫ್.ಟಿ.ಹಳ್ಳಿಕೇರಿ, ಡಾ. ಯರ್ರಪ್ಪ, ಡಾ. ಬಿ.ಜಿ.ಬಿರಾದಾರ ಹಾಗೂ ಡಾ. ಎ.ಬಿ. ಬಾಳಪ್ಪ ಅವರು ತಮ್ಮದೇ ಆದ ವೈಚಾರಿಕ ನೆಲೆಯಲ್ಲಿ ಲಭ್ಯವಾದ ಆಕರಗಳನ್ನು ಬಳಸಿಕೊಂಡು ಕೃತಿಗಳನ್ನು ರಚಿಸಿದ್ದಾರೆ.

ಕೊನೆಟಿಪ್ಪಣಿಗಳು

೧. ಶಂಬಾಕೃತಿ ಸಂಪುಟ ೩, ಪು. ೨೫೩
೨. ಕುರುಬರ ಚರಿತ್ರೆ ಲೇ. ವಿ.ಆರ್. ಹನುಮಂತಯ್ಯ ಪು. ೧೮
೩. ಅದೇ ಪು. ೧೮
೪. ಹಾಲತೊರೆ (ಸಂ) ಎಂ.ಕರಿಯಪ್ಪ, ಪ್ರ: ನಗರದ ಕುರುಬ ಸಂಘ, ದಾವಣಗೆರೆ, ೨೦೦೩, ಪು. ೩೬.
೫. ಕರ್ನಾಟಕದ ಕುರುಬರು, ಶಿವಾನಂದ ಗುಬ್ಬಣ್ಣವರ, ಪು. ೧೨.
೬. ದಿ ಟ್ರೈಟ್ಸ್ ಆ್ಯಂಡ್ ಕ್ಯಾಸ್ಟ್ ಆಫ್ ಸದರನ್ ಇಂಡಿಯಾ, ಪು. ೧೩೬.

೭. ಕರ್ನಾಟಕದ ಕುರುಬರು, ಪು. ೩.

೮. ಹಾಲಕೆನೆ (ಸಂ.) ಶ್ರೀರಾಮ ಇಟ್ಟಣ್ಣವರ, ಪು. ೧೩೭.

೯. ಬ್ಯಾಕ್‌ವರ್ಡ್ ಕ್ಲಾಸ್ ಅಂಡ್ ಕ್ಲಾಸ್ ಮೂವ್‌ಮೆಂಟ್ ಇನ್ ಕರ್ನಾಟಕ ವಿಥ್ ಸ್ಪೆಷಲ್ ರೆಫೆರೆನ್ಸ್ ಟು ಕುರುಬ, ಪಿ.ಎಚ್.ಡಿ ಪ್ರಬಂಧ, ಕೆ.ಎಂ.ಬಸವರಾಜ, ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೩, ಪು. ೮೬.

೧೦. ಅದೇ, ಪು. ೮೬.

೧೧. ಅದೇ, ಪು. ೨೩೯.

೧೨. ಕನ್ನಡ ಇಂಗ್ಲಿಷ್ ಶಬ್ದಕೋಶ, ಎಫ್.ಕಿಟ್ಟೆಲ್, ಏಶಿಯನ್ ಏಜ್ಯುಕೇಶನಲ್ ಸರ್ವಿಸಸ್, ನ್ಯೂಡೆಲ್ಲಿ, ೧೯೮೨ ಪು. ೪೪೬.

೧೩. ಶಂಬಾಕೃತಿ ಸಂಪುಟ–೧, ಪು. ೨೭೯.

೧೪. ಅದೇ, ಪು. ೨೪೧.

೧೫. ಅದೇ, ಪು. ೩೨೧.

೧೬. ಅದೇ, ಪು. ೩೨೨.

೧೭. ಅದೇ, ಪು. ೨೭೪.

೧೮. ಅದೇ ಪು. ೨೮೧.

೧೯. ಕುರುಬರ ಚರಿತ್ರೆ, ವಿ.ಆರ್.ಹನುಮಂತಯ್ಯ, ಪು. ೧೧.

೨೦. ಅದೇ, ಪು. ೧೩.

೨೧. ಕುರುಬರ ಗುರು ಒಡೆಯರು: ಒಂದು ಸಾಂಸ್ಕೃತಿಕ ಅಧ್ಯಯನ, ಪು. ೩೧.

೨೨. ಕರ್ನಾಟಕದ ಕುರುಬರು, ಪು. ೧೨.

೨೩. ಹಾಲಕೆನೆ, ಕುರುಜನಾಂಗದ ಮೂಲ, ಪು. ೩.

೨೪. ಶಂಬಾ ಕೃತಿ ಸಂಪುಟ ೩.

೨೫. ಕುರುಬರ ಚರಿತ್ರೆ, ಪು. ೧೪

೨೬. ಡಾ. ಎಂ.ಎಂ. ಕಲಬುರ್ಗಿ(ಸಂ), ಲಿಂಗಾಯತ ಉಪಪಂಗಡಗಳ ದಾಖಲೀಕರಣ, ೨೦೦೯ ಪು. ೮೨.

೨೭. ಅದೇ ಪು. ೮೨

೨೮. ಹಾಲುಮತ ವ್ಯಾಸಂಗ–೨, ಸಂ: ಡಾ. ಎಫ್.ಟಿ. ಹಳ್ಳಿಕೇರಿ, ೨೦೧೦, ಪು. ೩೦೮,

೨೯. ಕುರುಬರ ಗುರು ಬಡೆಯರು: ಸಾಂಸ್ಕೃತಿಕ ಅಧ್ಯಯನ, ಲೇ. ಡಾ. ಬಿ.ಜಿ. ಬಿರಾದಾರ

೩೦. ಕರ್ನಾಟಕ ಕುರುಬರ ಒಳಪಂಗಡಗಳು: ಸಾಂಸ್ಕೃತಿಕ ಅಧ್ಯಯನ, ಎ.ಬಿ.ಬಾಳಪ್ಪ, ೨೦೧೧,

೩೧. ಕುರುಬರ ಗುರು ಒಡೆಯರು, ಎಫ್.ಟಿ.ಹಳ್ಳಿಕೇರಿ(ಸಂ), ೨೦೦೩, ಪು. ೨೮.

೩೨. ಅದೇ ಪು. ೨೫

೩೩. ಅಲೆಮಾರಿ ಕುರುಬರು, ಡಾ. ಡಿ. ಯರ‍್ರಪ್ಪ, ೨೦೦೭, ಪು. xii

೩೪. ಅದೇ, ಪು ೨೪

೩೫. ಅದೇ, ಪು. ೨೬

೩೬. ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು: ಒಂದು ಸಾಂಸ್ಕೃತಿಕ ಅಧ್ಯಯನ, ೧೯೯೯, ಪು. ೧೭೭.

೩೭. ಶಂಬಾ ಕೃತಿ ಸಂಪುಟ ೩, ಪು. ೧೩.

೩೮. ಬುಡಕಟ್ಟು ಕುಲಕಸುಬುಗಳು, ಪು. ೧೫೩.

೩೯. ಭಾರತದ ಕುರುಬರು, ಪು. ೧೧೩.

೪೦. ಕರ್ನಾಟಕದ ಕುರುಬರು, ಪು. ೪.

೪೧. ಜಾನಪದ ವಿಶ್ವಕೋಶ ಸಂ-೧, ಡಾ. ಚಂದ್ರಶೇಖರ, ಕಂಬಾರ, ಪು. ೪೪೪

೪೨. ಸಿದ್ಧಮಂಕ ಚರಿತೆ, (ಸಂ) ಡಾ. ಎಂ.ಎಂ.ಕಲಬುರ್ಗಿ ಮತ್ತು ಡಾ. ವೈ.ಸಿ.ಭಾನುಮತಿ, ಪು. ೧೧೧.

೪೩. ಹಾಲಕೆನೆ, (ಸಂ) ಶ್ರೀರಾಮ ಇಟ್ಟಣವರ, ಪು. ೧೯೫.

೪೪. ಕುರುಬರ ಚರಿತ್ರೆ, ವಿ.ಆರ್.ಹನುಮಂತಯ್ಯ, ಪು. ೩೭.

೪೫. ಅದೇ, ಪು. ೩೮.

೪೬. ಅದೇ, ಪು. ೩೯.

೪೭. ಅದೇ, ಪು. ೪೦.

೪೮. ಭಾರತದ ಕುರುಬರು, ಬಿ.ಕೆ.ರವಿ, ಪು. ೬೩.

೪೯. ಕುರುಬರ ಚರಿತ್ರೆ, ವಿ.ಆರ್.ಹನುಮಂತಯ್ಯ, ಪು. ೪೧.

೫೦. ಅದೇ, ಪು. ೪೨.

೫೧. ಭಾರತದ ಕುರುಬರು, ಪು. ೬೩.

೫೨. ಅದೇ, ಪು. ೨೭

೫೩. ಅದೇ, ಪು. ೨೮

೫೪. ಅದೇ, ಪು. ೫೪

೫೫. ಅದೇ, ಪು. ೫೪.

೫೬. ಅದೇ, ಪು. ೫೩

೫೭. ಅದೇ, ಪು. ೫೩.

೫೮. ಕುಂಚಟಿಗರ ಸಾಂಸ್ಕೃತಿಕ ಇತಿಹಾಸ, ಡಾ. ಎಂ.ಎಚ್.ನಾಗರಾಜ, ಅನಿಕೇತನ ಪ್ರಕಾಶನ, ತುಮಕೂರು, ಪು. ೯.

೫೯. ಕುರುಬರ ಜನಪದ, (ಸಂ) ಪು॥ ಚೆನ್ನಪ್ಪ ಕಟ್ಟಿ ಮತ್ತು ಆರ್.ಎಸ್.ವಾಡೇದ ಕನಕ ಜಯಂತ್ಯುತ್ಸವ ಸಿಂದಗಿ, ೧೯೯೭, ಪು. ೪.

೬೦. ಒರಿಜಿನಲ್ ಇನ್‌ಹ್ಯಾಬಿಟೆಂಟ್ಸ್ ಆಫ್ ಇಂಡಿಯಾ, ಗುಪ್ತಾವ್ ಓಪರ್ಟ್, ಏಷಿಯನ್ ಎಜುಕೇಷನ್ ಸೊಸೈಟಿ, ನ್ಯೂಡೆಲ್ಲಿ, ೧೯೮೮, ಪು. ೧೨೩.

೬೧. ಕರ್ನಾಟಕ ಕುರುಬರು, ಶಿವಾನಂದ ಗುಬ್ಬಣ್ಣವರ, ಪು. ೨೬.

೬೨. ಕುರುಬರ ಚರಿತ್ರೆ, ವಿ.ಆರ್. ಹನುಮಂತಯ್ಯ, ಪು. ೨೮.

೬೩. ಅದೇ, ಪು. ೩೬.

೬೪. ಅದೇ, ಪು. ೩೬.

೬೫. ಕರ್ನಾಟಕದ ಕುರುಬರು, ಪು. ೫.

೬೬. ಭಾರತದ ಇತಿಹಾಸ, ಪ್ರೊ. ಬಿ.ಷೇಕ್ ಅಲಿ, ಚೇತನ ಬುಕ್ ಹೌಸ್, ಮೈಸೂರು, ೨೦೦೧, ಪು. ೧೧೫.

೬೭. ಪಾವನ, (ಸಂ) ಎಂ.ಜೈಕುಮಾರ್, ಎಚ್.ಜೆ.ಲಕ್ಕಪ್ಪಗೌಡ, ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ, ಬೆಂಗಳೂರು, ೧೯೯೨, ಪು. ೨೨.

೬೮. ಕುರುಬರ ಚರಿತ್ರೆ, ಲೇ: ಹನುಮಂತಯ್ಯ, ಪು. ೬೮.

೬೯. ಅದೇ, ಪು. ೭೦.

೭೦. ದಕ್ಷಿಣ ಭಾರತದ ಇತಿಹಾಸ, ಪು. ೫೭.

೭೧. ಕುರುಬರ ಚರಿತ್ರೆ, ಪು. ೭೩.

೭೨. ದಕ್ಷಿಣ ಭಾರತದ ಇತಿಹಾಸ, ಪು. ೫೭.

೭೩. ಅದೇ, ಪು. ೩೬೮.

೭೪. ಅದೇ, ಪು. ೨೫೨

೭೫. ಕುರುಬರ ಹೆಜ್ಜೆಗಳು ಒಂದು ಅಧ್ಯಯನ, ಚಂದ್ರಕಾಂತ ಬಿಜ್ಜರಗಿ, ಪು. ೩೫೧.

೭೬. ಅದೇ ಪು. ೨೫೨.

೭೭. ಗುರುವಂದನ, ಪು. ೨೧೦.

೭೮. ಅದೇ, ಪು. ೨೦೭

೭೯. ಕುರುಬರ ಚರಿತ್ರೆ, ವಿ.ಆರ್. ಹನುಮಂತಯ್ಯ, ಪು. ೮೦.

೮೦. ಮರೆತುಹೋಗಿರುವ ಮಹಾಸಾಮ್ರಾಜ್ಯ(ಮೂಲ: ರಾಬರ್ಟ್ ಸಿವೆಲ್), ಅನು: ಸದಾನಂದ ಕನವಳ್ಳಿ, ಕ.ವಿ.ವಿ. ಹಂಪಿ, ೧೯೯೨, ಪು. ೨೩.

೮೧. ಅದೇ, ಪು. ೨೨.

೮೨. ಅದೇ, ಪು. ೨೩.

೮೩. ದೇವೇಂದ್ರ ವಿರಚಿತ ರಾಜಾವಳಿ ಕಥಾಸಾರ, (ಸಂ) ಬಿ.ಎಸ್.ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೮, ಪು...

೮೪. ಎಫಿಗ್ರಾಫಿಯಾ ಕರ್ನಾಟಿಕ, (ಸಂ) ಚಿತ್ರದುರ್ಗ ಜಿಲ್ಲೆ, ಪು. ೩೮೯.

೮೫. ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–೬, ಶೃಂಗೇರಿ ಶಾಸನ, ಪು. ೩೫೯.

೮೬. ವಿಜಯನಗರ ಸಾಮ್ರಾಜ್ಯ ಚರಿತ್ರೆ, ವಿ.ಆರ್.ಹನುಮಂತಯ್ಯ ೧೯೫೨, ಪು. ೧೫.

೮೭. ಹಂಪಿ ಜಾನಪದ, ಪುರುಷೋತ್ತಮ ಬಿಳಿಮಲೆ, ಪು. ೧೦೭.

೮೮. ಗುರುವಂದನ, ಪು. ೨೧೧.

೮೯. ಹಂಡೆಕುರುಬರು: ಒಂದು ಅಧ್ಯಯನ, ಪು. ೩೩೦.

೯೦. ಅದೇ, ಪು. ೩೩೦.

೯೧. ಕರ್ನಾಟಕ ಚರಿತ್ರೆ ಸಂ–೩, ಪ್ರೊ. ಬಿ.ಷೇಕ್ ಅಲಿ, ಕ.ವಿ.ವಿ. ಹಂಪಿ, ೧೯೯೭, ಪು. ೨೬೪.

೯೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಲೇ: ಡಾ. ಎಚ್.ತಿಪ್ಪೆರುದ್ರಸ್ವಾಮಿ, ಎ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೨೦೦೧, ಪು. ೧೬೨.

೯೩. ಕರ್ನಾಟಕ ಕೈಫಿಯತ್ತುಗಳು, (ಸಂ) ಎಂ.ಎಂ.ಕಲಬುರ್ಗಿ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೪, ಪು. ೪೫೦.

೯೪. ಅದೇ, ಪು. ೪೫೦.

೯೫. ಅದೇ, ಪು. ೫೨೫.

೯೬. ಕುರುಬರ ಚರಿತ್ರೆ, ವಿ.ಆರ್.ಹನುಮಂತಯ್ಯ, ಪು. ೯೩.

೯೭. ಶ್ರೀ ದೀಕ್ಷಿತ ಪುಣ್ಯಶ್ಲೋಕ ಅಹಲ್ಯಾ ಮರಾಠಿ, ೧೯೯೨, ಪು. ೧೧.

೯೮. ಕುರುಬರ ಚರಿತ್ರೆ, ವಿ.ಆರ್.ಹನುಮಂತಯ್ಯ ಪು. ೧೪೫.

೯೯. ಅದೇ, ಪು. ೧೪೮.

೧೦೦. ಅದೇ, ಪು. ೧೫೦.

೧೦೧. ಅದೇ, ಪು. ೧೫೦.

೧೦೨. ಹಾಲತೊರೆ

೧೦೩. ಕುರುಬರ ಚರಿತ್ರೆ, ಪು. ೧೬೪.

೧೦೪. ಅದೇ, ಪು. ೧೭೩.

೧೦೫. ಅದೇ, ಪು. ೧೭೩.

೧೦೬. ಅಹಲ್ಯಾಬಾಯಿ ಹೋಳ್ಕರ್, ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೦೭, ಪು. viii

೧೦೭. ಪಾವನ, ಹಾಲುಮತದ ಪ್ರಸಿದ್ಧ ಮಹಿಳೆಯರು, ಡಾ. ಮಲ್ಲಮ್ಮ ಶಂಕರಪ್ಪ ಘಂಟಿ, ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠ, ಕರ್ನಾಟಕ ಪ್ರದೇಶ ಕುರುಬ ಸಂಘ, ಬೆಂಗಳೂರು, ೧೯೯೨, ಪು. ೩೩.

೧೦೮. ಹಾಲುಮತದ ಸ್ತ್ರೀಯರು, ಶಂಕ ಶಿ. ಕುಂಬಾರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೮, ಪು. iii

೧೦೯. ಅಹಲ್ಯಾಬಾಯಿ ಹೋಳ್ಕರ್, (ಸಂ) ಈರಪ್ಪ ಎಂ.ಕಂಬಳಿ, ೨೦೦೦, ಬೆಂಗಳೂರು, ಪು. ೫.

೧೧೦. ಹಾಲತೊರೆ, (ಸಂ) ಎಂ.ಕರಿಯಪ್ಪ, ಎಂ.ಕೆ. ಪುಷ್ಪಾ, ನಗರ ಕುರುಬ ಸಂಘ, ದಾವಣಗೆರೆ, ೨೦೦೩, ಪು. ೧೧೮

೧೧೧. ಭಾರತ ದೇಶದ ಕುರುಬರ ಚರಿತ್ರೆ, ಪು. ii

೧೧೨. ಕರ್ನಾಟಕದ ಕುರುಬರು, ಪು. ೧.

೧೧೩. ಅದೇ, ಪು. ೨.

೧೧೪. ಅದೇ, ಪು. ೨.

೧೧೫. ಅದೇ, ಪು. ೨

೧೧೬. ಶಂಬಾಕೃತಿ ಸಂಪುಟ–೧, ಪು. ೨೭೩.

೧೧೭. ಅದೇ, ಪು. ೨೭೩

೧೧೮. ದಿ ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಬಾಂಬೆ, ಸಂಪುಟ–೨, ಆರ್.ವಿ.ಎಂಥೋವೆನ್, ಪ್ರ. ಏಶಿಯನ್ ಎಜ್ಯುಕೇಶನಲ್ ಸರ್ವಿಸಸ್, ನ್ಯೂಡೆಲ್ಲಿ, ೧೯೯೦, ಪು. ೨೧೭.

೧೧೯. ಅದೇ, ಪು. ೩೧೭.

೧೨೦. ಕುರುಬರ ಚರಿತ್ರೆ, ಪು. ೩೬

೧೨೦. ಕರ್ನಾಟಕದ ಕುರುಬರು, ಪು. ೧.

೧೨೨. ಪ್ರಾಚೀನ ಭಾರತ, ಆರ್.ಎಸ್.ಶರ್ಮಾ, ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು, ೧೯೯೭, ಪು. ೭೧.

೧೨೩. ಕುರುಬರ ಚರಿತ್ರೆ, ಪು. ೩

೧೨೪. ಪ್ರಾಚೀನ ಭಾರತ, ಪು. ೭೧

೧೨೫. ಅದೇ, ಪು. ೭೧

೧೨೬. ಕುರುಬರ ಚರಿತ್ರೆ, ಪು. ೧೨,

೧೨೭. ಅದೇ, ಪು. ೧೨

೧೨೮. ಹಾಲಮತ: ಒಂದು ಜನಪದೀಯ ಅಧ್ಯಯನ, ಎಂ.ಫಿಲ್. ಪ್ರಬಂಧ, ಶಾಂತಪ್ಪ ತಳ್ಳಿಹಾಳ, ಕರ್ನಾಟಕ ವಿಶ್ವವಿದ್ಯಾಲಯ, ೧೯೯೩, ಪು. ೨.

೧೨೯. ಹಾಲುಮತ ದರ್ಶನ, ಶಂಬಾ ಜೋಶಿ, ಕ.ವಿ.ವಿ. ಹಂಪಿ, ೧೯೯೩, ಪು. ೭೧.

೧೩೦. ಅದೇ, ಪು. ೮

೧೩೧. ಭಾರತದ ಗ್ಯಾಜೆಟಿಯರ್, ಸಂ. ೨, ಪು. ೧೭೮

೧೩೨. ಕುರುಬರ ಹೆಜ್ಜೆಗಳು, ಒಂದು ಅಧ್ಯಯನ, ಪು. ೪೧

೧೩೩. ಭಾರತ ದೇಶದ ಕುರುಬರ ಚರಿತ್ರೆ

೧೩೪. ಕುರುಬರ ಗುರು ಒಡೆಯರು, (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ಪು. ೪

೧೩೫. ಭಾರತ ದೇಶದ ಕುರುಬರ ಚರಿತ್ರೆ, ಪು. ೨೮

೧೩೬. ಕುರುಬರ ಹೆಜ್ಜೆಗಳು, ಪು. ೧೩

೧೩೭. ಅದೇ, ಪು. ೧೩

೧೩೮. ಭಾರತದ ಗ್ಯಾಜೆಟಿಯರ್, ಪು.

೧೩೯. ಭಾರತ ದೇಶದ ಕುರುಬರ ಚರಿತ್ರೆ, ಪು. ೩೫

೧೪೦. ಅದೇ, ಪು. ೩೬

೧೪೧. ಅದೇ, ಪು. ೪೫

೧೪೨. ಅದೇ, ಪು. ೪೬

೧೪೩. ಅದೇ, ಪು. ೪೬

೧೪೪. ಅದೇ, ಪು. ೪೪

೧೪೫. ಅದೇ, ಪು. ೪೯

೧೪೬. ಅದೇ, ಪು. ೪೯

೧೪೭. ಅದೇ, ಪು. ೫೨

೧೪೮. ಅದೇ, ಪು. ೫೩

೧೪೯. ಕುರುಬರ ಚರಿತ್ರೆ, ಪು. ೩

೧೫೦. ಅದೇ, ಪು. ೩

೧೫೧. ಭಾರತ ದೇಶದ ಕುರುಬರ ಚರಿತ್ರೆ, ಪು. ೮೯

೧೫೨. ಕುಂಚಟಿಗರ ಸಾಂಸ್ಕೃತಿಕ ಇತಿಹಾಸ, ಪು. ೧೨೦

೧೫೩. ಕರ್ನಾಟಕದ ಕುರುಬರು ಪು. ೧೩

೧೫೪. ವ್ಯಾಧ ಚರಿತ್ರೆ, (ಸಂ) ಡಾ. ಮಂಜುನಾಥ ಬೇವಿನಕಟ್ಟಿ, ಕ.ವಿ.ಹಂಪಿ, ಪ್ರ, ೨೦೦೭, ಪು. ೧೮೮

೧೫೫. ಸಮಾಜ ವಿಜ್ಞಾನಗಳ ಪಾರಿಭಾಷಿಕ ಪದಕೋಶ, (ಸಂ) ಡಾ. ಚಂದ್ರಶೇಖರ ದಾಮ್ಲೆ, ಪ್ರ ಕ.ವಿ.ಹಂಪಿ, ಪ್ರ. ೨೦೦೩, ಪು. ೪೯೨

೧೫೬. ಕನ್ನಡ ನಿಘಂಟು, (ಸಂ) ಎನ್.ಬಸವಾರಾಧ್ಯ, ೭ನೇ ಸಂಪುಟ, ಕ.ಸಾ.ಪ., ಬೆಂಗಳೂರು, ಪು. ೧೯೯೩, ಪು. ೯೫೭೦

೧೫೭. ಎನ್‌ಸೈಕ್ಲೋಪೀಡಿಯಾ ಆಫ್ ಆಂಥ್ರೋಪಾಲಜಿ, ಎಚ್.ಜೇಮ್ಸ್, ಸಂ. ೫, ಸೇಜ್ ಪಬ್ಲಿಕೇಷನ್ಸ್, ನವದೆಹಲಿ, ಪು. ೨೦೦೬, ಪು. ೨೨೧೭

೧೫೮. ಮಾನವಶಾಸ್ತ್ರದ ಮೂಲಾಂಶಗಳು, ಬಿ.ಆರ್.ಸತ್ಯಲಿಂಗರಾಜು, ಚೇತನ ಬುಕ್‌ಹೌಸ್, ಮೈಸೂರು, ಪು. ೨೦೦೬, ಪು. ೯೨

೧೫೯. ಬಿಹಾರ್ ಮತ್ತು ಒರಿಸ್ಸಾ ಸಂಶೋಧನ ಸಮಾಜ, ಎಸ್.ಎಸ್.ಮೆಹತಾ, ಸಂಪುಟ ೧, ದೇವಾಂಗ ಸಂಸ್ಕೃತಿ, ಪ್ರೊ, ಕೆ.ಜಿ.ನಾಗರಾಜಪ್ಪ, ಪು. ೨೦೦೩

೧೬೦. ಭಾರತ ದೇಶದ ಕುರುಬರ ಚರಿತ್ರೆ, ಪು. ೯೫

೧೬೧. ಅದೇ, ಪು. ೯೬

೧೬೨. ಅದೇ, ಪುಟ ೯೭

೧೬೩. ಅದೇ, ಪುಟ ೯೮

೧೬೪. ಅದೇ, ಪು. ೯೮

೧೬೫. ಅದೇ, ಪು. ೯೮

೧೬೮. ಸರ್ವಜ್ಞನ ವಚನಗಳು ಪು. ೨೨೦

೧೬೯. ಅದೇ, ಪು. ೨೨೦

೧೭೦. ಅದೇ, ಪು. ೨೨೦

೧೭೧. ಹಾಲುಮತ ಸಂಸ್ಕೃತಿ, ಡಾ. ಎಫ್.ಟಿ. ಹಳ್ಳಿಕೇರಿ, ಪು. ೧೨೫

೧೭೨. ಭಾರತ ದೇಶದ ಕುರುಬರ ಚರಿತ್ರೆ, ಪು. ೧೧೦

೧೭೩. ಅದೇ, ಪು. ೧೧೧

೧೭೪. ಕನ್ನಡ ಇಂಗ್ಲೀಷ್ ಡಿಷ್ಣನರಿ ರೆವರೆಂಡ್ ಎಫ್. ಕಿಟಲ್, ಮಂಗಳೂರು ಭಾಷೆಲ್ ಮಿಷನ್ ಬುಕ್, ಪು. ೧೮೯೪

೧೭೫. ಕುರುಬರ ಒಳಪಂಗಡಗಳು ಸಾಂಸ್ಕೃತಿಕ ಅಧ್ಯಯನ, ಪು. ೬೭

೧೭೬. ಕುರುಬರ ಹೆಜ್ಜೆಗಳು, ಪು. ೨೩೫

೧೭೭. ತಗರಪವಾಡ, (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ. ಎಫ್.ಟಿ. ಹಳ್ಳಿಕೇರಿ, (ಸಂಧಿ ೨ ಪದ್ಯ ೫೮) ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪, ಪು. ೨೧

೧೭೮. ಕಾಡುಗೊಲ್ಲ ಬುಡಕಟ್ಟು ವೀರರು, ಪು. ೪೧

೧೭೯. ಅದೇ, ಪು. ೪೨

೧೮೦. ಕಸ್ತೂರಿಕೋಶ, ಪಂಡಿತ ಕವಲಿ, ರಾಮಾಶ್ರಮ ಬುಕ್ ಡಿಪೊ, ಧಾರವಾಡ

೧೮೧. ಭಾರತ ದೇಶದ ಕುರುಬರ ಚರಿತ್ರೆ, ಪು. ೧೨೦

೧೮೨. ಕುರುಬರ ಹೆಜ್ಜೆಗಳು, ಪು. ೨೫

೧೮೩. ಭಾರತ ದೇಶದ ಕುರುಬರ ಚರಿತ್ರೆ, ೧೨೯

೧೮೪. ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ, ಪು.

೧೮೫. ಭಾರತ ದೇಶದ ಕುರುಬ ಚರಿತ್ರೆ, ಪು. ೧೩೯

೧೮೬. ಭಾರತದ ಕುರುಬರು, ಪು. ೨೯

೧೮೭. ಭಾರತ ದೇಶದ ಕುರುಬರ ಚರಿತ್ರೆ, ಪು. ೧೪೭

೧೮೮. ಭಾರತದ ಕುರುಬರು, ಪು. ೬೫

೧೮೯. ಭಾರತ ದೇಶದ ಕುರುಬರ ಚರಿತ್ರೆ, ಪು. ೧೫೨

೧೯೦. ಅದೇ, ಪು. ೨೮೩

೧೯೧. ಅದೇ, ಪು. ೨೮೩

೧೯೨. ಹಾಲುಮತ ಸಂಸ್ಕೃತಿ, ಡಾ. ಎಫ್.ಟಿ.ಹಳ್ಳಿಕೇರಿ, ಪು. ೧೬೨

೧೯೩. ಕುರುಬರ ಹೆಜ್ಜೆಗಳು ಒಂದು ಅಧ್ಯಯನ, ಪು. ೨೭೭

೧೯೪. ಶಿವಾಜಿ ಮೂಲ ಕನ್ನಡ ನೆಲೆ, ಪು. ೩೩

೧೯೫. ಕುರುಬರ ಹೆಜ್ಜೆಗಳು ಒಂದು ಅಧ್ಯಯನ, ಪು. ೨೭೯

೧೯೬. ಅದೇ, ಪು. ೨೭೮

೧೯೭. ಅದೇ, ಪು. ೨೭೮

೧೯೮. ಮಾಳಿಂಗರಾಯನ ಮಹಾಕಾವ್ಯ, (ಸಂ) ಗಂಗಾಧರ ದೈವಜ್ಞ, ಪು. ೬

೧೯೯. ಭಾರತ ದೇಶದ ಕುರುಬರ ಚರಿತ್ರೆ, ಪು. ೨೯೦

೨೦೦. ಸಂಗೊಳ್ಳಿರಾಯಣ್ಣ, ಸಂ. ಡಾ. ಸೂರ್ಯನಾಥ ಕಾಮತ್, ಲೇ. ಸವಿಮಠದ, ಪ್ರ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೫. ಪು. ೭೫

೨೦೧. ಭಾರತ ದೇಶದ ಕುರುಬರ ಚರಿತ್ರೆ, ಪು. ೨೯೩

೨೦೨. ಅದೇ, ಪು. ೩೧೩

೨೦೩. ಭೋಜರಾಜ ಕಾಳಿದಾಸ ಚರಿತ್ರೆ, ವಿ.ಆರ್.ಹನುಮಂತಯ್ಯ, ಪು. ೫

೨೦೪. ಕುರುಬರ ಚರಿತ್ರೆ, ಲೇ. ವಿ.ಆರ್.ಹನುಮಂತಯ್ಯ, ಸಂ. ಪ್ರೊ. ಸುಧಾಕರ ಪು.ii

೨೦೫. ಕರ್ನಾಟಕದ ಕುರುಬರು, ಲೇ. ಡಾ. ಶಿವಾನಂದ ಗುಬ್ಬಣ್ಣವರ, ಪು.iii

೨೦೬. ಹಾಲುಮತಸ್ಥ, ಲೇ ಬ.ಪ.ನಾಯ್ಕರ, ಪು. ೩೪

೨೦೭. ಕುರುಬರ ಹೆಜ್ಜೆಗಳು ಒಂದು ಅಧ್ಯಯನ, ಲೇ. ಚಂದ್ರಕಾಂತ ಬಿಜ್ಜರಗಿ, ಪು.v

೨೦೮. ಇತಿಹಾಸ ದರ್ಶನ ಸಂಪುಟ ೨೪

೨೦೯. ಗುರುವಂದನ, ಸಂ. ಡಾ.ಎಚ್.ಜೆ.ಲಕ್ಕಪ್ಪಗೌಡ, ಪು. ೨೪೯

ಅಧ್ಯಾಯ ೪

ವಿಜಯನಗರ ಸಾಮ್ರಾಜ್ಯ ಸಾಹಿತ್ಯ

೧. ವಿಜಯನಗರ ಸಾಮ್ರಾಜ್ಯ ಸ್ಥಾಪಕರೆಂಬುದಕ್ಕೆ ಸಂಬಂಧಪಟ್ಟ ದಾಖಲೆಗಳ ಸಂಗ್ರಹ(೧೯೩೬)

೨. ವಿಜಯನಗರ ಸಾಮ್ರಾಜ್ಯ ಚರಿತ್ರೆ-೧೯೫೨

೧. ಕೃತಿಯ ಸ್ವರೂಪ ೨. ಮೂಲದ ವಿಶ್ಲೇಷಣೆ

೩. ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಅಷ್ಟ ದಿಗ್ಗಜ ಕವಿಗಳು ಮತ್ತು ಅವರ ಕೃತಿಗಳು

೪. ವಿಜಯನಗರ ದಸರಾ ಮಹೋತ್ಸವದ ವರ್ಣಣೆ

೫. ಅಮಾತ್ಯ ಅಪ್ಪಾಜಿಯ ಪರಿಚಯ

೬. ರಾಮರಾಯ ಬಖೈರು ಅಥವಾ ತಾಳಿಕೋಟೆ ಯುದ್ಧ

೭. ವಿಜಯನಗರ ಸಾಮ್ರಾಜ್ಯ ಚರಿತ್ರೆ ತೌಲನಿಕ ಅಧ್ಯಯನ

೮. ಕೃತಿಯ ವಿಶಿಷ್ಟತೆ

ಅಧ್ಯಾಯ ೪

ವಿಜಯನಗರ ಸಾಮ್ರಾಜ್ಯ ಸಾಹಿತ್ಯ

ವಿಜಯನಗರ ಸ್ಥಾಪನೆ ದಕ್ಷಿಣ ಭಾರತದ ಇತಿಹಾಸದಲ್ಲಿಯೇ ಒಂದು ಅದ್ವಿತೀಯ ಘಟನೆ. ಉತ್ತರ ಭಾರತವೆಲ್ಲಾ ಸಂಪೂರ್ಣವಾಗಿ ಮುಸ್ಲಿಮರ ಆಳ್ವಿಕೆಯಿಂದ ಕೂಡಿತ್ತು. ಇವರು ತಮ್ಮ ಆಡಳಿತದ ವಿಸ್ತಾರವನ್ನು ದಕ್ಷಿಣ ಭಾರತದಲ್ಲಿ ವ್ಯಾಪಿಸುವ ಪ್ರಯತ್ನದಲ್ಲಿದ್ದರು. ಮಹಮ್ಮದ್ ಬಿನ್ ತುಘಲಕ್‌ನ ದಾಳಿ ಅಧಿಕಗೊಂಡಂತಹ ಸಂದಿಗ್ಧ ಪರಿಸ್ಥಿತಿಯಿತ್ತು. ಇಲ್ಲಿ ಅವರ ಆಡಳಿತ ನಡೆಸುವುದನ್ನು ತಪ್ಪಿಸುವ ಮತ್ತು ಹಿಂದೂ ಸಂಸ್ಕೃತಿ ರಕ್ಷಿಸುವ ಸಲುವಾಗಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಯಿತು. ಈ ಸಾಮ್ರಾಜ್ಯವನ್ನು ಸ್ಥಾಪಿಸಿದ ಕೀರ್ತಿ ಸಂಗಮ ವಂಶದ ಐವರು ಸಹೋದರರಾದ ಹರಿಹರ, ಬುಕ್ಕರಾಯ, ಕಂಪಣ್ಣ, ಮಾರಪ್ಪ ಮತ್ತು ಮುದ್ದಣ್ಣನಿಗೆ ಸಲ್ಲುತ್ತದೆ. ಇವರಲ್ಲಿ ಹರಿಹರ ಮತ್ತು ಬುಕ್ಕರಾಯ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಲ್ಲಿ ಪ್ರಮುಖರಾದುದನ್ನು ಇತಿಹಾಸದಿಂದ ತಿಳಿಯಬಹುದು. ಈ ಸಾಮ್ರಾಜ್ಯದ ಸ್ಥಾಪನೆ ಕಾಲ ಕ್ರಿ.ಶ. ೧೩೩೬.

ವಿಜಯನಗರ ಸಾಮ್ರಾಜ್ಯದ ಚರಿತ್ರೆ ಕುರಿತಂತೆ ಹಲವಾರು ವಿದ್ವಾಂಸರು ವಿವಿಧ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿರುವರು. ಬಿ. ನಾರಾಯಣರಾವ್, ವಸುಂಧರಾ ಫಿಲಿಯೋಜಾ, ಬಿ.ರಾಘವೇಂದ್ರರಾವ್ ಮೊದಲಾದವರು ಇದರ ಮಹತ್ವವನ್ನು ಸಾರುವ ಅಮೂಲ್ಯವಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಲಿನಲ್ಲಿ ಹೆಸರಿಸಬಹುದಾದ ಮತ್ತೆರಡು ಕೃತಿಗಳೆಂದರೆ ವಿ.ಆರ್.ಹನುಮಂತಯ್ಯನವರ "ವಿಜಯನಗರ ಸಾಮ್ರಾಜ್ಯ ಸ್ಥಾಪಕರೆಂಬುದಕ್ಕೆ ಸಂಬಂಧಪಟ್ಟ ದಾಖಲೆಗಳ ಸಂಗ್ರಹ"(೧೯೩೬) ಹಾಗೂ "ವಿಜಯನಗರ ಸಾಮ್ರಾಜ್ಯ ಚರಿತ್ರೆ"(೧೯೫೨).

೧. ವಿಜಯನಗರ ಸಾಮ್ರಾಜ್ಯ ಸ್ಥಾಪಕರೆಂಬುದಕ್ಕೆ ಸಂಬಂಧಪಟ್ಟ ದಾಖಲೆಗಳ ಸಂಗ್ರಹ(೧೯೩೬)
೨. ವಿಜಯನಗರ ಸಾಮ್ರಾಜ್ಯ ಚರಿತ್ರೆ-೧೯೫೨

೧. ಕೃತಿಯ ಸ್ವರೂಪ ೨. ಮೂಲದ ವಿಶ್ಲೇಷಣೆ ೩. ವಿಜಯನಗರ ಸಾಮ್ರಾಜ್ಯವನ್ನು ಕುರಿತು ವಿದ್ವಾಂಸರ ಅಭಿಪ್ರಾಯ ೪. ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಅಷ್ಟದಿಗ್ಗಜ ಕವಿಗಳು ಮತ್ತು ಅವರ ಕೃತಿಗಳು ೫. ವಿಜಯನಗರದ ದಸರಾ ಮಹೋತ್ಸವದ ವರ್ಣನೆ ೬. ಅಮಾತ್ಯ ಅಪ್ಪಾಜಿಯ ಪರಿಚಯ ೭. ರಾಮರಾಯನ ಬಖೈರು ಅಥವಾ ತಾಳಿಕೋಟೆ ಯುದ್ಧ ೮. ವಿಜಯನಗರ ಸಾಮ್ರಾಜ್ಯ ಚರಿತ್ರೆ: ತೌಲನಿಕ ಅಧ್ಯಯನ ೯. ಕೃತಿಯ ವಿಶಿಷ್ಟತೆ ಎಂಬ ಪ್ರಮೇಯ ಗಳನ್ನಿಟ್ಟುಕೊಂಡು ವಿಶ್ಲೇಷಿಸಬಹುದು

೧೯೩೬ರ ಡಿಸೆಂಬರ್ ತಿಂಗಳಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಕುರಿತು ಮಹತ್ವದ ಬೆಳವಣಿಗೆಯನ್ನು ಕಂಡಿತು. ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ನೇ ವರ್ಷಾಚರಣೆಯ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಇಲ್ಲಿ ವಿಜಯನಗರ ಸಾಮ್ರಾಜ್ಯ ಚರಿತ್ರೆಯನ್ನು ಪುನಾ ರಚಿಸುವ ಕಾರ್ಯಕ್ಕೆ ಕೈ ಹಾಕಿದರು. ಈ ಮಹೋತ್ಸವಕ್ಕೆ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಬಂಗಾಳ, ಸಂಯುಕ್ತ ಪ್ರಾಂತ್ಯದಿಂದಲೂ ಆಗಮಿಸಿದ್ದರು. ಇದರಲ್ಲಿ ನಾಡಿನ ವಿದ್ವಾಂಸರು, ಕವಿಗಳು, ಇತಿಹಾಸಕಾರರು ಶಾಸನತಜ್ಞರು ಭಾಗವಹಿಸಿದ್ದು ಗಮನಾರ್ಹ. ಅವರಲ್ಲಿ ಆಲೂರು ವೆಂಕಟರಾಯ, ಎನ್.ವೆಂಕಟರಮಣಯ್ಯ ಫಾದರ್ ಹೆರಾಸ್, ಬಿ.ಎ.ಸಾಲತ್ತೊರೆ. ಪಿ.ಬಿ.ದೇಸಾಯಿ, ಸಾಲತ್ತೊರೆಯವರು ಕರ್ನಾಟಕ, ಕನ್ನಡ, ಕುರುಬ ಕುರಿತಂತೆ, ನಾಡು-ನುಡಿ ಸಮುದಾಯಕ್ಕೆ ಸಂಬಂಧಿಸಿದ ಮಹತ್ವದ ಪ್ರಬಂಧಗಳನ್ನು ಮಂಡಿಸಿದರು. ಈ ವಾದಕ್ಕೆ ವ್ಯತಿರಿಕ್ತವಾಗಿ ಎನ್.ವೆಂಕಟರಮಣಯ್ಯ ಅವರು ತೆಲುಗು ವಾರಂಗಲ್ ಮೂಲ ಎಂದು ಪ್ರತಿಪಾದಿಸಿದರು.

ವಿ.ಆರ್.ಹನುಮಂತಯ್ಯನವರು ಸಹ ಇದೇ ಸಂದರ್ಭದಲ್ಲಿ "ವಿಜಯನಗರ ಸಾಮ್ರಾಜ್ಯ ಸ್ಥಾಪಕರೆಂಬುದಕ್ಕೆ ಸಂಬಂಧಪಟ್ಟ ದಾಖಲೆಗಳ ಸಂಗ್ರಹ" ಎನ್ನುವ ಕೃತಿಯನ್ನು ಒಂದು ತಿಂಗಳಲ್ಲಿ ರಚಿಸಿದ್ದಾರೆ. ಇದರಲ್ಲಿ ತಮಗಿಂತ ಪೂರ್ವದಲ್ಲಿ ವಿಜಯನಗರ ಸಾಮ್ರಾಜ್ಯದ ಮೂಲ ಕುರಿತು ಅನೇಕ ಭಾರತೀಯ ವಿದ್ವಾಂಸರು ಹಾಗೂ ಬ್ರಿಟಿಷ್ ಅಧಿಕಾರಿಗಳು ಚರ್ಚಿಸಿದ್ದಾರೆ. ಅವರ ಹೇಳಿಕೆಗಳನ್ನು ಪರಿಶೀಲಿಸಿ ಮೂಲದ ಬಗ್ಗೆ ಇರುವ ಭಿನ್ನಾಭಿಪ್ರಾಯ ಗಮನಿಸಿ ೪೨ ಆಧಾರಗಳನ್ನು ಪ್ರಸ್ತಾಪಿಸಿದ್ದಾರೆ. ಜೊತೆಗೆ ವಿಜಯನಗರ ಸಾಮ್ರಾಜ್ಯದ ಸಂಕ್ಷಿಪ್ತ ಇತಿಹಾಸ ಮತ್ತು ವಿಜಯನಗರ ಪಟ್ಟಣದ ಸಂಕ್ಷಿಪ್ತ ವರ್ಣನೆ ಕುರಿತು ಹೇಳಿದ್ದಾರೆ. ಜೊತೆಗೆ "ಭರತಖಂಡ ಕುರುಬರ ಸಂಕ್ಷಿಪ್ತ ಮೂಲ ಚರಿತ್ರೆ"ಯನ್ನು ಪರಿಚಯಿಸಿರುವುದು ಕಂಡುಬರುತ್ತದೆ.

ಆಕರಗಳು ಒಂದು ಕೃತಿಯ ನಿರ್ಮಾಣಕ್ಕೆ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇವುಗಳು ದೊರೆತ ಮಾತ್ರಕ್ಕೆ ಕೃತಿಯು ನಿರ್ಮಾಣವಾಗುವುದಿಲ್ಲ. ಆಕರಗಳನ್ನು ವಿಶ್ಲೇಷಣೆಗೆ, ವಿಮರ್ಶೆಗೆ ಒಳಪಡಿಸುವುದು ಸಂಶೋಧಕರ ಕರ್ತವ್ಯ. ದೊರೆತಿರುವ ಆಕರಗಳು ಚರಿತ್ರೆಯ ನಿರ್ಮಾಣಕ್ಕೆ ಯೋಗ್ಯವೇ? ಅಲ್ಲವೆ? ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸುವುದು ಅಗತ್ಯ ಹಾಗೂ ಅನಿವಾರ್ಯ ಸಂಗತಿ ಕೂಡ. ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ನೆನಪಿಸುವ ಈ ಕೃತಿಯು ಕನ್ನಡ ಸಾಹಿತ್ಯ ಸಂಸ್ಕೃತಿಗೆ ತನ್ನದೇ ಆದ ಕೊಡುಗೆ ನೀಡಿದೆ. ಇಂತಹ ಚರಿತ್ರೆಯ ರಚನೆಗೆ ಬಳಸಿಕೊಂಡಿರುವ ಆಕರಗಳ ವಿಶ್ಲೇಷಣೆ ಅತ್ಯಾವಶ್ಯಕ. ದೇಶ ಮತ್ತು ವಿದೇಶಿ ಬರವಣಿಗೆಗಳಿಂದ ಹಾಗೂ ಶಾಸನ, ಸನ್ನದು, ಕಾವ್ಯ, ಪುರಾಣ, ಗೆಝೆಟಿಯರ್, ನಿಘಂಟುಗಳಂಥ ಲಿಖಿತ ಮತ್ತು ಮೌಖಿಕ ಆಕರಗಳನ್ನು ಬಳಸಿಕೊಳ್ಳುವುದರ ಜೊತೆಗೆ ವಿದ್ವಾಂಸರ ಅಭಿಪ್ರಾಯಗಳನ್ನು, ಲೇಖಕರ ಕೃತಿಗಳನ್ನು ಈ ಕೃತಿಯಲ್ಲಿ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

೨. ವಿಜಯನಗರ ಸಾಮ್ರಾಜ್ಯ ಚರಿತ್ರೆ–೧೯೫೨

೧. ಕೃತಿಯ ಸ್ವರೂಪ

೧೯೫೨ರಲ್ಲಿ ಪ್ರಕಟಗೊಂಡ ಈ ಕೃತಿಯು ಹನುಮಂತಯ್ಯನವರು ಇಪ್ಪತ್ತೈದು ವರ್ಷಗಳಲ್ಲಿ ಸಂಗ್ರಹಿಸಿದ ಚಾರಿತ್ರಿಕ ಆಧಾರಗಳ ಫಲ. ಇದು ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಪರಂಪರೆಯನ್ನು ನೆನಪಿಸುವುದರ ಜೊತೆಗೆ ಅದರ ಗತವೈಭವವನ್ನು ತಿಳಿಸಿಕೊಡುವಂತಹ ಪ್ರಮುಖ ಕೃತಿಗಳಲ್ಲಿ ಒಂದಾಗಿದೆ.

೧೧೪ ಪುಟಗಳನ್ನೊಳಗೊಂಡ ಈ ಕೃತಿಯಲ್ಲಿ ಹಕ್ಕ–ಬುಕ್ಕರು 'ಕುರುಬ' ಸಮುದಾಯಕ್ಕೆ ಸೇರಿದವರು ಎಂಬುದಕ್ಕೆ ಚಾರಿತ್ರಿಕ ಆಧಾರಗಳನ್ನು ನೀಡಿರುವರು. ಈ ಸಾಮ್ರಾಜ್ಯ ಸ್ಥಾಪನೆಗೂ ಮೊದಲಿದ್ದ ಭರತಖಂಡದ ಭಯಂಕರ ಪರಿಸ್ಥಿತಿಯನ್ನು ಹೇಳುವುದರೊಂದಿಗೆ ಪ್ರಾರಂಭವಾಗುವ ಕೃತಿಯು ನಂತರ ಸಾಮ್ರಾಜ್ಯದ ಸ್ಥಾಪನೆಯನ್ನು ವಿವರಿಸುತ್ತಾ ಸಾಗಿ ಕೃಷ್ಣದೇವರಾಯನ ಕಾಲದಲ್ಲಿದ್ದ ಅಷ್ಟದಿಗ್ಗಜ ಕವಿಗಳ ವಿವರ, ಅವರ ಕೃತಿಗಳು, ವಿಜಯನಗರ ದಸರಾ ಮಹೋತ್ಸವದ ಸಂಕ್ಷಿಪ್ತ ವರ್ಣನೆ, ಅಮಾತ್ಯ ಅಪ್ಪಾಜಿಯವರ ಅಲ್ಪ ಪರಿಚಯ, ರಾಮರಾಯನ ಬಖೈರು ಅಥವಾ ತಾಳಿಕೋಟೆ ಯುದ್ಧ, ವಿಜಯನಗರ ಪಟ್ಟಣದ ಸಂಕ್ಷಿಪ್ತ ವರ್ಣನೆ ಎಂಬ ಅಧ್ಯಾಯಗಳಲ್ಲಿ ವಿಜಯನಗರ ಅರಸುಮನೆತನದ ಚರಿತ್ರೆಯನ್ನು ಅಚ್ಚುಕಟ್ಟಾಗಿ ಪರಿಚಯಿಸಿದೆ. ಓದುಗರಿಗೆ ವಿಷಯಸ್ಪಷ್ಟತೆಗಾಗಿ ಕೃತಿಯಲ್ಲಿ ಅಲ್ಲಲ್ಲಿ ಛಾಯಾಚಿತ್ರಗಳನ್ನು ನೀಡಲಾಗಿದೆ. ಹಂಪೆಯಲ್ಲಿರುವ ಪ್ರಸಿದ್ಧ ಶ್ರೀ ವಿರೂಪಾಕ್ಷೇಶ್ವರ ದೇವಾಲಯ, ಗ್ರಂಥಕರ್ತ ವಿ.ಆರ್.ಹನುಮಂತಯ್ಯನವರ ಭಾವಚಿತ್ರ, ಮೈಸೂರು ಶ್ರೀಮನ್ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್

ಬಹದ್ದೂರ್ ಅವರ ಚಿತ್ರ, ವಿಜಯನಗರದ ಸ್ಥಾಪಕರಾದ ಹಕ್ಕ-ಬುಕ್ಕ ಸಹೋದರರು ತಮ್ಮ ಮಿತ ಪರಿವಾರದೊಡನೆ ತನ್ನ ನೂತನ ಪಟ್ಟಣದ ಸೊಬಗನ್ನು ನೋಡಲು ರಾಜಬೀದಿಗಳಲ್ಲಿ ಸಂಚಾರ ಹೊರಟಿರುವ ಚಿತ್ರ, ವಿಜಯನಗರದ ಚಕ್ರವರ್ತಿ ಸಾರ್ವಭೌಮ ಶ್ರೀಕೃಷ್ಣದೇವರಾಯನ ಚಿತ್ರ, ಚಂದ್ರಗಿರಿ ಅರಮನೆ, ವಿಜಯನಗರದರಸರ ಗಜಶಾಲೆ ಮೊದಲಾದ ಛಾಯಾಚಿತ್ರಗಳು ಪ್ರಮುಖವಾಗಿ ಕಂಡುಬರುತ್ತವೆ.

"ಇಂದು ನಮ್ಮಲ್ಲಿರುವ ಗೊಲ್ಲರು, ಕುರುಬರು, ದನಗಾರರು, ಹಾಲುಮತಸ್ಥರು ಎಂದು ಕರೆಸಿಕೊಳ್ಳುವ ಸಮುದಾಯಗಳು ಹಿಂದೆ ಯಾದವ-ಪೌರವರೆಂಬ ಕ್ಷತ್ರಿಯ ವಂಶಕ್ಕೆ ಸೇರಿದವರಾಗಿರುವ ಇವರು 'ಯಯಾತಿ' ಎಂಬ ಚಂದ್ರವಂಶದ ಅರಸರಾದ 'ಯದು' ಮತ್ತು 'ಪೂರು' ಎಂಬ ಮೂಲಪುರುಷರಿಗೆ ಸೇರಿದವರೆಂಬುದಕ್ಕೆ ಪೌರಾಣಿಕ ಆಧಾರಗಳು ದೊರೆಯುತ್ತವೆ. ಮೇಲಾಗಿ ಭಾರತಕ್ಕೆ ಮೊಟ್ಟಮೊದಲು ವಲಸೆ ಬಂದ ಆರ್ಯರು ಪಶುಪಾಲಕ ರಾಗಿದ್ದರು. ಅಷ್ಟೇ ಏಕೆ, ಭಾರತೀಯ ಆರಾಧ್ಯ ಮೂರ್ತಿಗಳಾದ ಶ್ರೀಕೃಷ್ಣನು ಗೋಪಾಲಕ, ಸಾಕ್ಷಾತ್ ಪರಮೇಶ್ವರನು 'ಪಶುಪತಿ' ಎಂಬ ಪವಿತ್ರ ಹೆಸರುಗಳಿಂದ ಭೂಷಿತನಾಗಿದ್ದಾನೆ. ಹಾಗೆಯೇ ಕ್ರಿ.ಶ. ೫ನೆಯ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಸ್ಥಾಪಿತವಾದ ಪಲ್ಲವ, ನೊಳಂಬ, ಕುರುಂಬಿ, ಕದಂಬ, ಹೊಯ್ಸಳ ಎಂಬ ಹೆಸರುಗಳಿಂದ ವಿರಾಜಿಸಿದವರು ಪುರಾತನ ಕುರುವಂಶಕ್ಕೆ ಸಂಬಂಧವುಳ್ಳವರೆಂದು ತಿಳಿದುಬರುತ್ತದೆ. ಆದ್ದರಿಂದ ವಿಜಯನಗರ ಅರಸರ ಮೂಲಪುರುಷರು "ಕ್ಷೀರಸಾಗರ ಸಂಭವ", "ಕ್ಷೀರವಂಶ" ಮುಂತಾದ ವಿಶೇಷಣಗಳಿಂದ ಹಾಲುಮತದವರೆಂದು ಹನುಮಂತಯ್ಯ ಅವರು ಸಮರ್ಥಿಸಿರುವುದು ಮನನೀಯವಾಗಿದೆ"[೧] ಎಂದು ಎಂ.ಜಿ. ನಂಜುಂಡಾರಾಧ್ಯರು ಈ ಕೃತಿಯ ಮುನ್ನುಡಿಯಲ್ಲಿ ಹೇಳಿರುವುದು ಸಮಂಜಸವಾಗಿದೆ.

ವಿಜಯನಗರ ಸಾಮ್ರಾಜ್ಯದ ಉಗಮ ಮತ್ತು ಸ್ಥಾಪನೆ ಕುರಿತು ಅವಲೋಕಿಸಿದಾಗ ಇತಿಹಾಸಕಾರರು ಹೆಚ್ಚಾಗಿ ಮತಧರ್ಮದ ಹಿನ್ನೆಲೆ ನೀಡಿರುವರು. ಹಾಗೆಯೇ ಈ ಸಾಮ್ರಾಜ್ಯವು ಇಂದಿಗೂ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಗೊಂದಲದ ಗೂಡಾಗಿದೆ. ಏಕೆಂದರೆ ವಿಜಯನಗರ ಸಾಮ್ರಾಜ್ಯ ನಿರ್ದಿಷ್ಟವಾಗಿ ಎಂದು ಅಸ್ತಿತ್ವ ಪಡೆಯಿತು? ಆರಂಭದ ಸಂಗಮ ವಂಶದ ಅರಸರು ಯಾವ ಮೂಲಕ್ಕೆ ಸೇರಿದವರು? ಎಂಬುದರ ಕುರಿತದ್ದು. ಈ ಪ್ರಶ್ನೆಗಳು ಆಧುನಿಕ ಯುಗದಲ್ಲಿಯೂ ಜಿಜ್ಞಾಸೆಯಾಗಿ ಉಳಿದುಕೊಂಡಿವೆ. ಇದನ್ನು ಕುರಿತು ಸುದೀರ್ಘವಾಗಿ ಚರ್ಚೆ ಮತ್ತು ವಾದಗಳು ನಡೆಯುತ್ತಾ ಬಂದಿವೆ ಮತ್ತು ಬರುತ್ತಲಿವೆ.

ವಿಜಯನಗರ ಸಾಮ್ರಾಜ್ಯ ಚರಿತ್ರೆಯನ್ನು ರಚಿಸಿದ ವಿದ್ವಾಂಸರಾದ ಮಾರ್ಕ್ ಎಲ್ಕ್ಸ್, ಬಿ.ಎಲ್.ರೈಸ್, ರಾಬರ್ಟ್ ಸಿವೆಲ್, ವೆಂಕಟರಂಗೋಕಟ್ಟಿ, ಟಿ.ಸೂರ್ಯನಾರಾಯಣರಾವ್, ಎಸ್.

ಕೃಷ್ಣಸ್ವಾಮಯ್ಯಂಗಾರ್, ಎಂ. ಶಾಮರಾವ್ ಮೊದಲಾದವರು ಹನುಮಂತಯ್ಯನವರಿಗಿಂತ ಪೂರ್ವದಲ್ಲಿಯೇ ಈ ಸಾಮ್ರಾಜ್ಯದ ಇತಿಹಾಸವನ್ನು ತಮ್ಮ ಕೃತಿಗಳಲ್ಲಿ ಪ್ರಸ್ತಾಪಿಸಿದ್ದಾರೆ. ಆದರೆ ಅವುಗಳಲ್ಲಿ ಕೇವಲ ರಾಜರ ಯುದ್ಧಗಳು, ಹಂಪಿಯ ವೈಭವ, ಕೃಷ್ಣದೇವರಾಯನ ವರ್ಣನೆ, ಪ್ರವಾಸ ಇತ್ಯಾದಿ ಕುರಿತಂತೆ ಬರೆದಿದ್ದೇ ಹೆಚ್ಚು. ಹಾಗೆಯೇ ವಿಜಯನಗರ ಸಾಮ್ರಾಜ್ಯ ಚರಿತ್ರೆ ಎಂದರೆ ಹಿಂದೂ ಮುಸ್ಲಿಮರ ನಡುವಿನ ವೈಷಮ್ಯವೇ ಪ್ರಮುಖವೆಂಬಂತೆ ಬಿಂಬಿಸುತ್ತ ಅವರ ವಿರುದ್ಧ ಇವರೆಂಬಂತೆ ಎತ್ತಿಕಟ್ಟಿ ಬಳಸಿಕೊಂಡು ಬರೆದಿರುವುದೇ ಹೆಚ್ಚು ಕಂಡುಬರುತ್ತದೆ. ಆದರೆ ಹನುಮಂತಯ್ಯನವರ ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಯಾರು? ಎಂದು? ಹೇಗೆ ಸ್ಥಾಪಿಸಿದರು? ಅವರ ಜಾತಿಮತಗಳಾವುವು? ಎಂಬ ಪ್ರಶ್ನೆಗಳನ್ನು ಎತ್ತಿಕೊಳ್ಳುವ ಮೂಲಕ ಅವಕ್ಕೆ ಸಂಬಂಧಿಸಿದಂತೆ ಆಧಾರಗಳನ್ನು ಸಂಗ್ರಹಿಸಿ, ಅವುಗಳ ಬಲದಿಂದ ನಿಜ ಇತಿಹಾಸವನ್ನು ಕಟ್ಟಿಕೊಡಲು ಪ್ರಯತ್ನವನ್ನು ಮಾಡಿರುವರು.

೨. ಮೂಲದ ವಿಶ್ಲೇಷಣೆ

ಕುರುಬರ ಮೂಲ: ವಿ.ಆರ್.ಹನುಮಂತಯ್ಯನವರು ವಿಜಯನಗರ ಅರಸರು ಮೂಲತಃ ಕುರುಬ ಸಮುದಾಯದವರೆಂದು ಅಭಿಪ್ರಾಯ ಪಟ್ಟಿದ್ದಾರೆ. ಅದಕ್ಕೆ ಆಧಾರಗಳನ್ನು ಈ ಕೆಳಗಿನಂತೆ ವಿವರಿಸಿದ್ದನ್ನು ಕಾಣಬಹುದು.

ರಾಬರ್ಟ್ ಸಿವೆಲ್ ಅವರು ಬರೆದಿರುವ 'ದಿ ಫರ್ಗಾಟನ್ ಎಂಪೈರ್ ಆಫ್ ವಿಜಯನಗರ', ಎಂ.ಬಿ.ಸೂರ್ಯನಾರಾಯಣರಾವ್ ಅವರ 'ದಿ ನೆವರ್ ಟು ಬಿ ಫರ್ಗಾಟನ್ ಎಂಪೈರ್ ಆಫ್ ವಿಜಯನಗರ' ಕೃತಿಗಳಲ್ಲಿ ಉಲ್ಲೇಖವಾದ "ಮಹಾತಪಸ್ವಿಯಾದ ಮಾಧವಾಚಾರ್ಯ (ವಿದ್ಯಾರಣ್ಯ)ರಿಗೆ ದೊಡ್ಡ ನಿಧಿಯು ದೊರೆತು ಅದರಿಂದ ವಿಜಯನಗರವೆಂಬ ಪಟ್ಟಣವನ್ನು ಕಟ್ಟಿ ರಾಜ್ಯ ಸ್ಥಾಪನೆ ಮಾಡಿ ತಾನೇ ಕೆಲ ಕಾಲ ಆಳಿ ತಮ್ಮ ಮರಣ ಕಾಲದಲ್ಲಿ ಒಬ್ಬ ಕುರುಬ ಜಾತಿಯವರಿಗೆ ಒಪ್ಪಿಸಿದರು. ಆದ್ದರಿಂದ ಈ ಜಾತಿಯವರೇ ವಿಜಯನಗರ ರಾಜ್ಯಕ್ಕೆ ಮೂಲಪುರುಷರಾದರು".[೨]

"ತುಂಗಭದ್ರಾತೀರದ ಒಂದು ಗುಹೆಯಲ್ಲಿ ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳು ಘೋರವಾದ ತಪಸ್ಸು ಮಾಡುತ್ತಿರುವಾಗ ಪ್ರತಿದಿನ ಬುಕ್ಕನೆಂಬ ಕುರುಬನು ಹಾಲನ್ನು ತಂದುಕೊಡುತ್ತಿದ್ದನು. ಈ ಹಾಲೇ ಇವರಿಗೆ ಆಧಾರವಾಗಿತ್ತು. ಒಂದು ದಿನ ಆ ಕುರುಬನಿಗೆ ನೀನು ಇಡೀ "ಹಿಂದೂಸ್ಥಾನದ ರಾಜ ಹಾಗೂ ಸಾಮ್ರಾಟನಾಗುವೆ" ಎಂದು ಆಶೀರ್ವದಿಸಿದರು. ಅಂದಿನಿಂದ ಅವನು ಉಳಿದ ಕುರುಬರಿಗೆ ನಾಯಕನಂತಿದ್ದನು. ತನ್ನ ನೆರೆಹೊರೆಯವರನ್ನು ಗೆದ್ದು ತನ್ನನ್ನು ಅವರ ಪ್ರಭು 'ಬೊಕಾರಾವ' ಎಂದು ಕರೆದುಕೊಂಡ. ದಿಲ್ಲಿಯ ರಾಜನ ವಿರುದ್ಧ ಗೆದ್ದು ಬುಕ್ಕನು ನಗರವೊಂದನ್ನು ಸ್ಥಾಪಿಸಿ ಅದನ್ನು 'ವಿಜಯನಗರ' ಎಂದು ಕರೆದ. ಇದೇ ಮುಂದೆ ವಿಜಯನಗರವಾಯಿತು"[೩] ಎಂದು ಪ್ರಸ್ತಾಪಿಸಿದ್ದಾರೆ.

ರಾಬರ್ಟ್ ಸಿವೆಲ್ಲರು ಹೇಳಿರುವ "ಮುಸಲ್ಮಾನರು ೧೩೨೩ರಲ್ಲಿ ವರಂಗಲ್ಲು ಪಟ್ಟಣವನ್ನು ಹಾಳುಮಾಡಿದ ಮೇಲೆ ಅಲ್ಲಿನ ಭಂಡಾರದ ಕಾವಲುಗಾರರಾಗಿದ್ದ, ಹಿಂದೂ ಮತದಲ್ಲಿ ತುಂಬಾ ಅಭಿಮಾನಿ ಶಾಲಿಗಳಾಗಿದ್ದ 'ಕುರುಬ' ಜಾತಿಯ ಹಕ್ಕ-ಬುಕ್ಕರೆಂಬ ಸಹೋದರರು ಓಡಿಬಂದು ಸಣ್ಣ ಸಂಸ್ಥಾನಾಧಿಪತಿಯಾಗಿದ್ದ ಆನೆಗೊಂದಿ ರಾಜನ ಆಶ್ರಯದಲ್ಲಿ ನಿಂತರು"[೪] ಎಂದು ಹೇಳಿದ್ದಾರೆ.

ಈ ಹಕ್ಕ-ಬುಕ್ಕರೆಂಬ ಸಹೋದರರು ಹೊಯಿಸಳ ಬಲ್ಲಾಳ ಅರಸರ ಮಾಂಡಳಿಕರಾದ ರಾಜಪುತ್ರರು. ಇವರು ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿ, ಆನೆಗೊಂದಿ ಪ್ರಾಂತವನ್ನು ವಿಚಾರಿಸಿಕೊಂಡು ಬರುವಾಗ ಆ ಅಡವಿಯಲ್ಲಿ ತಪಸ್ಸು ಮಾಡುತ್ತಿದ್ದ ಶ್ರೀವಿದ್ಯಾರಣ್ಯ ಸ್ವಾಮಿಗಳನ್ನು ಸಂದರ್ಶಿಸಿ ಅವರ ವಾಕ್ಯದಂತೆ ವಿಜಯನಗರವೆಂಬ ಹೊಸರಾಜ್ಯವನ್ನು ಸ್ಥಾಪಿಸಿದರು. ಹಕ್ಕ-ಬುಕ್ಕರು ವಿಜಯನಗರ ಪ್ರಾಂತ್ಯದಲ್ಲಿ ಸಂಚರಿಸುತ್ತಿರುವಾಗ ಒಂದು ಮೊಲವು ಒಂದು ಬೇಟೆ ನಾಯಿಯನ್ನು ಅಟ್ಟಿಸಿಕೊಂಡು ಹೋಯಿತೆಂದು, ಮತ್ತೊಂದು ಕತೆಯಂತೆ ಗೋವು ಹುತ್ತದ ಮೇಲೆ ನಿಂತು ತನ್ನ ಹಾಲನ್ನು ಆ ಹುತ್ತದ ಕೋವಿಯಲ್ಲಿ ತಾನಾಗಿ ಸುರಿಸಿದ್ದರಿಂದ ಆಶ್ಚರ್ಯಗೊಂಡ ಅವರು ವಿದ್ಯಾರಣ್ಯ ಸ್ವಾಮಿಗಳಿಗೆ ತಾವು ಕಂಡ ವೃತ್ತಾಂತವನ್ನು ಹೇಳಿದರು. ಆಗ ವಿದ್ಯಾರಣ್ಯರು ಸಂತುಷ್ಟಾಂತಃಕರಣದಿಂದ ಅದೇ ಸ್ಥಳದಲ್ಲಿ ವಿಜಯನಗರವನ್ನು ಸ್ಥಾಪಿಸುವಂತೆ ಅನುಗ್ರಹಿಸಿ, ತಾವೇ ಮಂತ್ರಿಗಳಾಗಿದ್ದು, ಆ ರಾಜ್ಯವನ್ನು ವಿಸ್ತರಿಸಲು ಅದನ್ನು ಯಶಸ್ಸಿಗೆ ತಂದದ್ದರಿಂದ ಆ ಪಟ್ಟಣಕ್ಕೆ ವಿದ್ಯಾನಗರವೆಂದೂ ನಂತರ ವಿಜಯನಗರವೆಂದೂ ಹೆಸರಾಯಿತೆಂಬ ಪ್ರತೀತಿಯಿದೆ"[೫] ಎಂಬುದನ್ನು ವಿವರಿಸಿದ್ದಾರೆ.

ಕ್ರಿ.ಶ. ೧೪೭೪ರಲ್ಲಿ ಹಿಂದೂಸ್ಥಾನದಲ್ಲಿ ಪ್ರವಾಸ ಕೈಗೊಂಡಿದ್ದ ನಿಕಿಟಿನ್ ಎಂಬ ರಷ್ಯಾ ದೇಶದ ಯಾತ್ರಿಕನು ವಿಜಯನಗರಕ್ಕೆ ಬಂದಿದ್ದಾಗ "ಹಕ್ಕ-ಬುಕ್ಕರೆಂಬ ಸಹೋದರರು ಪೂರ್ವದಲ್ಲಿ ಬನವಾಸಿಯ ಅರಸರಾಗಿದ್ದ ಕದಂಬರ ವಂಶದವರು. ಇವರು ಹಿಂದೂ ಸುಲ್ತಾನ್ ಕದಂಬರು ಎಂದು ಹೇಳಿ ವಿಜಯನಗರವನ್ನು 'ಬಿಚನಗರ'ವೆಂದೂ ಕರೆದರೆ, ಚೀನಾದೇಶದ ಹ್ಯೂಯನ್‌ತ್ಸಾಂಗನು 'ಬಿಜನಗರ'ವೆಂದು"[೬] ಕರೆದಿರುವರು ಎಂದಿದ್ದಾರೆ.

ಗಸ್ಟೌ ಅಪ್ಪರ್ಟ್ ಅವರ "ದಿ ಒರಿಜಿನಲ್ ಇನ್‌ಹ್ಯಾಬಿಟೆಂಟ್ಸ್ ಆಫ್ ಇಂಡಿಯಾ" ಕೃತಿಯಲ್ಲಿ "ಕುರುಬರ ಮತ್ತೊಂದು ಶಾಖೆಯವರೇ ವಿಜಯನಗರವೆಂಬ ರಾಜ್ಯವನ್ನು ಸ್ಥಾಪಿಸಿದರೆಂದು"[೭] ಹೇಳಿರುವರು.

ಎಚ್.ವಿಲ್ಸನ್ ಅವರು "ಈ ರಾಜಪುತ್ರರು ಕುರುಮರ ಅಥವಾ ಕುರುಬರ ಜಾತಿಗೆ ಸೇರಿದವರು"[೮] ಎಂದು ಹೇಳಿದ್ದಾರೆ.

ಜಾನ್ ಕೆಲ್ಸಲ್ ಎಂಬುವವರು ೧೮೭೨ನೇ ಇಸವಿ ಸೆಪ್ಟೆಂಬರ್ ೯ನೇ ಮಕ್ಕುಂ ಮ್ಯಾನ್ಯೂಲ್ ಆಫ್ ಬಳ್ಳಾರಿ ಜಿಲ್ಲೆ ಗೆಝೆಟಿಯರ್ ಪುಸ್ತಕದ ೧೦೨ನೇ ಪುಟದಲ್ಲಿ ಹೀಗೆ ಬರೆದಿರುವರು. "೧. ವಿದ್ಯಾರಣ್ಯರು ಭುವನೇಶ್ವರಿಯನ್ನು ಕುರಿತು ತಪಸ್ಸು ಮಾಡಿ ಬೇಕಾದಷ್ಟು ದ್ರವ್ಯವನ್ನು ಪಡೆದುಕೊಂಡು ಅದರಿಂದ ಒಂದು ಪಟ್ಟಣವನ್ನು ಕಟ್ಟಿಸಿ ಅದನ್ನು ಕೆಲಕಾಲ ತಾವೇ ಆಳಿ ನಂತರ ಒಬ್ಬ ಕುರುಬ ಜಾತಿಯವನಿಗೆ ರಾಜ್ಯಾಭಿಷೇಕ ಮಾಡಿದರು." ೨. "ಮಾಧವಾಚಾರ್ಯರು (ವಿದ್ಯಾರಣ್ಯರು) ಒಂದು ಪಟ್ಟಣವನ್ನು ಕಟ್ಟಿ ಅದನ್ನು ತಾವು ತಪಸ್ಸು ಮಾಡುತ್ತಿದ್ದ ಕಾಲದಲ್ಲಿ ಪ್ರತಿದಿನವೂ ಹಾಲನ್ನು ತಂದುಕೊಡುತ್ತಿದ್ದ ಬುಕ್ಕನೆಂಬ ಕುರುಬರವನಿಗೆ ರಾಜ್ಯಾಭಿಷೇಕವನ್ನು ಮಾಡಿ ತಾವೇ ಮಂತ್ರಿಗಳಾಗಿದ್ದುಕೊಂಡು ತಮ್ಮ ತಪಃಪ್ರಭಾವದಿಂದ ಆ ರಾಜ್ಯವನ್ನು ಘನತೆಗೆ ತಂದರು. ಹೀಗೆ ವಿದ್ಯಾರಣ್ಯರಿಂದ ಸ್ಥಾಪಿತವಾದ ಪಟ್ಟಣವು ವಿದ್ಯಾನಗರಿ ಎಂದೂ ಬರುಬರುತ್ತಾ ವಿಜಯನಗರವೆಂದೂ ಕರೆಯಲ್ಪಟ್ಟಿತು".[೯] ೩. "ಮಹಮ್ಮದೀಯರು ವಾರಂಗಲ್ಲು ಪಟ್ಟಣವನ್ನು ಸೂರೆಮಾಡಿದ ಬಳಿಕ ಹರಿಹರ ಬುಕ್ಕರೆಂಬ ಸಹೋದರರು ಆಕಸ್ಮಾತ್ತಾಗಿ ತುಂಗಭದ್ರಾತೀರದ ಅಡವಿಯಲ್ಲಿ ಶ್ರೀ ವಿದ್ಯಾರಣ್ಯರನ್ನು ಸಂದರ್ಶಿಸಲು ಅವರ ತಪೋಮಹಿಮೆಯಿಂದ ಒಂದು ರಾಜ್ಯವನ್ನು ಸ್ಥಾಪಿಸಿ ಅವರ ಪ್ರಭಾವದಿಂದ ತುಂಬಾ ಪ್ರಸಿದ್ಧಿಗೆ ಬಂದರು"[೧೦] ಎನ್ನುವ ಮಾಹಿತಿಯನ್ನು ತಿಳಿಸುತ್ತದೆ.

ಈಸ್ಟ್ ಇಂಡಿಯಾ ಕಂಪನಿಯವರಿಗಾಗಿ ಫಾರೋ ಅಂಡ್ ಕಂಪನಿಯವರು ೧೮೫೫ರಲ್ಲಿ ಪ್ರಕಟಿಸಿರುವ "ಗೆಝೆಟಿಯರ್ ಆಫ್ ಸದರನ್ ಇಂಡಿಯಾ" ಎಂಬ ಪುಸ್ತಕದ ೯೮-೯೯ನೆಯ ಪುಟಗಳಲ್ಲಿನ ಮಾಹಿತಿ ಹೀಗಿದೆ. "ಸುಮಾರು ೪೦೦ ವರ್ಷದ ಕೆಳಗೆ ಉತ್ತರದೇಶದಿಂದ ವಿದ್ಯಾರಣ್ಯರೆಂಬ ಬ್ರಾಹ್ಮಣ ಶ್ರೇಷ್ಠರು ಬಂದು ಹಂಪೆ ಹತ್ತಿರದ ತುಂಗಭದ್ರಾ ತೀರದಲ್ಲಿರುವ 'ಭುವನೇಶ್ವರಿ' ಎಂಬ ದೇವತೆಯನ್ನು ಕುರಿತು ಘೋರವಾದ ತಪಸ್ಸನ್ನು ಮಾಡಿದರು. ದೇವಿಯು ಈತನ ತಪಸ್ಸಿಗೆ ಮೆಚ್ಚಿ ನೀನು ಬೇಕಾದ ವರವನ್ನು ಕೇಳು, ಅದನ್ನು ಅನುಗ್ರಹಿಸುವೆನೆಂದಳು. ಆಗ ವಿದ್ಯಾರಣ್ಯರು ಒಂದು ಪಟ್ಟಣವನ್ನು ಕಟ್ಟಲಿಕ್ಕೆ ಸಾಕಾಗುವಷ್ಟು ಬಂಗಾರ ದ್ರವ್ಯವನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿಕೊಂಡರು. ಆ ಪ್ರಕಾರವಾಗಿ ದೇವಿಯೂ ಅನುಗ್ರಹಿಸಿದಳು. ಈ ಐಶ್ವರ್ಯದಿಂದ ವಿದ್ಯಾರಣ್ಯರು ದೊಡ್ಡದೊಂದು ಪಟ್ಟಣವನ್ನು ತುಂಗಭದ್ರಾ ತೀರದ ಉತ್ತರದಲ್ಲಿ ಕಟ್ಟಿಸಿದರು. ಈ ಪಟ್ಟಣವನ್ನು ಮತ್ತು ಲೆಕ್ಕವಿಲ್ಲದಷ್ಟು ಆಭರಣಗಳನ್ನು, ಅಪಾರವಾದ ದ್ರವ್ಯವನ್ನು, ತಾನು ತಪಸ್ಸು ಮಾಡುತ್ತಿದ್ದ ಕಾಲದಲ್ಲಿ ಹಾಲನ್ನು ತಂದು ಕೊಡುತ್ತಿದ್ದ ಆ ಪ್ರಾಂತ್ಯದಲ್ಲಿ ವಾಸವಾಗಿದ್ದ ಬುಕ್ಕನೆಂಬ ಕುರುಬರವನಿಗೆ ಕೊಟ್ಟು ಆ ರಾಜ್ಯಕ್ಕೆ ಪಟ್ಟಾಭಿಷಿಕ್ತನನ್ನಾಗಿ ಮಾಡಿದರು. ಈ ಅರಸರಿಗೆ 'ರಾಯರು' ಎಂಬ ಬಿರುದನ್ನು ವಿದ್ಯಾರಣ್ಯರೇ ಅನುಗ್ರಹಿಸಿದರು. ಅಂದಿನಿಂದ

ಹಕ್ಕ–ಬುಕ್ಕರೆಂಬ ಹೆಸರಿನಿಂದ ಇದ್ದ ಇವರು ಬುಕ್ಕರಾಯ–ಹರಿಹರರಾಯರೆಂಬ ಹೆಸರಾದವು”[೧೧] ಎಂಬ ವಿಷಯಗಳನ್ನು ವಿವರಿಸಿದ್ದಾರೆ.

೧೮೮೬ರಲ್ಲಿ “ದಿ ಮ್ಯಾನ್ಯೂಯಲ್ ಆಫ್ ದಿ ಅಡ್ಮಿನಿಸ್ಟ್ರೇಷನ್ ಆಫ್ ದಿ ಮದರಾಸ್ ಪ್ರೆಸಿಡೆನ್ಸಿ” ಸಂಪುಟ ೧ರ ೧೪೮–೧೪೯ನೆಯ ಪುಟಗಳಲ್ಲಿ ಹೀಗೆ ಬರೆದಿದೆ. “ಮುಸಲ್ಮಾನ ದಾಳಿಗಾರರು ದಖ್ಖನ್ನಿನಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಿ ಅಲ್ಲಿಂದ ಬಂದು ವಾರಂಗಲ್ಲು ಎಂಬ ಪಟ್ಟಣವನ್ನು ಸೂರೆಗೊಂಡಾಗ ಕ್ರಿ.ಶ. ೧೩೩೬ರಲ್ಲಿ ಕೃಷ್ಣಾ ಜಿಲ್ಲೆಗೆ ದಕ್ಷಿಣದಲ್ಲಿ ಒಂದು ಪ್ರಬಲವಾದ ಹಿಂದೂ ರಾಜ್ಯವು ಹಕ್ಕ–ಬುಕ್ಕರೆಂಬ ಸಹೋದರರಿಂದ ಸ್ಥಾಪಿಸಲ್ಪಟ್ಟಿತು. ಇವರಿಬ್ಬರೂ ಕರ್ನಾಟಕದಲ್ಲಿ ಆಳುತ್ತಿದ್ದ ಒಂದು ಸಣ್ಣ ಸಂಸ್ಥಾನಿಕನಾದ ಸಂಗಮನೆಂಬ ಕುರುಬರಾಜನ ಮಕ್ಕಳಾಗಿರುವರು ಎಂದಿದೆ”.[೧೨]

ಎಸ್.ಕೃಷ್ಣಸ್ವಾಮಯ್ಯಂಗಾರ ಅವರ ‘ದಿ ಸೋರ್ಸಸ್ ಆಫ್ ವಿಜಯನಗರ’ ಎಂಬ ಚರಿತ್ರೆಯ ೩೦೩ನೆಯ ಪುಟದಲ್ಲಿ “ಅತ್ತಲುತ್ತರದೇಶದೊಳ್ ತುಂಗಭದ್ರಾ ತೀರದೊಳ್ ವಿದ್ಯಾನಗರಿಯನಾಳ್ದ ಹರಿಹರ ಬುಕ್ಕರ್ಮೊದಲಾದ ಕುರುಂಬರಾಯರ ಅನಂತರದೊಳರಸುಗೆಯ್ದು ತುಳುವಕುಳಾಧೀಶ್ವರ ನರಸವೀರ ನರಸಿಂಗ ಕೃಷ್ಣಾಚ್ಯುತರೆಂಬ ರಾಯರ್ಯೈವರ ತರುವಾಯಂ”[೧೩] ಎಂದು ಹೇಳಲಾಗಿದೆ.

ಕೌಂಟೋ ಎಂಬ ರಷ್ಯಾದ ಪ್ರವಾಸಿಯು ವಿಜಯನಗರ ಸ್ಥಾಪನೆಯ ವಿಷಯವನ್ನು ಕುರಿತು “ಮಾಧವಾಚಾರ್ಯರು ಅರಣ್ಯದಲ್ಲಿ ಸನ್ಯಾಸಾಶ್ರಮದಲ್ಲಿ ಇರುವಾಗ ಬುಕ್ಕನೆಂಬ ಬಡ ಕುರುಬನು ಪ್ರತಿದಿನವೂ ಅವರಿಗೆ ಊಟ ತರುತ್ತಿದ್ದನು. ಹೀಗಿರುವಾಗ ಒಂದು ದಿನ ಆ ಬ್ರಾಹ್ಮಣನು ಅವನಿಗೆ “ನೀನು ಇಡೀ ಹಿಂದೂಸ್ತಾನದ ಅಧಿಪತಿಯಾಗುವಿ” ಎಂದು ಹೇಳಿದನು. ಇದನ್ನು ಉಳಿದ ಕುರುಬರು ಕೇಳಿ ಅವನೊಡನೆ ತುಂಬಾ ಆದರ ಮರ್ಯಾದೆಗಳಿಂದ ವರ್ತಿಸತೊಡಗಿದರು. ಅವನನ್ನು ತಮ್ಮ ನಾಯಕನನ್ನಾಗಿ ಮಾಡಿಕೊಂಡು ಕ್ರಮೇಣ ಅವನನ್ನು ಅರಸನೆಂದು ಕರೆಯಹತ್ತಿದರು. ಅವನು ತನ್ನ ನೆರೆಹೊರೆಯವರಾದ ಕನ್ನಡ, ತೆಲುಗು, ಕೊಂಗು, ವರಾಡ, ನಾಗಪಟ್ಟಣ, ಬಡಗ ಮೊದಲಾದವರನ್ನು ಗೆದ್ದು ಸರ್ವಾಧಿಪತಿಯಾಗಿ ಬುಕ್ಕರಾಯನೆಂದು”[೧೪] ಕರೆಯಲ್ಪಟ್ಟನು.

ವಿಜಯನಗರಕ್ಕೆ ಸಂಬಂಧಿಸಿದ ಶಾಸನದಲ್ಲಿ “ಈ ಬುಕ್ಕರಾಯ ಹರಿಹರರಾಯ ಇವರು ಕ್ಷೀರಸಾಗರ ಸಂಭವಃ” ಎಂಬುದಾಗಿ ಉಕ್ತವಾಗಿದೆ. ಇದರಿಂದಾಗಿ ಇವರು ಕುರುಬಜಾತಿಗೆ ಸೇರಿದವರೆಂಬುದು ಸ್ಪಷ್ಟವಾಗುತ್ತದೆ. ಕುರುಬರಿಗೆ ಹಾಲುಮತ, ಕ್ಷೀರವಂಶ, ಕ್ಷೀರಸಾಗರ, ಹೆಗ್ಗಡೆ ಎಂಬ ಹೆಸರುಗಳಿವೆ.[೧೫]

ವಿದ್ಯಾರಣ್ಯರ ಕಾಲಜ್ಞಾನದ ಪ್ರಕಾರ "ಹೊಯ್ಸಳ ಸೇನಾಧಿಪತಿಯಾಗಿದ್ದ ಸಂಗಮನು ಮರಣ ಹೊಂದಿದ್ದನು. ಅವನ ಮಕ್ಕಳಾದ ಹಕ್ಕ-ಬುಕ್ಕರು ಅಲೆದಾಡುತ್ತಾ ಘಟ್ಟದ ಮೇಲಿನ ಕುರುಬರ ಬಳಿಯಲ್ಲಿ ಆಶ್ರಯ ಪಡೆದಿದ್ದರು. ಒಂದು ದಿನ ದೊಡ್ಡ ಆಲದ ಮರದ ಕೆಳಗಿರುವ ಹಾಸುಗಲ್ಲಿನ ಮೇಲೆ ಮಲಗಿದ್ದರು. ಆಗ ಒಂದು ನಾಗರಹಾವು ಇವರ ತಲೆಯ ಮೇಲೆ ಹೆಡೆ ತೆಗೆದು ಆಡುತ್ತಿದ್ದುದನ್ನು ಶ್ರೀವಿದ್ಯಾರಣ್ಯ ಯತಿಗಳು ಕಂಡು ಆಶ್ಚರ್ಯಗೊಂಡು ಆ ಸಹೋದರರನ್ನು ತಮ್ಮ ಆಶ್ರಮಕ್ಕೆ ಕರೆದುಕೊಂಡು ಹೋದರು. ಅವರಿಗೆ ೧೨೩ ರಾಜನೀತಿ ವಿದ್ಯೆಗಳನ್ನು ಬೋಧಿಸಿ ರಾಜ್ಯ ಸ್ಥಾಪನೆ ಮಾಡಲು ಸಹಕರಿಸಿದರು. ಹೀಗಾಗಿ ಕುರುಬರಾಗಿದ್ದ ಹಕ್ಕ-ಬುಕ್ಕರು ಹೊಸ ಸಾಮ್ರಾಜ್ಯವನ್ನು ಸ್ಥಾಪಿಸಿದರು."[೧೬]

ಶ್ರೀ ಶೃಂಗೇರಿ ಜಗದ್ಗುರುಗಳ ಪರಂಪರೆಯನ್ನು ಪ್ರತಿಪಾದಿಸುವ 'ಗುರುವಂಶ ಕಾವ್ಯ' ಎಂಬ ಸಂಸ್ಕೃತ ಗ್ರಂಥದಲ್ಲಿ ಹಕ್ಕಬುಕ್ಕರು ಹಾಲುಮತದವರು ಎಂತಲೇ ಉಕ್ತವಾಗಿದೆ ಎಂದು ಶ್ರೀ ಕಾಶೀನಾಥ ಶಾಸ್ತ್ರಿಗಳವರ "ವಿಜಯನಗರ ಸಾಮ್ರಾಜ್ಯವು ರೇಣುಕಾಚಾರ್ಯರು" ಎಂಬ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ.[೧೭]

ಮೊದಲನೆಯ ದೇವರಾಜನ ಕಾಲದ ಲಕ್ಷ್ಮೀಧರಮಾತ್ಯನ ಶಾಸನದಲ್ಲಿ ಸಂಗಮ ವಂಶದ ವಂಶಾವಳಿಯನ್ನು ನೀಡಲಾಗಿದೆ. ಸೇನಾಪತಿ ಸಂಗಮದಿಂದ ಹಿಡಿದು ಪ್ರೌಢ ಬಾಹು ಪ್ರತಾಪನವರೆಗಿನ ಆಳ್ವಿಕೆಯ ಚಿತ್ರಣವನ್ನು ನೀಡಲಾಗಿದೆ. ಶಾಸನದ ೧೭ರಿಂದ ೨೩ನೇ ಸಾಲುಗಳವರೆಗೆ ಈ ವಂಶಾವಳಿ ಹಾಗೂ ಗೋತ್ರಗಳನ್ನು ಈ ಶಾಸನ ಕವಿಯಾದ ಶ್ರೀಮಧುರನು ವರ್ಣಿಸಿದ್ದಾನೆ.[೧೮]

ಯದುಧರೆಗರಸನೆನಿಸಿದ ನಾದುದಾತನಿಂ ಯದುವಂಶಂ
ಶ್ರೀ ಮತ್ಸೋಮಾಂನ್ವಯಕ್ಕುದ್ಭವಿಸಿ ಯದುವಂಶಾವನೀಪಾಲ
ರೊಳ್ಣಿಸ್ಸೀವೀಯಾಲರೊಳ್ನಿಸ್ಸಿಮಶ್ರೀ
ಸಂಗಮಕ್ಷ್ಮಾಪತಿ ದೊರೆವಡೆದು ತತ್ತನೂಜಂ ಸಮಸ್ತೋರ್ಖೀಮಾನ್ಯಂ
ರೂಢಿವೆತಂ ಹರಿಹರನಧಜಂ ತಂನರೇಂದ್ರನುಜಂ
ಸುತ್ತಾಮೋದ್ದಾಮಪ್ರತಾಪ ತಳೆದನಖಿಳಬೂಚಕ್ರಮಂ ಬುಕ್ಕರಾಯಂ
ಆತಂಗೆ ಜನಿಸಿದಂ ವಿಖ್ಯಾತಂ ನಳ
ನಹುಷನುಭಗೀರಥರಥದರೊಳಗೇ ಮಾತೋ ಸರಿಮಿಗಿಲೆನಲ್ದರ್ಮ್ಮೋತತರೂ
ಪ್ರತಾಪ ಹರಿಹರ ಭೂಪಂ

ದಾನಮಮರ್ದ್ದನಂವರ ಮೀನಾಗದೆ ಪಂದಿಯಾಗಸ್ತ್ರತಿರೂಪಂತಾನಾ
ಪ್ರತಾಪ ಹರಿಹರನೇನುದ್ಧರಿಸಿದನೊ ವೇದಮಂ ಮೇದನಿಯಂ
ಆ ಭೂಮಿ ಪಾಲ ಪುಣ್ಯಾಂಕುರವುದು ಪುರುಷಾಕಾರದಿಂ
ಪುಟ್ಟಿದಂ ತಾಶಾಭಾಗ ಪ್ರಸ್ಫುರತ್ವಾವನಯ ಶನಿಶನಿಪ್ರಾಡಬಾಹು ಪ್ರತಾಪಂ
ಸೌಭಾಗ್ಯ ಶ್ರೀನಿವಾಸಂ ಜನಿಯಿಸಿ ಸಕಲಕ್ಷತ್ರ ಚೂಢಾದಿರೂಡಾ
ಗ್ಲಾಭಾರಂ ಸಾರ್ವಭೌಮೋನಲೆಯೊಳೆಸಗಿದಂ ದೇವರಾಜಾವನೀದ್ರಂ

ಈ ಮೇಲಿನ ಶಾಸನದಲ್ಲಿ ಯದುವಂಶಾವನಿ ಪಾಲರೊಳ್ನಿಸ್ಸೀಮ ಶ್ರೀಸಂಗಮಕ್ಷ್ಮಾಪತಿ ಎಂದು ಉಲ್ಲೇಖಿಸಿರುವುದರಿಂದ ಸಂಗಮ ವಂಶಜರು ಕುರುಬರು ಎಂದು ತಿಳಿಯುತ್ತದೆ.

ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕರು ಹಕ್ಕ–ಬುಕ್ಕರು. ಅವರಲ್ಲಿ ಹಕ್ಕನು ಹರಿಹರನೆಂಬ ಅಂಕಿತನಾಮ ಪಡೆದು ರಾಜ್ಯ ಮಾಡಲಾರಂಭಿಸಿದ. ಹಕ್ಕ–ಬುಕ್ಕರ ತಂದೆಯ ಹೆಸರು ಸಂಗಮ ಎಂದಿತ್ತು. ಹೀಗಾಗಿ ಈ ಮನೆತನ 'ಸಂಗಮವಂಶ'ವೆಂದೇ ಇತಿಹಾಸದಲ್ಲಿ ಉಲ್ಲೇಖಗೊಂಡಿದೆ. ಈ ವಂಶದ ಸಂಗಮ ಎಂಬ ಆದಿಪುರುಷನು ಚಂದ್ರವಂಶ ಯಾದವನಾಗಿದ್ದನು ಎಂದು ವಿಜಯನಗರ ರಾಜರ ಹಲವು ಶಿಲಾಲೇಖದಲ್ಲಿ ಹೇಳಲಾಗಿದೆ[೧೯] ಎಂದು ಮರಾಠಿ ವಿದ್ವಾಂಸ ರಾಮಚಂದ್ರ ಚಿಂತಾಮಣಿ ಢೇರೆ ಅವರು 'ಶ್ರೀ ವಿಠಲ ಒಂದು ಮಹಾಸಮನ್ವಯ' ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ.

ಹಾಗೆಯೇ ಇವರು "ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕ ಯಾವ ಕುಲದಲ್ಲಿ ಜನಿಸಿದನೋ ಆ ಕುಲ ಕುರುಬರ ಜಾತಿಗಳಲ್ಲೊಂದಾಗಿತ್ತೆಂದು ಪಾರಂಪರಿಕ ಸಾಮಗ್ರಿಗಳಲ್ಲಿ ನೋಂದಾಯಿಸಲಾಗಿದೆ" ಎಂದಿದ್ದಾರೆ.[೨೦]

ವಿಜಯನಗರ ಪ್ರಥಮ ರಾಜವಂಶವಾದ ಸಂಗಮವಂಶ ಸುಮಾರು ೧೫೦ ವರ್ಷಗಳ ಕಾಲ ರಾಜ್ಯವಾಳಿ ದಕ್ಷಿಣ ಭಾರತದಲ್ಲಿ ರಾಜಕೀಯ ಸಾರ್ವಭೌಮತ್ವವನ್ನು ಸ್ಥಾಪಿಸಿತು. ಈ ವಂಶದ ಹಕ್ಕ ಒಡೆಯರ್, ಬುಕ್ಕ ಒಡೆಯರ್, ೨ನೆಯ ಬುಕ್ಕರಾಯ, ೨ನೆಯ ದೇವರಾಯ ಮುಂತಾಗಿ ಸುಪ್ರಸಿದ್ಧ ಅರಸರು ವಿಜಯನಗರದಂತಹ ಬಲಾಢ್ಯ ರಾಜ್ಯ ಸ್ಥಾಪಿಸಿದ ಕೀರ್ತಿ ಮತ್ತು ಆಳ್ವಿಕೆ ನಡೆಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಇಂದಿಗೂ ಕುರುಬ ಸಮುದಾಯದಲ್ಲಿರುವ ಸಾಮಂತ(ಶಾಮಂತರೂ) ಕುಲಕ್ಕೆ ಸೇರಿದ 'ಒಡೆಯ' ಅವರು ಸಂಗಮ ಕುಲಕ್ಕೆ ಸೇರಿದವರಿರಬೇಕು[೨೧] ಎಂದು ಬಿ.ಜಿ.ಬಿರಾದಾರ ಅವರು ಅಭಿಪ್ರಾಯಪಡುತ್ತಾರೆ. ಹೀಗೆ ಅನೇಕ ಆಧಾರಗಳನ್ನು ನೀಡುವ ಮೂಲಕ ವಿ.ಆರ್.ಹನುಮಂತಯ್ಯ ಅವರು ವಿಜಯನಗರ ಸಾಮ್ರಾಜ್ಯದ ಸ್ಥಾಪನೆ, ಆಳ್ವಿಕೆ ಕುರಿತಂತೆ ತಮ್ಮ ಕೃತಿಯಲ್ಲಿ ವಿವರಿಸಿರುವುದನ್ನು ಕಾಣಬಹುದು.

ಯಾದವ ಮೂಲ

ವಿಜಯನಗರ ಸಾಮ್ರಾಜ್ಯದ ಸ್ಥಾಪಕ ಅರಸರು 'ಯಾದವರು' ಎಂಬೊಂದು ಅಭಿಪ್ರಾಯವಿದೆ. "ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆಯಲ್ಲಿ ಇದರ ಉಲ್ಲೇಖ ಕಾಣಬಹುದು. ಕಮಲಾಪುರದ ಕೈಫಿಯತ್ತು ಮತ್ತು ತಾಲೂಕ ಕಂಪಲಿ ಕೈಫಿಯತ್ತುಗಳಲ್ಲಿ ಸಂಗಮ ವಂಶಸ್ಥರು ಯಾದವ ಮನೆತನಕ್ಕೆ ಸೇರಿದರೆಂಬುದನ್ನು ಸ್ಪಷ್ಟಪಡಿಸುತ್ತದೆ".[೨೨] ಇದಕ್ಕೆ ಆಧಾರವಿರುವುದು ಕೈಫಿಯತ್ತುಗಳಲ್ಲಿ ಮಾತ್ರ. ಈ ವಾದಕ್ಕೆ ಯಾವುದೇ ಲಿಖಿತ ದಾಖಲೆಗಳು, ಶಾಸನಾಧಾರಗಳು ಇಲ್ಲದಿರುವುದನ್ನು ನೋಡಿದರೆ ಇದು ಕೇವಲ ಕಲ್ಪಿತವಾದುದೆಂದು ಹೇಳಬಹುದು. ಆದರೆ ಈ ವಾದವನ್ನು ಬಿ.ಎಲ್.ರೈಸ್,[೨೩] ಆಲೂರು ವೆಂಕಟರಾಯರು,[೨೪] ವೆಂಕಟರಂಗೋಕಟ್ಟಿ[೨೫] ಹಾಗೂ ಗಳಗನಾಥರು[೨೬] ಒಪ್ಪಿಕೊಂಡಿರುವುದು ಇವರ ಉಲ್ಲೇಖಗಳಿಂದ ತಿಳಿಯಬಹುದು,

ತೆಲುಗು ಮೂಲ

ಈ ಮೂಲವನ್ನು ಮೊದಲಿಗೆ ಸಿವೆಲ್‌ರ ಆದಿಯಾಗಿ ಬಿ.ಸೂರ್ಯನಾರಾಯಣರಾವ್, ಎನ್.ವೆಂಕಟರಮಣಯ್ಯ ಮತ್ತು ನೀಲಕಂಠಶಾಸ್ತ್ರಿ ಅವರು ಪ್ರಾರಂಭಿಸಿ ಪ್ರೋತ್ಸಾಹಿಸಿದರು. ಎನ್.ವೆಂಕಟರಮಣಯ್ಯ ತಮ್ಮ "ವಿಜಯನಗರ ಒರಿಜನ್ ಆಫ್ ದಿ ಸಿಟಿ ಎಂಪೈರ್" ಕೃತಿಯಲ್ಲಿ ವಿಜಯನಗರದ ಸಂಗಮ ಅರಸರು ಯಾವ ಮೂಲದವರು? ವಿಜಯನಗರ ರಾಜಧಾನಿ ಯಾವಾಗ ನಿರ್ಮಾಣವಾಯಿತು ಎಂಬುದನ್ನು ವಿವರಿಸಿದ್ದಾರೆ. ವಾರಂಗಲ್ಲಿನ ಕಾಕತೀಯ ವಂಶದ ಅರಸ ಪ್ರತಾಪರುದ್ರದೇವ ಈ ಅರಸರ ಬಳಿಯಲ್ಲಿ ಹರಿಹರ-ಬುಕ್ಕರು ಸೇವೆ ಸಲ್ಲಿಸುತ್ತಿದ್ದರು. ವಾರಂಗಲ್ ದೆಹಲಿ ಸುಲ್ತಾನರ ವಶವಾದ ನಂತರ ಹಂಪೆಯ ಪ್ರದೇಶದಲ್ಲಿ ನೆಲೆಸಿದ ಇವರು ಕಂಪಲಿಯ ರಾಮನಾಥನ ಆಸ್ಥಾನದ ಸೇವೆಯಲ್ಲಿ ನಿರತರಾದರು. ಮುಂದೆ ಕಂಪಲಿಯೂ ದಿಲ್ಲಿ ಸುಲ್ತಾನರ ವಶವಾಯಿತು. ಹರಿಹರ-ಬುಕ್ಕರನ್ನು ದಿಲ್ಲಿಗೆ ಕರೆದೊಯ್ದರು. ಅಲ್ಲಿ ಸ್ವಾಮಿನಿಷ್ಠೆ ತೋರಿದ್ದರಿಂದ ತೃಪ್ತಿಗೊಂಡ ಸುಲ್ತಾನ ಅರಾಜಕತೆಗೆ ಒಳಗಾಗಿದ್ದ ಕರ್ನಾಟಕ ದೇಶವನ್ನು ಆಳ್ವಿಕೆ ಮಾಡಲು ಪ್ರಾಂತ್ಯಾಧಿಕಾರಿಗಳಾಗಿ ಇವರನ್ನು ಕಂಪಲಿಗೆ ಕಳುಹಿಸಲಾಯಿತು. ಕಂಪಲಿಯಲ್ಲಿರುವಾಗ ವಿದ್ಯಾರಣ್ಯರ ದರ್ಶನ ಪಡೆದು ಇವರ ಹರಕೆಯಿಂದಾಗಿ ಸುಲ್ತಾನರ ಆಧಿಪತ್ಯ ಕಿತ್ತೊಗೆದು ಆ ಭಾಗದಲ್ಲಿ ತಮ್ಮ ತಂತ್ರ ರಾಜ್ಯವನ್ನು ಸ್ಥಾಪಿಸಿದರು. ಅದು ಮುಂದೆ ವಿಜಯನಗರ ಸಾಮ್ರಾಜ್ಯ[೨೭] ಎಂದು ಹೆಸರಾಯಿತು.

ಇದಕ್ಕೆ ವಿರುದ್ಧವಾಗಿ ವಸುಂಧರ ಫಿಲಿಯೋಜ ಅವರು ಈ ವಾದಕ್ಕೆ ಬಳಸಿಕೊಂಡಿರುವ ಆಕರಗಳೆಂದರೆ ಕಾವ್ಯಗಳು, ಮುಸ್ಲಿಂರ ಲೇಖನಗಳು, ಕೈಫಿಯತ್ತು ಹಾಗೂ ಸ್ಥಳೀಯ ವೃತ್ತಾಂತಗಳು ಪ್ರಮುಖವಾಗಿವೆ. ಕಾವ್ಯದ ಆಧಾರಗಳನ್ನು ನೀಡುವಾಗ ಕುಮಾರರಾಮನ ಸಾಂಗತ್ಯ, ಕುಮಾರರಾಮನ ಕತೆಗಳನ್ನು ವಿವರಿಸುವರು. ಇವು ರಚನೆಯಾದ ಕಾಲ ೧೬ನೇ

ಶತಮಾನ. ವಿದ್ಯಾರಣ್ಯರ ವೃತ್ತಾಂತ ಹಾಗೂ ಕಾಲಜ್ಞಾನ ಇವು ಸಂಸ್ಕೃತ ಗ್ರಂಥಗಳಾಗಿವೆ. ಇವುಗಳನ್ನು ೧೮ನೇ ಶತಮಾನದಲ್ಲಿ ರಚಿಸಲಾಗಿದೆ. ಅಲ್ಲದೆ ಇವು ಸಮಕಾಲೀನ ಮಾಹಿತಿಯನ್ನು ನೀಡುವಲ್ಲಿ ವಿಫಲವಾಗಿವೆ. ಮುಸ್ಲಿಂ ಇತಿಹಾಸಕಾರರು ತಮ್ಮ ಸುಲ್ತಾನರ ವೈಭವವನ್ನು ಕಟ್ಟಿಕೊಳ್ಳುವ ನೆಪದಲ್ಲಿ ವಿರೋಧಿಗಳನ್ನು ಹೀಗಳೆದು ಬರೆದಿದ್ದಾರೆ. ಫೆರಿಸ್ತಾನಲ್ಲಿ ಈ ಭಾವ ಎದ್ದು ಕಾಣುತ್ತದೆ. ಕೈಫಿಯತ್ತುಗಳು ಹಾಗೂ ಸ್ಥಳೀಯ ವೃತ್ತಾಂತಗಳ ಪಾಡು ಸಹ ಇದೇ ಆಗಿದೆ. ಆದರೆ ಇವರು ಒದಗಿಸುವ ಆಧಾರಗಳು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾದ ನಂತರ ರಚನೆಗೊಂಡಂತಹವು ಹಾಗೂ ಇತಿಹಾಸ ರಚನೆಗೆ ನಂಬಲಾರ್ಹವಾದವುಗಳಲ್ಲ[೨೮] ಎಂದು ತಮ್ಮ 'ವಿಜಯನಗರ ಸ್ಥಾಪನೆ' ಕೃತಿಯಲ್ಲಿ ಹೇಳಿದ್ದಾರೆ.

ಕನ್ನಡ ಮೂಲ

ಕನ್ನಡ ವಾದವನ್ನು ಪ್ರಬಲವಾಗಿ ಪ್ರತಿಪಾದಿಸುವಲ್ಲಿ ಪಿ.ಬಿ.ದೇಸಾಯಿ, ಬಿ.ಎ.ಸಾಲೆತ್ತೊರೆ, ಆಲೂರು ವೆಂಕಟರಾಯ, ಫಾದರ್ ಹೆರಾಸ್, ಎಸ್.ಕೆ.ಅಯ್ಯಂಗಾರ್, ಎಸ್.ಶ್ರೀಕಂಠಯ್ಯ ಮತ್ತು ಸೂರ್ಯನಾಥ ಕಾಮತ್ ಅವರು ಪ್ರಮುಖರು.

ಹೊಯ್ಸಳ ಮುಮ್ಮಡಿ ಬಲ್ಲಾಳನ ಸಹೋದರಳಿಯನಾದ ಬಲ್ಲಪ್ಪ ದಂಡನಾಯಕನು ವಿಜಯನಗರ ಸಾಮ್ರಾಜ್ಯದ ಸ್ಥಾಪಕ ಹರಿಹರನ ಮಗಳನ್ನು ವರಿಸಿದ್ದನು. ಇದರಿಂದ ಸಂಗಮ ವಂಶಸ್ಥರು ಹೊಯ್ಸಳರ ಆಸ್ಥಾನದ ಜೊತೆಗೆ ಸಂಬಂಧವನ್ನು ಹೊಂದಿದ್ದರೆಂಬುದು ಸ್ಪಷ್ಟವಾಗುತ್ತದೆ. ಇದನ್ನು ಫಾದರ್ ಹೆರಾಸ್ ತೋರಿಸಿಕೊಟ್ಟಿದ್ದಾರೆ. ಅಲ್ಲದೆ ಹರಿಹರನ ಅಳಿಯ ಬಲ್ಲಪ್ಪ ದಂಡನಾಯಕನು ಶೃಂಗೇರಿಯ ಉತ್ಸವದಲ್ಲಿ ಭಾಗವಹಿಸಿದ್ದನೆಂದು ಎಸ್.ಶ್ರೀಕಂಠಯ್ಯನವರು ಉಲ್ಲೇಖಿಸಿದ್ದಾರೆ.

ಸೂರ್ಯನಾಥ ಕಾಮತರು ತಮ್ಮ 'ವಿಜಯನಗರ ಸಾಮ್ರಾಜ್ಯ' ಕೃತಿಯಲ್ಲಿ ಕನ್ನಡ ಮೂಲವನ್ನು ಎತ್ತಿ ಹಿಡಿಯುವರು. ವಿಜಯನಗರದ ಅರಸರು "ಶ್ರೀ ವಿರೂಪಾಕ್ಷ" ಎಂಬುದಾಗಿ ತಮ್ಮ ಸಂಸ್ಕೃತ ಶಾಸನಗಳಲ್ಲಿ, ಕನ್ನಡ ಲಿಪಿಯಲ್ಲಿ ಸಹಿ ಹಾಕಿದ್ದಾರೆ. ಕೃಷ್ಣದೇವರಾಯನು ತನ್ನ ಅಮುಕ್ತ ಮಾಲ್ಯದ ತೆಲುಗು ಕೃತಿಯಲ್ಲಿ ತನ್ನನ್ನು "ಕನ್ನಡಪದರಾಯ"[೨೯] ಎಂದು ಕರೆದುಕೊಂಡಿದ್ದಾನೆ. ಅಲ್ಲಸಾನಿ ಪೆದ್ದನ್ನನು ತನ್ನ 'ಮನುಚರಿತಂ' ಕೃತಿಯಲ್ಲಿ ಕೃಷ್ಣದೇವರಾಯನನ್ನು "ಕನ್ನಡ ರಾಜ್ಯರಮಾರಮಣ" ಎಂದು ಕರೆದಿದ್ದಾನೆ.

ಸಾಲತ್ತೊರೆಯವರು ತೆಲುಗು ಕವಿಗಳಾದ ವಲ್ಲಭಚಾರ್ಯ ಮತ್ತು ಶ್ರೀನಾಥರು ಸಂಗಮ ಅರಸರನ್ನು "ಕರ್ನಾಟಕ ಕ್ಷಿತಿನಾಥ"[೩೦] ಎಂದು ಕರೆದಿರುವ ವಿಚಾರವನ್ನು ಉಲ್ಲೇಖಿಸಿದ್ದಾರೆ. ಮುಂದುವರೆದು ಇಮ್ಮಡಿ ಹರಿಹರನನ್ನು ಒಂದು ಶಾಸನದಲ್ಲಿ ಆಂಧ್ರರಾಜ ಮದಗಜಗಳಿಗೆ

ಸಿಂಹಪ್ರಾಯನೆಂದು ಕರೆದಿದೆ. ಇದು ಸಂಗಮ ವಂಶಸ್ಥರ ತೆಲುಗುವಿರೋಧಿ ನೀತಿಯನ್ನು ಪ್ರತಿಬಿಂಬಿಸುವುದು. ಅಲ್ಲದೆ ಇವರು ತಮ್ಮ ಹೆಸರಿನಲ್ಲಿ ಬಳಸಿರುವ ರಾಯ ಎಂಬ ಪದಗಳು ಅಚ್ಚಕನ್ನಡಗಳಾಗಿವೆ. ಇದು ವಿಜಯನಗರ ಅರಸರ ಕಾಲದ ಪ್ರೀತಿಯನ್ನು ತೋರಿಸುತ್ತದೆ.

ಆಂಧ್ರಪ್ರದೇಶದ ಇತಿಹಾಸಕಾರ ಕೆ.ಸತ್ಯನಾರಾಯಣ ಅವರು ವಿಜಯನಗರದ ಸ್ಥಾಪಕರು ಕರ್ನಾಟಕದವರು, ಅನೇಕ ದಾನಶಾಸನಗಳು ಅವರನ್ನು ಕರ್ನಾಟಕದ ಅರಸರೆಂದು ಮತ್ತು ಅವರ ಅಧೀನ ಸಾಮಂತ ರಾಜರನ್ನು ಕರ್ನಾಟಕದ ಪ್ರಭುಗಳೆಂದು ಹೇಳಿವೆ. ವಿಜಯನಗರ ಅರಸರು ಶಾಸನಗಳ ಕೊನೆಯಲ್ಲಿ 'ವಿರೂಪಾಕ್ಷನ' ಹೆಸರಿನಲ್ಲಿ ಕನ್ನಡ ಲಿಪಿಯಲ್ಲಿ ಸಹಿ ಹಾಕಿರುವುದು ಸ್ಪಷ್ಟವಾಗಿದೆ[೩೧] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಮೇಲಿನ ಎಲ್ಲಾ ಅಭಿಪ್ರಾಯಗಳನ್ನು ಪರಿಶೀಲಿಸಿದಾಗ ವಿ.ಆರ್.ಹನುಮಂತಯ್ಯ ಹಾಗೂ ಇತರ ವಿದ್ವಾಂಸರು ಮಂಡಿಸಿದ ವಿಷಯಗಳಿಂದ ಪ್ರಮುಖವಾಗಿ ಗೋಚರಿಸುವ ಸಂಗತಿಗಳೆಂದರೆ ವಿಜಯನಗರ ಆರಂಭದ ಅರಸರು ಹೊಯ್ಸಳ ಮಾಂಡಲಿಕರಾಗಿದ್ದರು ಹಾಗೂ ಹೊಯ್ಸಳರ ಅವನತಿಯ ನಂತರ ಇವರು ಹಂಪಿ ಪ್ರದೇಶದ ಮೇಲೆ ಹಿಡಿತ ಸಾಧಿಸಿದರು. ಅಲ್ಲೇ ಒಂದು ರಾಜಧಾನಿಯನ್ನು ನಿರ್ಮಿಸಿಕೊಂಡು ಆಳ್ವಿಕೆ ನಡೆಸಿದರು ಎಂದು ಹೇಳಬಹುದು. ಆದರೆ ಇವರ ಮೂಲವನ್ನು ನಿರ್ದಿಷ್ಟವಾಗಿ ಹಾಗೂ ನಿಖರವಾಗಿ ಹೇಳುವುದು ಕಷ್ಟ. ಆದರೂ 'ಕುರುಬ' ಮೂಲವು ಹೆಚ್ಚು ಸರಿಹೊಂದುವುದೆಂದು ಹನುಮಂತಯ್ಯನವರು ಹೆಚ್ಚು ಒತ್ತು ನೀಡಿ ಹೇಳಿರುವರು.

ಹನುಮಂತಯ್ಯನವರ ಈ ಕೃತಿಯು ಸಾಮಾನ್ಯವಾಗಿ ಈ ಸಾಮ್ರಾಜ್ಯದ ಉಗಮದ ಹಿಂದೆ ಹಲವು ಋಷಿ ಮುನಿಗಳ ಪ್ರಭಾವ ಇರುವುದು ಸಹಜ. ಕದಂಬ ಸಾಮ್ರಾಜ್ಯದ ಆದಿಗುರು ಗಂಗರು. ಹೊಯ್ಸಳರ ಸಾಮ್ರಾಜ್ಯ ಸ್ಥಾಪನೆಗೆ ಜೈನ ಮುನಿಗಳ ಬೆಂಬಲ ದೊರೆಯಿತು. ಅದರಂತೆಯೇ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ವಿದ್ಯಾರಣ್ಯರ ನೆರವು ದೊರೆಯಿತು. ಅಂದು ಒಂದು ಸಾಮ್ರಾಜ್ಯವನ್ನು ಸ್ಥಾಪಿಸುವುದು ಅಷ್ಟು ಸುಲಭದ ವಿಷಯವಾಗಿರಲಿಲ್ಲ. ಆರ್ಥಿಕ ಹಾಗೂ ಜನಶಕ್ತಿಯನ್ನು ಬಳಸಿಕೊಳ್ಳಲು ರಾಜಕೀಯ ನಾಯಕರು, ಧರ್ಮ ಗುರುಗಳನ್ನು ಆಶ್ರಯಿಸುವುದು ಅವಶ್ಯಕವಾಗಿತ್ತು. ಅದೇ ರೀತಿ ನಾಯಕರನ್ನು ಅವಲಂಬಿಸುವುದು ಧರ್ಮಗುರುಗಳಿಗೆ ಅವಶ್ಯ ಹಾಗೂ ಅನಿವಾರ್ಯವಾಗಿತ್ತು. ಗುರುಪರಂಪರೆ ಒಂದೇ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾಗಲಾರದು. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಹಿಂದೆ ವಿದ್ಯಾರಣ್ಯರಂತೆ 'ಕುರುಬ' ಸಮುದಾಯದ ಸಂಗಮ ಪುತ್ರರ ಶ್ರಮವಿದೆ ಎಂದು ಹೇಳಬಹುದು.

೩. ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಅಷ್ಟದಿಗ್ಗಜ ಕವಿಗಳು ಮತ್ತು ಅವರ ಕೃತಿಗಳು

ಕೃಷ್ಣದೇವರಾಯನು ತನ್ನ ಆಳ್ವಿಕೆ ಕಾಲದಲ್ಲಿ ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಿಗೆ ಪೋತ್ಸಾಹ ಕೊಟ್ಟು ಸ್ವತಃ ಕವಿಯಾಗಿದ್ದ. ಈತನು ಜಾಂಬವತಿಕಲ್ಯಾಣ ಎಂಬ ನಾಟಕವನ್ನು, ಅಮುಕ್ತ ಮಾಲ್ಯದ ಎಂಬ ತೆಲುಗು ಗ್ರಂಥವನ್ನು ರಚಿಸಿದ್ದಾನೆ. ಸಾಹಿತಿಗಳಿಗೆ ವಿಶೇಷ ಪ್ರೋತ್ಸಾಹ ನೀಡಿದ್ದು, ಈತನ ಆಸ್ಥಾನದಲ್ಲಿ ಅಷ್ಟದಿಗ್ಗಜರೆಂಬ ಪ್ರಖ್ಯಾತರಾದ ಎಂಟು ಜನ ಪ್ರಮುಖ ಕವಿಗಳು ಇದ್ದರು.

ಅವರೆಂದರೆ,

೧. **ಅಲ್ಲಾಸಾನಿ ಪೆದ್ದನ:** 'ಆಂಧ್ರ ಕವಿತಾ ಪಿತಾಮಹ' ಎಂಬ ಬಿರುದಿಗೆ ಪಾತ್ರನಾಗಿದ್ದು, ಕೃಷ್ಣದೇವರಾಯನ ಆಸ್ಥಾನದಲ್ಲಿ ಪ್ರಸಿದ್ಧನಾಗಿದ್ದು, ತೆಲುಗು ಭಾಷೆಯಲ್ಲಿ 'ಮನುಚರಿತಮು' ಎಂಬ ಗ್ರಂಥ ರಚಿಸಿದನು.

೨. **ನಂದಿ ತಿಮ್ಮಣ:** ಈತನಿಗೆ ಮುಕ್ಕುತಿಮ್ಮನ್ನನೆಂಬ ಹೆಸರು ಇದೆ. ಈತನು 'ಪಾರಿಜಾತಾಪಹರಣ'ವೆಂಬ ಕಾವ್ಯವನ್ನು ರಚಿಸಿದನು. ಈತನ ಶೈಲಿಯು ಅತಿ ಮಧುರವೆಂಬುದಕ್ಕೆ 'ಮುಕ್ಕುತಿಮ್ಮನಾರ್ಯುನಿ ಮುದ್ದುಪಲುಕು' ಎಂದು ಹೆಸರಾಗಿದೆ ಎಂದು ಹನುಮಂತಯ್ಯನವರು ಹೇಳಿದ್ದಾರೆ. ಈತನು ಕುಮಾರವ್ಯಾಸ ಮಹಾಭಾರತದ ಕೊನೆಯ ಎಂಟು ಪರ್ವಗಳನ್ನು ಕೃಷ್ಣದೇವರಾಯನ ಪ್ರೋತ್ಸಾಹದಿಂದ ಪೂರ್ಣಗೊಳಿಸಿದನು. ಈ ಕೃತಿಯು "ಕರ್ನಾಟಕ ಕೃಷ್ಣರಾಯ ಭಾರತ ಕಥಾಮಂಜರಿ" ಎಂದು ಪ್ರಸಿದ್ಧವಾಗಿದೆ.

೩. **ರಾಮಭದ್ರ:** ಈತನು "ಸಕಲ ಕಥಾಸಾರ ಸಂಗ್ರಹ" ಮತ್ತು "ರಾಮಾಭ್ಯುದಯ" ಮೊದಲಾದ ಕಾವ್ಯಗಳನ್ನು ರಚಿಸಿದನು.

೪. **ಧೂರ್ಜಟಿ:** ಈತನು ಕಾಳಹಸ್ತಿ ಮಹಾತ್ಮ್ಯ ಮತ್ತು ಕೃಷ್ಣರಾಜವಿಜಯ ಕಾವ್ಯಗಳನ್ನು ರಚಿಸಿದನು.

೫. **ಮಲ್ಲನ:** ಈತನು 'ರಾಜಶೇಖರ ಚರಿತ್ರ'ವೆಂಬ ಕಾವ್ಯ ರಚಿಸಿದನು.

೬. **ಪಿಂಗಳಿ ಸೂರನ್ನ:** ಈತನು ರಾಘವ ಪಾಂಡವೀಯ, ಪ್ರಭಾವತೀಪ್ರದ್ಯುಮ್ನ, ಕಳಾಪೂರ್ಣೋದಯ ಎಂಬ ಕಾವ್ಯಗಳನ್ನು ರಚಿಸಿದನು. ಪ್ರೌಢ ಕಾವ್ಯರಚನೆಯಲ್ಲಿ ಈತನ ಪಾಂಡಿತ್ಯವು ಮಿಗಿಲಾಗಿದ್ದಿತು.

೭. **ರಾಮರಾಜಭೂಷಣ:** ಈತನ ಜನ್ಮನಾಮ 'ಭಟ್ಟಮೂರ್ತಿ.' ರಾಮರಾಜರ ಆಸ್ಥಾನದಲ್ಲಿದ್ದುದರಿಂದ ಇವನಿಗೆ 'ರಾಮರಾಜ ಭೂಷಣ' ಎಂಬ ಬಿರುದು ಬಂದಿತ್ತೆಂದು ಹೇಳುವರು.

ವಿಶ್ವವಿಖ್ಯಾತವಾದ 'ವಸುಚರಿತ್ರೆ' ಬರೆದವನು ಇವನು. ಈ ಕಾವ್ಯವು ಆಂಧ್ರ ಗ್ರಂಥಗಳಲ್ಲಿ ಅಗ್ರಗಣ್ಯವೆನಿಸಿಕೊಂಡಿದೆ. ಹಾಗೆಯೇ ಇವನು ಹರಿಶ್ಚಂದ್ರೋಪಾಖ್ಯಾನ ಎಂಬ ದ್ವಿಪದಿ ಕಾವ್ಯ ಮತ್ತು ನರಸ ಭೂಪಾಲೀಯ ಎಂಬ ಅಲಂಕಾರ ಗ್ರಂಥವನ್ನು ಬರೆದಿರುವನು.

೮. ತೆನಾಲಿ ರಾಮಲಿಂಗ: ಈತನು 'ವಿಕಟಕವಿ'ಯೆಂದು ಹೆಸರು ಪಡೆದ ರಾಮಕೃಷ್ಣ. ಇವನು ಪಾಂಡುರಂಗ ಮಹಾತ್ಮೆ, ಹರಿಭಕ್ತಸಾರ ಕೃತಿಗಳನ್ನು ರಚಿಸಿರುವನು. ಈತನ ಕಥೆಗಳು ಹಾಸ್ಯರಸಪ್ರದವಾಗಿ ಜನಪ್ರಿಯವಾಗಿವೆ. ಈತನು 'ತೆನಾಲಿ' ಎಂಬ ಗ್ರಾಮದವನಾದ್ದರಿಂದ ಈತನಿಗೆ 'ತೆನಾಲಿ ರಾಮಕೃಷ್ಣ' ಎಂಬ ಹೆಸರು ಬಂದಿರುವುದು.

ಹೀಗೆ ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಕವಿಗಳನ್ನು ಮತ್ತು ಅವರ ಕೃತಿಗಳ ಜೊತೆಗೆ ಅವರ ಬಿರುದು, ನಾಮಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿಕೊಟ್ಟಿದ್ದಾರೆ. ಇವರ ಜೊತೆಗೆ ಇನ್ನೂ ಅನೇಕ ಕವಿಗಳಿದ್ದರು ಎಂದು ಪರಿಚಯಿಸಿದ್ದಾರೆ.

ನಂದಿ ಮಲ್ಲಯ್ಯ ಮತ್ತು **ಘಂಟೆ ಸಿಂಗಯ್ಯ** ಇವರು ವರಾಹ ಪುರಾಣ, ಪ್ರಬೋಧ ಚಂದ್ರೋದಯ ಗ್ರಂಥಗಳನ್ನು ತೆಲುಗು ಭಾಷೆಗೆ ಪರಿವರ್ತಿಸಿದರು.

ರಂಗನಾಥ ಕವಿ: ರಾಮಾಯಣವನ್ನು ದ್ವಿಪದ ಕಾವ್ಯವಾಗಿ ರಚಿಸಿದನು. ಕೃಷ್ಣಮಂಡಲದ 'ಮನುಮಾರು' ಸಂಸ್ಥಾನಕ್ಕೆ ಪ್ರಭುವಾದ ವಿಠಲರಾಜಪುತ್ರನಾದ ಬುಕ್ಕರಾಯನಿಗೆ ಈ ಕೃತಿಯು ಅಂಕಿತ ಮಾಡಲ್ಪಟ್ಟಿದ್ದರೂ ಇದಕ್ಕೆ ಬುಕ್ಕ ರಾಮಾಯಣವೆಂದು ಹೆಸರಿಡದೆ ರಂಗನಾಥ ರಾಮಾಯಣವೆಂದು ಪ್ರಸಿದ್ಧವಾಯಿತು. ಭಾಸ್ಕರನೆಂಬ ಕವಿಯೊಬ್ಬನು ರಾಮಾಯಣವನ್ನು ಪದ್ಯಕಾವ್ಯವಾಗಿ ತೆಲುಗಿಗೆ ಭಾಷಾಂತರಿಸಿದನು.

'ಬಮ್ಮೆರ ಪೋತನ' ಎಂಬ ಕವಿಯು ಭಾಗವತವನ್ನು ಭಕ್ತಿರಸ ಪ್ರಧಾನವಾಗಿ ಆಂಧ್ರೀಕರಿಸಿದನು. ಹೀಗೆ ಹಲವಾರು ಕವಿಗಳು ಕೃಷ್ಣದೇವರಾಯನ ಕಾಲದಲ್ಲಿ ಪುರಾಣದ ಕಥೆಯನ್ನು ತೆಲುಗಿಗೆ ಭಾಷಾಂತರಿಸಿ ಕೀರ್ತಿಯನ್ನು ಪಡೆದರು. ಆ ಕಾಲದ ಮಹಾರಾಜರು ಕವೀಶ್ವರರನ್ನು ಮನ್ನಿಸಿ ಆದರಣೆಯಿಂದ ಪೋಷಿಸುತ್ತಿದ್ದುದರಿಂದ ಅವರು ಪುರಾಣೇತಿಹಾಸಗಳನ್ನು ಸಂಸ್ಕೃತದಿಂದ ಆಂಧ್ರಕ್ಕೆ, ಕನ್ನಡಕ್ಕೆ ಭಾಷಾಂತರಿಸುತ್ತಿದ್ದರು. ಆದುದರಿಂದ ಆಗಿನ ಕವಿಗಳು ಸಂಸ್ಕೃತ ಭಾಷೆಗಳಲ್ಲಿ ಅಸಮಾನ ಪಾಂಡಿತ್ಯವುಳ್ಳವರಾಗಿದ್ದು, ಕಾವ್ಯನಿರ್ಮಾಣ ಕೌಶಲ್ಯದಲ್ಲಿ ಹೆಸರುಗೊಂಡು ವಿಶೇಷವಾಗಿ ನೀತಿ ಬೋಧಕಗಳಾಗಿಯೂ ರಾಜಕೀಯ ವಿಷಯವಾಗಿಯೂ ಭಕ್ತಿರಸವಾಗಿಯೂ ಇವರು ಗ್ರಂಥಗಳನ್ನು ಬರೆಯುತ್ತಾ ಬಂದರು. ಕೇವಲ ಆನಂದದಾಯಕ ಕಾವ್ಯಗಳನ್ನು ತೆಲುಗಿಗೆ ಭಾಷಾಂತರಿಸಿದ ಕವಿಗಳಲ್ಲಿ ಶ್ರೀನಾಥನು ಮುಖ್ಯನು. ಈತನು ಶೃಂಗಾರ

ನೈಷಧ, ಕಾಶೀ ಖಂಡ, ಭೀಮಖಂಡ, ಮರುದ್ರಾಜಚರಿತ್ರೆ, ಪಂಡಿತಾರಾಧ್ಯರ ಚರಿತ್ರೆ, ಶಾಲಿವಾಹನ ಸಪ್ತಶತಿ, ವೀಧಿನಾಟಕ, ಹರಿವಿಲಾಸ ಮುಂತಾದ ಗ್ರಂಥಗಳನ್ನು ರಚಿಸಿದ್ದಾನೆ. ಇವನ ಕವಿತ್ವವು ಸಂಸ್ಕೃತವಾಗಿಯೂ ರಸವತ್ತಾಗಿಯೂ ಇರುವುದು. ಸಂಸ್ಕೃತ ಗ್ರಂಥಗಳ ನಿರ್ಮಾಣಕ್ಕೆ ಮತ್ತು ಸಂಸ್ಕೃತ ಭಾಷಾಭಿವೃದ್ಧಿಗೆ ಧಾರಾನಗರದ ಭೋಜ ಮಹಾರಾಜರು "ಸಂಸ್ಕೃತ ಭೋಜ"ನೆಂದು ಹೇಗೆ ಹೆಸರುಗೊಂಡಿದ್ದನೋ ಹಾಗೆಯೇ ಈ ವಿಜಯನಗರದ ಚಕ್ರವರ್ತಿ ಸಾರ್ವಭೌಮ ಶ್ರೀಕೃಷ್ಣದೇವರಾಯನು ಸಹ "ಆಂಧ್ರಭೋಜ"ನೆಂದು ಪ್ರಸಿದ್ಧನಾಗಿದ್ದ.[೨೨] ಈತನು ಕನ್ನಡ ಮತ್ತು ಸಂಸ್ಕೃತ ಮೊದಲಾದ ಭಾಷೆಯ ಕವಿಗಳಿಗೆ ಆಶ್ರಯ ನೀಡಿ ಅನೇಕ ಗ್ರಂಥಗಳನ್ನು ಬರೆಯಿಸಿದನು. ಈತನ ಕಾಲದಲ್ಲಿ ರಾಮಾಯಣ, ಮಹಾಭಾರತ ಮೊದಲಾದ ಸಂಸ್ಕೃತ ಗ್ರಂಥಗಳು ಹುಟ್ಟಿದವು ಎಂದು ಹೇಳಿದ್ದಾರೆ.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ದಕ್ಷಿಣ ಭಾರತದ ಸಂಸ್ಕೃತಿಯ ಸಮನ್ವಯ ಸಾಧಿಸಿದ ವಿಜಯನಗರ ಕನ್ನಡ, ತೆಲುಗು, ಸಂಸ್ಕೃತ ಮೊದಲಾದ ಭಾಷೆಗಳ ಸಾಹಿತ್ಯದ ವಿಕಾಸಕ್ಕೆ ಸಮಾನಾವಕಾಶ ನೀಡಿರುವುದು ಕಂಡುಬರುತ್ತದೆ. 'ತೆಲುಗು' ಭಾಷೆಯಂತೂ ವಿಜಯನಗರ ಕಾಲದಲ್ಲಿ ಸ್ವರ್ಣಯುಗವನ್ನೇ ಕಂಡಿತು ಎಂದು ಹೇಳಬಹುದು. ಹೀಗೆ ಹನುಮಂತಯ್ಯನವರು ಕೃಷ್ಣದೇವರಾಯನ ಆಸ್ಥಾನದ ಕವಿಗಳು ಮತ್ತು ಅವರ ಗ್ರಂಥಗಳ ಕುರಿತು ಪರಿಚಯಿಸಿದ್ದಾರೆ.

೪. ವಿಜಯನಗರದ ದಸರಾ ಮಹೋತ್ಸವದ ವರ್ಣನೆ

ದಕ್ಷಿಣ ಭಾರತದ ಮಧ್ಯಯುಗದಲ್ಲಿ ಆಳ್ವಿಕೆ ಮಾಡಿದ ಪ್ರಮುಖ ರಾಜ್ಯ 'ವಿಜಯನಗರ'. ವಿಶ್ವದ ಪ್ರಮುಖ ಸಾಮ್ರಾಜ್ಯಗಳಲ್ಲೇ ಒಂದಾಗಿ ಮೆರೆದಿದೆ. ಹಲವು ಯುದ್ಧಗಳ ನಡುವೆಯೂ ಕಾವ್ಯ, ಸಾಹಿತ್ಯ ಸೃಷ್ಟಿ, ಆರ್ಥಿಕ ವ್ಯವಸ್ಥೆಗಳಲ್ಲಿ ವಿಜಯನಗರ ಮುಂದಿತ್ತು. ಹಲವಾರು ವಿದೇಶಿ ಪ್ರವಾಸಿಗರು ಇದರ ಸಂಪತ್ತಿನಿಂದ ಆಕರ್ಷಿತರಾಗಿ ಇಲ್ಲಿಗೆ ಬಂದಿದ್ದರು. ಅವರು ಆಯಾ ಕಾಲಘಟ್ಟದ ರಾಜರ ವರ್ಣನೆ, ವಿಜಯನಗರ ಪಟ್ಟಣದ ವರ್ಣನೆ, ದಸರಾ ಮಹೋತ್ಸವದ ವರ್ಣನೆ ಕುರಿತು ಅತ್ಯಂತ ವಿಸ್ತಾರವಾಗಿ ನಿರೂಪಿಸಿರುವುದು ಕಂಡುಬರುತ್ತದೆ.

ಹನುಮಂತಯ್ಯನವರ ಈ ಕೃತಿಯಲ್ಲಿ ಪರ್ಷಿಯಾದ ರಾಯಭಾರಿಯಾಗಿ ಬಂದ 'ಅಬ್ದುಲ್ ರಜಾಕ'ನು ಮಹಾನವಮಿ ನಡೆಯುತ್ತಿದ್ದ ರೀತಿಯನ್ನು ಕಣ್ಣಾರೆ ಕಂಡು ಅತ್ಯಂತ ರೋಚಕವಾಗಿ ವರ್ಣಿಸಿರುವುದನ್ನು ಪ್ರಸ್ತಾಪಿಸಿದ್ದಾರೆ. "ಈ ಸಾರ್ವಭೌಮರ ಹಬ್ಬಗಳಲ್ಲೆಲ್ಲಾ ಮಹಾನವಮಿ ಹಬ್ಬವೇ ಪ್ರಾಮುಖ್ಯವಾದುದು. ಈ ಹಬ್ಬವು ಹತ್ತು ದಿನಗಳವರೆಗೂ ಅರಮನೆಯಲ್ಲಿ ಬಹಳ ವೈಭವದಿಂದ ನಡೆಯುತ್ತದೆ. ಅನೇಕ ಆಟಪಾಟ ಮೊದಲಾದ ವಿನೋದಗಳು, ಉತ್ಸವ

ಮುಂತಾದವುಗಳು ನಡೆಯುತ್ತವೆ." ಈ ನವರಾತ್ರಿಗೆ ಅನೇಕ ಸಾಮಂತ ರಾಜರು, ಪಾಳೆಯಗಾರರು, ಸರ್ವಾಧಿಕಾರಿಗಳು, ಸೇನಾಪತಿಗಳು, ಸರದಾರರು ಆಹ್ವಾನಿಸಲ್ಪಡುತ್ತಾರೆ. ಇವರ ದರ್ಬಾರಿನಲ್ಲಿ ವಿಜಯನಗರದ ರಾಜರಿಗೆ ಆನೆ, ಕುದುರೆ, ಕಪ್ಪಕಾಣಿಕೆಗಳನ್ನು, ವಿಚಿತ್ರವಾದ ಮತ್ತು ಅಪರೂಪವಾದ ಪದಾರ್ಥಗಳನ್ನು ತಂದು ನಜರಾಗಿ ಒಪ್ಪಿಸುತ್ತಾರೆ. ಸಾಮ್ರಾಟರು ಇವರಿಗೂ ವಿದ್ವಾಂಸರಿಗೂ ಬಿರುದು ಬಿಂಕಗಳನ್ನು, ಖಿಲ್ಲತ್ತು ಪಾರಿತೋಷಕಾದಿಗಳನ್ನು ಕೊಟ್ಟು ಸನ್ಮಾನಿಸುತ್ತಾರೆ.

ವಿಜಯದಶಮಿಯ ದಿನ ಸಾರ್ವಭೌಮರು ರಾಜಧಾನಿಗೆ ಸ್ವಲ್ಪ ದೂರದಲ್ಲಿರುವ ದಿಬ್ಬದ ಬಳಿಗೆ ದಯಮಾಡಿಸುತ್ತಾರೆ. ಆ ಸ್ಥಳಕ್ಕೆ 'ಮಹಾನವಮಿ ದಿಬ್ಬ'ವೆಂದು ಹೆಸರು. ಅದು ಅರಮನೆಯಿಂದ ಮೂರು ಮೈಲಿಗಳ ದೂರದಲ್ಲಿದೆ. ಅದರ ಉದ್ದಕ್ಕೂ ಇಕ್ಕೆಲದಲ್ಲಿಯೂ ಸೈನ್ಯಾಧಿಕಾರಿಗಳು ತಮ್ಮ ತಮ್ಮ ಸೈನ್ಯಗಳ ಸಮೇತ ಉದ್ದಕ್ಕೂ ಸಾಲಾಗಿ ನಿಂತಿರುತ್ತಾರೆ. ಅವರ ಉಡುಪುಗಳ ಪ್ರಕಾಶವು ಕಣ್ಣನ್ನು ಕುಕ್ಕುತ್ತದೆ. ಚಕ್ರವರ್ತಿಗಳು ಅರಮನೆಯಿಂದ ಹೊರಟು ಪಟ್ಟದ ಕುದುರೆಯನ್ನೇರಿ ಯಾವತ್ತೂ ಚತುರಂಗ ಬಲವನ್ನು ಪರಾಮರಿಸುತ್ತಾ ಅವರು ಮಾಡುವ ವಂದನೆಗಳಿಗೆ ತಾವು ಹಸನ್ಮುಖರಾಗಿ ಪ್ರತಿವಂದನೆಗಳನ್ನು ಸಲ್ಲಿಸುತ್ತಾ ಹೋಗುತ್ತಾರೆ. ಅಲ್ಲಿ ಆ ದಿಬ್ಬದ ಹತ್ತಿರ ಏರ್ಪಡಿಸಿರುವ ಬನ್ನಿ ಮಂಟಪದಲ್ಲಿ ಪೂಜಾದಿಗಳನ್ನು ಪೂರೈಸಿ ಯಥಾವಿಧಿಯಾಗಿ ಅರಮನೆಗೆ ಬಿಜಯಮಾಡುತ್ತಾರೆ. ಹಾಗೆಯೇ ಸೈನಿಕರೂ ನೆರೆದಿದ್ದ ಪ್ರಜೆಗಳೂ ಅವರನ್ನು ಹಿಂಬಾಲಿಸುತ್ತಾರೆ. ಆ ದಿನದ ಸೈನ್ಯದ ಸಂಖ್ಯೆ ಹತ್ತು ಲಕ್ಷಕ್ಕೆ ಮೇಲ್ಪಟ್ಟಿರಬಹುದು" ಎಂದು ವರ್ಣಿಸಿದೆ.

ಅಂದಿನ ಸಾಮ್ರಾಟರ ಮತ್ತು ಪರಿವಾರದವರ ಉಡುಗೆ-ತೊಡುಗೆಗಳ ವೈಭವವನ್ನು ಕುರಿತು "ನಾನು ಆ ದಿವ್ಯ ದೃಶ್ಯಗಳನ್ನು ನೋಡಿ ಇದೇನು ಕನಸೋ ಕಳವಳವೋ ಅಥವಾ ನಾನೇನು ದೇವಲೋಕದಲ್ಲಿರುವೆನೋ ಎಂದು ದಿಗ್‌ಭ್ರಾಂತನಾಗಿಬಿಟ್ಟೆ"ನೆಂದು[೩೩] ವರ್ಣಿಸಿದ್ದಾನೆ. ಇಂದಿಗೂ ಮೈಸೂರಿನ ಅರಸರು ಕನ್ನಡಿಗರ ಶ್ರೀಮಂತ ಪರಂಪರೆಯ ಪ್ರಜ್ಞೆಯ ಅವಿಭಾಜ್ಯ ಅಂಗದಂತೆ ದಸರಾ ಮಹೋತ್ಸವವನ್ನು ಮುಂದುವರೆಸಿಕೊಂಡು ಬಂದಿರುವುದನ್ನು ನೋಡಬಹುದು.

ನ್ಯೂನಿಜ್ ಅವರು "ಹರಿಹರನ ತಮ್ಮ ಬುಕ್ಕರಾಯನ ೩೭ ವರ್ಷಗಳ ಆಳ್ವಿಕೆಯಲ್ಲಿ ಒರಿಸ್ಸಾ ಸೇರಿದಂತೆ ದಕ್ಷಿಣದ ವಿವಿಧ ರಾಜ್ಯಗಳನ್ನು ಗೆದ್ದುಕೊಂಡದ್ದು, ಮುಸ್ಲಿಂ ರಾಜರ ಕ್ರೂರ ದಬ್ಬಾಳಿಕೆ ಹೊಂದಿದ್ದ ಜನರಿಗೆ ಸಾಂತ್ವನ ಮತ್ತು ಬಿಡುಗಡೆ ದೊರೆತಂತಾಗಿ ಆ ಗೆಲುವನ್ನು ಒಂದು ಉತ್ಸವದಂತೆ ನಡೆಸಿಕೊಂಡು ಬಂದಿರಬಹುದು" ಎನ್ನುತ್ತಾರೆ.[೩೪] ಈ 'ಮಹಾನವಮಿ ಉತ್ಸವ' ಕೇವಲ ಒಂದು ಉತ್ಸವವಷ್ಟೇ ಆಗದೆ ಹೊರದೇಶಗಳಲ್ಲಿ ವಿಜಯನಗರ ಸಾಮ್ರಾಜ್ಯದ ಅತ್ಯುನ್ನತ ಸಂಸ್ಕೃತಿ, ಕಲೆ, ಶ್ರೀಮಂತಿಕೆಯ ವೈಭವದ ಶಕ್ತಿ ಸಾಕ್ಷಿಯಾಗಿ ಪ್ರಪಂಚದಾದ್ಯಂತ ಪ್ರಸಿದ್ಧಿ

ಹೊಂದಿತ್ತು ಮತ್ತು ಅದು ಸಾಮ್ರಾಜ್ಯದ, ರಾಜರ ಪ್ರತಿಷ್ಠೆ, ವೈಭವ ಶ್ರೀಮಂತಿಕೆ, ಕ್ರೀಡೆಗಳ, ಕಲಾಸ್ಪರ್ಧೆಗಳ ಒರೆಗಲ್ಲಾಗಿತ್ತು ಎಂದು ಹೇಳಬಹುದು.

೫. ಅಮಾತ್ಯ ಅಪ್ಪಾಜಿಯ ಪರಿಚಯ

ಅಪ್ಪಾಜಿ: 'ಪ್ರಭು' ಎಂಬ ಪದವು ಕನ್ನಡದ 'ಅಪ್ಪಾಜಿ' ಮತ್ತು ತೆಲುಗಿನ 'ಅಯ್ಯಾ' ಎಂಬ ಪದಗಳಿಗೆ ಸಮನಾದುದು. ರಾಜ ಮತ್ತು ಮಂತ್ರಿಗಳ ನಡುವೆ ಇದ್ದ ಮಧುರ ಬಾಂಧವ್ಯಕ್ಕೆ ಸಾಕ್ಷಿಯಾದುದು.

ವಿಜಯನಗರ ಸಾಮ್ರಾಜ್ಯದ ಮಹಾಮಂತ್ರಿ ತಿಮ್ಮರಸ. ಈತನು ಅರವೀಡು ಕುಲದವನು. ಮನೆತನ ಸಾಳವ, ತಂದೆ ರಾಚಯ್ಯ. ಈ ಅಮಾತ್ಯ ತಿಮ್ಮರಸ ಕರ್ನಾಟಕ ಮತ್ತು ಆಂಧ್ರ ರಾಜ್ಯಗಳಲ್ಲಿ ಪ್ರಸಿದ್ಧಿಯಾಗಿದ್ದಾನೆ. ಈತನನ್ನು ಕುರಿತು ಕಥೆ–ಕಾದಂಬರಿಗಳು ಎರಡೂ ಭಾಷೆಗಳಲ್ಲಿ ಕಂಡುಬಂದಿದೆ.

ತಿಮ್ಮರಸನು ಬಾಲ್ಯದಲ್ಲಿ ಬಹಳ ಬಡತನದಿಂದ ಕೆಲವು ಕಾಲ ಪಶುಪಾಲನೆಯನ್ನು ಮಾಡುತ್ತಾ ಗುತ್ತಿ, ಚಂದ್ರಗಿರಿ, ಪೆನುಗೊಂಡೆ ಮೊದಲಾದ ಸ್ಥಳಗಳಲ್ಲಿ ಭಿಕ್ಷಾನ್ನದಿಂದ ಜೀವಿಸುತ್ತಾ ವಿದ್ಯೆಯನ್ನು ಕಲಿತುಕೊಂಡು ಅಲ್ಲಿಯ ದುರ್ಗಾದೀಶರನ್ನಾಶ್ರಯಿಸಿ ತನ್ನ ಬುದ್ಧಿಬಲದಿಂದ ಕ್ರಮೇಣ ಈ ವಿಜಯನಗರ ಸಾಮ್ರಾಜ್ಯಕ್ಕೆ ಮಂತ್ರಿಯಾದನು. ಈತನು ನರಸರಾಜ, ವೀರ ನರಸಿಂಗರಾಜರ ಬಳಿಯಲ್ಲಿ ಮಂತ್ರಿಯಾಗಿದ್ದು, ರಾಜ್ಯಭಾರವನ್ನೆಲ್ಲಾ ವಹಿಸಿಕೊಂಡು ರಾಜರ ಮತ್ತು ಪ್ರಜೆಗಳ ಗೌರವಕ್ಕೆ ಪಾತ್ರನಾದನು. ನಂತರ ಶ್ರೀಕೃಷ್ಣದೇವರಾಯ ಪಟ್ಟಕ್ಕೆ ಬಂದ ಸಂದರ್ಭದಲ್ಲಿ 'ಅಪ್ಪಾಜಿ'ಯಾಗಿ ಅಂದರೆ ತಂದೆಗೆ ಸಮನಾಗಿ ಗುರುವಿನ ಸ್ಥಾನದಲ್ಲಿ ಗುರುತಿಸಿಕೊಂಡನು.

ತಂದೆ–ಮಕ್ಕಳಂತೆ ಸಲುಗೆಯಿಂದ ಕೃಷ್ಣದೇವರಾಯ ರಾಜನೀತಿಯನ್ನು ಮಹಾಮಂತ್ರಿ ತಿಮ್ಮರಸನಿಂದ ಅರಿತು ಮಹಾನ್ ಸಾಮ್ರಾಜ್ಯವನ್ನು ನಿರ್ಮಾಣ ಮಾಡಲು ಹಾಗೂ ಉಚ್ಛ್ರಾಯ ಸ್ಥಿತಿಗೆ ವಿಜಯನಗರ ಸಂಸ್ಥಾನ ಬರಲು ಸಾಧ್ಯವಾಯಿತು.

ರಾಜಮನೆತನದಲ್ಲಿ ಶ್ರೀಕೃಷ್ಣದೇವರಾಯರ ಅಭಿವೃದ್ಧಿ ಕಂಡು ಅಸೂಯೆ ಆರಂಭವಾಯಿತು. ಅವರನ್ನು ವಿಷವಿಕ್ಕಿ ಕೊಲ್ಲಲು ಮುಂದಾದಾಗ, ಕಣ್ಣನ್ನು ಕೀಳಿಸಲು ಯತ್ನಿಸಿದಾಗ ಮಹಾಮಂತ್ರಿ ತಿಮ್ಮರಸರ ಮುತ್ಸದ್ದಿತನದಿಂದ ಈ ಕಂಟಕ ನಿವಾರಣೆ ಮಾಡಿದರು. ಉಭಯಸಂಕಟ ಸಂದರ್ಭವನ್ನು ಚಾಣಾಕ್ಷತನದಿಂದ ನಿರ್ವಹಿಸಲು ವಿವೇಕವನ್ನು ಮರೆಯಬೇಕಾಯಿತು.

ತಿಮ್ಮರಸ ಉದ್ಯೋಗ ಅರಸಿ ಬಂದ ಸಾಮಾನ್ಯ ವ್ಯಕ್ತಿಯಾಗಿದ್ದು, ವಿಜಯನಗರ ಸಾಮ್ರಾಜ್ಯದ ಮಹಾಮಂತ್ರಿಯಾಗಿ ಪದವಿಯನ್ನು ಹೇಗೆ ನಿರ್ವಹಿಸಿದನು ಮತ್ತು ತನ್ನ ನಿರ್ವ್ಯಾಜ್ಯ ಪ್ರೇಮದಿಂದ

ರಾಜಕುಮಾರರನ್ನು ಹೇಗೆ ಸಾಕಿ ಸಲುಹಿದನು, ರಾಜ್ಯಸೂತ್ರ ಹಿಡಿಯಲು ಅಗತ್ಯವಾದ ವಿದ್ಯೆಗಳನ್ನು ಹೇಗೆ ಕಲಿಸಿದ, ಒಬ್ಬ ಆದರ್ಶ ರಾಜನನ್ನು ನಿರ್ಮಾಣ ಮಾಡಲು ಏನೆಲ್ಲಾ ಸಾಹಸ ಪ್ರಯತ್ನ ಮಾಡಬೇಕಾಗುತ್ತದೆ. ಇಂತಹ ಮಂತ್ರಿಯನ್ನು ಕುರಿತು ಪರಿಚಯಿಸಿರುವುದು ಹನುಮಂತಯ್ಯನವರ ಒಂದು ಜಾಣ್ಮೆಯೆಂದು ಹೇಲಬಹುದು.

೬. ರಾಮರಾಯನ ಬಖೈರು ಅಥವಾ ತಾಳಿಕೋಟೆ ಯುದ್ಧ

ಷಾಹಿ ಸುಲ್ತಾನರು ತಮ್ಮ ತಮ್ಮ ಸೈನ್ಯಗಳನ್ನು ಕ್ರಿ.ಶ. ೧೫೬೪ರ ಕೊನೆಯಲ್ಲಿ ವಿಜಯನಗರದತ್ತ ನಡೆಸಿದರು. ಅವರು ಅಪರಿಮಿತವಾದ ಸೈನ್ಯವನ್ನು ಕಲೆಹಾಕಿದ್ದರು. ಪೋರ್ಚುಗೀಸರಿಂದ ಪಡೆದಿದ್ದ ತುಪಾಕಿಗಳಿಂದ ಅವರ ಬಲವು ಸಜ್ಜಾಗಿತ್ತು. ಮಿಗಿಲಾಗಿ ಸುಲ್ತಾನರು ಇಸ್ಲಾಂ ಧರ್ಮದ ಪ್ರಗತಿಗಾಗಿ ವೀರಾವೇಶದಿಂದ ಹೋರಾಡುವಂತೆ ಮಹಮ್ಮದೀಯ ಸೈನಿಕರನ್ನು ಹುರಿದುಂಬಿಸಿದರು. ಅದು ತಾಳಿಕೋಟೆಯ ಬಳಿ ವಿಶ್ರಮಿಸಿಕೊಂಡು ವಿಜಯನಗರದ ಕಡೆಗೆ ಮುಂದುವರಿಯಬೇಕಾಗಿತ್ತು. ಸುದ್ದಿ ತಿಳಿದ ರಾಮರಾಯನು ಸಹ ಸನ್ನದ್ಧನಾಗಿ ಇಪ್ಪತ್ತು ಸಾವಿರ ಅಶ್ವದಳ, ಒಂದು ಲಕ್ಷ ಕಾಲಾಳುಗಳು ಮತ್ತು ಐದುನೂರು ಆನೆಗಳ ಬಲವನ್ನು ತಮ್ಮ ಸಹೋದರ ತಿರುಮಲನ ನೇತೃತ್ವದಲ್ಲಿ ಕಳುಹಿಸಿದನು. ಉಳಿದ ಸೈನ್ಯವನ್ನೆಲ್ಲಾ ಒಂದುಗೂಡಿಸಿ ಅದರ ನೇತೃತ್ವವನ್ನು ತಾನೇ ವಹಿಸಿ ರಾಮರಾಯನು ಶತ್ರುಗಳನ್ನು ಎದುರಿಸಲು ರಣರಂಗವನ್ನು ತಲುಪಿದನು. ದಕ್ಷಿಣಭಾರತದ ಇತಿಹಾಸದಲ್ಲಿ ಅದುವರೆಗೂ ಅಂತಹ ಅಪರಿಮಿತವಾದ ಬಲವು ಯಾವ ಯುದ್ಧದಲ್ಲಿಯೂ ಸೇರಿರಲಿಲ್ಲ. ಸುಲ್ತಾನರ ಸೈನ್ಯವು ಮೂರುಲಕ್ಷ ಸೈನಿಕರನ್ನು ಹೊಂದಿದ್ದು ವಿಜಯನಗರದ ಸೈನ್ಯವು ಆರುಲಕ್ಷ ಸೈನಿಕರಿಂದ ಕೂಡಿತ್ತು.

ಕ್ರಿ.ಶ. ೧೫೬೫ನೇ ಜನವರಿ ಮಾರ್ಚ್ ೨೩ರಂದು ರಣರಂಗದಲ್ಲಿ ಸೈನ್ಯಗಳು ಒಂದನ್ನೊಂದು ಎದುರಿಸಿದವು. 'ರಕ್ಕಸಗಿ' ಮತ್ತು 'ತಂಗಡಗಿ' ಎಂಬ ಗ್ರಾಮಗಳ ಮಧ್ಯದಲ್ಲಿ ಈ ಯುದ್ಧವು ನಡೆಯಿತು. ರಾಮರಾಯನ ಬಖೈರ್‌ನಲ್ಲಿ ಇದನ್ನು "ರಕ್ಕಸತಂಗಡಿ" ಎಂಬುದಾಗಿ ಹೆಸರಿಸಿದೆ. ಸುಲ್ತಾನರ ಸೈನ್ಯವು ತಾಳಿಕೋಟೆಯ ಬಳಿಯಲ್ಲಿ ಶಿಬಿರ ಹೂಡಿ ಮುಂದುವರೆದು ಬಂದಿದ್ದರಿಂದ ತಾಳಿಕೋಟೆ ಕದನ ಎಂಬುದಾಗಿ ಈ ಯುದ್ಧಕ್ಕೆ ಹೆಸರಾಗಿದೆ[೨೫] ಎನ್ನುವುದು ತಿಳಿದುಬಂದಿದೆ.

ಸುಮಾರು ೮೦ ವರ್ಷ ವಯಸ್ಸಿನ ವೃದ್ಧ ರಾಮರಾಯನು ಕೆಚ್ಚೆದೆಯಿಂದ ಶತ್ರುಗಳೊಡನೆ ಹೋರಾಟದಲ್ಲಿ ತೊಡಗಿದನು. ಅವನು ಅಹಮ್ಮದ್ ನಗರದ ಸೈನ್ಯಕ್ಕೆದುರಾಗಿ ಹೋರಾಟ ಪ್ರಾರಂಭಿಸಿದನು. ವೆಂಕಟಾದ್ರಿಯು ಬಿಜಾಪುರದ ಸೈನ್ಯವನ್ನು, ತಿರುಮಲನು ಗೋಲ್ಕೊಂಡ ಮತ್ತು ಬಿದರೆಯ ಸೈನ್ಯವನ್ನು ಎದುರಿಸಿದನು. ಪ್ರಾರಂಭದಲ್ಲಿ ರಾಮರಾಯನು ಜಯ ಗಳಿಸಿದನು. ಆದರೆ ವಿಜಯನಗರ ಸೈನ್ಯದಲ್ಲಿ ಕೋಲಾಹಲವುಂಟಾಯಿತು. ಆ ವೇಳೆಗೆ ಅಹಮ್ಮದ್‌ನಗರದ

ತುಪಾಕಿಗಳನ್ನು ಹೊಂದಿದ್ದ ತುಕಡಿಯು ರಾಮರಾಯನ ಎದುರಿಗೆ ನಡೆದು ಅವನ ಸೈನ್ಯವು ಕಂಗೆಡುವಂತೆ ಮಾಡಿತು. ರಾಮರಾಯನು ಶತ್ರುವಿಗೆ ಸೆರೆಸಿಕ್ಕನು. ಅಹಮ್ಮದ್‌ನಗರದ ನಿಜಾಮಷಾನು ರಾಮರಾಯನ ಶಿರಚ್ಛೇದನ ಮಾಡಿ ಅದನ್ನು ಭರ್ಚಿಯ ತುದಿಗೆ ಸಿಕ್ಕಿಸಿ ಹಿಂದೂ ಸೈನ್ಯದಲ್ಲಿ ಭಯಾನಕತೆ ಉಂಟಾಗುವಂತೆ ಮಾಡಿದನು. ರಣರಂಗದಲ್ಲಿ ಗೊಂದಲವುಂಟಾಯಿತು. ಲಕ್ಷಾಂತರ ಮಂದಿ ಸೈನಿಕರು ಕೊಲೆಯಾದರು. ಅಳಿದುಳಿದ ವಿಜಯನಗರ ಸೈನ್ಯವು ದಿಕ್ಕಾಪಾಲಾಗಿ ಓಡಿತು. ಸುಲ್ತಾನರು ಜಯ ಗಳಿಸಿದರು. ರಕ್ಕಸತಂಗಡಿ ಯುದ್ಧವು ವಿಜಯನಗರದ ಸರ್ವನಾಶವನ್ನು ಸಾರಿತು.

ಸಾಮ್ರಾಜ್ಯದ ರಾಜಧಾನಿಯತ್ತ ಶತ್ರುಗಳು ಮುನ್ನೆಡೆದರು. ಶತ್ರುಗಳು ನಗರವನ್ನು ತಲುಪುವ ಮುನ್ನ ತಿರುಮಲನು ೧೫೫೦ ಆನೆಗಳ ಮೇಲೆ ಸಾಮ್ರಾಜ್ಯದ ಸಂಪತ್ತನ್ನು ತುಂಬಿಕೊಂಡು ಚಂದ್ರಗಿರಿಯತ್ತ ನಡೆದನು. ಅವನು ತನ್ನೊಡನೆ ಅಂತಃಪುರದ ಸ್ತ್ರೀಯರನ್ನು ಸೆರೆಯಾಳಾಗಿದ್ದ ಸದಾಶಿವರಾಯನನ್ನು ಕರೆದೊಯ್ದು ರಾಜಧಾನಿಯನ್ನು ಅಲೆಮಾರಿಗಳ ಅನಂತರ ಆಕ್ರಮಣಕಾರದ ನಿಷ್ಕರುಣೆಯಿಂದ ದಾಳಿಗೆ ಬಿಟ್ಟು ಹೋದರು. ಅಲೆಮಾರಿಗಳೂ ಕಳ್ಳಕಾಕರೂ ರಾಜಧಾನಿಯನ್ನು ಸಿಕ್ಕಾಪಟ್ಟೆ ದೋಚಿದರು. ಆ ಕೂಡಲೇ ಶತ್ರುಸೇನೆಯು ರಾಜಧಾನಿಗೆ ನುಗ್ಗಿತು. ಸಹಸ್ರಾರು ಸಂಖ್ಯೆಯಲ್ಲಿ ಮಕ್ಕಳು, ಸ್ತ್ರೀ ಪುರುಷರು ಕಗ್ಗೊಲೆಯಾದರು. ವಿಜಯನಗರ ಸಂಪತ್ತು ಲೂಟಿ ಯಾಯಿತು. ಅರಮನೆಗಳು ನಾಶವಾದವು. ಪ್ರಪಂಚದ ಇತಿಹಾಸದಲ್ಲಿ ಇಂತಹ ವೈಭವಪೂರ್ಣ ನಗರದ ಮೇಲೆ ಅಷ್ಟು ತೀವ್ರತರವಾದ ದಾಳಿ ಮತ್ತು ವಿನಾಶವೊದಗಿದುದು ಅಪರೂಪವೆಂದು ತಿಳಿದುಬಂದಿದೆ. ತಾಳಿಕೋಟೆ ಕದನವು ಜಗತ್ತಿನ ಕೆಲವೇ ಐತಿಹಾಸಿಕ ಪ್ರಮುಖ ಕದನ ಗಳಲ್ಲೊಂದಾಗಿದೆ. ಈ ಯುದ್ಧದಿಂದ ರಾಜಧಾನಿಯು ನಾಶವಾಗಿ ಸಾಮ್ರಾಜ್ಯದಲ್ಲಿ ಅರಾಜಕತ್ವ ಮತ್ತು ಅನ್ಯಾಯವುಂಟಾಯಿತು. ಹೀಗೆ ೧೫೬೫ರಲ್ಲಿ ನಡೆದ ತಾಳಿಕೋಟೆ ಯುದ್ಧವನ್ನು ಕುರಿತು ಹನುಮಂತಯ್ಯನವರು ಚರ್ಚಿಸಿದ್ದಾರೆ.

೭. ವಿಜಯನಗರ ಸಾಮ್ರಾಜ್ಯ ಚರಿತ್ರೆ: ತೌಲನಿಕ ಅಧ್ಯಯನ

ವಿ.ಆರ್.ಹನುಮಂತಯ್ಯನವರ 'ವಿಜಯನಗರ ಸಾಮ್ರಾಜ್ಯ ಚರಿತ್ರೆ' ಕೃತಿಯು ವಿಜಯನಗರ ಸಾಮ್ರಾಜ್ಯದ ಸ್ಥಾಪನೆ, ಅದರ ಮೂಲ, ರಾಜಕೀಯ ಚರಿತ್ರೆಗೆ ಮಾತ್ರ ಸೀಮಿತವಾಗಿದೆ. ಇದರಲ್ಲಿ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಯಾವುದೇ ಅಂಶಗಳನ್ನು ಗಮನಿಸಿಲ್ಲ. ಕೇವಲ 'ಕುರುಬ ಮೂಲ' ಕುರಿತ ಆಳವಾದ ಚಿಂತನೆ ಇವೆ. ವಿದ್ಯಾರಣ್ಯರ ಆಶೀರ್ವಾದದಿಂದ ಹಕ್ಕ -ಬುಕ್ಕರು ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು ಎಂದು ಹೇಳಿದರೆ, ಪಿ.

ವಸುಂದರ ಫಿಲಿಯೋಜ ಅವರು ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಕೃತಿಯಲ್ಲಿ ವಿದ್ಯಾರಣ್ಯರು ಯಾರು? ವಿಜಯನಗರದ ಸ್ಥಾಪನೆಯಲ್ಲಿ ಅವರ ಪಾತ್ರವೇನು? ವಿಜಯನಗರ ನಿಜವಾಗಿಯೂ ಸ್ಥಾಪನೆಯಾಯಿತೆ? ೧೩೩೬ರಲ್ಲಿ ವಿಜಯನಗರದ ಸ್ಥಾಪನೆಗೆಂದು ಭುವನೇಶ್ವರಿ ಸುವರ್ಣ ಮಳೆಗರೆದಳೇ? ಹೊಯ್ಸಳ ಬಲ್ಲಾಳ ಇನ್ನೂ ಆಳುತ್ತಿದ್ದ ಕಾಲ ೧೩೩೬, ಅಂತಹ ದೊಡ್ಡ ಮುತ್ಸದ್ದಿ ದೊರೆ ಕೈಕಟ್ಟಿಕೊಂಡು ಕುಳಿತ್ತಿದ್ದನೇ, ೧೩೩೬ರಲ್ಲಿ ವಿಜಯನಗರ ಸ್ಥಾಪನೆಯಾದಾಗ ಸಂಗಮ ಸಹೋದರರು ಆಂಧ್ರದವರಾಗಿದ್ದರೆ, ಆಂಧ್ರದವರೊಡನೆ ಅನೇಕ ಕಾಳಗಗಳೇಕೆ ನಡೆದವು? ಕನ್ನಡಿಗರಾಗಿದ್ದರೆ ಬಲ್ಲಾಳನ ಜೊತೆ ನಿಜವಾಗಿಯೂ ಯುದ್ಧವನ್ನೇ ಮಾಡಿದ್ದರೆ ಒಂದಾದರೂ ಶಿಲಾಶಾಸನ ಸಿಗಬೇಕಿತ್ತಲ್ಲ ನಮಗೆ? ೧೩೩೬ರಲ್ಲಿ ವಿದ್ಯಾರಣ್ಯರು ರಾಜ್ಯಸ್ಥಾಪನೆ ಮಾಡಿದ್ದರೆ ನಮಗೆ ಸಮಕಾಲೀನವಾದ ಒಂದಾದರೂ ಅವರ ಶಿಲಾಲೇಖ ಸಿಗಬೇಕಿತ್ತಲ್ಲ. ದಂತಕತೆ, ಸಾಹಿತ್ಯ ಹಾಗೂ ತ್ರುಟಿತ ತಾಮ್ರಶಾಸನಗಳು ಮಾತ್ರ ನಮ್ಮ ಕೈಗೆ ಸಿಗುತ್ತವೆ ಯಾಕೆ ಎಂಬ ಪ್ರಶ್ನೆಗಳನ್ನು ಎತ್ತಿರುವುದು ಕಂಡುಬರುತ್ತದೆ.

ಹನುಮತಯ್ಯನವರು ದೇಶ-ವಿದೆಸಗಳ ವಿದ್ವಾಂಸರ ಬರವಣಿಗೆಯನ್ನು ಗಮನಿಸಿದ್ದಾರೆ. ವಸುಂಧರ ಫಿಲಿಯೋಜಾ ಅವರು ದೇಶ-ವಿದೇಶ ವಿದ್ವಾಂಸರ ಬರವಣಿಗೆಯನ್ನು ಗಮನಿಸಿಲ್ಲ. ಇವರು ಶಿಲಾಶಾಸನಗಳನ್ನು ಐತಿಹಾಸಿಕ ದಾಖಲೆಗಳನ್ನು ಅವಲೋಕಿಸಿ ವಿಜಯನಗರದ ಸ್ಥಾಪನೆಗೆ ಸಂಬಂಧಿಸಿದ ಉಪಯುಕ್ತ ಮಾಹಿತಿಗಳನ್ನು ಮಾತ್ರ ಸಂಗ್ರಹಿಸಿ ಕೊಟ್ಟಿದ್ದಾರೆ.

ವಿದ್ಯಾರಣ್ಯರು ಸಾಮ್ರಾಜ್ಯವನ್ನು ಸ್ಥಾಪಿಸಿದ್ದಕ್ಕೆ ಯಾವ ಚಾರಿತ್ರಿಕ ವಿಶ್ವಸನೀಯ ಆಧಾರಗಳು ಇಲ್ಲ. ಕೇವಲ ಕಟ್ಟುಕಥೆ ಎಂದು ಹೇಳುತ್ತಾರೆ. ಚಾರಿತ್ರಿಕ ಆಧಾರಗಳಿಂದ ಪ್ರತಿಪಾದಿತವಾದ ಗಂಭೀರವಾದ ವಿಷಯಗಳನ್ನು ಪ್ರಸ್ತಾಪಿಸುತ್ತಾರೆ.

ಇವರು ಹೊಸ ಆಲೋಚನೆಯ ಹಿನ್ನೆಲೆಯಲ್ಲಿ ಚಿಂತನೆ ಮಾಡಿದ್ದಾರೆ. ಕೇವಲ ವಿದ್ಯಾರಣ್ಯರನ್ನು ಕುರಿತು ಮತ್ತು ಸಾಮ್ರಾಜ್ಯ ಸ್ಥಾಪನೆ ಮೂಲ ಕುರಿತು ಆಲೋಚನೆ ಮಾಡಿದ್ದಾರೆ. ವಿಜಯನಗರ ಸಾಮ್ರಾಜ್ಯದ ಅರಸರ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಚರಿತ್ರೆಯನ್ನು ಕಡೆಗಣಿಸಲಾಗಿದೆ.

ಪ್ರೊ. ವಿ. ರಾಘವೇಂದ್ರರಾವ್ ಅವರ 'ವಿಜಯನಗರ' ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿ ಆಳಿದ ಅರಸರ ಚರಿತ್ರೆಯ ಸಂಕ್ಷಿಪ್ತವಾದ ವಿವರಗಳಿವೆ. ಇದರಲ್ಲಿ ವಿಜಯನಗರ ಸಾಮ್ರಾಜ್ಯದ ಮೂಲ ಕುರಿತ ವಿವರಣೆಗಳಿಲ್ಲ. ವಿದ್ಯಾರಣ್ಯರನ್ನು ಕುರಿತು "ಕನ್ನಡ ರಾಜ್ಯಸ್ಥಾಪನೆಯಲ್ಲಿ ಒಬ್ಬ ವಿಭೂತಿವತ್ತಾದ ವ್ಯಕ್ತಿ ಮುಖ್ಯ ಸೂತ್ರಧಾರರಾಗಿದ್ದರು. ಅವರೇ ಶ್ರೀ

ವಿದ್ಯಾರಣ್ಯಸ್ವಾಮಿ. ಇವರ ಅಸಾಧಾರಣವಾದ ತಪಸ್ಸು, ಜ್ಞಾನ, ವೈರಾಗ್ಯ, ಜನರನ್ನು ಆಕರ್ಷಣ ಮಾಡುವ ಶಕ್ತಿ ಮುಂತಾದ ಗುಣಗಳಿಂದ ದಕ್ಷಿಣದೇಶದ ಜನಗಳಲ್ಲಿ ಅಪೂರ್ವ ಉತ್ಸಾಹವನ್ನು, ಶೌರ್ಯವನ್ನು, ಪ್ರತಿಕ್ರಿಯಾ ಶಕ್ತಿಯನ್ನು ಉಂಟುಮಾಡಿತು. ಅನೇಕ ಭಿನ್ನಮತಸ್ಥರಾದ ವೇದಾಂತ ದೇಶಿಕರನ್ನು, ಅಕ್ಷೋಭ್ಯ ತೀರ್ಥರನ್ನು ಇತರ ಶೈವ, ಜೈನಗುರುಗಳನ್ನು ಒಲಿಸಿ ಅವರ ಸರ್ವಾಶಕ್ತಿಯನ್ನು ಕರ್ನಾಟಕ ರಾಜ್ಯದ ಪುನರುಜ್ಜೀವನಕ್ಕೆ ತಂದು ತುಂಬಿದರು" ಎಂದು ಹೇಳಿದರೆ,

ಡಾ. ಸೂರ್ಯನಾಥ ಕಾಮತ್ ಅವರ 'ವಿಜಯನಗರ ಸಾಮ್ರಾಜ್ಯ' ಕೃತಿಯಲ್ಲಿ ರಾಜಮನೆತನ ತಾನೇ ತಾನಾಗಿ ಹುಟ್ಟಿಕೊಳ್ಳುವುದಿಲ್ಲ, ಅದಕ್ಕೆ ಒಂದು ಘಟನೆ ಯಾರಾದರೂ ಪ್ರೇರಣೆ ನೀಡುವ ಮೂಲಕ ಸಾಮ್ರಾಜ್ಯದ ಹುಟ್ಟಿಗೆ ಕಾರಣವಾಗುವುದು. ಅದೇ ರೀತಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯು ಹೆಚ್ಚಾಗಿ ಧಾರ್ಮಿಕ ಮಹತ್ವ ಪಡೆದಿದೆ. ಇದಕ್ಕೆ ಕಾರಣ ವಿದ್ಯಾರಣ್ಯ ಅಥವಾ ಮಾಧವಾಚಾರ್ಯರು ಎಂದು ಹೇಳುತ್ತಾರೆ.

ಇತಿಹಾಸದ ಸಾಧನೆಗಳು, ದೇಶಿ-ವಿದೇಶಿ ವಿದ್ವಾಂಸರ ದಾಖಲೆಗಳನ್ನು ಅವಲೋಕಿಸಿ, ತಮ್ಮ ಚಿಂತನೆಯನ್ನು ಮಾಡಿದ್ದಾರೆ. ಈ ಕೃತಿ ವಿಜಯನಗರ ಸಾಮ್ರಾಜ್ಯದ ರಾಜಕೀಯ ಚರಿತ್ರೆಗೆ ಮೀಸಲಾಗಿದೆ.

೮. ಕೃತಿಯ ವಿಶಿಷ್ಟತೆ

* ಹನುಮಂತಯ್ಯನವರ "ವಿಜಯನಗರ ಸಾಮ್ರಾಜ್ಯ ಚರಿತ್ರೆ" ಕೃತಿಯು ಮುಖ್ಯವಾಗಿ ವಿಜಯನಗರದ ಉದಯಕ್ಕೆ ಕಾರಣರಾದ ವಿದ್ಯಾರಣ್ಯರನ್ನು ಕುರಿತು ಮಾಹಿತಿ ನೀಡುತ್ತದೆ.

* ವಿಜಯನಗರದ ಸ್ಥಾಪಕರಾದ ಹಕ್ಕ-ಬುಕ್ಕರನ್ನು ಕುರಿತು ಮಾಹಿತಿ ನೀಡುವುದರ ಜೊತೆಗೆ ಅವರು ಮೂಲತಃ ಕುರುಬ ಸಮುದಾಯದವರು ಎನ್ನುವುದನ್ನು ವಿವರಿಸುತ್ತದೆ.

* ಈ ಕೃತಿಯಲ್ಲಿ ಹನುಮಂತಯ್ಯನವರು ವಿದೇಶಿ ವಿದ್ವಾಂಸರು ನೀಡಿದ ಹೇಳಿಕೆಗಳನ್ನು ಪರಿಶೀಲಿಸಿ ಅದಕ್ಕೆ ಬೇಕಾದ ಪೂರಕವಾದ ಮತ್ತು ಪರಿಪೂರ್ಣವಾದ ಸತ್ಯಾಸತ್ಯತೆಗಳ ಕುರಿತ ಆಲೋಚನೆಯನ್ನು ಮಾಡಿದ್ದಾರೆ.

* ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕೂ ವಂಶಗಳ ಮಾಹಿತಿಯನ್ನು ನೀಡುತ್ತಾ ಆಯಾ ಕಾಲದ ರಾಜರ ಆಡಳಿತ ಕುರಿತು ಹಾಗೂ ಅವರ ಸಾಮಾಜಿಕ ಕಳಕಳಿಯ ಕುರಿತು ವಿವೇಚನೆಯನ್ನು ಮಾಡಿದ್ದಾರೆ.

* ಕೃತಿಯು ಅನೇಕ ಶಾಸನ ಸಂಪುಟ, ಕರ್ನಾಟಕ ಗೆಜೆಟಿಯರ್, ಕೈಫಿಯತ್ತು ಇತ್ಯಾದಿ ಆಧಾರ ಗ್ರಂಥಗಳನ್ನು ಬಳಿಸಿಕೊಂಡು ವಿಜಯನಗರ ಸಾಮ್ರಾಜ್ಯ ಕುರಿತು ಗಟ್ಟಿಯಾದ ನಿಲುವುಗಳೇನು? ಎಂಬುದರ ಕುರಿತ ವಿವೇಚನೆಯಿದೆ.

* ಪಶುಪಾಲಕ ಸಂಸ್ಕೃತಿಯನ್ನು ತಿಳಿಸುತ್ತಾ ಹಕ್ಕ-ಬುಕ್ಕರು ಪಶುಪಾಲನಾ ಸಂಸ್ಕೃತಿಗೆ ಸೇರಿದವರು ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗೆ ವಿಜಯನಗರ ಸಾಮ್ರಾಜ್ಯವನ್ನು ಕಟ್ಟುವಲ್ಲಿ ಮತ್ತು ಅದನ್ನು ಆಳಿದ ನಾಲ್ಕು ವಂಶಜರ ರಾಜರನ್ನು ಕುರಿತು ಸಮಗ್ರ ಮಾಹಿತಿಯ ವಿಶ್ಲೇಷಣೆ ಈ ಕೃತಿಯಲ್ಲಿ ಅಡಕವಾಗಿದೆ. ವಿ.ಆರ್.ಹನುಮಂತಯ್ಯನವರು ಒಬ್ಬ ಶಾಲಾ ಶಿಕ್ಷಕರಾಗಿದ್ದುಕೊಂಡು ಸಂಶೋಧನಾತ್ಮಕ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಶ್ರೀಮಂತಿಕೆಯನ್ನು ಎತ್ತಿ ಹಿಡಿಯುವಲ್ಲಿ ತುಂಬ ಪರಿಶ್ರಮ ಪಟ್ಟಿದ್ದಾರೆಂದು ಹೇಳಬಹುದು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದದ್ದೇ ಮುಸ್ಲಿಮರ ದಾಳಿಯನ್ನು ತಡೆಗಟ್ಟಲು ಮತ್ತು ಮುಸ್ಲಿಮರಿಂದ ಯಾವುದೇ ತೊಂದರೆಯಾಗದಂತೆ ಹಿಂದೂಗಳನ್ನು ಕಾಪಾಡುವ ಸಲುವಾಗಿಯೇ ಈ ಸಾಮ್ರಾಜ್ಯ ಹುಟ್ಟಿಕೊಂಡಿತು. ಇದರ ಉದ್ದೇಶ 'ಹಿಂದೂ ಧರ್ಮ'ವನ್ನು ರಕ್ಷಿಸುವುದು ಹಾಗೂ ಹಿಂದೂ ಸಾಮ್ರಾಜ್ಯದ ಸ್ಥಾಪನೆಯನ್ನು ಸಮರ್ಥಿಸುವುದಾಗಿದೆ.

ಕೊನೆಟಿಪ್ಪಣಿಗಳು

೧. ವಿ.ಆರ್.ಹನುಮಂತಯ್ಯ, ವಿಜಯನಗರ ಸಾಮ್ರಾಜ್ಯ ಚರಿತ್ರೆ, ಪು. ೧೧೧

೨. ಅದೇ, ಪು. ೨

೩. ಅದೇ, ಪು. ೩

೪. ಅದೇ, ಪು. ೪

೫. ಅದೇ, ಪು. ೫

೬. ಅದೇ, ಪು. ೫

೭. ಅದೇ, ಪು. ೫

೮. ಅದೇ, ಪು. ೬

೯. ಅದೇ, ಪು. ೭

೧೦. ಅದೇ, ಪು. ೭

೧೧. ಅದೇ, ಪು. ೮-೯

೧೨. ಅದೇ, ಪು. ೯

೧೩. ಅದೇ, ಪು. ೧೦

೧೪. ಅದೇ, ಪು. ೧೨

೧೫. ಅದೇ, ಪು. ೧೭

೧೬. ಶಿವಪ್ಪ ನೀರಲಗಿ (ಸಂ), ಕರಿಯಪ್ಪ ಲೇ. ಹಾಲತೊರೆ ಪು. ೧೩೨

೧೭. ವಿ.ಆರ್.ಹನುಮಂತಯ್ಯ, ವಿಜಯನಗರ ಸಾಮ್ರಾಜ್ಯ ಚರಿತ್ರೆ, ಪು. ೨೯

೧೮. ಹಾಲತೊರೆ, ಪು. ೧೩೩

೧೯. ಶ್ರೀವಿಠಲ ಒಂದು ಮಹಾಸಮನ್ವಯ, ಲೇ. ರಾಮಚಂದ್ರ ಚಿಂತಾಮಣಿ ಢೇರೆ ಪು. ೨೯೨

೨೦. ಅದೇ, ಪು. ೨೯೩

೨೧. ಕುರುಬರ ಗುರು ಒಡೆಯರು: ಒಂದು ಸಾಂಸ್ಕೃತಿಕ ಅಧ್ಯಯನ, ಪು. ೨೦

೨೨. ಪುಟ್ಟಸ್ವಾಮಿ, ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ, ಪು. ೫೧

೨೩. ಬಿ.ಎಲ್.ರೈಸ್, ಪೂರ್ವೋಕ್ತ, ಪು. ೩೪೪

೨೪. ಆಲೂರು ವೆಂಕಟರಾಯ, ಕರ್ನಾಟಕ ಗತವೈಭವ, ಪು. ೯೭

೨೫. ವೆಂಕಟರಂಗೋಕಟ್ಟಿ, ಪೂರ್ವೋಕ್ತ, ಪು. ೩೪೦–೩೪೧

೨೬. ಗಳಗನಾಥರು, ಮಾಧವ ಕರುಣ ವಿಲಾಸ, ಪು. ೨೪೨

೨೭. ನೀಲಕಂಠಶಾಸ್ತ್ರಿ ಕೆ.ಎ. (ಸಂ), ಫರ್ದರ್ ಸೋರ್ಸ್ ಆಫ್ ವಿಜಯನಗರ ಹಿಸ್ಟರಿ, ಪು. ೧೦ –೧೧

೨೮. ವಸುಂಧರ ಫಿಲಿಯೋಜ, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಪು. ೬

೨೯. ಸೂರ್ಯನಾಥ ಕಾಮತ್, ಪೂರ್ವೋಕ್ತ, ಪು. ೩೪

೩೦. ಕರ್ನಾಟಕ ಚರಿತ್ರೆ, (ಸಂ) ಷೇಕ್ ಅಲಿ, ಸಂಪುಟ ೩ ಪು. ೧೬

೩೧. ಅದೇ, ಪು. ೧೭

೩೨. ವಿ.ಆರ್.ಹನುಮಂತಯ್ಯ, ವಿಜಯನಗರ ಸಾಮ್ರಾಜ್ಯ ಚರಿತ್ರೆ, ಪು. ೯೪

೩೩. ಅದೇ, ಪು. ೯೮

೩೪. ವಿಜಯನಗರ ಸಂಪುಟ, ೧೦ ಪು. ೨೯೪

೩೫. ವಿ.ಆರ್.ಹನುಮಂತಯ್ಯ, ವಿಜಯನಗರ ಸಾಮ್ರಾಜ್ಯ ಚರಿತ್ರೆ, ಪು. ೭೮

ಅಧ್ಯಾಯ ೫

ಇತರೆ ಸಾಹಿತ್ಯ

೧. ಭೋಜರಾಜ ಕಾಳಿದಾಸ ಚರಿತ್ರೆ

೨. ಒಬ್ಬ ಕುರುಬರ (ಗೊಲ್ಲರ) ಗುರುವಿನ ಮಹತ್ವದ ಸನ್ನದು

೧. ಕೃತಿಯ ಸ್ವರೂಪ ೨. ಕಾಳಿದಾಸದ ಜೀವನ ಚರಿತ್ರೆ

೩. ಭೋಜರಾಜನ ಜೀವನ ಚರಿತ್ರೆ ೪. ಭಾರವಿ ಕವಿಯ ಜೀವನ ಚರಿತ್ರೆ

೫. ಉಣ್ಣೆವಸ್ತ್ರ ನೇಯಿಗೆ ಕಲೆಯ ಪ್ರಾಚೀನತೆ

ಅಧ್ಯಾಯ ೫

ಇತರೆ ಸಾಹಿತ್ಯ

ಕುರುಬರ ಚರಿತ್ರೆ ಮತ್ತು ವಿಜಯನಗರ ಸಾಮ್ರಾಜ್ಯ ಕುರಿತಂತೆ ಹನುಮಂತಯ್ಯನವರು ವಿಸ್ತಾರವಾಗಿ ಚರ್ಚೆ ಮಾಡುವುದರ ಜೊತೆಗೆ ಇತರೆ ಕೃತಿಗಳನ್ನು ರಚಿಸಿದ್ದಾರೆ. ಅವು ಯಾವುವೆಂದರೆ ಭೋಜರಾಜ ಕಾಳಿದಾಸ ಚರಿತ್ರೆ ಹಾಗೂ ಮೂರು ಲೇಖನಗಳನ್ನು ಪ್ರಕಟಿಸಿದ್ದಾರೆ. ಇವುಗಳನ್ನು ಈ ಕೆಳಗಿನಂತೆ ಅವಲೋಕಿಸಬಹುದು.

೧. ಭೋಜರಾಜ ಕಾಳಿದಾಸ ಚರಿತ್ರೆ

ಹನುಮಂತಯ್ಯನವರ ಭೋಜರಾಜ ಕಾಳಿದಾಸ ಚರಿತ್ರೆಯನ್ನು ಕುರಿತು ಪ್ರಮುಖವಾಗಿ ಐದು ಪ್ರಮೇಯಗಳನ್ನಿರಿಸಿಕೊಂಡು ಚರ್ಚಿಸಬಹುದು.

೧. ಕೃತಿಯ ಸ್ವರೂಪ ೨. ಕಾಳಿದಾಸನ ಜೀವನ ಚರಿತ್ರೆ ೩. ಭೋಜರಾಜನ ಜೀವನ ಚರಿತ್ರೆ ೪. ಭಾರವಿ ಕವಿಯ ಜೀವನ ಚರಿತ್ರೆ ೫. ಉಣ್ಣೆವಸ್ತ್ರ ನೇಯಿಗೆ ಕಲೆಯ ಪ್ರಾಚೀನತೆ ಕುರಿತು ವಿಶ್ಲೇಷಿಸಬಹುದು.

೧. ಕೃತಿಯ ಸ್ವರೂಪ

'ಭೋಜರಾಜ ಕಾಳಿದಾಸ ಚರಿತ್ರೆ' ವಿ.ಆರ್.ಹನುಮಂತಯ್ಯನವರ ಐದನೆಯ ಕೃತಿಯಾಗಿದೆ. ೧೯೬೧ರಲ್ಲಿ ಪ್ರಕಟವಾದ ಈ ಕೃತಿ ೧೯೨ ಪುಟಗಳನ್ನೊಳಗೊಂಡು ಹದಿಮೂರು ಪ್ರಕರಣಗಳಲ್ಲಿ ವಿಸ್ತೃತಗೊಂಡಿದೆ.

ಕೃತಿಯ ಮುನ್ನುಡಿಯನ್ನು ಬರೆಯುತ್ತಾ ಎಂ.ಸಿ.ಕೃಷ್ಣಸ್ವಾಮಿ ಅಯ್ಯಂಗಾರ್ ಅವರು "ಗ್ರಂಥಕರ್ತರು ೫೦ ವರ್ಷಗಳ ಕಾಲ ವಿಶ್ರಾಂತಿಯಾಗಿ ಅವಿಚ್ಛಿನ್ನವಾಗಿ ಕನ್ನಡ ಸಾಹಿತ್ಯ ಸೇವೆ, ಈಶ ಸೇವೆ, ಸ್ವದೇಶ ಸೇವೆಗಳನ್ನು ಸಲ್ಲಿಸಿರುವುದು ಶ್ಲಾಘ್ಯವೇ ಸರಿ. ಇವರೀಗ ೮೩ ವರ್ಷಗಳ ವಯಸ್ಸಾಗಿ

ಮುಪ್ಪಿನ ದೆಸೆಯಲ್ಲಿದ್ದರೂ, ಸಾಹಿತ್ಯ ಕ್ಷೇತ್ರದಲ್ಲಾಸಕ್ತರಾಗಿರುವುದನ್ನು ನೋಡಿ ತರುಣರು ಕೂಡ ತಲೆ ತಗ್ಗಿಸುವಂತಿದೆ. ಈ ಗ್ರಂಥವನ್ನು ಸರ್ವರೂ ಆದರದಿಂದ ಎಡೆಬಿಡದೆ ಓದತಕ್ಕದ್ದಷ್ಟೇ ಆಗಿರದೆ, ಎಲ್ಲಾ ಸರ್ಕಾರಿ ಸ್ಕೂಲ್, ಕಾಲೇಜ್, ಯೂನಿವರ್ಸಿಟಿ ಲೈಬ್ರರಿಗಳಿಗೂ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಹೆಚ್ಚಾಗಿ ಇತಿಹಾಸ ಪ್ರೇಮಿಗಳಿಗೂ ಅತ್ಯಾವಶ್ಯಕವಾದ ಗ್ರಂಥವಾಗಿದೆ"[೧] ಎಂದು ಹೇಳಿರುವುದು ಈ ಕೃತಿಯ ವಿಶಿಷ್ಟತೆಯನ್ನು ತಿಳಿಸುತ್ತದೆ.

ಆರಂಭದಲ್ಲಿ ಮೈಸೂರು, ಇಂದೋರ್ ಮಹಾರಾಜರ ಸುಂದರ ಭಾವಚಿತ್ರಗಳಿಂದ ಮತ್ತು ಕೆಲವರು ಗಣ್ಯ ಪುರುಷರ ಛಾಯಾಚಿತ್ರಗಳಿಂದ ಕೂಡಿದೆ. ಎಚ್.ಎಚ್. ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರವರು G.G.S.I G.C.B., ಶ್ರೀಮಂತ ಶ್ರೀ ಸವಾಯಿ ತುಕ್ಕೋಜಿರಾವ್ ಹೋಳ್ಕರ್ ಇಂದೋರ್, Brief life shetch of shree shankar Babu Rao lande, village, Nayagaon. Po. Naavoor Dist, Ahmadnagar, Sree A.B.Marriyappa, M.A. LLB(Adovocate) Gl.Secry, Kurubara Sangha V.R.Hanumanthaiah(Author) ಲೇಟ್ ಎ. ಮರಿಯಪ್ಪನವರು ಜಮೀನ್ದಾರರು, ಚಾಮರಾಜಪೇಟೆ, ಬೆಂಗಳೂರು ಸಿಟಿ ಮತ್ತು ಪಾರ್ವತಿ ಪರಮೇಶ್ವರರ ಛಾಯಾಚಿತ್ರಗಳಿಂದ ಕೂಡಿದ ಸುಂದರ ಕೃತಿಯಾಗಿದೆ.

ಆರಂಭದಲ್ಲಿ ದೇವರ ಪ್ರಾರ್ಥನೆಯೊಂದಿಗೆ ಕಾಳಿದಾಸನು ತನ್ನ ಇಷ್ಟದೇವರಾದ ಪಾರ್ವತಿ ಪರಮೇಶ್ವರರನ್ನು ಸ್ತುತಿಸಿದ್ದಾನೆ.

> ವಾಗರ್ಥವಿವಸಂಪೃಕ್ತೌ । ವಾಗರ್ಥಪ್ರತಿ ಪತ್ತಯೇ ॥
> ಜಗತಃ ಪಿತರೌ ವಂದೇ । ಪಾರ್ವತಿಪರಮೇಶ್ವರೌ ॥[೨]

ಅಂದರೆ ಪದವೂ, ಅದರ ಅರ್ಥವೂ ಸೇರಿ ಹೇಗೆ ಒಂದಾಗಿರುತ್ತದೆಯೋ ಹಾಗೆಯೇ ಒಬ್ಬರನ್ನು ಬಿಟ್ಟೊಬ್ಬರು ಅಗಲದಿರುವ ನಮ್ಮ ಜಗತ್ತಿಗೆ ತಾಯಿ-ತಂದೆಗಳಾದ ಪಾರ್ವತಿ ಪರಮೇಶ್ವರರಿಗೆ ವಂದಿಸುತ್ತೇನೆ ಎಂದಿದ್ದಾರೆ. ಇದು ಆರ್ಯರ ಸಂಪ್ರದಾಯವನ್ನು ಸೂಚಿಸುತ್ತದೆ. ಜೊತೆಗೆ ಗುರುಸ್ತುತಿ, ಗಣಪತಿ ಸ್ತುತಿ, ಶಾರದ ಸ್ತುತಿ, ಶಿವಸ್ತುತಿ, ವಿಷ್ಣುಸ್ತುತಿ, ಶ್ರೀರಾಮ ಸ್ತುತಿಯ ನಂತರ ಕೃತಿರಚನೆ ಆರಂಭವಾಗುತ್ತದೆ. ಪ್ರಕರಣ ಒಂದರಲ್ಲಿ ಶ್ರೀ ಕಾಳಿದಾಸನ ಜಾತಿ ವಿವೇಚನೆ, ಶ್ರೀ ಕಾಳಿದಾಸನು ಜನ್ಮತಃ ಕುರುಬರವನೆಂಬುದಕ್ಕೆ ಕೆಲ ಮಹತ್ವದ ಆಧಾರಗಳನ್ನು ಕೊಡಲಾಗಿದೆ. ಪ್ರಕರಣ ಎರಡರಲ್ಲಿ ಕಾಳಿದಾಸನ ಬಾಲ್ಯ ಮತ್ತು ವಿದ್ಯಾಭ್ಯಾಸವನ್ನು ಕುರಿತು ಪರಿಚಯಿಸಿದ್ದಾರೆ. ಮೂರನೇ ಪ್ರಕರಣದಲ್ಲಿ ಕವಿಯ ಜನ್ಮಭೂಮಿಯ ವಿವೇಚನೆ, ಮಧ್ಯ ಭಾರತದ ವಾಸ್ತುಶಿಲ್ಪ ಪರಂಪರೆ, ಇಂದೋರ್ ಮುಂತಾದ ವಿಷಯವನ್ನು ಕುರಿತು ಚರ್ಚಿಸಲಾಗಿದೆ. ನಾಲ್ಕನೇ ಪ್ರಕರಣದಲ್ಲಿ ಕಾಳಿದಾಸನ ಕಾಲವನ್ನು

ಕುರಿತ ವಿವೇಚನೆ ಮಾಡಲಾಗಿದೆ. ಐದನೇ ಪ್ರಕರಣದಲ್ಲಿ ಭೋಜರಾಜನ ಕಾಳಿದಾಸನಾರು? ಮತ್ತು ಭೋಜ, ಕಾಳಿದಾಸ ಅಮರಜೋಡಿ ಹಾಗೂ ಕಾಳಿದಾಸನು ಕುರುಬನೆಂಬುದಕ್ಕೆ ಕೆಲವು ಆಕ್ಷೇಪಣೆಗಳನ್ನು ಕುರಿತು ೯ನೇ ಪ್ರಕರಣದಲ್ಲಿ ವಿಮರ್ಶಿಸಲಾಗಿದೆ.

ಏಳನೇ ಪ್ರಕರಣದಲ್ಲಿ ಭೋಜರಾಜನ ಜೀವನ ಚರಿತ್ರೆ ಮತ್ತು ಎರಡನೇ ಪ್ರಕರಣದಲ್ಲಿ ಭಾರವಿ ಕವಿಯ ಚರಿತ್ರೆಯನ್ನು ಪರಿಚಯಿಸಲಾಗಿದೆ. ಎಂಟನೇ ಪ್ರಕರಣದಲ್ಲಿ ಕಾಳಿದಾಸನ ಪ್ರಪ್ರಥಮ ಭೋಜಮಹಾರಾಜನ ಆಸ್ಥಾನ ಪ್ರವೇಶ ಮತ್ತು ಶ್ರೀ ಕಾಳಿದಾಸನು ಭೋಜ ಮಹಾರಾಜನನ್ನು ಪ್ರಶಂಸಿಸುವುದು ತಿಳಿದುಬಂದಿದೆ. ಹತ್ತನೇ ಪ್ರಕರಣದಲ್ಲಿ ಕಾಳಿದಾಸನು ಶ್ರೀ ಕಾಳಿಕಾಂಬೆಯನ್ನು ಕುರಿತು ಸ್ತುತಿಸುವುದು ಮತ್ತು ಅಥದಣ್ಣಕವು ಎಂಬ ವಿಷಯವನ್ನು ಚರ್ಚಿಸಲಾಗಿದೆ. ಹನ್ನೊಂದನೇ ಪ್ರಕರಣದಲ್ಲಿ ಭೋಜರಾಜನ ಕಾಲದ ಕೆಲವು ಕಥೆಗಳು, ಕಾಳಿದಾಸನ ಮತ್ಸ್ಯಭಕ್ಷಣದ ಕಥೆ, ಒಬ್ಬ ಪತಿವ್ರತೆಯ ಕಥೆ, ಒಬ್ಬ ವ್ಯಭಿಚಾರಿಣಿಯ ಸಾಹಸದ ಕಥೆ, ಕಾಳಿದಾಸನ ಔದಾರ್ಯದ ಕಥೆಗಳು, ಶಂಕರ ಕವಿಯ ಕಥೆ, ಕಟ್ಟಿಗೆ ತುಂಡುಗಳನ್ನು ತಂದ ಕಡುಬಡವನ ಕಥೆ, ಧನಂಜಯ ಕವಿಗಾದ ಗರ್ವಭಂಗದ ಕಥೆ, ಹೇಮಚಂದ್ರ ಕವಿಯ ಪಲಾಯನಸೂಕ್ತ ಪಠಿಸಿದ ಕಥೆ, ಕುಂಬಾರ ಕುವರಿಯ ಕಥೆ, ಒಬ್ಬ ಬೇಡರ ಹುಡುಗಿಯ ಕಥೆ, ಒಬ್ಬ ಗೊಲ್ಲ ತರುಣಿಯ ಕಥೆ, ಶಿವಶರ್ಮ ಕವಿಯ ಕಥೆ, ರಾಣಿ ಲೀಲಾವತಿದೇವಿಯ ಭಾವಚಿತ್ರ ಲಿಖಿತದ ಕಥೆ, ಅತಿ ವಿಚಿತ್ರದ ವಾವೆವರಸೆಗಳ ಕಥೆ, ಭೋಜರಾಜ ತನ್ನ ಚರಮ ಶ್ಲೋಕವನ್ನಾಲಿಸಿದ ಕಥೆ, ಒಬ್ಬ ವೇಶ್ಯೆಯ ವರ್ಣನೆ, ಒಬ್ಬ ನೇಯಿಗೆ ಕವಿಯ ಕಥೆ, ಕಾಂಚನಮಾಲೆಯ ಕಥೆ, ಭೋಜರಾಜನ ಕಾಲದ ಸ್ತ್ರೀ ವಿದ್ಯಾಭ್ಯಾಸ, ಒಬ್ಬ ವಿದ್ಯಾವತಿಯಾದ ಯುವತಿಯ ಕಥೆ, ಭೋಜರಾಜನಿಗಾದ ಅಶ್ವಿನಿ ದೇವತೆಗಳ ದರ್ಶನದ ಕಥೆ, ಕಾಳಿದಾಸ, ಬ್ರಹ್ಮರಾಕ್ಷಸರ ಸಂವಾದದ ಕಥೆ, ರಾಮೇಶ್ವರ ಕವಿಯ ಕಥೆ, ಒಂದು ವಿದ್ವದ್‌ಕುಟುಂಬದ ಕಥೆ, ಭೋಜರಾಜ, ಕಾಳಿದಾಸರ ಅವತಾರಾಂತ್ಯದ ಕಥೆ ಹೀಗೆ ಒಟ್ಟು ೩೧ ಕಥೆಗಳು ಶೃಂಗಾರ ವೀರ ಕರುಣಾದ್ಭುತಹಾಸ ಭಯಾನಕಃ. ಬೀಭತ್ಸ ರೌದ್ರ ಶಾಂತಾಶ್ವೇಸಾವೈ ನಟ ಏವಹಿ, ಎಂಬಂತೆ ನವರಸಗಳಿಂದಲೂ, ಆರ್ಥಿಕ ನೈತಿಕ, ಸಾಮಾಜಿಕ, ಬೌದ್ಧಿಕ, ಔದ್ಯೋಗಿಕ, ಶೈಕ್ಷಣಿಕ, ರಾಜಭಕ್ತಿ ನೀತಿಗಳಿಂದ ಕೂಡಿ ತುಂಬಾ ಬೋಧಪ್ರಯವಾಗಿರುವುದು ಕಂಡುಬಂದಿವೆ.

ಹನ್ನೆರಡನೆಯ ಪ್ರಕರಣದಲ್ಲಿ ಭೋಜರಾಜ ಕಾಳಿದಾಸನ ಮೇಲಿನ ಪ್ರಶಂಸೆಗಳು ಮತ್ತು ಶ್ರೀ ಕನಕದಾಸರ ಮೇಲಿನ ಪ್ರಶಂಸೆಗಳು ಹಾಗೂ ಪವಿತ್ರ ಉಣ್ಣೆ ವಸ್ತ್ರಗಳ ನೇಯಿಗೆ ಕಲೆಯ ಪ್ರಾಚೀನತ್ವ, ಮೂಲವೇದಗಳಾವಿರ್ಭಾವ(ಋಗ್ವೇದ ಕಾಲ) ಮತ್ತು ಕುರುಬರು ರಾಜ್ಯವಾಳಿದ ಕೃಷ್ಣಗಿರಿ ಜಿಂಜಿ ಕೋಟೆಗಳ ನಿರ್ಮಾಣ ಹೀಗೆ ಮುಂತಾದ ಮಹತ್ವಪೂರ್ಣವಾದ ಐತಿಹಾಸಿಕ ವಿಷಯಗಳನ್ನು ಹದಿಮೂರನೆಯ ಪ್ರಕರಣದಲ್ಲಿ ವರ್ಣಿಸಲ್ಪಟ್ಟಿದೆ.

ಒಟ್ಟಿನಲ್ಲಿ ಈ ಕೃತಿ ಭೋಜರಾಜ ಕಾಳಿದಾಸ ಮತ್ತು ಭಾರವಿ ಕವಿಯ ಜೀವನ ಚರಿತ್ರೆ ಮತ್ತು ಅವರ ಸಾಧನೆ ಸಿದ್ಧಿಗಳನ್ನು ತಿಳಿಸುವ ಕೃತಿಯಾಗಿದೆ.

೨. ಕಾಳಿದಾಸನ ಜೀವನ ಚರಿತ್ರೆ

ಕವಿಕುಲಗುರು ಎಂದು ವಿಶ್ವವಿಖ್ಯಾತನಾದ ಕಾಳಿದಾಸನ ಸ್ಥಾನ ಅದ್ವಿತೀಯವಾದುದು. ಇವನು ಹಿಂದಿನ ಕವಿಗಳನ್ನೆಲ್ಲಾ ಮರೆಯಿಸುವಂತೆ ತನ್ನ ಕಾವ್ಯಗಳಲ್ಲಿ ಯಶಸ್ವಿಯಾಗಿದ್ದಾನೆ. ಮುಂದಿನವರಿಗೆಲ್ಲಾ ಆದರ್ಶವನ್ನೊದಗಿಸಿದ್ದಾನೆ. ಮಹಾಕಾವ್ಯ ಎಂಬ ಸಾಹಿತ್ಯ ಪ್ರಕಾರದ ಪರಂಪರೆಯಲ್ಲಿ ತನ್ನದೇ ಆದ ವೈಶಿಷ್ಟ್ಯಗಳನ್ನು ತೋರಿಸಿದ ಈತನನ್ನು ಕುರಿತು ಸಂಸ್ಕೃತ, ಹಿಂದಿ, ಇಂಗ್ಲಿಷ್, ಕನ್ನಡ ಇತ್ಯಾದಿ ಭಾಷೆಗಳಲ್ಲಿ ಅನೇಕ ವಿದ್ವಾಂಸರು ಕೃತಿಗಳನ್ನು ರಚನೆ ಮಾಡಿದ್ದಾರೆ. ೨೦ನೇ ಶತಮಾನ ಹನುಮಂತಯ್ಯನವರು ಸಹ "ಭೋಜರಾಜನ ಕಾಳಿದಾಸ ಚರಿತ್ರೆ"ಯನ್ನು ೧೯೬೧ರಲ್ಲಿ ರಚಿಸಿದ್ದಾರೆ.

೧. ಶ್ರೀ ಕಾಳಿದಾಸನ ಜಾತಿ ವಿವೇಚನೆ

ಹನುಮಂತಯ್ಯನವರು ಕಾಳಿದಾಸನ ಜಾತಿಯ ವಿವೇಚನೆ ಕುರಿತು ಅನೇಕ ಆಧಾರಗಳೊಂದಿಗೆ ಚರ್ಚೆ ಮಾಡಿದ್ದಾರೆ. ಇವನು ತನ್ನ ಜಾತಿ ಯಾವುದು ಎಂದು ಎಲ್ಲಿಯೂ ಹೇಳಿಕೊಂಡಿಲ್ಲ. ಇದಕ್ಕೆ ಇವರು ಯಾಕೆ ಹೇಳಿಕೊಂಡಿಲ್ಲ ಎನ್ನುವುದಕ್ಕೆ ಅನೇಕ ಕಾರಣಗಳನ್ನು ಹೇಳುತ್ತಾ ಹೋಗಿದ್ದಾರೆ.

೧. ಪರಪ್ರೋಕ್ತ ಗುಣೋಯಸ್ತು । ನಿರ್ಗುಣೋಪಿ ಗುಣಿಭವೇತ್ ।
ಇಂದ್ರೋಪಿ ಲಘತಾಂಯಾತಿ । ಸ್ವಯಂ ಪ್ರಖ್ಯಾಪಿತೈಗುಣನಾತ್ ॥[೩]

ಅಂದರೆ ಈ ಶ್ಲೋಕದ ಅರ್ಥ "ಅನ್ಯರಿಂದ ಪ್ರಶಂಸಿಸಲ್ಪಟ್ಟರೆ ಗುಣವಿಲ್ಲದವನೂ ಗುಣವಂತನೆನಿಸಿ ಕೊಳ್ಳುತ್ತಾನೆ. ತನ್ನ ಗುಣಗಳನ್ನು ತಾನೇ ಹೊಗಳಿಕೊಂಡರೆ ದೇವೇಂದ್ರನಾದರೂ ಲಘು(ಹಗುರ-ಹಲಕ)ವಾಗುತ್ತಾನೆ" ಎಂದು, ದಾಸ ಸಾಹಿತ್ಯದಲ್ಲಿ ಕಂಡುಬಂದಿರುವ ದಾಸರ ಪದವನ್ನು ಈ ಮೇಲಿನ ಶ್ಲೋಕಕ್ಕೆ ಪೂರಕವಾಗಿ ಇದೆ. "ಲೋಕಾಪವಾದಕ್ಕೆ ಅಂಜಿ ನಡೆವುದು ವಿವೇಕ ಕೇಳೆಚ್ಚರಿಕೆ, ನಾಕೇಶನಾದರೂ ಬಿಡದಪವಾದ ಪರಾಕು ಕೇಳೆಚ್ಚರಿಕೆ, ಆತ್ಮಸ್ತುತಿ ಪರನಿಂದೆಯಂ ಮಾಳ್ಪನ ಸಿರಿದೊಲಗಿದಲ್ಲದೆ ಮಾಣ್ಬಳೇ? ಸ್ವಯೋಪಿತಿರತಿಃ ಲೋಕಾಪವಾದ್ಭಯಂ"

ಲೋಕಾಪವಾದಕ್ಕೆ ಅಂಜಿ ಕಾಳಿದಾಸನು ತನ್ನ ಯಾವುದೇ ಗ್ರಂಥಗಳಲ್ಲಿ ತನ್ನ ಆತ್ಮ ಚರಿತ್ರೆಯನ್ನು ಹೇಳಿಕೊಂಡಿರಲಾರ ಎಂಬುದು ಹನುಮಂತಯ್ಯನವರ ಅಭಿಪ್ರಾಯವಾಗಿದೆ.

'ಒಮ್ಮೆ ಕಾಳಿದಾಸನು ಪ್ರಪ್ರಥಮದಲ್ಲಿ ಭೋಜಮಹಾರಾಜನನ್ನು ಸಂದರ್ಶಿಸಲು ಹೋದಾಗ ಕಾಳಿದಾಸನನ್ನು ಕುರಿತು ನಿಮ್ಮ ನಾಮಧೇಯವೇನು? ಎಂದು ಕೇಳಿದಾಗ ಕಾಳಿದಾಸನು ತನ್ನ ಹೆಸರನ್ನು ಹೇಳಿಕೊಳ್ಳುವುದು ಕೂಡ ಆತ್ಮಶ್ಲಾಘನೆ(ಸ್ತುತಿ) ಎಂದೆಣಿಸಿ, ತನ್ನ ಹೆಸರನ್ನು ರಾಜನ ಕೈ

ಮೇಲೆ ಬರೆದು ತೋರಿಸಿದನೆಂದು' ಆಂಧ್ರದ ಶ್ರೀ ಸಹಸ್ರಾವಧಾನ ಚತುರಾನನ ಜಂಧ್ಯಾಲ ಸುಬ್ರಹ್ಮಣ್ಯಶಾಸ್ತ್ರಿ ಅವರ "ಭೋಜಕಾಳಿದಾಸ ಕಥಲು" ಎನ್ನುವ ಗ್ರಂಥದ ಉಲ್ಲೇಖವನ್ನು ಕೊಟ್ಟಿದ್ದಾರೆ.

ಕಾಳಿದಾಸನನ್ನು ಕುರಿತು ದೇಶವಾರು ಪ್ರಾಂತವಾಗಿ ಕರೆದಿರುವ ಹೆಸರನ್ನು ಪಟ್ಟಿ ಮಾಡಿದ್ದಾರೆ.

ಕರ್ನಾಟಕದಲ್ಲಿ– ಕುರುಬನೆಂದು, ಆಂಧ್ರದಲ್ಲಿ– ಗೊಲ್ಲವಾಡು, ಹಿಂದಿ ಭಾಷೆಯಲ್ಲಿ–ಗಡರಿಯಾ–ಗ್ವಾಲಾ, ಮರಾಠಿಯಲ್ಲಿ– ಧನಗಾರ, ಆಂಗ್ಲ ಭಾಷೆಯಲ್ಲಿ– ಷೆಫರ್ಡ್, ಕೌಹರ್ಡ್, ಪಾಸ್ಟರ್, ಸಂಸ್ಕೃತ ಭಾಷೆಯಲ್ಲಿ– ಅವಿಪಾಲ, ಅಜಪಾಲ ಮೇಷಪಲ, ಗೋಪಾಲ ಎಂದು ಹೀಗೆ ಆಯಾ ದೇಶ ಭಾಷೆಗಳಲ್ಲಿ ಕಂಡುಬಂದಿರುವ ಕಾಳಿದಾಸನು ಮೂಲತಃ ಇವನು ಪವಿತ್ರವಾದ ಹಾಲುಮತನೇ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.[೫] ಆದರೆ ಕೆಲವರು ಕಾಳಿದಾಸನ್ನು ಬ್ರಾಹ್ಮಣನಾಗಿರಬೇಕೆಂದು ಊಹಿಸಿದ್ದಾರೆ.

ಕಾಳಿದಾಸನು ಓರ್ವ ಬ್ರಾಹ್ಮಣನ ಮಗನಿದ್ದನು.[೬] ಅವನು ಐದಾರು ತಿಂಗಳದವನಿದ್ದಾಗ ಆತನ ತಂದೆ–ತಾಯಿಗಳು ತೀರಿಕೊಂಡರು, ಅನಾಥನಾದನು. ಇಂಥ ಸ್ಥಿತಿಯಲ್ಲಿ ಒಬ್ಬ ಗೋವಳನ ಕಣ್ಣಿಗೆ ಬಿದ್ದನು. ಆ ಗೋವಳನು ಅವನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಬೆಳೆಸಿ ದೊಡ್ಡವನನ್ನಾಗಿ ಮಾಡಿದನು. ಆತನು ಸ್ವತಃ ಗೌರವವರ್ಣದವನೂ, ಸುಕುಮಾರ ಶರೀರವುಳ್ಳವನೂ ಇದ್ದುದರಿಂದ ಬೇರೆ ಗೋವಳಿಗ ಬಾಲಕರೊಡನೆ ಆಡುತ್ತಿದ್ದಾಗ ಎದ್ದು ಕಾಣುವಂತಿದ್ದನು. ಆದರೂ ಆತನಿಗೆ ಶಿಕ್ಷಣವೇನೂ ದೊರೆಯದ್ದರಿಂದ ಹದಿನೆಂಟನೆಯ ವರ್ಷದವರೆಗೆ ಅಶಿಕ್ಷಿತನಾಗಿಯೇ ಉಳಿದನು. ಅವನು ವಾಸಿಸುತ್ತಿದ್ದ ನಗರದ ಅರಸನಿಗೆ ಓರ್ವ ಅತ್ಯಂತ ರೂಪವತಿಯೂ ಕಲಾಭಿಜ್ಞಳೂ ಆದ ಮಗಳಿದ್ದಳು. ಆಕೆಯೂ ಮದುವೆಗೆ ಪ್ರೌಢಳಾದ ನಂತರ ಅರಸನು ಅವಳಿಗೆ ಅನೇಕ ವರಗಳನ್ನು ನೋಡಿದನು. ಆದರೆ ಅವರಲ್ಲಿ ಯಾರು ಸಕಲಶಾಸ್ತ್ರ ಕಲಾವಿದರಿರಲಿಲ್ಲವಾದ್ದರಿಂದ ಆಕೆಯ ಮನಸ್ಸೊಪ್ಪಲಿಲ್ಲ. ಕೊನೆಗೆ ಅರಸನು ಬೇಸತ್ತು ವರನನ್ನು ಹುಡುಕುವ ಕಾರ್ಯವನ್ನು ತನ್ನ ಮಂತ್ರಿಗೆ ಒಪ್ಪಿಸಿದನು. ಆ ಮಂತ್ರಿಗೆ ಅರಸುಕುವರಿಯ ಮೇಲೆ ಕಾರಣಾಂತರದಿಂದ ಸೇಡು ತೀರಿಸಿಕೊಳ್ಳಬೇಕಾಗಿತ್ತು. ಒಮ್ಮೆ ಆತನು ತನ್ನ ಮನೆಯ ಹೊರಾಂಗಣದಲ್ಲಿ ಕುಳಿತಾಗ ಗೋವಳಿಗರ ಹುಡುಗರೊಡನೆ ಹೋಗುತ್ತಿದ್ದ ಆ ಬ್ರಾಹ್ಮಣ ಕುಮಾರನು ಮಂತ್ರಿಗೆ ಕಾಣಿಸಿದನು. ಒಡನೆಯೇ ಆತನಿಗೊಂದು ಯುಕ್ತಿಯು ತಲೆದೋರಿ, ಆ ಬ್ರಾಹ್ಮಣ ಕುಮಾರನನ್ನು ತನ್ನ ನಿವಾಸಕ್ಕೆ ಬರಮಾಡಿಕೊಂಡು ತನ್ನಲ್ಲಿರುವ ಬೆಲೆಯುಳ್ಳ ವಸ್ತ್ರಾಲಂಕಾರಗಳಿಂದ ಆತನನ್ನು ಅಲಂಕರಿಸಿ, ಅನೇಕ ತರುಣ ಶಾಸ್ತ್ರ ಪಂಡಿತ ಶಿಷ್ಯವೃಂದವನ್ನು ಅವನಿಗೆ ಒದಗಿಸಿಕೊಟ್ಟು, ಅರಸುಕುವರಿಗೆ ಕಾಶಿಯಿಂದ ವಿದ್ವಾಂಸ ಪಂಡಿತನೊಬ್ಬನು ಬಂದಿದ್ದಾನೆಂದು ಹೇಳಿಕಳಿಸಿದನು ಮತ್ತು ಆತನನ್ನು ಗೌರವಿಸಿ ಪರೀಕ್ಷೆಗೊಳಪಡಿಸಬೇಕೆಂದು ತಿಳಿಸಿದನು. ಆಕೆಯ ಅನುಮತಿಯಿಂದ ಆತನನ್ನು ಶಿಷ್ಯವೃಂದ

ಸಮೇತವಾಗಿ ರಾಜಸಭೆಗೆ ಕರೆಯಿಸಲಾಯಿತು. ಅಲ್ಲಿಯ ಪಂಡಿತರು ಆತನ ಶಿಷ್ಯರಿಂದಲೇ ಸೋಲನ್ನನುಭವಿಸಬೇಕಾದುದರಿಂದ ಅರಸುಕುವರಿಗೆ ಆತನನ್ನು ಪರೀಕ್ಷೆಗೊಳಪಡಿಸುವುದು ಅವಶ್ಯವಿಲ್ಲವೆಂದೆನಿಸಿತು. ಆತನು ಸ್ವತಃ ಗೌರವರ್ಣದವನೂ ನೋಡುವುದಕ್ಕೆ ಲಕ್ಷಣವಾಗಿಯೂ ಇದ್ದುದರಿಂದ ಅರಸುಕುವರಿಯು ಆತನನ್ನು ಪ್ರೇಮಿಸಿ ಒಡನೆಯೇ ಆತನನ್ನು ವರಿಸಿದಳು. ಆದರೆ ಮುಂದೆ ನಾಲ್ಕಾರು ದಿನಗಳಲ್ಲಿಯೇ ಆತನ ನಿಜಸ್ವರೂಪವು ಹೊರಬಿದ್ದಿತು. ಆತನನ್ನು ಕೊಂದುಬಿಡುವೆನೆಂದು ಹೆದರಿಸಿ ಆಕೆಯು ಆತನಿಂದ ಎಲ್ಲಾ ವಿಷಯವನ್ನು ತಿಳಿದುಕೊಂಡಳು. ಆಗ ಆಕೆಗೆ ಬಹಳ ದುಃಖವಾಯಿತು. ಆದರೂ ವಿವಾಹವಾದ ನಂತರ ಮಾಡುವುದೇನು? ಆಮೇಲೆ ಆಕೆಯು ಆತನಿಗೆ ಕಾಳಿಕಾದೇವಿಯ ಉಪಾಸನೆಯನ್ನು ಮಾಡಲು ಹೇಳಿದಳು. ಆತನು ದೇವಿಯ ಪಾದದ ಹತ್ತಿರ ಧರಣಿ ಕುಳಿತನು ಮತ್ತು ಅದರಿಂದ ದೇವಿಯ ಪ್ರಸನ್ನಳಾಗದಿದ್ದಾಗ ತನ್ನ ಶಿರಚ್ಛೇದವನ್ನು ಮಾಡಿಕೊಳ್ಳುವುದಕ್ಕೆ ಸಿದ್ಧನಾದನು. ಆತನ ಭಕ್ತಿ ಮತ್ತು ದೃಢ ನಿಶ್ಚಯವನ್ನು ಕಂಡು ದೇವಿಯು ಪ್ರಸನ್ನಳಾಗಿ ಆತನ ತಲೆಯ ಮೇಲೆ ತನ್ನ ವರದ ಹಸ್ತವನ್ನಿರಿಸಿದಳು. ಅಂದಿನಿಂದ ಆತನು ಅತ್ಯಂತ ವಿದ್ವಾಂಸ ಹಾಗೂ ಪ್ರತಿಭಾಸಂಪನ್ನವಾದ ಕವಿಯಾಗಿ ಕಾಳಿದಾಸನೆಂಬ ಹೆಸರಿನಿಂದ ಪ್ರಸಿದ್ಧನಾದನು ಎಂಬ ಕಥೆಯಿದೆ.

ಇದನ್ನು ಹನುಮಂತಯ್ಯನವರು ಒಪ್ಪದೇ ಇದು ಇವರ ಕೇವಲ ಅವಿವೇಕ ಹಾಗೂ ಅವಿಚಾರದ ಭ್ರಾಂತಿಯೇ ಹೊರತು ಭಾವನೆ, ಸದ್ವಿಚಾರದ ಮಾತಲ್ಲ ಎಂದರು. ಇವರ ಭ್ರಾಂತಿಯಂತೆ ಬ್ರಾಹ್ಮಣರೆಲ್ಲ ಕಾಳಿದಾಸರೂ, ಕುರುಬರೆಲ್ಲಾ ಅವಿದ್ಯಾವಂತರೇ? ಎಂದು ಪ್ರಶ್ನಿಸಿದ್ದಾರೆ. ಯಾವಾತನು ಸಕಲ ಸದ್ಗುಣಸಂಪನ್ನನೂ ಸತ್ಯಸಂಧನೂ, ಪರಮತಸಹಿಷ್ಣುವೂ, ಪರಪೀಡೆಯಲ್ಲಿ ಪರಾಙ್ಮುಖನೂ, ವಿಶಾಲಹೃದಯನೂ, ವಿದ್ಯಾವಿಶಾರದನೂ, "ಆತ್ಮವತ್ಸರ್ವ ಭೂತಾನಿ" ಎಂಬ ಭಾವನೆಯುಳ್ಳವನೋ ಅಂತಹ ಮಹಾತ್ಮನನ್ನು ಬ್ರಾಹ್ಮಣ(ಬ್ರಹ್ಮಜ್ಞಾನಿ) ಎಂದರೂ ಎನ್ನಬಹುದೇ ಹೊರತು ಕೇವಲ ಜನ್ಮದಿಂದ ಬ್ರಾಹ್ಮಣನಾಗುವ ಸಂಭವವೂ ಇಲ್ಲ. ಸಮಂಜಸವೂ ಇಲ್ಲ ಎಂದು ಹೇಳಿದ್ದಾರೆ. ಹಾಗೆಯೇ ಇದಕ್ಕೆ ಸಂಬಂಧಪಟ್ಟ ಒಂದು ಶ್ಲೋಕವನ್ನು ಹೀಗೆ ಹೇಳಿದ್ದಾರೆ:

"ಜನ್ಮತಾ ಜಾಯತೇ ಶೂದ್ರಃ । ಕರ್ಮಣಾ ಜಾಯತೇದ್ವಿಪಃ ।
ವೇದಾಭ್ಯಾಸ ಸಾಧ್ಭವೇದ್ವಿಪ್ರಃ । ಬ್ರಹ್ಮಜ್ಞಾನತುಬ್ರಾಹ್ಮಣಃ ।[2]

ಈ ಶಾಸ್ತ್ರಾಭಿಪ್ರಾಯಕ್ಕೆ ಸಂಬಂಧಿಸಿದ ಮ್ಯಾಕ್ಸ ಮುಲ್ಲರ್ ಅವರು Papular Educator ಕೃತಿಯಲ್ಲಿ ಪ್ರಸ್ತಾಪಿಸಿದ(The Shepherds of the Punjab became the Bramins of India) ಅಂದರೆ ಪಂಜಾಬಿನಲ್ಲಿನ ಆರ್ಯ(ಕುರುಬ) ಕ್ರಮೇಣ ಭಾರತ ದೇಶದ ಬ್ರಾಹ್ಮಣರಾಗಿ ಪರಿಣಮಿಸಿದರೆಂದು ಈ ಮೇಲಿನ ಶ್ಲೋಕಕ್ಕೆ ಸ್ಪಷ್ಟಪಡುತ್ತದೆ.

ಶ್ರೀ ಕಾಳಿದಾಸನು ಜನ್ಮತಃ ಕುರುಬನೆಂಬುದಕ್ಕೆ ಕೆಲವು ಆಧಾರಗಳನ್ನು ನೀಡಿದ್ದಾರೆ.

೧. ಸಂಸ್ಕೃತ ಭಾಷಾ ಭೂಷಿತನಾದ ಜರ್ಮನ್ ದೇಶದ "ಗಯಟೆ" ಎಂಬ ವಿದ್ವಾಂಸನು ಕಾಳಿದಾಸನನ್ನು ಕುರಿತು "The story of kalidasa, that immortal poet of India, made medance with joy over his Sakuntala; born as a shepherd (ಕುರುಬ) he became the greatest of all time".[೮] ಎಂದು ಪ್ರಶಂಸಿಸಿದ್ದಾರೆ.

೨. ಕುರುಬರ ಹುಡುಗನಾಗಿದ್ದವನು ಅಮರ ಕವಿಯಾದ್ ಎಂದು ಕಾಳಿದಾಸ ಜಯಂತಿ ಉಜ್ಜಯನೀ ತಾಯಿನಾಡು ದಿನಪತ್ರಿಕೆ ೧೯೫೮ರಲ್ಲಿ ದಾಖಲಾಗಿರುವುದನ್ನು ಹೇಳಿದ್ದಾರೆ.

೩. ಆದ್ಯ ರಾಮಾಚಾರ್ಯರು ೧೯೫೮ರಲ್ಲಿ ತಾಯಿನಾಡು ಪತ್ರಿಕೆಗೆ ಕೊಟ್ಟಿರುವ ಪ್ರಸ್ತುತ ಲೇಖನದಲ್ಲಿ ಕಾಳಿದಾಸನು ಜನ್ಮತಃ ಕುರುಬರವನು[೧೦] ಎಂದು ಪ್ರಸ್ತಾಪವಾಗಿದೆ.

೪. ವಿಕ್ರಮಾರ್ಕರಾಯನ ಆಳ್ವಿಕೆಯ ಐದುನೂರು ವರ್ಷಗಳ ತರುವಾಯ ಭೋಜರಾಜನು ಪಟ್ಟಕ್ಕೆ ಬಂದನು. ಭೋಜರಾಜನು ಸಂಸ್ಕೃತ ಭಾಷಾವಿಶಾರದನೂ, ಭಾಷಾಭಿಮಾನಿಯೂ ಆಗಿದ್ದನು. ಇವನ ರಾಜ್ಯದಲ್ಲಿ ಕುರಿಗಳನ್ನು ಮೇಯಿಸುವ "ಕುರುಬ ಕಾಳಿದಾಸನೂ ಇದ್ದು "ರಘುವಂಶ" ಮೇಘದೂತವೆಂಬ ಮಹಾಕಾವ್ಯಗಳನ್ನು ರಚಿಸಿದನು.[೧೧] ಭೋಜರಾಜನು ತನ್ನ ಬಳಿಗೆ ಸಂಸ್ಕೃತದಲ್ಲಿ ಉತ್ತಮವಾದ ರಸಭರಿತವಾದ ಶ್ಲೋಕಗಳನ್ನು ರಚಿಸಿಕೊಂಡು ಬಂದವರಿಗೆ ಯಥೇಚ್ಛವಾಗಿ ಹಣವನ್ನು ಕೊಟ್ಟು ಸನ್ಮಾನಿಸಿ ಕಳುಹಿಸುತ್ತಿದ್ದನು ಎಂದು ಶೀ ದಯಾನಂದ ಸರಸ್ವತಿ ಸ್ವಾಮೀಜಿ ಅವರು Kannada Edition ಪುಟ ೫೨೨ರಲ್ಲಿ ದಾಖಲಾಗಿದೆ. ಭೋಜರಾಜನ ಆಸ್ಥಾನದ ಕವಿಯೇ ಕಾಳಿದಾಸ ಎಂಬುದು ಹನುಮಂತಯ್ಯನವರ ಅಭಿಪ್ರಾಯ.

ಕಾಳಿದಾಸನು ೧೦ನೇ ಶತಮಾನದಲ್ಲಿ ಮಧ್ಯಪ್ರದೇಶದ ಮಾಲವದೇಶವೆಂದು ಕರೆಯಲಾಗುತ್ತಿದ್ದ ಉಜ್ಜೈನಿ ಸುತ್ತಲಿನ ಧಾರಾನಗರದ ರಾಜ ನವರತ್ನಗಳಲ್ಲಿ ಒಬ್ಬನಾದ ಮಹಾಕವಿ ಕಾಳಿದಾಸನು ಕುರುಬ ಕುರಿಗಾರನಾಗಿದ್ದುದು ಇತಿಹಾಸ ಸತ್ಯ. ಕಾಳಿದಾಸ ಕುರುಬ ಜನಾಂಗದವ ನೆಂಬುದು ಪರಂಪರೆಯಾಗಿ ತಲೆಮಾರಿನಿಂದ ತಲೆಮಾರಿಗೆ ಬಾಯಿಂದ ಬಾಯಿಗೆ ಹರಿದು ಬಂದಿರುವುದು ಸತ್ಯ ಸಂಗತಿ.

ಎಂ.ಎಲ್.ವಿಜಯಕುಮಾರಿ ಅವರು "ಕಾಳಿದಾಸನು ಎಲ್ಲಾ ಪ್ರಾಚೀನ ಅರ್ವಾಚೀನ ದೇಶೀಯ ಹಾಗೂ ವಿದೇಶೀಯ ವಿದ್ವಾಂಸರಿಂದ ಮುಕ್ತಕಂಠದಿಂದ ಪ್ರಶಂಸಿಸಲ್ಪಟ್ಟಿರುವ ಅದ್ವಿತೀಯ ಸಂಸ್ಕೃತ ಕವಿ ಎಂದು ಪರಿಗಣಿಸಿದ್ದಾರೆ. ವಿಶ್ವದ ಸರ್ವಶ್ರೇಷ್ಠ ಸಾಹಿತ್ಯ ಸಾಮ್ರಾಟರ ಮಾಲಿಕೆಯಲ್ಲಿ ಆತನ ಹೆಸರು ರಾರಾಜಿಸುತ್ತದೆ. ಮಹಾಮೇಧಾವಿ ಸಂಸ್ಕೃತ ಸಾಹಿತ್ಯದಲ್ಲಿ ಸರಿಸಾಟಿಯಿಲ್ಲದ ಕೃತಿಗಳನ್ನು

ರಚಿಸಿ ಇಂಗ್ಲೆಂಡಿನ ಹೆಸರಾಂತ ನಾಟಕಗಾರ ಶೇಕ್ಸ್‌ಪಿಯರ್‌ಗೆ ಸಮಾನನಾಗಿ ಬಾಳಿ ಬದುಕಿದವನು ಎಂದು ಹೇಳಿ, ಕಾಳಿದಾಸನು ಉಜ್ಜೈನಿಯಲ್ಲಿ ಕ್ರಿ.ಶ. ಒಂದನೆಯ ಶತಮಾನದಲ್ಲಿ ಕುರಿಗಾಹಿಯಾಗಿ ಜನಿಸಿದ್ದು ಸತ್ಯಸಂಗತಿ ಯಾಗಿರುವುದು. ಪಶ್ಚಿಮ ಬಂಗಾಳದವನೆಂತಲೂ ಕೆಲವರ ನಂಬುಗೆಯಾದರೂ ಬಹುತೇಕವಾಗಿ ಉಜ್ಜೈನಿಯಲ್ಲಿ ಕುರಿಗಾಹಿಯಾಗಿ ಜನಿಸಿದ್ದನು ಎನ್ನುವುದೇ ಒಪ್ಪತಕ್ಕ ಮಾಹಿತಿಯಾಗಿರುವುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧೨]

ಕಾಳಿದಾಸನ ಕೃತಿಗಳನ್ನು ಪರಿಶೀಲಿಸಿದಾಗ ರಘುವಂಶದ ಆರಂಭದಲ್ಲಿ ಪಾರ್ವತಿ ಪರಮೇಶ್ವರರನ್ನು ಸ್ತೋತ್ರ ಮಾಡಿರುವುದು ಕುಮಾರಸಂಭವ ಕಾವ್ಯವು ಪಾರ್ವತಿ ಪರಮೇಶ್ವರರಿಗೆ ಸಂಬಂಧಪಟ್ಟಿರುವುದರಿಂದಲೂ ಮೇಘಸಂದೇಶ ಕಾವ್ಯದಲ್ಲಿ ಅನೇಕಸಾರಿ ಶಿವ–ಪಾರ್ವತಿಯರ ಪ್ರಸ್ತಾಪವಿದೆ. ಇವನ ನಾಟಕಗಳಲ್ಲಿ ಪ್ರತಿಯೊಂದರ ಮೊದಲ ಶ್ಲೋಕವು ಶಿವಸ್ತುತಿಯಾಗಿರುವುದು ಕಂಡುಬಂದಿದೆ. ಕಾರಣ ಆರ್ಯ(ಕುರುಬ)ರ ಸಂಪ್ರದಾಯದಂತೆ ಮೊದಲು ಪ್ರಾರ್ಥಿಸುವುದು ಹಾಲುಮತದ ಹುಟ್ಟಿಗೆ ಕಾರಣರಾದ ಪಾರ್ವತಿ ಪರಮೇಶ್ವರರನ್ನು ಕುರಿತು. ಈ ಹಿನ್ನೆಲೆಯಲ್ಲಿ ಕಾಳಿದಾಸನು "ಕುರುಬ"ನೆಂದು ಹೇಳುವುದರಲ್ಲಿ ಎರಡು ಮಾತಿಲ್ಲ.

ಕಾಳಿದಾಸನ ಬಾಲ್ಯ ಮತ್ತು ವಿದ್ಯಾಭ್ಯಾಸ

ಮಕ್ಕಳಿಲ್ಲದೆ ಪರಿತಪಿಸುತ್ತಿರುವ ಕಾಳಿದಾಸನ ತಂದೆತಾಯಿಗಳು ಕಾಳಿಕಾದೇವಿಯನ್ನು ಪೂಜಿಸಿ ಬೇಡಿಕೊಂಡು ಭಕ್ತಿಯಿಂದಾಗಿ ಗಂಡುಮಗುವನ್ನು ಪಡೆದರು. ಕಾಳಿಕಾದೇವಿಯ ವರಪ್ರಸಾದದಿಂದ ಹುಟ್ಟುವ ಮಗುವಿಗೆ ಕಾಳಿದಾಸನೆಂದು ನಾಮಕರಣ ಮಾಡಿದರು. ಚಿಕ್ಕಂದಿನಿಂದಲೂ ಬುದ್ಧಿವಂತನೂ ಕರ್ತವ್ಯನಿರತನೂ ಶ್ರಮಜೀವಿಯೂ ಆಗಿದ್ದು, ಅನೇಕ ಗ್ರಂಥಗಳನ್ನು ಬರೆದನು.

ಕಿಂಜಾತೈರ್ಬಹುಭಿಃ ಪುತ್ರೈಃ । ಶೋಕಸಂತಾಪ ಕಾರಕೈಃ ।
ವರಮೇಕೋ ಗುಣೇ ಪುತ್ರೋ । ಯೇನವಂಶಃ ಪ್ರಶಸ್ಯತೇ ॥[೧೩]

ಅಂದರೆ, ಶೋಕಸಂಕಟಗಳನ್ನುಂಟು ಮಾಡುವಂತ ಮಕ್ಕಳನೇಕರು ಹುಟ್ಟುವುದಕ್ಕಿಂತ ಕುಲಕ್ಕೆ ಕೀರ್ತಿ ತರುವಂತಹ ಸುಪುತ್ರನೋರ್ವನೇ ಸಾಕೆಂದು ಭಾವವು ಈ ಶ್ಲೋಕದ ಅರ್ಥ.

ಇವನ ಜಾಣ್ಮೆಯನ್ನು ಕಂಡು ವಿದ್ವಾಂಸರೂ ವಿಸ್ಮಯಗೊಳ್ಳುತ್ತಿದ್ದರು. ಇವನು ವಾಗ್ದೇವಿಯ ಅವತಾರಪುರುಷನಲ್ಲದೆ ಬೇರಲ್ಲವೆಂದೂ, ಇಂತಹ ಮಗನನ್ನು ಪಡೆದ ತಂದೆ–ತಾಯಿಗಳ ಪುಣ್ಯ ಎಂದು ಹರಸುತ್ತಿದ್ದರು. ಕಾಳಿದಾಸನು ಬಾಲ್ಯದಲ್ಲಿ ತನ್ನ ಊರೊಳಗೆ ರಾತ್ರಿಯ ಹೊತ್ತಿನಲ್ಲಿ ತನ್ನ ಜೊತೆಯ ಹಾಗೂ ಸ್ವಲ್ಪ ದೊಡ್ಡವರೂ ಆದ ಹುಡುಗರು ಕೂಡಿ ಮಾಡಿಕೊಂಡಿದ್ದ ಯಕ್ಷಗಾನ(ಬಯಲಾಟ) ನಾಟಕ ಶಾಲೆಯಲ್ಲಿ ತಾನೂ ಭಾಗವಹಿಸಲು ಹೋಗುತ್ತಿದ್ದನು. ಮುಮ್ಮೇಳ

ನಾಯಕನಾಗಿ ನಾಟಕಗಳನ್ನು ಬರೆಯುವ ಕಲೆಯಲ್ಲಿ ಅವನಿಗೆ ಅದ್ಭುತ ಅನುಭವವುಂಟಾಗಿರಬೇಕೆಂದು ಹನುಮಂತಯ್ಯನವರು ಪ್ರಸ್ತಾಪಿಸಿದ್ದಾರೆ. ಹಾಗೆಯೇ ಶ್ರೀ ದಯಾನಂದ ಸರಸ್ವತೀ ಸ್ವಾಮೀಜಿಯವರು ತಮ್ಮ ಸತ್ಯಾರ್ಥ ಪ್ರಕಾಶನದ ೫೨೨ನೆಯ ಪುಟದಲ್ಲಿ ಹೇಳಿರುವಂತೆ ಕಾಳಿದಾಸನು ಬಾಲ್ಯದಲ್ಲಿ ದನ–ಕುರಿಗಳನ್ನು ಮೇಯಿಸಿಕೊಂಡು ಬರಲು ಹುಲ್ಲುಗಾವಲುಗಳಿಗೆ ಹೋಗುತ್ತಿದ್ದನೆಂಬುದರಿಂದ ಈತನು ಭೂಗೋಳ–ಖಗೋಳ ಶಾಸ್ತ್ರಜ್ಞಾನ ಅಭಿವೃದ್ಧಿಗೂ, ಲೋಕ ವ್ಯವಹಾರ ಜ್ಞಾನಾಭಿವೃದ್ಧಿಗೂ ತುಂಬಾ ಸಾಧನ, ಸಹಾಯ ಉಂಟಾಯಿತೆಂದು ಹೇಳಿದ್ದಾರೆ.[೧೪] ಅಂದರೆ ಹುಲ್ಲುಗಾವಲುಗಳಿರುವ ಕಣಿವೆಯ ಪ್ರದೇಶವು ಸರ್ವದಾ ಶಾಂತಪ್ರಶಾಂತವಾಗಿ ರಮ್ಯವಾಗಿರುತ್ತದೆ. ಅಲ್ಲಿ ಸ್ವಾಭಾವಿಕವಾದ ಪ್ರಕೃತಿ(ಸೃಷ್ಟಿ) ಸೌಂದರ್ಯವು ಪ್ರಕಾಶಗೊಳ್ಳುತ್ತಿದೆ. ಬಣ್ಣಬಣ್ಣದ ಹೂಗಳಿಂದ ವಿಕಸಿತವಾದ ತರುಲತಾದಿಗಳಿಂದಲೂ, ಸದಾ ಪ್ರವಹಿಸುತ್ತಿರುವ, ನದಿಗಳಿಂದಲೂ, ಕಲಕಲರವಗೈವ ನಾನಾವಿಧ ಬಣ್ಣದ ಪಕ್ಷಿ ಸಮೂಹಗಳಿಂದಲೂ ಹಾಗೂ ದಿಕ್ತಟಗಳಿಗೂ ಪರಿಮಳವನ್ನು ಬೀರುವ ಮಂದಮಾರುತದಿಂದಲೂ ಕೂಡಿರುವ ಪ್ರದೇಶವು ಪ್ರವಾಸಿಗರ ಕಣ್ಮನಗಳನ್ನು ತಣಿಸುವಂತಹ ಪ್ರಶಾಂತ ಪ್ರದೇಶದಲ್ಲಿ ಕಾಳಿದಾಸನು ಆಕಳುಗಳನ್ನು ಕಾಯುತ್ತಿರುವನು. ಬಾಲಕರಾಡುವ ನಾನಾ ಆಟಪಾಠಗಳನ್ನಾಡುವನು. ಪಿಳ್ಳಂಗೋವಿಗಳನ್ನು ನುಡಿಸುವನು. ಇವನು ಒಂದು ಮರದಡಿಯಲ್ಲಿ ಕುಳಿತು ತನ್ನ ಕುರಿ, ಆಕಳು, ಆಡುಗಳು ಆ ಹುಲ್ಲುಗಾವಲಿನಲ್ಲಿ ದನಗಾರ ಬಾಲಕರು ನುಡಿಸುವ ಪಿಳ್ಳಂಗೋವಿಯ ನಾದವನ್ನು ಆಲಿಸಿಕೊಂಡು ಸ್ವೇಚ್ಛೆಯಾಗಿ ಮೇಯುತ್ತಿರುವುದನ್ನು ಅಲ್ಲಿ ಹುಡುಗರಾಡುವ ಆಟಪಾಠ ವಿನೋದಗಳನ್ನು ನೋಡುತ್ತಾ ವಿಚಾರಮಗ್ನನಾಗಿರುವನು. ಅಲ್ಲಿ ಮೇಘಮಂಡಲದೊಳಗೆ ಕ್ಷಣಕ್ಷಣಕ್ಕೂ ಆಗುವ ಚಲನ–ವಲನ ಪರಿವರ್ತನಗಳನ್ನು ಹಾಗೂ ದೇವ, ಮಾನವ, ಮೃಗ ಪಶು, ಪಕ್ಷಾದಿಗಳಂತಹ ದೃಶ್ಯಗಳು ಭಾವಿಸಿದಂತೆ ಕಂಡುಬಂದು ಅವು ಹಾಗೆಯೇ ಮೋಡಗಳ ಮಧ್ಯದಲ್ಲಿ ಹರಿದಾಡಿ ಅದೃಶ್ಯವಾಗುವಂತಹ ದೃಶ್ಯಗಳನ್ನು ವೀಕ್ಷಿಸಿ ಅಚ್ಚರಿಗೊಳ್ಳುತ್ತಿರುವನು. ಇಂತಹ ಜಲದ್ರಕ್ಷಕನ ಜಗತ್ಸೃಷ್ಟಿ ಸೌಂದರ್ಯ ರಹಸ್ಯವೆಲ್ಲವೂ ಆತನ ಹೃತ್ಪಟಲದ ಮೇಲೆ ಚಿತ್ರಿಸಿದಂತೆ ಸುಸ್ಥಿರಗೊಂಡುದರಿಂದ ಆತನ ಭವಿಷ್ಯದ ಕವಿತಾ ಪ್ರಭಾವಕ್ಕೆ ಅಣಿಮಾಡಿ(ಅಳವಡಿಸಿ) ಕೊಟ್ಟಂತೆ ಸಹಾಯವೂ, ಸಾಧನವೂ ಆಗಿರಬೇಕೆಂದು ಇತಿಹಾಸಜ್ಞರು ಟೀಕಿಸಿರುತ್ತಾರೆ. ಈ ಮೇಲಿನ ಅನುಭವದಿಂದ 'ಮೇಘಸಂದೇಶ'ವೆಂಬ ಮಹಾಕಾವ್ಯವನ್ನು ರಚಿಸಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ.[೧೫]

ಈ ವರ್ಣನೆಯನ್ನು ಆಂಗ್ಲ ಕವಿ ಈ ರೀತಿ ವರ್ಣಿಸಿದ್ದಾನೆ:

Who had the gentler and easier task of leading their sheep into a pleasant green, of watering them at a fresh spring and of taking them to the shade of spreading trees? They are the shepherds.

[illegible]

Of all the work of farming sheep reaing is perhaps least under stood by townsmen, and become for this ignorance must be laid in part at least to the charge of the Elizabethans.

They have given us shepherds who wear fine clothes and have ample time to play upon musical instrements and make love to attractive village maidens. Their sheep seem to concern them more than any thing else.[೧೬]

ಹಿಂದಿನ ಕಾಲದಲ್ಲಿ ವಿದ್ಯಾವ್ಯಾಸಂಗಕ್ಕೆ ಸ್ಕೂಲ್, ಶಾಲೆ, ಕಾಲೇಜು, ವಿಶ್ವವಿದ್ಯಾಲಯ ಮೊದಲಾದ ಸೌಕರ್ಯಗಳಿರದಿದ್ದರೂ ವರಕವಿಗೆ ಇಡೀ ವಿಶ್ವವೇ ವಿಶ್ವವಿದ್ಯಾಲಯವಾಗಿದ್ದಿತೆಂದು ಹೇಳಬಹುದು.

ಕಾಳಿದಾಸನ ಜನ್ಮಭೂಮಿಯ ವಿವೇಚನೆ

ಹನುಮಂತಯ್ಯನವರು ಕಾಳಿದಾಸನ ಜಾತಿ, ಬಾಲ್ಯ, ವಿದ್ಯಾಭ್ಯಾಸದ ಕುರಿತು ಚಿಂತನೆ ಮಾಡಿದ್ದಂತೆ ಇವನ ಜನ್ಮಭೂಮಿ ಕುರಿತು ವಿವೇಚನೆ ಮಾಡಿದ್ದಾರೆ. ಇವರ ಪ್ರಕಾರ "ಮಾಳವ ದೇಶ ಕಾಳಿದಾಸನ ಜನ್ಮಭೂಮಿಯೆಂದು ಹೇಳುತ್ತಾರೆ.[೧೭] ಮಧ್ಯ ಭಾರತಕ್ಕೆ ಸೇರಿದ ಮಾಳವ ಪ್ರಾಂತವು ಇಂದಿಗೂ ಕಾಳಿದಾಸನ ಕುಲದವರಾದ ಇಂಡೋರ್ ಹೋಳ್ಕರ್ ಮಹಾರಾಜ ರಿಂದಲೇ ಆಳಲ್ಪಡುತ್ತಿದೆ. ಪಶ್ಚಿಮ, ಖಾನ್ದೇಶ ಗೌಳಿ(ಗ್ವಾಲ) ರಾಜರಿಂದಲೇ ಹಿಂದೆ ಆಳಲ್ಪಡುತ್ತಿತ್ತು ಎಂಬುದಕ್ಕೆ ಇತಿಹಾಸಾಧಾರಗಳಿವೆ. ಇಂದೋರ್ ಸಂಸ್ಥಾನಾಧಿಪತಿಗಳಿಗೆ ಇಂದಿಗೂ ಮಾಳವಾದೀಶರೆಂತಲೇ ಹೆಸರಿವೆ. ಇದು ಕುರುಬರಾಜರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದಕ್ಕೆ ಕೆಳಗಿನ ಆಧಾರದಿಂದ ಹೇಳಿದ್ದಾರೆ.

"Modern Mandu" city of day this gay city is statuated in the dhar wtate 22 miles South of Dhar town, not for from Indore(central India) It is no longer the capital of that state, but it still retains, within its impregnable walls. The Historic Fort, palaces, Mahals, tanks, Springs, Tombs and Towers all in sad ruins, despite the fostering car of the Archaeological Department.

Its history can betraced back to the times of the great vikramaditya, who ruled Ujjain just before the Christain Era and after the fairy rule of the shepherd kings of Malwa, Mandu passed into the hards of the Hindu parmana Dynasty and then fell into the hands of the Mahomedan Invaders, who cleard its hill tops of its older palaces and idolatrous temples.

The pathan Conquerors, who ruled the country for 130 years, became in turn succeeded by superior forces, and the province fell into the grasp of the widening Akhar was at its helm.

At last in the bigining of the 18th century it again passed into the hands of the Farmars. Whose young representative The Maharaja Anand Rao power now presides over the destinies of that little state of antique origin.[೧೮]

ಮಾಳವ ದೇಶ ಮತ್ತು ಮಗಧ ದೇಶವು ಪ್ರಾಚೀನ ಕಾಲದಲ್ಲಿ ಕುರುಬರಾಜರಿಂದ ಆಳಲ್ಪಡುತ್ತಿದ್ದಿತೆಂದು ಇತಿಹಾಸಜ್ಞರು ಹೇಳಿದ್ದಾರೆ.

Who ruled the kingdom of Magadha far three centuries the fifth king of the line was Bimbasara who was related to the king prasenajit as brother inlaw.

Prasenajit is noted in a plate inscription as a Dhanagar[೧೯] (Shepherd).

"ಆಚಾರ್ಯ ಬಲದೇವ ಉಪಾಧ್ಯಾಯ ಅವರು ಬಂಗಾಳ ಮತ್ತು ಕಾಶ್ಮೀರಗಳನ್ನು ಕಾಳಿದಾಸನ ಜನ್ಮಸ್ಥಾನವೆಂದು ಹೇಳಿದ್ದಾರೆ.[೨೦] ಉಜ್ಜೈನಿಯ ವಿಷಯದಲ್ಲಿ ಕಾಳಿದಾಸನು ಪಕ್ಷಪಾತಿಯಾಗಿರುವುದರಿಂದ ಅದೇ ಜನ್ಮಭೂಮಿಯಾಗಿರಬೇಕೆಂದು ಕಂಡುಬಂದಿದೆ. ಮೇಘದೂತದಲ್ಲಿ (೧-೨೯) ಯಕ್ಷನು ಎಷ್ಟೇ ಕಷ್ಟವಾದರೂ ಸಹ "ಶ್ರೀ ವಿಶಾಲಂ ವಿಶಾಲಂ" ಎಂಬ ವಿಶಾಲ ನಗರವನ್ನು ನೋಡಬೇಕೆಂದು ಮೇಘಕ್ಕೆ ತಿಳಿಸುತ್ತಾನೆ. ಉಜ್ಜೈನಿಯ ವಿಶಾಲವಾದ ಸೌಧಗಳನ್ನು ಮತ್ತು ಅಲ್ಲಿಯ ಸುಂದರಿಯರಾದ ಸ್ತ್ರೀಯರ ಕುಟಿಲಕಟಾಕ್ಷಗಳನ್ನು ನೋಡುವುದರಿಂದ ವಂಚಿತವಾದರೆ, ಅವನ ಜೀವನವೇ ನಿಷ್ಫಲವಾಗುತ್ತದೆ. ಕಾಳಿದಾಸನು ಆವಂತಿ ಪ್ರದೇಶದ ಭೌಗೋಳಿಕ ಸ್ಥಿತಿಯ ಸೂಕ್ಷ್ಮವಾದ ವರ್ಣನೆಯನ್ನು ಮೇಘದೂತದಲ್ಲಿ ಮಾಡಿರುತ್ತಾನೆ. ಅಲ್ಲಿನ ಸಣ್ಣ ಸಣ್ಣ ನದಿಗಳ ಹೆಸರನ್ನು ಮತ್ತು ವರ್ಣನೆಯನ್ನು ಮಾಡಿರುತ್ತಾನೆ. ಹೀಗೆ ಉಜ್ಜೈನಿಯ ವಿಷಯದಲ್ಲಿ ವಿಶೇಷವಾದ ಪಕ್ಷಪಾತ ಮತ್ತು ಸೂಕ್ಷ್ಮವಾದ ಭೌಗೋಳಿಕ ಪರಿಚಯಗಳ ಆಧಾರದ ಮೇಲೆ ಕಾಳಿದಾಸನು ಉಜ್ಜೈನಿಯಲ್ಲಿಯೇ ವಾಸಿಸುತ್ತಿದ್ದನೆಂದು[೨೧] ಎಸ್.ರಾಮಚಂದ್ರ ಶಾಸ್ತ್ರಿ ಅವರು ಹೇಳಿದ್ದಾರೆ.

ಕಾಳಿದಾಸನ ಕಾಲವನ್ನು ಕುರಿತ ವಿವೇಚನೆ

ಕಾಳಿದಾಸನ ಕಾಲ ಯಾವುದು? ಊರು ಯಾವುದು? ಆತನ ಒಡನಾಡಿಗಳಾರು? ಯಾವ ರಾಜನ ಬಳಿಯಲ್ಲಿದ್ದನು. ಈ ಪ್ರಶ್ನೆಗಳಿಗೆ ವಿವಾದರಹಿತ ನಿಶ್ಚಿತ ಉತ್ತರಗಳು ಸಿಗುವುದು ಕಷ್ಟ. ಕಾಳಿದಾಸನ ಕಾಲದ ಬಗ್ಗೆ ದೊರೆತಿರುವ ಪುರಾವೆಗಳ ಆಧಾರದ ಮೇಲೆ ವಿದ್ವಾಂಸರು ನಡೆಸಿರುವ

ಸುದೀರ್ಘ ಚರ್ಚೆಯ ಸಾರವಾಗಿ ಎರಡು ಅಭಿಪ್ರಾಯಗಳು ಎದ್ದು ಕಾಣುತ್ತವೆ. ಒಂದು ಕಾಳಿದಾಸ 'ಶಕಪುರುಷ ವಿಕ್ರಮಾದಿತ್ಯ'ನ ಆಸ್ಥಾನದ ನವಮಣಿಗಳಲ್ಲಿ ಒಬ್ಬ ಎಂಬುದು. ಮತ್ತೊಂದು ಅವನು ಧಾರಾನಗರದ ಭೋಜಮಹಾರಾಜರ ಆಸ್ಥಾನದಲ್ಲಿದ್ದನೆಂಬುದು. ಅಂದರೆ ಕ್ರಿ.ಪೂ. ೫೭.

ಎಸ್.ಆರ್. ಲೀಲಾ ಅವರು ಕಾಳಿದಾಸನು ಗುಪ್ತರ ಕಾಲಕ್ಕೆ ಸೇರಿದವನು, ಬಹುಶಃ ಕ್ರಿ.ಶ. ಮೂರು ಅಥವಾ ನಾಲ್ಕನೇ ಶತಮಾನದ ಸಮುದ್ರಗುಪ್ತನ ಕಾಲದವನು[೨] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಮೇಲಿನ ಅಭಿಪ್ರಾಯ ಕಾಳಿದಾಸನ ಸರಿಸುಮಾರು ೭೦೦೦ ವರ್ಷಗಳಷ್ಟು ಹಳಬನೆಂಬುದು ಸ್ಪಷ್ಟಪಡುತ್ತದೆ.

ಆಚಾರ್ಯ ಬಲದೇವ ಉಪಾಧ್ಯಾಯ ಅವರು ಕಾಳಿದಾಸನ ಕಾಲನಿರ್ಣಯ ವಿಷಯದಲ್ಲಿ ಪ್ರಧಾನವಾಗಿ ಮೂರು ನಿರ್ಧಾರಗಳಿವೆ.[೩] ಅವು:

೧. ಕಾಳಿದಾಸನು ಆರನೆಯ ಶತಮಾನದವನೆಂದು.

೨. ಗುಪ್ತರ ಕಾಲದಲ್ಲಿ ಕಾಳಿದಾಸನಿದ್ದನೆಂಬುದು.

೩. ವಿಕ್ರಮ ಸಂವತ್ಸರದ ಆರಂಭದಲ್ಲಿ ಇವನು ಇದ್ದನೆಂಬುದು.

೧. ಕಾಳಿದಾಸನು ಆರನೆಯ ಶತಮಾನದಲ್ಲಿದ್ದನೆಂಬ ವಾದ

ಭಾರತೀಯ ಇತಿಹಾಸದಲ್ಲಿ ವಿಕ್ರಮಾದಿತ್ಯನೆಂಬ ಬಿರುದುಳ್ಳ ನಾಲ್ಕು ಜನ ರಾಜರು ಇರುವರು. ಕಾಳಿದಾಸನು ಅವರ ಸಮಕಾಲೀನನೆಂದು ಹೇಳುವುದರಿಂದ ಬೇರೆ ಬೇರೆ ಶತಮಾನಗಳನ್ನು ಅಂಗೀಕರಿಸುತ್ತಾರೆ. ಕಾರೂರು ಯುದ್ಧದಲ್ಲಿ ಹೂಣ ವಂಶದ ಪ್ರತಾಪಿ ರಾಜನಾದ ಮಹಿರಾಕುಳನು ಬಾಲಾದಿತ್ಯ ನರಸಿಂಹ ಗುಪ್ತನ ಸಹಾಯದಿಂದ ಜಯಿಸಿದ ಯಶೋಧರ್ಮನು ವಿಕ್ರಮಾದಿತ್ಯನೆಂಬ ಬಿರುದನ್ನು ಹೊಂದಿದ್ದನೆಂದು ಡಾ. ಹರ್ನಲ್ ಅಭಿಪ್ರಾಯಪಡುತ್ತಾರೆ. ತನ್ನ ವಿಜಯದ ನಿಮಿತ್ತವಾಗಿ ವಿಕ್ರಮ ಸಂವತ್ಸರವೆಂದು ವ್ಯವಹಾರದಲ್ಲಿರುವ ಹೊಸ ಸಂವತ್ಸರವನ್ನು ಪ್ರಚಲಿತಗೊಳಿಸಿದನು. ಆದರೆ ಇದನ್ನು ಪ್ರಾಚೀನವೆಂದು ಸಿದ್ಧಪಡಿಸುವುದಕ್ಕಾಗಿ ಅವನು ಈ ಸಂವತ್ಸರಗಳನ್ನು ೬೦೦ ವರ್ಷಗಳ ಹಿಂದಕ್ಕೆ ಸರಿಸಿದನು. ಅಂದರೆ ಕ್ರಿ.ಶ. ೨೪೪ರಲ್ಲಿ ಜಯಿಸಿ ಆ ಘಟನೆಯ ಜ್ಞಾಪಕಾರ್ಥವಾಗಿ ನೂತನ ಸಂವತ್ಸರವನ್ನು ೬೦೦ ವರ್ಷಗಳ ಪೂರ್ವದಲ್ಲಿ ಅಂದರೆ ಕ್ರಿ.ಪೂ. ೫೮ರಲ್ಲಿ ಸ್ಥಾಪಿಸಿದನೆಂಬ ವಿಷಯವನ್ನು ಪ್ರಚಾರಗೊಳಿಸಿದರು. ವಿಕ್ರಮ ಸಂವತ್ಸರದ ಈ ಹೊಸ ಕಲ್ಪನೆಯನ್ನು ಡಾ. ಫರ್ಗುಸನ್ ಪ್ರಚಾರ ಮಾಡಿದರು. ಕಾಳಿದಾಸನ ಕಾಲವನ್ನು ನಿರ್ಣಯಿಸುವುದಕ್ಕಾಗಿ ಹರ್ನಲ್‌ನು ಇದನ್ನು ಉಪಯೋಗಿಸಿಕೊಂಡನು. ಕಾಳಿದಾಸನು ಭಾರವಿಯ ನಂತರ ಆರನೆಯ ಶತಮಾನದಲ್ಲಿದ್ದನೆಂಬುದಾಗಿ

ಮಹಾಮಹೋಪಾಧ್ಯಾಯ ಹರಿಪ್ರಸಾದ ಶಾಸ್ತ್ರೀಯವರು ಅನೇಕ ಕೌತುಕಪೂರ್ಣವಾದ ಪ್ರಮಾಣಗಳ ಆಧಾರದ ಮೇಲೆ ಸಿದ್ಧ ಮಾಡಲು ಪ್ರಯತ್ನಿಸಿದ್ದಾರೆ.

೨. ಕಾಳಿದಾಸನು ಗುಪ್ತರ ಕಾಲದವನೆಂಬ ವಾದ

ಅನೇಕ ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಕಾಳಿದಾಸನು ಗುಪ್ತರಾಜರ ಉತ್ಕೃಷ್ಟ ಸಮಯದಲ್ಲಿದ್ದನೆಂದು ಹೇಳುತ್ತಾರೆ. ಆದರೆ ಇದರಲ್ಲಿಯೂ ಭೇದಗಳು ಕಂಡುಬರುತ್ತವೆ. ಪುಣೆಯ ವಿದ್ವಾಂಸರಾದ ಪ್ರೊ. ಕೆ.ಬಿ.ಪಾಠಕರು ಕಾಳಿದಾಸನು ಸ್ಕಂದಗುಪ್ತ ವಿಕ್ರಮಾದಿತ್ಯನ ಕಾಲದಲ್ಲಿದ್ದನೆಂಬುದಾಗಿ ಅಭಿಪ್ರಾಯಪಟ್ಟರೆ, ಡಾ. ಭಂಡಾರಕರ್, ಸಾಹಿತ್ಯಾಚಾರ್ಯ ಪಂಡಿತ ರಾಮಾವತಾರಶರ್ಮ ಮತ್ತು ಅನೇಕ ಪಾಶ್ಚಾತ್ಯ ವಿದ್ವಾಂಸರು ಗುಪ್ತರಾಜರಲ್ಲಿ ಅತ್ಯಂತ ಪ್ರಭಾವಶಾಲಿ ರಾಜನಾಗಿದ್ದ ಎರಡನೆಯ ಚಂದ್ರಗುಪ್ತನ ಕಾಲದಲ್ಲಿದ್ದನೆಂಬುದಾಗಿ ಅಭಿಪ್ರಾಯಪಡುತ್ತಾರೆ.

೩. ಕಾಳಿದಾಸನು ಮೊದಲನೆಯ ಶತಮಾನದಲ್ಲಿದ್ದನೆಂಬ ವಾದ

ಐತಿಹಾಸಿಕ ಸಂಶೋಧನೆಯಿಂದ ಕ್ರಿ.ಪೂ.ದಲ್ಲಿ ಶಕರನ್ನು ಜಯಿಸಿದ ವಿದ್ವಾಂಸರಿಗೆ ವಿಪುಲವಾಗಿ ದಾನಗಳನ್ನು ಕೊಡುತ್ತಿದ್ದ ಉಜ್ಜೈನಿಯ ರಾಜನಾದ ವಿಕ್ರಮಾದಿತ್ಯನಿದ್ದನೆಂಬುದು ತಿಳಿದುಬರುತ್ತದೆ. ಹಾಲರಾಜನ "ಗಾಥಾಸಪ್ತಶತಿ"ಯಲ್ಲಿ ವಿಕ್ರಮಾದಿತ್ಯನೆಂಬ ರಾಜನ ನಿರ್ದೇಶನವಿದೆ. ಅವನು ಶತ್ರುಗಳನ್ನು ಜಯಿಸುವುದಕ್ಕಾಗಿ ತನ್ನ ಸೇವಕರಿಗೆ ಲಕ್ಷಗಟ್ಟಲೆ ದಾನ ಮಾಡಿದನು. ಜನಗ್ರಂಥಗಳಿಂದಲೂ ಈ ವಿಷಯವು ಪುಷ್ಟಿ ಹೊಂದುತ್ತದೆ. ಉಜ್ಜೈನಿಯ ರಾಜನಾದ ಗರ್ದಬಿಲ್ಲ ರಾಜನ ಮಗನಾದ ವಿಕ್ರಮಾದಿತ್ಯನು ಶಕರಿಂದ ಉಜ್ಜೈನಿಯನ್ನು ಹಿಂದಕ್ಕೆ ತೆಗೆದುಕೊಂಡನು ಎಂದು ಮೇರು ತುಂಗಾಚಾರ್ಯರಿಂದ ರಚಿತವಾದ ಪದ್ಯಾವಳಿಯಿಂದ ತಿಳಿದುಬರುತ್ತದೆ.

ಪ್ರಾಚೀನ ಕಾಲದಲ್ಲಿ ಮಾಲವ ಎಂಬ ವಿಶೇಷ ಗಣವು ಪ್ರಭಾವದಿಂದ ಕೂಡಿತ್ತು. ಕ್ರಿ.ಪೂ. ಮೂರನೆಯ ಶತಮಾನದಲ್ಲಿದ್ದು ಇದು "ಕ್ಷದ್ರಕ" ಗಣದ ಜೊತೆಗೆ ಸೇರಿಕೊಂಡು ಸಿಕಂದರಗಳನ್ನು ಎದುರಿಸಿತು. ಆದರೆ ವಿಶೇಷವಾದ ಸಹಾಯವು ದೊರಕದೇ ಇದ್ದುದರಿಂದ ಪರಾಜಿತವಾಯಿತು. ಈ ಮಾಲವ ಜನಾಂಗವೇ ಗ್ರೀಕರ ಸತತ ಆಕ್ರಮಣದಿಂದ ಪೀಡಿತವಾಗಿ ರಜಪೂತದ ಕಡೆಗೆ ಬಂದಿತು ಮತ್ತು ಮಾಲದ ದೇಶದಲ್ಲಿ ಕ್ರಿ.ಪೂ. ಒಂದನೆಯ ಅಥವಾ ಎರಡನೆಯ ಶತಮಾನದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿತು. ಇದು ಒಂದು ಗಣರಾಜ್ಯವಾಗಿದ್ದಿತು. ವಿಕ್ರಮಾದಿತ್ಯನೇ ಈ ಗಣತಂತ್ರಕ್ಕೆ ಪ್ರಮುಖನಾಗಿದ್ದನು. ಶಕರ ಆಕ್ರಮವನ್ನು ವಿರೋಧಿಸಿ ವಿಕ್ರಮಾದಿತ್ಯನು "ಶಕಾರಿ" ಎಂಬ ಬಿರುದನ್ನು ಹೊಂದಿ ತನ್ನ ಮೊದಲ ಗಣವನ್ನು ಪ್ರತಿಷ್ಠಿತವನ್ನಾಗಿ ಮಾಡಿದನು. ಆದುದರಿಂದ ಈ ಸಂವತ್ಸರಕ್ಕೆ "ಮಾಲವ ಗಣಸ್ಥಿತಿ" ಎಂಬ ಹೆಸರಿದೆ. ಈ ಗಣರಾಜ್ಯದಲ್ಲಿ ವ್ಯಕ್ತಿಗಿಂತಲೂ ಸಮಾಜಕ್ಕೆ ವಿಶೇಷ

ಮಹತ್ವವಿದೆ. ಆದುದರಿಂದ ಈ ಸಂವತ್ಸರವು ಗಣದ ಮುಖ್ಯನಾದ ವ್ಯಕ್ತಿಯ ಹೆಸರಿನಿಂದಲೇ ಗಣದ ಹೆಸರನ್ನೇ ಹೊಂದಿ 'ಮಾಲವ ಸಂವತ್ಸರ' ಎಂದು ಮಹತ್ವವಾಗಿದೆ. ಈ ರೀತಿಯಾಗಿ ಕ್ರಿ.ಶ. ಮೊದಲನೆಯ ಶತಮಾನದಲ್ಲಿ ವಿಕ್ರಮಾದಿತ್ಯನೆಂಬ ರಾಜನ ಅಥವಾ ಒಂದು ಗಣದ ನಾಯಕನ ಪರಿಚಯವು ಇತಿಹಾಸದಿಂದ ಉಪಲಬ್ಧವಾಗುತ್ತದೆ. ಈತನ ಆಸ್ಥಾನದಲ್ಲಿಯೇ ಕಾಳಿದಾಸನಿದ್ದನೆಂದು ಅಂಗೀಕರಿಸುವುದು ಸರ್ವಥಾ ನ್ಯಾಯವಾಗಿದೆ.

ಡಾ. ಮಹೇಶ ಆಡಕೋಳಿ ಅವರು "ಕಾಳಿದಾಸನ ಮಾಲವಿಕಾಗ್ನಿಮಿತ್ರಂ" ಎಂಬ ನಾಟಕದ ನಾಯಕ ಅಗ್ನಿಮಿತ್ರನು ಶುಂಗ ವಂಶದ ರಾಜನಾಗಿದ್ದು ಕ್ರಿ.ಪೂ. ೧೪೮ರಲ್ಲಿ ಅಭಿಷಕ್ತನಾದನು.[೨೪] ಆದ್ದರಿಂದ ಕ್ರಿ.ಪೂ. ಎರಡನೆಯ ಶತಮಾನ ಕಾಳಿದಾಸನ ಕಾಲದ ಪೂರ್ವಮಿತಿ "ಕ್ರಿ.ಶ. ೬೩೪ರ ಐಹೊಳೆ ಶಾಸನದಲ್ಲಿ "ಸ ವಿಜಯತಾಂ ರವಿಕೀರ್ತಿ ಕವಿತಾಶ್ರಿತ ಕಾಳಿದಾಸ ಭಾರವಿ ಕೀರ್ತಿಃ" ಎಂದು ಉಲ್ಲೇಖವಿರುವುದರಿಂದ ಕ್ರಿ.ಶ. ಏಳನೆಯ ಶತಮಾನ ಅವನ ಕಾಲದ ಉತ್ತರಮಿತಿ. ಇವೆರಡು ಮಿತಿಗಳ ಆಚೆಗಿನ ವಾದವನ್ನು ತ್ಯಜಿಸಿದರೆ ಕಾಳಿದಾಸ ಕ್ರಿ.ಪೂ. ಒಂದನೆಯ ಶತಮಾನದಲ್ಲಿದ್ದನೆಂಬ ವಾದ ಹಾಗೂ ಕ್ರಿ.ಶ. ಐದನೆಯ ಶತಮಾನದವನೆಂಬ ವಾದ ಇವೆರಡು ವಿಚಾರಾರ್ಹವಾಗುತ್ತವೆ. ಇವೆರಡೂ ಪಕ್ಷದವರು ಕಾಳಿದಾಸನು ವಿಕ್ರಮಾದಿತ್ಯನೆಂಬ ರಾಜನ ಆಸ್ಥಾನ ಕವಿಯಾಗಿದ್ದನೆಂದು ಅಂಗೀಕರಿಸುತ್ತಾರೆ. ಆದರೆ ವಿಕ್ರಮಾದಿತ್ಯ ಶಕಸ್ಥಾಪಕನೋ ಅಥವಾ ವಿಕ್ರಮಾದಿತ್ಯನೆಂಬ ಬಿರುದಾಂಕಿತನಾದ ಎರಡನೆಯ ಚಂದ್ರಗುಪ್ತನೋ ಎಂಬುದರ ಕುರಿತು ಇವರಲ್ಲಿ ಭಿನ್ನಾಭಿಪ್ರಾಯವಿದೆ. ಕಾಳಿದಾಸನ ಕೃತಿಗಳ ಆಂತರಿಕ ಪ್ರಮಾಣವನ್ನು ಭಾರತೀಯ ಇತಿಹಾಸದ ಸ್ವರ್ಣಯುಗವೆನಿಸಿ ಎರಡನೆಯ ಚಂದ್ರಗುಪ್ತನ ಕಾಲಕ್ಕೆ ಪೂರಕವಾಗಿರುವುದರಿಂದ ಕಾಳಿದಾಸ ಕ್ರಿ.ಶ. ನಾಲ್ಕು ಅಥವಾ ಐದನೆಯ ಶತಮಾನದವನೆಂದು ನಂಬಲಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಹಾಗೆಯೇ ಕಾಳಿದಾಸನ ನಾಮದೇಯದ 'ದಾಸ' ಎಂಬ ಪದ ಬಂಗಾಳದಲ್ಲಿ ವಿಶೇಷವಾಗಿ ಪ್ರಚಲಿತವಾಗಿರುವುದರಿಂದ ಹಾಗೂ 'ಕಾಳಿ' ಅಲ್ಲಿಯ ಪ್ರಧಾನ ದೇವತೆಯಾದ್ದರಿಂದ ಅವನು ಬಂಗಾಳದವನೆಂಬ ವಾದವಿದೆ.

ಈ ಮೇಲಿನ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿದಾಗ ಕಾಳಿದಾಸನು ಕ್ರಿ.ಪೂ. ೧ನೆಯ ಶತಮಾನದವನೆಂದು ಮತ್ತು ಕ್ರಿ.ಶ. ೯ನೆಯ ಶತಮಾನದಲ್ಲಿ ಜೀವಿಸಿದ್ದನೆಂದು ಹಾಗೂ ಕ್ರಿ.ಶ. ೫ನೆಯ ಶತಮಾನದ ಆದಿಭಾಗದಲ್ಲಿ ಈತ ಗ್ರಂಥರಚನೆ ಮಾಡಿದನೆಂದು ಮತ್ತು ವಿಕ್ರಮಾದಿತ್ಯನೆಂಬ ದೊರೆಯ ಆಶ್ರಯಕ್ಕೆ ಒಳಗಾಗಿದ್ದನೆಂಬುದು ತಿಳಿದುಬರುತ್ತದೆ. ಆದರೆ ವಿ.ಆರ್. ಹನುಮಂತಯ್ಯನವರು

ಕ್ರಿ.ಶ. ೧೦–೧೧ನೆಯ ಶತಮಾನದ ಮಧ್ಯದಲ್ಲಿ ಧಾರಾನಗರದ ಶ್ರೀ ಭೋಜಮಹಾರಾಜನ ಆಸ್ಥಾನದಲ್ಲಿ ಶ್ರೀ ಕಾಳಿದಾಸನಿದ್ದನೆಂದು ಹೇಳಿದ್ದಾರೆ.

ಹೀಗೆ ಕಾಳಿದಾಸನ ಕಾಲ, ಊರು, ಯಾವ ರಾಜನ ಬಳಿಯಲ್ಲಿದ್ದ, ಅವನ ಮತ ಇತ್ಯಾದಿ ಪ್ರಶ್ನೆಗಳಿಗೆ ವಿವಾದರಹಿತ ನಿಶ್ಚಿತ ಉತ್ತರಗಳು ಸಿಗುವುದು ಕಷ್ಟ. ಕಾಳಿದಾಸನ ಕಾಲದ ಬಗ್ಗೆ ದೊರೆತಿರುವ ಪುರಾವೆಗಳ ಆಧಾರದ ಮೇಲೆ ವಿದ್ವಾಂಸರು ನಡೆಸಿರುವ ಸುದೀರ್ಘ ಚರ್ಚೆ ಎದ್ದು ಕಾಣುತ್ತದೆ.

೩. ಭೋಜರಾಜನ ಜೀವನ ಚರಿತ್ರೆ

ಭೋಜರಾಜನು ಉಜ್ಜನಿಯಲ್ಲಿ ರಾಜ್ಯಭಾರ ಮಾಡುತ್ತಿದ್ದ ವಿಕ್ರಮಾದಿತ್ಯನ ವಂಶದವನು. ವಿಕ್ರಮಾದಿತ್ಯನ ಐದುನೂರು ವರುಷಗಳ ತರುವಾಯ ಭೋಜರಾಜನು ಧಾರಾನಗರದ ಮಹಾರಾಜನಾದನು. ವಿಕ್ರಮಾದಿತ್ಯನು ಪರಮಾರಾ(ಪೈಮರಾ) ಗೋತ್ರದಲ್ಲಿ ಹುಟ್ಟಿದವನು. ಈ ಗೋತ್ರ ರಾಜಪುತಾಣದ ಮೂವತ್ತಾರು ರಾಜ ವಂಶಗಳಲ್ಲಿ ತುಂಬಾ ಪ್ರಖ್ಯಾತವಾದುದು.

ಈ ಗೋತ್ರದ ಉತ್ಪತ್ತಿಯನ್ನು ಕುರಿತು ರಾಜಪುತಾಣದಲ್ಲಿ ಐತಿಹ್ಯವಿದೆ. "ಬೌದ್ಧರ ಅಹಿಂಸಾವ್ರತ (ವಾದ)ದಿಂದ ಹಿಂದೂ ರಾಜ್ಯಗಳು ಬಹು ಸುಲಭವಾಗಿ ಒಂದರ ಹಿಂದೊಂದು ಪರಮತೀಯರಾದ ಮುಸಲ್ಮಾನ್ ರಾಜರುಗಳ ಕೈವಶವಾಗ ಹತ್ತಿರುವುದು. ಆಗ ಅಗ್ನಿ ಕುಲದ ರಾಜಪುತ್ರರು ಬೌದ್ಧರಾಜರನ್ನು ಯುದ್ಧದಲ್ಲಿ ಸೋಲಿಸಿ ಅವರನ್ನು ನಿರ್ಮೂಲ ಮಾಡಿದುದರಿಂದ ಅವರಿಗೆ 'ಪರಮಾರ' ಗೋತ್ರದವರೆಂದು ಹೆಸರಾಯಿತು"[೨೫] ಎನ್ನುವ ಪ್ರಸ್ತಾಪವಿದೆ.

ಭೋಜರಾಜನ ತಂದೆ 'ಸಿಂಧುಲ ಮಹಾರಾಜ' ಇವನ ಚಿಕ್ಕಪ್ಪನ ಹೆಸರು 'ಮುಂಜರಾಜ ಸಿಂಧುಲ' ಎಂದು. ಸಿಂಧುಲರಾಜನು ಮಹಾಧರ್ಮಿಷ್ಟನು, ಸತ್ಯಸಂದನು ಆಗಿದ್ದನು. ಇವನ ಚಿಕ್ಕಪ್ಪ ಮಹಾಕ್ರೂರಿಯೂ ಕುಟಿಲ ಸ್ವಭಾವದವನೂ ಆಗಿದ್ದನು. ಸಿಂಧುಲ ರಾಜನು ತನ್ನ ಪ್ರಜೆಗಳನ್ನು ಪುತ್ರವಾತ್ಸಲ್ಯದಿಂದ ಪರಿಪಾಲಿಸುತ್ತಿದ್ದನು. 'ಯಥಾರಾಜ ತಥಾ ಪ್ರಜಾ' ಎಂಬಂತೆ ಪ್ರಭುವಿನಂತೆಯೇ ಪ್ರಜೆಗಳೂ ಸಹ ಪ್ರಾಮಾಣಿಕರೂ, ದೈವಭಕ್ತರೂ, ದೇಶಭಕ್ತರಾಗಿ ಸುಖಸಂತೋಷದಿಂದಿರುತ್ತಿದ್ದರು. ಸಿಂಧುಲ ರಾಜನಿಗೆ ತುಂಬಾ ವರ್ಷಗಳಾದರೂ ಮಕ್ಕಳ ಸಂತಾನವಿರಲಿಲ್ಲ. ಮುಪ್ಪಿನ ವಯಸ್ಸಿನಲ್ಲಿ ಗಂಡು ಮಗು ಸಂತಾನ ಪ್ರಾಪ್ತವಾಯಿತು. ಲಗ್ನ ರಾಶಿಯ ಪ್ರಕಾರ ಈತನ ಹೆಸರು 'ಭೋಜ'ನೆಂದು ಹೆಸರಿಟ್ಟರು. ಜಾತಕ ಫಲದಂತೆಯೇ ಕೆಲ ದಿನಗಳು ಗತಿಸಿದ ಅನಂತರ ಸಿಂಧುಲರಾಜನಿಗೆ ಭಯಂಕರ ವ್ಯಾಧಿಯು ಪ್ರಾಪ್ತವಾಗಿ ಮರಣ ಸಂಭವಿಸಿತು. ರಾಜ್ಯ ಸೂತ್ರವನ್ನು ಮುಂಜುರಾಜನು ವಹಿಸಿಕೊಂಡನು. ಭೋಜರಾಜನನ್ನು

ನೋಡಿಕೊಳ್ಳುವ ಜವಾಬ್ದಾರಿಯನ್ನು ಸಹ ವಹಿಸಿಕೊಂಡನು. ಭೋಜರಾಜನಿಗೆ ಏಳು ವರ್ಷಗಳು ತುಂಬಿದೊಡನೆಯೇ ಮುಂಜರಾಜನು ಆತನಿಗೆ ಉಪನಯನ ಸಂಸ್ಕಾರಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದನು. ಹಾಗೆಯೇ ವಿದ್ಯಾಭ್ಯಾಸಕ್ಕಾಗಿ ಒಳ್ಳೆಯ ಪಂಡಿತರನ್ನು ನೇಮಿಸಿದನು. ಅವನಿಗೆ ಕ್ಷಾತ್ರ ಧರ್ಮಕ್ಕನುಸಾರವಾದ ಅಶ್ವಾರೋಹಣ, ಯುದ್ಧವಿದ್ಯೆ, ಕಲಾ, ಕುಶಲ ವಿದ್ಯಾಭ್ಯಾಸಕ್ಕೂ ಪ್ರತ್ಯೇಕ ಪ್ರತ್ಯೇಕವಾಗಿ ಉಪಾಧ್ಯಾಯರನ್ನು ನೇಮಿಸಿದನು. ಭೋಜರಾಜನು ತುಂಬಾ ಪ್ರಜ್ಞಾಶಾಲಿಯೂ, ಪ್ರತಿಭಾವಂತನು ಆಗಿದ್ದು ಉಪಧ್ಯಾಯರು ಹೇಳಿದ್ದನ್ನೆಲ್ಲಾ ಬಹುಬೇಗನೇ ಕಲಿತು ನೆನಪಿನಲ್ಲಿಟ್ಟು ಕೊಳ್ಳುತ್ತಿದ್ದನು. ಇವನ ತೀಕ್ಷ್ಣ ಬುದ್ಧಿಗೆ ಉಪಾಧ್ಯಾಯರು ಅಚ್ಚರಿಗೊಳ್ಳುತ್ತಿದ್ದರು.

ಒಂದು ದಿನ ಜ್ಯೋತಿಶಾಸ್ತ್ರ ಪಂಡಿತನು ಮುಂಜರಾಜನಿಂದ ಬಹುಮಾನವನ್ನು ಪಡೆಯುವಾಸೆಯಿಂದ ಆಸ್ಥಾನಕ್ಕಾಗಮಿಸಿದನು. ಆಗ ಮುಂಜರಾಜನು ಭೋಜರಾಜನ ಭವಿಷ್ಯವನ್ನು ಕೇಳಿದನು. ಜೋತಿಷಿಯು ಅವನ ಜಾತಕವನ್ನು ನೋಡಿ "ಈತನು ಯೌವ್ವನಾರಂಭದಲ್ಲಿ ಕೆಲಕಾಲ ಕಷ್ಟವನ್ನು ಭೋಗಿಸಬೇಕಾಗಿ ಬಂದರೂ ಸಹ ಸುಖಸಂತೋಷದಿಂದ ಬಾಳುವನು. ಈತನು ಸಿಂಹಾಸನಾರೋಹಣ ಮಾಡಿದ ಮೇಲೆ ೫೫ ವರ್ಷ ೭ ಮಾಸ ೩ ದಿನಗಳ ತನಕ ಗೌಡ ದೇಶಕ್ಕೆ ಸೇರಿದ ತೆಂಕಣಭಾಗದ ರಾಜ್ಯ ಇವನ ಪರಿಪಾಲನೆಗೊಳಗಾಗುವುದು. ಈತನು ಮಹಾ ಪ್ರಖ್ಯಾತ ಪುರುಷನಾಗುವನು. ಈತನು ಕವಿಗಳಿಗಾಶ್ರಯದಾತನೆಂಬ ಯಶಸ್ಸನ್ನು ಹೊಂದುವನು. ಈತನ ರಾಜ್ಯದಲ್ಲಿ ಸಕಲ ಪ್ರಜೆಗಳೂ ಸಂತುಷ್ಟರಾಗಿ ಸಹೋದರರಂತೆ ವರ್ತಿಸುವನು. ಸರ್ವ ಜಾತಿ ಮತದವರೂ ಸದ್ವಿದ್ಯಾವಂತರಾಗುವರು. ಅವಿದ್ಯಾವಂತರೀತನ ರಾಜ್ಯದಲ್ಲೆಲ್ಲೂ ಗೋಚರಿಸರು" ಎಂದು ನುಡಿಸಿದನು.

ಜ್ಯೋತಿಷ್ಯಿಯು ನುಡಿದ ಭವಿಷ್ಯದಂತೆ ಭೋಜಕುಮಾರನು ರಾಜ್ಯವನ್ನು ತನ್ನ ಕೈಯಿಂದ ಕಸಿದುಕೊಳ್ಳುವನೆಂಬ ಚಿಂತೆಯು ಮುಂಜರಾಜನಿಗೆ ಹತ್ತಿತು. ತನ್ನ ರಾಜ್ಯಭಾರವು ನಿರಾತಂಕವಾಗಿರ ಬೇಕಾದರೆ ಭೋಜ ಕುಮಾರನನ್ನು ಕೊಲೆ ಮಾಡಿಸಲೇ ಬೇಕು ಎಂದು, ಬೇರೆ ಯಾವ ಉಪಾಯವಿಲ್ಲವೆಂದು ಚಿಂತಿಸುತ್ತಿದ್ದನು. ಆಪ್ತ ಮಂತ್ರಿ 'ವತ್ಸರಾಜ'ನಿಗೆ ಭೋಜರಾಜನ ಶಿರಸ್ಸನ್ನು ತಂದು ತೋರಿಸಬೇಕೆಂದು ಹೇಳಿದನು. ಆಗ ವತ್ಸ ಮಂತ್ರಿಯು ಪಾಠಶಾಲೆಯನ್ನು ಹೊಕ್ಕು ಭೋಜಕುಮಾರನನ್ನು ಹೊರಗೆ ಕರೆದು ನಿನ್ನ ಚಿಕ್ಕಪ್ಪ ಮುಂಜ ಮಹಾರಾಜನು ನಿನ್ನನ್ನು ಈಗಲೇ ಕರೆದುಕೊಂಡು ಬರಬೇಕೆಂದು ಅಪ್ಪಣೆ ಮಾಡಿದ್ದಾನೆ ಎಂದು ನಂಬಿಸಿ ರಥದ ಮೇಲೆ ಕೂರಿಸಿಕೊಂಡು ಅರಮನೆಯ ಹಾದಿಯನ್ನು ಬಿಟ್ಟು ಅಡವಿಯ ಮಾರ್ಗವನ್ನು ಹಿಡಿದು ರಥವನ್ನು ವೇಗವಾಗಿ ಓಡಿಸ ಹತ್ತಿದನು. ಭೋಜಕುಮಾರನಿಗಿದು ಸಂಶಯಬಂದು ರಥವನ್ನು ಮುಂದೋಡಿಸ ದಂತೆ ಅಡ್ಡಗಿಸ ಹೋಗಲು ವತ್ಸ ಮಂತ್ರಿಯು ಭೋಜನನ್ನು ಕಾರ್ಗತ್ತಲೆಯಲ್ಲಿ ಕೊಂಡೊಯ್ದು

ಘೋರಾರಣ್ಯದಲ್ಲಿ ರಥದಿಂದ ಕೆಳಗಿಳಿಸಿ ಇವನ ಧೈರ್ಯ–ಸ್ಥೈರ್ಯವನ್ನು ಪರೀಕ್ಷಿಸಬೇಕೆನಿಸಿ "ಹೇ ನನ್ನ ಪ್ರಿಯ ರಾಜಕುಮಾರ ಇದು ನನ್ನ ತಪ್ಪಲ್ಲ ನಿನ್ನ ಮೇಲೆ ನನಗೇನು ದ್ವೇಷವಿಲ್ಲ ಆದರೆ ಕೇಳು ನೀನು ಇಷ್ಟು ಚಿಕ್ಕ ವಯಸ್ಸಿನಲ್ಲಿರುವಾಗಲೇ ತುಂಬಾ ಚತುರನೂ, ಸಾಹಸವಂತನು ಆಗಿರುವುದನ್ನು ಅರಿತು ರಾಜ್ಯ ಲೋಭದಿಂದ ನಿನ್ನ ಚಿಕ್ಕಪ್ಪನು ನಿನ್ನನ್ನೀಗಲೇ ಕೊಲ್ಲಿಸಿಬಿಟ್ಟರೆ ತನಗೆ ನಿರಾತಂಕವಾಗಿರುತ್ತದೆಂಬ ದುರ್ಭಾವನೆಯಿಂದ ನಿನ್ನನ್ನು ಯಾರು ಕಾಣದ ನಿರ್ಜನ ಪ್ರದೇಶದಲ್ಲಿ ಕೊಂದು ನಿನ್ನ ಶಿರವನ್ನು ತಂದು ತೋರಿಸಬೇಕೆಂದು ಆಜ್ಞಾಪಿಸಿರುತ್ತಾನೆ. ನಾನೇನು ಮಾಡಬಲ್ಲೆ? ನೀನೀಗಲೇ ಸಾಯಲು ಸಿದ್ಧನಾಗು" ಎಂದನು. ಆಗ ಭೋಜರಾಜನು ಎಲೈ ವತ್ಸ ಮಂತ್ರಿಯೇ ನೀನು ನನ್ನನ್ನು ಹೆದರಿಸಬೇಡ ನನ್ನ ಮೃತ್ಯುವೀಗಲೇ ಸನ್ನಿಹಿತವಾಗಿದ್ದರೆ ಹಾಗೂ ಇಂತಹ ಅಪಮೃತ್ಯುವಿಗೆ ನಾನು ಗುರಿಯಾಗಬೇಕೆಂದಿದ್ದರೆ ತಡೆಯಬಲ್ಲವರಾರು? ಹಾಗಿಲ್ಲದೆ ನನ್ನ ಸಾವಿನ್ನು ದೂರವಾಗಿದ್ದರೆ ನೀನು ತಾನೆ ಹೇಗೆ ಕೊಲ್ಲಬಲ್ಲೆ? ವಿಧಿಯನ್ನೆದುರಿಸಲಾರಿಗಾದರು ಶಕ್ಯವಿಲ್ಲವಷ್ಟೆ? "ಜಾತಸ್ಯ ಮರಣಂ ಧ್ರುವಂ" ಎಂಬ ನ್ಯಾಯದಂತೆ ಹುಟ್ಟಿದವನೆಂದಾದರೊಂದು ದಿನ ಸಾಯಲೇಬೇಕಲ್ಲವೇ? ಜನನ–ಮರಣಗಳಾರಿಗೂ ತಪ್ಪಿದವುಗಳಲ್ಲ ಇಂತಿರುವಾಗ ಸಾಯುವುದಕ್ಕೆ ಭಯವೇನಿದೆ? ಎಂದು ಕೇಳಿದನು. ಈ ಮಾತುಗಳಿಂದ ಭೋಜರಾಜನ ಧೈರ್ಯ, ಸ್ಥೈರ್ಯ, ಶೌರ್ಯಾದಿ ಸದ್ಗುಣಗಳನ್ನು ಅರಿಯಬಹುದು.

ಈ ಮಾತಿಗೆ ವತ್ಸ ಮಂತ್ರಿಯು ತನ್ನೆರಡು ಕರಗಳನ್ನು ಜೋಡಿಸಿಕೊಂಡು 'ರಾಜಕುಮಾರ ನಿನ್ನ ವಿಷಯದಲ್ಲಿ ನನಗೆ ಮೊದಲಿನಿಂದಲೂ ಏಕ ರೀತಿಯಾದ ಪ್ರೇಮಾಭಿಮಾನಗಳಿರದೇ ಇಲ್ಲ ಮುಂದೆ ಮಹಾರಾಜಾಧಿರಾಜನಾಗುವ ನಿನ್ನಂಥ ಧರ್ಮಿಷ್ಟ ಪ್ರಭುವರ್ಯನನ್ನು ನಾನು ಅನ್ಯಾಯವಾಗಿ ವಧಿಸಲು ನನ್ನ ಕೈಗಳು ಹೇಗೆ ತಾನೆ ಬಂದಾವು? ಎಂದಿಗೂ ಬರಲಾರವು. ಇದು ನನ್ನ ಕೇವಲ ನಟನೆಯೇ ಹೊರತು ನಿಜವಲ್ಲವೆಂದನು. "ನಿನ್ನನ್ನು ಇಲ್ಲಿಂದ ನೇರವಾಗಿ ನನ್ನ ಮನೆಗೆ ಕರೆದೊಯ್ದು ಅಲ್ಲಿ ನಿನ್ನನ್ನು ಗುಪ್ತಸ್ಥಳದಲ್ಲಿರಿಸಿ ಸಂರಕ್ಷಿಸಿಕೊಂಡು ಹೋಗುತ್ತೇನೆ. ನೀನಿಂದಿನಿಂದ ನಿಶ್ಚಿಂತನಾಗಿರು ಮುಂಜರಾಜನಿಗೆ ಕೃತ್ರಿಮ ಶಿರಸ್ಸನ್ನು ತೋರಿಸಿ ಅವನಿಗೆ ನಂಬುಗೆ ಬರುವಂತೆ ಮಾಡುತ್ತೇನೆ" ಎಂದು ರಥದ ಮೇಲೆ ಕುಳ್ಳಿರಿಸಿಕೊಂಡು ಹೋದನು.

ವತ್ಸರಾಜ ಮಂತ್ರಿಯು ಶಿಲ್ಪಾಕಾರದಿಂದ ತಯಾರಿಸಿದ ರಕ್ತಸಿಕ್ತವಾದ ಭೋಜಕುಮಾರನನ್ನು ಹೋಲುವ ಶಿರಸ್ಸನ್ನು ತಂದು ಮುಂಜರಾಜನ ಮುಂದಿಟ್ಟನು. ಇದನ್ನು ನೋಡಿದ ಮುಂಜರಾಜನು ಹಿಂದೆಷ್ಟೋ ಕ್ರೂರ ಹೃದಯನಾಗಿದ್ದ ಈತನು ಸಂಕಟಗೊಂಡು ತುಂಬಾ ದುಃಖಿಸಿದನು. ಗೋಳೋ ಎಂದು ತನ್ನೆರಡು ಕೈಗಳನ್ನು ಹಣೆಗಿಟ್ಟುಕೊಂಡು ಗಟ್ಟಿಯಾಗಿ ಗೋಳಾಡುತ್ತಾ ಮೂರ್ಛೆ ಹೋದನು.

ಮುಂಜರಾಜನೇ ಈ ಕೊಲೆಗೆ ಕಾರಣನೆಂದರಿತು ಸ್ತ್ರೀ–ಪುರುಷರಾದಿಯಾಗಿ ಅರಮನೆಯ ಜನರು ಸೇರಿ ಮನಬಂದಂತೆ ಬೈಯತೊಡಗಿದರು. ಮೂರ್ಛೆಗೊಂಡಿದ್ದ ಮುಂಜರಾಜನು ಎಚ್ಚರಗೊಂಡು ವತ್ಸ ಮಂತ್ರಿಯನ್ನು ಕುರಿತು ಎಲೈ ಮಂತ್ರಿಯೇ ನೀನು ನನ್ನ ಕುಮಾರ ಭೋಜನನ್ನು ವಧಿಸುವ ಮುನ್ನ ನನ್ನ ದುರುದ್ದೇಶದ ಬಗ್ಗೆ ನಿನ್ನೊಡನೇನಾದರೂ ಹೇಳಿರುವನೇ? ಎಂದು ಕೇಳಿದನು.

ಆಗ ಮಂತ್ರಿಯು ಅಹುದು, ಅವನು ನನ್ನೊಡನೆ ಇನ್ನೇನು ಹೇಳಲಿಲ್ಲ. ತನ್ನ ರಕ್ತಾಕ್ಷರದಿಂದ ಬರೆದಿರುವ ಈ ಪತ್ರವನ್ನು ಮಾತ್ರ ನಿಮ್ಮ ಕೈಗೀಯುವಂತೆ ಹೇಳಿದ್ದಾನೆ. ಈಗೋ ಇದನ್ನು ತೆಗೆದುಕೊಳ್ಳಿರಿ ಎಂದನು. ಮುಂಜರಾಜನು ಆ ಪತ್ರವನ್ನು ಕೈಗೆ ತೆಗೆದುಕೊಂಡು ನೋಡಿದಾಗ ಅದರಲ್ಲಿ ಈ ರೀತಿ ವಕ್ಕಣೆಸಿದ್ದಿತು.

ಮಾಂಧಾತಾ ಚ ಮಹೀಪತಿಃ ಕೃತಯುಗಾಲಂಕಾರ ಭೂತೋಗತಃ ।
ಸೇತುರ್ಯೇನ ಮಹೋದಧೌ ವಿರಚಿತಃ ಕ್ವಾಸೌದಶಾಸ್ಯಾನ್ತಕಃ ।
ಅನ್ಯೇಚಾಪಿ ಯುದಿಷ್ಠಿರ ಪ್ರಭೃತಯೋ ಯಾತಾದಿವಂ ಭೂಪತೇ ।
ನೈ ಕೇನಾಪಿ ಸಮಂಗತಾ ವಸುಮತೀ ನೂನಂ ತ್ವಯಾ ಯಾಸ್ಯತಿ ।।

ಅಂದರೆ "ಕೃತಯುಗದಲ್ಲಿ ಪ್ರಪಂಚಕ್ಕೆಲ್ಲಾ ಅಲಂಕಾರಭೂತ ಪ್ರಭುವಾಗಿದ್ದ ಸಾರ್ವಭೌಮ 'ಮಾಂಧಾತ'ನೆಂಬ ಚಕ್ರವರ್ತಿಗೆ ಮರಣ ತಪ್ಪಲಿಲ್ಲ. ತ್ರೇತಾಯುಗದಲ್ಲಿ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಹತ್ತು ತಲೆಗಳನ್ನು ಮಹಾಪರಾಕ್ರಮಿಯಾದ ದುಷ್ಟ ರಾವಣನನ್ನು ಮರ್ದನ ಮಾಡಿ ರಾಜ್ಯಭಾರವನ್ನು ಮಾಡಿದ ಶ್ರೀರಾಮಚಂದ್ರನೀಗೆಲ್ಲಿರುವನು? ದ್ವಾಪರಯುಗದಲ್ಲಿ ಪಡಬಾರದ ನಾನಾ ಕಷ್ಟ ಸಂಕಷ್ಟಗಳನ್ನನುಭವಿಸಿ, ಶತ್ರುಗಳನ್ನು ಸಂಹರಿಸಿ, ಧರ್ಮದಿಂದ ರಾಜ್ಯವಾಳಿದ ಧರ್ಮರಾಯ ಮುಂತಾದ ರಾಜ ಮಹಾರಾಜಾಧಿರಾಜರೆಲ್ಲರೂ ಮೃತಪಟ್ಟು ಹೋದರು. ಇವರಲ್ಲೊಬ್ಬರಾದರೂ ತಾವು ಹೋಗುವಾಗ ಈ ಭೂಮಿಯನ್ನು ತಮ್ಮ ಸಕಲೈಶ್ವರ್ಯಗಳನ್ನು ತಮ್ಮ ಸಂಗಡ ಕೊಂಡೊಯ್ಯಲಿಲ್ಲ. ಆದರೆ ಅವರು ತಮ್ಮ ಧವಳ ಕೀರ್ತಿಯನ್ನುಳಿಸಿಕೊಂಡು ಹೋಗಿದ್ದಾರೆ. ನೀನಾದರೋ ನೀನು ಸತ್ತು ಹೋಗುವಾಗ ನಿನ್ನ ಸಕಲೈಶ್ವರ್ಯವನ್ನು ಸಂಗಡಲೇ ತಲೆಯ ಮೇಲೆ ಹೊತ್ತುಕೊಂಡು ಹೋಗುವಂತೆ ಕಾಣುತ್ತದೆ" ಎಂದು ಬರೆದಿದ್ದನು.

ಇದರ ಅರ್ಥವನ್ನು ಅರಿತುಕೊಂಡು ಮುಂಜರಾಜನು ತುಂಬಾ ಪಶ್ಚಾತ್ತಾಪಪಡುತ್ತಾನೆ. ವತ್ಸಮಂತ್ರಿಯು ಭೋಜರಾಜನನ್ನು ರಹಸ್ಯ ಸ್ಥಳದಲ್ಲಿರಿಸಿದ ವಿಷಯವನ್ನು ತಿಳಿಸುತ್ತಾನೆ. ಆಗ ಮುಂಜರಾಜನು ಅತ್ಯಾನಂದ ಹೊಂದಿ ರಾಜಕುಮಾರನನ್ನು ತನ್ನ ಸಮೀಪಕ್ಕೆ ಬರಮಾಡಿಕೊಂಡನು. ಅಲ್ಲಿ ನೆರೆದಿದ್ದ ಸರ್ವ ಪ್ರಜೆಗಳು ರಾಜಕುಮಾರನನ್ನು ಕಣ್ಣಾರೆ ಕಂಡು ಸಂತೋಷಪಟ್ಟರು. ತಾನು ಮಾಡಿದ ತಪ್ಪಿಗೆ ಭೋಜರಾಜನಲ್ಲಿ ಕ್ಷಮೆ ಕೇಳುತ್ತಾನೆ.

ಭೋಜರಾಜನು ಮುಂಜರಾಜನನ್ನು ಕುರಿತು ತಂದೆಯೇ ನೀನೆಸಗಿದುದು ನಿನ್ನ ಮನಸ್ಸಿಗೆ ಅಪರಾಧವೆನಿಸಿದ್ದರೂ ನನಗೆ ಮಾತ್ರ ಹಾಗೆನಿಸದು. ನೀನು ನನಗೆ ಸಾಕ್ಷಾತ್ ತಂದೆ. ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಪಿತೃವಾಕ್ಯ ಪರಿಪಾಲನೆಯನ್ನು ಮಾಡುವುದು ಮುಖ್ಯ ಕರ್ತವ್ಯ. ಭಗವಾನ್ ಶ್ರೀರಾಮಚಂದ್ರನು ತಂದೆಯ ವಚನವನ್ನು ಪರಿಪಾಲಿಸುವ ಸಲುವಾಗಿ ದೀರ್ಘಕಾಲ ಅರಣ್ಯ ವಾಸವನ್ನು ಅನುಭವಿಸಲಿಲ್ಲವೇ? ಯಯಾತಿಯ ಮಗನಾದ ಪೂರುರವ ತನ್ನ ಅಮೌಲ್ಯವಾದ ಯೌವ್ವನವನ್ನು ತಂದೆಗಿತ್ತು, ತಂದೆಯ ಮುಪ್ಪನ್ನು ತಾನಪ್ಪಿಕೊಳ್ಳಲಿಲ್ಲವೇ? ಹೀಗೆ ಹಿಂದೆಷ್ಟೋ ಮಂದಿ ಸತ್ಪುತ್ರರು ತಮ್ಮ ಮಾತಾಪಿತೃಗಳ ಹಿತವನ್ನು ಕೋರಿ ಹಾಗೂ ದೇಶಾಭಿಮಾನ, ಧರ್ಮಾಭಿಮಾನ, ಜಾತ್ಯಾಭಿಮಾನಾದಿಗಳ ಸಲುವಾಗಿ ತಮ್ಮ ಅಮೌಲ್ಯವಾದ ಪ್ರಾಣ, ಮಾನ, ಧನ, ಯೌವ್ವನಾದಿಗಳನ್ನೆಲ್ಲಾ ಸಮರ್ಪಿಸಿದ್ದಾರೆ. ಸರ್ವತ್ಯಾಗ ಮಾಡಿದ್ದಾರೆ. ಇಂತಿರುವಾಗ ನನ್ನದೇನೂ ಅತಿಶಯವಲ್ಲ. ನಾನೊಂದು ವೇಳೆ ನನ್ನ ಪ್ರಾಣಾರ್ಪಣೆ ಮಾಡಿದ್ದರೂ ಸಾರ್ಥಕವೇ ಆಗಿದ್ದಿತು. ತಂದೆಯಾದ ನಿನಗೆ ಇದಕ್ಕಿಂತ ಇನ್ನಾವ ಹೆಚ್ಚಿನ ತ್ಯಾಗ ಮಾಡಬಲ್ಲೆ ಎಂದು ಹೀಗೆ ಅನೇಕ ಪ್ರಕಾರದಿಂದ ಹೇಳಿ ಸಂತೈಸಿದನು.

ಸಿಂಧುರಾಜನಿಗೆ ಭಾಷೆ ಕೊಟ್ಟಂತೆ ಮುಂಜುರಾಜನು ಭೋಜರಾಜಕುಮಾರನಿಗೆ ಲಗ್ನ, ಪಟ್ಟಾಭಿಷೇಕ ಮಹೋತ್ಸವವನ್ನು ಅತಿ ವೈಭವ, ವಿಜೃಂಭಣೆಯಿಂದ ಮಾಡಿ ನೆರವೇರಿಸಿದನು.

ಈ ರೀತಿಯ ನೀತಿ ಕಥೆಗಳು ಮಧ್ಯ ಭಾರತದಲ್ಲಿ ಜನಪ್ರಿಯಗೊಂಡಿರುವುದನ್ನು ಹನುಮಂತಯ್ಯನವರು ತುಂಬಾ ಸ್ಪಷ್ಟವಾಗಿ ಅರ್ಥಗಳ ಸಮೇತವಾಗಿ ಪರಿಚಯಿಸಿಕೊಟ್ಟಿದ್ದಾರೆ.

೪. ಭಾರವಿ ಕವಿಯ ಜೀವನ ಚರಿತ್ರೆ

ಹನುಮಂತಯ್ಯನವರು 'ಭಾರವಿ ಕವಿ'ಯ ಜೀವನ ಚರಿತ್ರೆಯನ್ನು ಪರಿಚಯಿಸಿದ್ದಾರೆ. ಈ ಕವಿಯೂ ಸಹ ಭೋಜಮಹಾರಾಜನ ಆಸ್ಥಾನದಲ್ಲಿದ್ದವನು. ಈತನ ತಂದೆ ಶ್ರೀಧರ, ತಾಯಿ ಸುಶೀಲ ಎಂದು ಹನುಮಂತಯ್ಯನವರು ಹೇಳಿದರೆ, ದಂಡಿ ರಚಿತವಾದ ಆವಂತೀ ಸುಂದರೀ ಕಥಾ ಎಂಬ ಗದ್ಯ ಕಾವ್ಯದ ಪ್ರಕಾರ ಭಾರವಿಯ ಜನ್ಮನಾಮ "ದಾಮೋದರ."[೨೭] ಇವನ ತಂದೆ ನಾರಾಯಣಸ್ವಾಮಿ ಕೌಶಿಕ ಗೋತ್ರದ ಬ್ರಾಹ್ಮಣವಂಶ ಎಂದಿದೆ. ದಾಮೋದರನು ತನ್ನ ಅಪ್ರತಿಮ ಕವಿತಾ ಸಾಮರ್ಥ್ಯದಿಂದ "ಭಾರತಿ"(ಹೊಳೆಯುವ ಸೂರ್ಯ) ಎಂದು ಪ್ರಖ್ಯಾತವಾಗಿ ಚಾಲುಕ್ಯರಾಜ ವಿಷ್ಣುವರ್ಧನನ ಮೈತ್ರಿ ಪಡೆದನು. ಕಾಲಕ್ರಮೇಣ ಗಂಗರಾಜ ದುರ್ವಿನೀತನ ಆಸ್ಥಾನದಲ್ಲಿ ಆಶ್ರಯವನ್ನು ಪಡೆದು ಕೊನೆಗೆ ಕಂಚಿಯ ಪಲ್ಲವರಾಜ ಸಿಂಹ ವಿಷ್ಣುವಿನ ಆಸ್ಥಾನದ ಕವಿಯಾದನು. ವಿಷ್ಣುವರ್ಧನ, ದುರ್ವಿನೀತ ಹಾಗೂ ಸಿಂಹ ವಿಷ್ಣು ಈ ಮೂವರು ಕ್ರಿ.ಶ. ಆರನೆಯ ಶತಮಾನದವರೆಂಬುದು ತಿಳಿದುಬಂದಿದೆ. ಭಾರವಿಯು ಅದೇ ಕಾಲದವನು ಎಂದು ಅಂಗೀಕರಿಸಲಾಗಿದೆ. ಇದಕ್ಕೆ

ಪೂರಕವಾದುದು. ಕ್ರಿ.ಶ. ೬೩೪ರಲ್ಲಿ ರಚಿತವಾದ ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನದ 'ಸ ವಿಜಯತಾಂ ರವಿಕೀರ್ತಿಃ ಕವಿತಾಶ್ರಿತ ಕಾಳಿದಾಸ ಭಾರವಿಕೀರ್ತಿಃ' ಎಂಬ ಉಲ್ಲೇಖವಿದೆ.[೨೮] ಕ್ರಿ.ಶ. ಸುಮಾರು ೬೫೦ರಲ್ಲಿ ರಚಿತವಾದ ಕೌಶಿಕ ಎಂಬ ವ್ಯಾಕರಣ ಗ್ರಂಥದಲ್ಲಿ ಭಾರವಿಯ ಶ್ಲೋಕವೊಂದು ಉಧೃತವಾಗಿದೆ. ಹೀಗೆ ಭಾರವಿಯ ಕಾಲವನ್ನು ಕ್ರಿ.ಶ. ೫೦೦–೫೫೦ ಎಂದು ಊಹಿಸಬಹುದಾಗಿದೆ. ರಾಜರ ಸಹವಾಸದಿಂದ ಇವನಿಗೆ ರಾಜನೀತಿಯಲ್ಲಿ ನಿಶ್ಚಿತವಾದ ಜ್ಞಾನವಿದ್ದಿತೆಂದು ಪ್ರತೀತವಾಗುತ್ತದೆ. ರಾಜರ ದೊಡ್ಡ ದೊಡ್ಡ ನಗರಗಳಲ್ಲಿ ಕಾವ್ಯ ಮತ್ತು ಶಾಸ್ತ್ರಗಳ ಪರೀಕ್ಷಾರ್ಥವಾಗಿ ಬ್ರಹ್ಮ ಸಭೆಗಳನ್ನು ನಡೆಯಿಸಬೇಕೆಂದು ರಾಜಶೇಖರನು ಬರೆದಿರುತ್ತಾನೆ. ಉಜ್ಜೈನಿಯಲ್ಲಿ ಈ ವಿಧವಾದ ಸಭೆಗಳು ನಡೆಯುತ್ತಿದ್ದವು. ಅದರಲ್ಲಿ ದೊಡ್ಡ ಕವಿಗಳ ಪರೀಕ್ಷೆಯು ನಡೆಯುತ್ತಿದ್ದಿತು. ಕಾಳಿದಾಸ ಮತ್ತು ಭಾರವಿಯೂ ಭರ್ತೃಮೇಂಠರಂತೆ ಸಹ ಉಜ್ಜೈನಿಯ ಪರೀಕ್ಷೆಗೆ ಬಂದಿದ್ದರು. ಅದರಲ್ಲಿ ಉತ್ತೀರ್ಣನಾದ ಭಾರವಿಯ ಖ್ಯಾತಿಯು ಹರಡಿತು.

ಭಾರವಿಗೆ "ಆತಪತ್ರ ಭಾರವಿ" ಎಂಬ ಬಿರುದು ಇದ್ದಿತು.[೨೯] ಇದಕ್ಕೆ ರಸಿಕರು ಈ ಕೆಳಗಿನ ಶ್ಲೋಕದ ಸುಂದರವಾದ ಅರ್ಥಕ್ಕೆ ಮುಗ್ಧರಾಗಿ ಈ ಹೆಸರನ್ನು ಕೊಟ್ಟಿದ್ದರು.

> ಉತ್ಫುಲ್ಲ ಸ್ಥಲನಲಿನೀವನಾದ ಮುಷ್ಮಾ, ದುದ್ಧೂತಃ ಸರಸಿಜಸಂಭವಃ ಪರಾಗಃ
> ವಾತ್ಯಾರ್ಣಿಹತಿ ವಿವರ್ಜಿ ತಃ ಸಮಂತಾ ದಾಧತ್ತೆ ಕನಕಮಯಾತಪತ್ರಲಕ್ಷ್ಮೀಮ್ ॥
>
> (ಕಿರಾತಾರ್ಜುನೀಯಂ ೫–೩೯)

ಅಂದರೆ ಸ್ಥಳ ಕಮಲಗಳಿಂದ ವನವೆಲ್ಲಾ ತುಂಬಿದೆ. ಅವು ಹಳದಿ ಪರಾಗಗಳಿಂದ ತುಂಬಿವೆ. ಗಾಳಿಯು ಮಂದವಾಗಿ ಬೀಸುತ್ತಲಿದೆ. ಅದು ಪರಾಗವನ್ನು ಎಬ್ಬಿಸಿ ಆಕಾಶದಲ್ಲಿ ಹರಡುವಂತೆ ಮಾಡುತ್ತಿದೆ. ಈ ವಿಧದಲ್ಲಿ ಕಮಲದ ಪರಾಗವು ಚಿನ್ನದಿಂದ ಮಾಡಲ್ಪಟ್ಟ ವನದ ಛತ್ರಿಯಂತೆ ಶೋಭಾಯಮಾನವಾಗಿದೆ. ಆಕಾಶದಲ್ಲಿ ಹರಡಿರುವ ಪರಾಗವು ಚಿನ್ನದಿಂದ ಮಾಡಲ್ಪಟ್ಟ ವನದ ಹಳದಿಯ ಛತ್ರಿಯಂತೆ ಕಾಣುತ್ತದೆ. ಹೀಗೆ ಈ ಕನಕಮಯ ಆತಪತ್ರದ ಪ್ರಯೋಗ ಸಹೃದಯರನ್ನು ಮುಗ್ಧಗೊಳಿಸಿರುವುದರಿಂದ ಭಾರವಿಗೆ "ಆತಪತ್ರ ಭಾರವಿ" ಎಂಬ ಬಿರುದು ಬಂದಿದೆ.

ಹನುಮಂತಯ್ಯನವರು ಭಾರವಿಯ ಜೀವನದ ಬಗೆಗೆ ಒಂದು ದಂಥಕತೆ ಹೇಳಿದ್ದಾರೆ.[೩೦] ಅದು ನೀತಿಬೋಧಕವೂ ಸ್ವಾರಸ್ಯಕರವೂ ಆಗಿದೆ.

"ಭಾರವಿ ಬಾಲ್ಯದಲ್ಲಿರುವಾಗ ಪ್ರತಿಭಾವಂತನಾಗಿದ್ದನು. ನಿಸರ್ಗದತ್ತವಾದ ಅವನ ಪಾಂಡಿತ್ಯ ಮತ್ತು ಕಾವ್ಯವೈಭವಕ್ಕೆ ವಿದ್ವಾಂಸರು ಮಾರುಹೋಗಿದ್ದರು. ಅವರು ಭಾರವಿಯ ತಂದೆಯ ಹತ್ತಿರ ಮಗನ ಕವಿತಾಚಾತುರ್ಯವನ್ನು ಪ್ರಶಂಸಿಸುತ್ತಿದ್ದರು. ತಂದೆಗೆ ಮಾತ್ರ ಮಗನಲ್ಲಿ ತಿರಸ್ಕಾರ. ಆತ ಮಗನನ್ನು ತುಂಬಿದ ಸಭೆಗಳಲ್ಲಿ ಹೀಯಾಳಿಸುತ್ತಿದ್ದನು. ಇದು ಪ್ರತಿಷ್ಠಿತನಾದ ಭಾರವಿಗೆ

ಜಿಗುಪ್ಸೆಯನ್ನುಂಟು ಮಾಡುತ್ತಿತ್ತು. ಅವನು ಅದಕ್ಕಾಗಿ ಮನಸ್ಸಿನಲ್ಲಿಯೇ ಕೊರಗುತ್ತಿದ್ದನು. ದಿನೇ ದಿನೇ ತನಗೆ ತಂದೆಯಿಂದ ಆಗುತ್ತಿದ್ದ ತೇಜೋವಧೆಯನ್ನು ಸಹಿಸಲಾರದೆ ಭಾರವಿಯು ತಂದೆಯನ್ನು ತೀರಿಸಿಬಿಡುವ ನಿರ್ಧಾರಕ್ಕೆ ಬಂದನು. ರಾತ್ರಿಯ ಹೊತ್ತು ತಂದೆತಾಯಿ ಇಬ್ಬರೂ ಊಟ ಮಾಡಿ, ಮಲಗುವ ಕೋಣೆಗೆ ಹೋಗಿ ಬಾಗಿಲನ್ನು ಭದ್ರಪಡಿಸಿದ ಮೇಲೆ ಭಾರವಿಯು ಹೊಂಚು ಹಾಕಿಕೊಂಡು ಕುಳಿತಿದ್ದನು. ಸದ್ದಾಗದಂತೆ ಅಲ್ಲಿಗೆ ಹೋಗಿ ಬಾಗಿಲ ಬಳಿ ನಿಂತಾಗ ತಾಯಿಯು ತಂದೆಯ ಹತ್ತಿರ ಮಗನ ವಿಚಾರವಾಗಿ ವಾದಿಸುತ್ತಿದ್ದರು. "ನೀವೇ ಮಗನನ್ನು ಹೀಗೆ ಸಭೆಗಳಲ್ಲಿ ಹೀಯಾಳಿಸಬಹುದೆ? ಅವನು ದೊಡ್ಡ ವಿದ್ವಾಂಸನೆಂದು ಲೋಕದಲ್ಲಿ ಪ್ರಸಿದ್ಧಿಯಿದೆ. ನೀವು ಹೀಗೆ ಮಾಡುವುದರಿಂದ ಅವನು ಜೀವನದಲ್ಲಿ ಜಿಗುಪ್ಸೆ ತಳೆದಿದ್ದಾನೆ" ಎಂದಳು. ಆಗ ತಂದೆಯು ಮುಗುಳ್ನಗೆ ಬೀರಿ ನನಗೆ ಭಾರವಿಯಲ್ಲಿ ಎಲ್ಲರಿಗಿಂತ ಹೆಚ್ಚು ಪ್ರೀತಿಯಿದೆ. ಆದರೆ ಅವನನ್ನು ಪ್ರಶಂಸಿಸತೊಡಗಿದರೆ ಅವನು ಅಹಂಕಾರಿಯಾಗಬಹುದು. ಅದಕ್ಕಾಗಿ ಅವನನ್ನು ಹೀಗೆ ಹೀಯಾಳಿಸುವಂತೆ ನಟಿಸುತ್ತೇನೆ ಅದು ಅವನ ಶ್ರೇಯಸ್ಸಿಗಾಗಿ ಎಂದನು. ಇದನ್ನು ಕೇಳಿದ ಭಾರವಿಯು ವಿಹ್ವಲವಾದನು. ತನ್ನ ಅವಿವೇಕಕ್ಕಾಗಿ ತುಂಬಾ ವ್ಯಥೆಪಟ್ಟನು. ಅವನಿಗೆ ಆ ರಾತ್ರಿ ನಿದ್ರೆಯೇ ಬರಲಿಲ್ಲ. ಪುತ್ರವಾತ್ಸಲನಾದ ಇಂಥ ತಂದೆಯನ್ನು ಕೊಲ್ಲುವ ಸಂಕಲ್ಪ ಮಾಡಿದುದಕ್ಕಾಗಿ ಸೂಕ್ತ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆನಿಸಿತು. ಎಷ್ಟು ಯೋಚಿಸಿದರೂ ಸಮಸ್ಯೆ ಬಗೆಹರಿಯಲಿಲ್ಲ, ಅದಕ್ಕಾಗಿ ಅವನು ಬೆಳಗ್ಗೆ ತಂದೆಯ ಬಳಿ ಬಂದು ವಂದಿಸಿ ಬಿನ್ನೈಸಿದನು.

ಅಪ್ಪ ನನಗೆ ಧರ್ಮ ಶಾಸ್ತ್ರದಲ್ಲಿ ಒಂದು ಸಂದೇಹ ಬಂದಿದೆ. ನೀವು ಅದನ್ನು ಬಗೆಹರಿಸಬೇಕು ಎಂದನು ಕಾತುರಗೊಂಡು.

ಮಗು ಇದಕ್ಕೇಕೆ ಇಷ್ಟು ಕಾತುರಗೊಳ್ಳುವೆ' ವಿಷಯವನ್ನು ಹೇಳು ಸೂಕ್ತ ಪರಿಹಾರವನ್ನು ಯೋಚಿಸುವ. ತಂದೆ ಮಗನ ಮೈದಡವಿ ಹೇಳಿದನು. "ಪುತ್ರವಾತ್ಸಲ್ಯರಾದ ತಂದೆಯನ್ನು ನಿಷ್ಕಾರಣವಾಗಿ ಕೊಲ್ಲಬಯಸುವ ಮಗನಿಗೆ ಪ್ರಾಯಶ್ಚಿತ್ತವು ಯಾವುದು?" ಎಂದು ಭಾರವಿ ದೈನ್ಯದಿಂದ ಕೇಳಿದ. ತಂದೆ ಕ್ಷಣಕಾಲ ಯೋಚಿಸಿ,

"ಮಗು ಅಂಥವನನ್ನು ಆರು ತಿಂಗಳ ಕಾಲ ಮಾವನ ಮನೆಯಲ್ಲಿರಿಸಬೇಕು" ಎಂದು ಹಸನ್ಮುಖನಾಗಿ ಹೇಳಿದನು.

ನಿಜವೃತ್ತವನ್ನು ತಂದೆಗೆ ನಿವೇದಿಸಿ ಭಾರವಿ ಅವರ ಅಪ್ಪಣೆ ಪಡೆದು ತನ್ನ ಹೆಂಡತಿಯನ್ನು ಕರೆದುಕೊಂಡು ಶ್ವಶುರಗೃಹಕ್ಕೆ ಪ್ರಯಾಣ ಬೆಳೆಸಿದನು. ಅನಿರೀಕ್ಷಿತವಾಗಿ ಬಂದ ಮಗಳು, ಅಳಿಯಂದಿರನ್ನು ಕಂಡು ಅತ್ತೆ ಮಾವಂದಿರು ಆನಂದಿಸಿದರು. ಭಾವಮೈದುನರು ಹಿಗ್ಗಿದರು. ಅತ್ತಿಗೆ ನಾದಿನಿಯರು ಸಡಗರಗೊಂಡರು. ದಿನದಿನವೂ ವಿವಿಧ ಭಕ್ಷ್ಯ ಭೋಜ್ಯಗಳಿಂದ ಅವರನ್ನು

ತಣಿಸಿದರು. ಇವೆಲ್ಲ ಕೇವಲ ಹತ್ತಾರು ದಿವಸಗಳು ಮಾತ್ರ ನಡೆದವು. ಕಡೆಕಡೆಗೆ ಅವರ ಪಾಡು ನಾಯಿ ಪಾಡಾಯಿತು. ಮುಂದೆ ಭಾರವಿಯು ದನ ಕಾಯುವ ಕಾಯಕದಲ್ಲಿಯೂ ಮಗಳು ಕಸಮುಸುರೆ ಕೆಲಸಗಳಲ್ಲಿ ನಿಯುಕ್ತರಾದರು. "ಹಾಕು ಮಣೆ ನೂಕು ಮಣೆ" ಸಂದರ್ಭಗಳು ಅದುವರೆಗಾಗಲೇ ಕಾಣೆಯಾದವು. ಈ ಸಂದರ್ಭದಲ್ಲಿ ಕೇಳಿಬರುತ್ತಿರುವ ಕವಿ ಉಕ್ತಿಯೊಂದಿದೆ.

'ಶ್ವಶುರಗೃಹನಿವಾಸಃ ಸ್ವರ್ಗ ತುಲ್ಯೋ ಸರಾಣಾಂ
ಯದಿವಸತಿ ದಿವಾನಿ ತ್ರೀಣಿ ಪಂಚಾಥ ಸಪ್ತ ದಧಿ
ಘೃತ ಮಧು ಭಕ್ಷ್ಯಕ್ಷೀರ ಸಾರ ಪ್ರವಾಹಃ
ತದುಪರಿ ದಿನಮೇಏಕ್ಕಂ ಪಾದರಕ್ಷ ಪ್ರಯೋಗಃ'[೩೧]

ಅಂದರೆ ಮಾವನ ಮನೆ ಅಳಿಯಂದಿರಿಗೆ ಸ್ವರ್ಗಕ್ಕೆ ಸಮ. ಐದು ಇಲ್ಲವೇ ಏಳು ದಿನಗಳು ಮಾತ್ರ, ಅಲ್ಲಿಯವರೆಗೆ ಅವರ ಮುಂದೆ ಹಾಲು, ತುಪ್ಪ ಮತ್ತು ಮಧುರ ಭಕ್ಷ್ಯಗಳ ಹೊಳೆಯೇ ಹರಿಯುತ್ತದೆ. ಆದರೆ ಅದರ ಮೇಲೆ ಅವನು ಒಂದು ದಿನವಿದ್ದರೂ ಸಾಕು ಅಲ್ಲಿ ಅವನಿಗೆ ಪಾದರಕ್ಷೆ ಪೂಜೆ ಸಿದ್ಧ.

ಅಂದಿನಿಂದ ಭಾರವಿಯು ಪ್ರಾತಃಕಾಲದ ನಂತರ ದನಕರುಗಳನ್ನು ಮೇಯಿಸಿಕೊಂಡು ಬರಲು ಹುಲ್ಲುಗಾವಲುಗಳಿಗೆ ಕೊಂಡೊಯ್ದು ಅವುಗಳನ್ನು ಮೇಯಗೊಟ್ಟು ತಾನೊಂದು ಮರದಡಿಯಲ್ಲಿ ಕುಳಿತು ತಾಳೆಯೋಲೆ(ಗರಿ)ಗಳ ಮೇಲೆ ಕಬ್ಬಿಣದ ಕಂಠದಿಂದ ಶ್ಲೋಕಗಳನ್ನು ಬರೆಯುತ್ತಾ ಹೋದನು. ರಚಿಸಿದ ಶ್ಲೋಕಗಳುಳ್ಳ ತಾಳೆಯೋಲೆಗಳು ಆತನ ಬಳಿಯಲ್ಲಿ ರಾಶಿರಾಶಿಯಾಗಿ ಬಿದ್ದು ಹೋದವು. ಈ ಶ್ಲೋಕಗಳ ಗ್ರಂಥವೇ "ಕಿರಾತಾರ್ಜುನೀಯ" ಮಹಾಕಾವ್ಯವು.

ಒಂದು ದಿನ ಭಾರವಿಯ ಹೆಂಡತಿಗೆ ಸ್ವಲ್ಪ ಹಣವು ಬೇಕಾಗಿದ್ದಿತು. ಪತಿಯನ್ನು ಬೇಡಿದಳು. ಆದರೆ ಆ ಸಮಯದಲ್ಲಿ ಭಾರವಿ ಬಳಿಯಲ್ಲಿ ಹಣವೆಲ್ಲಿಂದ ಬರಬೇಕು? ಭಾರವಿ ಅವಳನ್ನು ಸಮಾಧಾನಪಡಿಸಿ, ಆ ದಿನ ರಚಿಸಿದ ಪದ್ಯ ಭಾಗವೊಂದನ್ನು ಅವಳಿಗೆ ಕೊಟ್ಟು ಹೇಳಿದನು.

ಇದನ್ನು ಯಾರಾದರೊಬ್ಬ ಧನಿಕನಿಗೆ ಕೊಟ್ಟು ಹಣವನ್ನು ಪಡೆದುಕೋ ಎಂದು ಕೊಟ್ಟನು.

ಮರುದಿನ ಆಕೆ ಮನೆಗೆಲಸಗಳನ್ನೆಲ್ಲಾ ಮುಗಿಸಿ ಆ ಪದ್ಯವನ್ನು ತೆಗೆದುಕೊಂಡು ಪೇಟೆಗೆ ನಡೆದಳು. ಅಲ್ಲಿ ಅವಳು ಓರ್ವ ವರ್ಧಮಾನ ಧನಿಕನ ಮನೆಗೆ ಹೋಗಿ ಮನೆಯೊಡತಿಯೊಡನೆ ಆ ಪದ್ಯವನ್ನು ಕೊಟ್ಟು ಹಣ ಬೇಡಿದಳು. ಆಕೆ ಅದನ್ನು ತೆಗೆದುಕೊಂಡು ಅದಕ್ಕೆ ಸೂಕ್ತ ಮೌಲ್ಯವನ್ನು ಮರುದಿನ ಕೊಡುವುದಾಗಿ ಹೇಳಿಕಳುಹಿಸಿದಳು. ವರ್ಧಮಾನನ ಪತ್ನಿಯು ಆ ಓಲೆಯನ್ನು ತಾನು

ಮಲಗುವ ಮಂಚದ ಕಂಬಕ್ಕೆ ನೇತುಹಾಕಿದಳು. ವರ್ಧಮಾನನು ಪರದೇಶಕ್ಕೆ ವ್ಯಾಪಾರಾರ್ಥವಾಗಿ ಹೋಗಿ ಅಂದಿಗೆ ಹದಿನಾಲ್ಕು ಹದಿನೈದು ವರ್ಷಗಳಾಗಿದ್ದವು. ಅವನು ಹೊರಟು ಹೋಗುವಾಗ ಅವನ ಹೆಂಡತಿಯು ಗರ್ಭಿಣಿಯಾಗಿದ್ದಳು. ಇಂದು ಅವಳು ಪುತ್ರವತಿ. ಮಗ ಹದಿನಾಲ್ಕು ಹದಿನೈದುವರ್ಷಗಳ ತರುಣ. ರಾತ್ರಿ ಅವಳು ಮಗನೊಡನೆ ಒಂದೇ ಹಾಸಿಗೆಯಲ್ಲಿ ಮಲಗುವುದು ಪದ್ಧತಿ. ಯಾವ ದಿವಸ ತಾಳೆಗರಿಯನ್ನು ಅಡವಿಟ್ಟುಕೊಂಡಳೋ ಅಂದಿನ ರಾತ್ರಿಯೇ ಈಕೆಯ ಗಂಡನಾದ ವರ್ಧಮಾನನು ಪರದೇಶದಿಂದ ಹಿಂತಿರುಗಿ ಬಂದನು. ಬಂದವನೇ ನೇರವಾಗಿ ಮನೆಯನ್ನು ಹೊಕ್ಕಾಗ ತನ್ನ ಹೆಂಡತಿಯ ಪಕ್ಕದಲ್ಲಿ ಓರ್ವ ತರುಣನು ಮಲಗಿದ್ದನ್ನು ಕಂಡನು. ಆ ದೃಶ್ಯ ಅವನನ್ನು ವಿಹ್ವಲಗೊಳಿಸಿತು. ತನ್ನ ಪತ್ನಿ ಯುವಕನೊಂದಿಗೆ ಮಲಗಿದ್ದಾಳೆ. ಮೈರಕ್ತ ಬಿಸಿಯೇರಿತು. ಕೋಪೋದ್ರಿಕ್ತನಾದ ಅವನ ಕೈ ನಡುಪಟ್ಟಿಯಲ್ಲಿ ತೂಗುತ್ತಿದ್ದ ಖಡ್ಗಕ್ಕೆ ಅಪ್ರಯತ್ನವಾಗಿ ಸಾಗಿತು. ಓರೆಯಿಂದ ಖಡ್ಗವನ್ನೆಳೆದು ಇಬ್ಬರನ್ನೂ ಒಂದೇ ಬಾರಿಗೆ ತುಂಡರಿಸಲು ನಿರ್ಧರಿಸಿದ. ಅವನು ಖಡ್ಗವನ್ನು ಮೇಲಕ್ಕೆತ್ತಿದನು. ದೈವವಶಾತ್ ಖಡ್ಗವು ಮಂಚಕ್ಕೆ ತೂಗುಹಾಕಿದ್ದ ತಾಳೆಯೋಲೆಗೆ ತಗುಲಿ ಅದು ಕೆಳಕ್ಕೆ ಬಿತ್ತು. ವರ್ಧಮಾನನು ಕೆಳಗೆ ಬಿದ್ದ ತಾಳೆಗರಿಯನ್ನು ಕೈಗೆತ್ತಿಕೊಂಡು ಶಯನಗೃಹದ ಮಂದ ಪ್ರಕಾಶದಲ್ಲಿ ಓದಿದನು.

ಸಹಸಾವಿದಹೀತನ ಕ್ರಿಯಲಿ । ಅವಿವೇಕಃ ಪರಮಾಪದಾಂ ಪದಮ್ ॥
ವೃಣತೇಹಿ ವಿಮೃರ್ಶಯಕಾರಿಣಂ ಗುಣಬುಲ್ಧಾಃ ಸ್ವಯಮೇವ ಸಂಪದಃ
(ಕಿರಾತಾರ್ಜುನೀಯ –೨–೩೦)

"ದುಡುಕಿ ಯಾವ ಕೆಲಸವನ್ನೂ ಮಾಡಬಾರದು. ಹಾಗೆ ಮಾಡುವುದು ಮಹಾವಿಪತ್ತುಗಳಿಗೆ ಕಾರಣ. ಪೂರ್ವಾಪರ ವಿಚಾರ ಮಾಡಿ ಕೆಲಸ ಮಾಡುವವನಿಗೆ ಸಂಪತ್ತುಗಳು ತಾವಾಗಿಯೇ ಒಲಿದು ಬರುತ್ತವೆ" ಎಂಬುದು ಈ ಶ್ಲೋಕಾಭಿಪ್ರಾಯವು. ಅವನ ಪ್ರಕ್ಷುಬ್ಧ ಚಿತ್ತಕ್ಕೆ ತಣಿಯನ್ನು ನೀಡಿತು. ಕೂಡಲೆ ಅವನು ಹೆಂಡತಿಯನ್ನು ಎಬ್ಬಿಸಿದನು. ಅವಳು ಪತಿಯನ್ನು ಗುರ್ತಿಸಿ ಸಂಭ್ರಮದಿಂದ ಮಗನನ್ನು ಎಬ್ಬಿಸಿ ತಂದೆಗೆ ವಂದಿಸುವಂತೆ ಹೇಳಿ ತಾನೂ ವಂದಿಸಿದಳು. ದೃಶ್ಯವನ್ನು ಕಂಡ ಧನಿಕನು ನಿಬ್ಬೆರಗಾದನು. ಅವನ ಕೈಯಲ್ಲಿದ್ದ ಖಡ್ಗವು ಕೆಳಗೆ ಬಿತ್ತು. ತನ್ನ ಅವಿವೇಕಕ್ಕಾಗಿ ಮರುಗಿದನು. ತಾನು ದುಡುಕಿದ್ದ ಪಕ್ಷದಲ್ಲಿ ಆಗಲಿದ್ದ ಅನರ್ಥವನ್ನು ಯೋಚಿಸಿ ಭಗವಂತನಿಗೆ ಮನಸಾ ವಂದಿಸಿದನು. ಈ ಅನರ್ಥವನ್ನು ತಡೆದ ತಾಳೆ(ಭುರ್ಜ) ಪತ್ರದ ವೃತ್ತಾಂತದಿಂದ ಪತ್ನಿಯ ಮುಖದಿಂದ ಅರಿತು ಆನಂದಿಸಿದನು.

ಮರುದಿನ ವರ್ಧಮಾನ ಧನಿಕನು ಭಾರವಿಯ ಪತ್ನಿಯನ್ನು ತನ್ನ ಮನೆಗೆ ಬರಮಾಡಿಕೊಂಡು ಅನರ್ಘ್ಯವಾದ ವಸ್ತ್ರಾಭರಣಗಳನ್ನು ಪುಷ್ಕಳ ಧನವನ್ನು ಕಾಣಿಕೆಯಾಗಿ ಇತ್ತು ಗೌರವಿಸಿದನು.

ನಡೆದ ವೃತ್ತಾಂತವನ್ನು ಕೇಳಿ ಉಭಯ ವಂಶದವರು ಆನಂದಭಾಷ್ಪಗರೆದರು. ಇಂತಹ ದಂತಕತೆಯ ಯಥಾರ್ಥತೆಯ ಬಗ್ಗೆ ಸಂದೇಹವಿರಬಹುದಾದರೂ ಕವಿ ಸ್ವಸಾಮರ್ಥ್ಯದಿಂದ ಪ್ರಖ್ಯಾತನಾದುದರ ಬಗ್ಗೆ ಸಂದೇಹವಿಲ್ಲ ಎಂದು ಹೇಳಬಹುದು.

೫. ಉಣ್ಣೆ ವಸ್ತ್ರ ನೇಯಿಗೆ ಕಲೆಯ ಪ್ರಾಚೀನತೆ

ಸಾಮಾಜಿಕ ಹಾಗೂ ಧಾರ್ಮಿಕ ಜೀವನದಲ್ಲಿ ಮಹತ್ತರ ಪಾತ್ರ ವಹಿಸುವ ಉಣ್ಣೆವಸ್ತ್ರ ಅಂದರೆ ಕಂಬಳಿಯ ಪ್ರಾಚೀನತೆ ಕುರಿತು ಹನುಮಂತಯ್ಯನವರು ಪರಿಚಯಿಸಿದ್ದಾರೆ.

ಕೃತ ಅಥವಾ ಸತ್ಯಯುಗದ ಮಾನವ ವಂಶದ ಇತಿಹಾಸವೇ 'ವೇದ'ದ ವಿಚಾರ. ನಾಲ್ಕು ವೇದಗಳಲ್ಲಿ ಋಗ್ವೇದವು ಅತೀ ಪ್ರಾಚೀನವಾದುದು. ಇದು ಸುಮಾರು ೧೦೫೫೨ ಶ್ಲೋಕಗಳುಳ್ಳ ಮಹಾಗ್ರಂಥವಾಗಿದೆ.[೩೨]

ಋಗ್ವೇದದಲ್ಲಿ ವಸ್ತ್ರವಿದ್ಯೆಯ ಇತಿಹಾಸ ಬಹಳ ಕಡೆಗಳಲ್ಲಿ ಬರುತ್ತದೆ. ಮಾನವನ ಪ್ರಥಮ ಅವಶ್ಯಕತೆಗಳಲ್ಲಿ ಅನ್ನದಾನ ಉತ್ಪಾದನಾ ನಂತರ ವಸ್ತ್ರವಿದ್ಯೆಯೇ ಕಂಡುಬರುತ್ತದೆ.

ವಸ್ತ್ರವಿದ್ಯೆಯು ವೇದಗಳಲ್ಲಿ ಹೇಳಲ್ಪಟ್ಟಿರುವಂತೆಯೇ ಬ್ರಹ್ಮಸೂತ್ರ ಕಾರ್ಪಾಸ ಸೂತ್ರಗಳಲ್ಲಿ ಹೇಳಲ್ಪಟ್ಟಿದೆ. ತತ್ವವಾಯು ತಂತುವಾಯುಗಳಲ್ಲಿ ತತ್ವವಾಯು(ಜ್ಞಾನಿ) ಹೀಗೆ ಆತ್ಮಕ್ಕೆ ರಕ್ಷಣೆ ಕೊಡುವನೋ ಹಾಗೇ ನೇಕಾರನು ಎಂದರೆ ತಂತುವಾಯುವನು ದೇಹಕ್ಕೆ ರಕ್ಷಣೆ ಕೊಡುವನು. ತತ್ವವಾಯು ಮತ್ತು ತಂತುವಾಯುಗಳಿಗೆ ಮಹತ್ವದ ಅರ್ಥವಿದ್ದು, ವಿಚಾರ ಸಮುದ್ರವೇ ಅಡಗಿದೆ. ಮಹಾವಿಷ್ಣುವನ್ನು 'ಸಂತಂತು' ಎಂದು ಕರೆಯಲಾಗುತ್ತದೆ. ಅಲ್ಲದೆ ತಂತುವರ್ಧನನೆಂದೂ ಸಂಬೋಧಿಸಲಾಗಿದೆ. ಭಗವಾನ್ ಶ್ರೀಕೃಷ್ಣನು ವಸುದೇವನ ಮಗನು. ವಸುದೇವನು ವೃಷ್ಣ ವಂಶದವನು. ವೃಷ್ಣ ಎಂದರೆ ಕುರಿ ಎಂದರ್ಥ. ಉಣ್ಣೆ ಉತ್ಪಾದನೆಯು ಕುರಿಯಿಂದಲೇ. ಮೇಲೆ ಹೇಳಿದಂತೆ ಕಂಬಳಿ ನೇಯುವ ಕಲೆಯು ವೇದೋಕ್ತವಾದುದು. ಕಂಬಳ ಶಬ್ದವು ಋಗ್ವೇದದಲ್ಲಿ ಮಾತ್ರವಲ್ಲದೆ ಅಥರ್ವಣ ವೇದದಲ್ಲಿಯೂ ಬರುತ್ತದೆ. ವೇದಕಾಲದಿಂದಲೂ ಕುರುಬರು ಕಂಬಳಿ ನೇಯ್ದು ಮಾರಾಟ ಮಾಡಿ ಜೀವನೋಪಾಯ ಮಾಡುವರು. ಅವರು ಅಪರೂಪಕ್ಕೆ ಇದರೊಂದಿಗೆ ವ್ಯವಸಾಯ ಮಾಡಿದರೂ ಇವರಿಗೆ ಕಂಬಳಿ ಕುರುಬರು ಎಂದು ಹೆಸರು ಉಳಿದುಬಂದಿದೆ.[೩೩] ಪ್ರಪಂಚದಲ್ಲಿ ಪ್ರಪ್ರಥಮ ನಾಗರಿಕತೆಗೆ ಮೂಲ ಕಾರಣವಾದ ಈ ನೇಯ್ಗೆ ಕಲೆಯನ್ನು ಜಗತ್ತಿಗೆ ಮೊದಲು ತೋರಿಸಿಕೊಟ್ಟವರು ಈ ಕುರುಬರೊಳಗಿನ ಹಟ್ಟಿಕಾರ ದನಗಾರರೆಂಬುವರು.

ಹನುಮಂತಯ್ಯನವರ "ಭಾರತ ದೇಶದ ಕುರುಬರ ಚರಿತ್ರೆ" ಕೃತಿಯಲ್ಲಿ V.George ಚಕ್ರವರ್ತಿಗಳ ಪಟ್ಟಾಭಿಷೇಕ ಮಹೋತ್ಸವ ವಿಶೇಷ ಸಂಚಿಕೆ(೧೯೧೧ ಡಿಸೆಂಬರ್ ದೆಹಲಿ)ಯಲ್ಲಿ H.I.Mejesty

ಅವರು ಹೇಳಿದಂತೆ ವೇದಕಾಲಕ್ಕಾಗಲೀ ಸ್ವಂತವಾಗಿ ಉಣ್ಣೆಯನ್ನು ಹಿಂಜಿಕೊಂಡು ನೂಲನ್ನು ನೂತು ಕಂಬಳಿಗಳನ್ನು ನೆಯ್ದುಕೊಳ್ಳುತ್ತಿದ್ದರು ಮತ್ತು ದಾನವಾಗಿ ಕೊಡುತ್ತಿದ್ದರು ಎಂಬ ವಿವರಣೆಯಿದೆ.[೩೪] ಇದರಿಂದ ವೇದಕಾಲದಲ್ಲಿ ಕಂಬಳಿ ನೆಯ್ಗೆಯ ವೃತ್ತಿಯು ವೈಯಕ್ತಿಕ ನೆಲೆಯಲ್ಲಿ ನಡೆಯುತ್ತಿದ್ದಿರಬಹುದೆಂದು ಊಹಿಸಬಹುದಾಗಿದೆ. ಅಲ್ಲದೆ ಆ ಕಾಲದಲ್ಲಿ ಅನ್ನದಾನ ವಿದ್ಯಾ ದಾನಗಳಂತೆ ಕಂಬಳಿ ದಾನವೂ ಕೂಡ ಮಹತ್ವ ಪಡೆದಿತ್ತೆನ್ನಿಸುತ್ತದೆ.

ಹಾಗೆಯೇ ಇದೇ ಕೃತಿಯಲ್ಲಿ ವೇದಿಕತ್ವಟೇಶನು From Rigveda by Dr.H.H. Grimswold ಹೇಳಿದ ಪಶುಪಾಲನಾ ವ್ಯವಸಾಯ ಕಂಬಳಿ ನೆಯ್ಗೆಯ ಕುಸುಬು(ಕುಶಲ ಕೈಗಾರಿಕೆ) ಪ್ರಾಚೀನವೂ ಪಾವಿತ್ರ್ಯವೂ ಆದ ವೇದೋಕ್ತ ವೃತ್ತಿಗಳಾಗಿರುತ್ತದೆಂಬ ಅಂಶವನ್ನು ಉದ್ಧರಿಸಲಾಗಿದೆ.[೩೫] ಇದರಿಂದ ಕಂಬಳಿ ನೆಯ್ಗೆಯ ವೃತ್ತಿಯು ಅತ್ಯಂತ ಪ್ರಾಚೀನವೂ ಪವಿತ್ರವೂ ಆದ ವೃತ್ತಿ ಎಂಬ ಅಂಶ ಸ್ಪಷ್ಟವಾಗುತ್ತದೆ.

ಮನುಸ್ಮೃತಿ ಹಿಂದು ಧರ್ಮಕ್ಕೆ ಬುನಾದಿಯಾದ ಗ್ರಂಥ. ಇದರ ರಚನೆಯ ಕಾಲವನ್ನು ಬುಲ್ಹರ್ ಮತ್ತು ಕಾಣೆ ಎಂಬ ವಿದ್ವಾಂಸರು ಕ್ರಿಪೂ. ೨೦೦ರಿಂದ ಕ್ರಿಶ. ೨೦೦ರ ಒಳಗಾಗಿ ಇದೆ ಎಂದು ಅಭಿಪ್ರಾಯ ಪಡುತ್ತಾರೆ. ಇದರಲ್ಲಿ ಕಂಬಳಿಯ ಪ್ರಸ್ತಾಪವಿಲ್ಲವಾದರೂ ಉಣ್ಣೆಯ ನೂಲಿನ ಉಲ್ಲೇಖವಿದೆ.

'ಕಾರ್ಪಾಸಮುಪವೀತಂ ಸ್ಯಾದ್ವಿಪ್ರಸ್ಯೋರ್ಧ್ವವೃತಂ ತ್ರಿವೃತ್
ಶ್ರಣ ಸೂತ್ರಮಯಂ ರಾಜ್ಞೋ ವೈಶ್ಯಸ್ಯಾ ವಿಕಸೌತ್ರಿಕಂ'[೩೬]

ಹತ್ತಿ, ಸೆಣಬು ಮತ್ತು ಕುರಿರೋಮಗಳಿಂದ ಮಾಡಿದ ನೂಲಿನ ನೂಲೆಳೆಯು ಉಪವೀತವನ್ನು ಅನುಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಧರಿಸಬೇಕು ಎನ್ನುತ್ತಾರೆ. ಮನುಸ್ಮೃತಿಕಾರ ಅಂದಾಗ ಉಣ್ಣೆ ನೂಲುವಿಕೆ ಮನುಸ್ಮೃತಿ ಕಾಲಕ್ಕಾಗಲೇ ರೂಢಿಯಲ್ಲಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಅಲ್ಲದೆ ಉಣ್ಣೆಯು ಇಂದಿಗಷ್ಟೇ ಅಲ್ಲ, ಮನುಸ್ಮೃತಿ ಕಾಲದಿಂದಲೂ ಪೂಜನೀಯ ಭಾವವನ್ನು ಉಳಿಸಿಕೊಂಡು ಬಂದಿದೆ ಎಂದು ತಿಳಿಯಬಹುದು.

ಮನುಸ್ಮೃತಿಯಲ್ಲಿಯೇ ಇನ್ನೊಂದು ಕಡೆಗೆ '...ವನ್ನೇರನ್ನಾಮ ಪೂರ್ವೇಣ ಶಾಕ್ಷ್ಣಾಮಾವಿಕಾನಿ ಚ ಎನ್ನುತ್ತಾನೆ.[೩೭] ಶಣ-ಕ್ಷಮಾ ಅವಿ(ಕುರಿ)ಗಳ ನೂಲಿನ ಬಟ್ಟೆಯನ್ನು ಆದರೀಯವಾಗಿಯೂ ಹೊದಿಕೆ ಉಡಿಗೆ ಮಾಡಬಹುದು ಎಂಬ ಉಲ್ಲೇಖ ದೊರೆಯುವುದನ್ನು ನೋಡಿದರೆ, ಮನುಸ್ಮೃತಿ ಕಾಲಕ್ಕಾಗಲೇ ಉಣ್ಣೆಯ ನೂಲಿನಿಂದ ವಸ್ತ್ರವನ್ನು ನೇಯುವ ರೂಢಿ ಬೆಳೆದು ಬಂದಿತ್ತೆಂದು ತಿಳಿಯುತ್ತದೆ. ಈ ಉಲ್ಲೇಖ ಉಣ್ಣೆವಸ್ತ್ರ(ಕಂಬಳಿ) ಬಳಕೆಯ ಪ್ರಾಚೀನತೆಯನ್ನು ಮನುಸ್ಮೃತಿಗೂ ಹಿಂದೆ ಸರಿಸುತ್ತದೆ.

ಕಂಬಳಿಯ ಕುರಿತಾದ ಉಲ್ಲೇಖ ದೊರೆಯುವ ಮತ್ತೊಂದು ಪ್ರಾಚೀನ ಕೃತಿಯೆಂದರೆ, ಕೌಟಿಲ್ಯನ ಅರ್ಥಶಾಸ್ತ್ರ ಇವರ ಕಾಲ ಕ್ರಿ.ಪೂ. ೪ನೇ ಶತಮಾನ. ಹೆಸರಿನಲ್ಲಿ ಇದು ಅರ್ಥಶಾಸ್ತ್ರವಾದರೂ ಮುಖ್ಯವಾಗಿ ಸಮಾಜವೊಂದು ಸುಸ್ಥಿತಿಯಲ್ಲಿರಲು ಅನುಸರಿಸಬೇಕಾದ ನೀತಿಸಂಹಿತೆಗಳನ್ನು ಧರ್ಮಶಾಸ್ತ್ರದ ವಿಷಯಗಳನ್ನು ಹೇಳುತ್ತದೆ. ಹೀಗೆ ಹೇಳುವಾಗ ಆನುಷಂಗಿಕವಾಗಿ ತನ್ನ ಕಾಲದ ಅನೇಕ ಜನಸಾಮಾನ್ಯ ವಿಷಯವನ್ನು ಕೃತಿಯಲ್ಲಿ ಪ್ರಸ್ತಾಪಿಸಿದ್ದಾನೆ. ಹಾಗಾಗಿಯೇ ಕಂಬಳಿಯ ಕುರಿತಾದ ಸುದೀರ್ಘವಾದ ವಿವರಣೆ ಈ ಕೃತಿಯಲ್ಲಿ ದೊರೆಯುತ್ತದೆ.

ಸಂಪುಟಿಕಾ, ಚತುರಶ್ರಿಕಾ, ಲಂಬರಾ, ಕಟವಾನಕ, ಪ್ರಾವರಿಕ ಸತ್ತಲಿಕಾ ಎಂದು ಮೃಗಗಳ ರೋಮದಿಂದ ಆರು ವಿಧದ ಕಂಬಳಿಗಳನ್ನು ತಯಾರಿಸುತ್ತಾರೆಂದು[೩೮] ಕಂಬಳಿಯ ಕುರಿತಾದ ವಿವರಣೆಯನ್ನು ಅರ್ಥಶಾಸ್ತ್ರಜ್ಞ ಕೊಡುತ್ತಾನೆ. ಆ ಕಾಲದಲ್ಲಿ ಕಂಬಳಿ ಹಿಂದಿಗಿಂತಲೂ ವೈವಿಧ್ಯಮಯ ವಾಗಿ ಬಳಕೆಯಲ್ಲಿತ್ತು ಎಂಬ ಮಾಹಿತಿ ಈ ಕೃತಿಯಲ್ಲಿ ದೊರೆಯುತ್ತದೆ. ಅಲ್ಲದೆ ಉಣ್ಣೆ ಮೊದಲಾದವುಗಳಿಂದ ನೂಲು ಮಾಡಿಸಿ ಬಟ್ಟೆ ನೇಯಿಸಲು ಒಬ್ಬ ವ್ಯಕ್ತಿಯನ್ನು ನೇಮಿಸಿ ಅವನಿಗೆ ಸೂತ್ರಾಧ್ಯಕ್ಷಃ ಎಂದು ಕರೆಯುತ್ತಿದ್ದು, ಅವನ ಕರ್ತವ್ಯಗಳನ್ನು ನಿಗದಿಪಡಿಸಲಾಗುತ್ತಿತ್ತು[೩೯] ಎಂಬ ಅಂಶ ಸ್ಪಷ್ಟವಾಗುತ್ತದೆ.

೧೯೩೭ರಲ್ಲಿ ರಚಿತವಾದ ಶಂ.ಬಾ. ಜೋಶಿಯವರ 'ಕರ್ನಾಟಕ ವೀರಕ್ಷತ್ರಿಯರು' ಕೃತಿಯಲ್ಲಿ ಕಂಬಳಿಯ ಕುರಿತಾದ ಕೆಲವು ವಿಶೇಷ ಮಾಹಿತಿ ದೊರೆಯುತ್ತದೆ. "ವೇದಕಾಲದಿಂದಲೇ ಕಂಬಳಿಯ ಹೆಸರು ಕೇಳಿ ಬರುತ್ತದೆ. ಅಥರ್ವಣ ವೇದದಲ್ಲಿ 'ಕಂಬಲ' ಶಬ್ದವು ಬಂದಿದೆ ಎನ್ನುತ್ತಾರೆ.[೪೦] ಈ ಮಾಹಿತಿಯ ಲಭ್ಯತೆಯಿಂದಾಗಿ ಕಂಬಳಿ ಪದ ಹಾಗೂ ಅದರ ತಯಾರಿಕೆಯ ಪ್ರಾಚೀನತೆ ವೇದಕಾಲ ಕ್ಕಿಂತಲೂ ಹಿಂದೆ ಸರಿಯುತ್ತವೆ.

ಇದೇ ಗ್ರಂಥದ ಇನ್ನೊಂದೆಡೆಯಲ್ಲಿ ಮೊದಲು ವೇದದಲ್ಲಿ ಬಟ್ಟೆಗೆ ವಸನ, ವಸ್ತ್ರ, ವಾಸಸ್ ಎಂಬ ಪದಗಳಿವೆ ಎಂದಿದೆ. Papular Educato Mav done bedicindex VIl-11ರಲ್ಲಿ ಮ್ಯಾಕ್ ಡೊನೆಲ್ಲರು ವಾಸಸ್ ಶಬ್ದವನ್ನು ಕುರಿತ ಟಿಪ್ಪಣೆಯಲ್ಲಿ "The clothes were often woven of sheeps wool" ಎಂಬುದನ್ನು ಶಂಬಾ ಜೋಶಿಯವರು ಉಲ್ಲೇಖಿಸುತ್ತಾರೆ. ವೇದಕಾಲದಲ್ಲಿ ಉಣ್ಣೆ ಬಟ್ಟೆಯ ಬಳಕೆಯೇ ಪ್ರಧಾನವಾಗಿದ್ದಿರಬಹುದು ಎನ್ನುವ ತರ್ಕಕ್ಕೆ ಈ ಹೇಳಿಕೆ ಪುಷ್ಟಿ ನೀಡುತ್ತದೆ. ವೇದಕಾಲಕ್ಕಾಗಲೇ ಉಣ್ಣೆಯ ಬಟ್ಟೆಗಳನ್ನು ನೇಯುವ ಕಲೆಗಾರಿಕೆ ಬೆಳೆದಿತ್ತೆಂದರೆ ಇದಕ್ಕೂ ಒಂದೆರಡು ಶತಮಾನಗಳಷ್ಟು ಹಿಂದೆಯೇ ವ್ಯವಸ್ಥಿತವಾದ ಕಂಬಳಿಯ ಪ್ರಾಚೀನತೆ ಇದ್ದಿರಬಹುದು ಎನ್ನುವ ಉತ್ಪ್ರೇಕ್ಷೆಯೆನಿಸಲಾರದು.

ಈ ಉಣ್ಣೆವಸ್ತ್ರ(ಕಂಬಳಿ) ಕುರಿತಂತೆ ಪುರಾಣ ಮತ್ತು ಇತಿಹಾಸದಲ್ಲಿ ಪ್ರಸ್ತಾಪಗಳು ಕಂಡು ಬರುತ್ತವೆ. ಕುರುಬರ ಆರಾಧ್ಯದೈವ ಶ್ರೀ ಮೈಲಾರಲಿಂಗೇಶ್ವರನ ಉಡುಪು ಕಂಬಳಿಯಿಂದ ತಯಾರಿಸಿದ್ದಾಗಿದೆ. ಅದನ್ನು ಇಂದಿಗೂ ಗೊರವರಲ್ಲಿ ಕಾಣಬಹುದು. ಅದೇ ರೀತಿ ಇತಿಹಾಸದಲ್ಲಿ ಕಂಬಳಿಯ ಉಪಯೋಗದ ಬಗ್ಗೆ ಅಲ್ಲಲ್ಲಿ ಉಲ್ಲೇಖಗಳಿವೆ.

ಇಂಗ್ಲೆಂಡಿನಲ್ಲಿರುವ ಲಾರ್ಡುಗಳ ಭವನದಲ್ಲಿ ಅವರು ಕುಳಿತುಕೊಳ್ಳುವ ಗದ್ದುಗೆಯು(ಪೀಠವು) ಅಚ್ಚ ಕುರಿಯ ತುಪ್ಪಟದಿಂದ ತಯಾರಿಸಿರಬೇಕೆಂಬುದು ಪ್ರಾಚೀನ(ಪುರಾತನ) ಕಾಲದಿಂದಲೂ ನಡೆದು ಬಂದಿರುವ ಪುರಾತನ ಪದ್ಧತಿಯಿತ್ತು.

ರಾಜ ಮಹಾರಾಜರಿಗೂ ಚಕ್ರವರ್ತಿಗಳಿಗೂ, ಗುರುಪೀಠದವರಿಗೂ ಕಂಬಳಿಯ ಗದ್ದುಗೆಯು ಸಿಂಹಾಸನಕ್ಕಿಂತಲೂ ಶ್ರೇಷ್ಠವೂ ಪವಿತ್ರವೂ ಹಾಗೂ ಮಹತ್ವವೂ ಆಗಿದೆ. ಪ್ರಸ್ತುತ ಕಾಲದಲ್ಲಿಯೂ ಆಚಾರವಂತರಾದ ಅನೇಕ ಬ್ರಾಹ್ಮಣರು, ಲಿಂಗಾಯಿತರು ಸ್ನಾನ ಮಾಡಿ, ಧಾವಳಿಗಳ ಮೇಲೆ ಕುಳಿತು ದೇವರ ಪೂಜೆಯನ್ನು ಮಾಡುವರು. ಸ್ನಾನ ಮಾಡುವುದಕ್ಕೆ ಅವಕಾಶವಿಲ್ಲದಾಗ ಧಾವಳಿಯನ್ನುಟ್ಟರೆ ಅದೇ ಸ್ನಾನ ಮಾಡಿ ಮಡಿಯುಟ್ಟಂತಾಗುವುದೆಂದು ಭಾವಿಸುವರು.

ವಿವಾಹ ಕಾಲಗಳಲ್ಲಿ ವಧು-ವರರ ಕಂಕಣ ಬಂಧನಾನಂತರ ನಡೆಯಬೇಕಾಗಿರುವ "ಸಿಂಹಾಸನ ಹಾಕುವುದು" ಎಂಬ ಗದ್ದುಗೆಯ ಶಾಸ್ತ್ರವು ಮುಖ್ಯವಾದುದು. ಶಾಸ್ತ್ರಕ್ಕೂ ಮತ್ತು ಇನ್ನಿತರ ಮಂಗಳಕಾರ್ಯಗಳಿಗೂ ಕರಿಯ ಕಂಬಳಿಯೇ ಅತ್ಯಾವಶ್ಯಕವೂ-ಪವಿತ್ರವೂ ಆದುದಾಗಿದೆ.

ಕಂಬಳಿಯಂತೆಯೇ ಕಂಬಳಿಯ ದಾರ(ನೂಲು) ಅಷ್ಟೇ ಮಹತ್ವದ್ದು. ಮಕ್ಕಳು ಅಂಜಿದಾಗ, ಅದರ ನಿವಾರಣೋಪಾಯಕ್ಕಾಗಿ ಮಾಂತ್ರಿಕನು ಮಂತ್ರೋಚ್ಚಾರಣೆ ಮಾಡಿ, ಅವರ ಕೊರಳಲ್ಲಿ ಕಟ್ಟುವುದಕ್ಕೂ ಕುರಿಯ ಕರಿದಾರ ಶ್ರೇಷ್ಠವೆನ್ನುವರು.

ಪ್ರಾಚೀನ ಕಾಲದಲ್ಲಿ ಹತ್ತಿಯ ಹೆಸರೇ ಗೊತ್ತಿರಲಿಲ್ಲ. ಯಜ್ಞಗಳಲ್ಲಿ ಸೋಮರಸವನ್ನು ಶೋಧಿಸುವುದಕ್ಕೆ ಉಣ್ಣೆ ಬಟ್ಟೆ ಉಪಯೋಗಿಸುತ್ತಿದ್ದರು. ಇದರಿಂದ ಉಣ್ಣೆಯ ಸಣ್ಣ ಸಣ್ಣ ಎಳೆಗಳು ರಸದಲ್ಲಿ ಬೆರೆದು ಕೊಳ್ಳುವುದು ಅನಿವಾರ್ಯವಾಗಿದ್ದಿತು. ಹೀಗಾಗಿ ನೂಲಿನ ಬಟ್ಟೆಯು ಬಳಕೆಗೆ ಬಂದ ಮೇಲೆ ಇವುಗಳಿಂದ ಶೋಧಿಸಲಾರಂಭಿಸಿದರು. ಆದರೂ ಸಂಪ್ರದಾಯಸ್ಥರಾದ ಯಾಜ್ಞಿಕರು ನೂಲಿನ ಬಟ್ಟೆಯ ಅಂಚಿಗೆ ಉಣ್ಣೆಯ ದಾರವನ್ನು ಸೇರಿಸುವುದನ್ನು ಮಾತ್ರ ಮರೆತಿರಲಿಲ್ಲ.

ಹೀಗೆ ಹನುಮಂತಯ್ಯನವರು ಕಂಬಳಿ ಮತ್ತು ಕಂಬಳಿದಾರ ಇವುಗಳು ಮಾನವ ಸಮಾಜಕ್ಕೆ ಎಷ್ಟೆಷ್ಟು ಪ್ರಕಾರಗಳಲ್ಲಿ ಉಪಯೋಗಕರವಾಗಿರುತ್ತೆಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ.

ಮುಖ್ಯವಾಗಿ ಈ ಕೃತಿಯು ಕಾಳಿದಾಸ, ಭೋಜರಾಜ ಮತ್ತು ಭಾರವಿ ಕವಿಯ ಜೀವನಚರಿತ್ರೆ ಹಾಗೂ ಉಣ್ಣೆವಸ್ತ್ರ(ಕಂಬಳಿ) ನೆಯ್ಗೆ ಕಲೆಯ ಪ್ರಾಚೀನತೆ ಮತ್ತು ಮಹತ್ವವನ್ನು ಕುರಿತಂತೆ ಅನೇಕ ವಿಷಯಗಳಿದ್ದು ನಮ್ಮ ಗಮನವನ್ನು ಸೆಳೆಯುತ್ತಿದೆ.

೨. ಒಬ್ಬ ಕುರುಬರ(ಗೊಲ್ಲರ) ಗುರುವಿನ ಮಹತ್ವದ ಸನ್ನದು

ವಿ.ಆರ್. ಹನುಮಂತಯ್ಯನವರು ನಾಡಿನ ವಿವಿಧ ನಿಯತಕಾಲಿಕಗಳಲ್ಲಿ ಸಂಶೋಧನ ಲೇಖನಗಳನ್ನು ಪ್ರಕಟಿಸಿರುವುದು ಕಂಡು ಬಂದಿದೆ. The cowherd who helped a king new light on the History of Golkonda Fort ಎಂಬ ಹೆಸರಿನ ಇಂಗ್ಲೀಷ್ ಭಾಷೆಯಲ್ಲಿ ಶ್ರೀ ಫತುಲ್ಲಖಾನರು ೩೧.೦೮.೧೯೪೧ರ ಹಿಂದೂ ಸಂಡೆ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಅದನ್ನು ಹನುಮಂತಯ್ಯನವರು "ಒಬ್ಬ ಕುರುಬ(ಗೊಲ್ಲರ) ಗುರುವಿನ ಮಹತ್ವದ ಸನ್ನದು" ಎಂಬ ಹೆಸರಿನಿಂದ ಅನುವಾದಿಸಿ 'ಜಯಕರ್ನಾಟಕ ಪತ್ರಿಕೆ'(ಸಂ. ೨೪-೪, ಏಪ್ರಿಲ್ ೧೯೪೨, ಪುಟ ೧೮೧-೧೮೯)ಯಲ್ಲಿ ಪ್ರಕಟಿಸಿರುವುದು ಕಂಡುಬಂದಿದೆ. ಗೋವಳ ಕೊಂಡದ ನಿರ್ಮಾಣಕ್ಕೆ ಒಬ್ಬ ಕುರುಬರ(ಗೊಲ್ಲರ) ನಾಯಕನು ಹೇಗೆ ಕಾರಣನಾದನೆಂಬ ವಿಷಯವನ್ನು ಚಾರಿತ್ರಿಕವಾಗಿ ಈ ಲೇಖನ ತಿಳಿಸುತ್ತದೆ.

ಈ ಲೇಖನದಲ್ಲಿ ಬಂದಿರುವ ಗೋವಳಕೊಂಡ ಎಂಬ ಪದವನ್ನು ಕುರಿತು ಈ ರೀತಿ ಅರ್ಥೈಸಬಹುದು. ಕೊಂಡ ಇದು ತೆಲುಗಿನಿಂದ ಬಂದದ್ದು. ಕೊಂಡ ಎಂದರೆ ಗುಡ್ಡ ಅಥವಾ ಪರ್ವತ ಎಂದರ್ಥ. ಹೇಮಚಂದ್ರ ಮೊದಲಾದ ನಿಘಂಟುಕಾರರು ಕೊಂಡ ಶಬ್ದವನ್ನು ಜಾತಿ ಸೂಚಕ ಎಂದಿದ್ದಾರೆ. ಕೊಂಡ>ಗೊಂಡ ಆಗಿದೆ. ಗೊಂಡಾ ಎಂಬುದು ಗೌಡದಿಂದ ಬಂದಿರುವುದಾಗಿ ಜನರಲ್ ಕನ್ನಿಂಗ್ ಹ್ಯಾಮ್ ಅಭಿಪ್ರಾಯಪಟ್ಟಿದ್ದಾರೆ. ಗಾವುಂಡ>ಗಉಂಡ>ಗಉಡ>ಗಮಂಡ>ಗವುಂಡ>ಗವುಡ>ಗಾಮುಂಡ>ಗವುಂಡ>ಗೊಂಡ ಹೀಗೆ ಗಾಮುಂಡ ಪದವು ಹಲವಾರು ರೂಪಗಳನ್ನು ಪಡೆದು ಗೊಂಡ ಎಂಬ ಪದವಾಗಿದೆ. ಗೊಂಡ ಎಂಬುದರ ಅರ್ಥವು ದ್ರಾವಿಡ ವರ್ಗಕ್ಕೆ ಸೇರಿದ ವಿದ್ಯಾ ಪರ್ವತದ ಬಳಿ ಇರುವ ಒಂದು ಜನಾಂಗ ಮತ್ತು ಆ ಜನಾಂಗಕ್ಕೆ ಸೇರಿದ ವ್ಯಕ್ತಿ ಎಂದು ಕನ್ನಡ-ಕನ್ನಡ ನಿಘಂಟಿನಲ್ಲಿದೆ. ಗೊಂಡರು ಆದಿ ಕುರುಬರು ಎಂತಲೂ ಹೇಳಲಾಗುತ್ತದೆ. ಇವರು ಕೂಡ ತಮ್ಮ ಅವಸ್ಥೆಯಲ್ಲಿ ಆಡಳಿತ ನಡೆಸಿದ ಉಲ್ಲೇಖಗಳು ದೊರೆಯುತ್ತವೆ.[೧] ಇವರನ್ನು ರಾಜಗೊಂಡ ಎಂದು ಕರೆಯಲಾಗುತ್ತದೆ. ಇವರು ಮೊಗಲರ ಮತ್ತು ಮರಾಠರ ವಿರುದ್ಧ ಹೋರಾಡಿದ ಪರಾಕ್ರಮಿಗಳು. ರಾಧಕೃಷ್ಣನ ಕಥೆ ಮತ್ತು ಶಿವಭಕ್ತ ಮಹಾರಾಜನ ಕಥೆಗಳಲ್ಲಿ ಇವುಗಳ ಉಲ್ಲೇಖ ದೊರೆಯುತ್ತವೆ. ಮತ್ತು ಗೊಂಡರ ಹುಟ್ಟಿನ ಬಗ್ಗೆ ಹಲವಾರು ಐತಿಹ್ಯಗಳು, ಪೌರಾಣಿಕ ಮತ್ತು ದಂತಕಥೆಗಳಿವೆ. ಅವುಗಳಲ್ಲೊಂದು ಹೀಗಿದೆ.

“ಮುದ್ದುಗೊಂಡ ಮುದ್ದಮ್ಮಳಿಂದ ಗೊಂಡ ಜನಾಂಗ ಹುಟ್ಟುವುದು ಆದಿಗೊಂಡನು ಮುದ್ದುಗೊಂಡನ ಮಗ ಆದಿಗೊಂಡನ ಹೆಂಡತಿ ಆದಮ್ಮ ಅವರ ಪುತ್ರರಾದ ಅಮರಗೊಂಡ, ಶಿವಗೊಂಡ, ಬೆಟ್ಟದ ಬೀರುಗೊಂಡ ಇವರ ವಂಶಜರೆ ಗೊಂಡರೆಂದು ಹಾಲ್ಮತ ಪುರಾಣಗಳಲ್ಲಿ ಉಲ್ಲೇಖಗೊಂಡಿವೆ.”[೨] ಈ ಗೊಂಡ ಪದ ಪ್ರತ್ಯಯಗೊಂಡ ಹೆಸರುಗಳುಳ್ಳ ಸಾಂಪ್ರದಾಯಿಕ ಪಶುಪಾಲಕರೆ ಗೊಂಡ ಜನಾಂಗವೆಂದು ಸ್ಪಷ್ಟವಾಗುತ್ತದೆ.

ಈ ಗೊಂಡ ಜನಾಂಗದ ಕೊಂಡಯ್ಯನೇ ಗೋಲ್ಕೊಂಡ ಕೋಟೆಯನ್ನು ಕಟ್ಟಿಸಿ ಆಳುತ್ತಿದ್ದುದು ಇತಿಹಾಸದಿಂದ ತಿಳಿದುಬಂದಿದೆ ಮತ್ತು ಈತನು ಗೋಲ್ಕೊಂಡದ ಕೋಟೆಯನ್ನು ಕಟ್ಟಿಸಿ ಸುಲ್ತಾನನಿಗೆ ಪೂರೈಸಿಕೊಟ್ಟುದರ ಕುರಿತ ದಂತಕತೆಗಳಿವೆ.

೩. ಶ್ರೀ ಕನಕದಾಸರು ಕುರುಬರಲ್ಲವೇ?

ಎಂಬ ಲೇಖನವನ್ನು ಸುಬೋಧ ಪತ್ರಿಕೆ(ಸಂ. ೧೯-೧೧, ಪು. ೩೭-೩೮)ಯಲ್ಲಿ ಪ್ರಕಟಿಸಿರುವರು. ದಾಸರಲ್ಲಿ ಮತ್ತು ಕವಿಗಳಲ್ಲಿ ಹೆಸರುವಾಸಿಯಾದ ಕನಕದಾಸರ ಮತ ವಿಚಾರದ ಕುರಿತು ಚರ್ಚಿಸಲಾಗಿದೆ.

೪. ಕುರುಬರು ಏಕೆ ಲಿಂಗ ಕಟ್ಟಿಕೊಳ್ಳಬೇಕು?

ಎಂಬ ಲೇಖನವನ್ನು ಅಂದು ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಕುರುಬರ ಪತ್ರಿಕೆಯ ೧-೭-೧೯೨೪ರ ಸಂಚಿಕೆಯಲ್ಲಿ ಪ್ರಕಟಿಸಿರುವರು. ಈ ಲೇಖನಕ್ಕೆ ಡಂಬಳದ ಐಯ್ಯಪ್ಪಯ್ಯಸ್ವಾಮಿ ಗುರುವಿನ ಹಾಗೂ ಲಕ್ಷ್ಮೇಶ್ವರದ ಬ.ನೀ. ಹಳವಳ್ಳಿ ಅವರು ೧೫-೭-೧೯೨೪ರ ಸಂಚಿಕೆಯಲ್ಲಿ ಪ್ರತಿಕ್ರಿಯೆ ನೀಡಿರುವುದನ್ನು ಡಾ. ಎಫ್.ಟಿ. ಹಳ್ಳಿಕೇರಿ ಅವರು ಇತಿಹಾಸ ದರ್ಶನ ಸಂ. ೨೪ ರಲ್ಲಿ ಇತಿಹಾಸ ಮತ್ತು ಸಂಸ್ಕೃತಿ ಸಂಶೋಧಕ ವಿ. ಆರ್. ಹನುಮಂತಯ್ಯ ಎಂಬ ಲೇಖನದಲ್ಲಿ ಈ ಎರಡು ಲೇಖನಗಳ ಬಗ್ಗೆ ವ್ಯಕ್ತಪಡಿಸಿದ್ದಾರೆ.

ಕೊನೆಟಿಪ್ಪಣಿಗಳು

೧. ವಿ.ಆರ್.ಹನುಮಂತಯ್ಯ, ಭೋಜರಾಜ ಕಾಳಿದಾಸ ಚರಿತ್ರೆ, ೧೯೬೧, ಪು. ೫

೨. ಅದೇ, ಪು. ೫

೩. ಅದೇ, ಪು. ೫

೪. ಅದೇ, ಪು. ೬

೫. ಅದೇ, ಪು. ೭

೬ ...

೭ ವಿ.ಆರ್.ಹನುಮಂತಯ್ಯ, ಭೋಜರಾಜ ಕಾಳಿದಾಸ ಚರಿತ್ರೆ, ೧೯೬೧, ಪು. ೩

೮. ಅದೇ, ಪು. ೧೨

೯. ಅದೇ, ಪು. ೧೨

೧೦. ಅದೇ, ಪು. ೧೨

೧೧. ಅದೇ, ಪು. ೧೨

೧೨. ಹಾಲತೊರೆ

೧೩. ವಿ.ಆರ್.ಹನುಮಂತಯ್ಯ, ಭೋಜರಾಜ ಕಾಳಿದಾಸ ಚರಿತ್ರೆ, ೧೯೬೧, ಪು. ೧೭

೧೪. ಅದೇ, ಪು. ೧೮

೧೫. ಅದೇ, ಪು. ೧೮

೧೬. ಅದೇ, ಪು. ೨೧

೧೭. ಅದೇ, ಪು. ೨೩

೧೮. ವಿ.ಆರ್.ಹನುಮಂತಯ್ಯ, ಭೋಜರಾಜ ಕಾಳಿದಾಸ ಚರಿತ್ರೆ, ೧೯೬೧, ಪು. ೩೬

೧೯. ಸಂಸ್ಕೃತ ಸಾಹಿತ್ಯದ ಇತಿಹಾಸ, ಮೂಲ: ಆಚಾರ್ಯ ಬಲದೇವಿ ಉಪಾಧ್ಯಾಯ, ಅನು: ರಾಮಚಂದ್ರ ಶಾಸ್ತ್ರಿ, ಬೆಂಗಳೂರು ವಿಶ್ವವಿದ್ಯಾಲಯ, ೧೯೮೦, ಪು. ೧೯೯

೨೦. ಅದೇ, ಪು ೧೯೯

೨೧. ಡಾ. ಎಸ್.ಆರ್.ಲೀಲಾ, ಸಂಸ್ಕೃತ ನಾಟಕ, ವಿಜ್ಞಾನ, ಮತ್ತು ಮಾನವೀಯ ಮೌಲ್ಯಗಳ ಅಧ್ಯಯನ ಪೀಠ, ಬೆಂಗಳೂರು, ೨೦೦೨, ಪು. ೬೨

೨೨. ಸಂಸ್ಕೃತ ಸಾಹಿತ್ಯದ ಇತಿಹಾಸ, ಪು. ೧೯೯

೨೩. ಡಾ. ಮಹೇಶ ಅಡಕೋಳಿ, ಸಂಸ್ಕೃತ ಕಾವ್ಯ, ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಅಧ್ಯಯನ ಪೀಠ, ಬೆಂಗಳೂರು, ೨೦೦೨, ಪು. ೨೨

೨೪. ಭೋಜರಾಜ ಕಾಳಿದಾಸ ಚರಿತ್ರೆ, ಪು. ೬೩

೨೫. ಮಹಾಕವಿ ಭಾರವಿ ಲೇ. ಎಂ.ಜಿ. ನಂಜುಂಡಾರಾಧ್ಯ, ಮೈಸೂರು ವಿಶ್ವವಿದ್ಯಾನಿಲಯ, ೧೯೬೬, ಪು. ೩

೨೬. ಭೋಜರಾಜ ಕಾಳಿದಾಸ ಚರಿತ್ರೆ, ಪು. ೨

೨೭. ಭೋಜರಾಜ ಕಾಳಿದಾಸ ಚರಿತ್ರೆ, ಪು. ೬೪

೨೮. ಅದೇ, ಪು. ೧೮೦

೨೯. ಅದೇ, ಪು. ೧೮೧

೩೦. ವಿ.ಆರ್.ಹನುಮಂತಯ್ಯ, ಭಾರತ ದೇಶದ ಕುರುಬರ ಚರಿತ್ರೆ, ೧೯೫೮, ಪು. ೧೬

೩೧. ಅದೇ, ಪು. ೧೬

೩೨. ಶ್ರೀ ವಿಠಲ: ಒಂದು ಮಹಾಸಮನ್ವಯ, ಪು. ೪೪

೩೩. ಅದೇ, ಪು. ೪೩

೩೪. ಕೌಟಿಲ್ಯನ ಅರ್ಥಶಾಸ್ತ್ರ, ಪು. ೧೪೫

೩೫. ಅದೇ, ಪು. ೧೯೦

೩೬. ಶಂಬಾ ಕೃತಿ, ಸಂಪುಟ ೧, ಪು. ೩೨೦

೩೭. ಅದೇ, ಪು. ೩೧೪

೩೮. ಭೋಜರಾಜ ಕಾಳಿದಾಸ ಚರಿತ್ರೆ, ಪು. ೧೮೩

೩೯. ಕುರುಬರ ಹೆಜ್ಜೆಗಳು, ಪು. ೨೧

೪೦. ಬುಡಕಟ್ಟು ಕುಲಕಸುಬುಗಳು, ಪು. ೬೫

ಅಧ್ಯಾಯ ಆರು

ವಿ.ಆರ್.ಹನುಮಂತಯ್ಯನವರ ಸಂಶೋಧನೆಯ ವೈಧಾನಿಕತೆ

ಅಧ್ಯಾಯ ಆರು

ವಿ.ಆರ್.ಹನುಮಂತಯ್ಯನವರ ಸಂಶೋಧನೆಯ ವೈಧಾನಿಕತೆ

ವಿ.ಆರ್. ಹನುಮಂತಯ್ಯನವರ ಸಂಶೋಧನೆಯ ವೈಧಾನಿಕತೆಯನ್ನು ಎರಡು ರೀತಿಯ ಆಕರಗಳ ಬಳಕೆಯಲ್ಲಿ ಗುರುತಿಸಬಹುದು.

೧. ಮೂಲ ಆಕರಗಳ ಬಳಕೆ

೨. ಪ್ರಾಸಂಗಿಕ ಆಕರಗಳ ಬಳಕೆ

೧. ಮೂಲ ಆಕರಗಳ ಬಳಕೆ

ಮೂಲ ಆಕರಗಳ ಬಳಕೆ ಹನುಮಂತಯ್ಯನವರ ಸಂಶೋಧನೆಯ ವೈಧಾನಿಕತೆಗಳಲ್ಲಿ ಒಂದು. ಇವರು ಶಾಸನಗಳು, ಕಾವ್ಯ-ಪುರಾಣ-ಕೈಫಿಯತ್ತು, ಗೆಝೆಟಿಯರ್ ದೇಶಿ ಮತ್ತು ವಿದೇಶಿ ವಿದ್ವಾಂಸರ ಬರವಣಿಗೆಯ ಅಭಿಪ್ರಾಯಗಳನ್ನು ಪರಿಶೀಲಿಸಿ ಪೂರಕವಾಗಿ ಬಳಸಿಕೊಂಡು ಜನಾಂಗೀಯ ಮತ್ತು ಸಾಂಸ್ಕೃತಿಕ ಚರಿತ್ರೆಗಳನ್ನು ಮರು ರೂಪಿಸಿದ್ದಾರೆ. ಅವರ ಕೃತಿಗಳನ್ನು ಅಧ್ಯಯನ ಮಾಡಿದಾಗ ಪೂರ್ಣ ಪ್ರಮಾಣದ ಆಕರಗಳನ್ನು ಬಳಸಿಕೊಂಡ ರೀತಿ, ವಿಶ್ಲೇಷಿಸಿದ ಕ್ರಮ, ಬರವಣಿಗೆಯ ವಿಧಾನ ಈ ಎಲ್ಲಾ ಸಂಗತಿಗಳನ್ನು ಗುರುತಿಸಬಹುದು.

೨. ಪ್ರಾಸಂಗಿಕ ಆಕರಗಳ ಬಳಕೆ

ಹನುಮಂತಯ್ಯನವರು ಪ್ರತ್ಯಕ್ಷವಾಗಿ ಕಂಡ, ಬೇರೆ ಬೇರೆ ವಿದ್ವಾಂಸರಿಂದ ತಿಳಿದ ಮತ್ತು ರೇಡಿಯೋ, ಸಿನೇಮಾ ಮಾಧ್ಯಮಗಳ ಮೂಲಕ ವಿಷಯವನ್ನು ಸಂಗ್ರಹಿಸಿರುವುದು ಸಂಶೋಧನ ಬಳಕೆಯ ವಿಧಾನಗಳಲ್ಲಿ ಒಂದು.

೧. ಶಾಸನಗಳು: ಶಾಸನಗಳು ಕುರುಬರ ಪ್ರಾಚೀನ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳ ಕುರಿತು ಅನೇಕ ವಿಷಯಗಳನ್ನು ತಿಳಿಸುತ್ತವೆ. ಹನುಮಂತಯ್ಯನವರು ಪ್ರಾಚೀನ

ಕುರುಬರ ಚರಿತ್ರೆಯನ್ನು ತಿಳಿಸುವಾಗ ಪ್ರಾಚೀನ ಶಾಸನಗಳಲ್ಲಿ ಕುರುಬರಹಳ್ಳಿ, ಕುರುಬರಗೆರೆ, ಕುರುಬರಹಟ್ಟಿ, ಕುರುಬರಕಲಾದಿಗೆ, ಹೆಗ್ಗಡಿಹಳ್ಳಿ, ಹೆಗ್ಗಡಿಗೆರೆ, ಹಾಲುಮತಹಳ್ಳಿ, ಕುರುಂಬರ ನಾಡು, ಕುರುಂಬರ ಭೂಮಿ, ಕುರುಬಕೋಟೆ ಮೊದಲಾದ ಎಷ್ಟೋ ಸ್ಥಳಗಳು ಭರತಖಂಡದಲ್ಲಿ ಕುರುಬರ ಪ್ರಾಬಲ್ಯ ಮತ್ತು ಅವರ ಸಾಮ್ರಾಜ್ಯದ ವಿಚಾರವನ್ನು ಸೂಚಿಸಲು ಈ ಪ್ರಾಚೀನ ಸ್ಥಳಗಳು ನಿದರ್ಶನಗಳಾಗಿವೆ[೧] ಎಂದು ಹೇಳಿದ್ದಾರೆ.

ವಿಜಯನಗರಕ್ಕೆ ಸಂಬಂಧಿಸಿದ ಶಾಸನವೊಂದರಲ್ಲಿ: "ಶ್ರೀ ಗಣಾಧಿಪತಯೇ ನಮಃ। ಅವ್ಯಾದವ್ಯಾಹತೈಶ್ವರ್ಯ ಕಾರಣೋವಾರಣಾನನಃ। ವರದಸ್ತ್ರೀ ವ್ರತಮಿರಮಹಿರೋ ಹರನಂದನಃ। ಶ್ರೀ ಮಾನಾದಿವರಾಹೋಯ। ಶ್ರಿಯಂದಿಶತುಭೂಯಸೀಃ। ಗಾಢ ಮಾಲಿಂಗಿತಾಯೇನ ಮೇದಿನೀಮೋದತೇ ಸದಾ ಆಸ್ತಿಕೌಸ್ತು ಭಕಲ್ಪದ್ರು ಕಾಮಧೇನು ಸಹೋದರಃ। ರಮಾನುಜಃ ಸುಧಾನಾಥಃ ಕ್ಷೀರಸಾಗರ ಸಂಭವಃ। ಉದಭೂದನ್ವಯೇ ತಸ್ಯಯದುನಾ ಮಾಮಹೀ ಪತಿಃ। ಪಾಲಿತಂಯತ್ಕುಲೀನೇನ ವಾಸುದೇವೇನ ಭೂತಲಂ। ಅಭೂದಸ್ಯಕುಲೇ ಶ್ರೀಮಾನ ಭಂಗುರಗುಣೋದಯಃ। ಅಪಾಸ್ತದುರಿತಾ ಸಂಗಸಂಗಮೋ ನಾಮಭೂಪತಿಃ। ದಿಕ್ಕರೀಂದ್ರ ಧುರಾಧಾರ ದಕ್ಷಿಣಸ್ಕಂಧ ಬಂಧುರಃ। ಬುಕ್ಕರಾಯಸ್ತುತಃ ಶ್ರೀ ಮಾನಸೀದಾ ಹವಕಕಶಃ। ಅಹೀನಭೋಗ ಸಂಸಕ್ತಿರಸೌ ರಾಜಾಶಿಖಾಮಣಿಃ। ಗೋಪ್ತಾಹ ರಿಹರಂಗೌರ್ಯಾಂಕುಮಾರ ಮುದಪಾದಯತ್। ಶಿಷ್ಟಾನ್ತ್ಸಂರಕ್ಷತೋಯಸ್ಯ ದುಷ್ಟಾನಪಿ ನಿಗೃಹ್ಣತಃ। ಲಬ್ಧಾರ್ಥೈರ್ವಿದುಷಾಂ ಸಾರ್ಥೈಶ್ಲಾಘ್ಯಂ ಹರಿಹರಾತ್ಮರಾ। ತಸ್ಯಮೇ ಲಾಂಬಿಕಾಜಾನೇ(ರು) ದಭೂದುನ್ನತೋ ಗುಣೈಃ। ಪ್ರತಾಪ ದೇವರಾಯಾಖ್ಯಃ ಪುತ್ರಃ ಸುತ್ರಾಮ ವಿಕ್ರಮಃ। ತಸ್ಯದೇಮಾಂಬಿಕಾ ಭರ್ತುಸ್ತನಯೋ ವಿನಯೋನ್ನತಃ। ವಿದ್ಯಾವಿನಯ ವಿಜ್ಞಾನನಿಧಿರ್ವಿಜಯ ಭೂಪತಿಃ। ತಸ್ಯ ನಾರಾಯಣೀದೇವ್ಯಾಂ ಪ್ರಾದುರಾಸೀದ್ದುರಾಸದಃ। ಪ್ರೌಢಪ್ರತಾಪ ವಿಭವೋ ದೇವರಾಯ ಮಹಿಪತಿಃ। ತಸ್ಯ ಶ್ರೀ ಲಖುಮಾದೇವಿ ಭಾರ್ಯ್ಯಾಭೂಪತೇಃ ಪ್ರಿಯಾ। ಲಕ್ಷ್ಮೀರಿವ ಮುರಾರಾತೇಃ ಪಾರ್ವತೀ ವಪಿನಾಕಿನಃ। ತಯೋಃ ಪ್ರಾಚೀನ ಪುಣ್ಯನಾಂ ಪರಿಪಾಕ ವಿಶೇಷತಃ। ತಸ್ಮಾತ್ರೀಯಂಬಕಃ ಸಾಕ್ಷುತ್ಕುಮಾರಃ ಸಮಜಾಯತಭುವಂ ಹಿತ್ವಾದಿವಂಯಾತೇ ತಾತೇತಸ್ಯ ಮಹಾತ್ಮನಿ। ಇಮ್ಮಡಿ ಪ್ರೌಢ ದೇವೇಂದ್ರೋ ರಾಜಭೂಜ್ಜಗತೀಪತಿಃ। ರಾಜಾಧಿರಾಜಸ್ವೀಯೋ ಪರಮೇಶ್ವರಃ। ಭಾಷಾಲಂಘಿ ಮಹಿಪಾಲ ಭುಜಂಗಮ ವಿಹಂಗರಾಟ್। ವೈರಿಭೂಪತಿವೇತಂಡ ಚಂಡಖಂಡನಕೇಸರೀ ಗಜೌಘ ಗಂಡಬೇರುಂಡೋ ಗಜೇಂದ್ರ ಮೃಗಯಾರತಃ। ತ್ರಿರಾಜ ಭುಜಗೋನ್ನದ್ಧ ಪರರಾಜ ಭಯಂಕರಃ। ಹಿಂದೂರಾಯ ಸುರತ್ರಾಣ ಇತ್ಯಾದಿ ಬಿರುದೋನ್ನತಃ ಜ್ಯಾಯಾಂಸಂ ಭ್ರಾತರಂ ರಾಜಾತ್ರಿಯಂಬ ಕಮಹೀಪತಿಂ। ಪ್ರದರ್ಶಯಂಶ್ಚ ಸೌಭ್ರಾತ್ರಂಯೌವ ರಾಜ್ಯೇಭಿಷೇಚಯತ್। ಶ್ರೀಮಚ್ಚಿಕ್ಕೊಡೆಯೋಬಲಿ

ಸ್ವರಾಜ್ಯಂ ಪಾಲಯನ್ನತ್ರ ದೀವ್ಯತಿ ಶ್ರೀ ತ್ರಿಯಂಬಕಃ। ಶಾಲಿವಾಹನ ನಿರ್ಣೀತಶಕವರ್ಷೇ ಕ್ರಮಾಗತೇ। ವಸ್ವದ್ವಿಗುಣ ಭೂಯುಕ್ತಶಕಾಬ್ದೇ ಧಾತುವತ್ಸರೇ। ವೈಶಾಖಮಾಸೇ ಪೌರ್ಣಮ್ಯಾಂ ವಿಶಾಖಾಯುಜ್ಞಹಾತಿಥೌ। ಗುರುವಾರೇ ಪುಣ್ಯಕಾಲೇ ಶ್ರೀ ತ್ರಿಯಂಬಕ ಸನ್ನಿದೌ।"

ಅಂದರೆ ಈ ಶಾಸನದಿಂದ ಹಕ್ಕಬುಕ್ಕ ಸಹೋದರರು ಕುರುಬರ ಜಾತಿಗೆ ಸೇರಿದವರೆಂಬುದು ಸ್ಪಷ್ಟಪಡುತ್ತದೆ. ಯಾಕೆಂದರೆ ಇದರಲ್ಲಿ ಕ್ಷೀರಸಾಗರ ಸಂಭವ[೨] ಎಂಬ ಉಲ್ಲೇಖವಿದೆ. ಕುರುಬರಿಗೆ ಹಾಲುಮತದವರು ಕ್ಷೀರವಂಶದವರು ಎಂದು ಕರೆಯುತ್ತಾರೆ. ಇದರಿಂದ ಈ ಸಹೋದರರು ಕುರುಬರ ಸಮುದಾಯಕ್ಕೆ ಸೇರಿದವರು ಎಂಬುದನ್ನು ಹನುಮಂತಯ್ಯನವರು ವಿಶ್ಲೇಷಿಸುತ್ತಾರೆ. ಈ ಶಾಸನವನ್ನು ಆಕರವಾಗಿ ತೆಗೆದುಕೊಂಡಿದ್ದಾರೆ.

ಹೊಯ್ಸಳರ ಶಾಸನ

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ। ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಸಂಭುವೇ। ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜಂ ಪರಮೇಸ್ವರಂ ದ್ವಾರಾವತೀ ಪುರವರಾಧೀಶ್ವರಂ ಯಾದವ ಕುಳಾಂಬರದ್ಯುಮಣಿ ಸರ್ವಜ್ಞ ಚೂಡಾಮಣಿ ಮಲೆರಾಜ ರಾಜಮಲಪರೊಳು ಗಂಡ ಅಸಹಾಯ ಸೂರಕದನ ಪ್ರಪಂಡ ಏಕಾಂಗವೀರ ಸನಿವಾರ ಸಿದ್ಧಿಗಿರಿದುರ್ಗ ಮಲ್ಲಚಲದಂಕ ರಾಮಮಗರರಾಜ್ಯ ನಿರ್ಮೂಲಿಗನು ಚೋಳುರಾಜ್ಯ ಪ್ರತಿಷ್ಠಾಚಾರ್ಯನುಮಪ್ಪ ಹೊಯ್ಸಣ ಸೋಮೇಶ್ವರ ದೇವರು ಪಾಚತಿವೀಡಿನಲಿ ಸುಖಸಂಕಥಾ ವಿನೋದದಿಂ ಪೃಥ್ವಿರಾಜ್ಯಂಗೈಯ್ಯುತ್ತಿದ್ದಲ್ಲಿ ಸ್ವಸ್ತಿಶ್ರೀ ಶೋಭಕೃತು ಸಂವತ್ಸರದ ಪುಷ್ಯ ಸುದ ಪಾಡವಿ ಆದಿವಾರ ದಂದುಧರ್ಮ ಸೂರೆಕಾರಪುರವಾದ ಹಟ್ಟಣಗೆರೆಯ ಶ್ರೀ ಅಸ್ವನಾಥ ದೇವರ ಶ್ರೀ ಕಾರ್ಯದ ನಂದಾದೀವಿಗೆ ಬೀಜಹೊಂನ ಬಡ್ಡಿಯಲು ಮು.... ವದಪ್ತ...ಗೆ ಕೊಂಡು ಬೀರಣಸೆಟ್ಟಿ ಜಕ್ಕಯ್ಯ ಸೆಟ್ಟಿ ಬಳವಿಸೆಟ್ಟಿಯ ರಾಯಹರಿಸೆಟ್ಟಿಯ.... ಸೂಳೆಯ ಅಕ್ಕಮಪ್ತ ಸೀರೆಯ.... ಪಂಚಾಚಾರಿ ದೇವಪ ೫ ಹೊನ್ನಯ.... ಪಣಪ್ತ ಅಕ್ಕಸಾಲೆ ಬಮ್ಮೋಜನ ಮಗ ಮಾದಿವೋಜಪ ೫ ಧರ್ಮ.... ರಿಸೆಟ್ಟಿ ಕಲ್ಲಪ ಮಾದಯ್ಯನ ಮಗ ಗೋಪಯ ೧ ಸಂಕರೋಜನ ಮಲ್ಲೋಜಗ.[೩]

ಈ ಶಾಸನಗಳಿಂದ ವಿಜಯನಗರ ಸಾಮ್ರಾಟರು ಮತ್ತು ಹೊಯ್ಸಳ ಬಲ್ಲಾಳ ರಾಜರು ಒಂದೇ (ಯಾದವ) ಕುಲದವರೆಂಬುದಕ್ಕೆ ಉದಾಹರಣೆಯನ್ನು ಹೇಳಿದ್ದಾರೆ. ಈ ಎರಡು ಸಾಮ್ರಾಟರೊಂದಿಗೆ ರಕ್ತಸಂಬಂಧವಿರುವುದು ತಿಳಿದುಬರುತ್ತದೆ. ಕ್ಷೀರಸಾಗರ ಮತದಿಂದಲೇ ಸಮಸ್ತ ಜಾತಿಗಳುತ್ಪನ್ನವೆಂದು ಸ್ಪಷ್ಟಪಡಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕು ತಾಳೀಕಟ್ಟೆ ಗ್ರಾಮದ ಹಳ್ಳದಗುಡಿಯಲ್ಲಿ ಒಂದು ಶಿಲಾ ಶಾಸನ ನೆಟ್ಟಿದೆ.[೪] ಇದರಲ್ಲಿ ವಿಜಯನಗರವನ್ನಾಳಿದ ಹಕ್ಕ–ಬುಕ್ಕರು ಕುರುಬರೆಂದು ಹೇಳಿದೆ ಎಂದು ಶಾಸನೋಕ್ತ ಉಲ್ಲೇಖವನ್ನು ಕೊಡುತ್ತಾರೆ.

ಕಾವ್ಯ

ಕುರುಬ ಸಮುದಾಯಕ್ಕೆ ಸಂಬಂಧಪಟ್ಟ ಕಾವ್ಯ, ಪುರಾಣಗಳನ್ನು ಆಕರಗಳನ್ನಾಗಿ ಬಳಸಿ ಕೊಂಡಿರುವುದು ಕಂಡು ಬಂದಿದೆ.

ವಿದ್ಯಾರಣ್ಯ ಕಾವ್ಯಂ

ಸರಿದೋರ್ಪುದೆ ನಿಮಗಿದು ಕೇ।
ಸರಿತಾನೇ ಶ ನಕನೆನಿಸಿ
ಕೊಳ್ವುದು ಧರೆಯೋಳ್।
ಸರಿಯಿಲ್ಲದ ಬಲಮಿರ್ದುಂ।
ಸರಿಯೇನೀಂ ಕುರುಬನೆನಿಸಿ
ಕೊಳ್ವುದುನಾಡೋಳ್[೫]

ಚನ್ನಪ್ಪ ಕವಿಯ ಶರಣಲೀಲಾಮೃತ

ಸುರಿತಾಳನ ವರೆದ್ದೂ ಸಿರಿವರೆಯೆ ರಾಮನನು
ಕುರುಬರಿಗೆ ಪಟ್ಟ ಹದಿಮೂರು ಜನತನಕ
ಬರಿಸಿಡಿಲು ಉರಿಘಾಳಿ ಮೆರೆವ ತುರುಕರಧಾಳಿ
ಧರೆಯ ತುಂಬುವ ಧೂರಿ ಶರಣರಿಂದ ಕೇಳಿ[೬]

ಸರ್ವಜ್ಞನ ಕಾಲಜ್ಞಾನ

ಕುರುಬಕುಲದೊಳಗೊಬ್ಬ। ಧರಣಿಪಾಲಕ ಹುಟ್ಟಿ
ಉರವಣಿಸಿ ಕದನಹೆಚ್ಚಲು। ಪಂಪೆಯಲ್ಲಿ ಕರಿಯಮೆಟ್ಟುವನು ಸರ್ವಜ್ಞ[೭]

ಪ್ರೌಢರಾಯನ ಕಾವ್ಯ

ಹರಿಣಶಿಶುನೇತ್ರ ಪದ್ಮಾವತಿಗೆ। ತಕ್ಕ ಸುಂದರ ಸುಗುಣಿ ಪುರುಷನಂ। ತರುಮದೆನಲೊಳಿತೆಂದು। ಕುರುಬನು ಕರೆತಂದು ಜನಮರಿಯದೋಲ್ತನ್ನ ಮಂದಿರದೊಳಿಸಿಕ್ಕೊಂಡು

ಒಂದೆರಡು ಮಾಸ ನೀರೆರದು ಪರಿಮಳ ದ್ರವ್ಯ ಸಂದಿ ಸಂದಿಗೆ ತೀಡಿ। ಪರಮಾನ್ನ ಭಕ್ಷ್ಯಗಳ। ಚಂದದಿಂದುಣಿಸಿ ವಸ್ತ್ರವನುಡಿಸಿ। ರತ್ನಖಚಿತಾಧರಣಗಳನೆ ತೊಡಿಸಿ। ಬಂದರಸಿಗತಿ ಪ್ರಹುಧನೆಂ

ದೊರೆಯೆ ಕರೆದುತಾ। ರೆಂದಟ್ಟಲ್ಪೈ ತಂದು ಮಾ ಮಹೇಶ್ವರ ನಿಮ್ಮ ನಿಂದು ರಕ್ಷಿಸಲೆಂದು। ಜನಪನಂ ಪರಸೆನುತ। ಕುರುಬರಿಗೆ ಕಲಿಸಿ ತರಲು[೮]

ಕನಕದಾಸ ಕೀರ್ತನೆ

ನಾವು ಕುರುಬರು। ನಮ್ಮ ದೇವರು ಬೀರಯ್ಯ ಕಾವನಮ್ಮಜ್ಜ
ನರಕುರಿಯ ಹಿಂಡುಗಳ್[೯]

ಹೀಗೆ ಅನೇಕ ಕಾವ್ಯಗಳಲ್ಲಿ ಕುರುಬ ಸಮುದಾಯಕ್ಕೆ ಸಂಬಂಧಿಸಿದ ವಿಷಯಗಳು ಪ್ರಸ್ತಾಪವಿರುವುದು ಕಂಡುಬರುತ್ತವೆ. ಹನುಮಂತಯ್ಯನವರು ಕೃತಿಗಳನ್ನು ಬರೆಯಲು ಕಾವ್ಯಗಳನ್ನು ಆಧಾರವಾಗಿ ತೆಗೆದುಕೊಂಡಿರುವುದು ಕಂಡುಬಂದಿದೆ.

ಪುರಾಣ

ಕುರುಬ ಸಮುದಾಯ ಕುರಿತು ಪೌರಾಣಿಕ ಹಿನ್ನೆಲೆಯ ವಿವರಗಳನ್ನು ನೀಡಿರುವುದು ಕಂಡುಬಂದಿದೆ. ಸಂಸ್ಕೃತದಲ್ಲಿ ಬರೆದ ಆಗ್ನೇಯ ಪುರಾಣದಲ್ಲಿ "ಕೌರಭ ಋಷಿಯ ತಪಸ್ಸಿನ ಫಲವಾಗಿ ಕುರುಬ ಸಮುದಾಯ ಸೃಷ್ಟಿಯಾಯಿತೆಂದು ನಿರೂಪಣೆಯಿದೆ.[೧೦] ಇದರಿಂದ 'ಕೌರಬ' ಎಂಬ ಪದವೇ ಮುಂದೆ 'ಕುರುಬ' ಎಂದು ಪರಿವರ್ತನೆಗೊಂಡಿದೆ ಎಂದು ಹೇಳಬಹುದು.

ರಸ್ತಾಪುರದ ಭೀಮಕವಿ ರಚಿಸಿದ ಹಾಲುಮತ್ತೋತೇಜಕ ಪುರಾಣದಲ್ಲಿ ಕುರುಬರ ಮೂಲದ ಬಗ್ಗೆ ಪ್ರಸ್ತಾಪವಿದೆ. ಭೀಮಕವಿ ಕುರುಬರ ಬಗ್ಗೆ ಹೇಳುವಾಗ ಈ ಮೇಲೆ ಹೇಳಿದ ಆಗ್ನೇಯ ಪುರಾಣದ ಆಧಾರವನ್ನು ನೀಡಿದ್ದಾನೆ.

ಈ ಮೇಲಿನ ಹೇಳಿಕೆಗೆ ಭೀಮಕವಿ ಈ ಕೆಳಗಿನ ಸಾಲುಗಳನ್ನು ಆಧಾರವಾಗಿ ಕೊಟ್ಟಿದ್ದಾನೆ.

"ಕುರರೀ ಮೃಗವಸ್ತ್ರಾಣಿ ಕೃತ್ವಾವೈ ಕೌರಬೋ ಋಷೀ॥
ತನ್ನಾಮ ಸಾರ್ಥಕಂ ಚಕ್ರೇದೇವಾನಾಂ ಹಿತಕಾಮ್ಯಯಾ[೧೧]

ಇದರಿಂದ ಕೌರಭ ಋಷಿಯಿಂದ ಕುರುಬರು ಸೃಷ್ಟಿಯಾದರೆಂದು ತಿಳಿಯುತ್ತದೆ. ಕೌರಭ ಎಂಬ ಶಬ್ದ ಕೌರವ>ಕುರುವ>ಕುರುಬ ಎಂದಾಗಿರುವುದು ಕಂಡುಬರುತ್ತದೆ.

ಸಂಸ್ಕೃತ ಸಾಹಿತ್ಯದಲ್ಲಿ 'ಕುರುದೇಶ' ಎನ್ನುವ ಪದ ಉಪಲಬ್ಧವಿದೆ. ಅದು ಕುರುವಂಶದವರಿಂದ ಆಳಲ್ಪಟ್ಟಿತ್ತೆಂದು ತಿಳಿಯುತ್ತದೆ. ಈ ಕುರು ವಂಶಕ್ಕೆ ಸೇರಿದ ಕೌರವರು ಕಾಲಾನಂತರ ಕುರುವ ಅಥವಾ ತರುವರೆಂದು ಗುರುತಿಸಲ್ಪಟ್ಟರು. ಮುಂದೆ ತರುವ ಎನ್ನುವ ಪದ ಕುರುಬ ಎಂದು ಮಾರ್ಪಾಡಾಗಿರುವ ಸಾಧ್ಯತೆಯಿದೆ. ಹೀಗೆ ಹನುಮಂತಯ್ಯನವರು ಸಂಸ್ಕೃತ ಸಾಹಿತ್ಯದಲ್ಲಿ ಬಂದಿರುವ 'ಕುರುದೇಶ' ಪದ ಉಲ್ಲೇಖವನ್ನು ಕೊಡುತ್ತಾರೆ.

ಅಂದರೆ ಈ ಸಮುದಾಯವನ್ನು ಕುರಿತಂತೆ ಕಾವ್ಯ ಪುರಾಣಗಳು ರಚನೆಗೊಂಡು, ಈ ಸಮುದಾಯದ ಚಾರಿತ್ರಿಕ ಹಿನ್ನೆಲೆಯನ್ನು ಬಹಳಷ್ಟು ಹಿಂದಕ್ಕೆ ಕೊಂಡೊಯ್ಯುತ್ತದೆ. ಶಿಷ್ಟ ಜನಾಂಗವು ಹೇಗೆ ಪೌರಾಣಿಕ ಹಿನ್ನೆಲೆಯಲ್ಲಿ ತನ್ನ ಮೂಲವನ್ನು ಕಲ್ಪಿಸಿಕೊಂಡು ತನ್ನ ಪ್ರಾಚೀನತೆಯನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದೆಯೋ ಅದೇ ರೀತಿ ಬುಡಕಟ್ಟು ಸಮುದಾಯಕ್ಕೆ ಸೇರಿರುವ ಈ ಕುರುಬ ಸಮುದಾಯವೂ ಕೂಡ ತನ್ನ ಜನಾಂಗದ ಮೂಲವನ್ನು ಪೌರಾಣಿಕ ಹಿನ್ನೆಲೆಯಲ್ಲಿಯೇ ಕಲ್ಪಿಸಿಕೊಂಡಿದೆ.

ಕೈಫಿಯತ್ತುಗಳು

ವಿಜಯನಗರೋತ್ತರ ಕಾಲದ ಕನ್ನಡ ನಾಡುನುಡಿಯ ಸಂಸ್ಕೃತಿಯ ಅಧ್ಯಯನಕ್ಕೆ ಕೈಫಿಯತ್ತು ಬಹುಮುಖ್ಯ ಆಕರಗಳಾಗಿವೆ. ಕುರುಬ ಸಮುದಾಯಕ್ಕೆ ಸಂಬಂಧಿಸಿದ ಪ್ರತ್ಯೇಕವಾದ ಕೈಫಿಯತ್ತು ರಚನೆಯಾಗಿಲ್ಲ. ಆದರೂ ಸಾಂದರ್ಭಿಕವಾಗಿ ಬೇರೆ ಬೇರೆ ಕೈಫಿಯತ್ತುಗಳಲ್ಲಿ ಕೆಲವು ಮಾಹಿತಿಗಳು ಲಭ್ಯವಾಗಿವೆ. ಹನುಮಂತಯ್ಯನವರು "ವಸುಧಾರೆಯ ಕೈಫಿಯತ್ತ"[೧೨]ನ್ನು ಬಳಸಿಕೊಂಡಿದ್ದಾರೆ. ಹರಿಹರಾದಿಯಾಗಿ ಹದಿಮೂರು ಜನ ಕುರುಬರು ವಿಜಯನಗರವನ್ನಾಳಿದ ಸಂಗತಿಯನ್ನು ತಿಳಿಸುತ್ತದೆ. ಬಳ್ಳಾರಿಯ ಕೈಫಿಯತ್ತು[೧೩] "ಬಳ್ಳಾರಿ ಪಾಳೆಯಗಾರರು" ಜಾತಿಯಲ್ಲಿ ಕುರುಬರೇ ಆಗಿದ್ದರು ಎನ್ನುವುದನ್ನು ತಿಳಿಸುತ್ತದೆ. ಹೀಗೆ ಕೈಫಿಯತ್ತಿನ ಉಲ್ಲೇಖವನ್ನು ಕೊಡುತ್ತಾರೆ.

ಗೆಝಿಟಿಯರ್

ಬಾಂಬೆ ಕರ್ನಾಟಕ ಗೆಝಿಟಿಯರ್‌ನಲ್ಲಿ ಕುರುಬರ ಜನಸಂಖ್ಯೆ ಮೈಸೂರು, ಮದ್ರಾಸ್, ಬಾಂಬೆ ಮತ್ತು ಕರ್ನಾಟಕದಲ್ಲಿ ಹೆಚ್ಚಾಗಿರುವುದು ಉಲ್ಲೇಖವಾಗಿದೆ.[೧೪] ಒಡೆಯರು ಕುರುಬರಲ್ಲಿರುವ ಒಂದು ಜಾತಿ. ಇವರು ಸಾಮಂತ ಕುರುಬರ ಬುಡಕಟ್ಟಿಗೆ ಸೇರಿದವರು ಎಂದು, ಮತ್ತು 'ಹಂಡೆ' ಕುರುಬರು ಎಂಬುದು ಕುರುಬರಲ್ಲಿರುವ ಒಂದು ಜಾತಿ ಅಂಡೇವಜೀರರು ಎನ್ನುವ ಉಲ್ಲೇಖವಿದೆ.[೧೫] ಕದಂಬರೆಂಬ ಕುರುಬ ಜಾತಿಯ ಮೂಲ ಪುರುಷ 'ತ್ರಿಲೋಚನ'. ಈ ಅರಸರಿಗೆ 'ಕದಂಬ'ರೆಂಬ ಹೆಸರು ಬಂದಿರುವುದಕ್ಕೆ ಈ 'ಕದಂಬ'ರೆಂಬ ಹೆಸರಿನಿಂದ ರಾಜ್ಯಭಾರ ಮಾಡಿರುತ್ತಾರೆಂದು, ಕುರುಂಬ ಶಬ್ದವು ಸಂಸ್ಕೃತ ಸಂಸರ್ಗದಿಂದ 'ಕದಂಬ' ಎಂದಾಗಿದೆ ಎಂದು ಮೈಸೂರು ಗೆಝಿಟಿಯರ್‌ನಲ್ಲಿ ಈ ಅರಸರ ಅರಮನೆಯ ಮುಂಗಡೆಯಲ್ಲಿ ಕದಂಬ ವೃಕ್ಷವಿದ್ದುದರಿಂದ ಈ ಹೆಸರು ಬಂದಿರುತ್ತದೆಂದು ಉಲ್ಲೇಖವಿದೆ.[೧೬] ಬಳ್ಳಾರಿ ಗೆಝಿಟಿಯರ್‌ನಲ್ಲಿದೆ. ಬಳ್ಳಾರಿ ಪಾಳೆಗಾರರು ಜಾತಿಯಲ್ಲಿ ಕುರುಬರೇ ಆಗಿದ್ದರು ಎನ್ನುವುದಿದೆ ಮತ್ತು ಮೈಲಾರ ದೇವರು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಮೈಲಾರ ಎಂಬ ಗ್ರಾಮದಲ್ಲಿರುವ ಉಲ್ಲೇಖವಿದೆ.[೧೭] ಈ ಗೆಝಿಟಿಯರ್‌ಗಳು ಸಾಮಾಜಿಕ ಇತಿಹಾಸ ತಿಳಿಸಲು ನೆರವಾಗುತ್ತವೆ. ಈ ಸಮುದಾಯದಲ್ಲಿ ಅಧಿಕ ಪ್ರಮಾಣದಲ್ಲಿವೆ. ಈ ಮೈಸೂರು

ಗೆಝಿಟಿಯರ್‌ನಲ್ಲಿ ಪಶುಪಾಲನ ವೃತ್ತಿ ಕುರಿತು It is not impossible however that the earliest kings of many dynasties of the south rose from this shepherd caste ಎಂದು ಇದೆ. Imperil Gazetteer ನಲ್ಲಿ ಪ್ರಾಚೀನ ಪಶುಪಾಲಕರು ಮತ್ತು ಅವರ ಭಾಷೆ ಕುರಿತ ಉಲ್ಲೇಖವಿದೆ. ಮೈಸೂರು ಗೆಝಿಟಿಯರ್‌ನಲ್ಲಿ ಕುರುಬರ ಜಾತಿಯಲ್ಲಿ 'ನೊಣಬರ' ಎಂಬ ಒಳಪಂಗಡವಿರುವ ಉಲ್ಲೇಖವಿದೆ.[೧೮]

ಹೀಗೆ ಹನುಮಂತಯ್ಯನವರು ಜನಾಂಗಿಕ, ಸಾಂಸ್ಕೃತಿಕ ಕೃತಿಗಳನ್ನು ಬರೆಯುವಾಗ ಅನೇಕ ಗೆಝಿಟಿಯರ್‌ನ ಉಲ್ಲೇಖವನ್ನು ಕೊಟ್ಟಿದ್ದಾರೆ.

ದೇಶಿ ಮತ್ತು ವಿದೇಶಿ ವಿದ್ವಾಂಸರ ಅಭಿಪ್ರಾಯ

ಕರ್ನಾಟಕ ಬಹುದೊಡ್ಡ ಸಮುದಾಯಗಳಲ್ಲಿ ಒಂದಾದ 'ಕುರುಬ' ಸಮುದಾಯದ ಇತಿಹಾಸ, ಉಪಪಂಗಡಗಳು, ಆಚರಣೆ, ಸಂಪ್ರದಾಯ, ಭೌಗೋಳಿಕ ವ್ಯಾಪ್ತಿ ಜೀವನ ವಿಧಾನಗಳನ್ನು ಥರ್ಸ್ಟನ್ ಅವರು ತಮ್ಮ "ಕ್ಯಾಸ್ಟ್ ಆ್ಯಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ" ಸಂಪುಟಗಳಲ್ಲಿ ದಾಖಲಿಸಿದ್ದಾರೆ.

ಆರ್.ಇ. ಎಂಥೋವೆನ್‌ರವರು ಕುರುಬರನ್ನು ಕುರಿತು "The Kurubas are the most important elements in the early populations of south India"[೧೯] ಎಂದು ಕುರುಬರ ಮೂಲವನ್ನು ತಿಳಿಸುತ್ತಾರೆ.

ಮತ್ತೋರ್ವ ಸಂಸ್ಕೃತಿ ಚಿಂತಕರಾದ ಗುಸ್ತಾವ್ ಒಪರ್ಟರು ಕುರುಬ ಮೂಲವನ್ನು ಕುರಿತು ಕೆಳಕಂಡಂತೆ ಅಭಿಪ್ರಾಯಪಡುತ್ತಾರೆ.

Indeed, the kurubas most be regarded as veryoldinhabitants of this land. Whocan contest with theirDravidan kinsmen the priority of ocupation of the Indian Soil.

ರಾಬರ್ಟ ಸಿವೆಲ್‌ರ 'ದಿ ಫರ್ಗಾಟನ್ ಎಂಪೈರ್ ಆಫ್ ವಿಜಯನಗರ' ಮತ್ತು ಬಿ. ಸೂರ್ಯನಾರಾಯಣ ಅವರ 'ದಿ ನೆವರ್ ಟು ಫರ್ಗಾಟನ್ ಎಂಪೈರ್ ಆಫ್ ವಿಜಯನಗರ' ಕೃತಿಗಳಲ್ಲಿ "ಮಹಾ ತಪಸ್ವಿಯಾದ ಮಾಧವ ಚಾರ್ಯರಿಗೆ ನಿಧಿಯು ದೊರೆತು ಅದರಿಂದ ವಿಜಯನಗರ ಪಟ್ಟಣವನ್ನು ಕಟ್ಟಿ ರಾಜ್ಯ ಸ್ಥಾಪನೆ ಮಾಡಿ ಕೆಲಕಾಲ ತಾವೇ ಆಳಿ ಮರಣಕಾಲದಲ್ಲಿ ಒಬ್ಬ ಕುರುಬ ಜಾತಿಯವರಿಗೆ ಅನುಗ್ರಹಿಸಿದನು. ಅಂದಿನಿಂದ ಈ ಕುರುಬ ಜಾತಿಯವರೇ ವಿಜಯನಗರ ಸಾಮ್ರಾಜ್ಯಕ್ಕೆ ಮೂಲಪುರುಷರಾದರು[೨೦] ಎನ್ನುವ ಉಲ್ಲೇಖವನ್ನು ಹನುಮಂತಯ್ಯನವರು ತಮ್ಮ ಕೃತಿಗಳಲ್ಲಿ ಕೊಡುತ್ತಾರೆ.

'ಎಚ್ ವಿಲ್ಸನ್' ಅವರು ಹೇಳಿರುವ "ಈ ರಾಜಪುತ್ರರು ಕುರುಮರ ಅಥವಾ ಕುರುಬರ ಜಾತಿಗೆ ಸೇರಿದವರು[೨೧] ಎಂದು ಹೇಳಿರುವುದನ್ನು ಆಕರವಾಗಿ ಬಳಸಿಕೊಂಡಿದ್ದಾರೆ.

'ಮಿ. ಕೌಟೋೕ' ಅವರು ಹೇಳಿರುವ "ಮಾಧವಾಚಾರ್ಯರು ಅರಣ್ಯದಲ್ಲಿ ಸನ್ಯಾಸಾಶ್ರಮದಲ್ಲಿರುವಾಗ ಬುಕ್ಕನೆಂಬ ಬಡ ಕುರುಬನು ಪ್ರತಿದಿನವೂ ಅವರಿಗೆ ಊಟ ತರುತ್ತಿದ್ದನು. ಹೀಗಿರುವಾಗ ಒಂದು ದಿನ ಆ ಬ್ರಾಹ್ಮಣನು ಅವನಿಗೆ ನೀನು ಇಡೀ ಹಿಂದೂಸ್ಥಾನದ ಅಧಿಪತಿಯಾಗುವಿ ಎಂದು ಹೇಳಿದನು. ಇದನ್ನು ಉಳಿದ ಕುರುಬರು ಕೇಳಿ ಅವನೊಡನೆ ತುಂಬಾ ಆದರ ಮರ್ಯಾದೆಗಳಿಂದ ವರ್ತಿಸತೊಡಗಿ ಅವನನ್ನು ತಮ್ಮ ನಾಯಕನನ್ನಾಗಿ ಮಾಡಿಕೊಂಡು ಕ್ರಮೇಣ ಅವನನ್ನು ಅರಸನೆಂದು ಕರೆಯಹತ್ತಿದ್ದರು. ಅವನು ತನ್ನ ನೆರೆಹೊರೆಯವರಾದ ಕನ್ನಡ-ತೆಲುಗು-ಕೊಂಗು-ವರಾಡ ನಾಗಪಟ್ಟಣ ಬಡಗ ಮೊದಲಾದವರನ್ನು ಗೆದ್ದು ಸರ್ವಾಧಿಪತಿಯಾಗಿ ಬುಕ್ಕರಾಯನೆಂದು ಕರೆಯಲ್ಪಟ್ಟನು.[೨೨]

'ಎಂ.ಶಾಮರಾಮ್' ಅವರು 'ಹಕ್ಕಬುಕ್ಕರು ಜಾತಿಯಲ್ಲಿ ಕುರುಬ(Shepherd)ರೆಂದು ಮೈಸೂರು ಸಂಸ್ಥಾನ ಚರಿತ್ರೆ ಭಾಗ ೨ ೧೮೬೮ಳರಲ್ಲಿ ಹೇಳಿರುವುದನ್ನು ಹೇಳಿದ್ದಾರೆ. ಈ ರೀತಿ ದೇಶೀ ಮತ್ತು ವಿದೇಶಿ ವಿದ್ವಾಂಸರ ಬರವಣಿಗೆಯ ಅಭಿಪ್ರಾಯಗಳನ್ನು ಹನುಮಂತಯ್ಯನವರು ಕೊಡುತ್ತಾರೆ.

ಹೀಗೆ ಅನೇಕ ದಾಖಲೆಗಳನ್ನು ಉಪಯೋಗಿಸಿಕೊಂಡು ಕುರುಬ ಸಮುದಾಯದ ಇತಿಹಾಸ ಇದುವರೆಗೂ ರಚಿತವಾಗಿಲ್ಲ. ಆದರೂ ತಮಗೆ ದೊರೆತಷ್ಟೇ ಆಕರಗಳನ್ನು ಬಳಸಿಕೊಂಡು ಮೊಟ್ಟ ಮೊದಲಬಾರಿಗೆ "ಕುರುಬರ ಚರಿತ್ರೆ"ಯನ್ನು ಕಟ್ಟಿಕೊಟ್ಟ ಶ್ರೇಯಸ್ಸು ಹನುಮಂತಯ್ಯನವರಿಗೆ ಸಲ್ಲುತ್ತದೆ. ಇವರ ಕೃತಿಗಳನ್ನೇ ಆಧಾರವಾಗಿಟ್ಟುಕೊಂಡು ಇತ್ತೀಚೆಗೆ ಅನೇಕ ಕೃತಿ ಲೇಖನಗಳು ಪ್ರಕಟವಾಗುತ್ತಿವೆ. ಈ ನಿಟ್ಟಿನಲ್ಲಿ ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಹಾಲುಮತ ಅಧ್ಯಯನ ಪೀಠ ಪ್ರಯತ್ನಿಸುತ್ತಿರುವುದು ಸ್ವಾಗತಾರ್ಹ.

ಪ್ರಾಚೀನ ಕಾಲದಿಂದಲೂ ಪಶುಪಾಲನೆ, ಕುರಿಸಾಕಣೆ, ಕಂಬಳಿ ತಯಾರಿಕೆ ಹಾಗೂ ಕೃಷಿಯನ್ನು ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಭಾರತದಾದ್ಯಂತ ಹರಡಿರುವ ಈ ಸಮುದಾಯದ ಚರಿತ್ರೆಯನ್ನು ಕಟ್ಟುವಲ್ಲಿ ಈ ಆಕರಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಕುರುಬರ ನೆಲೆಗಳು

ಕುರುಬರ ನೆಲೆಗಳನ್ನು ಗುರುತಿಸಿರುವುದು ಹನುಮಂತಯ್ಯನವರ ಸಂಶೋಧನೆಯ ವೈಧಾನಿಕತೆಗಳಲ್ಲಿ ಒಂದು. ಪಶುಪಾಲನೆ ವೃತ್ತಿ ಆರಂಭಗೊಂಡಾಗಿನಿಂದಲೇ ಕುರುಬರ ಇತಿಹಾಸ ಪ್ರಾರಂಭವಾಯಿತೆಂಬ ಅಭಿಪ್ರಾಯವಿದೆ. ಕುರಿ-ದನಗಳ ಪಾಲನೆ ಮಾಡುತ್ತಾ ಅಲೆಮಾರಿಗಳಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಂಚಾರ ಕೈಗೊಂಡು ಆ ಪ್ರದೇಶಗಳಲ್ಲೆಲ್ಲ ಹಟ್ಟಿಗಳನ್ನು ನಿರ್ಮಿಸತೊಡಗಿದರು. ಅತೀ ಪ್ರಾಚೀನ ಕಾಲದಲ್ಲಿ ಎಲ್ಲೆಡೆಗಳಲ್ಲಿ ಹಟ್ಟಿಗಳು. ಪಟ್ಟಿ, ಹಟ್ಟಿ, ವಾಟ, ವಾಢ, ವಾಡಿ ಈ ಬಗೆಯ ಹೆಸರಿನ ಊರುಗಳಿಲ್ಲದ ಭಾಗವು ದಕ್ಷಿಣ ಪ್ರದೇಶದಲ್ಲಿ ಎಲ್ಲಿಯಾದರೂ ದೊರೆಯಬಹುದೇ ಎಂಬುದು ಸಂದೇಶ ಎಂದು ಶಂ.ಬಾ.ಜೋಶಿಯವರು ಅಭಿಪ್ರಾಯಪಟ್ಟಿದ್ದಾರೆ.[೨೪] ಹಟ್ಟಿಗಳಲ್ಲಿ

ವಾಸವಾಗಿರುವವರು ಹಟ್ಟಿಕಾರರು ಎಂದು ಕರೆಯಲ್ಪಟ್ಟರು. ಈ ಹಟ್ಟಿಕಾರರಲ್ಲಿ 'ಕುರುಬರು' ಮತ್ತು 'ದನಗಾರರು' ಎಂದು ಪ್ರಕಾರಗಳಾದವು. ಇವರನ್ನು ಮುಂದೆ 'ಹಟ್ಟಿಕಾರ' ದನಗಾರರೆಂದು ಗುರುತಿಸತೊಡಗಿದರು. ಕಾಲಾನಂತರ ಕೃಷಿಯನ್ನು ವೃತ್ತಿಯನ್ನಾಗಿ ಅವಲಂಬಿಸಿದ ಮೇಲೆ ಒಂದು ಸ್ಥಳದಲ್ಲಿ ನೆಲೆ ನಿಲ್ಲುವುದು ಸಾಧ್ಯವಾಯಿತು. ಆದ್ದರಿಂದ ಮೊದಲು 'ಹಟ್ಟಿ' ನಂತರ 'ಊರು'ಗಳು ಸೃಷ್ಟಿಯಾದವು.

ಕುರುಬರು ದಕ್ಷಿಣ ಭಾರತದ ಮೂಲ ನಿವಾಸಿಗಳೆಂಬ ಅಭಿಪ್ರಾಯವಿದೆ. ಇವರು ಭಾರತದಾದ್ಯಂತ ನೆಲೆಸಿದ್ದೆರೆಂಬುದಕ್ಕೆ ಇಂದಿಗೂ ಹಟ್ಟಿ, ಕೊಪ್ಪಗಳೆಂಬ ಹೆಸರಿನ ಊರುಗಳಿರುವುದು ಸಾಕ್ಷಿಯಾಗಿದೆ. ಕುರುಬರು ಭಾರತದಲ್ಲಿ ನೆಲೆಸಿದ ತೀರ ಹಳೆಯ ವಾಸಿಗಳಾಗಿದ್ದರೆಂದು ಗೆಸ್ಟೋವ್ ಒಪರ್ಟ್‌ರವರು ಅಭಿಪ್ರಾಯ ಪಟ್ಟಿರುವುದರಿಂದ ಇವರು ಭಾರತದಾದ್ಯಂತ ವ್ಯಾಪಿಸಿದ್ದರೆಂಬುದು ಸ್ಪಷ್ಟಪಡುತ್ತದೆ. ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿ ನೀಲಗಿರಿಯಿಂದ ಕುರುಬ ಸೀಮೆ ಆರಂಭವಾಗುತ್ತದೆ. ಉತ್ತರಕ್ಕೆ ಗಂಗಾ, ಶೋಣ, ಭದ್ರಾನದಿಯವರೆಗೂ ಈ ಸಮುದಾಯವು ವ್ಯಾಪಿಸಿಕೊಂಡಿದ್ದಿತ್ತೆಂಬುದಕ್ಕೆ ಆಧಾರಗಳಿವೆ.

ಹಟ್ಟಿಕಾರ ದನಗಾರ(ಕುರುಬ)ರೆಂಬ ಹೆಸರುಗಳಿಗೆ ಪ್ರಾಶಸ್ತ್ಯವಿದ್ದ ಒಂದು ಕಾಲವಿತ್ತು ಎಂಬುದಕ್ಕೆ ಹನುಮಂತಯ್ಯನವರು ಸರ್ವಜ್ಞನ ವಚನದ ಸಾಲನ್ನು ಆಧಾರವಾಗಿ ಕೊಟ್ಟಿದ್ದಾರೆ.

"ತುರು-ಕರುವು ಇರುದೂರು ನರಕಭಾಜನವಕ್ಕೂ

ತುರುಕುರು ಉಂಟಾದರೆ ಉಣಲು ಉಂಟು ಆದ್ದರಿಂದ ಜಗಕ್ಕೆಲ್ಲ ತುರು-ಕರುವೆ ದೈವ ಎಂದು ಸರ್ವಜ್ಞ ಹೇಳಿದ್ದಾನೆ.[೨೫] ಇದಕ್ಕೆ ಇಂದಿಗೂ ಪ್ರಚಲಿತದಲ್ಲಿರುವ "ಕುರುಬನಿದ್ದ ಊರು ಕುಬೇರನಾಗರ" ಎನ್ನುವ ಗಾದೆ ಮಾತು ಸಾಕ್ಷಿ ನೀಡುತ್ತದೆ.

ಹಿಂದೂ ಪವಿತ್ರ ಗ್ರಂಥಗಳ ಪ್ರಕಾರ ಕಂಧಾರ(ಗಂಧಾರ) ವಿಂಧ್ಯಾರಣ್ಯ, ದಂಡಕಾರಣ್ಯ ಕುರುಬರ ಮೂಲ ಪ್ರದೇಶಗಳಾಗಿದ್ದವು. ಕಾಲಾನಂತರ ಅವರು ಆಹಾರಕ್ಕಾಗಿ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋದರು. ಆದ್ದರಿಂದ ಅವರಿಗೆ ಹಟ್ಕಾರರು ಹಾಗೂ ಕಂದಮೇಳರು ಎಂಬ ಹೆಸರು ಬಂದವು. ಹಟ್ಕಾರರು ಗಂಧಾರದಿಂದ ಮರಾಠಕ್ಕೆ ವಲಸೆ ಹೋದರು. ಹಾಗೆಯೇ ಕಂದಮೇಳರು ವಿಂಧ್ಯಾರಣ್ಯ ಹಾಗೂ ದಂಡಕಾರಣ್ಯ ಪ್ರದೇಶಗಳಲ್ಲಿ ನೆಲೆಸಿದರು.

ಪ್ರಾಚೀನ ಕಾಲದ ಶಾಸನಗಳಲ್ಲಿ ಕುರುಬರಹಟ್ಟಿ, ಕುರುಬರಹಳ್ಳಿ, ಕುರುಬರಗೆರೆ, ಕುರುಬರ ಓಣಿ, ಕುರುಬರ ಕಲಾದಿಗೆ ಎನ್ನುವ ವಿಷಯ ಹೇರಳವಾಗಿ ದೊರೆಯುತ್ತವೆ. ಅದೇ ರೀತಿ ಹಿಂದೂಸ್ಥಾನದಲ್ಲೆಲ್ಲಾ ಕುರುಬರು ನೆಲೆಸಿದ್ದರೆಂಬುದಕ್ಕೆ ಹಟ್ಟಿ, ಹಳ್ಳಿ, ಪಟ್ಟಿ, ಮೊದಲಾದ ಹೆಸರಿನ ಊರುಗಳು ಸಾಕ್ಷಿಯಾಗಿವೆ.

ಹೀಗೆ ಕುರುಬರ ನೆಲೆಗಳನ್ನು ಗುರುತಿಸಿರುವುದು ಹನುಮಂತಯ್ಯನವರ ಕೃತಿಗಳಲ್ಲಿ ಕಂಡುಕೊಳ್ಳಬಹುದು.

ಆಚರಣೆ ಸಂಪ್ರದಾಯ

ಆಚರಣೆ ಸಂಪ್ರದಾಯಗಳನ್ನು ಚರ್ಚಿಸಿರುವುದು ಹನುಮಂತಯ್ಯನವರ ಸಂಶೋಧನೆಯ ವೈಧಾನಿಕತೆಗಳಲ್ಲಿ ಒಂದು. ಸಮುದಾಯಗಳ ಆಚರಣೆ, ನಂಬಿಕೆ, ಸಂಪ್ರದಾಯಗಳಲ್ಲಿ ವ್ಯಕ್ತಿಗತವಾದ ಅನನ್ಯತೆಯನ್ನು ಗುರುತಿಸಬಹುದು. ಅದಕ್ಕಾಗಿ ಇವು ಸಮುದಾಯಗಳಲ್ಲಿ ಪ್ರಮುಖ ಆಕರಗಳಾಗಿ ನಿಲ್ಲುತ್ತವೆ. ಅವರ ಆಚರಣೆಗಳೇ ಲೋಕ ರೂಢಿಗಳಾಗುವ ಸಾಮರ್ಥ್ಯವನ್ನು ಹೊಂದುತ್ತವೆ. ಕುರುಬ ಸಮುದಾಯದ ಆಚರಣೆ ಸಂಪ್ರದಾಯಗಳು ಇತರೇ ಸಮುದಾಯಗಳಿಗಿಂತ ಭಿನ್ನವಾಗಿ ಕಂಡುಬರುತ್ತವೆ. ಇವರಲ್ಲಿ ಜನನವಾಗಿ ಹನ್ನೆರಡು ದಿವಸದಲ್ಲಿ ತಮ್ಮ ಕುಲಗುರುಗಳನ್ನು ಕರೆಸಿ ಮಗುವಿಗೆ ನಾಮಕರಣವನ್ನು ಮಾಡುವ ಪದ್ಧತಿಯಿದೆ. ಇದು ಬೇರೆ ಸಮುದಾಯಗಳಲ್ಲಿ ಕಾಣಬರುವುದಿಲ್ಲ. ಕುರುಬ ಸಮುದಾಯದ ಒಳಪಂಗಡವಾದ ಒಡೆಯರು ಇವರು ಸಾಮಂತ ಕುಲಕ್ಕೆ ಸೇರಿದವರಾಗಿದ್ದು ಕರುಬರಿಗೆ ಕುಲ ಗುರುಗಳಾಗಿ, ಜನನ, ಮದುವೆ, ಮರಣಗಳಂಥ ಕಾರ್ಯಗಳು ಇವರ ನೇತೃತ್ವದಲ್ಲಿ ನಡೆಯುತ್ತವೆ. ಒಡೆಯರುಗಳು ಕುರುಬ ಜನಾಂಗದ ಮದುವೆಗಳಲ್ಲಿ ಪುರೋಹಿತನ ಕಾರ್ಯವನ್ನು ನಿರ್ವಹಿಸಿ, ಆ ಮದುವೆಗೆ ಒಂದು ರೀತಿಯ ಧಾರ್ಮಿಕ ಸ್ವರೂಪವನ್ನು ಮತ್ತು ಪಾವಿತ್ರ್ಯವನ್ನು ತಂದು ಕೊಡುತ್ತಾರೆ. ವಧು-ವರರಿಗೆ ಹರಸುವ ಮಂತ್ರವನ್ನು ಹನುಮಂತಯ್ಯನವರು ಮೊದಲಬಾರಿಗೆ ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. ಆ ಮಂತ್ರದ ಭಾಗ ಹೀಗಿದೆ.

"ಕಲಿಕಲಿಯಾಗಿ
ಕರ್ಯಜ್ಜನಾಗಿ
ಭೀಮಣ್ಣನಾಗಿ
ಭಿಲ್ಲರಾಜ್ಯವನಾಳಿ
ಗುರುರೇವಣಸಿದ್ಧ
ಕಟ್ಟಿದ ಸೇಸೆ ಸ್ಥಿರವಾಗಲಿ
ಸರೂರ ಶಾಂತಮುತ್ತಯ್ಯ
ಕಟ್ಟಿದ ಕಲ್ಯಾಣ ಸ್ಥಿರವಾಗಲಿ
ಸೋಬತಿ ಸೋಬಾನ
ಸೋಬತಿ ಸೋಬಾನ"[೨೬]

ಎಂದು ಆಶೀರ್ವಚನ ನೀಡುತ್ತಾರೆ. ಕೆಲವು ಕಡೆ ಈ ಮಂತ್ರ (ವಚನ)ಕ್ಕೆ ಬದಲಾಗಿ "ತಾರಾಬಲ ಚಂದ್ರಬಲ ತದೇವ ಲಗ್ನಂ" ಎಂದು ಒಡೆಯರು ವಧು-ವರರಿಗೆ ಶುಭ ಹಾರೈಕೆಯ ಮಂತ್ರವನ್ನು ಹೇಳುತ್ತಾರೆ ಎನ್ನುವುದು ಇತ್ತೀಚಿನ ಕೃತಿಗಳಲ್ಲಿ ಕಂಡುಬರುತ್ತದೆ.

ಶ್ರೀ ಬೀರದೇವರ ದೊಡ್ಡ ಜಾತ್ರೆಯ ಆಚರಣೆ ಕುರಿತು ಹೇಳಿದ್ದಾರೆ. ಈ ಜಾತ್ರೆಯನ್ನು ಕೆಲವು ಕಡೆ "ತೋಪು ಜಾತ್ರೆ" ಎಂದು ಕರೆಯುತ್ತಾರೆ. ಈ ಜಾತ್ರೆ ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಪರಿಪಾಠವಿದೆ. ಈ ಜಾತ್ರೆಯಲ್ಲಿ ಬೀರದೇವರ ಗುಡಿಯ ಪೂಜಾರಿಗಳು ತಮ್ಮ ತಲೆಗಳ ಮೇಲೆ ತೆಂಗಿನ ಕಾಯಿಗಳನ್ನು ಒಡೆಯಿಸಿಕೊಂಡು ಜನರನ್ನು ಅಚ್ಚರಿಗೊಳಿಸುವ ದೃಶ್ಯವನ್ನು ಕಣ್ಣಾರೆ ಕಂಡದ್ದನ್ನು ದಾಖಲಿಸಿದ್ದಾರೆ. ಹೀಗಾಗಿ ಹನುಮಂತಯ್ಯನವರು ಸಮಕಾಲೀನ ಸಂದರ್ಭದಲ್ಲಿ ತಾವು ಗಮನಿಸಿದ ಕುರುಬರ ಜನನ, ಜಾತ್ರೆ, ಆಚರಣೆ ಮತ್ತು ಸಂಪ್ರದಾಯಗಳನ್ನು ತಮ್ಮ ಕೃತಿಗಳಲ್ಲಿ ಹೇಳಿದ್ದಾರೆ. ಆ ಮೂಲಕ ಸಮಕಾಲೀನ ಸಮುದಾಯದಲ್ಲಾದ ಪ್ರಕ್ರಿಯೆಗಳಿಗೂ ಸ್ಪಂದಿಸುವುದು ಒಬ್ಬ ಸಂಶೋಧಕನಿಗಿರಬೇಕಾದ ಕುತೂಹಲ ಮತ್ತು ಆಸಕ್ತಿಯನ್ನು ತೋರಿಸುತ್ತದೆ.

ಹಾಲುಮತ ಸಮಾಜ ಇನ್ನಿತರ ಸಮುದಾಯಗಳಿಗಿಂತ ಆಚರಣೆ ಸಂಪ್ರದಾಯಗಳಲ್ಲಿ ಶ್ರೇಷ್ಠತೆಯನ್ನು ಪಡೆದಿದೆ.

ಪಂಗಡಗಳು ಮತ್ತು ಒಳಪಂಗಡಗಳು

ಹಾಲುಮತ ಸಮುದಾಯದಲ್ಲಿ ಪಂಗಡಗಳ ಮತ್ತು ಒಳಪಂಗಡಗಳ ಸೃಷ್ಟಿಗೆ ವೃತ್ತಿಯು ಕಾರಣವಾಗಿದೆ. ಸಮಾಜದಲ್ಲಿ ಒಂದೊಂದು ಕೆಲಸಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸುವಂತೆ ಹಾಲುಮತದಲ್ಲಿಯೂ ಅನೇಕರು ವೃತ್ತಿಯನ್ನು ಆರಿಸಿಕೊಂಡರು ಮೂಲದಲ್ಲಿ ಒಂದೇ ಜನಾಂಗವಾಗಿದ್ದ ಕುರುಬರು ನಂತರದಲ್ಲಿ ಹಲವಾರು ಒಳಪಂಗಡಗಳಾಗಿ ವಿಭಜನೆಗೊಂಡಿರುವುದು ಕಂಡು ಬರುತ್ತದೆ. ಅವುಗಳಲ್ಲಿ ಹತ್ತಿ ಕಂಕಣ ಕುರುಬರು ಮತ್ತು ಉಣ್ಣೆಕಂಕಣ ಕುರುಬರು ಮೂಲತಃ ಕುರುಬರಲ್ಲಿನ ಎರಡು ಮುಖ್ಯ ಪಂಗಡಗಳಾಗಿದ್ದವು. ಇವು ಪದ್ಮಗೊಂಡನ ಮಕ್ಕಳಿಂದಲೇ ಹುಟ್ಟಿಕೊಂಡಿರುವುದು ವಿಶೇಷವಾಗಿ ಕಂಡು ಬರುತ್ತದೆ. ಪದ್ಮಗೊಂಡನು ಎರಡು ಮದುವೆಯಾಗುವುದರ ಮೂಲಕ ಕುರುಬರಲ್ಲಿ ಈ ಪಂಗಡಗಳು ಸೃಷ್ಟಿಯಾದವು. ನಂತರದಲ್ಲಿ ವಂಶ ಬೆಳೆದಂತೆಲ್ಲಾ ಮೂಲ ಪಂಗಡದಲ್ಲಿ ಕವಲೊಡೆದಿರುವುದನ್ನು ಗಮನಿಸಬಹುದು.

"ಕಂದಯ್ಯ ನಿನ್ನ ಹಿರಿ ಹೆಂಡತಿ ಲಿಂಗಮ್ಮಗೆ ಕಂದರು ಹದಿಮೂರು ಮಂದಿ
ಚೆಂದದಿ ಹತ್ತಿಕಂಕಣದ ಕುರುಬರೆಂದು ನಿನ್ನ ಚಿಕ್ಕ ಹೆಂಡತಿ
ಸಿರಿವಂತೆ ಗಂಡುಮಕ್ಕಳು ಮೂರುಮಂದಿ ಉಣ್ಣೆ ಕಂಕಣದ ಕುರುಬ
ರೆಂದು ಶಿವ ಪೇಳಿ ಮುಂದಣ ಕುರುಹ ಪೇಳಿದನು"[೨೭]

ಹತ್ತಿಕಂಕಣದವರು 'ಕುಡಿವೊಕ್ಕಲಿಗರು', ಉಣ್ಣೆಕಂಕಣದವರು 'ಕುರಿಗಾಯಿ'ಗಳು ಆಗಿರುವುದನ್ನು ತಿಳಿಸುತ್ತದೆ. ಹನುಮಂತಯ್ಯನವರು 'ಕುಡಿವೊಕ್ಕಲಿಗರು' ಎನ್ನುವ ಕುರುಬರ ಒಳಪಂಗಡವನ್ನು ಕುರಿತು ಚರ್ಚಿಸಿದ್ದಾರೆ.

ಹತ್ತಿಕಂಕಣ, ಉಣ್ಣೆಕಂಕಣಗಳು ಸುಮ್ಮನೆ ರಚನೆಯಾದ ಪಂಗಡಗಳಲ್ಲ. ಇವುಗಳ ರಚನೆಯ ಹಿಂದೆ ಒಂದು ಸಮುದಾಯದ ಅಸ್ಮಿತೆಯ ಕುರುಹನ್ನು ಹೊಂದಿದೆ. ಇವುಗಳು ಸಮುದಾಯದಲ್ಲಿ ರಚನೆಯಾಗಬೇಕಾದರೆ ಮುಖ್ಯಘಟನೆ ಬೇಕು. ಕಾರಣ ವಿವಾಹ ಎನ್ನುವುದು ಮುಖ್ಯವಾಗಿ ನಿಲ್ಲುತ್ತದೆ. ಮುಖ್ಯ ಉದ್ದೇಶ ಸಮುದಾಯದ ಉನ್ನತಿ, ಅಭಿವೃದ್ಧಿಯಿಂದ ಸಂಸ್ಕೃತಿಯನ್ನು ಮಹತ್ವಗೊಳಿಸುವುದಾಗಿತ್ತು. ಹಾಗಾಗಿ ಪಂಗಡಗಳು ಸಂಸ್ಕೃತಿಯನ್ನು ಬೇರೆ ಮಾಡುವ ಒಂದು ಮಾಪನವೆಂದು ತಿಳಿಯದ, ಸಾಂಸ್ಕೃತಿಕ ನೆಲೆಯನ್ನು ಅಭಿವ್ಯಕ್ತ ಪಡಿಸುವುದಾಗಿತ್ತು. ಈ ಹಿನ್ನೆಲೆಯಲ್ಲಿ ಹನುಮಂತಯ್ಯನವರು ಪರಿಚಯಿಸಿರುವ ಪಂಗಡಗಳು ಮತ್ತು ಒಳ ಪಂಗಡಗಳನ್ನು ಅಧ್ಯಯನ ಮಾಡಲಾಗಿದೆ. ಉಣ್ಣೆ ಕಂಕಣದವರು ಕಂಬಳಿ ವೃತ್ತಿಯನ್ನು ಸಮಾಜಕ್ಕೆ ಪರಿಚಯಿಸುವ ಸಲುವಾಗಿಯೇ ಹುಟ್ಟಿತೆಂದು ಹೇಳಬಹುದು. ಪದ್ಮಗೊಂಡನ ಕಿರಿಯ ಹೆಂಡತಿ ಚೆನ್ನಮ್ಮ ಈ ಹಿನ್ನೆಲೆಯಲ್ಲಿ ಕಂಡುಬರುತ್ತಾಳೆ. ಮದುವೆ ಮಾಡುವುದರ ಮೂಲಕ ಆಕೆಗೆ ಕಂಬಳಿಯ ನೇಯ್ಗೆಯ ಸ್ವತಂತ್ರವನ್ನು ನೀಡುತ್ತವೆ. ಕಂಬಳಿ ನೇಯ್ಗೆಯ ಕಾಯಕಕ್ಕೆ ಹೆಚ್ಚಿನ ಶ್ರಮ ಅಗತ್ಯ. ಹಾಗಾಗಿ ಬಲಿಷ್ಠವಾದ ರಾಕ್ಷಸಿ ಚೆನ್ನಮ್ಮಗೆ ಬಿಟ್ಟುಕೊಡುತ್ತಾರೆ. ದುಷ್ಟರನ್ನು ಸಂಹರಿಸಿ, ಪ್ರತೀಕವಾಗಿ ಉಣ್ಣೆಕಂಕಣ ಹುಟ್ಟಿತು ಎಂದು ತಿಳಿಯುತ್ತದೆ. ಹತ್ತಿಕಂಕಣ ನಾಡಿನಲ್ಲಿ ಬೆಳೆಯುವ ಕುರುಬರ ಬಗೆಗೆ ಹೇಳಿದರೆ, ಉಣ್ಣೆಕಂಕಣ ನಗರದಿಂದ ಕಾಡಿನಲ್ಲಿ ಬಾಳುವ ಕುರುಬರ ಜೀವನವನ್ನು ಹೇಳುತ್ತದೆ. ಹೀಗಾಗಿ ಈ ಎರಡು ಶಾಖೆಗಳು ಪರಸ್ಪರ ದೂರವಾಗುತ್ತಾ ಹೋದವು. ಆದರೆ ಇಂದು ಆಧುನಿಕ ಸಂಪರ್ಕ ಮಾಧ್ಯಮದಿಂದ ಮತ್ತೆ ಈ ಎರಡು ಪಂಗಡಗಳು ಒಂದಾಗಿವೆ. ಹಾಗೂ ತಮ್ಮ ತಮ್ಮಲ್ಲಿಯೇ ಜಾತಿ, ಗೋತ್ರ, ಬೆಡಗುಗಳ ಮೂಲಕ ಪ್ರತ್ಯೇಕ ಗುರುತಿಸಿಕೊಳ್ಳುವಿಕೆಯು ಕಂಡುಬರುವುದು.

ಕುರುಬರು ಪಶುಪಾಲನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಅದರ ಜೊತೆಗೆ ವ್ಯವಸಾಯ, ವ್ಯಾಪಾರ, ಉದ್ದಿಮೆ ಅನೇಕ ವೃತ್ತಿಯನ್ನು ಅನುಸರಿಸುತ್ತಿದ್ದರು. ಗೊರವಯ್ಯಗಳು, ದಾಸಕುರುಬರು ತಮ್ಮದೇ ಆದ ಸೀಮಿತ ವೃತ್ತಿಯನ್ನು ಅನುಸರಿಸುತ್ತಿದ್ದರು. ಹಂಡೆ ಕುರುಬರು ರಾಜಕಾರಣದ ಹುನ್ನಾರದಲ್ಲಿ ಹಂಡೆ ವಜೀರರಾಗಿ ಕೆಲವು ಪ್ರದೇಶಗಳಲ್ಲಿ ಕಂಡುಬರುತ್ತಾರೆ. ಹಂಡೆ ವಜೀರರು ಮೂಲತಃ 'ಹಂಡೆ ಕುರುಬ'ರಾಗಿದ್ದರೆಂದು ಎಂ.ಎಂ. ಕಲಬುರ್ಗಿ ಮತ್ತು ಶಂ.ಬಾ.ಜೋಶಿ ಅವರು ಅಭಿಪ್ರಾಯ ಪಡುವುದು ಸತ್ಯವಾಗಿ ತೋರುತ್ತದೆ. ಹೀಗಾಗಿ "ಹಂಡೆ ಕುರುಬ"ರನ್ನು ಕುರಿತು ಪರಿಚಯಿಸಿರುವ ಹನುಮಂತಯ್ಯನವರ ವೈಧಾನಿಕತೆಗಳಲ್ಲಿ ಒಂದು. ಮತ್ತು "ಕುರುಬರ ಗುರು ಒಡೆಯರ"ಗಳ ಬಗ್ಗೆ

ನಿರೂಪಿಸಿದ್ದಾರೆ. ಇವರು ಸಾಮಂತ ಬುಡಕಟ್ಟಿಗೆ ಸೇರಿದವರು. ಕುರುಬರ ಕುಲಗುರುವಾದ ರೇವಣಸಿದ್ಧನ ಅನುಯಾಯಿಗಳು. ಇವರೇ ಕುರುಬರ ಕುಲಗುರುಗಳು. ಲಿಂಗಧಾರಣೆಯನ್ನು ಮಾಡಿಕೊಂಡಿರುವರು. ಆದರೂ ಕುರುಬರ ಮನೆಯಲ್ಲಿ ಭೋಜನಾದಿಗಳನ್ನು ಮಾಡುವರು. ಅವರ ಮನೆಯ ಹೆಣ್ಣನ್ನು ತಾವು ತೆಗೆದುಕೊಳ್ಳುವರು ಹಾಗೂ ತಮ್ಮ ಮನೆಯ ಹೆಣ್ಣನ್ನು ಅವರಿಗೆ ಕೊಡುವರು. ಆದರೆ ಮಾಂಸಹಾರ ಮುಟ್ಟುವುದಿಲ್ಲ. ಬ್ರಾಹ್ಮಣ ಪುರೋಹಿತರಿಗೆ ಬದಲಾಗಿ ಇವರೇ ಕುರುಬರ ಮದುವೆಗಳನ್ನು ಮಾಡಿರುವರು. ಬ್ರಾಹ್ಮಣ ಪುರೋಹಿತಶಾಹಿಯನ್ನು ತಡೆಗಟ್ಟಲು ರೇವಣಸಿದ್ದರು ಹುಟ್ಟುಹಾಕಿದ ದಿಟ್ಟಕ್ರಮವಿದು ಎಂದು ವಿ.ಆರ್.ಹನುಮಂತಯ್ಯನವರು ಪ್ರತ್ಯಕ್ಷವಾಗಿ ಕಂಡು, ಬೇರೆಯವರಿಂದ ತಿಳಿದು ತಮ್ಮ ಸಮುದಾಯದಲ್ಲಿ ಕವಲೊಡೆದ ಪಂಗಡಗಳು ಮತ್ತು ಒಳ ಪಂಗಡಗಳನ್ನು ಕುರಿತು ತಮ್ಮ ಕೃತಿಗಳಲ್ಲಿ ಪ್ರಸ್ತಾಪಿಸಿದ್ದಾರೆ.

ಹಾಲುಮತ ಸಾಂಸ್ಕೃತಿಕ ಮಹಾಪುರುಷರು

ಹಾಲುಮತ ಸಾಂಸ್ಕೃತಿಕ ಮಹಾಪುರುಷರನ್ನು ಕುರಿತು ಚರ್ಚಿಸಿರುವುದು ಹನುಮಂತಯ್ಯನವರ ಸಂಶೋಧನೆಯ ವೈಧಾನಿಕತೆಗಳಲ್ಲಿ ಒಂದು. ಭಾರತದ ಸಂಸ್ಕೃತಿಯು ಅನೇಕ ವೀರರಿಂದ ಮತ್ತು ಕವಿಗಳಿಂದ ತುಂಬಿರುವ ದೇಶ. ಒಬ್ಬರು ಚರಿತ್ರೆಯನ್ನು ಕಲಾತ್ಮಕವಾಗಿ ಕಟ್ಟಿಕೊಟ್ಟರೆ ಮತ್ತೊಬ್ಬರು ಸಾಹಸ ಸಾಧನೆಗಳ ಮೂಲಕ ಕಟ್ಟಿಕೊಡುತ್ತಾರೆ. ಅಂದರೆ ಸಂಸ್ಕೃತಿಯ ಅಧ್ಯಯನದಲ್ಲಿ ವೀರರ ಚರಿತ್ರೆ ಮತ್ತು ಸಾಹಿತ್ಯ ಚರಿತ್ರೆಯೂ ಪರಸ್ಪರ ಸಂಬಂಧವನ್ನು ಹೊಂದಿರುತ್ತದೆ. ಇಂಥ ವೀರರಾದ ಶ್ರೀ ಕಾಳಿದಾಸ, ಕನಕದಾಸ, ರೇವಣಸಿದ್ಧ, ಮಾಳಿಂಗರಾಯ, ಶಿವಾಜಿ, ಅಹಲ್ಯಾಬಾಯಿ, ದುರ್ಗಾವತಿದೇವಿ ರಾಷ್ಟ್ರವೀರ ಸಂಗೊಳ್ಳಿರಾಯಣ್ಣ ಮತ್ತು ಆಧುನಿಕ ಮಹಾಪುರುಷ 'ವೇದಮೂರ್ತಿ ಸಿದ್ಧಪ್ಪಯ್ಯ ಒಡೆಯರ್' ಮೊದಲಾದ ಹಾಲುಮತ ಸಂಸ್ಕೃತಿ ಮಹಾಪುರುಷರ ಜೀವನ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ.

ಭಾರತದ ವಿವಿಧ ಪ್ರದೇಶಗಳಲ್ಲಿ ಕಂಡು ಬರುವ ಕುರುಬರು

ಕುರುಬರನ್ನು ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಅವರನ್ನು ಕುರಿತು ಚರ್ಚಿಸಿರುವುದು ಹನುಮಂತಯ್ಯನವರ ವೈಧಾನಿಕತೆಗಳಲ್ಲಿ ಒಂದು.

೧. **ಕರ್ನಾಟಕ**ದಲ್ಲಿ ಕುರುಬ, ಹಾಲುಮತ, ಹೆಗ್ಗಡೆ, ಧನಗಾರರು, ಹಳಬರು ಎಂಬ ಹೆಸರಿನಿಂದ ಗುರುತಿಸಿದ್ದಾರೆ.

೨. **ಆಂಧ್ರಪ್ರದೇಶ**ದಲ್ಲಿ ಗೊಲ್ಲವಾಡು, ಕುರುಪ, ಯಾದವಲು, ಕುರುಪು, ಕುರುಮವಾರು, ಗೋಪಾಲರು, ಗೊಲ್ಲಡು, ಗೊಲ್ಲರು, ಎಂದು ಕರೆಯುತ್ತಾರೆ.

೩. **ಮಹಾರಾಷ್ಟ್ರ**ದಲ್ಲಿ ಧನಗಾರ, ಕುರಿಗಾರರು, ವೀರರು, ವಂಟಿಕಾರರು ಪುರಪತಿಗಳು, ಅರೆಗೌಳಿಗರು, ಅರೆಕುರುಬರು, ಅರೆ ಹಟ್ಟಿಕಾರರು, ಥಾಂಗೆಧನಗಾರರು, ಗವಳಿ ಧನಗಾರು, ಭಾರಗಿ ಧನಗಾರರು, ಗ್ವಾಲ ಎಂಬ ಹೆಸರಿನಿಂದ ಕರೆಯುತ್ತಾರೆ.

೪. **ತಮಿಳುನಾಡಿ**ನಲ್ಲಿಅಂಡರ್, ಕುರುಂಬರು, ಪೊಡುವರ್, ಇಡ್ಯೆಯರ್ ಕಳವರ ಎಂದು

೫. **ಮಧ್ಯಪ್ರದೇಶ**ದಲ್ಲಿ ಧನಗರ್, ಬಘೇಲ್, ಗಡಾರಿಯ, ಗಡಿಯರು ಅಹೀರರು, ಭರವಾಡರು, ರಬಾರಿಯರು, ರಾಜಪಾಲಿ ಎಂಬ ಹೆಸರಿನಿಂದ ಕರೆಯುವ ಕುರುಬರನ್ನು ಗುರುತಿಸಿ, ಅವರ ಪದ ನಿಷ್ಪತ್ತಿ, ಆಚಾರ-ವಿಚಾರ, ರಾಜಕೀಯ ಚರಿತ್ರೆಯಲ್ಲಿ ಅವರ ಪಾತ್ರವೇನು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಚರಿತ್ರೆ

ಕುರುಬರ ಚರಿತ್ರೆಯನ್ನು ಕುರಿತು ಪ್ರಥಮ ಬಾರಿಗೆ ದಾಖಲಿಸಿರುವುದು ಹನುಮಂತಯ್ಯನವರ ವೈಧಾನಿಕತೆಗಳಲ್ಲಿ ಒಂದು. ಕುರುಬರು ರಾಜಕೀಯ ಚರಿತ್ರೆಯನ್ನು ಹೊಂದಿದ್ದರು. ಇವರ ಕರ್ನಾಟಕದ ರಾಜ್ಯ ಮನೆತನ ಕುರುಬರಿಂದಲೇ ಎನ್ನುವುದು ತಿಳಿದುಬಂದಿದೆ. 'ಕುಱುಂಬ' ನಮ್ಮ ಗುಡ್ಡದ ನಾಡಿನವನು. ಅಥವಾ ಮತಿಯವನು ಎಂದರೆ ದ್ವಿರುಕ್ತಿ ದೋಷ ಬರುತ್ತದೆ. ಆದರೆ ಮರವನು ಎಂಬಲ್ಲಿ ಉಳಿದಿರುವ ಮೂಲಾರ್ಥವು ಕುಱುಂಬ ಕುರುಬ ಎಂಬಲ್ಲಿ ಉಳಿದಿಲ್ಲ. ಕಳಿ (ಮರಳಡಿ ಗಳಲ್ಲಿರುವ ಪ್ರಾಣಿ)ಗಳನ್ನು ತಾನಿದ್ದ ಕಱು-ಬೆಟ್ಟಗಳಲ್ಲಿ ಕಂಡು ಅವುಗಳನ್ನು ದಿನಾಲು ಬೇಟೆಯಾಡಿ ತರುವ ಬದಲು ಅವನ್ನು ಸಾಕಿ ತಳಿ ಬೆಳೆಸುವ ಹಂಚಿಕೆಯನ್ನು ಹುಡುಕಿದ ಬುದ್ಧಿವಂತಿಕೆಯ ಶ್ರೇಯಸ್ಸು ಈ ಜನಕ್ಕಿದೆ. ಪ್ರಾಣಿಗಳನ್ನು ಸಾಕಿ ಬದುಕುವ ಈ ಹೊಸ ಹಂಚಿಕೆ ತಿಳಿದ ಈ ಜನ ಮರವ ಕಳವರಗಿಂತಲೂ ಸಾಂಸ್ಕೃತಿಕ ರೀತಿಯಲ್ಲಿ ಮುಂದುವರೆದವರಾಗಿರುತ್ತಾರೆ. ಇವರು ಕೋಟೆ ಕಟ್ಟಿಕೊಂಡು ಒಂದೊಂದು ಭಾಗದ ಒಡೆಯರಾಗುತ್ತಾರೆ ಎಂದು ಶಂಬಾ ಜೋಶಿಯವರು ಅಭಿಪ್ರಾಯ ಪಡುತ್ತಾರೆ.[೨೮] ಇವರ ಅಭಿಪ್ರಾಯದಂತೆ ಹನುಮಂತಯ್ಯನವರು ಕುರುಬರ ರಾಜಕೀಯ ಚರಿತ್ರೆಯನ್ನು ದಾಖಲಿಸುತ್ತಾ ಹೋಗಿದ್ದಾರೆ. ಕುರುಬರ ರಾಜಕೀಯ ಚರಿತ್ರೆಗೆ ಸ್ಪಷ್ಟ ದಾಖಲೆಗಳು ದೊರೆಯುವುದು ಸುಮಾರು ೮ನೇ ಶತಮಾನದ ನಂತರ ಅದಕ್ಕೂ ಪೂರ್ವದಲ್ಲಿ ರಾಜಕೀಯವಾಗಿ ಮನ್ನಣೆ ಗಳಿಸಿದ್ದರು. ಕುರುಬರು ರಾಜಕೀಯ ಜೀವನದಲ್ಲಿ ಪ್ರಥಮ ಭಾಗದಲ್ಲಿ ಕೇವಲ ದೈಹಿಕಶಕ್ತಿ ಪ್ರಭಾವದಿಂದ ರಾಜ್ಯವನ್ನು ಆಳುತ್ತಿದ್ದರು. ಈ ಕಾಲದಲ್ಲಿ ಅವರ ಬಲವೇ ಅಧಿಕಾರವನ್ನು ಕಬಳಿಸುವ ಪ್ರಮುಖ ಸಾಧನವಾಗಿತ್ತು. ಕುರುಬರು ಕಾಡಿನ ವಾಸಿಗಳಾಗಿದ್ದು, ಕಷ್ಟಸಹಿಷ್ಣುಗಳು. ದೈಹಿಕ ಬಲವುಳ್ಳವ ರಾಗಿದ್ದರಿಂದ ತಮ್ಮ ಬಲದ ಆಧಾರದ ಮೇಲೆ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡರೆಂದು ಹೇಳಬಹುದಾಗಿದೆ.

ದ್ರಾವಿಡರು ಆಸ್ಟ್ರೋ–ಏಶಿಯಾಟಿಕ್ ಜನಾಂಗದ ಮೇಲೆ ಆಕ್ರಮಣ ಮಾಡಿ ಅವರನ್ನು ಸೋಲಿಸಿದರು. ಆಸ್ಟ್ರೋ– ಏಶಿಯಾಟಿಕ್ ಜನರು ಮೂಲೆ ಗುಂಪಾಗಿ ದ್ರಾವಿಡರ ವಶವಾದರು. ನಂತರ ಗಂಗಾನದಿ ತೀರದ ಪ್ರದೇಶವನ್ನು ವಶಪಡಿಸಿಕೊಂಡರು. ಹಾಗೆಯೇ ತಮ್ಮ ಪ್ರದೇಶಕ್ಕೆ ಇನ್ನೊಂದು ಬುಡಕಟ್ಟು ಸಮುದಾಯ ಬೇಟೆ ಮತ್ತು ಪಶುಪಾಲನೆಗಾಗಿ ಆಗಮಿಸಿದರೆ ಅವರೊಂದಿಗೆ ಮಾರಣಾಂತಿಕ ಸಂಘರ್ಷ ಮಾಡುತ್ತಿದ್ದರು.

ಆರ್ಯರು ದ್ರಾವಿಡರ ಮೇಲೆ ಆಕ್ರಮಣ ಮಾಡಿ ಸೋಲಿಸಿದರು. ಆರ್ಯರಿಗೆ ಸೋತ ದ್ರಾವಿಡರಲ್ಲಿ ಕೆಲವರು ಸಂಪೂರ್ಣವಾಗಿ ವಶವಾದರಲ್ಲದೆ ದಾಸರಾಗಿ ಅವರ ಸೇವೆ ಸಲ್ಲಿಸತೊಡಗಿದರು. ಸ್ವಾಭಿಮಾನಿಗಳಾದ ಕೆಲವರು ತಂಡೋಪತಂಡವಾಗಿ ದಕ್ಷಿಣದ ಕಡೆಗೆ ವಲಸೆ ಹೋದರು. ಆರ್ಯರಾಗಿ ಪರಿವರ್ತನೆ ಹೊಂದಿದ ಕುರುಬರು ಪಂಜಾಬ್ ಕುರುಬರೆಂದು ಗುರುತಿಸಲ್ಪಟ್ಟರಲ್ಲದೆ, ನಂತರ ಬ್ರಾಹ್ಮಣರು ಹಾಗೂ ರಜಪೂತರೆಂಬ ಅಭಿಧಾನಗಳನ್ನು ಪಡೆದರು. ಭರತರು–ಪುರುಗಳು ಕೂಡ 'ಕುರು' ಎಂಬ ರಾಜಕುಲವನ್ನು ರೂಪಿಸಿಕೊಂಡರು. ಕುರು ಎಂಬುದು ಕುರುದೇಶ, ಕುರುವಂಶ ಎಂಬ ಅರ್ಥ ನೀಡುತ್ತದೆ.[೨೯]

ಆರ್ಯರಾಗದ ದಕ್ಷಿಣದ ಕಡೆಗೆ ವಲಸೆ ಹೋದ ಕುರುಬರು ತೆಂಗಣದಲ್ಲಿ ನೆಲೆಸಿದರು. ಗುಡ್ಡ–ಗಾಡು ಪ್ರದೇಶದಲ್ಲಿ ನೆಲೆಸಿ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡರು. ಕಾಲಾನಂತರ ಪ್ರಾಚೀನ ಮರವ ಜನಾಂಗಕ್ಕೆ ಸೇರಿದ ಸೂತಪತಿಗಳನ್ನು ದಕ್ಷಿಣ ಭಾರತದಲ್ಲಿ ಸೋಲಿಸಿದರು. ಕುರುಬರ ಮುಖಂಡ ಕಾಮಂಡ ಪ್ರಭು ಪುಲಾಲದ ರಾಜನಾಗಿ ಆಳ್ವಿಕೆ ನಡೆಸತೊಡಗಿದ. ಇವನನ್ನು ಪುಲಾಲದ ರಾಜ ಹಾಗೂ 'ಕಾಮಂಡ ಕುರುಬ' ಪ್ರಭು ಎಂಬ ಹೆಸರಿನಿಂದ ಕರೆಯತೊಡಗಿದರು.[೩೦]

'ಕಾಮಂಡ ಪ್ರಭು' ಕುರುಬರ ಅರಸರಲ್ಲೇ ಪ್ರಮುಖನಾಗಿದ್ದಾನೆ. ಇವನು ಉತ್ತಮ ಆಡಳಿತ ಮತ್ತು ನ್ಯಾಯಕ್ಕೆ ಪ್ರಸಿದ್ಧನಾಗಿದ್ದನು. ತೊಂಡಮಂಡಲದಲ್ಲಿ ಆಳ್ವಿಕೆ ನಡೆಸಿದನು. ನಂತರ ಇವನ ಸಾಮ್ರಾಜ್ಯ 'ಕುರುಂಬಭೂಮಿ' ಅಥವಾ 'ಕುರುಂಬನಾಡು' ಎಂದು ಪ್ರಸಿದ್ಧಿಗೊಂಡಿತು. ಈ ಹೆಸರಿನ ಪ್ರದೇಶ ಇಂದಿಗೂ ಮಲಬಾರ್ ತೀರದಲ್ಲಿರುವುದು ಕಂಡುಬರುತ್ತದೆ. ಕುರುಂಬರ ನಾಡಿನಲ್ಲಿ ಕುಸುಬಾ, ಕುರುಂಬರ ನಾಡು, ವಾಯುನಾಡು, ಕೋಲ್‌ಘಾಟ್, ವಾಯುಮಲ್ಯೆ, ತೈಕಂಪುರಮ್, ವಾರಕ್ಕಪುರಮ್ ಪೊರ್ರೈ ಎಂಬ ಏಳು ತಾಲೂಕುಗಳನ್ನು ಒಳಗೊಂಡಿತ್ತು.[೩೧] ಹಾಗೆಯೇ ಪುಲಾಲ್ ಕೋಟ್ಟೈ, ವೆನಕುನ ಕೋಟ್ಟೈ, ಇಕ್ಕಟ್ಟು ಕೋಟ್ಟೈ, ಪಟ್ಟವೂರ ಕೋಟ್ಟೈ, ಮನವೂರು ಕೋಟ್ಟೈ ಮೊದಲಾದ ಪಟ್ಟಣ ಪ್ರದೇಶಗಳಲ್ಲಿ ಕುರುಬರು ಕೋಟೆ ಕಟ್ಟಿಸಿದರೆಂದು ತಿಳಿದುಬಂದಿದೆ. ನಂತರ ಕುರುಬರು ಕುರುನಿಲ ಮನ್ನೆಯರು ಎಂದು ಪ್ರಸಿದ್ಧಗೊಂಡರು. ಕುರನಿಲ ಮನ್ನೆಯರ್ ಎಂದರೆ

ಸಾಮಾಂತ ರಾಜರು, ಪಾಳೆಯಗಾರರು ಎಂಬರ್ಥವಿದೆ. ಇವರು ತೊಂಡಮಂಡಲ ಹಾಗೂ ಸಾಲಂಡಾಕಮ್‌ನಲ್ಲಿ ಸಾಮ್ರಾಜ್ಯ ಸ್ಥಾಪಿಸಿ ಹಲವಾರು ವರ್ಷಗಳು ಆಳ್ವಿಕೆ ನಡೆಸಿದರು. ಈ ರೀತಿ ಆಳ್ವಿಕೆ ನಡೆಸಿದ ಕುರುಬರ ಚರಿತ್ರೆಯನ್ನು ಮೊಟ್ಟ ಮೊದಲ ಬಾರಿಗೆ ದಾಖಲಿಸಿರುವುದು ಹನುಮಂತಯ್ಯನವರು.

ಭಾಷೆ

ಹನುಮಂತಯ್ಯನವರ ಕೃತಿಗಳನ್ನು ಅವಲೋಕಿಸಿದಾಗ ಅವರ ಸಂಸ್ಕೃತ, ತಮಿಳು, ಮರಾಠಿಯಿಂದ ಹಾಗೂ ಇಂಗ್ಲೀಷ್ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿರುವುದು ತಿಳಿದುಬರುತ್ತದೆ. ಸಂಶೋಧಕನಿಗೆ ಇರಬೇಕಾದ ಬಹುಭಾಷಾಜ್ಞಾನ ಹನುಮಂತಯ್ಯನವರಲ್ಲಿ ಕಾಣಬಹುದು.

ಕೊನೆಟಿಪ್ಪಣಿಗಳು

೧. ಕುರುಬ ಚರಿತ್ರೆ, ವಿ.ಆರ್.ಹನುಮಂತಯ್ಯ, ಪು. ೧೩

೨. ವಿಜಯನಗರ ಸಾಮ್ರಾಜ್ಯ ಚರಿತ್ರೆ, ವಿ.ಆರ್.ಹನುಮಂತಯ್ಯ, ಪು. ೧೫–೧೬

೩. ಅದೇ, ಪು. ೧೮

೪. ಅದೇ, ಪು. ೩೧

೫. ಅದೇ, ಪು. ೩೦

೬. ಅದೇ, ಪು. ೩೦

೭. ಅದೇ, ಪು. ೩೧

೮. ಕುರುಬರ ಚರಿತ್ರೆ, ವಿ.ಆರ್.ಹನುಮಂತಯ್ಯ, ೧೫೦

೯. ಅದೇ, ಪು. ೧೪೮

೧೦. ಅದೇ, ಪು. ೧೪

೧೧. ಅದೇ, ಪು. ೧೪ (ಟಿಪ್ಪಣಿ)

೧೨. ವಿಜಯನಗರ ಸಾಮ್ರಾಜ್ಯ ಚರಿತ್ರೆ, ಪು. ೨೪

೧೩. ಕುರುಬರ ಚರಿತ್ರೆ, ಪು. ೧೨೪

೧೪. ಅದೇ, ಪು. ೨೦

೧೫. ಅದೇ, ಪು. ೨೩

೧೬. ಅದೇ, ಪು. ೩೦

೧೭. ಭಾರತ ದೇಶದ ಕುರುಬರ ಚರಿತ್ರೆ, ಪು. ೧೧೦

೧೮. ಕುರುಬರ ಚರಿತ್ರೆ, ವಿ.ಆರ್.ಹನುಮಂತಯ್ಯ, ಪು. ೧೨ (ಟಿಪ್ಪಣಿ)

೧೯. ಅದೇ, ಪು. ೧೨

೨೦. ವಿಜಯನಗರ ಸಾಮ್ರಾಜ್ಯ ಚರಿತ್ರೆ, ವಿ.ಆರ್.ಹನುಮಂತಯ್ಯ, ಪು. ೨

೨೧. ಅದೇ, ಪು. ೬

೨೨. ಅದೇ, ಪು. ೧೨

೨೩. ಅದೇ, ಪು. ೧೧

೨೪. ಶಂಬಾಕೃತಿ ಸಂಪುಟ-೧, ಪು. ೨೭೨

೨೫. ಭಾರತ ದೇಶದ ಕುರುಬರ ಚರಿತ್ರೆ, ಪು. ೫೩

೨೬. ಅದೇ, ಪು. ೬೬

೨೭. ಅದೇ, ಪು. ೮೮-೮೯

೨೮. ಕುರುಬರ ಗುರು ಒಡೆಯರು ಸಾಂಸ್ಕೃತಿಕ ಅಧ್ಯಯನ, ಪು. ೪೧

೨೯. ಹಾಲುಮತ ಸಂಸ್ಕೃತಿ, ಡಾ. ಎಫ್.ಟಿ.ಹಳ್ಳಿಕೇರಿ, ಪು. ೧೩

೩೦. ಜನಪದ ಹಾಲುಮತ ಮಹಾಕಾವ್ಯ, ಪು. ೩೨

೩೧. ಶಂಬಾ ಕೃತಿ ಸಂಪುಟ ೩, ಪು. ೨೫೨

೩೨. ಕುರುಬ ಚರಿತ್ರೆ, ಪು. ೧೪

ಅಧ್ಯಾಯ ೭

ಸಮಾರೋಪ

ಅಧ್ಯಾಯ ೭

ಸಮಾರೋಪ

ವಿ.ಆರ್.ಹನುಮಂತಯ್ಯನವರು ಮೂಲತಃ ಪಶುಪಾಲನೆ ವೃತ್ತಿಯನ್ನು ಅವಲಂಬಿಸಿದ ಸುಸಂಸ್ಕೃತ ಮನೆಯಲ್ಲಿ ಜನಿಸಿದವರು. ಅವರ ಹಳ್ಳಿಯಲ್ಲಿ ಶಾಲೆಗಳು ಇಲ್ಲದಿದ್ದರಿಂದ ತಂದೆಯು ಅವರನ್ನು ಕಲಿಯಲು ಬೆಂಗಳೂರು ಪಟ್ಟಣಕ್ಕೆ ಕಳುಹಿಸಿದರು. ಇವರು ಮೆಟ್ರಿಕ್ಯುಲೇಷನ್‌ವರೆಗೆ ಶಿಕ್ಷಣ ಪಡೆದು ತಂದೆಯ ಆಸೆಯಂತೆ ಶಾಲಾ ಶಿಕ್ಷಕರಾದರು. ಜೊತೆಗೆ ತಮ್ಮ ಸಹಜ ಪ್ರತಿಭೆಯಿಂದ ಸಾಹಿತ್ಯದ ಕಡೆಗೆ ಒಲವು ತೋರಿಸಿದರು. ಇವರು ಸುಮಾರು ಮೂವತ್ತರ ಪ್ರಾಯಕ್ಕೆಲ್ಲ ಕನ್ನಡ ಸಾಹಿತ್ಯ, ಸಂಸ್ಕೃತಿ, ಸಮಾಜ, ಚರಿತ್ರೆ, ಸಂಶೋಧನೆಗಳಲ್ಲಿ ವಿದ್ವತ್ತನ್ನು ಪಡೆದಿದ್ದರು. ಅವಕಾಶಗಳೇ ಇಲ್ಲದಿದ್ದ ಕಾಲದಲ್ಲಿ ಅವಕಾಶಗಳನ್ನೂ ಸೃಷ್ಟಿಸಿಕೊಂಡು ಸಾಧಿಸಬೇಕೆಂದಿದ್ದನ್ನು ಸಾಧಿಸಿದವರು. ಸತತ ಪರಿಶ್ರಮದಿಂದ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು ಎಂಬ ಮಾತಿಗೆ ಹನುಮಂತಯ್ಯನವರು ನಿದರ್ಶನವಾಗಿದ್ದಾರೆ.

ಹನುಮಂತಯ್ಯ ಅವರದು ಪರಿಪೂರ್ಣತೆಯಿಂದ ಕೂಡಿದ ವ್ಯಕ್ತಿತ್ವ. ಹಲವು ವಿದ್ವಾಂಸರ ಜೊತೆ ಯಾವಾಗಲೂ ವಸ್ತು ವಿಷಯವನ್ನು ಕುರಿತು ಚರ್ಚಿಸುವುದೇ ಅವರ ಧ್ಯೇಯವಾಗಿತ್ತು. ಇವರು ಶಾಲಾ ಶಿಕ್ಷಕರಾಗಿ, ಇತಿಹಾಸಕಾರರಾಗಿ, ಸಂಶೋಧಕರಾಗಿ, ಸಮಾಜ ಸೇವಕರಾಗಿ ಹಲವು ಕ್ಷೇತ್ರಗಳಲ್ಲಿ ಉಪಯುಕ್ತ ಕೃತಿಗಳನ್ನು ನೀಡಿರುವರು. ತಮ್ಮ ಅಧ್ಯಯನದ ಕಾರ್ಯ ಕ್ಷೇತ್ರವಾಗಿ ಇವರು ನಡುನಾಡು, ಗಡಿನಾಡು ಮತ್ತು ಹೊರನಾಡುಗಳನ್ನು ಮಾಡಿಕೊಂಡಿರುವರು. ತಮ್ಮ ಕ್ಷೇತ್ರಕಾರ್ಯದ ಮೂಲಕ ಅಲ್ಲಲ್ಲಿ ಸುತ್ತಿ ಅಸಂಖ್ಯಾತ ವಿದ್ವಾಂಸರ ಬರವಣಿಗೆಯ ಕೃತಿಗಳನ್ನು ಪೂರಕವಾಗಿ ಬಳಸಿಕೊಂಡು, ಸಂಶೋಧನ ದೃಷ್ಟಿಕೋನದಿಂದ ಕೃತಿಗಳನ್ನು ರಚಿಸಿರುವರು. ಕುರುಬ ಸಮುದಾಯದ ಆಚಾರ-ವಿಚಾರ ಸಂಸ್ಕೃತಿಯನ್ನು ಬಲ್ಲವರಿಂದ ತಿಳಿದುಕೊಂಡು, ಹಬ್ಬ ಆಚರಣೆಗಳು

ನಡೆಯುವ ಸಂದರ್ಭದಲ್ಲಿ ಅಲ್ಲಿಗೆ ಬೇಟಿಕೊಟ್ಟು ಪ್ರತ್ಯಕ್ಷವಾಗಿ ಕಂಡ ದೃಶ್ಯವನ್ನು ಮತ್ತು ಸಂಗ್ರಹಿಸಿದ ಮಾಹಿತಿಯನ್ನು ತಮ್ಮ ಕೃತಿಗಳಿಗೆ ಅಳವಡಿಸಿಕೊಂಡಿದ್ದಾರೆ.

ವಿ.ಆರ್.ಹನುಮಂತಯ್ಯನವರು 'ಕುರುಬರ ಚರಿತ್ರೆ'(೧೯೨೬), 'ಸಂಕ್ಷಿಪ್ತ ವಿಜಯನಗರ ಸಾಮ್ರಾಜ್ಯ ಚರಿತ್ರೆ'(೧೯೩೬), 'ವಿಜಯನಗರ ಸಾಮ್ರಾಜ್ಯ ಚರಿತ್ರೆ'(೧೯೫೨), 'ಭಾರತ ದೇಶದ ಕುರುಬರ ಚರಿತ್ರೆ'(೧೯೫೮), 'ಭೋಜರಾಜ ಕಾಳಿದಾಸ ಚರಿತ್ರೆ'(೧೯೬೧) ಎಂಬ ಕೃತಿಗಳನ್ನು ರಚಿಸಿದ್ದಾರಲ್ಲದೆ, ಒಬ್ಬ ಕುರುಬರ(ಗೊಲ್ಲರ) ಗುರುವಿನ ಮಹತ್ವದ ಸನ್ನದು, ಶ್ರೀಕನಕದಾಸರು ಕುರುಬರಲ್ಲವೇ? ಕುರುಬರು ಲಿಂಗವನ್ನು ಏಕೆ ಕಟ್ಟಿಕೊಳ್ಳಬೇಕು? ಎಂಬ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವರ ಇಂಥ ಮಹತ್ವದ ಗ್ರಂಥ ರಚನೆಯಿಂದ ಇವರ ನಾಲ್ಕನೆಯ ಕೃತಿ 'ಭಾರತ ದೇಶದ ಕುರುಬ ಚರಿತ್ರೆ'ಗೆ ಇಂದೂರು ಸಂಸ್ಥಾನದ ಶ್ರೀ ಮನ್ಮಹಾರಾಜ, ಶ್ರೀಮಂತ ಶ್ರೀ ಯಶವಂತರಾವ್ ಹೋಳ್ಕರ್ ಅವರು ಐದು ನೂರು ರೂಪಾಯಿಗಳನ್ನು ಬಹುಮಾನವಾಗಿ ನೀಡಿರುವರು. ಪ್ರಸಿದ್ಧ ಸಂಸ್ಕೃತ ರತ್ನ ಸಾಹಿತ್ಯಕವಿ, ಭೂಷಣ ವಿದ್ಯಾಲಂಕಾರ ಎಂ.ಸಿ.ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ಈ ಗ್ರಂಥಕ್ಕೆ ಮುನ್ನುಡಿ ಬರೆದಿದ್ದಾರೆ. ಈ ಕೃತಿಯು ಇತರ ರಾಜ–ಮಹಾರಾಜರುಗಳಿಗೆಲ್ಲ ಆದರ್ಶಪ್ರಾಯವಾಗಿದೆ. ಹಾಗೂ ಹನುಮಂತಯ್ಯ ಅವರು ನಿಸ್ಸಂಶಯವಾಗಿ ವಿದ್ವಾಂಸರ ಪಾಲಿಗೆ ಸೇರಬೇಕಾದ ವ್ಯಕ್ತಿಯೆಂದು ಹೇಳಿರುವುದು ಅರ್ಥಪೂರ್ಣವಾಗಿದೆ. ಹೀಗಾಗಿ ಹನುಮಂತಯ್ಯನವರ ಸಾಧನೆಯ ಆಳ–ಔನ್ನತ್ಯಗಳನ್ನು ತಿಳಿಯಬೇಕಾದರೆ ಅವರ ಜೀವನ ಚರಿತ್ರೆಯ ಪುಟಗಳನ್ನು ತಿರುವಿಹಾಕಬೇಕು.

೧. ಇದುವರೆಗೂ ವಿ.ಆರ್.ಹನುಮಂತಯ್ಯ ಅವರ ಸಮಗ್ರ ಸಾಹಿತ್ಯ ಕುರಿತಾಗಿ ಸಂಶೋಧನೆಯಾಗಲಿ, ವಿಮರ್ಶೆಯಾಗಲಿ ನಡೆದಿಲ್ಲ. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ಅವರ ಸಮಗ್ರ ಸಾಹಿತ್ಯದ ಮೇಲೆ ಬೆಳಕು ಚೆಲ್ಲಲಾಗಿದೆ.

೨. ವಿ.ಆರ್.ಹನುಮಂತಯ್ಯನವರ ಸಾಹಿತ್ಯ ಬದುಕಿನೊಂದಿಗೆ ಅವರು ಕೃತಿಗಳಲ್ಲಿ ಪ್ರತಿಪಾದಿಸಿದ ಕುರುಬ ಸಮುದಾಯದ ಪ್ರಾಚೀನತೆ ಮತ್ತು ಇತಿಹಾಸವನ್ನು ಕುರಿತು ವಿಶ್ಲೇಷಿಸಲಾಗಿದೆ.

೩. ಕರ್ನಾಟಕದಲ್ಲಿರುವ ಕುರುಬರ ಉಪಪಂಗಡಗಳ ಕುರಿತಾಗಿ ಮೊದಲಿಗೆ ಚರ್ಚಿಸಿದವರು ಇವರು. ನಂತರದಲ್ಲಿ ಉಪಪಂಗಡಗಳ ಕುರಿತಾಗಿಯೇ ಸಾಕಷ್ಟು ಕೃತಿಗಳು, ಲೇಖನಗಳು ಬಂದಿವೆ. ಅವುಗಳನ್ನು ತೌಲನಿಕವಾಗಿ ಈ ಅಧ್ಯಯನದಲ್ಲಿ ಬಳಸಿಕೊಂಡು ವಿಮರ್ಶಿಸಿ ವಿಶ್ಲೇಷಿಸಲಾಗಿದೆ.

೪. ವಿವಿಧ ಪ್ರಾಂತ್ಯಗಳಲ್ಲಿ ಕುರುಬರನ್ನು ಕರೆಯುವ ಹೆಸರು, ಅವರ ವೃತ್ತಿ ಮತ್ತು ಸಂಸ್ಕೃತಿಯನ್ನು ವಿಶ್ಲೇಷಿಸಲಾಗಿದೆ.

೫. ಈ ಸಮುದಾಯದಲ್ಲಿ ಅನೇಕ ಸಾಧು–ಸಂತರು ಆಗಿ ಹೋಗಿದ್ದಾರೆ. ಅಂತಹ ಮಹಾನುಭಾವರನ್ನು ಕುರಿತು ಪರಿಚಯಿಸಲಾಗಿದೆ.

೬. ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಎರಡು ಕೃತಿಗಳಿದ್ದು, ಒಂದು ಕೃತಿಯು ವಿಜಯನಗರದ ಪರಿಚಯವನ್ನು ತಿಳಿಸಿದರೆ, ಮತ್ತೊಂದು ಕೃತಿಯು ಆ ಸಾಮ್ರಾಜ್ಯದ ಇತಿಹಾಸವನ್ನು ತಿಳಿಸುತ್ತದೆ. ಈ ಎರಡು ಕೃತಿಗಳಿಗೆ ಪೂರಕವಾಗಿ ಹಲವಾರು ಗ್ರಂಥಗಳನ್ನು ಬಳಸಿಕೊಂಡು ವಿಜಯನಗರದ ಇತಿಹಾಸವನ್ನು ಕಟ್ಟಿಕೊಡಲಾಗಿದೆ.

೭. ಕಾಳಿದಾಸ, ಭೋಜರಾಜ ಮತ್ತು ಭಾರವಿಯ ಚರಿತ್ರೆಯನ್ನು ಸಂಪಾದಿಸಿದ್ದು, ಆ ಕೃತಿಯನ್ನು ಇತರ ಸಂಪಾದನ ಕೃತಿಗಳೊಂದಿಗೆ ತುಲನಾತ್ಮಕವಾಗಿ ನೋಡಿ ಚರ್ಚಿಸಲಾಗಿದೆ.

೮. ಕಂಬಳಿಯ ಪ್ರಾಚೀನತೆಯನ್ನು ಕಾಳಿದಾಸ, ಭೋಜರಾಜ ಚರಿತ್ರೆಯಲ್ಲಿ ಚರ್ಚಿಸಿದ್ದಾರೆ. ಇದರಿಂದ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಮತ್ತು ಆವರಿಗಿರುವ ಸಾಂಸ್ಕೃತಿಕ ಪ್ರೀತಿಯನ್ನು ಈ ಅಧ್ಯಯನದಲ್ಲಿ ಲೇಖಕರ ಕೃತಿಗಳ ಆಧಾರಗಳೊಂದಿಗೆ ವಿಮರ್ಶಿಸಿ ವಿಶ್ಲೇಷಿಸಲಾಗಿದೆ.

೯. ಹನುಮಂತಯ್ಯನವರ ಸಂಶೋಧನೆಯ ವೈಧಾನಿಕತೆಯನ್ನು ಮೂಲ ಆಕರ ಮತ್ತು ಪ್ರಾಸಂಗಿಕ ಆಕರ ಎಂದು ಎರಡು ರೀತಿಯಲ್ಲಿ ಗುರುತಿಸಲಾಗಿದೆ. ಈ ಆಕರಗಳೊಂದಿಗೆ ಹನುಮಂತಯ್ಯನವರ ಸಂಶೋಧನೆಯ ವೈಧಾನಿಕತೆಯನ್ನು ಕಟ್ಟಿಕೊಡಲಾಗಿದೆ. ಹನುಮಂತಯ್ಯನವರ ಕೃತಿಗಳೊಂದಿಗೆ ಹಾಲುಮತ ಸಮುದಾಯಕ್ಕೆ ಸಂಬಂಧಿಸಿದಂತೆ ಇತರ ಕೃತಿ, ಲೇಖನಗಳೊಂದಿಗೆ ಈ ಅಧ್ಯಯನವನ್ನು ಮಾಡಲಾಗಿದೆ.

೧೦.ಇವರು ಕನ್ನಡ ಸಾಹಿತ್ಯ ಲೋಕಕ್ಕೆ ನಾಲ್ಕಾರು ಕೃತಿಗಳನ್ನು ನೀಡಿದ್ದರೂ, ಅವು ಪ್ರಮಾಣ ದೃಷ್ಟಿಯಿಂದ ಅಲ್ಪವಾದರೂ ಪರಿಣಾಮ ದೃಷ್ಟಿಯಿಂದ ಅಗಾಧತೆಯನ್ನು ಸಾಧಿಸಿವೆ ಎನ್ನಬಹುದು. ಈ ಕೃತಿಗಳು ಅವರೊಬ್ಬ ಉನ್ನತಮಟ್ಟದ ಸಂಶೋಧಕರೆಂಬುದನ್ನು ಸಾಬೀತುಪಡಿಸಿವೆ.

೧೧.ಪತ್ರಿಕಾ ಸಂಪಾದನೆಯಲ್ಲಿಯೂ ಹನುಮಂತಯ್ಯ ಅವರು ಕಾರ್ಯ ನಿರ್ವಹಿಸಿದ್ದಾರೆ. "ಭಾರತ ಪುತ್ರ" ಎಂಬ ಕನ್ನಡ ವಾರ ಪತ್ರಿಕೆಯ ಸಂಪಾದಕರಾಗಿ ಅನೇಕ ವಿಷಯಗಳನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸುವ ಪ್ರಯತ್ನ ಮಾಡಿದ್ದಾರೆ. ಜಯಂತಿ, ಜಯ ಕರ್ನಾಟಕ, ಸುಬೋಧ ಕುರುಬರ ಜಗತ್ಪಾನ ಪತ್ರಿಕೆಯೊಂದಿಗೆ ಅತ್ಯಂತ ನಿಕಟ ಸಂಪರ್ಕವನ್ನು ಹೊಂದಿದ್ದರೆಂದು ಹೇಳಬಹುದು.

೧೨. ಹನುಮಂತಯ್ಯನವರು ಬಹುಭಾಷಾವಿಧರಾಗಿದ್ದುಕೊಂಡು ಇವೆಲ್ಲವನ್ನು ಅವರು ಎಲೆಮರೆಯ ಕಾಯಿಯಂತೆ ಮಾಡಿದ್ದಾರೆಂಬುದು ಗಮನಿಸಬೇಕಾದ ಅಂಶವಾಗಿದೆ. ಇವರು ಒಂದು ಬಗೆಯ

ವೈರಾಗ್ಯವಂತರು. ಬಹಿರಾಡಂಬರಕ್ಕೆ ಸೇರಿದ ಇವರು ಮನೆಗೆ ಛೀಮಾರಿಯಾಗಿ, ಸಮಾಜಕ್ಕೆ ಉಪಕಾರಿಯಾಗಿ ಕೆಲಸ ಮಾಡಿದವರು. ತುಂಬು ಪಾಂಡಿತ್ಯವುಳ್ಳವರು. ತಮ್ಮ ಜೀವನವನ್ನು ಸಮಾಜದ ಏಳ್ಗೆಗಾಗಿ ಮೀಸಲು ಮಾಡಿದವರು. ಅವರ ಜೀವನ ಸಾಧನೆಗಳು ಆದರ್ಶಪ್ರಾಯ. ಅಂಥ ಉದಾತ್ತವ್ಯಕ್ತಿ. ಸಂಶೋಧನೆಯ ಪರಿಶ್ರಮದ ಫಲವಾಗಿ ರಚನೆಗೊಂಡ ಅವರ ಹಲವು ಸಂಶೋಧನಾತ್ಮಕ ಕೃತಿಗಳು ಕುರುಬ ಸಮಾಜದ ಸಂಸ್ಕೃತಿಯನ್ನು ಅನಾವರಣಗೊಳಿಸಿವೆ.

ಒಟ್ಟಾರೆಯಾಗಿ ಹನುಮಂತಯ್ಯನವರ ಚಿಂತನೆ ಕುರುಬರು ಪ್ರಾಚೀನ ಭಾರತದ ಮೂಲ ನಿವಾಸಿಗಳು ಎಂಬ ನಿರ್ಧಾರ ಅವರದಾಗಿತ್ತು. ಇಷ್ಟೆಲ್ಲಾ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದ ಈ ರಸ ಋಷಿಯನ್ನು ಈ ಜನ ಗುರುತಿಸದೆ ಕಡೆಗಣಿಸಿದೆ. ಇವರು ಇದ್ದಾಗ ಯಾರಿಂದಲೂ ಏನನ್ನೂ ಬಯಸದೆ, ಗತಿಸಿದ ಮೇಲೆ ಎಲ್ಲರ ಕಣ್ಣಿಂದ ಮರೆಯಾದ ಈ ಸೌಜನ್ಯ ಮೂರ್ತಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಸಾಹಿತ್ಯ ಲೋಕವು ಕುರುಬ ಸಮಾಜವು ಕಣ್ಣು ತೆರೆಯದೆ ಇದ್ದುದು ವಿಷಾದದ ಸಂಗತಿಯಾಗಿದೆ. ಇನ್ನಾದರೂ ಹನುಮಂತಯ್ಯ ಅವರ ಸಮಗ್ರ ಕೃತಿಗಳ ಮರು ಮುದ್ರಣ ಕಾರ್ಯವನ್ನು ನಿಯೋಜಿಸಿಕೊಂಡು ಅವನ್ನು ಕಾರ್ಯ ರೂಪಕ್ಕೆ ತಂದಲ್ಲಿ ಈ ಹಿರಿಯ ಚೇತನಕ್ಕೆ ಗೌರವ ಸಲ್ಲಿಸಿದಂತಾಗುತ್ತದೆ.

ಅಧ್ಯಾಯ ೮

ಅನುಬಂಧಗಳು

೧. ವಿ.ಆರ್. ಹನುಮಂತಯ್ಯ ಅವರ ಸಾಹಿತ್ಯ ಕೃತಿಗಳು

೨. ಸಹಾಯಕ ಗ್ರಂಥಗಳು

೩. ವಿ.ಆರ್. ಹನುಮಂತಯ್ಯ ಅವರ ಹಸ್ತಾಕ್ಷರ ಮಾದರಿ

೪. ಛಾಯಾಚಿತ್ರಗಳು

ಅಧ್ಯಾಯ ೮

ಅನುಬಂಧಗಳು

೧. ಅವರ ಸಾಹಿತ್ಯ ಕೃತಿಗಳು

೨. ಸಹಾಯಕ ಗ್ರಂಥಗಳು

೩. ಹನುಮಂತಯ್ಯನವರ ಹಸ್ತಾಕ್ಷರದ ಮಾದರಿ

೪. ಛಾಯಾಚಿತ್ರಗಳು

ವಿ.ಆರ್. ಹನುಮಂತಯ್ಯನವರ ಕೃತಿ ಮತ್ತು ಲೇಖನಗಳು

೧. ಕುರುಬರ ಚರಿತ್ರೆ ೧೯೨೬

೨. ಸಂಕ್ಷಿಪ್ತ ವಿಜಯನಗರ ಸಾಮ್ರಾಜ್ಯ ಚರಿತ್ರೆ ೧೯೩೬

೩. ವಿಜಯನಗರ ಸಾಮ್ರಾಜ್ಯ ಚರಿತ್ರೆ ೧೯೫೨

೪. ಭಾರತ ದೇಶದ ಕುರುಬರ ಚರಿತ್ರೆ ೧೯೫೮

೫. ಭೋಜರಾಜ ಕಾಳಿದಾಸ ಚರಿತ್ರೆ ೧೯೬೧

೬. ಆನೆಗೊಂದಿ ಮಹಾಸಂಸ್ಥಾನ ಚರಿತ್ರೆ

೭. ಒಬ್ಬ ಕುರುಬರ (ಗೊಲ್ಲರ) ಗುರುವಿನ ಮಹತ್ವದ ಸನ್ನದು ಮೂಲ: ಹ.ಎಂ. ಫತುಲ್ಲಖಾನರು
ಅನು: ವಿ.ಆರ್. ಹನುಮಂತಯ್ಯ

೮. ಶ್ರೀ ಕನಕದಾಸರು ಕುರುಬರಲ್ಲವೇ?

೯. ಕುರುಬರು ಲಿಂಗವನ್ನು ಏಕೆ ಕಟ್ಟಿಕೊಳ್ಳಬೇಕು?

೧೦. ಅಹಲ್ಯಾಬಾಯಿ

ಸಹಾಯಕ ಗ್ರಂಥಗಳು

೧. ಅಲೆಮಾರಿ ಕುರುಬರು, ಡಾ.ಯರ್ರಪ್ಪ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮

೨. ಅಹಲ್ಯಾಬಾಯಿ ಹೋಳ್ಕರ್ (ಸಂ), ಈರಪ್ಪ ಎಂ.ಕಂಬಳಿ, ಬೆಂಗಳೂರು, ಪ್ರ ೨೦೦೦

೩. ಅಹಲ್ಯಾಬಾಯಿ ಹೋಳ್ಕರ್, ಲೇ. ಚಂದ್ರಕಾಂತ ಬಿಜ್ಜರಗಿ, ಪ್ರ. ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೦೭

೪. ಅಡಿವೆಪ್ಪ ಒಡೆಯರು ಹಾಡಿದ ಮಾಳಿಂಗರಾಯನ ಕಾವ್ಯ, ಗಂಗಾಧರ ದೈವಜ್ಞ (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೫. ಇತಿಹಾಸ ದರ್ಶನ, ಸಂಪುಟ ೨೫, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೧೦

೬. ಇತಿಹಾಸ ದರ್ಶನ, ಸಂಪುಟ ೨೬, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೧೧

೭. ಒರಿಜಿನಲ್ ಇನ್ ಹ್ಯಾಬಿಟೆಂಟ್ಸ್ ಆಫ್ ಇಂಡಿಯಾ, ಗುಸ್ತಾವ್ ಓಪರ್ಟ್, ಏಷಿಯನ್ ಎಜುಕೇಷನ್ ಸೊಸೈಟಿ, ನ್ಯೂಡೆಲ್ಲಿ, ೧೯೮೮

೮. ಕವಿ ಕುಲಗುರು ಕಾಳಿದಾಸ ಆದ್ಯರಂಗಾಚಾರ್ಯ (ಶ್ರೀರಂಗ), ಪ್ರ. ಅಭಿನವ, ಬೆಂಗಳೂರು, ೧೯೭೦

೯. ಕಂಬಳಿ: ಒಂದು ಅಧ್ಯಯನ, ವಿಜಯಶ್ರೀ ಇಟ್ಟಣ್ಣವರ, (ಅಪ್ರಕಟಿತ) ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೧೦. ಕರ್ನಾಟಕ ಗತವೈಭವ, ಆಲೂರು ವೆಂಕಟರಾಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೧೧. ಕರ್ನಾಟಕ ಕೈಫಿಯತ್ತುಗಳು (ಸಂ), ಎಂ.ಎಂ.ಕಲಬುರ್ಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೧೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಲೇ. ಡಾ. ಎಚ್.ತಿಪ್ಪೇರುದ್ರಸ್ವಾಮಿ, ಪ್ರ. ಎ.ಎ.ಕೆ.ಮೂರ್ತಿ, ಪ್ರಕಾಶಕರು, ಮೈಸೂರು, ೨೦೦೧

೧೩. ಕರ್ನಾಟಕ ಚರಿತ್ರೆ ಸಂ. ೩, ಪ್ರೊ. ಬಿ.ಷೇಕ್ ಅಲಿ, ಪ್ರ. ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೭

೧೪. ಕರ್ನಾಟಕದ ಕುರುಬರು, ಶಿವಾನಂದ ಗುಬ್ಬಣ್ಣವರ, ಅಕ್ಷಯ ಪ್ರಕಾಶನ, ಧಾರವಾಡ, ೧೯೯೩

೧೫. ಕರ್ನಾಟಕ ಕುರುಬರ ಒಳಪಂಗಡಗಳು: ಸಾಂಸ್ಕೃತಿಕ ಅಧ್ಯಯನ, ಬಾಳಪ್ಪ ಎ.ಬಿ., (ಅಪ್ರಕಟಿತ) ಪಿಎಚ್.ಡಿ. ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೧

೧೬. ಕರ್ನಾಟಕ ಗೊಲ್ಲ ಸಮುದಾಯ, ಡಾ. ಎಂ.ಗುರುಲಿಂಗಯ್ಯ, ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್, ಬೆಂಗಳೂರು, ೧೯೯೩

೧೭. ಕರ್ನಾಟಕ ಬುಡಕಟ್ಟುಗಳು ಸಂಪುಟ ೩, ಎಚ್.ಜೆ.ಲಕ್ಕಪ್ಪಗೌಡ (ಸಂ) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

೧೮. ಕಾಳಿದಾಸ, ಮೂಲ: ವಾ.ವಿ. ಮುರಾಶಿ, ಅನುವಾದ: ಡಾ. ಜಿ.ಎಸ್.ಗಾಯಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೨೦೦೩

೧೯. ಕುರುಬರ ಗುರು ಒಡೆಯರು, ಡಾ. ಎಫ್.ಟಿ.ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೭

೨೦. ಕುರುಬರ ಚರಿತ್ರೆ, ವಿ.ಆರ್.ಹನುಮಂತಯ್ಯ, ೧೯೨೬, ಬೆಂಗಳೂರು

೨೧. ಕುರುಬರ ಹೆಜ್ಜೆಗಳು: ಒಂದು ಅಧ್ಯಯನ, ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ, ಬಿಜಾಪುರ, ೨೦೦೬

೨೨. ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ, ಡಾ. ಬಿ.ಜಿ.ಬಿರಾದಾರ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೧೦

೨೩. ಕುರುಬರ ಜನಪದ (ಸಂ) ಪ್ರೊ. ಚೆನ್ನಪ್ಪಕಟ್ಟಿ ಮತ್ತು ಆರ್.ಎಸ್.ವಾಡೇದ, ಕನಕ ಜಯಂತೋತ್ಸವ ಸಿಂದಗಿ, ೧೯೯೭

೨೪. ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು, ಡಾ. ತೀ.ನಂ.ಶಂಕರನಾರಾಯಣ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೨

೨೫. ಕುಂಚಟಿಗರ ಸಾಂಸ್ಕೃತಿಕ ಇತಿಹಾಸ, ಡಾ. ಎಂ.ಎಚ್.ನಾಗರಾಜ, ಅನಿಕೇತನ ಪ್ರಕಾಶನ, ತುಮಕೂರು

೨೬. ಗಳಗನಾಥರು ಮತ್ತು ಅವರ ಕಾದಂಬರಿಗಳು, ಕಿತ್ತೂರ ಕೃಷ್ಣಮೂರ್ತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೨೭. ಗುರುವಂದನ, ಕರಿಯಪ್ಪ ಎಂ(ಸಂ), (ವೇ. ಮೂ. ಚನ್ನಯ್ಯ ಒಡೆಯರ್ ಅಭಿನಂದನ ಗ್ರಂಥ) ಶ್ರೀ ಚನ್ನಯ್ಯ ಒಡೆಯರ್ ಅಭಿನಂದನ ಸಮಿತಿ, ಶ್ರೀ ಬೀರೇಶ್ವರ ವಿದ್ಯಾರ್ಥಿ ನಿಲಯ, ಹದಡಿ ರಸ್ತೆ, ದಾವಣಗೆರೆ, ೨೦೦೭

೨೮. ಜಾನಪದ ವಿಶ್ವಕೋಶ ಸಂಪುಟ ೧, ಡಾ. ಚಂದ್ರಶೇಖರ ಕಂಬಾರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫

೨೯. ತಗರ ಪವಾಡ (ಸಂ), ಡಾ. ಎಂ.ಎಂ. ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ. ಎಫ್.ಟಿ.ಹಳ್ಳಿಕೇರಿ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

೩೦. ದಾರ್ಶನಿಕ ಕವಿ ಕನಕದಾಸರು, ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ, ವಿಜಾಪುರ, ೨೦೧೦

೩೧. ದೇವೇಂದ್ರ ವಿರಚಿತ ರಾಜಾವಳಿ ಕಥಾಸಾರ (ಸಂ), ಬಿ.ಎಸ್.ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ವಿಶ್ವವಿದ್ಯಾಲಯ, ೧೯೮೮

೩೨. ಪಾವನ (ಸಂ), ಎಂ.ಜೈಕುಮಾರ್ ಲೇ. ಎಚ್.ಜೆ. ಲಕ್ಕಪ್ಪಗೌಡ, ಪ್ರ. ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠ, ಬೆಂಗಳೂರು, ೧೯೯೨

೩೩. ಪ್ರವಾಸಿ ಕಂಡ ವಿಜಯನಗರ, ವಿವೇಕ ರೈ ಬಿ.ಎ. (ಸಂ), ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦

೩೪. ಪ್ರವಾಸಿ ಕಂಡ ಇಂಡಿಯಾ, ಸಂ ೨, ನಾಗೇಗೌಡ ಎಚ್.ಎಲ್., ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೨೦೦೬

೩೫. ಭಾರತದ ಇತಿಹಾಸ, ಲೇ. ಪ್ರೊ. ಬಿ. ಷೇಕ್‌ಅಲಿ, ಚೇತನ ಬುಕ್‌ಹೌಸ್, ಮೈಸೂರು, ೨೦೦೧

೩೬. ಭಾರತದ ಕುರುಬರು, ಡಾ. ಶ್ಯಾಂಸಿಂಗ್ ಶಶಿ, ಸಂದೀಪ ಪ್ರಕಾಶನ, ದೆಹಲಿ, ೧೯೭೮

೩೭. ಭಾರತ ದೇಶದ ಕುರುಬರ ಚರಿತ್ರೆ, ವಿ.ಆರ್. ಹನುಮಂತಯ್ಯ, ಬೆಂಗಳೂರು, ೧೯೫೮

೩೮. ಭೋಜರಾಜ ಕಾಳಿದಾಸ ಚರಿತ್ರೆ, ವಿ.ಆರ್.ಹನುಮಂತಯ್ಯ, ಬೆಂಗಳೂರು, ೧೯೬೧

೩೯. ಬುಡಕಟ್ಟು ಕುಲಕಸುಬುಗಳು, ಡಾ. ಕೆ.ಎಂ. ಮೈತ್ರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೪೦. ಮರೆಯಲಾಗದ ಮಹಾ ಸಾಮ್ರಾಜ್ಯ ಹಂಪಿ, ಬಾಲಸುಬ್ರಹ್ಮಣ್ಯ (ಅನು), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦

೪೧. ಮರೆತುಹೋದ ಮಹಾ ಸಾಮ್ರಾಜ್ಯ ವಿಜಯನಗರ, ಸದಾನಂದ ಕನವಳ್ಳಿ (ಅನು). ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦

೪೨. ಮಹಾಕವಿ ಭಾರವಿ, ಲೇ. ಎಂ.ಜಿ. ನಂಜುಂಡರಾಧ್ಯ, ಮೈಸೂರು ವಿಶ್ವವಿದ್ಯಾನಿಲಯ, ೧೯೯೯

೪೩. ಮರೆತು ಹೋಗಿರುವ ಸಾಮ್ರಾಜ್ಯ (ರಾಬರ್ಟ್ ಸಿವೆಲ್), ಸದಾನಂದ ಕನವಳ್ಳಿ, ಪ್ರ. ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೨

೪೪. ಮಾನವ ಶಾಸ್ತ್ರದ ಮೂಲಾಂಶಗಳು, ಬಿ.ಆರ್.ಸತ್ಯಲಿಂಗರಾಜು, ಚೇತನ ಬುಕ್ ಹೌಸ್, ಬೆಂಗಳೂರು, ೨೦೦೬

೪೫. ರುಜುವಾತು, ಸಂ. ಯು.ಆರ್.ಅನಂತಮೂರ್ತಿ, ಸಂಚಿಕೆ ೨೩, ಜುಲೈ–ಸೆಪ್ಟೆಂಬರ್, ೧೯೮೦

೪೬. ಲಿಂಗಾಯತ(ಉಪಪಂಗಡಗಳ ದಾಖಲೀಕರಣ) ಸಂ. ಡಾ. ಎಂ.ಎಂ.ಕಲಬುರ್ಗಿ, ಚಿತ್ತರಗಿ ಶ್ರೀ ವಿಜಯಮಹಾಂತೇಶ ಎಜ್ಯುಕೇಶನ್ ಸೊಸೈಟಿ, ಇಳಕಲ್ಲ, ೨೦೦೯

೪೭. ವ್ಯಾಧ ಚರಿತ್ರೆ, ಡಾ. ಮಂಜುನಾಥ ಬೇವಿನಕಟ್ಟಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೪೮. ವಿಜಯನಗರ ಸಾಮ್ರಾಜ್ಯ ಚರಿತ್ರೆ, ವಿ.ಆರ್.ಹನುಮಂತಯ್ಯ, ಬೆಂಗಳೂರು ೧೯೫೨

೪೯. ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಸಿ.ಟಿ.ಎಂ.ಕೊಟ್ರಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೧

೫೦. ವಿಜಯನಗರ ಸಾಮ್ರಾಜ್ಯ, ದೇಸಾಯಿ ಪಾಂಡುರಂಗರಾಯ, ವಿಜಯನಗರ ಸ್ಮಾರಕೋತ್ಸವ ಮಂಡಲ, ಧಾರವಾಡ ೧೯೩೬

೫೧. ವಿಜಯನಗರ ಸಾಮ್ರಾಜ್ಯ, ಸೂರ್ಯನಾಥ ಕಾಮತ್, ಅರ್ಚನಾ ಪ್ರಕಾಶನ, ಬೆಂಗಳೂರು ೧೯೭೩

೫೨. ವಿಜಯನಗರ, ರಾಘವೇಂದ್ರರಾವ್ ವಿ., ವಿದ್ಯಾನಿಧಿ ಬುಕ್ ಡಿಪೋ, ಮೈಸೂರು, ೧೯೪೯

೫೩. ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ವಸುಂಧರ ಫಿಲಿಯೋಜ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೦

೫೪. ಶಿವಾಜಿ ಮೂಲ ಕನ್ನಡ ನೆಲ, ಡಾ. ಸರಜೂ ಕಾಟ್ಕರ್, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೬

೫೫. ಶಂಬಾ ಕೃತಿ ಸಂಪುಟ ೩, (ಸಂ) ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೫೬. ಶ್ರೀ ಕನಕದಾಸರು ಕುರುಬರಲ್ಲವೇ?, ವಿ.ಆರ್.ಹನುಮಂತಯ್ಯ, ಜಯ ಕರ್ನಾಟಕ, ೨೩-೫ ಪುಟ ೧೦೮-೧೧೧ ಸುಬೋಧ, ೨೩.೫, ಪು. ೩೭೨-೩೭೩

೫೭. ಶ್ರೀ ವಿಠಲ: ಒಂದು ಮಹಾಸಮನ್ವಯ, ಮೂಲ: ರಾಮಚಂದ್ರ ಚಿಂತಾಮಣಿ ಢೇರೆ, ಕನ್ನಡಕ್ಕೆ: ಚಂದ್ರಕಾಂತ ಹೋಕಳೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೫೮. ಸರ್ವಜ್ಞನ ವಚನಗಳು, ಸಂ. ಡಾ. ಕೆ.ಆರ್.ಗಣೇಶ, ಸೃಷ್ಟಿ ಪ್ರಕಾಶನ, ಬೆಂಗಳೂರು

೫೯. ಸರೂರ ಶಾಂತಮುತ್ತಯ್ಯ: ಒಂದು ಅಧ್ಯಯನ, ರಾಜಶ್ರೀ ಪಾಟೀಲ, ಎಂ.ಫಿಲ್. ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೬೦. ಸಮಾಜ ವಿಜ್ಞಾನಗಳ ಪಾರಿಭಾಷಿಕ ಪದಕೋಶ, ಡಾ. ಚಂದ್ರಶೇಖರ ದಾಮ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೬೧. ಸಂಗಮರ ಕಾಲದ ವಿಜಯನಗರ, ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಬೆಂಗಳರು ೧೯೮೮

೬೨. ಸಂಕ್ಷಿಪ್ತ ವಿಜಯನಗರ ಸಾಮ್ರಾಜ್ಯ ಚರಿತ್ರೆ, ಲೇ. ವಿ.ಆರ್.ಹನುಮಂತಯ್ಯ, ಬೆಂಗಳೂರು, ೧೯೩೬

೬೩. ಸಂಗೊಳ್ಳಿ ರಾಯಣ್ಣ, ಡಾ. ಸೂರ್ಯನಾಥ ಕಾಮತ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೫

೬೪. ಸಂಸ್ಕೃತ ಕಾವ್ಯ ಲೇ. ಡಾ. ಮಹೇಶ ಅಡಕೋಳಿ, ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಅಧ್ಯಯನ ಪೀಠ, ಬೆಂಗಳೂರು, ೨೦೦೨

೬೫. ಸಂಸ್ಕೃತ ನಾಟಕ, ಲೇ. ಡಾ. ಎಸ್.ಆರ್.ಲೀಲಾ, ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಅಧ್ಯಯನ ಪೀಠ, ಬೆಂಗಳೂರು, ೨೦೦೨

೬೬. ಸಂಸ್ಕೃತ ಸಾಹಿತ್ಯ ಇತಿಹಾಸ ಮೂಲ, ಮೂಲ: ಆಚಾರ್ಯ ಬಲದೇವ ಉಪಾಧ್ಯಾಯ, ಅನು: ರಾಮಚಂದ್ರಶಾಸ್ತ್ರೀ, ಬೆಂಗಳೂರು ವಿಶ್ವವಿದ್ಯಾಲಯ, ೧೯೮೦

೬೭. ಹಕ್ಕ -ಬುಕ್ಕ ಇತಿವೃತ್ತ ವಿಚಾರ ಕೆಲವು ಶೋಧಗಳು ಡಾ. ಎಫ್.ಟಿ.ಹಳ್ಳಿಕೇರಿ, ವಿಜಯನಗರ ಅಧ್ಯಯನ, ಸಂ ೧೪, ೨೦೦೬

೬೮. ಹಕ್ಕಬುಕ್ಕ, ಒಡೆಯರ್ ಡಿ.ಹೆಗ್ಗಡೆ, ತನುಮನ ಪ್ರಕಾಶನ, ಮೈಸೂರು, ೨೦೦೩

೬೯. ಹಂಡೆ ಕುರುಬರು: ಒಂದು ಅಧ್ಯಯನ, ಡಾ. ವೈ.ಕೆ.ಗುಂಡಕರ್ಜಗಿ(ಅಪ್ರಕಟಿತ), ಪಿಎಚ್.ಡಿ. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨

೭೦. ಹಾಲುಮತ ವ್ಯಾಸಂಗ ೪(ಸಂ), ಡಾ. ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩

೭೧. ಹಾಲುಮತದ ಸ್ತ್ರೀಯರು, ಲೇ. ಶಂಕರ ಕುಂಬಾರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೮

೭೨. ಹಾಲುಮತಪುರಾಣಗಳು ಒಂದು ಅಧ್ಯಯನ, ಡಾ. ಬಿ.ಹುಲಿಗೆಮ್ಮ(ಅಪ್ರಕಟಿತ), ಪಿಎಚ್.ಡಿ. ಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೧೦೯

೭೩. ಹಾಲುಮತದ ಮಹಿಳೆಯರ ಸಾಧನ ಸಿದ್ಧಿ, ಮಲ್ಲಿಕಾ ಘಂಟಿ, ಕಾಯಕಯೋಗಿ(ಎಂ.ಎಂ. ಮೇಣಸಗಿ ಸಂಸ್ಕರಣ ಗ್ರಂಥ), ೨೦೦೨

೭೪. ಹಾಲಕೆನೆ(ಸಂ), ಡಾ. ಶ್ರೀರಾಮ ಇಟ್ಟಣ್ಣವರ, ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ, ವಿಜಾಪುರ, ೨೦೦೨

೭೫. ಹಾಲತೊರೆ(ಸಂ), ಎಂ. ಕರಿಯಪ್ಪ, ನಗರ ಕುರುಬರ ಸಂಘ, ದಾವಣಗೆರೆ, ೨೦೦೩

೭೬. ಹಾಲುಮತದ ಚರಿತ್ರೆ, ಸಂ. ವಾಯ್ ಕೆ. ಗುಂಡಕರ್ಜಗಿ, ವಿಜೇತ ಪ್ರಕಾಶನ, ಗದಗ ೨೦೦೫

೭೭. ಹಾಲುಮತ ಕುರುಬ ಜನಾಂಗದ ಚರಿತ್ರೆ, ಪ್ರೊ. ಒಡೆಯರ್ ಡಿ. ಹೆಗ್ಗಡೆ, ಅಖಿಲಾ ಏಜನ್ಸೀಸ್, ಮೈಸೂರು, ೨೦೦೫

೭೮. ಹಾಲುಮತದ ಹುಟ್ಟು, ಬೋನಾ ಬಸವರಾಜು, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೦

೭೯. ಹಾಲುಮತಸ್ಥರು ಬ.ಪ.ನಾಯ್ಕರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬

೮೦. ಹಾಲುಮತ ವ್ಯಾಸಂಗ ೧(ಸಂ), ಡಾ. ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯

೮೧. ಹಾಲುಮತ ವ್ಯಾಸಂಗ ೨(ಸಂ), ಡಾ. ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೮೨. ಹಾಲುಮತ ವ್ಯಾಸಂಗ ೩(ಸಂ), ಡಾ.ಎಫ್.ಟಿ. ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦

೮೩. ಹಾಲುಮತ ಅಧ್ಯಯನಗಳು(ಸಂ), ಡಾ. ಎಫ್.ಟಿ.ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ ೨೦೧೦

೮೪. ಹಕ್ಕಬುಕ್ಕ, ಒಡೆಯರ್ ಹೆಗ್ಗಡೆ ಡಿ., ತನುಮನ ಪ್ರಕಾಶನ, ಮೈಸೂರು, ೨೦೦೩

೮೫. ಹಾಲುಮತ ಅನರ್ಘ್ಯ ರತ್ನಗಳು, ಚಂದ್ರಕಾಂತ ಬಿಜ್ಜರಗಿ, ಶ್ರೀಮದ್ ಜಗದ್ಗುರು ಶ್ರೀ ರೇವಣಸಿದ್ದೇಶ್ವರ ಸಿಂಹಾಸನ, ಕಾಗಿನೆಲೆ ಮಹಾಸಂಸ್ಥಾನ, ಕನಕ ಗುರುಪೀಠ

೮೬. ಹೊಸಗನ್ನಡ ಸಾಹಿತ್ಯಚರಿತ್ರೆ, ಎಲ್.ಎಸ್.ಶೇಷಗಿರಿರಾವ್, ೨೦೦೨

ಇಂಗ್ಲೀಷ್ ಕೃತಿಗಳು

1. The original Inhabitants of India; Gustov Oppert, Asian Education Society, New Delli, 1988

2. Tribes and castes of Bombay vol-2; R.E.Enthovan, Govt Central Press, Bombay 1922

3. The Mysore Tribes and Castes:, H.V.Nanjundaiah and L.A. Krishna Iyer, vol. iv, Mihal publications, New Delli

4. The Tribes and Castes of central provinces of India, R.V.Russale, Cosmo publication, New Delli, 1975

5. Castes and Tribes of Southern India, Edger Thurston, Asian Education Services, New Delli, 2001

ಗ್ಯಾಸೆಟಿಯರ್‌ಗಳು

೧. ಬಳ್ಳಾರಿ ಗೆಝೆಟಿಯರ್, ೧೯೫೬

೨. ಮುಂಬೈ ಕರ್ನಾಟಕ ಗೆಝೆಟಿಯರ್, ಅನು. ವೆಂಕಟರಂಗೋಕಟ್ಟಿ, ೧೯೪೮

೩. ಬಿಜಾಪುರ ಗೆಝೆಟಿಯರ್, ಜೇಮ್ಸ್ ಎಂ. ಕ್ಯಾಂಪ್ ಬೆಲ್, ೧೯೯೪

೪. ಮೈಸೂರು ಗೆಝೆಟಿಯರ್, ಹಯವದನರಾವ್, ೧೯೨೭

೫. ಭಾರತದ ಗ್ಯಾಝೆಟಿಯರ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೭

ವಿಶ್ವಕೋಶ ಮತ್ತು ಶಬ್ದಕೋಶಗಳು

೧. ಕನ್ನಡ ವಿಷಯ ವಿಶ್ವಕೋಶ, ಸಂಪುಟಗಳು ೧, ೬, (ಸಂ) ಹಾ.ಮ.ನಾಯಕ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೩

೨. ಕನ್ನಡ ನಿಘಂಟು (ಪು–ಸಂ), ಎನ್.ಬಸವಾರಾಧ್ಯ, ಸಂಪುಟ ೭, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೩

೩. ಕನ್ನಡ ಇಂಗ್ಲೀಷ್ ಡಿಕ್ಷನರಿ, ರೆವರೆಂಡ್ ಎಫ್ ಕಿಟಲ್, ಬಾಸೆಲ್ ಮಿಷನ್, ಮಂಗಳೂರು, ೧೮೯೪

೪. ಕಸ್ತೂರಿ ಕೋಶ, ಪಂಡಿತ ಕವಲಿ, ರಾಮಾಶ್ರಯ ಬುಕ್ ಡಿಪೊ, ಗದಗ

page 158.

~~Foot note~~:— The cycle year Vikari agrees with Saka 1282, as some elder Odeyars are mentioned in it it is possible to conjecture that in A.D. 1280 a feudatory prince, named Bukka, with his brothers, might have been ruling in a province under the Hoysala Suzerainty. His son may ~~be~~ have been Kampa, whose son was Sangama, whose sons were Harcappa Kampa, Bukka, Marappa and Mudduppa.

We have yet to know in detail their early history. Continuing his remarks, Mr. Rice says however "that it is a pity, the passage cannot be fully made out, as there is reason to suppose that the founders of the Vijaya nagar ~~dynasty~~ dynasty, may have been cheifs under the Hoysalas.

Bukka's son Viru paunna was ruler of "Kalasa and Araga". But where ~~the~~ ~~the~~ mistakes occur, the passages are clean and legible.

Dhanagars: — They are even now noted for their martial qualities and readily become soldiers.

A large number of Sevaji's most ~~trust ful trustee~~ trusted mavalis are Maratha ~~foot~~ men were West Poona Dhanagars. And many of the ~~bravest~~ Maratha leaders, among whom the Holkars are the most distinguished are of this tribe. Page 321. Volume I
The Tribes & castes of Bombay.
By Sri R.E. Enthoven. ~~1920.~~
Printed at the Govt. Central Press — Bombay
1920.

[illegible]

1 [illegible]
2. [illegible]
3. [illegible]
4. [illegible]
5 [illegible]
6 [illegible]
4. [illegible]
5 [illegible]
6 [illegible]

To

Shreemanth His Highness Maharaja
Yeshwanth Rao Holkar Bahadur,
Manikbag Palace,
INDORE CITY.

May it please your Highness,

The undersigned, V. R. Hanumanthiah of Bangalore most humbly and respectfully beg to lay the following few lines for your Highness's gracious and sympathetic consideration.

The applicant is an humble member of the Dhanagar - community which is known in Karnataka (South India) as the Kurubar community and has endeavoured to compile a social & economical history of the Shepherds of India.

Your Highness, Gracious Self, and the illustrious Holkar family since the time of the great and saintly Queen Ahilyabai Sahiba, are famous for their love and generous patronage to the Marathi, Hindi and English literature, especially to the works of History.

The author-applicant therefore with a hopeful heart respectfully presents to Your Highness with two copies of the - " Shepherds of India" with a sanguine hope that Your Highness will be pleased to extend His gracious patronage to this - compilation, for which the applicant has laboured for the last twenty-five years.

The applicant may be permitted to submit that Mysore Government has approved the book for the libraries of all Schools & Colleges, and the author will really feel proud if his work will receive benedictions (blessings) of Your Highness who is well known as the Chief benefactor and protector of the Shepherds of India.

The author-applicant prays for your Highness's long life, robust health, ever increasing prosperity and happiness and begs to remain,

Yours Highness's most humble
and loyal servant,

Author,
The History of the Shepherds of India,
No. 112, Sree Beerdevar Temple Street,
Manasinghpet, Bangalore, 2.

Date: 16-3- 1960.
Bangalore City.




ವಿ.ಆರ್.ಹನುಮಂತಯ್ಯನವರು

(ಕುರುಬರ ಚರಿತ್ರೆ ೧೯೩೬ರಲ್ಲಿ ಪ್ರಥಮ ಮುದ್ರಣವಾದ ಸಂದರ್ಭದ ಚಿತ್ರ)



ವಿ.ಆರ್.ಹನುಮಂತಯ್ಯನವರು

(೧೯೩೬ರಲ್ಲಿ ಹಂಪೆಯಲ್ಲಿ ನೆರವೇರಿದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಷಷ್ಠಶತಮಾನ ವಾರ್ಷಿಕೋತ್ಸವದ ಸಂದರ್ಭದಲ್ಲಿ "ಸಂಕ್ಷಿಪ್ತ ವಿಜಯನಗರ ಸಾಮ್ರಾಜ್ಯ ಚರಿತ್ರೆ" ಎಂಬ ಸಣ್ಣ ಪುಸ್ತಕ ಬರೆದಾಗ ತೆಗೆದ ಚಿತ್ರ)



ವಿ.ಆರ್.ಹನುಮಂತಯ್ಯನವರು

(೯೪ನೇ ವಯಸ್ಸಿನಲ್ಲಿ)



ವಿ.ಆರ್.ಹನುಮಂತಯ್ಯನವರು

(ಮಧ್ಯದಲ್ಲಿ ನಿಂತಿರುವವರು)



ವಿ.ಆರ್.ಹನುಮಂತಯ್ಯನವರ ಏಕೈಕ ಪುತ್ರ
ವಿ.ಹೆಚ್. ರಂಗಸ್ವಾಮಿ ಅವರೊಂದಿಗೆ ಎ.ವಿ.ಪುಟ್ಟಸ್ವಾಮಿ



ವಿ.ಆರ್.ಹನುಮಂತಯ್ಯನವರ ಕುಟುಂಬದ ಸದಸ್ಯರು



ಶ್ರೀ ಬೀರೇಶ್ವರಸ್ವಾಮಿ ದೇವಾಲಯ, ಬೆಂಗಳೂರು